ಶ್ರೀ ಪಿ. ವಿಷ್ಣುತೀರ್ಥ, ನವವೃಂದಾವನ

ದೇವಪೂಜಾ

(ಸಕಲ ಮಂತ್ರಗಳ ಅರ್ಥ, ವಿವರಣೆ ಸಹಿತ)

'ವಾಸುದೇವಪದಸಂತತಸಂಗೀ'ಯ ೪ನೇ ಸಂಪುಟದಿಂದ

೧೯–೧೮ ವರೆಗೆ ಪ್ರಕಟವಾದ ಧಾರಾವಾಹಿ]

ಶ್ರೀ ಪಿ. ವಿಷ್ಣುತೀರ್ಥ, ನವವೃಂದಾವನ

ದೇವಪೂಜಾ

(ಸಕಲ ಮಂತ್ರಗಳ ಅರ್ಥ, ವಿವರಣೆ ಸಹಿತ

[‘ ವಾಸುದೇವಪದಸಂತತಸಂಗೀ ’ಯ ೩ನೇ ಸಂಪುಟದಿಂದ

೧೯–೧ರ ವರೆಗೆ ಪ್ರಕಟವಾದ ಧಾರಾವಾಹಿ]

ಶ್ರೀಹರಿವಾಯುಸ್ತುತಿ (3 ಭಾಗಗಳಲ್ಲಿ) * ಖಿಲವಾಯುಸ್ತುತಿ * ಸರ್ವಸಮರ್ಪಣ ಗದ್ಯ

ಏಳು ವ್ಯಾಖ್ಯಾನಗಳನ್ನು ಹೊಂದಿರುವ ಶ್ರೀಮತ್ ಪುರುಷಸೂಕ್ತ

ಶ್ರೀ ಪಿ. ವಿಷ್ಣುತೀರ್ಥರ ಮೇರುಕೃತಿಗಳು

ಅವರ ವಿಳಾಸ: ನವವೃಂದಾವನ, 931, 2ನೇ ಮುಖ್ಯರಸ್ತೆ

ನಾಲ್ಕನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು-560010

"ದೇವಪೂಜಾ" ಪುಸ್ತಕಕ್ಕೆ

ಪೀಠಿಕೆ

ಪೂಜೆಯ ಅನಿವಾರ್ಯತೆ— ಭಕ್ತಶಿರೋಮಣಿಗಳಾದ ಶ್ರೀ ಪ್ರಹ್ಲಾದ ರಾಯರು ಶ್ರೀಹರಿಯು ಪ್ರಸನ್ನನಾಗುವುದಕ್ಕೆ ಶ್ರವಣಾದಿ ನವವಿಧವಾದ ಭಕ್ತಿ ಮಾಡಬೇಕೆಂದು ಹೇಳುತ್ತಾ "**ಅರ್ಚನಂ ವಂದನಂ ದಾಸ್ಯಂ**" ಎಂದು ನವ-ವಿಧ ಭಕ್ತಿಯಲ್ಲಿ ಅರ್ಚನೆಯೂ ಅತ್ಯವಶ್ಯಕವಾದುದೆಂದು ಹೇಳಿದ್ದಾರೆಂಬುದು ಸಪ್ತಮಸ್ಕಂಧ ಭಾಗವತದಿಂದ (ಅಧ್ಯಾ. ೫. ಶ್ಲೋ. ೨೩) ತಿಳಿದುಬರುತ್ತದೆ. ಇದರಿಂದ ಅರ್ಚನೆಯೆಂಬ ಪೂಜೆಯೂ ಶ್ರೀಹರಿಯ ಪರಮಾನುಗ್ರಹದ ಸಂಪಾದನೆಗೆ ಅತ್ಯಾವಶ್ಯಕವೆಂದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ; ಸಂಧ್ಯಾ-ವಂದನಾದಿಗಳು ಹೇಗೆ ನಿತ್ಯವೂ ಮಾಡಲೇಬೇಕಾದ ಅತ್ಯವಶ್ಯ ಕರ್ತವ್ಯಕರ್ಮ ಗಳಾಗಿವೆಯೋ ಅದೇ ರೀತಿ ಪೂಜೆಯೂ ನಿತ್ಯವೂ ಮಾಡಲೇಬೇಕಾದ ಅತ್ಯವಶ್ಯ ಕರ್ಮವಾಗಿದೆ ಎಂಬ ಪ್ರಮೇಯವು ಶ್ರೀಮದಾಚಾರ್ಯರ "**ಪೂಜ್ಯಶ್ಚ ಭಗವಾನ್ ನಿತ್ಯಮ್**" ಎಂಬ ತಂತ್ರಸಾರದ (ಅಧ್ಯಾಯ ೧, ಶ್ಲೋಕ ೪೯) ಉಕ್ತಿಯಿಂದ ಸಿದ್ಧವಾಗುತ್ತದೆ. ಪೂಜ್ಯಶ್ಚ ಎಂಬ ಪದದಲ್ಲಿರುವ 'ಚ' ಕಾರವು ಸಮುಚ್ಚಯಾರ್ಥದಲ್ಲೂ 'ಏವ'ಕಾರಾರ್ಥದಲ್ಲೂ—ಎರಡರ್ಥದಲ್ಲಿ ಬಂದಿದೆ. ಸಂಧ್ಯಾವಂದನೆ, ಜಪಾದ್ಯನುಷ್ಠಾನಗಳು ಹೇಗೋ ಹಾಗೆಯೇ ಪೂಜೆ ಮಾಡು-ವುದೂ ಅತ್ಯವಶ್ಯ ಕರ್ತವ್ಯವಾದ ಕರ್ಮ ಎಂಬುದು ಸಮುಚ್ಚಯಾರ್ಥ ಅಷ್ಟು ಮಾತ್ರವೇ ಅಲ್ಲ; ಪ್ರತಿಯಾಗಿ 'ನಿತ್ಯಂ ಚ-ನಿತ್ಯಮೇವ'-ಪ್ರತಿನಿತ್ಯವೂ ಸಹ ಮಾಡಲೇಬೇಕಾದ ಕರ್ಮವೂ ಆಗಿದೆ ಎಂಬುದು ಅವಧಾರಣಾರ್ಥ ಹೇಗೆ ಸ್ನಾನ ಮಾಡುವುದು, ಬೇರೆ ಬಟ್ಟೆ ಹಾಕಿಕೊಳ್ಳುವುದು ಮತ್ತು ಭೋಜನ ಇತ್ಯಾದಿಗಳು ಪ್ರತಿನಿತ್ಯ ಹೊಸಹೊಸದಾಗಿ ಮಾಡಬೇಕಾದ ಕರ್ತವ್ಯಗಳಾಗಿ ವೆಯೋ ಹಾಗೆಯೇ ದೇವರಪೂಜೆಯೂ ನಿತ್ಯ ಅನುಷ್ಠೇಯವಾದ ಕರ್ತವ್ಯ ವಾಗಿದೆ. ನಾವು ನಮ್ಮ ಮಕ್ಕಳಿಗೆ ನಿತ್ಯ ಸ್ನಾನ ಮಾಡಿಸಿ ಬೇರೆ ಬಟ್ಟೆಗಳನ್ನು ಹಾಕಿ ಕಾಪಾಡುತ್ತೇವೋ ಅದೇ ರೀತಿ—ಅಲ್ಲ, ಅದಕ್ಕೂ ಸಾವಿರಪಟ್ಟು ಶ್ರದ್ಧಾ

ಭಕ್ತಿಗಳಿಂದ ನಿತ್ಯವೂ ಭಗವತ್ಪೂಜೆಯನ್ನು ಮಾಡಬೇಕು; ಇಲ್ಲದಿದ್ದರೆ ನಾವು ಕರ್ತವ್ಯಭ್ರಷ್ಟರಾಗುತ್ತೇವೆಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು.

ಇಷ್ಟಾದರೂ ಕಡೇ ಪಕ್ಷ ಮಾಡಬೇಕು— ತಂತ್ರಸಾರದ ಪ್ರಥಮಾಧ್ಯಾಯದಲ್ಲಿ ಶ್ರೀಮದಾಚಾರ್ಯರು ಪೂಜಾವಿಧಾನವನ್ನು ಕೇವಲ ಹದಿನಾರು-ಇಪ್ಪತ್ತು ಶ್ಲೋಕಗಳಲ್ಲೇ ಹೇಳಿದ್ದಾರಾದರೂ ಅದನ್ನು ಮಾಡುವುದಕ್ಕೆ ಕನಿಷ್ಠ ಪಕ್ಷ ಮೂರು-ನಾಲ್ಕು ಗಂಟೆಗಳಾಗುತ್ತವೆ. ಆಚಾರ್ಯರ ವಾಕ್ಯಗಳು ಸೂತ್ರಪ್ರಾಯವಾಗಿವೆಯೆಂದು ಹೇಳಿ ಶ್ರೀ ಟೀಕಾಕೃತ್ಪಾದರು ಅದನ್ನೇ ಸ್ವಲ್ಪ ವಿಸ್ತರಿಸಿ ಪದ್ಯರೂಪವಾಗಿ ಹೇಳುತ್ತಾ "ಪದ್ಯಮಾಲಾ" ಎಂಬ ಸುಮಾರು ನೂರನಲವತ್ತು ಶ್ಲೋಕಗಳ ಚಿಕ್ಕ ಗ್ರಂಥವನ್ನು ಬರೆದಿದ್ದಾರೆ. ಒಂದು ವೇಳೆ ಅದರಲ್ಲಿ ಹೇಳಿದಂತೆ ಪೂಜೆ ಮಾಡಲು ಸಾಧ್ಯವಿಲ್ಲದಿದ್ದರೆ ಪದ್ಯಮಾಲಾವನ್ನು ಓದಿದರೂ ಪೂಜಾಫಲ ಲಭಿಸುತ್ತದೆ ಎಂದು ಹೇಳಿದ್ದಾರೆ. ಅಷ್ಟೂ ಸಾಧ್ಯವಿಲ್ಲದಿದ್ದರೆ ಇನ್ನೂ ಅತಿ ಸುಲಭವಾದ ಮಾರ್ಗವನ್ನು ಛಲಾರೀ ಆಚಾರ್ಯರು ತಮ್ಮ ತಂತ್ರಸಾರ ಟೀಕೆಯಲ್ಲಿ (ಅಧ್ಯಾ. ೧, ಶ್ಲೋ. ೭೫) ಕೂರ್ಮಪುರಾಣದ ವಾಕ್ಯವನ್ನು ಉದ್ಧರಿಸಿ ತೋರಿಸಿದ್ದಾರೆ.

ದೇವಸ್ಯ ಪೂಜಾಽಕರಣೇ ಪ್ರತ್ಯವಾಯ ಉಕ್ತಃ ಕೂರ್ಮೇ।

ಯೋ ಮೋಹಾದಥವಾಽಲಸ್ಯಾತ್ ಅಕೃತ್ವಾ ದೇವತಾರ್ಚನಮ್।
ಭುಂಕ್ತೇ ಸ ಯಾತಿ ನಿರಯಂ ಸೂಕರತ್ವಂ ಚ ಗಚ್ಛತಿ ॥ ೧ ॥

ಯದಿ ವಿಸ್ತರತಃ ಪೂಜಾಂ ಕರ್ತುಂ ನೈವ ಶಕ್ಯತೇ।
ಜಲಂ, ದಲಂ ತುಲಸ್ಯಾ ವಾ—ಽವಶ್ಯಂ ವಿಷ್ಣೌ ಸಮರ್ಪಯೇತ್।
ಪಶ್ಯೇದ್ವಾಽನ್ಯಕೃತಾಂ ಪೂಜಾಂ ಸೋಽಪಿ ಸ್ಯಾತ್ ಕೃತಪೂಜನಃ ॥ ಇತಿ

(ಇದರ ಭಾವಾರ್ಥ) ಕೂರ್ಮಪುರಾಣದಲ್ಲಿ ಹೀಗೆ ಹೇಳಿದೆ—

ಯಾರು ಮೋಹದಿಂದ (ಭ್ರಮೆಯಿಂದ)ಲೋ ಅಥವಾ ಸೋಮಾರಿತನದಿಂದಲೋ ದೇವರಪೂಜೆಯನ್ನು ಮಾಡದೆ ಭೋಜನ ಮಾಡುತ್ತಾನೋ ಅವನು ನರಕಕ್ಕೆ ಹೋಗುವನು ಮತ್ತು ಹಂದಿಯಾಗಿ ಹುಟ್ಟುವನು. (ಶ್ಲೋ. ೧) ಒಂದು ವೇಳೆ ವಿಸ್ತಾರವಾಗಿ ಪೂಜೆ ಮಾಡಲು ಸಾಧ್ಯವಿಲ್ಲದಿದ್ದರೆ, ದೇವರ

ಮೇಲೆ ಒಂದು ಉದ್ಧರಣೆ ನೀರು ಹಾಕಿ ಒಂದು ತುಲಸೀದಳ ಏರಿಸಿದರೆ ಸಾಕು, ಇಷ್ಟೇ ಪೂಜೆಯಾಗುತ್ತದೆ. ಅಥವಾ ಇನ್ನೊಬ್ಬರು ಮಾಡಿದ ಪೂಜೆಯನ್ನು ನೋಡಿದರೂ ಸಾಕು, ತಾನೂ ಪೂಜೆ ಮಾಡಿದಂತೆಯೇ ಆಗುತ್ತದೆ.

ಪೂಜೆಯನ್ನು ನಿತ್ಯ ಮಾಡುವುದು ಅತ್ಯವಶ್ಯಕವಾದ್ದರಿಂದ ಅತ್ಯಂತ ಕನಿಷ್ಠಪಕ್ಷವೆಂದರೆ ಸಾಲಿಗ್ರಾಮದ (ಅಥವಾ ಭಗವಂತ ಪ್ರತಿಮೆಯ) ಮೇಲೆ ಒಂದು ಉದ್ಧರಣೆ ನೀರು ಹಾಕಿ ಒಂದು ತುಳಸೀದಳ ಅಥವಾ ಹೂವನ್ನು ಏರಿಸಿಬಿಡು ಎಂದು ಹೇಳಿದೆ. ಅಷ್ಟೂ ಸಾಧ್ಯವಿಲ್ಲವೆಂದರೆ ಅವನ ಜನ್ಮವೇ ವ್ಯರ್ಥವೆಂದು ಹೇಳುವುದೇನಿದೆ?

ಜಡಪೂಜಾ ಮಾಡಬಾರದು— ಜಗನ್ನಾಥದಾಸರು ರಚಿಸಿದ 'ಹರಿಕಥಾಮೃತಸಾರ'ಕ್ಕೆ ಶ್ರೀ ಸಂಕರ್ಷಣ ಒಡೆಯರು ಸುಮಾರು ಒಂದೂವರೆ ಸಾವಿರ ಪುಟಗಳಷ್ಟು ವಿಸ್ತಾರವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಆ ಇಡೀ ಟೀಕೆಯನ್ನು ನಾಲ್ಕೈದು ಸಲ ಓದುವ ಪ್ರಸಂಗ ನನಗೆ ಒದಗಿತ್ತು. ಅವರ ನಿರೂಪಣೆಯಲ್ಲಿ ನನಗೆ 'ಜಡಪೂಜೆ ಮಾಡಬಾರದು' ಎಂಬ ಒಂದು ವಿಷಯ ಮಾತ್ರ ಅಚ್ಚಳಿಯದಂತೆ (ನನ್ನ) ಮನಸ್ಸಿನಲ್ಲಿ ಮೂಡಿಬಿಟ್ಟಿತು. ನಾವೆಲ್ಲರೂ ದೇವರ ಪೂಜೆ ಮಾಡುವಾಗ ಸಾಲಿಗ್ರಾಮಗಳನ್ನೋ ಕೃಷ್ಣರಾಮಾದಿ ಪ್ರತಿಮೆಗಳನ್ನೋ ಅಥವಾ ವಿನಾಯಕಾದಿ ಮೂರ್ತಿಗಳನ್ನೋ ಪೂಜಿಸುತ್ತೇವಲ್ಲವೆ. ಆಗ ನೀರಿನಿಂದ ಅಭಿಷೇಕ ಮಾಡಿ, ಗಂಧ-ಅಕ್ಷತೆ ಹಚ್ಚಿ, ಹೂವು ತುಲಸ್ಯಾದಿಗಳನ್ನು ಅರ್ಪಿಸಿ, ಹಣ್ಣು-ಹಂಪಲು ಮೊದಲಾದ ವಿಧವಿಧವಾದ ಪದಾರ್ಥಗಳನ್ನು ನೈವೇದ್ಯಕ್ಕೆ ಇಡುತ್ತೇವೆಯಲ್ಲವೆ! ಇಲ್ಲಿ ನಾವು ಪೂಜೆ ಮಾಡಿದ ಸಾಲಿಗ್ರಾಮಗಳಾಗಲಿ, ಗಣೇಶಾದಿಗಳ ಮೂರ್ತಿಯಾಗಲಿ ಎಲ್ಲವೂ ಜಡಪದಾರ್ಥಗಳೇ ಆಗಿರುವುವಲ್ಲದೆ ನಾವು ಸಮರ್ಪಿಸುವ ನೀರು, ಹೂವು, ಹಣ್ಣು ಮೊದಲಾದುವೆಲ್ಲವೂ ಜಡಪದಾರ್ಥಗಳೇ ಆಗಿರುವುದರಿಂದ ಇದನ್ನೇ ಸಂಕರ್ಷಣ ಒಡೆಯರು 'ಜಡಪೂಜೆ' ಎಂದು ಕರೆದರು. ಮತ್ತು ಇಂಥಾ ಪೂಜೆ ಮಾಡಬೇಡಿ ಎಂದು ಎಚ್ಚರಿಸಿದ್ದಾರೆ. ಹಾಗಾದರೆ ನಿಜವಾದ ಪೂಜೆ ಯಾವುದು ಎಂದು ಸಂದೇಹ ಬರುವುದಲ್ಲವೇ? ಅದನ್ನೇ ಈಗ ಸ್ವಲ್ಪ ವಿಚಾರ ಮಾಡೋಣ.

ಭಗವತ್ಪ್ರತಿಮೆಗಳು ಭಗವಂತನಲ್ಲ— ಶ್ರೀ ಬಾದರಾಯಣಾಚಾರ್ಯರು (ವೇದವ್ಯಾಸರು) ಬ್ರಹ್ಮಸೂತ್ರಗಳಲ್ಲಿ ನಾಲ್ಕನೇ ಅಧ್ಯಾಯದಲ್ಲಿ 'ಓಂ ನ

ಪ್ರತೀಕೇ ನ ಹಿ ಸಃ ಓಂ ' ಎಂದು ಹೇಳಿದ್ದಾರೆ. ಪ್ರತೀಕ ಎಂದರೆ ಪ್ರತಿಮೆಗಳು ಮೂರ್ತಿಗಳು ಅಥವಾ ಚಿತ್ರಪಟಗಳು. ಈ ಸೂತ್ರವು ಹೀಗೆ ಹೇಳುತ್ತದೆ— ಭಗವಂತನ (ಅಥವಾ ಇತರ ದೇವತೆಗಳ) ಪ್ರತೀಕಗಳಲ್ಲಿ ಅವು ಸಾಕ್ಷಾತ್ ಭಗವತ್ ಸ್ವರೂಪ ಎಂಬ ಭಾವನೆ ಮಾಡಕೂಡದು. ಏಕೆಂದರೆ ಅವುಗಳು ಭಗವಂತನಂತಾಗಲಿ (ಅಥವಾ ದೇವತೆಗಳಾಗಲಿ) ಚೇತನಮೂರ್ತಿಗಳೂ ಅಲ್ಲ ಅವಕ್ಕೆ ಭಗವಂತನಂತೆ ವ್ಯಾಪ್ತಿಯಾಗಲಿ, ಅಪ್ರಾಕೃತ ರೂಪಾದಿಗಳಾಗಲಿ ಇಲ್ಲ. ಅದಕ್ಕೆ ಪ್ರತಿಯಾಗಿ ಅವುಗಳೆಲ್ಲವೂ ಉತ್ಪತ್ತಿ, ನಾಶ, ಭೇದ-ಭೇದಾದಿ ಗುಣಗಳುಳ್ಳ ನಶ್ವರ ಪದಾರ್ಥಗಳಾಗಿವೆ—ಆದ್ದರಿಂದ ಸಾಲಿಗ್ರಾಮಗಳನ್ನೇ ಆಗಲಿ, ಭಗವನ್ಮೂರ್ತಿಗಳನ್ನೇ ಆಗಲಿ, ಹನುಮಂತ, ಗರುಡ ಶೇಷ ಗಣಪತ್ಯಾದಿ ಮೂರ್ತಿಗಳನ್ನಾಗಲಿ ಸಾಕ್ಷಾತ್ ದೇವತಾಸ್ವರೂಪವೆಂದು ಸರ್ವಥಾ ತಿಳಿದು-ಕೊಳ್ಳಬಾರದು ಎಂದು ಎಚ್ಚರಿಸಿದ್ದಾರೆ. ಈ ದೃಷ್ಟಿಯಿಂದ ಸ್ವಯಂವ್ಯಕ್ತ ಪ್ರತಿಮೆಗಳೆಂದು ಪ್ರಸಿದ್ಧವಾದ ತಿರುಪತಿಯ ಶ್ರೀನಿವಾಸದೇವರೇ ಆಗಲಿ, ಬದರೀ ನಾರಾಯಣನೇ ಆಗಲಿ ಸಾಕ್ಷಾತ್ ಭಗವತ್ ಸ್ವರೂಪಗಳಲ್ಲವೆಂಬುವದನ್ನು ನಾವು ಗಮನಿಸಬೇಕು. ಹಾಗಾದರೆ ಲಕ್ಷಾಂತರ ಜನಗಳು ದೇವರೆಂದು ಅರ್ಚಿಸುವುದು ವ್ಯರ್ಥವೇ ? ಎಂಬ ಪ್ರಶ್ನೆಗೆ ಬೇರೆ ಉತ್ತರವಿದೆ.

ಆವಾಹನೆಯ ಅವಶ್ಯಕತೆ— ಪ್ರತಿಮಾ ಪೂಜೆ ಮಾಡುವಾಗ ನಾವು ಮೊಟ್ಟಮೊದಲು ಆ ಪ್ರತಿಮೆಯಲ್ಲಿ ಅಥವಾ ಆ ಮೂರ್ತಿಯಲ್ಲಿ ಆ ದೇವತೆಯನ್ನು ಆವಾಹನೆ ಮಾಡುತ್ತೇವೆ ಆಗ ದೇವತೆಯು ಆ ವಿಗ್ರಹದಲ್ಲಿ ಅಥವಾ ಪ್ರತೀಕದಲ್ಲಿ ಸನ್ನಿಹಿತನಾಗುತ್ತಾನೆ ಇದು ಶ್ರೀನಿವಾಸನಿಗೂ ಬದರೀ ನಾರಾಯಣನಿಗೂ ಎಲ್ಲ ದೇವತೆಗಳಿಗೂ ಅನ್ವಯಿಸುತ್ತದೆ. ದೇವಸ್ಥಾನಗಳಲ್ಲಿ ನಿತ್ಯ ಆವಾಹನೆ-ಪೂಜಾದಿಗಳು ನಡೆಯುತ್ತಿದ್ದರೆ ಮಾತ್ರ ಅಲ್ಲಿ ದೇವತಾಸಾನ್ನಿಧ್ಯವಿರುತ್ತದೆ, ಆಗಲೇ ಅವುಗಳಿಗೆ ಪೂಜೆಗೆ ಅರ್ಹತೆ ಬರುತ್ತವೆ. ಹಾಳುಗುಡಿಯಲ್ಲಿರುವ ದೇವತೆಗಳನ್ನು ಯಾರಾದರೂ ಪೂಜಿಸುತ್ತಾರೆಯೇ ? ಅದರಂತೆ ನಾವೂ ಸಹ ನಮ್ಮ ಮೂರ್ತಿಗಳಲ್ಲಿ ಆ ದೇವತೆಗಳನ್ನು ಮೊದಲು ಆವಾಹನೆ ಮಾಡಬೇಕು. ಅದೇ ರೀತಿ ನಾವು ಉಪಯೋಗಿಸುವ ನೀರು, ವಸ್ತ್ರ, ಗಂಧ-ಅಕ್ಷತೆ, ಹೂವು, ಹಣ್ಣು-ಹಂಪಲು ಎಲ್ಲದರಲ್ಲೂ ಭಗವಂತನಿದ್ದಾನೆ ಎಂದು

ಭಾವಿಸಿಕೊಳ್ಳಬೇಕು—ಅರಿತುಕೊಳ್ಳಬೇಕು. ನಿತ್ಯಾಪರೋಕ್ಷಿಗಳಾದ ಶ್ರೀಮನ್ ಮಧ್ವಾಚಾರ್ಯರೊಬ್ಬರಿಗೆ ಮಾತ್ರ ಎಲ್ಲ ಪದಾರ್ಥಗಳಲ್ಲೂ ಇರುವ ಭಗವತ್-ಸ್ವರೂಪವನ್ನು ಸದಾ ನೋಡುವ ಶಕ್ತಿ ಇದೆ. ಆ ಶಕ್ತಿ ಪದ್ಮನಾಭತೀರ್ಥಾದಿ ಬೇರೆ ಯಾವ ಗುರುಗಳಿಗೂ ಇಲ್ಲ. ಆದರೆ ಅಪರೋಕ್ಷಜ್ಞಾನಿಗಳಾದ್ದರಿಂದ ಟೀಕಾರಾಯರು, ವ್ಯಾಸರಾಯರು, ರಘೂತ್ತಮ ಸ್ವಾಮಿಗಳು, ರಾಘವೇಂದ್ರ-ಸ್ವಾಮಿಗಳೇ ಮೊದಲಾದ ಮಹನೀಯರುಗಳು ತಾವು ಪೂಜೆ ಮಾಡುವ ಮೂರ್ತಿಗಳಲ್ಲಿ ಮಾತ್ರವಲ್ಲದೆ ಪೂಜಿಸುವ ಸಕಲ ಪದಾರ್ಥಗಳಲ್ಲೂ ಇದ್ದ ಭಗವಂತನನ್ನು ಕಂಡು ಅವನನ್ನೇ ಆ ಭಗವಂತನಿಗೆ ಸಮರ್ಪಿಸುತ್ತಿದ್ದರು. ಆದ್ದರಿಂದಲೇ ರಾಘವೇಂದ್ರಸ್ವಾಮಿಗಳು ನಿಜಾಮನು ಪರೀಕ್ಷೆಗಾಗಿ ನೈವೇದ್ಯ-ಕ್ಕಾಗಿ ಕಳುಹಿಸಿದ್ದ ಅಡಿಗೆ ಪದಾರ್ಥಗಳಲ್ಲಿದ್ದ ಭಗವಂತನನ್ನು ನೋಡಿದ್ದರಿಂದಲೇ ಅವುಗಳು ಹಣ್ಣುಗಳಾದುವು. ಆದರೆ ಅಂಥಾ ಶಕ್ತಿ ಇಲ್ಲದ ನಮ್ಮಂತಹ ಪಾಮರರು ಎಲ್ಲದರಲ್ಲೂ ಭಗವಂತನೇ ಇದ್ದಾನೆ ಎಂದು ತಿಳಿದು ನಾವು ಪೂಜೆ ಮಾಡುವ ಮೂರ್ತಿಗಳಲ್ಲೂ ಭಗವಂತನು ಇದ್ದಾನೆ ಎಂದು ಭಾವಿಸಿಕೊಂಡು ಸಮರ್ಪಿಸಿದರೆ ಅದು ' ಜಡಪೂಜೆ ' ಆಗುವುದಿಲ್ಲ.

ಪ್ರಸಂಗವಶಾತ್ ಇನ್ನೆರಡು ಮಾತು ಹೇಳಬೇಕಾಗಿದೆ. ಸಾಲಿಗ್ರಾಮದಲ್ಲಿ ಮಾತ್ರ ಭಗವಂತನ ಸನ್ನಿಧಾನ ಸದಾ ಇರುವುದರಿಂದ ಸಾಲಿಗ್ರಾಮದಲ್ಲಿ 'ಹೊಸದಾಗಿ' ಭಗವಂತನನ್ನು 'ಆವಾಹನೆ' ಮಾಡಬಾರದು; ಅದರಲ್ಲಿ ನಮ್ಮ ಬಿಂಬಮೂರುತಿಯೇ ಇದ್ದಾನೆಂದು ತಿಳಿದುಕೊಂಡು ಪೂಜಿಸಬೇಕು. ಇದೇ ರೀತಿ ಸ್ವಯಂವ್ಯಕ್ತ ಮೂರ್ತಿಗಳಾದ ಶ್ರೀನಿವಾಸದೇವರನ್ನೂ ಬದರೀ-ನಾರಾಯಣನನ್ನೂ ನೋಡಿದಾಗ ಆ ಮೂರ್ತಿಗಳಲ್ಲೂ ನಮ್ಮ ಬಿಂಬ-ಮೂರ್ತಿಯನ್ನು ಚಿಂತನೆ ಮಾಡಿಯೇ ನೋಡಬೇಕೆಂದು ವಿಜಯದಾಸರು ತಿರುಪತಿಕ್ಷೇತ್ರ ಸುಳಾದಿಯಲ್ಲಿ ಹೇಳಿದ್ದಾರೆ.

ಸುಲಭಪೂಜೆಯ ಮಾಡಿ ಬಲವಿಲ್ಲದವರು— ಇದು ಪುರಂದರ-ದಾಸರಾಯರ ಮಾತು. ಅನೇಕರು, ನನಗೆ ಮಂತ್ರಗಳು ಬರುವುದಿಲ್ಲ, ಪೂಜೆ ಮಾಡುವ ವಿಧಾನ ಗೊತ್ತಿಲ್ಲ, ಪೂಜೆ ಮಾಡುವುದಕ್ಕೆ ಟೈಮೇ ಸಿಗುವುದಿಲ್ಲ, ಮಡಿಮಾಡುವುದು ನಮ್ಮಿಂದ ಸಾಧ್ಯವಿಲ್ಲ ಎಂದು ನೂರಾರು ನೆಪ ಹೇಳಿಕೊಂಡು

ಪೂಜೆ ಮಾಡುವುದನ್ನು ಬಿಟ್ಟುಬಿಡುತ್ತಾರೆ. ಅಂಥ ಜನರಿಗೆ ಈ ಮಾತು ಹೇಳಿದ್ದಾರೆ ದಾಸರಾಯರು. ಹಾಗೆ ಮಂತ್ರ-ತಂತ್ರ ಏನೂ ಗೊತ್ತಿಲ್ಲದಿದ್ದರೂ ಅಡ್ಡಿಯಿಲ್ಲ. ನಮ್ಮ ದೇಹದಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನಿಗೆ ನಮ್ಮ ದೇಹವೇ ಒಂದು ರಥ ಎಂದು ಭಾವಿಸಿಕೊಂಡು ನಾವು ಮಾಡುವ ಸ್ನಾನವೇ ಆ ಭಗವಂತನಿಗೆ ಅಭಿಷೇಕ, ನಾವು ಹಾಕಿಕೊಳ್ಳುವ ಉಡುಪುಗಳೇ ಅವನಿಗೆ ಅಲಂಕಾರ, ನಾವು ಊಟ ಮಾಡುವುದೇ ಅವನಿಗೆ ನೈವೇದ್ಯ, ಏಕೆಂದರೆ 'ಅಹಂ ವೈಶ್ವಾನರೋ ಭೂತ್ವಾ' ಎಂಬ ಗೀತೆಯ ಶ್ಲೋಕದಲ್ಲಿ (೧೫ ಅ, ೧೪ ಶ್ಲೋ.) ಆ ಭಗವಂತನೇ ವೈಶ್ವಾನರನಾಗಿ ಜಠರಾಗ್ನಿಯಲ್ಲಿದ್ದು ಆಹಾರ ಪಚನ ಮಾಡುತ್ತಾನೆಂದು ಹೇಳಿದೆ ಇತ್ಯಾದಿ ಅನುಸಂಧಾನ ಮಾಡಿಕೊಂಡಾದರೂ ಪೂಜೆ ಮಾಡಿ ಎಂದು ಹೇಳಿದ್ದಾರೆ. ಅಂತೂ ಒಟ್ಟಿನಲ್ಲಿ ಪೂಜೆ ಬಿಡಬಾರದೆಂದೇ ಅಭಿಪ್ರಾಯ. ಸದಾಚಾರಸ್ಮೃತಿಯಲ್ಲಿ 'ಸಿಂಚೇತ್ ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್' ಎಂದರೆ ನಾವು ಸ್ನಾನ ಮಾಡುವಾಗ ಆ ನಮ್ಮ ಬಿಂಬರೂಪಿ ಪರಮಾತ್ಮನಿಗೆ ಇದೇ ಸ್ನಾನ ಎಂದು ತಿಳಿದುಕೊಂಡು ಪುರುಷಸೂಕ್ತ ಹೇಳಿಕೊಂಡು ಸ್ನಾನ ಮಾಡಬೇಕೆಂದು ಹೇಳಿದೆ. ಇದೇ ರೀತಿ "ನಾನು ಮಾಡುವ ಸ್ನಾನ/ನಿಮಗದೇ ವಿಚಿತ್ರ ಸ್ನಾನ ಗಂಧ ಸುವಸನ........ ....ಉಂಬನ್ನವೇ ನೈವೇದ್ಯವು ...." ಎಂದು ಒಬ್ಬ ದಾಸರು ಹೇಳಿದರೆ, "ತನು ನಿನ್ನದು ಜೀವನ ನಿನ್ನದಯ್ಯ" ಎಂಬ ಕೀರ್ತನೆಯಲ್ಲಿ ನಾವು ಮಾಡುವ ಸಕಲ ಕ್ರಿಯೆಗಳೂ ಆ ಭಗವಂತನ ಸೇವೆಯೇ ಎಂದು ಕನಕದಾಸರು ಹೇಳಿದ್ದು, "ಮಂತ್ರವ ನಾನರಿಯೆ, ತಂತ್ರವ ನಾನರಿಯೆ, ಶ್ರೀಮನ್-ಮಂತ್ರಾಲಯ ದೊರೆಯೇ" ಎಂದು ಹೇಳಿಕೊಂಡು ಇನ್ನೊಬ್ಬರು ರಾಯರಿಗೆ ಆತ್ಮಸಮರ್ಪಣೆ ಮಾಡಿದ್ದಾರೆ. ಹೀಗೆ ಬೆಳಗ್ಗೆ ಎದ್ದಾರಭ್ಯ ಮರುದಿನ ಬೆಳಗ್ಗೆ ವರೆಗೆ ಮಾಡುವುದೆಲ್ಲವೂ ಆ ಪರಮಾತ್ಮನ ಸೇವೆಯೇ ಎಂಬ ದೃಢ ವಿಶ್ವಾಸ ಬಂದರೆ ಅದೇ ನಿಜವಾದ ಪೂಜೆ ಎನಿಸುತ್ತದೆ ಎಂದು ಎಲ್ಲ ಶಾಸ್ತ್ರಗಳೂ ಹೇಳುತ್ತವೆ.

ಪೂಜೆಯ ಅಂಗೋಪಾಂಗಗಳು— ಈಗ ಪ್ರತಿಮಾಪೂಜಾಕ್ರಮದ ವಿಷಯಕ್ಕೆ ಬರೋಣ. ಪೂಜೆಗೆ ಮುಂಚೆಯೇ ಮಾಡಬೇಕಾದ ಕೆಲಸಗಳಿದ್ದರೆ

ಪೂಜೆ ಮುಗಿದ ಮೇಲೂ ಮಾಡಬೇಕಾದ ಕೆಲಸಗಳೂ ಇವೆ. ಪೂಜೆಗೆ ಆರಂಭ ಮಾಡುವ ಮೊದಲೇ ಹೂ-ತುಳಸೀ ಮೊದಲಾದುವನ್ನು ತಂದಿಟ್ಟುಕೊಂಡು ಪೂಜೆ ಮಾಡುವ ಸ್ಥಳವನ್ನು ಕಸ ಗುಡಿಸಿ ಸಾರಿಸಿ (ಒರೆಸಿ) ಶುಚಿ ಮಾಡುವುದು ಸ್ನಾನ ಮಾಡಿ ಮುದ್ರೆ ಹಚ್ಚಿಕೊಂಡು, ಸಂಧ್ಯಾವಂದನೆ ಮಾಡಿ, ಪೂಜೆಗೆ ಶುದ್ಧವಾದ ನೀರನ್ನು ತಂದಿಟ್ಟುಕೊಂಡು, ಗಂಧಾಕ್ಷತೆಗಳನ್ನು ಮಾಡಿಟ್ಟು, ಗಂಟೆ ಬಾರಿಸಿ ದೇವರ ದೀಪ ಹಚ್ಚಿ, ದೇವರನ್ನು ತೆಗೆದಿಟ್ಟು, ಪೂಜಾಸಂಕಲ್ಪ ಮಾಡಿ ನಿರ್ಮಾಲ್ಯ ತೆಗೆದು, ನಿರ್ಮಾಲ್ಯಾಭಿಷೇಕ ಮಾಡುವುದೇ ಮೊದಲಾದು-ವೆಲ್ಲಾ ಪೂರ್ವಸಿದ್ಧತೆಗಳೇ ಆಗುತ್ತವೆ. ಕಲಶಪೂಜೆ, ಶಂಖಪೂಜೆ, ಪಂಚಪಾತ್ರ ಪೂಜೆ, ಪೀಠಪೂಜೆ ಇವು ಪೂಜೆಯ ಪ್ರಥಮ ಸಿದ್ಧತೆಗಳು. ಆಮೇಲೆ ಆವಾಹನಾ ಪೂರ್ವಕ ಷೋಡಶೋಪಚಾರಪೂಜೆಯೇ ಮುಖ್ಯಭಾಗ. ಪೂಜೆ ಮುಗಿದ ಮೇಲೆ ರಮಾದಿಗಳ ಪೂಜೆ, ಗುರುಪೂಜೆ ಮಾಡಿ ದೇವರನ್ನು ಭುಜಂಗಿಸಿ (ಮುಚ್ಚಿಟ್ಟು) ತೀರ್ಥಪ್ರಾಶನ ಮಾಡಿ ಇತರರಿಗೂ ತೀರ್ಥ ಕೊಟ್ಟು ಅತಿಥಿ-ಅಭ್ಯಾಗತರ ಪೂಜೆ ಮಾಡಿ ಭೋಜನಾದಿಗಳನ್ನು ಮಾಡುವುದೆಲ್ಲ ಪೂಜೆಯ ನಂತರ ಮಾಡಬೇಕಾದ ಕೃತ್ಯಗಳು.

ಈಗ ಈ ವಿಧಾನಗಳನ್ನೇ ಸಂಕ್ಷೇಪವಾಗಿ ತಿಳಿಸುವೆನು.

ನಿರ್ಮಾಲ್ಯವಿಸರ್ಜನೆ— ಮೊದಲು ಗಂಟೆ ಬಾರಿಸಿ, ದೇವರನ್ನು ತಟ್ಟೆಯಲ್ಲಿ ತೆಗೆದಿಟ್ಟುಕೊಳ್ಳಬೇಕು. ಪ್ರಾಣದೇವರೇ ಮೊದಲಾದ ಪ್ರತಿಮೆ ಗಳಿದ್ದರೆ ಅವನ್ನೇ ಬೇರೆ ತಟ್ಟೆಯಲ್ಲಿ ಇಡಬೇಕು. ಗುರುಗಳ ವೃಂದಾವನವಿದ್ದರೆ ಅವನ್ನೇ ಮತ್ತೊಂದು ತಟ್ಟೆಯಲ್ಲಿಡಬೇಕು. ಅನಂತರ ಪೂಜಾಸಂಕಲ್ಪ ಮಾಡಬೇಕು— ಭಾರತೀರಮಣ ಮುಖ್ಯಪ್ರಾಣಾಂತರ್ಗತ—ತಮ್ಮ ಇಷ್ಟ-ದೇವತೆಯ—ರಾಮ, ಕೃಷ್ಣ, ನರಸಿಂಹ, ಶ್ರೀನಿವಾಸ, ವಿಠ್ಠಲ ಇತ್ಯಾದಿ— ಹೆಸರಿನ ಭಗವಂತನ ಷೋಡಶೋಪಚಾರ ಪೂಜೆಯನ್ನು ಅವನ ಪ್ರೇರಣೆಯಿಂದ ಅವನ ಪ್ರೀತ್ಯರ್ಥವಾಗಿ ತಂತ್ರಸಾರೋಕ್ತವಿಧಾನದಿಂದ ಮುಖ್ಯಪ್ರಾಣದೇವರ ದ್ವಾರಾ ಮಾಡುತ್ತೇನೆ ಎಂದು ಸಂಕಲ್ಪ ಮಾಡಿ ಒಂದು ಉದ್ಧರಣೆ ನೀರು ಅರ್ಘ್ಯದ ಬಟ್ಟಲಿಗೆ ಹಾಕಬೇಕು. ಆ ನಂತರದಲ್ಲಿ ಶಂಖಕ್ಕೆ ನೀರು ಹಾಕಿ 'ಸಹಸ್ರಾರಹುಂ ಫಟ್' ಎಂದು ಹೇಳಿ ಶಂಖವನ್ನು ತೊಳೆದು, ಆಮೇಲೆ

ಶಂಖಕ್ಕೆ ನೀರು ಹಾಕಿಕೊಂಡು 'ದ್ರೌಪದೀರಮಣ ಭೀಮಸೇನ' ಎಂದು ಹೇಳುತ್ತಾ ಸಾಲಿಗ್ರಾಮಾದಿಗಳನ್ನು ನೀರು ಹಾಕಿ ತೊಳೆದು ಆ ನೀರನ್ನು ಚೆಲ್ಲಿಬಿಡಬೇಕು. ಆಮೇಲೆ ಪುನಃ ಅವಕ್ಕೇ ಅಂಭ್ರಣೀಸೂಕ್ತ ಹೇಳಿಕೊಂಡು ಶಂಖದಿಂದ ಅಭಿಷೇಕ ಮಾಡಬೇಕು. ಈ ತೀರ್ಥಕ್ಕೇ 'ನಿರ್ಮಾಲ್ಯತೀರ್ಥ' ಎಂದು ಹೆಸರು. ಅದಾದ ಬಳಿಕ ಪ್ರಾಣದೇವರಿಗೂ ಗುರುಗಳಿಗೂ ನೀರು ಹಾಕಿ ತೊಳೆದು—ಹಿಂದಿನ ದಿನದ ಗಂಧಾಕ್ಷತೆ ಇತ್ಯಾದಿಗಳು ಉಳಿಯದಂತೆ ತೊಳೆದು—ಅವರಿಗೂ ನಿರ್ಮಾಲ್ಯತೀರ್ಥವನ್ನು ಕೊಟ್ಟು ತಾನೂ ಆ ನಿರ್ಮಾಲ್ಯತೀರ್ಥ ತೆಗೆದುಕೊಳ್ಳಬೇಕು. ಆಮೇಲೆ ಪ್ರಾಣದೇವರಿಗೂ ಗುರುಗಳಿಗೂ ಅಭಿಷೇಕ ಮಾಡಿದ್ದ ನೀರನ್ನು ಚೆಲ್ಲಿಬಿಡಬೇಕು. ಇಲ್ಲಿಗೆ ಒಂದು ಘಟ್ಟ ಮುಗಿದಂತಾಯಿತು.

ಕಲಶಪೂಜೆ— ಒಂದು ಪಾತ್ರೆಯಲ್ಲಿ ಶೋಧಿಸಿದ ನೀರನ್ನು ಇಟ್ಟು-ಕೊಂಡು ಆ ಪಾತ್ರೆಗೆ ತುಲಸಿಯಿಂದ (ತುಳಸೀ ಇಲ್ಲದಿದ್ದರೆ ತುಲಸೀಕಾಷ್ಠದಿಂದ) ಸ್ವಲ್ಪ ಗಂಧಾಕ್ಷತೆ ಹಚ್ಚಿ, ತುಳಸಿಯಿಂದ ನೀರಿನಲ್ಲಿ (ಅಥವಾ ಕಳಶದ ಪಾತ್ರೆಯ ಮೇಲಾದರೂ) 'ಶ್ರೀಂ' ಎಂದು ಬೀಜಾಕ್ಷರವನ್ನು ಬರೆದು (ಗೊತ್ತಿದ್ದರೆ) ತಾರ್ಕ್ಷ್ಯಾದಿ ಪಂಚಮುದ್ರೆಗಳನ್ನು ತೋರಿಸಿ, ಕಲಶವನ್ನು ಮುಟ್ಟಿಕೊಂಡು "ಕಲಶಸ್ಯ ಮುಖೇ........" ಇತ್ಯಾದಿ ಮಂತ್ರಗಳನ್ನೂ "ಗಂಗೇ ಚ .. ....", "ಇಮಂ ಮೇ ಗಂಗೇ...." ಎಂಬ ಮಂತ್ರಗಳನ್ನೂ ಪಠಿಸಿ "ನಾರಾಯಣಾಯ ವಿದ್ಮಹೇ...." ಎಂಬ ವಿಷ್ಣುಗಾಯತ್ರೀ ಮಂತ್ರವನ್ನೂ ಮೂರಾವರ್ತಿ ಪಠಿಸ-ಬೇಕು. (ಕನಿಷ್ಠಪಕ್ಷ ವಿಷ್ಣುಗಾಯತ್ರೀ ಮಂತ್ರವನ್ನಾದರೂ ಪಠಿಸುವುದು ಉತ್ತಮಪಕ್ಷ.) ಇದರಿಂದ ಕಲಶದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರಾದಿ ಸಕಲ ದೇವತೆಗಳು ಮಾತ್ರವಲ್ಲ, **ಮೂರೂವರೆ ಕೋಟಿ ತೀರ್ಥಾಭಿಮಾನಿಗಳಲ್ಲಿ ಅಂತರ್ಗತನೂ** ಅಲ್ಲದೆ **ದೇಹಗಳಲ್ಲಿರುವ ನೂರೊಂದು ಮುಖ್ಯನಾಡೀಗತ ಭಗವದ್ರೂಪಿಯೂ** ಆದ ಭಾರತೀರಮಣ ಮುಖ್ಯಪ್ರಾಣಾಂತರ್ಗತ **ಅಜಾದಿ ಶತಕಲಾಸಹಿತನಾದ** ಕಲಶದೇವತೆಯಾದ ನಾರಾಯಣನನ್ನು (ಒಟ್ಟು ನೂರೊಂದು ಭಗವದ್ರೂಪಗಳನ್ನು) ಆವಾಹನೆ ಮಾಡಿ ಷೋಡಶೋಪಚಾರ ಮಾಡಿದೆನೆಂದು ತಿಳಿದುಕೊಂಡು ಒಂದು ಉದ್ಧರಣೆ ನೀರು ಅರ್ಘ್ಯಪಾತ್ರೆಗೆ ಹಾಕಬೇಕು. (ಇದರಲ್ಲಿ ದಪ್ಪ ಅಕ್ಷರದಲ್ಲಿರುವ ಭಾಗವು ನನಗೆ ಸಂಕರ್ಷಣ

ಒಡೆಯರ ಹರಿಕಥಾಮೃತಸಾರ ಟೀಕೆಯಿಂದ ಇತ್ತೀಚಿಗೆ ಗೊತ್ತಾದ್ದರಿಂದ ಈ ಭಾಗ ಮೂಲಗ್ರಂಥದಲ್ಲಿ ಬಂದಿಲ್ಲ. ಅಲ್ಲಿ ಇದನ್ನು ಸೇರಿಸಿಕೊಳ್ಳಬೇಕಾಗಿ ಪ್ರಾರ್ಥನೆ.) ಇದರಿಂದ ಈಗ ಕಲಶದಲ್ಲಿರುವ ನೀರು ಜಡವಾದ ನೀರಲ್ಲ—ಅದು ಭಗವದ್ರೂಪವೇ ಆಗಿದೆಯೆಂದು ತಿಳಿದುಕೊಳ್ಳಬೇಕು.

ಶಂಖಪೂಜೆ— ಶಂಖವು ಸಾಕ್ಷಾತ್ ಲಕ್ಷ್ಮೀಸ್ವರೂಪವೆಂದು ತಿಳಿಯಬೇಕು. ಶಂಖದ ವಿಶೇಷ ವಿಚಾರವನ್ನು ಶಂಖಪೂಜೆಯಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಶಂಖದಿಂದ ದೇವರಿಗೆ ಮಾತ್ರ ಅಭಿಷೇಕ ಮಾಡಬೇಕಲ್ಲದೆ ಪ್ರಾಣದೇವರಿಗಾಗಲಿ, ಗುರುಗಳಿಗಾಗಲಿ ಶಂಖದಿಂದ ಅಭಿಷೇಕ ಮಾಡಬಾರದು. ಶಂಖವು ಲಕ್ಷ್ಮೀಸ್ವರೂಪವಾದ್ದರಿಂದ ಅದನ್ನು ಮೊದಲು ನೀರು ಹಾಕಿ 'ಸಹಸ್ರಾರಹುಂ ಫಟ್' ಎಂದು ತೊಳೆದು, ಅದಕ್ಕೆ ಗಂಧಾಕ್ಷತೆ ಹೂವು-ತುಳಸೀಗಳನ್ನು ಏರಿಸಿ ಶಂಖಾದಿ ಮುದ್ರೆಗಳನ್ನು ತೋರಿಸಿ ಅದರಲ್ಲಿ ನೀರು ಹಾಕಿ ಅದನ್ನು ಮುಟ್ಟಿಕೊಂಡು 'ತ್ವಂ ಪುರಾ....' ಇತ್ಯಾದಿ ಮಂತ್ರಗಳನ್ನೂ 'ಪಾಂಚಜನ್ಯಾಯ ವಿದ್ಮಹೇ' ಎಂಬ ಮಂತ್ರವನ್ನೂ ಪಠಿಸಿ ನಾರಾಯಣಾಷ್ಟಾಕ್ಷರಮಂತ್ರದಿಂದ (ಕನಿಷ್ಠಪಕ್ಷ ಇದನ್ನಾದರೂ ಮಾಡಬೇಕು) ಅಭಿಮಂತ್ರಿಸಿ, ಆ ನೀರನ್ನು ಸ್ವಲ್ಪಸ್ವಲ್ಪವಾಗಿ ಬಗ್ಗಿಸಿಕೊಂಡು ದೇವರ ಮೇಲೂ ಪೂಜಾ ಸಾಮಗ್ರಿಗಳ ಮೇಲೂ ವಿಶೇಷತಃ ಹೂವುಗಳ ಮತ್ತು ಪಂಚಾಮೃತ ದ್ರವ್ಯಾದಿಗಳ ಮೇಲೂ ಪ್ರೋಕ್ಷಿಸಿ ಕೊನೆಗೆ ತನ್ನ ತಲೆಯ ಮೇಲೂ ಪ್ರೋಕ್ಷಿಸಿಕೊಳ್ಳಬೇಕು. ಇದರಿಂದ (ಶಂಖೋದಕ ಪ್ರೋಕ್ಷಿಸಿದ್ದರಿಂದ) ದೇವರ ಮೂರ್ತಿಗಳೂ ಪಾತ್ರೆಗಳೂ, ಹೂವು ಮೊದಲಾದುವೂ ಪವಿತ್ರವಾಗಿ ಪೂಜೆಗೆ ಅರ್ಹವಾದುವೆಂದೂ ತಾನೂ ಸ್ವಚ್ಛನೂ ಪವಿತ್ರನೂ ಆದೆನೆಂದು ಭಾವಿಸಿಕೊಳ್ಳಬೇಕು.

ಪಂಚಪಾತ್ರ ಪೂಜೆ— ಪೂಜೆಯಲ್ಲಿ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಸ್ನಾನ ಈ ಐದೂ ಮುಖ್ಯ ಅಂಗಗಳು. ಇವಷ್ಟೂ ನೀರಿನಿಂದಲೇ ಆಗತಕ್ಕವುಗಳಾದ್ದರಿಂದ ಈ ಐದಕ್ಕೇ ಬೇರೆಬೇರೆ ಚಿಕ್ಕ ಚಿಕ್ಕ ಪಾತ್ರೆಗಳನ್ನಿಟ್ಟುಕೊಂಡಿರುವುದು ಹಿರಿಯರ ಪದ್ಧತಿ. ಆಚಮನವನ್ನು ಸ್ನಾನಕ್ಕೆ ಮೊದಲು ಒಂದಾವರ್ತಿಯೂ ಸ್ನಾನವಾದಮೇಲೆ ಪುನರಾಚಮನ ಹೀಗೆ ಎರಡಾವರ್ತಿ

ಆರು ಪಾತ್ರೆಗಳಾಗುತ್ತವೆ. ಪ್ರಾಯಶಃ ಈ ರೀತಿ ಬೇರೆ ಪಾತ್ರೆಗಳನ್ನೇ ಇಟ್ಟು-ಕೊಳ್ಳುವವರು ಅತಿ ವಿರಳ. ಸಾಮಾನ್ಯವಾಗಿ ಪ್ರಧಾನ ಕಲಶದಿಂದಲೇ ಉದ್ಧರಣೆಯಿಂದ ನೀರು ತುಂಬಿಕೊಂಡು ಹಾಕುವುದೇ ಹೆಚ್ಚು. ಈ ಪಾತ್ರೆಗಳಲ್ಲಿ ರಮಾದಿ ದೇವತೆಗಳನ್ನು ಆವಾಹನೆ ಮಾಡಿ ಅವರ ಕೈಯಿಂದಲೇ ಈ ಸೇವೆಗಳು ನಡೆದುವೆಂದು ತಿಳಿದುಕೊಳ್ಳಬೇಕು. ಇದೇ ಪಂಚಪಾತ್ರಪೂಜೆಯ ಮುಖ್ಯ ಉದ್ದೇಶ.

ಪಂಚಾಮೃತಾಭಿಷೇಕ — ಪ್ರತಿನಿತ್ಯ ಪಂಚಾಮೃತ ಮಾಡುವುದು ಸಾಧ್ಯವಿಲ್ಲವೆಂದು ಹೇಳುವುದೇನಿದೆ! ಆದರೆ ಪಂಚಾಮೃತಾಭಿಷೇಕ ಮಾಡುವ ದಿನಗಳಲ್ಲಾದರೂ 'ದೇವಪೂಜಾವಿಧಿ'ಯಲ್ಲಿ ಹೇಳಿದ ಆಯಾ ಭಗವನ್ಮೂರ್ತಿಗಳು ಇದ್ದಾರೆಂದು ಅನುಸಂಧಾನ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅದು ಜಡ-ಪೂಜೆಯೇ ಆಗಿಬಿಡುತ್ತದೆ. ಮೊಸರಿನಲ್ಲಿರುವ ದಧಿವಾಮನನನ್ನು ಸಾಲಿಗ್ರಾಮದಲ್ಲಿ ಅಥವಾ ಪ್ರತಿಮೆಗಳಲ್ಲಿರುವ ಅಥವಾ ಮಂತ್ರಾಲಯದ ರಾಯರ ವೃಂದಾ-ವನದಲ್ಲಿ ಸನ್ನಿಹಿತರಾದ ನರಹರಿ-ರಾಮ-ಕೃಷ್ಣ-ವೇದವ್ಯಾಸಾದಿ ಮೂರ್ತಿಗಳಿಗೆ ಸಮರ್ಪಿಸುತ್ತಿದ್ದೇನೆ ಎಂದು ತಿಳಿದುಕೊಂಡು ಅಭಿಷೇಕ ಮಾಡಿದರೆ ಮಾತ್ರವೇ ಜಡಪೂಜೆಯಾಗುವುದಿಲ್ಲ. ಈ ಅನುಸಂಧಾನವಿಲ್ಲದ್ದೆಲ್ಲವೂ ಜಡಪೂಜೆಯೇ ಸರಿ.

ಪೀಠಪೂಜೆ— ಯದ್ಯಪಿ ಲಕ್ಷಕ್ಕೆ ಒಬ್ಬರಿಗೋ ಇಬ್ಬರಿಗೋ ಈ ಪೀಠ-ಪೂಜೆಯ ಮಹತ್ವ ತಿಳಿದಿರುತ್ತದೆ. ನಾವೆಲ್ಲಾ ಮಂದಾಸನಕ್ಕೆ ನಾನಾ ವಿಧ-ವಾದ ಅಲಂಕಾರ ಮಾಡಿ ನೋಡಿ ಸಿಗುತ್ತೇವೆ. ಯಾದರೂ ಪೀಠದಲ್ಲಿ ಯಾವ-ದೇವತೆಗಳಿದ್ದಾರೆ ಎಂಬುದನ್ನು ತಿಳಿದವರು ಅತ್ಯಂತ ವಿರಳ. ಒಂದು ವೇಳೆ ತಿಳಿದಿದ್ದರೂ ಅದನ್ನು ಕಿಂಚಿತ್ತಾದರೂ ಅನುಸಂಧಾನ ಮಾಡಿಕೊಳ್ಳುವವರಂತೂ ಇನ್ನೂ ಅತ್ಯಂತ ವಿರಳ. ಶ್ರೀಮದಾಚಾರ್ಯರು ತಂತ್ರಸಾರದಲ್ಲಿ ಹೇಳಿರುವ ಸಪ್ತತ್ತು ಶ್ಲೋಕಗಳಲ್ಲಿ ಸುಮಾರು ಅರ್ಧದಷ್ಟು ಭಾಗ ಈ ಪೀಠಪೂಜೆಯ ವರ್ಣನೆಯೇ ಆಗಿದೆ. ಅದರ ವಿವರಣೆಯನ್ನು ನಾವು 'ಪೀಠಪೂಜೆ'ಯಲ್ಲೇ ವಿಸ್ತಾರವಾಗಿ ವರ್ಣಿಸಿದ್ದೇವಲ್ಲದೆ ಸ್ಥೂಲ ಚಿತ್ರವನ್ನೂ ಕೊಟ್ಟು ವರ್ಣಿಸಿದ್ದೇವೆ. ಅದರಲ್ಲಿ ಕ್ಷೀರಸಾಗರ ಶ್ವೇತದ್ವೀಪಾದಿಗಳು ಮಾತ್ರ ಭೂಮಿಗಿಂತ ಎಷ್ಟೋ ಲಕ್ಷ ಯೋಜನ ಮೇಲ್ಭಾಗದಲ್ಲಿವೆ ಎಂಬ ವಿಚಾರ ಮಾತ್ರ ನಮಗೆ 'ಪುರುಷ-

ಸೂಕ್ತ'ದ ವ್ಯಾಖ್ಯಾನಗಳ ಅನುವಾದ ಮಾಡುವಾಗ ತಿಳಿದುಬಂದಿತಾದ್ದರಿಂದ ಅದನ್ನು ಮಾತ್ರ ತಿದ್ದಿಕೊಳ್ಳಬೇಕೆಂದು ಪ್ರಾರ್ಥನೆ. ಅಂತೂ ಪೀಠದ ಮಹತ್ತ್ವವನ್ನು ಅರಿತುಕೊಂಡೇ ಪೂಜೆ ಮುಂದುವರಿಸಬೇಕು.

ಷೋಡಶೋಪಚಾರ ಪೂಜೆ— ಪೂಜೆಯು ಹದಿನಾರು ಉಪಚಾರಗಳನ್ನು ಒಳಗೊಂಡಿವೆಯೆಂಬುದು ಪ್ರಸಿದ್ಧವಾಗಿದ್ದರೂ ಆ ಹದಿನಾರು ಯಾವು-ವೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ಧ್ಯಾನವೇ ಮೊದಲನೆಯ ಉಪಚಾರವೆಂದು ಹೇಳುತ್ತಾರೆ; ಕೆಲವರು ಅಲ್ಲವೆನ್ನುತ್ತಾರೆ. ಆದರೆ ದೇವರನ್ನು ಆವಾಹನೆ ಮಾಡುವುದಕ್ಕೆ ಮೊದಲು ಎಲ್ಲರೂ ದೇವತೆಯನ್ನು ಧ್ಯಾನಮಾಡಿಯೇ ಆವಾಹನೆ ಮಾಡುತ್ತಾರೆ. ಆವಾಹನೆ ಮಾಡಿದ ಮೇಲೆ ಆಸನದಲ್ಲಿ ಕೂಡಿಸಿ ಅರ್ಘ್ಯ ಪಾದ್ಯಾದಿಗಳನ್ನು ಸಮರ್ಪಿಸುತ್ತಾರೆ. ಈ ಹದಿನಾರು ಉಪಚಾರಗಳಿಗೂ ಪುರುಷಸೂಕ್ತದ (ಋಗ್ವೇದಪಾಠದ) ಹದಿನಾರು ಋಕ್ಕುಗಳನ್ನೇ ಹೇಳುವುದು 'ಋಗ್ವಿಧಾನೋಕ್ತ' ಸಂಕ್ಷಿಪ್ತ ಕ್ರಮ. ಅದಲ್ಲದೆ ಬೇರೆ ಮಂತ್ರಗಳನ್ನೂ ಯಥಾಶಕ್ತಿ ಹೇಳಿಕೊಳ್ಳಬಹುದು. ಆ ದೃಷ್ಟಿಯಿಂದ ೧. ಆಸನ, ೨. ಅರ್ಘ್ಯ, ೩. ಪಾದ್ಯ (ಅಥವಾ ಪಾದ್ಯ-ಅರ್ಘ್ಯ), ೪. ಆಚಮನ, ೫. ಮಧುಪರ್ಕ, ೬. ಸ್ನಾನ, ೭. ವಸ್ತ್ರ, ೮. ಯಜ್ಞೋಪವೀತ, ೯. ಗಂಧ-ಅಕ್ಷತೆ, ೧೦. ಪುಷ್ಪ-ತುಳಸೀ, ೧೧. ಧೂಪ, ೧೨. ದೀಪ, ೧೩. ನೈವೇದ್ಯ, ೧೪. ಮಂಗಳಾರತಿ (ನೀರಾಜನ), ೧೫. ಮಂತ್ರಪುಷ್ಪ, ೧೬. ಪ್ರಾರ್ಥನಾ— ಈ ಹದಿನಾರೇ ಷೋಡಶೋಪಚಾರಗಳು. ಇವುಗಳೆಲ್ಲಕ್ಕೂ ಧ್ಯಾನ-ಆವಾಹನೆಗಳೇ ಮುಖ್ಯವಾದ್ದರಿಂದ ಆ ವಿಷಯವನ್ನೇ ಮೊದಲು ವಿಚಾರ ಮಾಡಬೇಕಾಗಿದೆ.

ಧ್ಯಾನ ಆವಾಹನೆಗಳು— ತಂತ್ರಸಾರೋಕ್ತ ಪ್ರಕಾರ ಭಗವಂತನ ಎಲ್ಲ ಮೂರ್ತಿಗಳಿಗೂ 'ಉದ್ಯದ್ಭಾಸ್ವತ್ ಸಮಾಭಾಸಃ........' ಎಂಬ ಶ್ಲೋಕ ಅನ್ವಯಿಸುತ್ತದೆ. ಇದಲ್ಲದೆ ರಾಮ-ಕೃಷ್ಣ-ನರಸಿಂಹಾದಿ ಮೂರ್ತಿಗಳಿದ್ದರೆ ಆಯಾ ಮೂರ್ತಿಗಳ ತಂತ್ರಸಾರೋಕ್ತ ಧ್ಯಾನಶ್ಲೋಕಗಳನ್ನು ಹೇಳಿಕೊಳ್ಳ-ಬಹುದು. ಮುಖ್ಯಪ್ರಾಣದೇವರ ಪ್ರತಿಮೆಯಲ್ಲಿ 'ಉದ್ಯದ್ರವಿಪ್ರಕರ........' ಎಂಬ ಶ್ಲೋಕದಿಂದ ಧ್ಯಾನ ಮಾಡುವುದು ಶ್ರೇಷ್ಠ. ಗಣಪತಿ ಪ್ರತಿಮೆಯಲ್ಲಿ 'ರಕ್ತಾಂಬರೋ........' ಎಂಬ ಶ್ಲೋಕಗಳನ್ನೂ ಲಕ್ಷ್ಮೀ ಪ್ರತಿಮೆಗಳಲ್ಲಿ

"ಕೌಶೇಯ ಪೀತವಸನಾಂ" ಎಂಬ ಶ್ಲೋಕದಿಂದ ಧ್ಯಾನ ಮಾಡುವುದು ಶ್ರೇಷ್ಠ.

ಸಾಲಿಗ್ರಾಮಗಳು ಭಗವಂತನ ಸ್ವಯಂವ್ಯಕ್ತ ಪ್ರತಿಮೆಗಳಾದ್ದರಿಂದ ಅವುಗಳಲ್ಲಿ ಹೊಸದಾಗಿ ಆವಾಹನೆ ಮಾಡುವ ಆವಶ್ಯಕತೆಯಿಲ್ಲ. ಆದರೂ ಕೂಡ ನಮ್ಮ ಬಿಂಬಮೂರ್ತಿಯೇ ಇಲ್ಲಿ ನೆಲೆಸಿದ್ದಾನೆಂದು ಮಾತ್ರ ಐಕ್ಯ-ಚಿಂತನೆ ಮಾಡಬೇಕು. ಇದೇ ರೀತಿಯಲ್ಲಿ ತಿರುಪತಿಯ ಶ್ರೀನಿವಾಸ, ಬದರೀ ನಾರಾಯಣ ಮೊದಲಾದ ಸ್ವಯಂವ್ಯಕ್ತ ಮೂರ್ತಿಗಳನ್ನು ನೋಡುವಾಗಲೂ ನಮ್ಮ ಬಿಂಬಮೂರ್ತಿಯನ್ನೇ ಅಲ್ಲಿ ಚಿಂತಿಸಬೇಕೆಂದು ಶ್ರೀ ವಿಜಯದಾಸರು ತಿರುಪತಿ ಕ್ಷೇತ್ರಮಹಿಮಾ ಸುಳಾದಿಯಲ್ಲಿ ಹೇಳಿದ್ದಾರೆ.

ಕೃಷ್ಣ, ರಾಮ, ಹಯಗ್ರೀವ, ನರಸಿಂಹಾದಿ ಪ್ರತಿಮೆಗಳಲ್ಲೂ ಶಿಲಾ-ಮಯ ವಿಗ್ರಹಗಳಲ್ಲೂ ನಮ್ಮ ಬಿಂಬರೂಪಿ ಪರಮಾತ್ಮನನ್ನೇ ಆವಾಹನೆ ಮಾಡಿ ಪೂಜಿಸಬೇಕು. ಆದರೆ ಇನ್ನೊಬ್ಬರ ಮನೆಯ ದೇವರನ್ನು ಪೂಜಿಸು-ವಾಗ ಸೂರ್ಯಾಂತರ್ಗತ ಭಗವಂತನನ್ನು (ಬೆಳದಿಂಗಳ ಕಾಲದಲ್ಲಿ—ರಾತ್ರಿ ಹೊತ್ತಾದರೆ ಚಂದ್ರಮಂಡಲದಲ್ಲಿರುವ, ಬೆಳದಿಂಗಳಿಲ್ಲದ ಕಾಲದಲ್ಲಿ ಅಗ್ನಿ-ಮಂಡಲಾಂತರ್ಗತ) ಭಗವಂತನನ್ನು ಆವಾಹನೆ ಮಾಡಿ ಪೂಜಿಸಬೇಕು. ಆವಾಹನೆ ಮಾಡದಿದ್ದ ಪಕ್ಷದಲ್ಲಿ ಆ ಪೂಜೆ ಜಡಪೂಜೆಯೇ ಆಗುತ್ತದೆ.

ಮುಖ್ಯಪ್ರಾಣ ಪ್ರತಿಮೆಗಳಲ್ಲಿ ಆವಾಹನಾ ಕ್ರಮ— ಮಾಧ್ವರಲ್ಲಿ ಮುಖ್ಯಪ್ರಾಣದೇವರ ಪ್ರತೀಕವಾಗಿ ಹನುಮಂತದೇವರ ಮೂರ್ತಿಗಳನ್ನು ಪೂಜಿಸುವುದು ಬಹಳ ರೂಢಿಯಲ್ಲಿದೆ. ಆದ್ದರಿಂದ ಆ ವಿಧಾನವನ್ನೂ ಕಿಂಚಿತ್ ವಿವರಿಸುವೆನು. ಮುಖ್ಯಪ್ರಾಣದೇವರ ಪ್ರತೀಕಗಳಲ್ಲಿ ಮೂರು ಗೋಳಕಗಳನ್ನು ಚಿಂತನೆ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಗೋಲಕ ಎಂದರೆ ಆವರಣ ಎಂದರ್ಥ; ಒಂದು ಬೆಳ್ಳಿ ಡಬ್ಬಿಯನ್ನು ತಾಮ್ರದ ಡಬ್ಬಿಯೊಳಗಿಟ್ಟು ಅದನ್ನು ಹಿತ್ತಾಳೆ ಡಬ್ಬಿಯಲ್ಲಿಟ್ಟರೆ—ಹಿತ್ತಾಳೆ ಡಬ್ಬಿಯು ಪ್ರಥಮ ಗೋಲಕವಾಗುತ್ತದೆ. ಅದರ ಒಳಗಿನ ತಾಮ್ರದ ಡಬ್ಬಿ ಎರಡನೆಯ ಗೋಲಕವೂ, ಬೆಳ್ಳಿ ಡಬ್ಬಿಯು ಮೂರನೆಯ ಗೋಲಕವೂ ಆಗುತ್ತವೆ. ಪ್ರಾಣದೇವರ ಮೇಲೆ ಕಾಣುವ ಪ್ರಥಮ ಗೋಲಕದಲ್ಲಿ ಹನುಮ-ಭೀಮ-ಮಧ್ವರೆಂಬ ಅವತಾರತ್ರಯೋಪೇತ

ಮುಖ್ಯಪ್ರಾಣದೇವರನ್ನು ಚಿಂತಿಸಬೇಕು. ಅದರ ಒಳಗಿನ ಎರಡನೇ ಗೋಲಕದಲ್ಲಿ ತ್ರಿಕೋಟಿರೂಪ ಪ್ರಾಣದೇವರನ್ನು, ಪ್ರಾಣಾಪಾನವ್ಯಾನೋದಾನಸಮಾನರೆಂಬ ಐದು ರೂಪಿಯಾದ ಮುಖ್ಯಪ್ರಾಣದೇವರನ್ನೂ ಚತುರ್ಮುಖ ಬ್ರಹ್ಮದೇವರನ್ನೂ ಸರಸ್ವತೀ-ಭಾರತೀದೇವಿಯರನ್ನೂ ಚಿಂತಿಸಬೇಕು. ಪ್ರಾಣದೇವರ ಮೂರು ಕೋಟಿ ರೂಪಗಳ ವಿವರಣೆ ಹರಿಕಥಾಮೃತಸಾರದ (ಸಂಧಿ ೨೩ ಅಪರೋಕ್ಷತಾರತಮ್ಯ ಸಂಧಿ/ಕಲ್ಪಸಾಧನ ಸಂಧಿ, ಪದ್ಯ ೨೧) ಬಂದಿದೆ. ಖೇಟ ಎಂದರೆ ಆಕಾಶದಲ್ಲಿ ಸಂಚರಿಸುವ ಹಕ್ಕಿ-ಪಕ್ಷಿಗಳಲ್ಲಿರುವ ಒಂದು ಕೋಟಿ ರೂಪ, ನೀರಿನಲ್ಲಿ ಸಂಚರಿಸುವ ಮೀನು ಮೊಸಳೆ ಮೊದಲಾದುವುಗಳಲ್ಲಿರುವ ಒಂದು ಕೋಟಿ ರೂಪ, ಭೂಮಿಯ ಮೇಲೆ ಓಡಾಡುವ ನರ-ಮೃಗಾದಿಗಳಲ್ಲಿರುವ ಒಂದು ಕೋಟಿ ರೂಪ—ಹೀಗೆ ಈ ಮೂರು ಕೋಟಿ ರೂಪಗಳು ಕಪಿಲರೂಪಿ ಪರಮಾತ್ಮನಿಂದ ಹೊರಬಂದುವೆಂದೂ ತಿಳಿದುಬರುತ್ತದೆ.

ಇನ್ನು ಮೂರನೆಯ ಗೋಳಕದಲ್ಲಿ ಜ್ಯೋತೀರೂಪರಾದ ಶ್ರೀ ಲಕ್ಷ್ಮೀನಾರಾಯಣರನ್ನು ಚಿಂತಿಸಬೇಕು. ನಾರಾಯಣನಲ್ಲಿ ಬೃಹತೀಸಹಸ್ರಪ್ರತಿಪಾದ್ಯ ಎಪ್ಪತ್ತೆರಡು ಸಹಸ್ರ ರೂಪಗಳೂ, ದಶಾವತಾರಗಳೂ, ವಿಶ್ವಾದಿ ಸಹಸ್ರರೂಪಗಳೇ ಮೊದಲಾದ ಅನಂತ ರೂಪಗಳು ಹೆಣೆದುಕೊಂಡಿವೆಯೆಂದೂ ಭಾವಿಸಬೇಕು. ಅಷ್ಟರ ಜೊತೆಗೆ ಪ್ರಾಣದೇವರ ಅಂಗೋಪಾಂಗಗಳಲ್ಲಿ ಗರುಡ-ಶೇಷ-ರುದ್ರಾದಿ ಮೂವತ್ತುಮೂರು ಕೋಟಿ ದೇವತೆಗಳೂ, ಶುಕ-ನಾರದ-ವಸಿಷ್ಠಾದಿ ಸಕಲ ಮಹರ್ಷಿಗಳೂ, ಶ್ರೀಮತ್ ಪದ್ಮನಾಭತೀರ್ಥ-ಜಯತೀರ್ಥ-ವ್ಯಾಸರಾಯರು-ರಘೂತ್ತಮಸ್ವಾಮಿಗಳು-ಮಂತ್ರಾಲಯ ರಾಯರೇ ಮೊದಲಾದ ಸಕಲ ಗುರುಪರಂಪರೆಯವರೂ ಅಡಗಿದ್ದಾರೆಂದೂ ಚಿಂತನೆ ಮಾಡಿ ಪೂಜಿಸಿದರೆ ಇಡೀ ಬ್ರಹ್ಮಾಂಡವನ್ನೇ ಪೂಜಿಸಿದ ಫಲ ಲಭಿಸುತ್ತದೆ.

ರಾಯರ ವೃಂದಾವನದಲ್ಲಿ ಚಿಂತನಾಕ್ರಮ – ಈಚೆಗೆ ಅನೇಕರು ತಮ್ಮ ಮನೆಗಳಲ್ಲಿ ರಾಘವೇಂದ್ರಸ್ವಾಮಿಗಳ ವೃಂದಾವನಗಳನ್ನಿಟ್ಟುಕೊಂಡು ಪೂಜಿಸುವುದು ಕಂಡುಬರುತ್ತದೆ. ವೃಂದಾವನದ ಮಹಿಮೆಯನ್ನು ಶ್ರೀ ಗೋಪಾಲದಾಸರು 'ರಾಘವೇಂದ್ರ ಸುಳಾದಿ'ಯಲ್ಲೇ ಹೇಳಿದ್ದಾರಾದರೂ ಅದರ ಕಡೆ ಗಮನ ಹರಿಸುವ ಪುಣ್ಯಾತ್ಮರೇ ಅತಿ ವಿರಳವಾಗಿದ್ದಾರೆ. ಆದ್ದರಿಂದ ಆ ವಿಚಾರವನ್ನು ಸ್ವಲ್ಪ ಸೂಚಿಸುವೆನು. ವೃಂದಾವನಕ್ಕೆ ನಾಲ್ಕು ಪಾರ್ಶ್ವ

(ಪಕ್ಷ)ಗಳಿರುವುದಷ್ಟೇ. ಅವುಗಳಲ್ಲಿ ಮುಂಭಾಗದಲ್ಲಿ ನರಸಿಂಹದೇವರೂ ಬಲ-ಭಾಗದಲ್ಲಿ ರಾಮದೇವರೂ ಹಿಂಭಾಗದಲ್ಲಿ ಶ್ರೀಕೃಷ್ಣದೇವರೂ ಎಡಭಾಗದಲ್ಲಿ ವೇದವ್ಯಾಸದೇವರೂ ಇದ್ದು ಕ್ರಮವಾಗಿ ಪ್ರಹ್ಲಾದರಾಯರ ಮೂಲರೂಪ, ಹನುಮ, ಭೀಮ, ಮಧ್ವರೂಪಗಳಿಂದ ಸೇವಿಸಲ್ಪಡುತ್ತಿರುತ್ತಾರೆ. ವೃಂದಾ-ವನದ ಮೇಲ್ಭಾಗದಲ್ಲಿ ಹಯಗ್ರೀವದೇವರು ಸನ್ನಿಹಿತರಾಗಿರುತ್ತಾರೆ. ಅಷ್ಟೇ ಅಲ್ಲದೆ ಗೋಪಾಲದಾಸರು ಹೇಳುವಂತೆ ಶ್ರೀಮಧ್ವಾಚಾರ್ಯರೇ ಇರುವುದರಿಂದ ಅವರನ್ನು ಓಲೈಸುತ್ತಾ 'ಸುರಗುರು ಮಧ್ವಾಚಾರ್ಯರು ಮೊದಲಾಗಿ' ಸಕಲ ಗುರುಗಳೂ 'ತಾರತಮ್ಯಾನುಸಾರ' ಸನ್ನಿಹಿತರಾಗಿರುತ್ತಾರೆಂದು ತಿಳಿದು ಅರ್ಚಿಸಬೇಕು. ಇಲ್ಲಿಗೆ ಆವಾಹನೆಯ ವಿಚಾರವನ್ನು ಮುಗಿಸೋಣ.

ನ್ಯಾಸದ ಅವಶ್ಯಕತೆ— ಮೂರ್ತಿಗಳಲ್ಲಿ ದೇವತೆಯನ್ನು ಆವಾಹನೆ ಮಾಡಿದ್ದರಿಂದ ಆ ದೇವರು (ದೇವತೆ) ಸನ್ನಿಹಿತನಾಗಿದ್ದರೂ ಕೂಡ ಆ ದೇವತೆಯ ಕಣ್ಣು-ಕಿವಿ-ಮೂಗು, ಕೈ-ಕಾಲುಗಳೇ ಮೊದಲಾದ ಸಕಲಾಂಗ-ಗಳಲ್ಲೂ ವಿಶೇಷ ಸಾನ್ನಿಧ್ಯ ಬರುವುದಕ್ಕಾಗಿ ತುಳಸೀದಳದಿಂದ ಮಾತೃಕಾ-ನ್ಯಾಸದಿಂದಲೂ ತತ್ವನ್ಯಾಸದಿಂದಲೂ ನಾರಾಯಣಾಷ್ಟಾಕ್ಷರ ಮಂತ್ರದ ವರ್ಣ-ಗಳಿಂದಲೂ ನ್ಯಾಸ ಮಾಡುವುದು ಹೆಚ್ಚು ಶ್ರೇಯಸ್ಕರ. ಅಷ್ಟೇ ಅಲ್ಲದೆ ರಾಮ, ಕೃಷ್ಣ, ಹಯಗ್ರೀವಾದಿ ಮೂರ್ತಿಗಳಿದ್ದರೆ ಆಯಾ ಕೃಷ್ಣ-ರಾಮಾದಿ ಮಂತ್ರಗಳಿಂದಲೂ ನ್ಯಾಸ ಮಾಡುವುದು ಇನ್ನೂ ಶ್ರೇಷ್ಠ. ಈ ವಿಷಯವನ್ನೇ ಶ್ರೀಮದಾಚಾರ್ಯರು ತಂತ್ರಸಾರದಲ್ಲಿ (೪ ಅ. ೧೩೪ ಶ್ಲೋ.) "ಪ್ರತಿಮಾಯಾಂ ಆತ್ಮನಿ ಚ ನ್ಯಾಸೋಽಯಂ ಸನ್ನಿಧಾನಕೃತ್" ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಆ ಮಂತ್ರಗಳನ್ನು ಗುರುಗಳಿಂದ ಉಪದೇಶ ಪಡೆದಿರಬೇಕು.

ಆವಾಹನೆಯನ್ನು ಮಾಡಿ ನ್ಯಾಸ ಮಾಡಿದ ಬಳಿಕ ದೊಡ್ಡ ಪ್ರತಿಮೆ ಗಳನ್ನು ಆಸನದಲ್ಲಿ ಕೂಡಿಸಿ ಸಾಲಿಗ್ರಾಮಗಳಿಗೂ ಚಿಕ್ಕ ಚಿಕ್ಕ ಮೂರ್ತಿಗಳಿಗೂ ಮಾತ್ರವೇ ಅರ್ಘ್ಯಪಾದ್ಯಾದಿ ಉಪಚಾರಗಳನ್ನೂ ಅಭಿಷೇಕವನ್ನೂ ಮಾಡಿ ಪುನರಾಚಮನವನ್ನೂ ಕೊಟ್ಟು ವಸ್ತ್ರದಿಂದ ವರೆಸಿ ಸಂಪುಟದಲ್ಲಿಟ್ಟು ವಸ್ತ್ರಾದಿ ಉಪಚಾರಗಳನ್ನು ಸಮರ್ಪಿಸಬೇಕು ಇಲ್ಲೂ ಸಹ ವಸ್ತ್ರ, ಯಜ್ಞೋಪವೀತ, ಗಂಧ ಪುಷ್ಪಾದಿ ಎಲ್ಲ ಪದಾರ್ಥಗಳಲ್ಲೂ ಭಗವಂತನಿದ್ದಾನೆಂದು ತಿಳಿದು "ತ್ವದೀಯಂ ವಸ್ತು ಗೋವಿಂದ, ತುಭ್ಯಮೇವ ಸಮರ್ಪ್ಯತೇ" (ಅರ್ಥ) ಹೇ

ಗೋವಿಂದ, ಈ ಎಲ್ಲ ವಸ್ತುಗಳನ್ನೂ ನೀನೇ ಕೊಟ್ಟದ್ದು. ಎಲ್ಲದರಲ್ಲೂ ನೀನೇ ಸನ್ನಿಹಿತನಾಗಿರುವೆ. ನಿನ್ನ ರೂಪವಾದ ಈ ವಸ್ತುವನ್ನೇ ಈ ಸಾಲಿಗ್ರಾಮ-ಮೂರ್ತ್ಯಾದಿಗಳಲ್ಲಿ ಸನ್ನಿಹಿತನಾಗಿರುವ ನಿನಗೇ ಸಮರ್ಪಿಸುತ್ತಿದ್ದೇನೆ—ಎಂಬ ಅನುಸಂಧಾನದಿಂದಲೇ ಸಮರ್ಪಿಸಬೇಕು. ಆಗಲೇ ಅದು ವಿಹಿತವಾದ ನಿಜ-ವಾದ ಪೂಜೆಯಾಗುತ್ತದೆ. ಇಲ್ಲದಿದ್ದರೆ ಪುರಂದರದಾಸರು ಹೇಳಿದಂತೆ 'ಕಂಚು-ಕಾರನ ಅಂಗಡಿ'ಗೆ ಸಮಾನವಾಗಿ ಪೂಜಾ ಪ್ರದರ್ಶನವಾಗುತ್ತದೆ.

ಭಗವಂತನ ಪೂಜೆ ಮುಗಿಸಿದಮೇಲೆಯೇ ರಮಾದಿಗಳ ಪೂಜೆಯನ್ನೂ ಗುರುಗಳ ಪೂಜೆಯನ್ನೂ ಮಾಡುವುದು ವಿಹಿತವೂ ಉಚಿತವೂ ಆಗಿದೆ. ಆದರೆ ಹೆಚ್ಚು ಅನುಕೂಲವಾಗುವುದಕ್ಕಾಗಿ ದೇವರ ಅಭಿಷೇಕವಾದ ಕೂಡಲೇ ಪ್ರಾಣ-ದೇವರಿಗೂ ಮತ್ತು ಗುರುಗಳಿಗೂ ಅಭಿಷೇಕ ಮಾಡಿ ದೇವರಿಗೆ ಸಮರ್ಪಿಸಿದ ಗಂಧಾದಿಗಳನ್ನೂ ನೈವೇದ್ಯವನ್ನೂ ಅವರಿಗೂ ಸಮರ್ಪಿಸಿ ಒಟ್ಟಿಗೆ ಮಂಗಳಾರತಿ ಮಾಡಬಹುದು. ಮಂಡೂಕಪ್ಲುತಿಯ ನ್ಯಾಯದಿಂದ ಹೀಗೆ ಮಾಡುವುದೂ ನಿಷಿದ್ಧವಲ್ಲವೆಂದು ಧಾರಾಳವಾಗಿ ಹೇಳಬಹುದು.

ಸಂಕ್ಷೇಪ ವಿಧಾನ— ಒಂದು ವೇಳೆ ಇಷ್ಟೆಲ್ಲಾ ಅನುಸಂಧಾನ ಮಾಡಿ-ಕೊಂಡು ಹೀಗೆ ವಿಸ್ತಾರವಾದ ಪೂಜೆ ಮಾಡುವುದು ಸಾಧ್ಯವಿಲ್ಲದಿದ್ದರೆ ಕನಿಷ್ಠ ಪಕ್ಷ ಇಷ್ಟಾದರೂ ಮಾಡಿ: ಒಂದು ಸಾಲಿಗ್ರಾಮವನ್ನೋ ಅಥವಾ ಕೃಷ್ಣ, ರಾಮ ಮೊದಲಾದ ಯಾವುದಾದರೂ ಮೂರ್ತಿಯನ್ನು ತಟ್ಟೆಯಲ್ಲಿಟ್ಟು ಅದರ ಮೇಲೆ 'ದ್ರೌಪದೀರಮಣ ಭೀಮಸೇನ' ಎಂದು ಹೇಳಿ ಸ್ವಲ್ಪ ನೀರು ಹಾಕಿ ತೊಳೆಯಿರಿ. ಆಮೇಲೆ ಆ ಸಾಲಿಗ್ರಾಮದಲ್ಲಿ ಅಥವಾ ಮೂರ್ತಿಯಲ್ಲಿ ನಿಮ್ಮ ಅಂತರ್ಯಾಮಿ ಭಗವಂತನೇ ಇದ್ದಾನೆಂದು ತಿಳಿದು, ಅಭಿಷೇಕ ಮಾಡುವ ನೀರಿನಲ್ಲಿ ಮೂರೂವರೆಕೋಟಿ ತೀರ್ಥಾಭಿಮಾನಿಗಳಲ್ಲಿ ಅಂತರ್ಯಾಮಿಯಾದ ನಮ್ಮ ದೇಹದ ನೂರೊಂದು ಮುಖ್ಯ ನಾಡಿಗಳಲ್ಲಿರುವ ಅಜಾದಿರೂಪಿ ಆ ಭಗವಂತನೇ ಸನ್ನಿಹಿತನಾಗಿದ್ದಾನೆಂದು ತಿಳಿದುಕೊಂಡು ಆ ನೀರಿನಿಂದ "ಸಹಸ್ರ ಶೀರ್ಷಾ..." ಎಂಬ ಪುರುಷಸೂಕ್ತ ಮಂತ್ರವನ್ನು ಅಥವಾ 'ಓಂ ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರ ಮೂಲಮಂತ್ರವನ್ನು ಹೇಳಿಕೊಂಡು ಅಭಿಷೇಕ ಮಾಡಿ ಆ ದೇವರನ್ನು ವಸ್ತ್ರದಿಂದ ಒರೆಸಿ ಇಟ್ಟು ಒಂದು ದಳ ತುಳಸಿ ಯನ್ನು ಅಥವಾ ಹೂವನ್ನು ಪೂಜಿಸಿ ಕೈ ಮುಗಿದುಬಿಡಿ. ಇನ್ನೂ ಹೆಚ್ಚು

ಅವಕಾಶವಿದ್ದರೆ ನೈವೇದ್ಯ ತೋರಿಸಿರಿ, ದೀಪ ಹಚ್ಚಿರಿ, ಮಂಗಳಾರತಿ ಮಾಡಿ. ಹೀಗೆ 'ಚಾಪೆಯಿದ್ದಷ್ಟು ಕಾಲು ಚಾಚು' ಎಂಬ ಗಾದೆಗೆ ತಕ್ಕಂತೆ ಅವಕಾಶ ವಿದ್ದಷ್ಟು ಹೆಚ್ಚುಹೆಚ್ಚು ಪೂಜೆ ಮಾಡಿ—ಇಲ್ಲದಿದ್ದರೆ ಕನಿಷ್ಠಪಕ್ಷ ಇಷ್ಟು ಪೂಜೆಯನ್ನಾದರೂ **ಪ್ರತಿನಿತ್ಯ ಮಾಡಿ** ಎಂಬುದೇ ನನ್ನ ಸಲಹೆ. ವರ್ಷಕ್ಕೋ ಅಥವಾ ತಿಂಗಳಿಗೋ ಒಂದು ದಿನ ವಿಧಿಪೂರ್ವಕ ಪೂಜೆ ಮಾಡುವುದಕ್ಕಿಂತ— ಇಷ್ಟೇ "ಸುಲಭಪೂಜೆ"ಯನ್ನು ಪ್ರತಿನಿತ್ಯ ಮಾಡುವುದೇ ಶ್ರೇಷ್ಠ. ಅವರೆ ಸಾಲಿಗ್ರಾಮದಲ್ಲೂ ಪೂಜಾದ್ರವ್ಯಗಳಲ್ಲೂ ಭಗವಂತ ಇದ್ದಾನೆಂದು ತಿಳಿದು- ಕೊಳ್ಳುವುದೂ ಅಷ್ಟೇ ಮುಖ್ಯ—ಎಂಬ ವಿಷಯವನ್ನು ಶ್ರೀ ಸಂಕರ್ಷಣ ಒಡೆಯರು ಒತ್ತಿ ಒತ್ತಿ ಹೇಳಿದ್ದಾರೆ. "ಕರ್ಮ ಜ್ಯಾಯೋ ಹ್ಯಕರ್ಮಣಃ" ಎಂದೂ, "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂದೂ ಗೀತೆಯಲ್ಲಿ (೩/೮,೨/೪೦) ಹೇಳಿರುವುದರಿಂದ ಪೂಜೆ ಬಿಡುವುದಕ್ಕಿಂತ ಇಷ್ಟು ಮಾಡುವುದೇ ಮೇಲೆಂದು ಹೇಳಿ ಈ ವಿಚಾರವನ್ನು ಮುಗಿಸಬಹುದು.

ಜ್ಞಾನವನ್ನು ಬೆಳೆಸಿಕೊಳ್ಳಿ— ಪೂಜೆ ಮಾಡುವುದಕ್ಕೆ ಅವಕಾಶವಿಲ್ಲ ವೆನ್ನುವುದನ್ನು ಒಪ್ಪಿದರೂ ಪೂಜೆ ಮಾಡುವ ಕ್ರಮವನ್ನು ವಿಸ್ತಾರವಾಗಿ ತಿಳಿದುಕೊಳ್ಳಲು ಅಡ್ಡಿ-ಆತಂಕಗಳನ್ನು ಹೇಳುವುದು ಮಾತ್ರ ಕರ್ತವ್ಯಪರಾ- ಙ್ಮುಖತೆಯೇ ಆಗುತ್ತದೆ. ಪೂಜೆ ಮಾಡು—ಬಿಡು—ಹೇಗೆ ಪೂಜೆ ಮಾಡ- ಬೇಕು, ಪೂಜಾವಿಧಿಗಳಾವುವು, ನಿಷೇಧಗಳಾವುವು, ಇತ್ಯಾದಿ ವಿಚಾರಗಳನ್ನು ತಿಳಿದುಕೊಳ್ಳುತ್ತಾ ಹೋಗಬೇಕು. ಶ್ರೀ ಪ್ರಭಂಜನಾಚಾರ್ಯರು ಅರ್ಥಸಹಿತ ಪ್ರಕಟಿಸಿರುವ ಟೀಕಾರಾಯರ 'ಪದ್ಯಮಾಲಾ'ವನ್ನೂ, ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಏನೇನು ವಿಚಾರ ಹೇಳಿದ್ದಾರೆ, ಅದರ ಟೀಕೆಗಳಲ್ಲಿ ಏನು ವಿಷಯ ಹೇಳಿದೆ ಎಂದು ಓದಿ ಅಥವಾ ತಿಳಿದವರಿಂದ ಕೇಳಿ ತಿಳಿದುಕೊಳ್ಳಬೇಕು. ಇದರಿಂದ ಜ್ಞಾನಾಭಿವೃದ್ಧಿಯಾಗಿ ಶ್ರೀಹರಿವಾಯುಗಳ ಪೂರ್ಣಾನುಗ್ರಹಕ್ಕೆ ಸಾಧನ ಲಭಿಸಿದಂತಾಗುತ್ತದೆಯಲ್ಲದೆ ನಮ್ಮ ಜನ್ಮವೂ ಸಾರ್ಥಕವಾಗುತ್ತದೆ.

ವಿಷ್ಣುಪೂಜಾವಿಧಾನಸ್ಯ ಮೂಲಸಿದ್ಧಾಂತಬೋಧಿನೀ ।
ಪೀಠಿಕಾ ರಚಿತಾ ಹ್ಯೇಷಾ ಮಧ್ವಮಾಧವತುಷ್ಟಯೇ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ದೇವಪೂಜಾ

ಸಂಕ್ಷಿಪ್ತ ಪೂಜಾ

ದೇವಪೂಜೆಯನ್ನು 'ಪದ್ಯಮಾಲಾ' ಪುಸ್ತಕದಲ್ಲಿ ಹೇಳಿರುವ ಕ್ರಮದಲ್ಲಿ— ಶ್ರೀಮಜ್ಜಯತೀರ್ಥರು ಹೇಳಿದಂತೆ ಆರಂಭ ಮಾಡಬೇಕು. ಗುರುವಂದನದಿಂದ ಆರಂಭವಾಗುವ ದೇವಪೂಜಾದಲ್ಲಿ ಅವಶ್ಯ ಮಾಡಬೇಕಾದ ಕ್ರಮ ಹೀಗಿದೆ— ಗ್ರಾಹ್ಯಾಗ್ರಾಹ್ಯ ಪುಷ್ಪಗಳೇನೆಂಬುದನ್ನು ತಿಳಿದು, ತುಲಸೀ-ಪುಷ್ಪಗಳನ್ನು ಸಂಗ್ರಹಿಸುವುದು, ಕಲಶ-ಸ್ಥಾಪನೆ, ದ್ವಾರಪಾಲಕವಂದನೆ, ಕವಾಟೋದ್ಘಾಟನ ಅಂದರೆ ದೇವಗೃಹದ ಬಾಗಿಲು ತೆಗೆಯುವುದು, ನಂತರ ಪ್ರವೇಶ ಅನಂತರ ದೀಪವನ್ನು ದೊಡ್ಡದು ಮಾಡಿ, ವಿಘ್ನಗಳನ್ನು ಉಚ್ಚಾಟಿಸಿ. ಮಾನುಷಗಂಧನಿವಾರಣ ಮಾಡಿಕೊಂಡು ಬ್ರಹ್ಮಪಾರಸ್ತೋತ್ರ ಹೇಳಿ ಘಂಟೆ ಬಾರಿಸಬೇಕು—ದೇವರ ಆವಾಹನೆ ಹಾಗೂ ರಾಕ್ಷಸರ ಉಚ್ಚಾಟನೆಗಾಗಿ. ಅನಂತರದಲ್ಲಿ ನಿರ್ಮಾಲ್ಯವಿಸರ್ಜನ, ಪೀಠಸ್ಥಾಪನ. ಮಂಟಪಧ್ಯಾನ, ಭೂತೋಚ್ಚಾಟನ, ಆಸನದೇವತಾ, ದಿಗ್ಬಂಧನ, ಪೂಜಾಸಂಕಲ್ಪ ಹೇಳಿ ಕರಶುದ್ಧಿ ಮಾಡಿಕೊಂಡು ಗುರುವಂದನ ಮಾಡಬೇಕು. ನಂತರ ಪಾಪಪುರುಷ ನಿರಸನ, ಪ್ರಾಣಾಯಾಮ, ತತ್ತ್ವನ್ಯಾಸ, ಅಷ್ಟಾಕ್ಷರ ಮಂತ್ರ, ಪ್ರಾರ್ಥನಾ, ಕಲಶದೇವತಾ ಕಲಶಸಂಖ್ಯಾ ತಿಳಿದುಕೊಂಡು ಕಲಶಪೂಜಾ. ಶಂಖಪೂಜಾ, ಪಂಚಪಾತ್ರಪೂಜಾ, ಶಂಖೋದಕ ಪ್ರೋಕ್ಷಣೆ, ಪೀಠಪೂಜಾ, ಆವಾಹನ, ಷಣ್ಮುದ್ರ ದರ್ಶನ, (ಪರಾರ್ಥಾವಾಹನ,) ಸ್ನಾನಪ್ರಾರ್ಥನಾ, ಅರ್ಘ್ಯಾದ್ಯುಪಚಾರಗಳು, ಪಂಚಾಮೃತ ಅಭಿಷೇಕ, ಶುದ್ಧೋದಕ ಸ್ನಾನ, ವಸ್ತ್ರಾದಿ ಸಮರ್ಪಣ, ಆಯುಧಪೂಜಾ, ತತ್ತ್ವನ್ಯಾಸ-ಮಾತೃಕಾನ್ಯಾಸ, ಗಂಧಪುಷ್ಪಸಮರ್ಪಣ, ಆವರಣಪೂಜಾ, ದ್ವಾರಪಾಲಕಪೂಜಾ, ಧೂಪ-ದೀಪ, ನೈವೇದ್ಯ, ಗಂಡೂಷ, ತಾಂಬೂಲ, ಧೂಪ, ದೀಪ ನೀರಾಜನ, ಮಂತ್ರಪುಷ್ಪ, ಚಾಮರಾದಿ ಉಪಚಾರ, ಶಂಖಭ್ರಮಣ, ಪ್ರದಕ್ಷಿಣ ನಮಸ್ಕಾರ, ರಮಾಬ್ರಹ್ಮಾದಿ ನೈವೇದ್ಯ, ಪ್ರತ್ಯಾವಾಹನ, ಸಮರ್ಪಣ (ಕೃಷ್ಣಾರ್ಪಣ), ನಂತರ ವೈಶ್ವದೇವ, ಬ್ರಹ್ಮ-ಯಜ್ಞಾದಿಗಳು. ಇದು ಸಾಧಾರಣವಾಗಿ ಒಂದು ಕ್ರಮ. ಇದು ಬಹಳ ವಿಸ್ತಾರವಾಯಿತು ಎನ್ನುವವರಿಗೆ ಪಾದ್ಮಸಂಹಿತಾದಲ್ಲಿ ಪುರುಷಸೂಕ್ತಷೋಡಶೋಪಚಾರಪೂಜಾಕ್ರಮವಿಂತಿದೆ.

ಆದ್ಯಯಾಽಽವಾಹಯೇತ್ ದೇವ—ಮೃಚಾ ತು ಪುರುಷೋತ್ತಮಮ್ ।
ದ್ವಿತೀಯಯಾಽಽಸನಂ ದದ್ಯಾತ್ ಪಾದ್ಯಂ ದದ್ಯಾತ್ ತೃತೀಯಕಮ್ ।
ಚತುರ್ಥ್ಯಾರ್ಘ್ಯಂ ಪ್ರದಾತವ್ಯಂ ಪಂಚಮ್ಯಾಽಽಚಮನೀಯಕಮ್ ।
ಷಷ್ಠ್ಯಾ ಸ್ನಾನಂ ಪ್ರಕುರ್ವೀತ ಸಪ್ತಮ್ಯಾ ವಸ್ತ್ರಮೇವ ಚ ।
ಯಜ್ಞೋಪವೀತಮಷ್ಟಮ್ಯಾ ನವಮ್ಯಾಂ ಗಂಧಮೇವ ಚ ।
ದಶಮ್ಯಾ ಪುಷ್ಪದಾನಂ ಸ್ಯಾ—ದೇಕಾದಶ್ಯಾಂ ತು ಧೂಪಕಮ್ ।
ದ್ವಾದಶ್ಯಾ ತು ತಥಾ ದೀಪಂ ತ್ರಯೋದಶ್ಯಾಂ ಚರುಂ ತಥಾ ।
ಚತುರ್ದಶ್ಯಾ ನಮಸ್ಕುರ್ಯಾ—ತ್ಪಂಚದಶ್ಯಾ ಪ್ರದಕ್ಷಿಣಮ್ ।
ಷೋಡಶ್ಯೋದ್ವಾಸನಂ ಕುರ್ಯಾ—ಚ್ಛೇಷಕರ್ಮಾಣಿ ಪೂರ್ವವತ್ ।

1) ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾ ಽತ್ಯತಿಷ್ಠದ್ದಶಾಂಗುಲಮ್ ॥ —ಆವಾಹನೆ

2) ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ —ಆಸನ

3) ಏತಾವಾನಸ್ಯ ಮಹಿಮಾ ಽತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ —ಪಾದ್ಯ

4) ತ್ರಿಪಾದೂರ್ಧ್ವ ಉದೈತ್ ಪುರುಷಃ ಪಾದೋಽಸ್ಯೇಹಾಭವತ್ ಪುನಃ ।
ತತೋ ವಿಷ್ವಙ್ ವ್ಯಕ್ರಾಮತ್ ಸಾಶನಾನಶನೇ ಅಭಿ ॥ —ಅರ್ಘ್ಯ

5) ತಸ್ಮಾದ್ವಿರಾಳಜಾಯತ ವಿರಾಜೋ ಅಧಿಪೂರುಷಃ
ಸ ಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪುರಃ ॥ —ಆಚಮನ

೬) ಯತ್ ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ —ಸ್ನಾನ

7) ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ —ವಸ್ತ್ರ

8) ತಸ್ಮಾದ್ಯಜ್ಞಾತ್ ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂನ್ ತಾಂಶ್ಚಕ್ರೇ ವಾಯವ್ಯಾ—ನಾರಣ್ಯಾನ್ ಗ್ರಾಮ್ಯಾಶ್ಚ ಯೇ ॥—ಉಪವೀತ

9) ತಸ್ಮಾದ್ಯಜ್ಞಾತ್ ಸರ್ವಹುತಃ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾ—ದ್ಯಜುಸ್ತಸ್ಮಾದಜಾಯತ ॥ —ಗಂಧ

10) ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ
ಗಾವೋ ಹ ಜಜ್ಞಿರೇ ತಸ್ಮಾತ್ ತಸ್ಮಾಜ್ಜಾತಾ ಅಜಾವಯಃ ॥ —ಪುಷ್ಪ

11) ಯತ್ ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।
ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥ —ಧೂಪ

12) ಬ್ರಾಹ್ಮಣೋಽಸ್ಯ ಮುಖಮಾಸೀ—ದ್ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥ —ದೀಪ

13) ಚಂದ್ರಮಾ ಮನಸೋ ಜಾತ—ಶ್ಚಕ್ಷೋಃ ಸೂರ್ಯೋ ಅಜಾಯತ ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ । —ನೈವೇದ್ಯ

14) ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ ತಥಾ ಲೋಕಾಂ ಅಕಲ್ಪಯನ್ ॥

15) ಸಪ್ತಾಸ್ಯಾಸನ್ ಪರಿಧಯ—ಸ್ತ್ರಿಃ ಸಪ್ತ ಸಮಿಧಃ ಕೃತಾಃ । [—ನಮಸ್ಕಾರ
ದೇವಾ ಯದ್ಯಜ್ಞಂ ತನ್ವಾನಾ—ಅಬಧ್ನನ್ ಪುರುಷಂ ಪಶುಮ್ ॥ —ಪ್ರದಕ್ಷಿಣ

16) ಯಜ್ಞೇನ ಯಜ್ಞಮಯಜಂತ ದೇವಾ—ಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥
—ಉದ್ವಾಸನ

ಪುರುಷಸೂಕ್ತರೀತ್ಯಾ ಸಂಕ್ಷಿಪ್ತ ದೇವಪೂಜಾ ಮಾಡುವ ಕ್ರಮವನ್ನು ತಿಳಿದೆವು. ಹಾರೀತರು ಅಂಬರೀಷ ಮಹಾರಾಜನಿಗೆ ಹೇಳಿರುವ ದೇವಪೂಜಾ ಕ್ರಮವನ್ನು ನೋಡಿದರೆ ಎಲ್ಲರು ಮಾಡುವುದೂ ಸಂಕ್ಷಿಪ್ತಪೂಜೆಯೇ ಎನಿಸುತ್ತದೆ. ಬ್ರಹ್ಮದೇವರ ಪೂಜೆಯೇ ಸಂಕ್ಷಿಪ್ತವೆಂದು ಎಲ್ಲೋ ಓದಿದ ನೆನಪು. ಹಾಗಾದರೆ ವಿಸ್ತೃತವಾದುದು ಯಾವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಸಮಾಧಾನವೆಂದರೆ 'ನಾಹಂ ಕರ್ತಾ ಹರಿಃ ಕರ್ತಾ....' ಎಂಬಂತೆ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಮಾಡುವ ಸಕಲ ಕರ್ಮಗಳ ಫಲವನ್ನೂ ಶ್ರೀಹರಿಗೆ ಭಕ್ತಿಯಿಂದ ಸಮರ್ಪಿಸುವುದು ಎಂದು ತಿಳಿದು-ಕೊಳ್ಳಬಹುದು; ಇನ್ನೊಂದು, ಶ್ರೀಮಟ್ಟೀಕಾಕೃತ್ಪಾದರು ರಚಿಸಿರುವ "ಪದ್ಮಮಾಲಾ" ಕ್ರಮದಲ್ಲಿ ಮಾಡುವುದು. ಇದೇ ಪದ್ಮಮಾಲಾದಲ್ಲಿ ಶ್ರೀಮಜ್ಜಯತೀರ್ಥರೇ 'ಪಠನಾತ್ ಪದ್ಮಮಾಲಾಯಾಃ ನರಃ ಪೂಜಾಫಲಂ ಲಭೇತ್' ಎಂದು ಹೇಳಿರುವಾಗ ಅದೇ ಸುಲಭ-ಪೂಜೆಯಲ್ಲವೇ ಎಂಬ ಪ್ರಶ್ನೆಯು ಸಹಜವಾದರೂ, ಅಶಕ್ತ್ಯಾ ಅದಲ್ಲಿ ಮಾತ್ರ ಈ ಫಲವೇ ಹೊರತು ನಿತ್ಯಪೂಜೆಗೆ ಇದು ಅನ್ವಯಿಸದೆಂಬುದು ಅದೇ ಶ್ಲೋಕದ ಪೂರ್ವಾರ್ಧದಲ್ಲಿ ದೇವಪೂಜಾ ಅವಶ್ಯಕವೆಂದು ಹೇಳಿ ನಂತರದಲ್ಲಿ ಈ ಫಲಶ್ರುತಿ ಹೇಳಿರುವುದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ 'ಕರ್ಮಣಾ ಜ್ಞಾನಮಾತನೋತಿ' ಎಂಬ ಶ್ರುತಿಯೂ ಸಹ ಜ್ಞಾನಸಾಧನೆಗೆ ಕರ್ಮವು ಅವಶ್ಯಕವೆಂಬುದನ್ನು ಸ್ಪಷ್ಟಪಡಿಸುತ್ತದೆ. 'ಪದ್ಮಮಾಲಾ' ಕ್ರಮದಲ್ಲಿ ಮಾಡುವ ಪೂಜೆ ಸರ್ವಸಮ್ಮತವಾದುದೆಂದು ಹೇಳಲು ಇದು ಶ್ರೀಮದಾ-ಚಾರ್ಯರ 'ತಂತ್ರಸಾರಸಂಗ್ರಹ'ವನ್ನನುಸರಿಸಿರುವುದೇ ಕಾರಣವಾಗಿದೆ. "ತಂತ್ರಸಾರ-ಸಂಗ್ರಹ"ದ ಮೂರನೇ ಅಧ್ಯಾಯದ ೧೪೩ನೇ ಶ್ಲೋಕದಲ್ಲಿ 'ವಿಷ್ಣುಸ್ಮೃತಿವಿಹೀನಾ ತು ಪೂಜಾ ಸ್ಯಾದಾಸುರೀ ಸದಾ' ಎಂದು ಹೇಳಿದ ಪ್ರಕಾರ ಈ ಪೂಜೆಯು ಶ್ರೀಹರಿಸ್ಮರಣೆಯೇ ಆಗಿರಬೇಕಲ್ಲದೆ ಅನ್ಯಥಾ ಆದರೆ ಆಸುರೀಪೂಜೆಯೇ ಆಗುತ್ತದೆ. 'ಯಥಾಲಬ್ಧಂ ಸಮರ್ಚಯೇತ್' ಎಂಬ ಶಾಂಡಿಲ್ಯವಚನವು ದೇವರಪೂಜೆಗೆ ಹಣ್ಣೇ ಬೇಕು, ಹೂವೇ ಬೇಕು ಎಂಬ ನಿಯಮವಿಲ್ಲವೆಂದೂ, 'ಅಲಾಭೇ ಸರ್ವಭೋಗಾನಾಮುದಕೇನಾಪಿ ಪೂಜಿತಃ' ಎಂಬ ವಾಕ್ಯವು ಏನೂ ಸಿಗದಿದ್ದಲ್ಲಿ ಬರಿಯ ನೀರಿನಿಂದಲೇ ಪೂಜೆ ಮಾಡಬಹುದೆಂದೂ ಹೇಳುತ್ತಾ ಸುಲಭಮಾರ್ಗವನ್ನು ತೋರಿಸುತ್ತದೆ. ಹೀಗೆ ಮಾಡಿದರೂ ಫಲವುಂಟೋ ಎಂದರೆ, ಶಾಂಡಿಲ್ಯರೇ 'ಪ್ರಯಚ್ಛತ್ಯಮಲಂ ಲೋಕಂ ಭಕ್ತಿಪೂತಾಂತರಾತ್ಮನಾಮ್ ॥' ಎಂದು ಹೇಳಿ ಅದು ಭಕ್ತಿಪೂರ್ವಕವಾಗಿದ್ದರೆ ಉತ್ತಮಲೋಕಪ್ರಾಪ್ತಿಯಾಗುವುದೆಂದೂ ತಿಳಿಸಿದ್ದಾರೆ. ಇದು ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ಅಂತೆಯೇ ಮನೆಯಲ್ಲಿರುವವರೆಲ್ಲರೂ—ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ—ತಮ್ಮ ಬಿಂಬಮೂರುತಿಯ ಪೂಜೆಯನ್ನು ಮಾಡಬೇಕು. ಇದಕ್ಕೆ ಪೂರ್ವಭಾವಿಯಾಗಿ ಏನು ಸಿದ್ಧತೆಯಾಗಬೇಕೆಂಬುದನ್ನು ಸ್ವಲ್ಪ ಗಮನಿಸೋಣ.

ಪೂಜಾಸಿದ್ಧತೆ

ಪ್ರಾತಃಸ್ನಾನಾನಂತರ ತುಲಸೀಕಾಷ್ಠ, ತುಲಸೀ-ಪುಷ್ಪಗಳನ್ನು ಸಂಗ್ರಹಿಸಿಟ್ಟು-ಕೊಂಡು, ಸಂಧ್ಯಾವಂದನಾದಿಗಳನ್ನು ಮುಗಿಸಿ ಗಂಧಾಕ್ಷತೆಯನ್ನು ಸಿದ್ಧಪಡಿಸಿಟ್ಟುಕೊಳ್ಳ-ಬೇಕು. ಬೆಳ್ಳಿ ಅಥವಾ ತಾಮ್ರದ ಪಾತ್ರೆಯಲ್ಲಿ ವಸ್ತ್ರಶೋಧಿತ ಅರ್ಘ್ಯೋದಕವನ್ನು ಏಳು, ಐದು ಅಥವಾ ಒಂದು ಕಲಶದಲ್ಲಿ ತುಂಬಿ ವಸ್ತ್ರ ಮುಚ್ಚಿ ತಂದಿಟ್ಟುಕೊಳ್ಳಬೇಕು.

ತುಲಸೀ-ಪುಷ್ಪಗಳನ್ನು ಸಂಗ್ರಹಿಸುವುದು

ತುಲಸಿಯನ್ನು ನಖಸ್ಪರ್ಶವಾಗದಂತೆ ಬಿಡಿಸಬೇಕು. ಆದರೆ ಭಾನು, ಮಂಗಳ, ಶುಕ್ರವಾರಗಳಲ್ಲೂ, ದ್ವಾದಶೀ, ಹುಣ್ಣಿಮೆ, ಅಮಾವಾಸ್ಯೆ, ತಿಥಿಗಳಲ್ಲೂ, ಸಂಕ್ರಾಂತಿ, ವೈಧೃತಿ, ವ್ಯತೀಪಾತ, ಯುಗಾದಿ ದಿನಗಳಲ್ಲೂ, ಮಧ್ಯಾಹ್ನ, ಸಂಧ್ಯಾಕಾಲ, ರಾತ್ರಿಯಲ್ಲೂ ತುಲಸೀ ಬಿಡಿಸಬಾರದು. ಕೈಯಲ್ಲಿಯೇ ಆಗಲಿ, ಬಟ್ಟೆಯಲ್ಲಿಯೇ ಆಗಲಿ, ಹರಳೆಲೆಯಲ್ಲಿ ಆಗಲೀ ತುಲಸಿಯನ್ನು ತರಬಾರದು. ಸ್ತ್ರೀಯರಾಗಲಿ ಶೂದ್ರರಾಗಲಿ ತಂದ ತುಲಸಿಯೂ, ದುಡ್ಡು ಕೊಟ್ಟು ತಂದ (ಅಂದರೆ ಖರೀದಿಸಿದ) ತುಲಸಿಯೂ ಪೂಜಾರ್ಹವಲ್ಲ. ತುಲಸಿಯನ್ನು ತೊಳೆಯಬಾರದು. ತುಲಸೀ ಒಣಗಿದ್ದರೂ ಉಪಯೋಗಿಸಬಹುದು. ಅದೂ ದೊರೆಯದಿದ್ದ ಸಂದರ್ಭದಲ್ಲಿ ಕಾಷ್ಠ, ಮೃತ್ತಿಕೆಗಳಿಂದ ಪೂಜಿಸಬಹುದು. ಅದೂ ದೊರೆಯದೇ ಇದ್ದ ಪಕ್ಷದಲ್ಲಿ ನಿರ್ಮಾಲ್ಯ ತುಲಸಿಯನ್ನೇ ತೊಳೆದು ಉಪಯೋಗಿಸ ಬಹುದೆಂದು ಬಲ್ಲವರು ಹೇಳುತ್ತಾರೆ ಪೂರ್ತಿ ಅಭಾವವಿದ್ದಲ್ಲಿ 'ತುಲಸೀ ತುಲಸೀ' ಎಂದು ಕೂಗಿದರೇ ಸಾಕೆಂದು ವಿಜಯದಾಸರು ಹೇಳಿದ್ದಾರೆ.

ಕೆಳಗೆ ಬಿದ್ದ ಪುಷ್ಪಗಳು, ಒಣಗಿದ (ಬಾಡಿದ) ಪುಷ್ಪಗಳು, ಬಟ್ಟೆಯಲ್ಲಿ ಕಟ್ಟಿ ತಂದ ಪುಷ್ಪಗಳು, ದುರ್ಜನರಿಂದ ಸ್ಪರ್ಶವಾದ ಹೂಗಳು, ಮೂಸಿನೋಡಿದವು, ಕಾಲಿನ ಸ್ಪರ್ಶವಾದಂತವು, ವಾಸನಾರಹಿತವಾದುವು, ಬಹಳವಾಗಿ ಅರಳಿರುವವು, ಅರಳದೆಯೇ ಇರುವಂತಹವು, ಶೂದ್ರರು ಮುಟ್ಟಿದವೂ ಪೂಜಾರ್ಹವಾಗವು.

ಅರ್ಘ್ಯೋದಕ—

ನದಿಯ ನೀರು ಉತ್ತಮವು. ಬಾವಿಯ ನೀರಾದರೂ ಆಗಬಹುದು. ಅದೂ ಲಭ್ಯವಿಲ್ಲದಿರುವ ಕಾಲದಲ್ಲಿ ನಲ್ಲಿಯ ನೀರೇ ಗತಿಯಾದರೂ ಒಂದು ದೊಡ್ಡ ಪಾತ್ರೆಯಲ್ಲಿ ಶೋಧಿಸಿ ತಂದಿಟ್ಟುಕೊಂಡು ಅದನ್ನೇ ಬಾವಿಯೆಂದು ಭಾವಿಸಿ ಅದರಿಂದ ಬಗ್ಗಿಸಿಕೊಂಡು ಉಪಯೋಗಿಸಬಹುದು. ಆದರೆ ರಬ್ಬರು, ಚರ್ಮ, ಪ್ಲಾಸ್ಟಿಕ್‌ಗಳ ಸಂಪರ್ಕವಾಗದಂತೆ ತೆಗದಿಟ್ಟುಕೊಳ್ಳುವುದು ಇಂದಿನ ಕಾಲಕ್ಕೆ ಇದ್ದುದರಲ್ಲಿ ಸಾಧುವಾದುದು.

ಈ ಸಿದ್ಧತೆಗಳಾದನಂತರ ದೇವರಪೂಜೆ ಮಾಡುವ ಸ್ಥಳದಲ್ಲಿ ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಮರದ ಮಣೆಯನ್ನಾಗಲೀ ಕೃಷ್ಣಾಜಿನವನ್ನಾಗಲೀ ಹಾಕಿಕೊಂಡು ಕುಳಿತು, "ನಾತಿದ್ರುತಂ ನಾತಿಮಂದಂ ನೋಚ್ಚೈರ್ಮಂತ್ರಾನುದೀರ-ಯೇತ್" ಎಂಬಂತೆ ಮಂತ್ರವನ್ನು ಬಹಳ ವೇಗವಾಗಿಯಾಗಲೀ ಮೆಲ್ಲಗಾಗಲೀ ಗಟ್ಟಿಯಾಗಿಯಾಗಲೀ ಹೇಳದೆ ಪೂಜಾರಂಭ ಮಾಡಬೇಕು.

ಗುರುವಂದನ

ಓಂ ಶ್ರೀ ಗುರುಭ್ಯೋ ನಮಃ। ಶ್ರೀ ಪರಮಗುರುಭ್ಯೋ ನಮಃ। ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯೇಭ್ಯೋ ನಮಃ। ಶ್ರೀ ವೇದವ್ಯಾಸಾಯ ನಮಃ। ಶ್ರೀ ಭಾರತ್ಯೈ ನಮಃ। ಶ್ರೀ ಸರಸ್ವತ್ಯೈ ನಮಃ। ಶ್ರೀ ವಾಯವೇ ನಮಃ। ಶ್ರೀ ಬ್ರಹ್ಮಣೇ ನಮಃ। ಶ್ರೀ ಮಹಾಲಕ್ಷ್ಮ್ಯೈ ನಮಃ। ಶ್ರೀ ನಾರಾಯಣಾಯ ನಮಃ। ಮಂತ್ರದೇವತಾ ಇಷ್ಟದೇವತಾ ಕುಲದೇವತಾತ್ಮಕ............(ಶ್ರೀ ಸೀತಾರಾಮಚಂದ್ರಾಯ/ಶ್ರೀ ರುಕ್ಮಿಣೀಸತ್ಯಭಾಮಾಸಮೇತ ಶ್ರೀಗೋಪಾಲಕೃಷ್ಣಾಯ/ ಶ್ರೀ ಲಕ್ಷ್ಮೀನರಸಿಂಹಾಯ ಅಥವಾ ಶ್ರೀ ಲಕ್ಷ್ಮೀಹಯಗ್ರೀವಾಯ ಎಂದು ತಮ್ಮ ಇಷ್ಟದೇವತೆಯ ಹೆಸರು ಹೇಳಿ) ನಮಃ। ಮುಕ್ತಿಪ್ರದಾಯಕ ಶ್ರೀ ವಾಸುದೇವಾಯ ನಮಃ ॥

ಸೂಚನೆ :— ಈ ರೀತಿ ಗುರುನಮಸ್ಕಾರ ಏಕೆ ಮಾಡಬೇಕು? ಈ ಗುರುಗಳಿಗೇ ಏಕೆ ಮಾಡಬೇಕು? ಎಂಬ ವಿಚಾರಗಳಿಗೆ ತಂತ್ರಸಾರದಲ್ಲಿ ಸ್ಪಷ್ಟವಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಅದನ್ನು ಸಂಗ್ರಹವಾಗಿ ಇಲ್ಲಿ ಹೇಳುವೆವು.

'ಗು' ಎಂದರೆ ಅಂಧಕಾರ, ಅಜ್ಞಾನ; 'ರು' ಎಂದರೆ, ರುಧ್-ತಡೆ, ನಿರೋಧಿಸು ಎಂಬ ಧಾತುವಿನ ರೂಪವಾದ್ದರಿಂದ 'ತಡೆ, ಅಡ್ಡಗಟ್ಟು' ಎಂದರ್ಥ. ಯಾರು ತನ್ನ ಅಜ್ಞಾನವನ್ನು ಹೋಗಲಾಡಿಸಿಕೊಂಡು ಇತರರ ಅಜ್ಞಾನವನ್ನು ಹೋಗಲಾಡಿಸಲು ಸಮರ್ಥರೋ ಅವರಿಗೇ 'ಗುರು'ಗಳೆಂದು ಹೆಸರು.

> ಗುಕಾರಸ್ತ್ವಂಧಕಾರಃ ಸ್ಯಾತ್ ರುಕಾರಸ್ತನ್ನಿರೋಧಕಃ।
> ಅಂಧಕಾರನಿರೋಧಿತ್ವಾದ್ ಗುರುರಿತ್ಯಭಿಧೀಯತೇ॥

ಇಲ್ಲಿ 'ಅಂಧಕಾರ ನಿರೋಧಿತ್ವಾತ್' ಎಂಬುದಕ್ಕೆ ತನ್ನ ಮತ್ತು ಇತರರ ಎಂದು ಎರಡು ಬಗೆ ಅರ್ಥ ಮಾಡಲೇಬೇಕು. ತಾನೇ ಕುರುಡನಾದರೆ ಇನ್ನೊಬ್ಬರಿಗೆ ದಾರಿ ತೋರಿಸುವುದು ಹೇಗೆ? ಈ ಅರ್ಥವನ್ನೇ ಶ್ರೀಮದಾಚಾರ್ಯರು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ (೧ ಅಧ್ಯಾ., ೧೩೪ ಶ್ಲೋ.) 'ಅಸಂಶಯಃ ಸಂಶಯಚ್ಛಿದ್ ಗುರುರುಕ್ತೋ ಮನೀಷಿಭಿಃ' ಎಂದು ಹೇಳಿ ಸ್ಪಷ್ಟಪಡಿಸಿದ್ದಾರೆ.

> ಸ್ಮೃತ್ವಾ ಗುರುಂ ಪೂರ್ವಗುರುಂ ಆದಿಮೂಲಗುರುಂ ತಥಾ।
> ದೇವತಾಂ ವಾಸುದೇವಂ ಚ ವಿದ್ಯಾಭ್ಯಾಸೀ ತು ಸಿದ್ಧಿಭಾಕ್॥
>
> (ತಂತ್ರಸಾರ ೪ ಅಧ್ಯಾ., ೧೧೭-೮ ಶ್ಲೋ.)

ತನ್ನ ಗುರುವನ್ನೂ ಆ ಗುರುಗಳ ಗುರುವನ್ನೂ ಎಂದರೆ ಪರಮ ಗುರುಗಳನ್ನೂ ಆದಿಗುರುಗಳನ್ನೂ ಮೂಲಗುರುಗಳನ್ನೂ ಮತ್ತು ಆಯಾ ಪ್ರಸಂಗೋಚಿತ ಕಾರ್ಯಕ್ಕೆ

ಅಥವಾ ಮಂತ್ರಕ್ಕೆ ನಿಯಾಮಕನಾದ (ಪ್ರತಿಪಾದ್ಯನಾದ) ದೇವತೆಯನ್ನೂ (ದೇವತಾಂ) ಮತ್ತು ಮುಕ್ತಿಯನ್ನು ಕೊಡುವ ವಾಸುದೇವನನ್ನೂ ಸ್ಮರಣೆ (ಧ್ಯಾನ) ಮಾಡಿದರೆ ವಿದ್ಯಾಭ್ಯಾಸ ಮಾಡುವವನಿಗೆ ಆ ವಿದ್ಯೆ (ಅಥವಾ ಕಾರ್ಯ) ಸಿದ್ಧಿಯಾಗುತ್ತದೆಯೆಂದರ್ಥ.

ಈ ವಿಚಾರವನ್ನೇ "ಯಸ್ಯ ದೇವೇ ಪರಾಭಕ್ತಿರ್ ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ।" ಎಂಬ ಶ್ವೇತಾಶ್ವತರ ಶ್ರುತಿಯೂ (೬-೨೩) ಹೇಳುತ್ತದೆ. ಅದರ ಭಾವಾರ್ಥ—ಯಾರಿಗೆ ಶ್ರೀಹರಿಯಲ್ಲಿ ಅತ್ಯಧಿಕವಾದ ಭಕ್ತಿಯಿರುತ್ತದೋ, ದೇವತೆಯಲ್ಲಿರುವಂತೆಯೇ ಗುರುವಿನಲ್ಲೂ ಅವನ ಗುಣಗಳಿಗೆ ತಕ್ಕಂತೆ ಭಕ್ತಿಯಿರುತ್ತದೋ ಅವರಿಗೇ ಈ ಸಕಲೇಷ್ಟಾರ್ಥಗಳೂ ಪುರುಷಾರ್ಥಗಳೂ ಸಿದ್ಧಿಸುತ್ತವೆ.

ಗುರುಗಳೂ ಪರಮ ಗುರುಗಳೂ ಪ್ರತಿಯೊಬ್ಬ ವ್ಯಕ್ತಿಗೂ ಬೇರೆಬೇರೆಯಾಗಿರುವರು; ಅನೇಕ ವೇಳೆ ನಮಗೆ ನಮ್ಮ 'ನಿಯತ ಗುರು' ಯಾರೆಂಬ ಅರಿವೇ ಇರುವುದಿಲ್ಲ. ಅಂಥಾ ಸಂದರ್ಭದಲ್ಲಿ ನಮ್ಮ ನಮ್ಮ ಇಷ್ಟಗುರುಗಳಾದ (ಕ) ಮಂತ್ರಾಲಯದ ರಾಯರು, (ಖ) ರಘೂತ್ತಮಸ್ವಾಮಿಗಳು, (ಗ) ವ್ಯಾಸರಾಯರು ಮೊದಲಾದವರನ್ನೇ ನಮ್ಮ ಸಾಕ್ಷಾತ್ ಗುರುಗಳೆಂದು ಭಾವಿಸಿಕೊಂಡು ಅವರಿಗೆ ವಂದಿಸುವುದು ಉಚಿತವಾಗಿದೆ. ಅಂಥಾ ಸಂದರ್ಭದಲ್ಲಿ ಪರಮಗುರುಗಳು ಕ್ರಮವಾಗಿ (ಕ) ಶ್ರೀ ಸುಧೀಂದ್ರರು, (ಖ) ಶ್ರೀ ರಘುವರ್ಯರು, (ಗ) ಶ್ರೀ ಶ್ರೀಪಾದರಾಯರು ಅಥವಾ ಶ್ರೀ ಬ್ರಹ್ಮಣ್ಯತೀರ್ಥರು ಆಗುತ್ತಾರೆ.

ಇನ್ನು ಈ ಕಲಿಯುಗದಲ್ಲಿ ಸಕಲರಿಗೂ, ಪದ್ಮನಾಭತೀರ್ಥರವರೆಗೆ ಎಲ್ಲರಿಗೂ ಸಹ, 'ಆದಿಗುರು'ಗಳು ನಮ್ಮ ಶ್ರೀಮನ್ಮಧ್ವಾಚಾರ್ಯರೇ ಆಗುತ್ತಾರೆ; ಅವರಿಗೆ ಟೀಕಾರಾಯರೇ ಮೊದಲಾದವರು ಭಕ್ತಿಪೂರ್ವಕವಾಗಿ ಉಪಯೋಗಿಸುತ್ತಾ ಸಂಪ್ರದಾಯ ಹಾಕಿಕೊಟ್ಟಿರುವ ಹೆಸರು—'ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು' ಎಂದು; ನಾವೂ ಹೀಗೆಯೇ ಹೇಳಬೇಕು. 'ಭಗವತ್' ಎಂಬುದು ಶ್ರೀಮದಾಚಾರ್ಯರಲ್ಲಿರುವ 'ಜ್ಞಾನಭಕ್ತ್ಯಾದಿ' ಷಡ್ಗುಣಗಳನ್ನು ಸೂಚಿಸುವ ವಿಶೇಷಣ. 'ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ' ಎಂಬ ಟೀಕಾ-ಟಿಪ್ಪಣಿಗಳಲ್ಲಿ ಉದಾಹೃತವಾದ ಪ್ರಮಾಣವಾಕ್ಯದಂತೆ ಉತ್ತಮರನ್ನು ಸಂಬೋಧಿಸುವಾಗ 'ಪಾದ' ಅಥವಾ 'ಚರಣ' ಎಂಬ ಶಬ್ದ ಉಪಯೋಗಿಸುತ್ತಾರೆ. ಅದಕ್ಕೇ ಸ್ವಾಮಿಗಳು ಎಂದು ಹೇಳುವುದಕ್ಕೆ 'ಶ್ರೀಗಳವರು' ಎಂಬುದು ಸಾಮಾನ್ಯಜನರ ಪ್ರಯೋಗವಾದರೂ ತಿಳಿದವರು 'ಶ್ರೀಪಾದಾಃ', 'ಶ್ರೀಚರಣಾಃ', 'ಶ್ರೀಪಾದಂಗಳವರು' ಎಂದೇ ಹೇಳುತ್ತಾರೆ. ಟೀಕಾರಾಯರು ಎಂಬುದಕ್ಕೆ 'ಟೀಕಾಕೃತ್ಪಾದಾಃ'—ಟೀಕಾಕೃತ್ಪಾದರು ಎಂದು ಹೇಳುತ್ತಾರೆ.

ಆಚಾರ್ಯರಿಗೇ ಗುರುಗಳಾದ ಶ್ರೀ ವೇದವ್ಯಾಸರೂ ಸಕಲರಿಗೂ 'ಆದಿಗುರು'ಗಳೇ ಆಗಿದ್ದಾರೆ.

ಇನ್ನು 'ಮೂಲ'ಗುರುಗಳು ಯಾರೆಂಬುದನ್ನು ಪಂಚರಾತ್ರದಲ್ಲಿಯೂ ತಂತ್ರಸಾರದಲ್ಲಿಯೂ ವರ್ಣಿಸಿದ್ದಾರೆ

ಮೂಲಗುರುಗಳು : ಪಂಚರಾತ್ರೋಕ್ತದಲ್ಲಿನ ಶ್ಲೋಕದ ಪ್ರಕಾರ ಕ್ರಮವಾಗಿ ನಾರಾಯಣ, ಲಕ್ಷ್ಮೀ, ಬ್ರಹ್ಮವಾಯುಗಳು, ಸರಸ್ವತೀ-ಭಾರತಿಯರು—ಈ ಆರು ಮಂದಿಗೇ 'ಮೂಲಗುರು'ಗಳೆಂದು ಹೆಸರು. ಇವರನ್ನು ಮಾತ್ರವೇ ಏಕೆ ಮೂಲಗುರುಗಳೆನ್ನಬೇಕೆಂದರೆ ಶ್ರೀಮದಾಚಾರ್ಯರು ತಂತ್ರಸಾರದಲ್ಲಿ (ಅ. ೪, ಶ್ಲೋ. ೭೯-೮೧) ಕಾರಣ ತೋರಿಸಿಕೊಟ್ಟಿದ್ದಾರೆ—

ಇಷ್ಟಂ ದೈವಂ ಹರಿಃ ಸಾಕ್ಷಾತ್ ಲಕ್ಷ್ಮೀರ್ಭಾಗ್ಯಸ್ಯ ದೇವತಾ ।
ಗುರುರ್ಬ್ರಹ್ಮಾಥ ವಾಯುರ್ವಾ ವಿದ್ಯಾದೇವ್ಯೌ ಪ್ರಕೀರ್ತಿತೇ ॥
ತಸ್ಮಾದೇತೇ ಪ್ರಿಯಾ ವಿಷ್ಣೋ—ರಂತರಂಗತಯಾ ಸದಾ ।
ಜ್ಞೇಯಾಶ್ಚೈವ ಪ್ರಪೂಜ್ಯಾಶ್ಚ ವಿಷ್ಣೋಃ ಪ್ರೀತಿಮಭೀಪ್ಸತಾ ॥

(ಅರ್ಥ) ಶ್ರೀಹರಿಯು ಸಾಕ್ಷಾತ್ ಇಷ್ಟದೇವತೆ. ಲಕ್ಷ್ಮಿಯು ಭಾಗ್ಯದೇವತೆ. ಬ್ರಹ್ಮ-ವಾಯುಗಳು ಮೂಲಗುರುಗಳು, ಸರಸ್ವತೀ-ಭಾರತಿಯರು ವಿದ್ಯಾದೇವಿಯರು, ಅವರ ಅನುಗ್ರಹವಿಲ್ಲದೆ ವಿದ್ಯೆ ತಲೆಗೇ ಹತ್ತುವುದಿಲ್ಲ. ಇಷ್ಟೇ ಅಲ್ಲದೆ ಇವರೆಲ್ಲರೂ ಶ್ರೀಹರಿಗೆ ಅಂತರಂಗಭಕ್ತರು. (ಅಷ್ಟೇ ಅಲ್ಲದೆ ಈ ಯಾರಿಗೂ ಕಲಿಪ್ರವೇಶವೂ ಇಲ್ಲ, ಅಜ್ಞಾನವೂ ಪಾಪಲೇಪವೂ ಇಲ್ಲ. ಇವರೆಲ್ಲರೂ ಸದಾ—ಅವಿಚ್ಛಿನ್ನವಾಗಿ—ಶ್ರೀಹರಿಯಲ್ಲೇ ನೆಟ್ಟ ಮನಸ್ಸುಳ್ಳವರು. ಆದಕಾರಣ) ಇವರೆಲ್ಲರ ಜ್ಞಾನವೂ ಅತ್ಯವಶ್ಯಕ, ಇವರಿಗೆ ವಂದಿಸುವುದೂ ಅತ್ಯವಶ್ಯಕ. ಯಾರಿಗೆ ಶ್ರೀಹರಿಯ ಪ್ರಸಾದವು (ಅನುಗ್ರಹವು) ಬೇಕೋ ಅವರು ಈ ಆರು ಮೂಲಗುರುಗಳನ್ನೂ ವಂದಿಸಲೇಬೇಕು. ಚಕಾರ ಏವಕಾರಗಳು ಇತರ ವ್ಯಾವೃತ್ತಿಯನ್ನು ಮಾಡುತ್ತವೆ; ಎಂದರೆ ಇವರಿಗಂತೂ ಮಾಡಿಯೇ ತೀರಬೇಕು; ಇವರಿಗೆ ಮಾಡಿದರೆ ಎಲ್ಲರಿಗೂ ಮಾಡಿದಂತೆಯೇ ಆಗುತ್ತದೆಂಬುದನ್ನೂ ಇವರಿಗೆ ಮಾಡದೆ ಬೇರೆ ಯಾರಿಗೆ ಮಾಡಿದರೂ ಎಲ್ಲವೂ ವ್ಯರ್ಥವೆಂಬುದನ್ನೂ ದೃಢಪಡಿಸುತ್ತವೆ.

ದ್ವಾದಶ ಗುರುಗಳು : ಹೀಗೆ ನಮ್ಮ ಸಾಕ್ಷಾತ್ ಗುರುಗಳು, ಪರಮ ಗುರುಗಳು, ಆದಿಗುರುಗಳಾದ ಶ್ರೀಮದಾಚಾರ್ಯರು ಮತ್ತು ಅವರ ಗುರುಗಳಾದ ಶ್ರೀ ವೇದವ್ಯಾಸರು; ಮತ್ತು ಮೂಲಗುರುಗಳೆನಿಸಿಕೊಂಡ ಭಾರತೀ-ಸರಸ್ವತಿಯರು, ಜಗತ್ತಿಗೇ ಗುರುಗಳಾದ ಬ್ರಹ್ಮ-ವಾಯುಗಳು, ಭಾಗ್ಯದೇವತೆಯಾದ ಶ್ರೀ ಮಹಾಲಕ್ಷ್ಮಿ, ಇಷ್ಟದೇವತೆಯಾದ ಶ್ರೀಮನ್ನಾರಾಯಣ ಈ ಆರು ಮಂದಿ; ಜೊತೆಗೆ ಆಯಾ ಮಂತ್ರಗಳಿಗೆ ಅಥವಾ ಕರ್ಮಗಳಿಗೆ ನಿಯಾಮಕವಾದ ಭಗವದ್ರೂಪ (ಮಂತ್ರದೇವತೆ) ಮತ್ತು ಕೊನೆಗೆ ಮುಕ್ತಿಪ್ರದಾಯಕನಾದ ಶ್ರೀ ವಾಸುದೇವಮೂರ್ತಿ—ಈ ಹನ್ನೆರಡೂ ಮಂದಿಯೂ ಗುರುಗಳು. ಇವರಿಗೇ 'ದ್ವಾದಶಗುರು'ಗಳೆಂದು ಹೆಸರು. ಇವರನ್ನು ಸ್ಮರಿಸುವುದರಿಂದ ಆಚಾರ್ಯರು ಹೇಳಿದಂತೆ 'ವಿದ್ಯಾಭ್ಯಾಸೀ ತು ಸಿದ್ಧಿಭಾಕ್' ಕೈಕೊಂಡ ಕಾರ್ಯವು ಸಿದ್ಧಿಸುತ್ತದೆ. 'ತು' ಎಂಬ ಅವ್ಯಯವು 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ

ಭಯಾತ್' (ಗೀತೆ ೨ ಅ. ೪೦ ಶ್ಲೋ.) ಎಂಬ ಗೀತೋಕ್ತಿಯ ಪ್ರಮೇಯವನ್ನೂ 'ಯ ಆತ್ಮಾನಮೇವ ಲೋಕಮುಪಾಸ್ತೇ ನ ಹಾಸ್ಯ ಕರ್ಮ ಕ್ಷೀಯತೇ' (ಬೃಹದಾರಣ್ಯಕೋಪನಿಷತ್ ೩ ಅ. ೪ ಬ್ರಾ. ೧೫ ಕಂಡಿಕಾ) = ಯಾರು ಭಗವಂತ ಸರ್ವಾಶ್ರಯನೆಂಬುವುದನ್ನು ತಿಳಿದು ಉಪಾಸನೆ ಮಾಡುವರೋ ಅವರು ಮಾಡಿದ ಕರ್ಮವು ಕಿಂಚಿತ್ತಾದರೂ ಕ್ಷೀಣಿಸುವುದಿಲ್ಲ, ಅನಂತಫಲಪ್ರದವಾಗುತ್ತದೆ; ಇದಕ್ಕೆ ವಿರುದ್ಧವಾಗಿ 'ಯದಿಹ ವಾ ಅಸ್ಯನೇವಂವಿತ್ ಮಹತ್‌ಪುಣ್ಯಂ ಕರ್ಮ ಕರೋತಿ ತದ್ಧಾಸ್ಯಾಂತತಃ ಕ್ಷೀಯತ ಏವ' (ಅದೇ ಉಪನಿಷತ್ತಿನ ಅದೇ ವಾಕ್ಯದ ಹಿಂಭಾಗ) 'ಹಾಗೆ ಪರಮಾತ್ಮನ ಮಹಿಮೆಯನ್ನು ಅರಿಯದವನು ಮಹಾಪುಣ್ಯಪ್ರದವಾದ ಯಜ್ಞಯಾಗಾದಿ ಮಹತ್ತರವಾದ ಕರ್ಮವನ್ನು ಮಾಡಿದರೂ ಆ ಕರ್ಮವು ಕೊನೆಗೆ ಪೂರ್ಣಫಲವನ್ನು ಕೊಡದೆ ನಶಿಸಿಹೋಗುತ್ತದೆ. — ಅತ್ಯಲ್ಪಫಲವನ್ನು ಕೊಡುತ್ತದೆ' ಎಂಬ ಶ್ರುತಿಪ್ರಸಿದ್ಧಿಯನ್ನೂ ಸೂಚಿಸುತ್ತದೆ. ಇನ್ನು 'ಸಿದ್ಧಿಭಾಕ್' ಎಂಬಲ್ಲಿ ಇರುವ 'ಭಾಕ್' ಎಂಬ ಕ್ರಿಯೆಯು ಗೀತೆಯ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' (೨ ಅ. ೪೭ ಶ್ಲೋ.) 'ಕರ್ಮದಲ್ಲೇ ನಿನಗಧಿಕಾರ | ಫಲ ತಾ ದೂರ' (ವ್ಯಾಸರಾಯರ ಕನ್ನಡ ಗೀತೆ) ಎಂಬ ವಚನವನ್ನೂ, 'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ' (ಅ. ೧೮, ಶ್ಲೋ. ೬೬) 'ನಾನು ನಿನ್ನನ್ನು ಸಕಲ ಪಾಪಗಳಿಂದಲೂ ಬಿಡುಗಡೆ ಮಾಡುವೆನು, ದುಃಖಪಡಬೇಡ' ಎಂಬ ಭಗವಂತನ ಭರವಸೆಯನ್ನೂ ನೆನಪಿಗೆ ತಂದುಕೊಡುತ್ತದೆ.

ಒಟ್ಟು ಭಾವವೇನೆಂದರೆ ಈ ರೀತಿ ದ್ವಾದಶಗುರುಗಳಿಗೆ ವಂದಿಸಿ ಮಾಡುವ ಕರ್ಮವು ಎಷ್ಟೇ ದೋಷಯುಕ್ತವಾಗಿದ್ದರೂ, ಎಷ್ಟೇ ಚಿಕ್ಕದಾಗಿದ್ದರೂ, ಅಪೂರ್ಣವಾಗಿದ್ದರೂ, ಭಗವತ್ಪ್ರೀತಿಕರವಾಗುವುದರಿಂದ ಮಹಾಫಲಪ್ರದವಾಗುತ್ತದೆ, ಆದರಿಂದ ಎಂದಿಗೂ ಯಾವ ಹಾನಿಯೂ ಆಗುವುದಿಲ್ಲವೆಂದು ಭಾವ.

ನಂತರದಲ್ಲಿ ಸಂಪ್ರದಾಯದಿಂದ ಬಂದಿರುವ ಈ ಮುಂದಿನ ಮಹಾಭಾರತ ತಾತ್ಪರ್ಯ ನಿರ್ಣಯದ ಶ್ಲೋಕವನ್ನೂ ಆಚಾರ್ಯರ ಧ್ಯಾನಶ್ಲೋಕವನ್ನೂ ಹೇಳಬಹುದು.

ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯತಿಪ್ರದಾಯ ।
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ-
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥
ಯೋ ವಿಪ್ರಲಂಭವಿಪರೀತಮತಿಪ್ರಭೂತಾನ್
ವಾದಾನ್‌ನಿರಸ್ಯ ಕೃತವಾನ್ ಭುವಿತತ್ತ್ವವಾದವ್ ।
ಸರ್ವೇಶ್ವರೋ ಹರಿರಿತಿ ಪ್ರತಿಪಾದಯಂತಂ
ಆನಂದತೀರ್ಥಮುನಿವರ್ಯಮಹಂ ನಮಾಮಿ ॥

(ಭಾವಾರ್ಥ) ನಾರಾಃ ಎಂದರೆ ಗುಣಗಳೆಂದು ಅರ್ಥ; ನಾರ=ಗುಣಗಳಿಗೆ, ಅಯನ=ಆಶ್ರಯನು ಎಂಬ ವ್ಯುತ್ಪತ್ತಿಯಿಂದ ಶ್ರೀಮನ್ನಾರಾಯಣನು ಅನಂತಕಲ್ಯಾಣ-ಗುಣಪರಿಪೂರ್ಣನು. ಆ ಗುಣಗಳೇ ಅನಂತವಾಗಿರುವುದಲ್ಲದೆ ಒಂದೊಂದು ಗುಣವೂ ಅನಂತವಾಗಿವೆಯೆಂದು ಸೂಚಿಸಲು 'ಗುಣಾರ್ಣವಾಯ' = ಗುಣಗಳಿಗೆ ಸಮುದ್ರದಂತಿರುವನೆಂದು ಹೇಳಿದರು. ಅವನೇ ಬ್ರಹ್ಮಾಂಡದ ಸೃಷ್ಟಿ ಸ್ಥಿತಿ ಸಂಹಾರ ನಿಯಮನಾದಿಗಳಿಗೆ ಮುಖ್ಯಕಾರಣೀಭೂತನೂ ಆಗಿದ್ದಾನೆ. ಜ್ಞಾನ ಅಜ್ಞಾನ ಮಿಶ್ರಜ್ಞಾನಗಳನ್ನು ಕೊಡುವವನೂ ಅವನೇ. ಆ ಶ್ರೀಹರಿಯೇ ಬ್ರಹ್ಮಾದಿ ದೇವತೆಗಳಿಗೂ ಮನುಷ್ಯೋತ್ತಮರಿಗೂ ಮೋಕ್ಷ ಕೊಟ್ಟು ಸ್ವರೂಪಾನಂದವನ್ನು ಕೊಡುವನಲ್ಲದೆ ನಿತ್ಯಸಂಸಾರಿಗಳಿಗೆ ಸುಖದುಃಖಗಳೆರಡನ್ನೂ ಕೊಡುವನು ಹಾಗೆಯೇ ತನ್ನನ್ನು ದ್ವೇಷಿಸುವ ತಮೋಯೋಗ್ಯರಿಗೆ ತಮಸ್ಸು ಕೊಟ್ಟು ನಿತ್ಯದುಃಖವನ್ನೂ ಅವನೇ ಕೊಡುತ್ತಾನೆ. ಸರ್ವತ್ರ (ಎಲ್ಲಾ ಕಾಲಗಳಲ್ಲಿ ಎಲ್ಲಾ ಕಡೆ ಎಂದರೆ ಬ್ರಹ್ಮಾಂಡದ ಒಳಗೆ ಹೊರಗೆಲ್ಲಾ) ವ್ಯಾಪ್ತನೂ ಆಗಿದ್ದಾನೆ. ಇಂಥಾ ಸರ್ವನಿಯಾಮಕನಾದ ಹೇ ನಾರಾಯಣ, ನಿನಗೆ ಅನಂತಾನಂತ ನಮಸ್ಕಾರಗಳು.

ಅಜ್ಞಾನದಿಂದ (ವಿಪ್ರಲಂಬ=ವಂಚನೆ, ಮೋಸ ಅಥವಾ ಅಜ್ಞಾನ, ನಿರಸ್ಯ=ಖಂಡನೆ ಮಾಡಿ) ವಂಚಿತವಾದ ಬುದ್ಧಿಯುಳ್ಳ ಅನೇಕ ಮತಸ್ಥಾಪಕರು ಮಂಡಿಸಿದ್ದ ಅಸತ್ಯವಾದ ಅನೇಕ ಎಂದರೆ ಇಪ್ಪತ್ತೊಂದು ಮತಗಳನ್ನೂ ಖಂಡಿಸಿ ಯಾವ ಶ್ರೀಮದಾಚಾರ್ಯರು ಈ ಭೂಮಂಡಲದಲ್ಲಿ ದ್ವೈತಸಿದ್ಧಾಂತವೆಂಬ ತತ್ತ್ವವಾದವನ್ನು ಸ್ಥಾಪಿಸಿದರೋ ಮತ್ತು ಶ್ರೀಹರಿಯೇ ಸರ್ವೋತ್ತಮನೆಂದು ಸಮರ್ಥನೆ ಮಾಡುತ್ತಾರೋ ಅಂಥಾ ಶ್ರೀಮದಾನಂದತೀರ್ಥರೆಂಬ ಯತಿವರೇಣ್ಯರನ್ನು ನಾನು ನಮಸ್ಕರಿಸುತ್ತೇನೆ. (ಮಧು ಎಂದರೆ ಆನಂದ; ವ ಎಂದರೂ ತೀರ್ಥ ಎಂದರೂ ಶಾಸ್ತ್ರ ಎಂದರ್ಥ.) ಹೀಗೆಂದೆ ಮಧ್ವ ಎಂಬುದರ ರೂಪಾಂತರವೇ ಆನಂದತೀರ್ಥ ಎಂಬ ವಿಚಾರವನ್ನು ಶ್ರೀಮದಾಚಾರ್ಯರೇ ತಮ್ಮ ಅನೇಕ ಭಾಷ್ಯಾದಿ ಗ್ರಂಥಗಳ ಕಡೆಯಲ್ಲಿ ತೋರಿಸಿಕೊಟ್ಟಿದ್ದಾರೆ. ಆನಂದವನ್ನು ಕೊಡುವಂಥಾ ಸಚ್ಛಾಸ್ತ್ರಗಳನ್ನು ತಿಳಿಸಿಕೊಡುವುದರಿಂದಲೇ ನಮ್ಮ ಆಚಾರ್ಯರಿಗೆ ಮಧ್ವಾಚಾರ್ಯ ಅಥವಾ ಆನಂದತೀರ್ಥ ಎಂಬ ಹೆಸರು ಅನ್ವರ್ಥವಾಗಿದೆಯೆಂದು ತಿಳಿಯಬೇಕು.

ನಂತರ ದ್ವಾರಪಾಲಕರನ್ನು ನಮಸ್ಕರಿಸಬೇಕು.

ಪೂರ್ವದ್ವಾರೇ ದ್ವಾರಶ್ರಿಯೈ ನಮಃ। ಜಯಾಯ ನಮಃ। ವಿಜಯಾಯ ನಮಃ॥ ದಕ್ಷಿಣದ್ವಾರೇ ದ್ವಾರಶ್ರಿಯೈ ನಮಃ। ಬಲಾಯ ನಮಃ। ಪ್ರಬಲಾಯ ನಮಃ॥ ಪಶ್ಚಿಮದ್ವಾರೇ ದ್ವಾರಶ್ರಿಯೈ ನಮಃ। ನಂದಾಯ ನಮಃ। ಸುನಂದಾಯ ನಮಃ॥ ಉತ್ತರದ್ವಾರೇ ದ್ವಾರಶ್ರಿಯೈ ನಮಃ। ಕುಮುದಾಯ ನಮಃ। ಕುಮುದಾಕ್ಷಾಯ ನಮಃ॥

ಕವಾಟೋದ್ಘಾಟನ—ದೇವಗೃಹಪ್ರವೇಶ

*ವಾಯ ವಾ ಇತ್ಯಸ್ಯ ಮಂತ್ರಸ್ಯ ಮಧುಚ್ಛಂದಾ ವೈಶ್ವಾಮಿತ್ರ ಋಷಿಃ। ವಾಯುರ್ದೇವತಾ । ಗಾಯತ್ರೀ ಛಂದಃ ॥

ವಾಯವ ವಾ ಯಾಹಿ ದರ್ಶತೇ—ಮೇ ಸೋಮಾ ಅರಂಕೃತಾಃ ।
ತೇಷಾಂ ಪಾಹಿ ಶ್ರುಧೀ ಹವವ್ ॥ (ಋ 1-2-1)

ಈ ಮಂತ್ರಕ್ಕೆ ಶ್ರೀಮದಾಚಾರ್ಯರ 'ಋಗ್ಭಾಷ್ಯ'ವೂ, ಟೀಕಾಕೃತ್ಪಾದರ 'ಸಂಬಂಧದೀಪಿಕಾ' ಎಂಬ ಟೀಕೆಯೂ, ಮಂತ್ರಾಲಯದ ರಾಯರ 'ಮಂತ್ರಾರ್ಥ-ಮಂಜರಿ'ಯೂ ಅರ್ಥವನ್ನು ವಿಸ್ತಾರವಾಗಿ ಹೇಳಿವೆ. ಅದರಲ್ಲಿ ಅತಿಮುಖ್ಯವಾದ ಸಾರ-ಭಾಗವನ್ನು ಮಾತ್ರ ಇಲ್ಲಿ ಸಂಗ್ರಹಿಸಿ ಹೇಳಿದ್ದೇವೆಂದು ತಿಳಿಯಬೇಕು.

ವಾಯು ಶಬ್ದಕ್ಕೆ ಋಗ್ಭಾಷ್ಯದಲ್ಲಿ ಒಂಬತ್ತು ಅರ್ಥ ಹೇಳಿ ಶ್ರೀವಿಷ್ಣುವಿನಲ್ಲಿ ಅನ್ವಯ ಮಾಡಿದ್ದಾರೆ—1) ವ ಎಂದರೆ ಬಲರೂಪನೂ, ಅಯ ಎಂದರೆ ಸದಾ ಸಂಚರಿಸುತ್ತಿರು ವವನೂ ಆದ್ದರಿಂದ ವಾಯು. ಉ ಎಂಬ ಪ್ರತ್ಯಯ ಸೇರಿದೆ. 2) ಹೀಗೆಯೇ ಸದಾ ಅಡ್ಡಾಡು(ಸಂಚರಿಸು)ವವನೂ, ಪ್ರಾಣಿಗಳಿಗೆ ಆಯುಸ್ಸಿಗೆ ನಿಯಾಮಕನಾದ್ದರಿಂದಲೂ, ವಾ=ಚಲಿಸು+ಅಯುಃ 3) ಗತ್ಯರ್ಥಕವಾದ ವಾ ಧಾತುವಿಗೆ ಜ್ಞಾನಾರ್ಥ ಹೇಳಿದರೆ ವಾತಿ=ಜಾನಾತಿ=ಸರ್ವವನ್ನೂ ತಿಳಿದವನು—ಸರ್ವಜ್ಞನೆಂದೂ ವಾ+ಉ ಪ್ರತ್ಯಯ. 4) ವೃ ಧಾತುವಿಗೆ ವರಿಸು, ಸ್ವೀಕರಿಸು ಎಂದರ್ಥ. ಸಕಲವನ್ನೂ ಸ್ವೀಕರಿಸುವುದರಿಂದಲೂ (ಕರ್ತರಿ ಪ್ರಯೋಗದಲ್ಲಿ) ಎಲ್ಲರಿಂದಲೂ ವರಿಸಲ್ಪಡುವುದರಿಂದಲೂ ಅಥವಾ ಮೊರೆ ಹೋಗಲ್ಪಡುವುದರಿಂದಲೂ (ಕರ್ಮಣಿ ಪ್ರಯೋಗ) ವೃ+ಡಾಯು ಪ್ರತ್ಯಯ. 5) (ವೃ=ಆಶ್ರಯಿಸು) ಎಲ್ಲರೂ ಅವನಲ್ಲೇ ಆಶ್ರಯಿಸಿ ನಿಂತಿರುವುದರಿಂದಲೂ, ವಾಂತಿ=ಗಚ್ಛಂತಿ=ಪ್ರವರ್ತಂತೇ ಅಸ್ಮಿನ್ನಿತಿ ವಾಯುಃ 6) 'ವಯ ಬಂಧನೇ' ಎಂಬ ಧಾತುವಿನಿಂದ ಎಲ್ಲರನ್ನೂ ಸಂಸಾರಾದಿ ಬಂಧನದಿಂದ ಬಂಧಿಸುವವನಾದ್ದರಿಂದಲೂ, 7) ವಿ + ಅಯ = ವ್ಯಯ = ನಾಶ. ಸರ್ವಸಂಹಾರಕನಾದ್ದರಿಂದಲೂ ವಿ ಎಂಬುದು ನಿರುಕ್ತದ ನಿಯಮದಂತೆ ಅಕಾರಾಂತವಾಗಿ 'ವ' ಆಗುತ್ತದೆ. (ವಿ=) ವ+ಅಯ+ಉ.

---

*ನಾವು ಬಳಸುವ ಎಲ್ಲ ಮಂತ್ರಗಳಿಗೂ ಅವುಗಳ ಋಷಿ-ಛಂದಸ್ಸು-ದೇವತೆ-ಅರ್ಥ (ಸಾಧ್ಯವಿದ್ದಷ್ಟು) ಮತ್ತು ವಿನಿಯೋಗ (ಬಳಕೆ/ಉಪಯೋಗ)ಗಳನ್ನು ಅರಿತುಕೊಳ್ಳಬೇಕು. ಇಲ್ಲದಿದ್ದರೆ 'ಯೋ ಹ ವಾ ...' ಎಂಬ ಛಾಂದೋಗಶ್ರುತಿಯು ಅಂಥವನು ಕಷ್ಟಿಯಾಗುತ್ತಾನ ಇಲ್ಲವೆ ಕಂಭದಂತೆ ನಿಶ್ಚೇತನನಾಗುತ್ತಾನೆಂದು ಹೇಳುತ್ತದೆಯೆಂದು ಈಶಾವಾಸ್ಯಭಾಷ್ಯದ ಟೀಕಾದಲ್ಲಿ ಹೇಳಿದೆ.

8) ವಿ+ಇ = ಹೋಗು. ವ್ಯೇತಿ ವಾಯುಃ, ಕಣ್ಣಿಗೆ ಕಾಣಿಸದಂತೆ ಲೀನವಾಗುವುದ-
ರಿಂದಲೂ (ಮರೆಯಾಗಿರುವುದರಿಂದಲೂ), 9) 'ವಯ ಶ್ರೇಷ್ಠತ್ವೇ' ಎಂಬ ಧಾತುವಿ
ನಿಂದ ಶ್ರೇಷ್ಠನಾದ್ದರಿಂದಲೂ—ಶ್ರೀಹರಿಗೆ ವಾಯು ಎಂಬ ಹೆಸರು ಪರಮಮುಖ್ಯವೃತ್ತಿ-
ಯಿಂದ ಕೂಡುತ್ತದೆ.

ಇನ್ನು ವಾಯುದೇವರಿಗೆ (ಮುಖ್ಯಪ್ರಾಣನಿಗೆ) 1) ಬಲರೂಪನೂ ಸದಾ ಸಂಚರಿಸು
ವವನೂ [ಹಗಲೂ ರಾತ್ರಿ ಉಸಿರಾಟ ಸದಾ ನಡೆಯಲೇಬೇಕಲ್ಲವೆ], 2) ಬಲರೂಪನೂ,
ಆಯುರ್ನಿಯಾಮಕನೂ, 3) ರುದ್ರಾದಿಗಳಿಗಿಂತ ಸರ್ವಜ್ಞನೂ, 4) ಶ್ರೀಹರಿಯಿಂದ
ವರಿಸಲ್ಪಡುವವನಾದ್ದರಿಂದಲೂ ರುದ್ರಾದಿ ಸಕಲ ದೇವತೆಗಳಿಂದ ಶ್ರೀಹರಿಯ ಅನುಗ್ರಹ-
ಕ್ಕಾಗಿ ವರಿಸಲ್ಪಡುವವನಾದ್ದರಿಂದಲೂ, 5) ವಾಯುಕೂರ್ಮಾದಿ ರೂಪಗಳಿಂದ ಸಕಲ
ಲೋಕಗಳಿಗೂ ಆಶ್ರಯನಾಗಿರುವುದರಿಂದಲೂ, 6) ಜೀವೋತ್ತಮರಾದ್ದರಿಂದಲೂ
'ವಾಯು' ಎಂಬ ಹೆಸರು ಕೂಡುತ್ತದೆ.

ಋಕ್ಕಿನಲ್ಲಿರುವ 'ದರ್ಶತ' ಎಂಬ ಶಬ್ದಕ್ಕೆ ಹೇ ಸರ್ವಜ್ಞನೇ ಎಂದರ್ಥ. (ದರ್ಶ
ಎಂದರೆ ಜ್ಞಾನದಿಂದ, ತ = ವ್ಯಾಪ್ತನಾದವನೇ). ಇನ್ನು 'ವಾಯವಾ ಯಾಹಿ' ಎಂಬಲ್ಲಿ
'ವಾಯೋ, ಆ, ಯಾಹಿ' ಎಂದು ಪದಚ್ಛೇದ.

ಋಕ್ಕಿನ ಅರ್ಥ : 'ದರ್ಶತ = ಸರ್ವಜ್ಞನಾದ', 'ವಾಯೋ' = ಹೇ ವಾಯ್ವಂತರ್ಗತ
ಶ್ರೀಹರಿಯೇ ಅಥವಾ ಬಲರೂಪಿಯೂ ಜ್ಞಾನರೂಪಿಯೂ ಆಯುರ್ನಿಯಾಮಕರೂ ಆದ
ಮುಖ್ಯಪ್ರಾಣದೇವರೇ! 'ಯಜ್ಞಂ' ಎಂಬ ಪದವನ್ನು 'ಸೋಮಾಃ' ಎಂಬ ಪದ
ಪ್ರಯೋಗವಿರುವುದರಿಂದ ಅಧ್ಯಾಹಾರ ಮಾಡಿಕೊಳ್ಳಬೇಕು. ಯಜ್ಞಂ = ನಾವು ಮಾಡು
ತ್ತಿರುವ ಯಜ್ಞಕ್ಕೆ (ಅಥವಾ ಪೂಜಾರೂಪವಾದ ಯಜ್ಞಕ್ಕೆ), 'ಆ ಯಾಹಿ' = ಬಾ
(ಬನ್ನಿರಿ). ಬಾಹ್ಯಯಜ್ಞದಂತೆ ನಾವು ದೇಹದಿಂದ ನಡೆಸುವ ಸಕಲೇಂದ್ರಿಯ ಕಾರ್ಯಗಳೂ
(ನೋಡುವುದು, ಕೇಳುವುದು, ತಿನ್ನುವುದು, ಕುಡಿಯುವುದು ಇತ್ಯಾದಿ ಸಕಲ ಕ್ರಿಯೆಗಳೂ)
ಸಹ ಭಗವತ್ಪ್ರೀತ್ಯರ್ಥವೇ ಎಂದು ಅನುಸಂಧಾನ ಮಾಡಿಕೊಂಡರೆ ಬೆಳಗ್ಗೆ ಹಾಸಿಗೆಯಿಂದ
ಎದ್ದ ಬಳಿಕ ರಾತ್ರಿ ಮಲಗುವವರೆಗೆ ಮಾಡುವ ಸಕಲ ಕಾರ್ಯಕಲಾಪಗಳೂ ಅಧ್ಯಾತ್ಮ-
ರೂಪವಾದ (ಆತ್ಮ = ದೇಹಕ್ಕೆ, ಅಧಿ = ಸಂಬಂಧಪಟ್ಟ) ಯಜ್ಞ ಎನಿಸಿಕೊಳ್ಳುತ್ತದೆ. ಹೇ
ವಾಯುನಾಮಕ ವಾಯ್ವಂತರ್ಗತ ಶ್ರೀಹರಿಯೇ ಮತ್ತು ಹೇ ವಾಯುದೇವರೇ ನಮ್ಮ
ಅಧ್ಯಾತ್ಮಯಜ್ಞಕ್ಕೂ ಬನ್ನಿರಿ—ಎಂದೂ ಅರ್ಥ.

ಏಕೆ ಬರಬೇಕು ಎಂದರೆ ಮಂತ್ರವು ವಿವರಣೆ ಕೊಡುತ್ತದೆ—'ಇಮೇ' = ಈ
(ಮುಂದೆ ಇಟ್ಟಿರುವ, ಇಲ್ಲಿ ಹರಡಿರುವ ಅಥವಾ ಸಿದ್ಧಮಾಡಿರುವ ಎಂದರ್ಥ) 'ಸೋಮಾಃ'
= (ಬಾಹ್ಯಯಜ್ಞದಲ್ಲಿ) ಸೋಮರಸಾದಿ ಸಲಕರಣೆಗಳು ; (ಪೂಜೆ ಮಾಡುವ ಸಂದರ್ಭ
ದಲ್ಲಿ ಪೂಜೆಗಾಗಿ ಸಿದ್ಧಪಡಿಸಿಟ್ಟಿರುವ ಪಾತ್ರೆಗಳು, ನೀರು, ಹೂವು, ತುಳಸಿ, ಗಂಧ ಅಕ್ಷತೆ

ಧೂಪ ದೀಪ ನೈವೇದ್ಯ ಇತ್ಯಾದಿ ಉಪಕರಣಗಳು ಎಂದರ್ಥ; ಅಧ್ಯಾತ್ಮಯಜ್ಞ-ದಲ್ಲಾದರೋ—'ಮನೋವೃತ್ತಿ'ಗಳು ಎಂದರೆ ಮನಸ್ಸಿನಲ್ಲಿ ಬರುವ ಸಕಲ ಸದ್ವಿಚಾರಗಳು ಎಂದರ್ಥ; 'ಅರಂಕೃತಾಃ' = ಅಲಂಕೃತಾಃ = ಅಲಂಕರಿಸಲ್ಪಟ್ಟಿವೆ. ಎಂದರೆ ಬಾಹ್ಯಯಜ್ಞದಲ್ಲಿ—ಯಜ್ಞಸಾಧನಗಳಾದ ಸಕಲ ಸಾಧನಗಳೂ ಬೆಳ್ಳಿ ಬಂಗಾರ ಮೊದಲಾದ ಉತ್ತಮ ದ್ರವ್ಯಗಳಿಂದ ಮಾಡಲ್ಪಟ್ಟಿವೆ. ಶುದ್ಧವಾಗಿ ಶುಚಿಯಾಗಿರುವಂತೆ ಸಿದ್ಧಮಾಡಲ್ಪಟ್ಟಿವೆ ಎಂದರ್ಥ. ಇನ್ನು ಪೂಜಾರೂಪವಾದ ಯಜ್ಞದಲ್ಲಾದರೆ ನನ್ನ ಯೋಗ್ಯ-ತಾನುಸಾರ ಬೆಳ್ಳಿಯಿಂದಲೋ ತಾಮ್ರದಿಂದಲೋ ಹಿತ್ತಾಳೆಯಿಂದಲೋ ಮಾಡಲ್ಪಟ್ಟದ್ದು ಶುಭ್ರವಾಗಿ ತೊಳೆಯಲ್ಪಟ್ಟು ಶುಚಿಯಾಗಿ ಇರಿಸಲ್ಪಟ್ಟಿವೆ. ಹೂವು ತುಳಸಿ ಮೊದಲಾದುವು ಮಾಸದೆ ಬಾಡದೆ ಶುಚಿಯಾಗಿವೆ ಇತ್ಯಾದಿ. ಇನ್ನು ಅಧ್ಯಾತ್ಮಯಜ್ಞದಲ್ಲಿ ಜ್ಞಾನಭಕ್ತ್ಯಾದಿ ಸಾಧನಗಳಿಂದ ಅಲಂಕರಿಸಲ್ಪಟ್ಟಿವೆ ಎಂದರ್ಥ.

ಉತ್ತರಾರ್ಧ: 'ತೇಷಾಂ' (ಎಂಬುದು ಷಷ್ಠೀವಿಭಕ್ತಿಯಾದರೂ ಅದಕ್ಕೆ ದ್ವಿತೀ-ಯಾರ್ಥವನ್ನು 'ತಾನ್' ಹೇಳಬೇಕು) = ಅವುಗಳನ್ನು; 'ಪಾಹಿ' ('ಪಾ' ಧಾತು = ಕುಡಿ) = ಕುಡಿ. 'ಹವಂ' = ನನ್ನ ಆಹ್ವಾನವನ್ನು; 'ಶ್ರುಧಿ' = ಕೇಳು. (ಪದಪಾಠದಲ್ಲಿ ಹ್ರಸ್ವವಾಗಿದ್ದರೂ ಸಂಹಿತಾಪಾಠದಲ್ಲಿ 'ಶ್ರುಧೀ' ಎಂದು ದೀರ್ಘವಾಗಿದೆ. ಹೀಗೆ ಪದಪಾಠದಲ್ಲಿ ಹ್ರಸ್ವವಾಗಿದ್ದು ಸಂಹಿತಾಪಾಠದಲ್ಲಿ ದೀರ್ಘವಾದರೆ—ಹೇಳಿದ ವಿಚಾರದಲ್ಲಿ ವಿಶೇಷಾರ್ಥವಿದೆಯೆಂದು ಸೂಚಿಸುತ್ತದೆ. ಆದ್ದರಿಂದ 'ಶ್ರುಧೀ' ಎಂಬುದಕ್ಕೆ 'ನಮ್ಮ ಆಹ್ವಾನವನ್ನು ಕೇಳಿ, ಇಲ್ಲಿಗೆ ದಯಮಾಡಿಸಿ. ಟೀಕಾರಾಯರು ತೋರಿಸಿಕೊಟ್ಟಿರುವಂತೆ 'ಅಗಮನೇನ ಸಫಲಂ ಕುರು' ನಮ್ಮ ಪ್ರಯತ್ನವೆಲ್ಲವೂ ಸಫಲವಾಗುವಂತೆ ಮಾಡು ಎಂದರ್ಥ.

'ತಾನ್ ಪಾಹಿ' = ಅವುಗಳನ್ನು ಕುಡಿ ಎಂದು ದ್ವಿತೀಯಾ ಹೇಳದೆ 'ತೇಷಾಂ ಪಾಹಿ' ಎಂದು ಷಷ್ಠೀ ಹೇಳಿದ್ದರಿಂದ "ವ್ಯತ್ಯಯೋ ಭೇದಕರಣ-ಸ್ವಾತಂತ್ರ್ಯೇಷು ಸಮೀರಿತಃ" ಎಂದು ಋಗ್ಭಾಷ್ಯದಲ್ಲಿ (೧ ಅ, ೯೨ ಶ್ಲೋ.) ಹೇಳಿದ ಪ್ರಕಾರ ಇಲ್ಲಿ 'ಸ್ವಾತಂತ್ರ್ಯ' ಎಂಬ ಅರ್ಥವನ್ನು ತೋರಿಸುತ್ತದೆ. ಅದನ್ನೇ ಟೀಕಾರಾಯರು 'ತ್ವದೀ-ಯಾನೇವ ಸೋಮಾನ್ ತ್ವಂ ಪಿಬ'—'ಈ ಸೋಮಾದಿಗಳು ನಿನ್ನವೇ ಆಗಿವೆ, ಆದರೂ ಅವನ್ನೇ ಸ್ವೀಕರಿಸು' ಎಂದರ್ಥವೆಂದು ತೋರಿಸಿದ್ದಾರೆ.

ಈಗ ಈ ಋಕ್ಕಿನ ಭಾವಾರ್ಥವನ್ನು ಸರಳಭಾಷೆಯಲ್ಲಿ ಹೇಳಿದರೆ ಹೀಗಾಗುತ್ತದೆ:

ಭಾವಾರ್ಥ: ಹೇ ಶ್ರೀಹರೇ, ನೀನು ಬಲರೂಪನಾದ್ದರಿಂದ ಸದಾ ಸಂಚರಿಸುತ್ತಿರುವುದರಿಂದಲೂ, ಪ್ರಾಣಿಗಳ ಆಯುಸ್ಸಿಗೆ ನಿಯಾಮಕನಾಗಿರುವುದರಿಂದಲೂ, ಸರ್ವಜ್ಞನಾದುದರಿಂದಲೂ, ಭಕ್ತರು ಭಕ್ತಿಯಿಂದ ಅರ್ಪಿಸುವ ಫಲಪುಷ್ಪಾದಿಗಳನ್ನು ಸ್ವೀಕರಿಸುವುದರಿಂದಲೂ (ವರಣಾತ್), ನಿನ್ನನ್ನು ರಮಾಬ್ರಹ್ಮಾದಿ ಸಕಲ ಜಗತ್ತೂ ಆಶ್ರಯಿಸುವುದರಿಂದಲೂ (ವ್ರಿಯತೇ) ಸಕಲ ಬ್ರಹ್ಮಾಂಡವೂ ನಿನ್ನಲ್ಲೇ ನೆಲೆಸಿರುವುದರಿಂದಲೂ, ನೀನು ಭವಪಾಶಗಳ ಬಂಧಕನಾಗಿರುವುದರಿಂದಲೂ, ಸರ್ವಸಂಹಾರಕನಾದ್ದರಿಂದಲೂ

(ವ್ಯಯಾತ್) ಸರ್ವವ್ಯಾಪಿಯಾಗಿದ್ದರೂ ಕಣ್ಣಿಗೆ ಗೋಚರವಾಗದಂತೆ ಅವ್ಯಕ್ತನಾಗಿರುವುದರಿಂದಲೂ, ಸರ್ವಶ್ರೇಷ್ಠನಾದ್ದರಿಂದಲೂ ನಿನಗೆ 'ವಾಯು'ನಾಮವು ಅನ್ವರ್ಥವಾಗಿದೆ.

ಹೇ ಮುಖ್ಯಪ್ರಾಣದೇವರೇ! ನೀವು ಬಲ ಮತ್ತು ಜ್ಞಾನರೂಪರಾದ್ದರಿಂದಲೂ, ಆಯುಸ್ಸಿಗೆ ನಿಯಾಮಕರಾದ್ದರಿಂದಲೂ, ಸರ್ವಜ್ಞರಾದ್ದರಿಂದ, ರುದ್ರಾದಿ ದೇವತೆಗಳಿಗೆ ಆಶ್ರಯದಾತರಾದ್ದರಿಂದಲೂ ರುದ್ರಾದಿಗಳಿಂದ ಸೇವ್ಯರಾದ್ದರಿಂದಲೂ, 84 ಲಕ್ಷ ಜೀವರಾಶಿಗಳಲ್ಲೂ ವ್ಯಾಪಿಸಿಕೊಂಡಿರುವುದರಿಂದಲೂ, ಜೀವೋತ್ತಮರಾದ್ದರಿಂದಲೂ ನಿಮಗೂ 'ವಾಯು' ಎಂಬ ಹೆಸರು ಅನ್ವರ್ಥವಾಗಿದೆ. .

ಹೇ ಮುಖ್ಯಪ್ರಾಣ, ಹೇ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಹರೇ, ಇಗೋ ನೋಡು. ನಾನು ಈ ಯಜ್ಞ ಮಾಡುವುದಕ್ಕಾಗಿ ಬಂಗಾರ-ಬೆಳ್ಳಿ ಮೊದಲಾದ ಉತ್ತಮ ಸಾಧನಗಳಿಂದ ತಯಾರಿಸಿದ ಯಜ್ಞಸನ್ನಾಹಗಳನ್ನು ಸಿದ್ಧಪಡಿಸಿಟ್ಟಿದ್ದೇನೆ, ಸೋಮರಸವನ್ನು ಹಿಂಡಿಟ್ಟು ಯಜ್ಞಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನೂ ಮಾಡಿಟ್ಟಿದ್ದೇನೆ. ಹೇ ಸ್ವಾಮಿ, ನನ್ನ ಕರೆಯನ್ನು ಕೇಳಿ ಯಜ್ಞಕ್ಕೆ ದಯಮಾಡಿಸು ಇಗೋ, ನಿನ್ನದೇ ಆದ ಈ ಸೋಮರಸವನ್ನು ನಿನಗೇ ಅರ್ಪಿಸುತ್ತಿದ್ದೇನೆ—ಇದನ್ನು ಸ್ವೀಕರಿಸು, ನನ್ನ ಆಹ್ವಾನವನ್ನು ಮನ್ನಿಸಿ (ಕೇಳಿ) ಈ ಯಜ್ಞಕ್ಕೆ ಬಂದು ನನ್ನ ಶ್ರಮವನ್ನು ಸಫಲಗೊಳಿಸು ಎಂಬುದು ಬಾಹ್ಯಯಜ್ಞಪರವಾದ ಅರ್ಥ.

ಪೂಜಾದಿರೂಪವಾದ ಕರ್ಮಗಳಲ್ಲಿ—ಹೇ ಸ್ವಾಮಿ, ವಾಯುದೇವ! ಮತ್ತು ತದಂತರ್ಗತ ಹೇ ವಿಷ್ಣುವೇ! ಇಗೋ ನೋಡು, ನಿನ್ನ ಪೂಜೆಗಾಗಿ ನನ್ನ ಯಥಾಶಕ್ತಿ ಪೂಜಾಸಾಧನೆಗಳನ್ನು ಶುದ್ಧವಾಗಿ, ಸ್ವಚ್ಛವಾಗಿ ಅಣಿಮಾಡಿ ಇಟ್ಟಿದ್ದೇನೆ. ಹೇ ಸ್ವಾಮಿ, ನನ್ನ ಆಹ್ವಾನವನ್ನು ಮನ್ನಿಸಿ ಈ ಪೂಜೆಗೆ ಆಗಮಿಸು. ಈ ವಸ್ತುಗಳೆಲ್ಲ ನಿನ್ನವೇ ಆದರೂ ನಿನಗೇ ಸಮರ್ಪಿಸುತ್ತಿದ್ದೇನೆ! 'ತ್ವದೀಯಂ ವಸ್ತು ಗೋವಿಂದ ತುಭ್ಯಮೇವ ಸಮರ್ಪ್ಯತೇ.' ಈ ನನ್ನ ಷೋಡಶೋಪಚಾರದ ಅಲ್ಪಸೇವೆಯನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡು, ನನ್ನನ್ನು ಉದ್ಧರಿಸು ಎಂಬುದು ದೇವರಪೂಜೆಯ ಸಂದರ್ಭದ ಅರ್ಥ.

ಇನ್ನು ಅಧ್ಯಾತ್ಮಪರವಾದ ಅರ್ಥ— ಹೇ ಸ್ವಾಮಿ, ನಾನು ಸಕಲೇಂದ್ರಿಯಗಳಿಂದ ಮಾಡುವ ಸಕಲ ಕ್ರಿಯೆಗಳೂ ನಿನ್ನ ಪೂಜಾರೂಪವಾಗಲಿ. 'ಪ್ರಾತಃಪ್ರಭೃತಿ ಸಾಯಾಂತಂ ಸಾಯಾದಿ ಪ್ರಾತರಂ ತತಃ। ಯತ್ಕರೋಮಿ ಜಗನ್ನಾಥ! ತದಸ್ತು ತವ ಪೂಜನಮ್।' ಇಗೋ, ಈ ಸಕಲೇಂದ್ರಿಯ ವ್ಯಾಪಾರಗಳನ್ನೂ ಜ್ಞಾನಪೂರ್ವಕವಾಗಿ ಭಕ್ತಿಯಿಂದ ನಿನ್ನಲ್ಲಿ ಸಮರ್ಪಿಸುತ್ತಿದ್ದೇನೆ. ಈ ಸಕಲ ವ್ಯಾಪಾರಗಳಿಗೂ ನೀನೇ ಪ್ರೇರಕನಲ್ಲವೇ! ಇವೆಲ್ಲವನ್ನೂ ಸ್ವೀಕರಿಸಿ ನನ್ನ ತಪ್ಪುಗಳನ್ನೆಲ್ಲಾ ಮನ್ನಿಸಿ ನನ್ನ ಕರೆಗೆ (ಗಮ) ಓಗೊಟ್ಟು ಬಂದು ನನ್ನನ್ನು ಉದ್ಧಾರ ಮಾಡು ಎಂದು ಅಧ್ಯಾತ್ಮಪರವಾದ ಅರ್ಥವಾಗುತ್ತದೆ.

ದೀಪಪ್ರಜ್ವಾಲನ—

ಅಗ್ನಿನಾಗ್ನಿರಿತ್ಯಸ್ಯ ಮಂತ್ರಸ್ಯ ಮೇಧಾತಿಥಿಃ ಕಾಣ್ವಋಷಿಃ। ಅಗ್ನಿರ್-ದೇವತಾ। ಗಾಯತ್ರೀ ಛಂದಃ। ದೀಪಪ್ರಜ್ವಾಲನೇ ವಿನಿಯೋಗಃ॥

ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ।

ಹವ್ಯವಾಡ್ ಜುಹ್ವಾಸ್ಯಃ॥ (ಋ. 1-12-6)

ಇತಿ ಮಂತ್ರೇಣ ದೀಪಂ ಪ್ರಜ್ವಾಲ್ಯ।

ಹೀಗೆ ಹೇಳಿ ದೀಪವನ್ನು ಹಚ್ಚಿದ್ದರೆ ದೊಡ್ಡದು ಮಾಡಬೇಕು ಇಲ್ಲವೇ ಹೊಸದಾಗಿ ಹಚ್ಚಬೇಕು.

ಹೋಮಕ್ಕೆ ಸಂಬಂಧಿಸಿದ ಅಗ್ನಿಯು ಆಹವನೀಯ, ದಕ್ಷಿಣ, ಗಾರ್ಹಪತ್ಯ, ಎಂದು ಮೂರು ವಿಧ. ಈ ಮಂತ್ರಕ್ಕೆ ಗಾರ್ಹಪತ್ಯಾಗ್ನಿಯು ಪರವಾಗಿ ಒಂದರ್ಥವೂ ಆಹವನೀ-ಯಾಗ್ನಿಯ ಪರವಾಗಿ ಇನ್ನೊಂದರ್ಥವೂ ಇದೆ.

ಗಾರ್ಹಪತ್ಯಾಗ್ನಿಪರವಾದ ಅರ್ಥ :— ಜುಹ್ವಾಸ್ಯಃ (ಜುಹು=ಹೋಮ ಮಾಡುವು ದಕ್ಕೆ ಆಶ್ರಯವಾದ ಅಥವಾ ನೆಲೆಯಾದ, ಆಸ್ಯ=ಮುಖವುಳ್ಳ ಎಂಬ ವ್ಯುತ್ಪತ್ತಿಯಿಂದ —ಜುಹು=ಹವನಾಧಿಕರಣಂ, ಆಸ್ಯಂ=ಮುಖಂ ಯಸ್ಯೇತಿ ಜುಹ್ವಾಸ್ಯಃ)=ಆಹುತಿ ಗಳನ್ನು ಕೊಡುವುದಕ್ಕೆ ಆಶ್ರಯೀಭೂತನಾದ, ಕವಿಃ=ಸರ್ವಜ್ಞನಾದ, ಗೃಹಪತಿಃ= ಮನೆಗೆ ಒಡೆಯನಾದ ಎಂದರೆ ಗಾರ್ಹಪತ್ಯವೆಂಬ, ಯುವಾ=ತರುಣನಾದ, ಹವ್ಯವಾಟ್ ಅಗ್ನಿಃ=ಬೆಂಕಿಯು, ಅಗ್ನಿನಾ (ಅಗ್ರಣಿಯಾದ್ದರಿಂದಲೂ, ಅಂಗನಿಯಾಮಕನಾಗಿರುವುದ ರಿಂದಲೂ, ಜಗತ್ಪ್ರೇರಕನಾದ್ದರಿಂದಲೂ, ಸರ್ವೋತ್ತಮನಾದ್ದರಿಂದಲೂ, ಸಕಲ ಇಂದ್ರಿಯ ನಿಯಾಮಕನಾದ್ದರಿಂದಲೂ—ಈ ಅರ್ಥಗಳನ್ನು 'ಅಗ್ನಿಮೀಳೇ ಪುರೋಹಿತಂ' ಎಂಬ ಮೊದಲನೇ ಸೂಕ್ತದ ಮೊದಲನೇ ಋಕ್ಕಿಗೆ ವ್ಯಾಖ್ಯಾನ ಮಾಡುವಾಗ ಹೇಳಿದ್ದಾರೆ)— ಅಗ್ನಿನಾಮಕನಾದ ಶ್ರೀಹರಿಯಿಂದ, ಸಂ ಇಧ್ಯತೇ=ಪ್ರೇರಿಸಲ್ಪಡುತ್ತಾನೆ. (ಗೀತೆಯಲ್ಲಿ ೧೫ ಅ. ೧೨ ಶ್ಲೋ.) 'ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್' ಎಂದರೆ 'ಸೂರ್ಯನಲ್ಲೂ ಚಂದ್ರನಲ್ಲೂ ಅಗ್ನಿಯಲ್ಲೂ ಇರುವ ತೇಜಸ್ಸು ನನ್ನದೆಂದೇ ತಿಳಿ' ಎಂದೂ, ಕಠೋಪನಿಷತ್ತಿನಲ್ಲಿ (೨ ಅ. ೨ ವಲ್ಲಿ, ೧೫ ಮಂ.) 'ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂದರೆ 'ಆ ಭಗವಂತನ ಪ್ರಕಾಶದ ಬಲ ದಿಂದಲೇ ಈ ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರಾದಿ ಸಕಲ ಜ್ಯೋತಿಗಳೂ ಪ್ರಕಾಶಿಸುತ್ತವೆ' ಎಂದೂ ಹೇಳಿದಂತೆ ಅಗ್ನಿನಾಮಕನಾದ ಶ್ರೀಹರಿಯ ಬಲದಿಂದಲೇ [ಅನುಗ್ರಹದಿಂದಲೇ] ಸಕಲರ ಮನೆಗಳಲ್ಲಿರುವ ಗಾರ್ಹಪತ್ಯಾದ್ಯಗ್ನಿಗಳೂ ಬೆಳಗುತ್ತವೆ—ಎಂದರ್ಥ.)

ಆಹವನೀಯಾಗ್ನಿಪರವಾದ ಅರ್ಥ : ಜುಹ್ವಾಸ್ಯಃ = ಹೋಮ ಸಾಧಕಉ ಆಧಾರ-ಭೂತವಾದ, ಕವಿಃ = ಸರ್ವಜ್ಞನಾದ, ಗೃಹಪತಿಃ = ಮನೆಗೆ ಒಡೆಯನಾದ (ಮನೆಗೆ ಮುಖ್ಯಸ್ವಾಮಿಯಾದ), ಯುವಾ = ತರುಣನಾದ, ಹವ್ಯವಾಟ್ = ಮಾಡಿದ ಹೋಮ-ದ್ರವ್ಯವನ್ನು ಆಯಾ ದೇವತೆಗಳಿಗೆ ಮುಟ್ಟಿಸುವ, ಅಗ್ನಿಃ = ಆಹವನೀಯಾಗ್ನಿಯು, ಅಗ್ನಿನಾ = ಹೊಸದಾಗಿ ಮಥನ ಮಾಡಿದ ಗಾರ್ಹಪತ್ಯಾಗ್ನಿಯಿಂದ, ಸಮಿಧ್ಯತೇ = ಪ್ರಜ್ವಲಗೊಳಿಸಲ್ಪಡುತ್ತಾನೆ.

ಅರಣಿಯೆಂಬ ಕಟ್ಟಿಗೆಯನ್ನು ಕಡೆಯುವುದರಿಂದ ಗಾರ್ಹಪತ್ಯಾಗ್ನಿ ಉತ್ಪತ್ತಿಯಾಗುತ್ತದೆ. ಆ ಗಾರ್ಹಪತ್ಯಾಗ್ನಿಯಿಂದ ಹೋಮ-ಹವನಗಳಿಗೆ ಉಪಯುಕ್ತವಾದ ಆಹವನೀಯಾಗ್ನಿಯನ್ನು ಹತ್ತಿಸಿ ಪ್ರಜ್ವಲಗೊಳಿಸುತ್ತಾರೆ ಎಂದು ಭಾವ. ಅಂತೂ ಒಟ್ಟಿನಲ್ಲಿ ಒಂದು ಜ್ವಾಲೆಯಿಂದ ಇನ್ನೊಂದು ಜ್ವಾಲೆ ಹತ್ತಿಕೊಂಡು ಉರಿಯುವುದೂ ಸಹ ಆ ಭಗವಂತನ ಶಕ್ತಿಯಿಂದಲೇ ಎಂದು ತಿಳಿದುಕೊಂಡು ನಂದಾದೀಪ ಹಚ್ಚಬೇಕು ಅಥವಾ ಹಚ್ಚಿದ್ದರೆ ಅದನ್ನು ಮುಂದಕ್ಕೆ ಚಾಚಿ ಪ್ರಜ್ವಲಗೊಳಿಸಬೇಕೆಂದು ಭಾವ.

ಅನಂತರ ಮಧ್ವಸಿದ್ಧಾಂತಕ್ಕೆ ಅತಿ ಮುಖ್ಯವಾದ ತಾರತಮ್ಯವನ್ನು ತಿಳಿಯಲು ಈ ಶ್ಲೋಕವನ್ನು ಹೇಳಿಕೊಳ್ಳಬೇಕು :

> ವಂದೇ ವಿಷ್ಣುಂ ನಮಾಮಿ ಶ್ರಿಯಮಥ ಚ ಭುವಂ
> ಬ್ರಹ್ಮವಾಯೂ ಚ ವಂದೇ,
> ಗಾಯತ್ರೀಂ ಭಾರತೀಂ ತಾಮಪಿ ಗರುಡಮನಂತಂ
> ಭಜೇ ರುದ್ರದೇವಮ್ ।
> ದೇವೀಂ ವಂದೇ ಸುಪರ್ಣೀಂ-ಮಹಿಪತಿದಯಿತಾಂ
> ವಾರುಣೀಮಪ್ಯುಮಾಂ ತಾಂ
> ಇಂದ್ರಾದೀನ್ ಕಾಮಮುಖ್ಯಾನಪಿ ಸಕಲ ಸುರಾಂ-
> ಸ್ತದ್ಗುರೂನ್ ಮದ್ಗುರೂಂಶ್ಚ ॥

ಅರ್ಥ : ವಿಷ್ಣುವು ಸರ್ವೋತ್ತಮನೂ, ಸಕಲ ಜಗನ್ನಿಯಾಮಕನೂ, ರಮಾ-ಬ್ರಹ್ಮಾದಿ ಸಕಲರಿಗೂ ಸ್ವಾಮಿಯೂ ಅತ್ಯಂತ ಭಿನ್ನನೂ ಆಗಿದ್ದಾನೆ. ಅವನ ಪತ್ನಿಯಾದ ಲಕ್ಷ್ಮೀದೇವಿ ಶ್ರೀ ಭೂ ಎಂಬ ಎರಡು ರೂಪಗಳಿಂದ ಆ ಸ್ವಾಮಿಯನ್ನು ಸೇವಿಸುತ್ತಾಳೆ. ಈ ಶ್ರೀ-ಭೂ ಎರಡೂ ಲಕ್ಷ್ಮೀರೂಪಗಳೇ ಆದ್ದರಿಂದ ಅವಕ್ಕೆ ಪರಸ್ಪರ ಭೇದವಿಲ್ಲ. ಶ್ರೀದೇವಿ ಸತ್ವಗುಣಾಭಿಮಾನಿ ; ಆಕೆ ಕರ್ಪೂರದಂತೆ ಬೆಳ್ಳಗಿರುತ್ತಾಳೆಂದೂ, ಭೂದೇವಿ

ಪದ್ಮದಂತೆ ಕೆಂಪುಬಣ್ಣವುಳ್ಳವಳೆಂದೂ ಶ್ರೀಮದ್ವಾದಿರಾಜರು ಒಂದು ಗ್ರಂಥದಲ್ಲಿ ವರ್ಣಿಸಿದ್ದಾರೆ. ಭೂದೇವಿ ರಜೋಗುಣಾಭಿಮಾನಿ. ವಿಷ್ಣು ಲಕ್ಷ್ಮಿ ಇಬ್ಬರೂ ಈಶಕೋಟಿಗೆ ಸೇರಿದವರು ; ಇವರಿಬ್ಬರಿಗೂ ದೇಹಭಿನ್ನವಾದ 'ಜೀವ' ಎಂಬುದಿಲ್ಲ. ಇಬ್ಬರೂ ದೇಶತಃ ಕಾಲತಃ ಸಮವ್ಯಾಪ್ತಿಯುಳ್ಳವರು. ಆದರೆ ಗುಣತಃ ಲಕ್ಷ್ಮಿಯು ನಾರಾಯಣನಿಗಿಂತ ಅನಂತಾನಂತ ಗುಣ ಅವರಳು (ಕಡಿಮೆ).

ಬ್ರಹ್ಮ-ವಾಯುಗಳಿಬ್ಬರೂ ಲಕ್ಷ್ಮೀಗಿಂತ ಕೋಟಿ ಗುಣ ಅಧಮರು. ಜ್ಞಾನಾನಂದ ಬಲಾದಿ ಗುಣಗಳಲ್ಲಿ ಇಬ್ಬರೂ ಬಹಳಮಟ್ಟಿಗೆ ಸಮರು. ವಾಯುದೇವನಿಲ್ಲದೆ ಬ್ರಹ್ಮ ಬದುಕಲಾರ, ಬ್ರಹ್ಮನಿಲ್ಲದೆ ವಾಯು ಬದುಕಲಾರ. ಇದಕ್ಕೆ ವಾಯುಪುರಾಣದ ಈ ವಾಕ್ಯವೇ ಪ್ರಮಾಣ :

ಬ್ರಹ್ಮಣಃ ಪ್ರೇರಕೋ ವಾಯುಃ ಪ್ರಾಣಸ್ಯ ಪ್ರೇರಕೋ ವಿಧಿಃ ।
ಪರಸ್ಪರಪ್ರೇರಕೌ ತೌ ತತ್ಪತ್ನ್ಯೌ ಚ ತಥೈವ ಚ ।

ಆದರೆ ಬ್ರಹ್ಮದೇವರು ವಾಯುವಿಗಿಂತ ಕಿಂಚಿತ್ ಅಧಿಕರು, ಅವರ ಸಾಧನೆ ಈ ಬ್ರಹ್ಮಕಲ್ಪಕ್ಕೇ ಮುಗಿದುಹೋಗುತ್ತದೆ; ವಾಯುದೇವರ ಸಾಧನೆ ಈ ಕಲ್ಪಕ್ಕೇ ಮುಗಿಯುವುದಿಲ್ಲ.

ಬ್ರಹ್ಮ-ವಾಯುಗಳಿಗಿಂತ ಸರಸ್ವತೀ-ಭಾರತಿಯರು ಶತಗುಣ ಅವರರು; ಪ್ರಾಯಶಃ ಇವರಿಬ್ಬರೂ ಸಮರು. 'ಗಾಯತ್ರೀಂ' ಎಂದರೆ ಸರಸ್ವತಿಯನ್ನು, ಲಕ್ಷ್ಮೀ, ಬ್ರಹ್ಮ ವಾಯು, ಸರಸ್ವತೀ-ಭಾರತೀ ಈ ಮೂವರಿಗೂ ಪರಶುಕ್ಲತ್ರಯರೆಂದು ಹೆಸರು. ಇವರ ಅಜ್ಞಾನ, ಪಾಪಲೇಪಾದಿ ದೋಷಗಳೂ ಇಲ್ಲ.

ಸ್ತೋತ್ರದಲ್ಲಿರುವ 'ಅನಂತಂ' ಎಂದರೆ 'ಶೇಷದೇವರನ್ನು' ಎಂದರ್ಥ. ಗರುಡ-ಶೇಷ ರುದ್ರ ಮೂವರೂ ಪ್ರಾಯಶಃ ಸಮರು, ಆದರೆ ಸರಸ್ವತೀ-ಭಾರತಿಯರಿಗಿಂತ ಶತಗುಣ ಅವರರು. ರುದ್ರದೇವರು ನಲವತ್ತು ಕಲ್ಪ ತಪಸ್ಸು ಮಾಡಿ ಶೇಷಪದವಿಯನ್ನು ಹೊಂದುವ ಅರ್ಹತೆ ಪಡೆದರು. ಗರುಡ ಶೇಷರಿಬ್ಬರೂ ಈ ಕಲ್ಪದಲ್ಲೇ ಮುಕ್ತಿಯನ್ನು ಹೊಂದುವರು. ರುದ್ರದೇವರು ಮುಂದಿನ ಕಲ್ಪದಲ್ಲಿ ಶೇಷನಾಗಿ ಸಾಧನ ಮಾಡಿಕೊಂಡು ಮುಕ್ತರಾಗುವರು.

ಸುಪರ್ಣೀ ಎಂಬುದು ಗರುಡಪತ್ನಿಯ ಹೆಸರು. ಅಹಿಪತಿದಯಿತಾಂ = ಸರ್ಪಗಳ ಒಡೆಯನಾದ ಶೇಷನ ಪತ್ನಿಯಾದ ; ವಾರುಣೀಂ = ವಾರುಣಿಯನ್ನು (ವಾರುಣೀಂ + ಅಪಿ + ಉಮಾಂ ಎಂದು ಪದಚ್ಛೇದ), ಉಮಾಂ = ಗೌರಿಯನ್ನು, ಸೌಪರ್ಣೀ-ವಾರುಣೀ-ಪಾರ್ವತೀ ಈ ಮೂವರೂ ಗರುಡ-ಶೇಷ-ರುದ್ರರಿಗಿಂತ ಅವರರು, ಮತ್ತು ಈ ಮೂವರೂ ಪರಸ್ಪರ ಸಮಾನರು. ಇವರಿಗಿಂತಲೂ ಇಂದ್ರಕಾಮರು ಅವರರು. ಸೂರ್ಯ ಚಂದ್ರ ಯಮ ಮೊದಲಾದ ಇತರ ದೇವತೆಗಳೂ ನಾರದಾದಿ ಮಹರ್ಷಿಗಳೂ ಇಂದ್ರಕಾಮರಿಗಿಂತಲೂ ಅವರರೆಂದು ತಿಳಿಯಬೇಕು.

ತಾರತಮ್ಯಜ್ಞಾನದಿಂದಲೇ ವಿಷ್ಣುಸರ್ವೋತ್ತಮತ್ವವು ಸಿದ್ಧಿಸುವುದರಿಂದ ತಾರತಮ್ಯವನ್ನು ಅವಶ್ಯ ಅರಿತುಕೊಳ್ಳಬೇಕು.

ಭೂತೋಚ್ಚಾಟನಮ್

ಅಪಸರ್ಪಂತ್ವಿತಿ ಭೂತೋಚ್ಚಾಟನಮಂತ್ರಸ್ಯ ಮಮ ಶರೀರಸ್ಥ ಅಂತರ್ಯಾಮೀ ಋಷಿಃ । ಪ್ರಕೃತಿಪುರುಷಶ್ಛಂದಃ । ಶಕ್ತ್ಯೋ ದೇವತಾ । ಸಮಸ್ತ ಭೂತೋಚ್ಚಾಟನೇ ವಿನಿಯೋಗಃ ॥

ಅಪಸರ್ಪಂತು ಯೇ ಭೂತಾ ಯೇ ಭೂತಾ ಭುವಿ ಸಂಸ್ಥಿತಾಃ ।
ಯೇ ಭೂತಾ ವಿಘ್ನಕರ್ತಾರಃ ತೇ ನಶ್ಯಂತು ಶಿವಾಜ್ಞಯಾ ॥
ಅಪಕ್ರಾಮಂತು ಭೂತಾದ್ಯಾಃ ಕ್ರೂರಾಶ್ಚೈವತು ರಾಕ್ಷಸಾಃ ।
ಯೇ ಚಾತ್ರ ನಿವಸಂತ್ಯೇವ ದೇವತಾ ಭುವಿ ಸಂತತಮ್ ॥
ತೇಷಾಮಪ್ಯವಿರೋಧೇನ ಬ್ರಹ್ಮಕರ್ಮಸಮಾರಭೇ ॥

ಮಂತ್ರಾರ್ಥ— ಭೂಮಿಯಲ್ಲಿ ಯಾವ ಯಾವ ಭೂತಗಳಿವೆಯೋ ಅವೆಲ್ಲ ಆಚೆಗೆ (ಬೇರೆ ಕಡೆಗೆ) ಹೋಗಲಿ. ನಮ್ಮ ಸತ್ಕಾರ್ಯಗಳಿಗೆ ವಿಘ್ನ ಮಾಡುವ ಭೂತಗಳೆಲ್ಲ ರುದ್ರದೇವರ ಅಪ್ಪಣೆಯಿಂದ ನಾಶವಾಗಲಿ. ಭೂತಗಳೂ ಕ್ರೂರಿಗಳಾದ ರಾಕ್ಷಸರೂ ತೊಲಗಿಹೋಗಲಿ. ಇವಕ್ಕೆ ವಿರುದ್ಧವಾಗಿ ಇಲ್ಲಿ ಭೂಮಿಯಲ್ಲಿ ಅನುಕೂಲವಾದ ದೇವತೆಗಳಾರಿದ್ದಾರೋ ಅವರೆಲ್ಲರಿಗೂ ಯಾರಿಗೂ ವಿರೋಧ ಮಾಡದಂತೆ (ತೊಂದರೆ ಮಾಡದೆ) ಬ್ರಹ್ಮಕರ್ಮವನ್ನು ಆರಂಭಿಸುತ್ತೇನೆ

ಹೀಗೆ ಹೇಳಿ ಛೋಟಿಕಾ ಮುದ್ರೆಯಿಂದ (ಎಂದರೆ ಚುಟಕಿ ಹೊಡೆದು) ಸಮಸ್ತ ಭೂತೋಚ್ಚಾಟನ ಮಾಡಬೇಕು.

ಅಸ್ತ್ರಾಯ ಫಟ್ । ಇತಿ ನಾರಾಚಮುದ್ರಯಾ ದಿಗ್ಬಂಧನಂ ಕುರ್ಯಾತ್ ॥

ಎಂದು ಹೇಳಿ (ನಾರಾಚ ಮುದ್ರೆಯಿಂದ) ದಿಗ್ಬಂಧನ ಮಾಡಬೇಕು.

ಮಾನುಷಗಂಧನಿಬರ್ಹರಣ—

ಇಲಿಗಳಿಗೆ, ನಾಯಿಗಳಿಗೆ, ದನ-ಕರುಗಳಿಗೆ, ಮೀನುಗಳಿಗೆ ಹುಲಿ ಮೊದಲಾದ ಪ್ರತಿಯೊಂದು ಪ್ರಾಣಿಗಳಿಗೂ ಹೇಗೆ ಒಂದೊಂದು ನಿಯತ 'ವಾಸನೆ' (ಗಂಧ ಅಥವಾ ನಾತ) ಇರುತ್ತದೋ ಹಾಗೆಯೇ ಮನುಷ್ಯರಿಗೂ ನಿಯತವಾದ ಒಂದು ವಿಧವಾದ 'ದುರ್ನಾತ' (ದುರ್ಗಂಧ ಇರುತ್ತದೆ. ದೇವರು ಸಿದ್ಧ ಮೊದಲಾದ ದೋಷರಹಿತರಾದ ದೇವತೆಗಳಿಗೆ ಈ 'ಮನುಷ್ಯಗಂಧ' ಜುಗುಪ್ಸೆಗೆ ಕಾರಣವಾಗುತ್ತದೆ ಆದಕಾರಣ ದೇವತಾರ್ಚನೆ ಆರಂಭಿಸುವಾಗ ಈ ಮನುಷ್ಯಗಂಧವನ್ನು ನಿವಾರಣೆ (ನಿಬರ್ಹರಣ) ಮಾಡಿಕೊಳ್ಳಬೇಕು. 'ಯೇಭ್ಯೋ ಮಾತಾ' ಎಂಬ ಋಙ್ಮಂತ್ರಪಠನದಿಂದ ಮನುಷ್ಯರ ಆ 'ದುರ್ಗಂಧ' ನಿವಾರಣೆಯಾಗುತ್ತದೆ.

ಓಂ ಅಪ್ಸೈವಾಭೀಭತ್ಸಂತ ಮನುಷ್ಯಗಂಧಾಸ್ತ್ರ ಏತೇ ಧಾವ್ಯೇ-
ಽಂತರ್ದಧತ

ಯೇಭ್ಯೋ ಮಾತೇತ್ಯಸ್ಯ ಮಂತ್ರಸ್ಯ ಗಯಪ್ಲಾತಃ ಋಷಿಃ । ವಿಶ್ವೇ ದೇವಾಃ ದೇವತಾ । ಜಗತೀ ಛಂದಃ । ಮನುಷ್ಯಗಂಧನಿಬರ್ಹಣಾರ್ಥೇ ಜಪೇ ವಿನಿಯೋಗಃ ॥

ಓಂ ಯೇಭ್ಯೋ ಮಾತಾ ಮಧುಮತ್ಪಿನ್ವತೇ ಪಯಃ

ಪೀಯೂಷಂ ದ್ಯೌರದಿತಿರದ್ರಿಬರ್ಹಾಃ ।

ಉಕ್ಥಶುಷ್ಮಾನ್ ವೃಷಭರಾನ್ತ್ಸ್ವಪ್ನಸಸ್ತಾಁ

ಆದಿತ್ಯಾಁ ಅನು ಮದಾ ಸ್ವಸ್ತಯೇ ॥ (೧೦-೬೩-೩)

ಅಂತಃಪಟನಿವಾರಣೆ—

ಈಗಿನ ಕಾಲದಲ್ಲಿ ಮನೆಯ ಬಾಗಿಲುಗಳಿಗೆಲ್ಲಾ ಬಟ್ಟೆಯ ತೆರೆ (ಕರ್ಟನ್) ಹಾಕು ವುದು ವಾಡಿಕೆಯಾಗಿದೆ. ಅದೇ ರೀತಿ ಹಿಂದಿನ ಕಾಲದಲ್ಲಿ ದೇವರ ಮನೆಯ ಬಾಗಿಲಿಗೂ ತೆರೆ (ಕರ್ಟನ್) ಹಾಕಿರುತ್ತಿದ್ದರು. ಶ್ರೀವೈಷ್ಣವರ ಗುಡಿಗಳಲ್ಲಂತೂ ತೆರೆಯಿಲ್ಲದೆ ಇರುವುದೇ ಇಲ್ಲ ಈ ತೆರೆಯನ್ನು (ಅಂತಃಪಟವನ್ನು) ತೆಗೆಯುವಾಗ 'ಏವಾ ಪಿತ್ರೇ...' ಎಂಬ ಋಙ್ಮಂತ್ರ ಪಠಿಸಬೇಕೆಂದು ತಂತ್ರಗ್ರಂಥಗಳಲ್ಲಿ ಹೇಳಿದೆ.

ಏವಾ ಪಿತ್ರೇ ಇತ್ಯಸ್ಯ ಮಂತ್ರಸ್ಯ ವಾಮದೇವೋ ಗೌತಮಋಷಿಃ । ಬೃಹಸ್ಪತಿರ್ದೇವತಾ । ತ್ರಿಷ್ಟುಪ್ ಛಂದಃ । (ಅಂತಃಪಟನಿಬರ್ಹಣಾರ್ಥೇ ಜಪೇ ವಿನಿಯೋಗಃ ॥)

ಓಂ ಏವಾ ಪಿತ್ರೇ ವಿಶ್ವದೇವಾಯ ವೃಷ್ಣೇ

ಯಜ್ಞೈರ್ವಿಧೇಮ ನಮಸಾ ಹವಿರ್ಭಿಃ ।

ಬೃಹಸ್ಪತೇ ಸುಪ್ರಜಾ ವೀರವಂತೋ

ವಯಂ ಸ್ಯಾಮ ಪತಯೋ ರಯೀಣಾಮ್ ॥ (೪-೫೦-೬)

ಮಾನುಷೋ ಗಂಧ ಆಯಾತಿ ದೇವ ತತ್ ಕ್ಷಮ್ಯತಾಂ ಪ್ರಭೋ ||

ಅರ್ಥ : ಹೇ ಸ್ವಾಮಿ, ಮನುಷ್ಯರ ವಾಸನೆ (ದುರ್ನಾತ) ಬರುತ್ತಿದೆ. ಇದನ್ನು ದಯಮಾಡಿ ಕ್ಷಮಿಸು.

(ಇತಿ ಸಂಪ್ರಾರ್ಥ್ಯ) [ಬ್ರಹ್ಮಪಾರಸ್ತೋತ್ರಂ ಪಠೇತ್]

ಬ್ರಹ್ಮಪಾರಸ್ತವಃ

'ಬ್ರಹ್ಮಹತ್ಯಾ ಶಿರಸ್ಕಂ ಚ....' ಎಂಬ ಮಂತ್ರದಲ್ಲಿ ಹೇಳಿದಂತೆ ಪಂಚಮಹಾಪಾತಕಗಳೇ ಮೊದಲಾದ ಸಕಲ ಪಾಪಗಳೂ ಪಾಪಪುರುಷನ ರೂಪದಿಂದ ನಮ್ಮ ದೇಹದಲ್ಲಿ ವಾಸ ಮಾಡುತ್ತಿರುತ್ತವೆ. ಈ ಪಾಪಪುರುಷ ದೇಹದಲ್ಲಿ ಎರಡು ನಿಮಿಷಕ್ಕೊಮ್ಮೆ ಹೊಸಹೊಸ ದಾಗಿ ಜನಿಸುತ್ತಿರುವನೆಂದು ಬಲ್ಲವರು ಹೇಳುತ್ತಾರೆ. ದೇಹದಲ್ಲಿ ಪಾಪಪುರುಷ ಇರುವ ವರೆಗೂ ನಮಗೆ ಪೂಜೆಗೆ ಅಧಿಕಾರವೇ ಸಿದ್ಧಿಸುವುದಿಲ್ಲ. ಆ ಪಾಪಪುರುಷನು ವಿಷ್ಣು-ಪುರಾಣೋಕ್ತವಾದ ಬ್ರಹ್ಮಪಾರಸ್ತವ (ಅಥವಾ ಸ್ತೋತ್ರ)ವನ್ನು ಪಠಿಸುವುದರಿಂದ ನಾಶ ವಾಗುವನು, ಆದರಿಂದ ನಮಗೆ ಪೂಜಾಧಿಕಾರ ಸಿದ್ಧಿಸುವುದು. ಈ ಬ್ರಹ್ಮಪಾರಸ್ತೋತ್ರವು ಪ್ರಾಚೇತಸರೆಂಬ ಮಹರ್ಷಿಗಳಿಗೂ ಚಂದ್ರನಿಗೂ ನಡೆದ ಸಂವಾದರೂಪವಾಗಿದೆ. ಈ ಸ್ತೋತ್ರವನ್ನು ಪಠಿಸಿದ್ದರಿಂದ ಅದರ ಮಹಿಮೆಯ ಫಲವಾಗಿ ರಾಜನ ದೇಹದಿಂದ ಬ್ರಹ್ಮ-ಹತ್ಯಾದೋಷವು ನಿವಾರಣೆಯಾಯಿತೆಂದು ವರಾಹಪುರಾಣದಲ್ಲಿ ಹೇಳಿದೆ. ಈ ವಿಚಾರವನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದ ಮೂರನೇ ಅಧ್ಯಾಯದ ಎರಡನೇ ಪಾದದ ಕಟ್ಟಕಡೆಯಲ್ಲಿ ಈ ವಾಕ್ಯಗಳಿಂದ ಹೇಳಿದ್ದಾರೆ

ಏಕೈವ ಬ್ರಹ್ಮಹತ್ಯಾ ಹಿ ವರಾಹ ಹರಿಣೋದಿತಾ ।
ಬ್ರಹ್ಮಪಾರಸ್ತವೇನೈವ ನಿಷ್ಕ್ರಾಂತಾ ರಾಜದೇಹತಃ ।
ಸ್ತೋತ್ರಸ್ಯ ತಸ್ಯ ಮಾಹಾತ್ಮ್ಯಾತ್ ವ್ಯಾಧತ್ವಂ ಗಮಿತಾ ಪುನಃ ।
ಪ್ರಾಪ್ಯ ಜ್ಞಾನಂ ಪರಂ ಚಾಪ ತಥಾನ್ಯಾನ್ಯಪಿ ಸರ್ವಶಃ ।

ಹೆಚ್ಚಿನ ವಿವರಗಳನ್ನು ನ್ಯಾಯಸುಧಾ ಮತ್ತು ಅದರ ಟಿಪ್ಪಣಿಗಳಿಂದ ತಿಳಿದುಕೊಳ್ಳ-ಬಹುದು. ಬ್ರಹ್ಮಪಾರಸ್ತೋತ್ರಕ್ಕೆ ಛಲಾರೀ ಆಚಾರ್ಯರು ಅರ್ಥ ಬರೆದಿದ್ದಾರೆ.

ಶ್ರೀ ಬ್ರಹ್ಮಪಾರಸ್ತೋತ್ರಸ್ಯ ಕಂಡುಃ ಋಷಿಃ। ವಿಶ್ವೇದೇವಾ ದೇವತಾಃ। ತ್ರಿಷ್ಟುಪ್ ಛಂದಃ । ಪೂಜಾಧಿಕಾರಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಪ್ರಚೇತಸಃ ಊಚುಃ—

ಬ್ರಹ್ಮಪಾರಂ ಮುನೇ ಶ್ರೋತುಮಿಚ್ಛಾಮಃ ಪರಮಂ ಸ್ತವಮ್ ।
ಜಪತಾ ಕಂಡುನಾ ದೇವೋ ಯೇನಾರಾಧ್ಯತ ಕೇಶವಃ ॥

ಶ್ರೀ ಸೋಮ ಉವಾಚ—

ಪಾರಂ ಪರಂ ವಿಷ್ಣುರನಂತಪಾರಃ
ಪರಃ ಪರಾಣಾಮಪಿ ಪಾರ ಪಾರಃ ।
ಸ ಬ್ರಹ್ಮಪಾರಃ ಪರಪಾರಭೂತಃ
ಪರಃ ಪರೇಭ್ಯಃ ಪರಮಾರ್ಥರೂಪೀ ॥

ಸ ಕಾರಣಂ ಕಾರಣತಸ್ತತೋಽಪಿ
ತಸ್ಯಾಪಿ ಹೇತುಃ ಪರಹೇತು ಹೇತುಃ ।
ಕಾರ್ಯೇಷು ಚೈವಂ ಸ ಹಿ ಕರ್ಮಕರ್ತೃ
ರೂಪೈರಶೇಷೈರವತೀಹ ಸರ್ವಮ್ ॥

ಬ್ರಹ್ಮ ಪ್ರಭುರ್ಬ್ರಹ್ಮ ಸ ಸರ್ವಭೂತೋ
ಬ್ರಹ್ಮ ಪ್ರಜಾನಾಂ ಪತಿರಚ್ಯುತೋಽಸೌ ।
ಬ್ರಹ್ಮಾವ್ಯಯಂ ನಿತ್ಯಮಜಂ ಸ ವಿಷ್ಣು-
ರಪಕ್ಷಯಾದ್ಯೈರಖಿಲೈರಸಂಗೀ ॥

ಬ್ರಹ್ಮಾಕ್ಷರಮಜಂ ನಿತ್ಯಂ ಯಥಾಽಸೌ ಪುರುಷೋತ್ತಮಃ ।
ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥

ಯ ಏತದ್ಬ್ರಹ್ಮಪಾರಾಖ್ಯಂ ಸಂಸ್ತವಂ ಪರಮಂ ಜಪನ್ ।
ಅವಾಪ ಪರಮಾಂ ಸಿದ್ಧಿಂ ಸ ಸಮಾರಾಧ್ಯ ಕೇಶವಮ್ ॥

ಇತಿ ಶ್ರೀವಿಷ್ಣುಪುರಾಣೇ ಪ್ರಾಚೇತಸ ಚಂದ್ರ ಸಂವಾದೇ ಬ್ರಹ್ಮಪಾರಸ್ತೋತ್ರಂ

ಈ ಸ್ತೋತ್ರಕ್ಕೆ ಕನ್ನಡಾರ್ಥ

ಈ ಹಿಂದೆಯೇ ತಿಳಿಸಿದಂತೆ ಬ್ರಹ್ಮಪಾರಸ್ತೋತ್ರಕ್ಕೆ ಛಲಾರೀ ಆಚಾರ್ಯರು ವ್ಯಾಖ್ಯಾನ ಬರೆದಿದ್ದಾರೆ. ಸ್ವರ್ಗೀಯ ಪುರಾಣಭಾಸ್ಕರ ಆರ್. ಎಸ್. ಶೇಷಗಿರಿರಾಯರು ಆ ವ್ಯಾಖ್ಯಾನವನ್ನು ಅನುಸರಿಸಿಯೇ ಈ ಸ್ತೋತ್ರಕ್ಕೆ ಕನ್ನಡಾರ್ಥವನ್ನು ಬರೆದು ಪ್ರಕಟಿಸಿದ್ದರು. ನಮಗೆ ಸಂಸ್ಕೃತವ್ಯಾಖ್ಯಾನವು ದೊರಕದಿರುವ ಕಾರಣ ಶೇಷಗಿರಿರಾಯರ ಪುಸ್ತಕದ ಆಧಾರದ ಮೇಲೆಯೇ ಈ ಸ್ತೋತ್ರದ ಅರ್ಥವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಶ್ರೀಬ್ರಹ್ಮಪಾರಸ್ತವಃ

ಶ್ರೀಪ್ರಾಣಪತಿಮಾನಮ್ಯ ತಥಾ ಮಧ್ವಾದಿದೇಶಿಕಾನ್ ।
ವಿವೃಣೋಮಿ ಸ್ವಧೀಶುದ್ಧ್ಯೈ ಬ್ರಹ್ಮಪಾರಸ್ತವಂ ಶುಭಮ್ ।

ಸ್ತವದ ಮೂಲಾಧಾರ: ಬ್ರಹ್ಮಪಾರಸ್ತವವು ವಿಷ್ಣುಪುರಾಣದ ಪ್ರಥಮಾಂಶದ ಹದಿಮೂರನೇ ಅಧ್ಯಾಯದಲ್ಲಿ ಪ್ರಾಚೇತಸ-ಚಂದ್ರ ಸಂವಾದರೂಪವಾಗಿ ಪಠಿತವಾಗಿದೆ. ಈ ಸ್ತೋತ್ರವನ್ನು 'ಕಂಡು' ಎಂಬ ಮಹರ್ಷಿಗಳು ಪಠಿಸಿ ಭಗವದಾರಾಧನೆ ಮಾಡಿ ಅವರು ಶ್ರೀವಿಷ್ಣುವಿನ ಅನುಗ್ರಹಕ್ಕೆ ಪಾತ್ರರಾಗಿ ಸಕಲ ಪಾಪಗಳಿಂದ ಮುಕ್ತರಾದರೆಂಬ ಕಥೆ ಅಲ್ಲಿ ಹೇಳಿದೆ. ಆದಕಾರಣ ಈ ಸ್ತೋತ್ರಕ್ಕೆ 'ಕಂಡು'ವೇ ಋಷಿ. ವಿಶ್ವೇದೇವನಾಮಕನಾದ ಸಕಲ ದೇವತಾಂತರ್ಗತನಾದ ಶ್ರೀಹರಿಯೇ ದೇವತೆ. ಈ ಸ್ತೋತ್ರವು ಹೆಚ್ಚಾಗಿ ತ್ರಿಷ್ಟುಪ್‌ಛಂದಸ್ಸಿನಲ್ಲಿದೆ, ಎಂದರೆ ಶ್ಲೋಕದ ಪ್ರತಿಪಾದದಲ್ಲೂ ಹನ್ನೊಂದು ಅಕ್ಷರಗಳಿರುತ್ತವೆ. ಈ ಸ್ತೋತ್ರ ಪಾರಾಯಣ ಮಾಡುವುದರಿಂದ ಬ್ರಹ್ಮಹತ್ಯಾದಿ ದೋಷಗಳೂ ಸಹ ದೂರವಾಗುವುವು; ತನ್ಮೂಲಕ ಪಾರಾಯಣ ಮಾಡುವವನಿಗೆ ದೇವಪೂಜೆ ಮಾಡುವ ಅಧಿಕಾರ ಪ್ರಾಪ್ತವಾಗುತ್ತದೆ. ಆದ್ದರಿಂದಲೇ ಈ ಸ್ತವವನ್ನು ಪೂಜಾರಂಭದಲ್ಲಿ ಪಠಿಸುವುದು ವೈಷ್ಣವರ ಪದ್ಧತಿಯಾಗಿದೆ. ಈಗ ಈ ಸ್ತೋತ್ರಕ್ಕೆ ಹಿನ್ನೆಲೆಯಾದ ಪೂರ್ವಕಥೆಯನ್ನು ತಿಳಿಯೋಣ.

ಕಂಡುಋಷಿಗಳ ಕಥೆ. ಪೂರ್ವಕಾಲದಲ್ಲಿ ಗೋಮತೀ ಎಂಬ ನದೀತೀರದಲ್ಲಿ ಕಂಡುವೆಂಬ ಮಹರ್ಷಿಗಳು ಯಾವುದೋ ಒಂದು ಕಾರ್ಯಸಿದ್ಧಿಗಾಗಿ ಆಶ್ರಮ ಕಟ್ಟಿಕೊಂಡು ತಪಸ್ಸು ಮಾಡುತ್ತಿದ್ದರು. ಅವರ ಕಾರ್ಯವು ಸಿದ್ಧಿಸದಂತೆ ಅವರ ತಪಸ್ಸಿಗೆ ವಿಘ್ನವುಂಟು ಮಾಡಲು ದೇವೇಂದ್ರನು 'ಪ್ರಮ್ಲೋಚೆ'ಯೆಂಬ ಅಪ್ಸರಸ್ತ್ರೀಯನ್ನು ಕಂಡುಋಷಿಗಳ ಆಶ್ರಮದ ಬಳಿಗೆ ಕಳುಹಿಸಿದನು. ಮಹರ್ಷಿಗಳು ನದಿಯಲ್ಲಿ ಮಿಂದು ನಿತ್ಯಾಹ್ನಿಕವನ್ನು ಮುಗಿಸಿ ತಮ್ಮ ಆಶ್ರಮಕ್ಕೆ ಹಿಂದಿರುಗಿದಾಗ ಅಲ್ಲಿದ್ದ ಪ್ರಮ್ಲೋಚೆಯನ್ನು ನೋಡಿ ಮೋಹಿತರಾಗಿ ಆಶ್ರಮವನ್ನು ಆಕೆಯೊಡನೆಯೇ ಪ್ರವೇಶಿಸಿದರು. ಸರಿ, ಆಕೆಯ ಸಹವಾಸದಿಂದ ಕಂಡುವಿನ ಜಪ-ತಪಾದಿ ಸಕಲಾನುಷ್ಠಾನಗಳೂ ಮಾಯವಾದುವು. ಕಾಮಾಂಧರಾಗಿ ಆಕೆಯೊಡನೆಯೇ ಒಂಭೈನೂರ ಏಳು ವರ್ಷಗಳನ್ನು ಕಳೆದರು.

ಜ್ಞಾನೋದಯ. ಹೀಗೆ ಮಹತ್ಕಾಲವು ಗತಿಸಿಹೋದ ಬಳಿಕ ಒಂದು ದಿನ ಸಂಧ್ಯಾಕಾಲದಲ್ಲಿ ಕಂಡುಋಷಿಗಳಿಗೆ ಏಕಾಏಕಿ ತಮ್ಮ ಭ್ರಷ್ಟಜೀವನದ ಅರಿವಾಯಿತು. ಆ ಕ್ಷಣ ಅವರು ಪ್ರಮ್ಲೋಚೆಯನ್ನು ಬಿಟ್ಟು ಸಂಧ್ಯಾನುಷ್ಠಾನಕ್ಕಾಗಿ ನದೀಕಡೆಗೆ ಹೊರಟರು. ಇದನ್ನು ಕಂಡು ಪ್ರಮ್ಲೋಚಾ ಆಪಾತ್ಕೃದಳು. ಅವಳು ಋಷಿಗಳನ್ನು ತಡೆದು 'ಎಲ್ಲಿಗೆ ಹೊರಟಿರಿ? ಏತಕ್ಕಾಗಿ?' ಎಂದು ಕೇಳಿದಳು. ಋಷಿಗಳು 'ಸಂಜೆಯಾಯಿತು, ಸಂಧ್ಯಾವಂದನೆ ಮಾಡಬೇಕು. ನದಿಗೆ ಹೋಗುತ್ತಿದ್ದೇನೆ' ಎಂದರು. ಕಳೆದ ಒಂಭೈನೂರು ವರ್ಷಗಳಿಂದ ಇಲ್ಲದ ಸಂಧ್ಯಾವಂದನದ ನೆನಪು ಇಂದು ಬಂತೇ ಎಂದು ಅವಳಿಗೆ

ಆಶ್ಚರ್ಯವಾಗಿ ಹಾಗೆಯೇ ಪ್ರಶ್ನಿಸಿದಳು. ತಾವು ಅಜ್ಞಾನದಿಂದ ಕಾಮಾಂಧರಾಗಿ ಕಳೆದ ದೀರ್ಘಕಾಲದ ಅರಿವೇ ಇಲ್ಲದ ಅವರು "ನೀನು ಇವತ್ತೇ ಬೆಳಿಗ್ಗೆ ಬಂದಿಯಲ್ಲವೆ? ಇಷ್ಟು ಹೊತ್ತು ನಿನ್ನೊಡನೆ ಇದ್ದೆ. ಈಗ ಸಂಧ್ಯಾಕಾಲ ಸಮೀಪಿಸಿದ್ದರಿಂದ ನದಿಗೆ ಹೊರಟಿದ್ದೇನೆ" ಎಂದು ಹೇಳಿದರು. ಆಕೆ ನಕ್ಕು ನಡೆದ ನಿಜಸಂಗತಿಯನ್ನು ಹೇಳಿದಳು. ಅಜ್ಞಾನದಿಂದ ಎಚ್ಚೆತ್ತ ಕಂಡುಮುನಿಯು ಪ್ರಮ್ಲೋಚೆಯನ್ನು ದೇವಲೋಕಕ್ಕೆ ಹೋಗೆಂದು ಅಜ್ಞೆ ಮಾಡಿ ತಾವು ನದೀತೀರಕ್ಕೆ ಬಂದು ಪಶ್ಚಾತ್ತಾಪತಪ್ತರಾಗಿ "ಬ್ರಹ್ಮಪಾರಸ್ತವ"ದಿಂದ ಶ್ರೀಹರಿಯನ್ನು ಆರಾಧಿಸಿದರು. ಆದರಿಂದ ಪ್ರಸನ್ನನಾದ ಭಗವಂತ ಕಂಡುಋಷಿಗಳನ್ನು ಪಾಪಮುಕ್ತರನ್ನಾಗಿ ಮಾಡಿ ಅವರಿಗೆ ಅಪರೋಕ್ಷವನ್ನು ಕರುಣಿಸಿದನು. ಇದೇ ವಿಷ್ಣು-ಪುರಾಣದ ಕಥೆ.

ಪ್ರಚೇತಸರಿಗೆ ಚಂದ್ರನ ಉಪದೇಶ. ಸ್ವಾಯಂಭು ಮನ್ವಂತರದಲ್ಲಿ ಧ್ರುವರಾಯರ ವಂಶದಲ್ಲಿ ಪ್ರಾಚೀನಬರ್ಹಿಯೆಂಬುವರು ಬಂದರು. ಇವರಿಗೆ ಹತ್ತು ಮಂದಿ ಮಕ್ಕಳು; ಎಲ್ಲರಿಗೂ ಪ್ರಚೇತಸರೆಂದೇ ಹೆಸರಾಗಿದ್ದಿತು. ಈ ಪ್ರಚೇತಸರು ತಪಸ್ಸು ಮಾಡಿ ಭಗವಂತನನ್ನು ಒಲಿಸಿಕೊಂಡು ತಮ್ಮ ಕರ್ತವ್ಯವೇನೆಂದು ಕೇಳಿದರು. ಶ್ರೀಹರಿಯು ಅವರಿಗೆ ಜಗತ್ಸೃಷ್ಟಿ ಮಾಡಲು ಅಜ್ಞೆ ಮಾಡಿದನು. ಅದಕ್ಕಾಗಿ ಅವರು ಅಲ್ಲಿ ದಟ್ಟವಾಗಿ ಬೆಳೆದಿದ್ದ ಅರಣ್ಯವನ್ನೆಲ್ಲಾ ತಪಃಪ್ರಭಾವದಿಂದ ಉತ್ಪನ್ನವಾದ ಅಗ್ನಿಯಿಂದ ನಾಶ ಮಾಡಲು ಆರಂಭಿಸಿದರು. ಇದನ್ನು ಕಂಡು ವನಸ್ಪತಿಗಳಿಗೆ ಒಡೆಯನಾದ ಚಂದ್ರನು ಪ್ರಚೇತಸರನ್ನು ಕಂಡು ಸಮಾಧಾನ ಮಾಡಿ ಅವರಿಗೆ ಕಂಡು-ಪ್ರಮ್ಲೋಚೆಯರ ಮಗಳಾದ ಮಾರಿಷಾ ಎಂಬ ಕನ್ಯೆಯನ್ನು ಕೊಟ್ಟು ವಿವಾಹ ಮಾಡಿದನು. ಆಗ ಪ್ರಸನ್ನರಾದ ಪ್ರಚೇತಸರು ಚಂದ್ರನನ್ನು ಕೇಳಲು ಚಂದ್ರನು ಪ್ರಚೇತಸರಿಗೆ ಬ್ರಹ್ಮಪಾರಸ್ತವದ ಮಹಿಮೆಯನ್ನು ವರ್ಣಿಸಿ ಆ ಸ್ತೋತ್ರವನ್ನು ಪಠಿಸುವಂತೆ ಉಪದೇಶ ಮಾಡಿದನು. ಇಷ್ಟು ಪೂರ್ವಕಥೆ ತಿಳಿದರೆ ಮುಂದಿನ ಸ್ತೋತ್ರದ ವಿವರಣೆ ಚೆನ್ನಾಗಿ ಅರ್ಥವಾಗುವುದು.

ಋಷ್ಯಾದಿ ನಿರೂಪಣೆ: ಅಸ್ಯ ಶ್ರೀ ಬ್ರಹ್ಮಪಾರಸ್ತವಮಂತ್ರಸ್ಯ ಕಂಡು ಋಷಿಃ । ವಿಶ್ವೇದೇವಾ ದೇವತಾಃ । ತ್ರಿಷ್ಟುಪ್ ಛಂದಃ । ಪೂಜಾಧಿಕಾರ ಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಹರಿಃ ಓಂ ॥ ಪ್ರಚೇತಸ ಊಚುಃ ।

ಬ್ರಹ್ಮಪಾರಂ ಮುನೇ ಶ್ರೋತು-
ಮಿಚ್ಛಾಮಃ ಪರಮಂ ಸ್ತವಮ್ ।
ಜಪತಾ ಕಂಡುನಾ ದೇವೋ
ಯೇನಾರಾಧ್ಯತ ಕೇಶವಃ ॥ ೧ ॥

(ಭಾವಾರ್ಥ) ಪ್ರಚೇತಸರು ಚಂದ್ರನನ್ನು ಹೀಗೆ ಪ್ರಶ್ನೆ ಮಾಡಿದರು—"ಹೇ ಮನನಶೀಲನಾದ ಚಂದ್ರನೇ, ಯಾವ ಸ್ತೋತ್ರವನ್ನು ಜಪಿಸಿ ಕಂಡುಋಷಿಯು ಕೇಶವನನ್ನು ಆರಾಧಿಸಿದರೋ ಅಂಥಾ ಉತ್ತಮವಾದ ಬ್ರಹ್ಮಪಾರಸ್ತವವನ್ನು ನಾವು ಕೇಳಲು ಬಯಸುತ್ತೇವೆ. ನಮಗೆ ಅದನ್ನು ಉಪದೇಶಿಸಿರಿ.

ಶ್ರೀ ಸೋಮ ಉವಾಚ—

ಪಾರಂ ಪರಂ ವಿಷ್ಣುರನಂತಪಾರಃ
ಪರಃ ಪರೇಭ್ಯಃ ಪರಮಾರ್ಥರೂಪೀ ।
ಸ ಬ್ರಹ್ಮಪಾರಃ ಪರಪಾರಭೂತಃ
ಪರಃ ಪರಾಣಾಮಪಿ ಪಾರಪಾರಃ ॥ ೨ ॥

ಅನ್ವಯಾರ್ಥ : ಸೋಮಃ-ಚಂದ್ರನು, ಉವಾಚ-ಹೇಳಿದನು. ಸಃ ವಿಷ್ಣುಃ-ಆ (ಸಕಲವೇದಪ್ರತಿಪಾದ್ಯನಾದ ಮತ್ತು ಸಾರಭೂತನಾದ) ವಿಷ್ಣುವು, ಪಾರಂ-(ಪೄ ಪಾಲನಪೂರಣಯೋಃ ಎಂಬ ಧಾತುವಿನ ರೂಪ) ಸದಾ ಸರ್ವತ್ರ ವ್ಯಾಪ್ತನಾಹವನು; ಪರಂ-ಬೇರೆಯವನು (ಎಂದರೆ ಲೋಕವಿಲಕ್ಷಣನು), ಅನಂತಪಾರಃ-(ಪಾಲನಾರ್ಥದಲ್ಲಿ ಪೄ ಧಾತುವಿಗೆ ಘಞ್ ಪ್ರತ್ಯಯ ಬಂದಿದೆ—ಪಾರಃ-ಪಾಲಕ) ಅಪರಿಮಿತವಾದ ಲೋಕಪಾಲಕನು ಅಥವಾ ಅನಂತ ಬ್ರಹ್ಮಾಂಡಗಳ ಪಾಲಕನು, ಪರೇಭ್ಯಃ-ಶ್ರೇಷ್ಠರಾದ ರಮಾಬ್ರಹ್ಮಾದಿಗಳಿಗಿಂತ ('ಪರಃ ಶ್ರೇಷ್ಠೋಽರಿ-ದೂರಾನ್ಯೋ-ತ್ತರೇ ಕ್ಲೀಬಂ ತು ಕೇವಲೇ' ಇತಿ ಮೇದಿನೀ), ಪರಃ-ಉತ್ತಮನಾದವನು. ಪರಮಾರ್ಥರೂಪೀ-ಪರಿಪೂರ್ಣವಾದ ಮತ್ತು ಯಥಾರ್ಥವಾದ ರಾಮಕೃಷ್ಣವ್ಯಾಸಾದಿರೂಪಗಳುಳ್ಳವನು. (ತಾಚ್ಛೀಲ್ಯೇ ಇನಿಃ । ಈ ನಾನಾ ರೂಪಗಳನ್ನು ಧರಿಸುವುದು ಆ ವಿಷ್ಣುವಿಗೆ ಸಹಜಸ್ವಭಾವ ಎಂಬುದನ್ನು ಕಡೆಯ 'ಇನಿ' ಪ್ರತ್ಯಯ ತೋರಿಸುತ್ತದೆ.) ಬ್ರಹ್ಮಪಾರಃ—ಬ್ರಹ -ವೇದಗಳಲ್ಲಿ, ಪಾರಃ-ಪ್ರೀತಿಯುಳ್ಳವನು ಅಥವಾ ಅನಂತವೇದಪ್ರತಿಪಾದ್ಯ ('ಬ್ರಹ್ಮತತ್ತ್ವ-ತಪೋ-ವೇದೇ ನ ದ್ವಯೋಃ ಪುಂಸಿ ವೇಧಸಿ' ಇತಿ ಮೇದಿನೀ); ಪರ-ಪಾರಭೂತಃ (ಪರಾಣಾಂ ಶ್ರೇಷ್ಠಾನಾಂ ಬ್ರಹ್ಮಾದೀನಾಮಪಿ, ಪಾರಭೂತಃ-ಸಂಸಾರತಾರಕಃ) ಪರ-ಉತ್ತಮರಾದ ಬ್ರಹ್ಮಾದಿ ದೇವತೆಗಳಿಗೂ, ಪಾರಭೂತಃ-ಸಂಸಾರಸಮುದ್ರವನ್ನು ದಾಟಿಸುವವನು ('ಪಾರಂ ಪರತಟೇ ಪ್ರಾಂತೇ' ಇತಿ ಮೇದಿನೀಕೋಶಃ), ಪರಃ ರಮಾಬ್ರಹ್ಮಾದಿ ಸರ್ವರಿಕ್ಕಿಂತಲೂ ಸರ್ವೋತ್ತಮನು, ಚೇತನಾಚೇತನಾತ್ಮಕ ಸಮಸ್ತಕ್ಕಿಂತಲೂ ಶ್ರೇಷ್ಠತಮನು. ಪರಾಣಾಂ ಅಪಿ-ಶತ್ರುಗಳಿಗೂ ಕೂಡ ('ಪರೋಽರಿಪರಮಾತ್ಮನೋಃ' ಇತಿ ವಿಶ್ವಃ), ಪಾರಪಾರಃ-ಅತಿ ದೂರದಲ್ಲಿರುವವನು.

ತಾತ್ಪರ್ಯ: ಶ್ರೀವಿಷ್ಣುವು ಬ್ರಹ್ಮಾಂಡದ ಒಳಗೆ ಹೊರಗೆಲ್ಲ ವ್ಯಾಪ್ತನಾಗಿದ್ದಾನೆ, ಆದ್ದರಿಂದ ಪಾರಂ ಎಂದು ಹೇಳಲ್ಪಡುತ್ತಾನೆ. ಸಮಸ್ತಕ್ಕೂ ವಿಲಕ್ಷಣನಾಗಿರುವುದರಿಂದ ಅವನನ್ನು 'ಪರಂ' ಎನ್ನುತ್ತಾರೆ. ಅನಂತಬ್ರಹ್ಮಾಂಡನಾಯಕ. ದೇವೋತ್ತಮರೆನಿಸಿಕೊಂಡ ರಮಾಬ್ರಹ್ಮಾದಿ ಸಕಲರಿಗಿಂತಲೂ ಅತ್ಯಂತ ಉತ್ತಮನಾದವನು. ಅವನು ನಿತ್ಯದಲ್ಲೂ ರಾಮಕೃಷ್ಣಾದಿ ಅನಂತರೂಪಗಳುಳ್ಳವನು. ಬ್ರಹ್ಮಾದಿ ಅನಂತ ಜೀವರಾಶಿಗಳಿಗೆ ಸಾಧನಾನಂತರ ಸಂಸಾರಸಾಗರವನ್ನು ದಾಟಿಸುವವನೂ ಇವನೇ. ಸಕಲವೇದಪ್ರತಿಪಾದ್ಯನೂ ಸರ್ವೋತ್ತಮನೂ ಆಗಿರುವುದಲ್ಲದೆ ಯಾವ ಶತ್ರುಗಳಿಗೂ ಸಿಕ್ಕದವನೂ ಆಗಿದ್ದಾನೆ. (ಈ ಶ್ಲೋಕವು ಗಾಯತ್ರಿಯ 'ತತ್ ಭರ್ಗೋ ದೇವಸ್ಯ' ಎಂಬ ಪದಗಳ ಪ್ರತಿಪಾದಕವಾಗಿದೆ.)

ಸ ಕಾರಣಂ ಕಾರಣತಸ್ತತೋಽಪಿ
ತಸ್ಯಾಪಿ ಹೇತುಃ ಪರಹೇತು ಹೇತುಃ ।
ಕಾರ್ಯೇಷು ಚೈವಂ ಸ ಹಿ ಕರ್ಮಕರ್ತೃ-
ರೂಪೈರಶೇಷೈರವತೀಹ ಸರ್ವಮ್ ॥ ೩ ॥

ಅನ್ವಯಾರ್ಥ: ಸಃ-ಆ ವಿಷ್ಣುವು, ಸಃ (ಎಂದು ಮುಂದಿರುವ ಪದ ತೆಗೆದುಕೊಳ್ಳಬೇಕು) (ಸಾರಭೂತತ್ವಾತ್ ಸಃ)-ಸಾರಭೂತನಾದ್ದರಿಂದ ಸಕಾರವಾಚ್ಯನಾಗಿದ್ದಾನೆ. ಕಾರಣಂ-ಜಗದ್ವಿನಾಶಕ್ಕೆ ಕಾರಣನಾಗಿದ್ದಾನೆ. ಕಾರಣತಃ-ಜಗತ್ತಿಗೆ ಕಾರಣಗಳೆಂದು ಪ್ರಸಿದ್ಧವಾದ ಸತ್ವರಜಸ್ತಮೋಗುಣಗಳಿಗಿಂತಲೂ, ಪ್ರಧಾನಪುರುಷರೆಂಬ ಲಕ್ಷ್ಮೀಬ್ರಹ್ಮಾದಿಗಳಿಗಿಂತಲೂ, ತತಃ-(ತನು ವಿಸ್ತಾರೇ ಎಂಬ ಧಾತು)-ವ್ಯಾಪ್ತನು, ಅಪಿ-ಮತ್ತು, ತಸ್ಯ ಅಪಿ-ಪ್ರತ್ಯಕ್ಷಸಿದ್ಧವಾದ ಈ ಜಗತ್ತಿಗೂ, ಹೇತುಃ-ಸೃಷ್ಟಿಸ್ಥಿತಿಲಯನಿಯಮನಾದಿಗಳಿಗೆ ಮುಖ್ಯಕಾರಣನು, ಪರ-ಉತ್ತಮವಾದ (ಅಥವಾ ತನ್ನಿಂದ ಭಿನ್ನವಾದ), ಹೇತು-ಕಾರಣಗಳಾದ ಎಂದರೆ ಚೇತನಾಚೇತನಾತ್ಮಕ ಪ್ರಪಂಚಕ್ಕೆ ಕಾರಣರೆನಿಸಿಕೊಂಬ ರಮಾಬ್ರಹ್ಮಾದಿಗಳಿಗೂ, ಹೇತುಃ-ಕಾರಣನು ಎಂದರೆ ಜ್ಞಾನಶಕ್ತಿಪ್ರದನು. ಚ-ಮತ್ತು, ಕಾರ್ಯೇಷು (ಚ)-ಜಗತ್ಸೃಷ್ಟ್ಯಾದಿ ಸಕಲ ಕಾರ್ಯಗಳಲ್ಲಿಯೂ, ಏವಂ-ಹೀಗೆ ಎಂದರೆ ಹಿಂದೆ ಹೇಳಿದಂತೆ, ತತಃ (ಎಂದು ಆವೃತ್ತಿ ಮಾಡಿಕೊಳ್ಳಬೇಕು) - ವ್ಯಾಪ್ತನಾಗಿದ್ದಾನೆ. (ಅರ್ಥಾತ್ ಬ್ರಹ್ಮನಲ್ಲಿ ನಿಂತು ಸೃಷ್ಟಿಯನ್ನೂ, ರುದ್ರನಲ್ಲಿ ನಿಂತು ಸಂಹಾರಕಾರ್ಯವನ್ನೂ ಹೀಗೆಯೇ ಇಂದ್ರಿಯಾದ್ಯಭಿಮಾನಿಗಳಲ್ಲಿ ನಿಂತು ಸಕಲೇಂದ್ರಿಯ ಕಾರ್ಯಗಳನ್ನೂ ಮಾಡಿಸುತ್ತಾನೆ. 'ಏಕ ಏವ ಮಹಾಶಕ್ತಿಃ ಕುರುತೇ ಸರ್ವಮಂಜಸಾ' ಎಂದು ವಾಮನ ಪುರಾಣದಲ್ಲಿ ಹೇಳಿದಂತೆ ಅಲ್ಲಲ್ಲಿ ನಿಂತು ಆಯಾ ಶಕ್ತಿಗಳನ್ನು ಪ್ರೇರಿಸುತ್ತಾ ಸಕಲ ಕಾರ್ಯಗಳನ್ನೂ ಅಪರಿಮಿತ ಶಕ್ತಿಯುಳ್ಳ ಇವನೊಬ್ಬನೇ ಮಾಡುತ್ತಾನೆಂದು ಭಾವ.) ಹಿ-ಇದು

ಶ್ರುತಿಸ್ಮೃತಿಪ್ರಸಿದ್ಧವು. 'ತದಧೀನತ್ವಾದರ್ಥವತ್'' (ಬ್ರಹ್ಮಸೂತ್ರ ೧/೪/೩) ಎಂದರೆ ಪ್ರಧಾನಾದಿಗಳೆಲ್ಲವೂ ಈ ವಿಷ್ಣುವಿನ ಅಧೀನವಾಗಿರುವುದರಿಂದ ಅವರಲ್ಲಿ ಹೇಳಿದ ವಿಶೇಷ ಗುಣಾದಿಗಳೆಲ್ಲವೂ ಈ ವಿಷ್ಣುವಿಗೆ ಹೊಂದುತ್ತವೆ — ಎಂದು ಬ್ರಹ್ಮಸೂತ್ರದಲ್ಲೂ, ಭವಿಷ್ಯತ್ ಪುರಾಣದಲ್ಲಿ

'ಕರ್ತಾ ಸರ್ವಸ್ಯ ವೈ ವಿಷ್ಣುಃ ಏಕ ಏವ ನ ಸಂಶಯಃ ।
ಇತರೇಷಾಂ ತು ಸತ್ತಾದ್ಯಾ ಯತ ಏವ ತದಾಜ್ಞಯಾ ॥

ಎಂದರೆ ಸಕಲವನ್ನೂ ಮಾಡುವವನು ಆ ವಿಷ್ಣುವೊಬ್ಬನೇ, ಇದರಲ್ಲಿ ಯಾವ ಸಂದೇಹವೂ ಇಲ್ಲ. ಏಕೆಂದರೆ ಇತರರ ಸತ್ತಾದಿಗಳೇ ಆ ವಿಷ್ಣುವಿನ ಆಜ್ಞೆಯಿಂದ ಉಂಟಾಗುವುದರಿಂದ ಸರ್ವಕರ್ತ ವಿಷ್ಣುವೊಬ್ಬನೇ ಎಂದು ಸಿದ್ಧವಾಗುತ್ತದೆ (ಸೂ.ಭಾ. ೨/೩/೧೧) ಎಂದೂ ಹೇಳಿರುವುದನ್ನು ಹಿ ಶಬ್ದ ಸೂಚಿಸುತ್ತದೆ. ಸಃ-ಅವನು (ವಿಷ್ಣುವು), ಕರ್ಮ-ಕರ್ತೃ-ರೂಪೈಃ-ಕಾರ್ಯರೂಪದಿಂದಲೂ ಕರ್ಮಕ್ಕೆ ವಿಷಯವಾದ ಸಾಧನವಸ್ತುರೂಪದಿಂದಲೂ ಕರ್ಮ ಮಾಡುವ ಕರ್ತೃರೂಪದಿಂದಲೂ (ಎಂದರೆ ಪುರುಷ ಮತ್ತು ಈಶ್ವರ ಈ ಎರಡೂ ರೂಪದಿಂದಲೂ) ಅಂತರ್ಯಾಮಿಯಾಗಿಯೂ ಕಾಲರೂಪಿಯಾಗಿಯೂ ಇದ್ದು, ಅಶೇಷೈಃ-ತನ್ನ ಅನಂತರೂಪಗಳಿಂದ, ಸರ್ವಂ-ಸಕಲ ಜಗತ್ತನ್ನೂ, ಇಹ-ಈ ಲೋಕದಲ್ಲಿ, ಅವತಿ-ರಕ್ಷಿಸುತ್ತಾನೆ)

ತಾತ್ಪರ್ಯ : ' ಯೋ ನಃ ಪಿತಾ ಜನಿತಾ ' (ಋ. ೧೦/೮೨/೩) ಯಾರು ನಮಗೆ ತಂದೆಯೂ ಜನಕನೂ ಆಗಿದ್ದಾನೋ ಎಂದು ಋಗ್ವೇದದಲ್ಲೂ ' ಯತೋ ವಾ ಇಮಾನಿ ಭೂತಾನಿ ಜಾಯಂತೇ' ಯಾವ ಪರಮಾತ್ಮನಿಂದ ಈ ಸಕಲ ಪೃಥ್ವ್ಯಾದಿ ಪಂಚಭೂತಗಳೂ ಸ್ಥಾವರಜಂಗಮಾತ್ಮಕ ಪ್ರಾಣಿಸಮೂಹವೂ ಹುಟ್ಟುತ್ತದೋ, ಹುಟ್ಟಿ ಜೀವಿಸಿ ಕೊನೆಗೆ ನಾಶ ಹೊಂದುತ್ತವೋ ಎಂದು ತೈತ್ತಿರೀಯೋಪನಿಷತ್ತಿನಲ್ಲಿಯೂ (೩ ವಲ್ಲಿ ೧ ಅನು.) ಹೇಳಿದ ಪ್ರಕಾರ ಶ್ರೀಹರಿಯೇ ಈ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನು. ಅವನೇ ಕರ್ತೃ-ಕಾರಣ-ಕ್ರಿಯೆ ಎಲ್ಲದರಲ್ಲೂ ಇದ್ದು ಅನಂತರೂಪಗಳಿಂದ ಪ್ರೇರಕನಾಗಿದ್ದು ನಡೆಸುವನಲ್ಲದೆ ಸಕಲೇಂದ್ರಿಯಪ್ರೇರಕನೂ ಆಗಿದ್ದು ಈ ಜಗತ್ತನ್ನು ಪರಿಪಾಲಿಸುತ್ತಾನೆಂದು ಭಾವ. ಈ ಶ್ಲೋಕವು ಗಾಯತ್ರಿಯ 'ಸವಿತುಃ ವರೇಣ್ಯಃ, ಧಿಯೋ ಯೋ ನಃ ಪ್ರಚೋದಯಾತ್'' ಎಂಬ ಪದಗಳನ್ನೇ ವಿವರಿಸುತ್ತದೆಯೆಂದು ತಿಳಿಯಬೇಕು.)

ಬ್ರಹ್ಮಪ್ರಭುರ್ಬ್ರಹ್ಮ ಸ ಸರ್ವಭೂತೋ
ಬ್ರಹ್ಮಪ್ರಜಾನಾಂ ಪತಿರಚ್ಯುತೋಽಸೌ ।
ಬ್ರಹ್ಮಾವ್ಯಯಂ ನಿತ್ಯಮಜಂ ಸ ವಿಷ್ಣು-
ರಪಕ್ಷಯಾದ್ಯೈರಖಿಲೈರಸಂಗೀ ॥ ೪ ॥

ಅನ್ವಯಾರ್ಥ : ಅಸೌ-ಈ ವಿಷ್ಣು, ಬ್ರಹ್ಮಪ್ರಭುಃ-ಮುಖ್ಯ ವೇದಾಭಿಮಾನಿಯಾದ್ದರಿಂದ ಬ್ರಹ್ಮಶಬ್ದವಾಚ್ಯಳಾದ ಲಕ್ಷ್ಮೀದೇವಿಗೂ ಒಡೆಯನು. ಬ್ರಹ್ಮ-(ಛಾಂದೋಗ್ಯಭಾಷ್ಯದಲ್ಲಿ ಹೇಳಿದ 'ಸರ್ವಂ ಪೂರ್ಣಗುಣತ್ವತಃ । ತಸ್ಯ ಬ್ರಹ್ಮ' ಎಂಬ ಸದ್ಗುಣವೆಂಬ ಪ್ರಮಾಣಾನುಸಾರ)-ಗುಣಪೂರ್ಣನಾಗಿದ್ದಾನೆ. ಸಃ-ಅವನು, ಸರ್ವಭೂತಃ-'ಸರ್ವಾಂತರ್ಯಾಮಿಕೋ ವಿಷ್ಣುಃ ಸರ್ವನಾಮ್ನಾಭಿಧೀಯತೇ' (ಸೂ.ಭಾ. ೧/೧/೧೭) ಎಂದರೆ ವಿಷ್ಣು ಸರ್ವರಲ್ಲೂ ಅಂತರ್ಯಾಮಿಯಾಗಿದ್ದು ಸಕಲ ಪ್ರೇರಕನಾಗಿರುವುದರಿಂದ ಸರ್ವನಾಮಗಳಿಂದಲೂ ಕರೆಯಲ್ಪಡುತ್ತಾನೆ ಎಂಬ ಸೂತ್ರಭಾಷ್ಯೋದಾಹೃತ ಪ್ರಮಾಣಾನುಸಾರ ಪೃಥಿವ್ಯಾದಿ ಪಂಚಭೂತಗಳಿಗೂ ಸ್ಥಾವರಜಂಗಮಾತ್ಮಕ ಸಮಸ್ತ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿ ಪ್ರೇರಕನಾಗಿದ್ದಾನೆ. ಅಸೌ-ಈವನು, ಅಚ್ಯುತಃ-ಚ್ಯುತಿರಹಿತನು. ಬ್ರಹ್ಮಪ್ರಜಾನಾಂ ಪತಿಃ-ವೇದಾಧ್ಯಯನ ಮಾಡಿ ವಿಷ್ಣು ಸಕಲವೇದಪ್ರತಿಪಾದ್ಯನೆಂಬುದನ್ನು ತಿಳಿದು ಅವನೇ ಸರ್ವೋತ್ತಮನೆಂದು ಉಪಾಸನೆ ಮಾಡುವ ಬ್ರಹ್ಮಜ್ಞಾನಿಗಳಿಗೆ (ಪಾತೀತಿ ಪತಿಃ-ಪಾಲಕಃ) ಪಾಲಕನಾಗಿದ್ದಾನೆ. ಬ್ರಹ್ಮ-ಸುಧಾ (ಜಿಜ್ಞಾಸಾಧಿಕರಣ)ದಲ್ಲಿ ಉದಾಹರಿಸಿದ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ? ಬೃಹಂತೋ ಹ್ಯಸ್ಮಿನ್ ಗುಣಾಃ' ಎಂದರೆ 'ಇವನನ್ನು ಬ್ರಹ್ಮನೆಂದು ಏಕೆ ಕರೆಯುತ್ತಾರೆ? ಎಂದರೆ 'ಇವನಲ್ಲಿ ಅನಂತ ಕಲ್ಯಾಣಗುಣಗಳು ಬೃಂಹಿತವಾಗಿ ಅಥವಾ ತುಂಬಿತುಳುಕಾಡುತ್ತಾ ಇವೆ, ಆದ್ದರಿಂದ ಬ್ರಹ್ಮನೆನ್ನುತ್ತಾರೆ' ಎಂಬ ಶ್ರುತಿಯಂತೆ ಅನಂತಕಲ್ಯಾಣ ಗುಣಪರಿಪೂರ್ಣನಾದವನು ಎಂದರ್ಥ. ಅವ್ಯಯಂ-'ನ ಕರ್ಮಣಾ ವರ್ಧತೇ ನೋ ಕನೀಯಾನ್' (ಬೃ. ಉ. ೬/೪/೨೩) ಎಂದರೆ 'ಪುಣ್ಯಕರ್ಮದಿಂದ ವೃದ್ಧಿಯನ್ನೂ ಹೊಂದುವುದಿಲ್ಲ, ಅಥವಾ ಪಾಪಕರ್ಮದಿಂದ ಹ್ರಾಸವನ್ನೂ ಹೊಂದುವುದಿಲ್ಲ' ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದಂತೆ ವೃದ್ಧಿಹ್ರಾಸಾದಿ ಯಾವ ವಿಕಾರವೂ ಇಲ್ಲದವನು (ವಿ ಪೂರ್ವಕ ಇಣ್ ಧಾತುವಿನ ಮೇಲೆ 'ಏರಚ್' (ಪಾ.೩/೩/೫೬) ಎಂಬ ಸೂತ್ರದಂತೆ ಅಚ್ ಪ್ರತ್ಯಯ ಬಂದು ವ್ಯಯ ಎಂದಾಗುತ್ತದೆ; ಇದಕ್ಕೆ ವಿಕಾರ ಅಥವಾ ರೂಪಾಂತರ ಎಂದರ್ಥ, ಅದು ಇಲ್ಲದ್ದು ಅವ್ಯಯ ಅರ್ಥಾತ್ ವಿಕಾರರಹಿತವಾದದ್ದು ಎಂದರ್ಥ). ನಿತ್ಯಂ-ಸ್ವರೂಪನಾಶವಿಲ್ಲದಿರುವುದರಿಂದ ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿಯೂ ಶಶ್ವದೇಕಪ್ರಕಾರವಾಗಿರುವವನು. ಅಜಂ-ಉತ್ಪತ್ತಿರಹಿತನು, ಸಃ-ಆ, ವಿಷ್ಣುಃ-ವಿಷ್ಣುವು, ಅಪಕ್ಷಯಾದ್ಯೈಃ ಅಖಿಲೈಃ (ದೋಷೈಃ)-ಗೀತಾತಾತ್ಪರ್ಯದಲ್ಲಿ ಹೇಳಿದ

ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿ-ರಪೂರ್ಣತಾ।
ನಾಶಶ್ಚತುರ್ವಿಧಃ ಪ್ರೋಕ್ತಃ ತದಭಾವೋ ಹರೇಃ ಸದಾ॥

ಎಂದರೆ 'ಸದಾ-ಸರ್ವದಾ ಒಂದೇ ರೀತಿ ಇಲ್ಲದಿರುವುದು (ಬಾಲ್ಯ-ವೃದ್ಧಾಪ್ಯಾದಿ ಅವಸ್ಥಾ ವಿಶೇಷಗಳು ಬರುವುದು, ರೋಗ ಬಂದರೆ ಅಂಥಾ ಭೋಜನಾದಿಗಳಿಲ್ಲದಿದ್ದರೆ ಕೃಶ ವಾಗುವುದು ಇತ್ಯಾದಿ ಸಕಲ ವಿಧವಾದ ವ್ಯತ್ಯಾಸಗಳು ಎಂದಾದರೂ ಬರುವುದು), ದೇಹವೇ ನಾಶವಾಗುವುದು ಅಥವಾ ಮರಣ, ದುಃಖಪ್ರಾಪ್ತಿ ಮತ್ತು ಅಪೂರ್ಣತೆ (ಒಂದು ಕಡೆ ಇದ್ದರೆ ಇನ್ನೊಂದು ಕಡೆ ಇಲ್ಲದಿರುವುದು, ಈಗಿದ್ದರೂ ಹಿಂದಾಗಲಿ ಮುಂದಾಗಲಿ ಇಲ್ಲದಿರುವುದು) ಹೀಗೆ ನಾಶವು ನಾಲ್ಕು ವಿಧವಾಗಿದೆ; ಈ ನಾಲ್ಕೂ ಶ್ರೀಹರಿಯಲ್ಲಿ ಎಂದೆಂದಿಗೂ ಇಲ್ಲ' ಎಂಬ ಮಹಾವರಾಹಪುರಾಣವಾಕ್ಯದಂತೆ ದೇಹನಾಶ, ವೃದ್ಧಿ-ಹ್ರಾಸಾದಿ ಸಕಲ ವಿಧವಾದ ದೋಷಗಳಿಂದಲೂ, ಅಸಂಗೀ=ಯಾವ ಕಾಲಕ್ಕೂ ಸಂಬಂಧವಿಲ್ಲದವನು.

ತಾತ್ಪರ್ಯ: ಆ ವಿಷ್ಣು ಜಡಪ್ರಕೃತಿಗೇ ಒಡೆಯಳಾದ ಲಕ್ಷ್ಮೀದೇವಿಗೇ ಪತಿಯು. ಅನಂತಕಲ್ಯಾಣಗುಣಗಳಿಂದ ತುಂಬಿ ತುಳುಕಾಡುತ್ತಿರುವುದರಿಂದ 'ಬ್ರಹ್ಮ'ನೆಂದು ಕರೆ ಯಲ್ಪಡುತ್ತಾನೆ. ಸಕಲ ಭೂತಗಳಲ್ಲೂ ಅಂತರ್ಯಾಮಿಯಾಗಿದ್ದು ಸಕಲ ಪ್ರಾಣಿಗಳಿಗೂ ಪ್ರೇರಕನಾಗಿದ್ದಾನೆ. ಪೃಥಿವ್ಯಾದಿ ಪಂಚಭೂತಗಳಲ್ಲಿ ಅನಿರುದ್ಧಾದಿ ಪಂಚರೂಪದಿಂದಿದ್ದು ಪೃಥಿವ್ಯಾದಿ ನಾಮಗಳಿಂದಲೇ ಕರೆಯಲ್ಪಡುತ್ತಾ ಆ ಪಂಚಭೂತಗಳ ಕಾರ್ಯವನ್ನೇ ನಡೆಸುತ್ತಾನೆ. (ಇದರ ಹೆಚ್ಚಿನ ವಿವರಣೆ ತೈತ್ತಿರೀಯ ಉಪನಿಷತ್ತಿನ ಶಿಕ್ಷಾವಲ್ಲಿಯಲ್ಲಿ ಕಾಣಬಹುದು.) ವೇದವಿದ್ಯಾಪಾರಂಗತರಾದ ಬ್ರಹ್ಮಜ್ಞಾನಿಗಳಿಗೆ ಮೋಕ್ಷಪ್ರದನಾಗಿ ಮುಕ್ತರಿಗೂ ಸ್ವಾಮಿಯಾಗಿದ್ದಾನೆ. ಅವನಿಗೆ ದೇಹಹಾನ್ಯಾದಿ ಯಾವ ವಿಧವಾದ ದೋಷವೂ ಯಾವ ಕಾಲಕ್ಕೂ ಇಲ್ಲ. ಅವನು ಶಶ್ವದೇಕಪ್ರಕಾರನಾಗಿರುತ್ತಾನೆ. ಅವನಿಗೆ ಉತ್ಪತ್ತಿಯೂ ಇಲ್ಲ, ನಾಶವೂ ಇಲ್ಲ, ವೃದ್ಧಿಹ್ರಾಸಾದಿಗಳು ಮೊದಲೇ ಇಲ್ಲ. ಈ ಶ್ಲೋಕವು 'ಸರ್ವಂ ಖಲ್ವಿದಂ ಬ್ರಹ್ಮ'=ಈ ಸಕಲ ಜಗತ್ತೂ ಬ್ರಹ್ಮನೆಂಬ ವಿಷ್ಣ್ವಧೀನವಾಗಿದೆ, 'ಏಕೋ ವಶೀ ಸರ್ವಭೂತಾಂತರಾತ್ಮಾ' (ಕಠೋಪನಿಷತ್ ೨ ಅ., ೨ ವ., ೧೨ ಮಂ.) 'ಆ ಹರಿಯು ಸ್ವತಂತ್ರನಾದ್ದರಿಂದ ಏಕನೆಂದೂ ಕರೆಯಲ್ಪಡುತ್ತಾನೆ ಸಕಲವನ್ನೂ ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೆ. ಹೇಗೆಂದರೆ ಸಕಲ ಪ್ರಾಣಿಗಳ ಅಂತರ್ಯಾಮಿ ನಾಗಿದ್ದಾನೆ,' 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (ಶ್ವೇತಾ. ೬-೧೧) 'ಸಕಲವನ್ನೂ ನೋಡುವ ಸರ್ವಸಾಕ್ಷಿ, ಸಮಾಭ್ಯಧಿಕಶೂನ್ಯನು ಅಥವಾ ಜಡಭಾಗರಹಿತವಾದ ಮತ್ತು ಕೇವಲ ಜ್ಞಾನಾನಂದಮಯವಾದ ದೇಹವುಳ್ಳವನು, ಸತ್ವಾದಿಗುಣತ್ರಯರಹಿತನು' 'ನಿರಂಜನೋ ನಿರವದ್ಯಃ' 'ದೋಷರಹಿತನು ವರ್ಣನಾತೀತನು' ಮೊದಲಾದ ಶ್ರುತಿಗಳ ಅರ್ಥವನ್ನು ಸಂಗ್ರಹಿಸಿ ಹೇಳುತ್ತದೆ.

(ಮುಂದಿನ ಶ್ಲೋಕಕ್ಕೆ ಅವತಾರಿಕೆ) ಹೀಗೆ ಮೂರು ತ್ರಿಷ್ಟುಪ್ ಶ್ಲೋಕಗಳಿಂದ ವಿಷ್ಣುವನ್ನು ಸ್ತುತಿಸಿದ ಕಂಡುಋಷಿಗಳು ತಮ್ಮ ಸಕಲ ಪಾಪಗಳೂ ನಾಶವಾಗಲೆಂದು

ಭಗವಂತನನ್ನು ಪ್ರಾರ್ಥಿಸಿಕೊಳ್ಳುತ್ತಾರೆ. (ಆದ್ದರಿಂದ ಅವರಂತೆ ಯಾರುಯಾರು ಈ ಸ್ತೋತ್ರ ಪಠಿಸುತ್ತಾರೋ ಅವರ ಸಕಲ ಪಾಪಗಳೂ ನಾಶವಾಗುತ್ತವೆ)—

ಅನುಷ್ಟುಪ್ ಛಂದಸ್ಸು

ಬ್ರಹ್ಮಾಕ್ಷರಮಜಂ ನಿತ್ಯಂ ಯಥಾಸೌ ಪುರುಷೋತ್ತಮಃ ।
ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥ ೫ ॥

ಅನ್ವಯಾರ್ಥ : ಅಸೌ-ಈ ಹಿಂದೆ ವರ್ಣಿಸಿದ, ಪುರುಷೋತ್ತಮಃ-ಕ್ಷರಾಕ್ಷರ ಪುರುಷರಿಗಿಂತಲೂ, ಉತ್ತಮಪುರುಷನಾದ ಶ್ರೀಹರಿಯು, ಯಥಾ-ಹೇಗೆ, ಬ್ರಹ್ಮ-ಸಕಲ ಕಲ್ಯಾಣಗುಣಗಳಿಂದ ಪರಿಪೂರ್ಣನೋ ಅಥವಾ ಸಕಲವೇದಪ್ರತಿಪಾದ್ಯನೋ, ಅಕ್ಷರಂ-ಚತುರ್ವಿಧನಾಶರಹಿತನೋ, ಅಜಂ-ಜನನ ಅಥವಾ ಉತ್ಪತ್ತಿರಹಿತನೋ, ನಿತ್ಯಂ-ಕಾಲತ್ರಯದಲ್ಲೂ ಏಕಪ್ರಕಾರವಾಗಿರುವನೋ, ತಥಾ-ಹಾಗೆ, ಮಮ-ನನ್ನ, ರಾಗಾದಯೋ ದೋಷಾಃ-ಕಾಮಕ್ರೋಧಾದಿ ಸಕಲ ದೋಷಗಳೂ (ಪಾಪಗಳೂ), ಪ್ರಶಮಂ ಪ್ರಯಾಂತು-ಸಂಪೂರ್ಣವಾಗಿ ನಾಶವಾಗಿ ಹೋಗಲಿ, ಅವುಗಳ ಬಾಧೆಯಿಂದ ನಾನು ಸರ್ವಥಾ ಮುಕ್ತನಾಗುವಂತೆ ಆಗಲಿ.

ತಾತ್ಪರ್ಯ : ಪರಮಾತ್ಮನು ಸಕಲ ಗುಣಪರಿಪೂರ್ಣನು, ನಾಶರಹಿತನೂ, ಉತ್ಪತ್ತಿಯಿಲ್ಲದವನೂ ಸರ್ವದೇಶಪ್ರಕಾರವಾಗಿರುವವನೂ ಆಗಿರುವುದರಿಂದ ಪುರುಷೋತ್ತಮನೆಂದು ಶಾಸ್ತ್ರಗಳಲ್ಲಿ ಕರೆಯಲ್ಪಟ್ಟಿದ್ದಾನೆ. ಅವನು ನಿರ್ದೋಷನೆಂದೂ, ಉತ್ಪತ್ತಿ-ನಾಶರಹಿತನೆಂದೂ ಧ್ಯಾನ ಮಾಡುತ್ತಿರುವುದರಿಂದ ನನ್ನ ಕಾಮ-ಕ್ರೋಧ-ಮೋಹಾದಿ ಸಕಲ ದೋಷಗಳೂ ನಿವಾರಣೆಯಾಗಲಿ, ನಾನು ಪರಿಶುದ್ಧನಾಗುವಂತಾಗಲಿ.

ಶ್ರೀ ಸೋಮ ಉವಾಚ—

ಯ ಏತದ್ ಬ್ರಹ್ಮಪಾರಾಖ್ಯಂ ಸಂಸ್ತವಂ ಪರಮಂ ಜಪನ್ ।
ಅವಾಪ ಪರಮಂ ಸಿದ್ಧಿಂ ಸ ಸಮಾರಾಧ್ಯ ಕೇಶವಮ್ ॥ ೬ ॥

ಅನ್ವಯಾರ್ಥ : (ಹಿಂದಿನ ಶ್ಲೋಕಕ್ಕೆ ಕಂಡುಋಷಿಗಳ ಪ್ರಾರ್ಥನೆ ಮುಗಿಯಿತು.) ಶ್ರೀಸೋಮಃ-ಚಂದ್ರನು, ಉವಾಚ-ಪ್ರಾಚೇತಸರಿಗೆ ಹೇಳಿದನು. ಯಃ-ಯಾವ ಕಂಡುಋಷಿಯ ಕಥೆಯನ್ನು ಹೇಳಿದೆನೋ, ಸಃ-ಆ ಕಂಡುಋಷಿಯು, ಏತತ್-ಈ (ಹಿಂದೆ ನಿರೂಪಣೆ ಮಾಡಿದ) ಪರಮಂ-ಶ್ರೇಷ್ಠವಾದ, ಬ್ರಹ್ಮಪಾರಾಖ್ಯಂ ಸಂಸ್ತವಂ-ಬ್ರಹ್ಮಪಾರ ಎಂಬ ಉತ್ತಮ ಸ್ತವವನ್ನು, ಜಪನ್-ಜಪಿಸುತ್ತಾ, ಕೇಶವಂ-ಶ್ರೀಹರಿಯನ್ನು, ಸಮಾರಾಧ್ಯ-ಆರಾಧನೆ ಮಾಡಿ, ಪರಮಾಂ ಸಿದ್ಧಿಂ ಅವಾಪ-ಉತ್ಕೃಷ್ಟವಾದ ಸಿದ್ಧಿಯನ್ನು ಪಡೆದನು.

ತಾತ್ಪರ್ಯ : ಹೇ ಪ್ರಚೇತಸರೇ, ಈ ಪ್ರಕಾರ ಕಂಡುಮುನಿಯು ಭಗವಂತ ಶ್ರೀಕೇಶವನನ್ನು ಈ ಶ್ರೇಷ್ಠವಾದ ಬ್ರಹ್ಮಪಾರಸ್ತವವನ್ನು ಜಪಿಸುತ್ತಾ ಆರಾಧಿಸಿ ಸಿದ್ಧಿಯನ್ನು ಪಡೆದನು.

ಸೂಚನೆ: ಪ್ರಾಯಶಃ ಎಲ್ಲಾ ಪುಸ್ತಕಗಳಲ್ಲೂ ಮೇಲೆ ಹೇಳಿದಂತೆ ಆರು ಶ್ಲೋಕಗಳೇ ಇವೆ. ಆದರೆ ಮದ್ರಾಸಿನಲ್ಲಿ ತೆಲುಗುಲಿಪಿಯಲ್ಲಿ 1914ರಲ್ಲಿ ಮುದ್ರಿತವಾದ 'ಶ್ರೀ ಆಹ್ನಿಕಮಂಜರಿ' ಎಂಬ ಪುಸ್ತಕದಲ್ಲಿ ಮಾತ್ರ ಮುಂದಿನ ಒಂದು ಶ್ಲೋಕವನ್ನು ಹೆಚ್ಚಾಗಿ ಸೇರಿಸಿದೆ. ಅದು ಫಲಶ್ರುತಿಯೇ ಆಗಿರುವುದರಿಂದ ಕೆಳಗೆ ಆ ಶ್ಲೋಕವನ್ನೂ ಅದರ ಅರ್ಥವನ್ನೂ ಬರೆದು ಸೇರಿಸಿದೆ. ಇದನ್ನು ಹೇಳಿಕೊಳ್ಳುವುದರಲ್ಲಿ ಯಾವ ಅಡ್ಡಿಯೂ ಇಲ್ಲ.

ಸ್ತವದ ಫಲಶ್ರುತಿ

ಇಮಂ ಸ್ತವಂ ಯಃ ಪಠತಿ ಶೃಣುಯಾದ್ವಾಪಿ ನಿತ್ಯಶಃ ।
ಸ ಕಾಮದೋಷೈರಖಿಲೈ—ರ್ಮುಕ್ತಃ ಪ್ರಾಪ್ನೋತಿ
ವಾಂಛಿತಮ್ ॥ ೭ ॥

ಇತಿ ಶ್ರೀವಿಷ್ಣುಪುರಾಣೇ ಪ್ರಾಚೇತಸ-ಚಂದ್ರಸಂವಾದೇ
ಬ್ರಹ್ಮಪಾರಸ್ತೋತ್ರಂ ಸಂಪೂರ್ಣಮ್

ಅನ್ವಯಾರ್ಥ: ಯಃ-ಯಾರು, ಇಮಂ ಸ್ತವಂ-ಈ ಬ್ರಹ್ಮಪಾರಸ್ತವವನ್ನು, ನಿತ್ಯಶಃ-ಪ್ರತಿನಿತ್ಯವೂ, ಪಠತಿ-ಓದುತ್ತಾನೋ (ಪಠಿಸುತ್ತಾನೋ), ವಾ-ಅಥವಾ, ಶೃಣುಯಾತ್ ಅಪಿ-ಶ್ರವಣ ಮಾಡುತ್ತಾನೋ, ಸಃ-ಅವನು, ಅಖಿಲೈಃ-ಸಮಸ್ತವಾದ, ಕಾಮದೋಷೈಃ-ಕಾಮಕ್ರೋಧಾದಿ ದೋಷಗಳಿಂದಲೂ, (ಬಹುವಚನಂ ಆದ್ಯರ್ಥೇ ಎಂದಿರುವುದರಿಂದ 'ದೋಷೈಃ' ಎಂಬ ಬಹುವಚನದಿಂದ ಕಾಮದ ಜೊತೆ ಕ್ರೋಧ. ಲೋಭಾದಿ ಸಕಲ ದುರ್ಗುಣಗಳನ್ನೂ ಸೇರಿಸಿಕೊಳ್ಳಬೇಕು), ಮುಕ್ತಃ-ಬಿಡುಗಡೆ ಹೊಂದಿ, ವಾಂಛಿತಂ-ಇಷ್ಟಾರ್ಥವನ್ನು, ಪ್ರಾಪ್ನೋತಿ-ಪಡೆಯುತ್ತಾನೆ.

ತಾತ್ಪರ್ಯ : ಈ ಸ್ತೋತ್ರವನ್ನು ನಿತ್ಯವೂ ಪಠನ ಮಾಡಿದರೆ ಅಥವಾ ಶ್ರವಣ ಮಾಡಿದರೆ, ಸಕಲ ಕಾಮಕ್ರೋಧಾದಿ ದೋಷಗಳೂ ನಿವಾರಣೆಯಾಗುತ್ತವೆ. ಅವನು ನೆನೆಸಿಕೊಂಡ ಇಷ್ಟಾರ್ಥವು ನೆರೆಗೂಡುತ್ತದೆ ಎಂಬಲ್ಲಿಗೆ ಶ್ಲೋಕಾಭಿಪ್ರಾಯಃ.

ಬ್ರಹ್ಮಪಾರಸ್ತವಾರ್ಥೋಽಯಂ ಫಲಾರೀಯಮತಾನುಗಃ ।
ಕರ್ಣಾಟಭಾಷಯಾ ಪ್ರೋಕ್ತಃ ಕಿಂಚಿದ್ವಿಸ್ತರಪೂರ್ವಕಮ್ ।
ವರ್ಣನಾ ವಿಷ್ಣುತೀರ್ಥೇನ ಪ್ರೀಯೇತಾಂ ಮಧ್ವಕೇಶವೌ ।

ಇಲ್ಲಿಗೆ ವಿಷ್ಣುಪುರಾಣೋಕ್ತ ಬ್ರಹ್ಮಪಾರಸ್ತವಾರ್ಥವು ಸಂಪೂರ್ಣವಾಯಿತು.

ಶ್ರೀಕೃಷ್ಣಾರ್ಪಣಮಸ್ತು

ಘಂಟಾನಾದಃ

ದೇವರ ಜಗಲಿಯನ್ನು ಏರಿ ಬ್ರಹ್ಮಪಾರಸ್ತವವನ್ನು ಪಠಿಸಿದ ಬಳಿಕ ಗಂಟೆಯನ್ನು ಬಾರಿಸಬೇಕೆಂಬುದು 'ಪದ್ಯಮಾಲಾ' ಪದ್ಧತಿ. ಕೆಲವರಲ್ಲಿ ದೀಪವನ್ನು ಉಜ್ಜ್ವಲಗೊಳಿಸಿದ ನಂತರ ತಾರತಮ್ಯಸ್ತೋತ್ರ ಹೇಳಿಕೊಂಡ ಬಳಿಕವೇ ಗಂಟೆ ಬಾರಿಸಿ ದೇವರನ್ನು ತೆಗೆದಿಟ್ಟು ಸಂಕಲ್ಪ ಮಾಡಿ ಕೊನೆಗೆ ಬ್ರಹ್ಮಪಾರಸ್ತವವನ್ನು ಹೇಳಿಕೊಳ್ಳುವ ಪದ್ಧತಿಯೂ ಇದೆ. 'ಆಚಾರಃ ಪ್ರಥಮೋ ಧರ್ಮಃ' ಎಂದು ಹೇಳಿರುವುದರಿಂದ ತಮ್ಮ ತಮ್ಮ ಪೂರ್ವಿಕರು ಹೇಳಿಕೊಟ್ಟ ಅಥವಾ ಆಚರಿಸುತ್ತಿದ್ದ ಪದ್ಧತಿಯನ್ನು ಅನುಸರಿಸುವುದರಿಂದ ಕ್ಷೇಮವೇ ಹೊರತು ಧರ್ಮಚ್ಯುತಿಯೂ ಆಗುವುದಿಲ್ಲವೆಂಬುದನ್ನು ಗಮನಿಸಬೇಕು.

ಇನ್ನು, ಗಂಟೆಯನ್ನೇಕೆ ಬಾರಿಸಬೇಕು? ಅದರಿಂದೇನು ಲಾಭ? ಎಂಬುದನ್ನು ಗಂಟೆ ಬಾರಿಸುವ ಮಂತ್ರವೇ ಹೇಳುತ್ತದೆ. ಗಂಟೆಯಲ್ಲಿರುವ ಭಿನ್ನಭಿನ್ನಾಂಗಗಳ ಅಭಿಮಾನಿ-ದೇವತೆಗಳನ್ನೂ ಹೀಗೆ ಧ್ಯಾನಿಸತಕ್ಕದ್ದು.

ಘಂಟಾಭಿಮಾನಿ ದೇವತೆಗಳು. ಪಾದೇ ಅರ್ಕಾಯ ನಮಃ। ದಂಡೇ ವಾಸುಕಯೇ ನಮಃ। ಸ್ವರೇ ಸರಸ್ವತ್ಯೈ ನಮಃ। ನಾದೇ ಬ್ರಹ್ಮಣೇ ನಮಃ। ಜಿಹ್ವಾಯಾಂ ವಾಯವೇ ನಮಃ।

(ಅರ್ಥ) ಗಂಟೆ ಪಾದ (ಬುಡ) ದಲ್ಲಿ ಅರ್ಕ ಎಂದರೆ ಸೂರ್ಯ ಸನ್ನಿಹಿತನಾಗಿರುತ್ತಾನೆ. ದಂಡದಲ್ಲಿ ಎಂದರೆ ಹಿಡಿದುಕೊಳ್ಳುವ (ಪ್ರಾಣದೇವರ ಮೂರ್ತಿ ಅಥವಾ ಗರುಡ ಮುಖ್ಯಪ್ರಾಣರು ಇರುವ) ಭಾಗದಲ್ಲಿ ವಾಸುಕಿಯೆಂಬ ಸರ್ಪವು ಇರುತ್ತದೆ. ಅದರ ಧ್ವನಿಯಲ್ಲಿ ಸರಸ್ವತೀ-ಬ್ರಹ್ಮರು ಇರುತ್ತಾರೆ. ಗಂಟೆಯನ್ನು ಬಾರಿಸುವುದಕ್ಕಾಗಿ ಹಾಕಿರುವ ನಾಲಗೆಯಲ್ಲಿ ವಾಯುದೇವರು ಸನ್ನಿಹಿತರಾಗಿರುತ್ತಾರೆ. ಇಡೀ ಗಂಟೆಯಲ್ಲಿ ಶ್ರೀಮಹಾಲಕ್ಷ್ಮಿಯೇ ಸನ್ನಿಹಿತಳಾಗಿರುತ್ತಾಳೆಂದು ತಿಳಿದುಕೊಂಡು ಗಂಟೆ ಬಾರಿಸಬೇಕು.

ಗಂಟೆ ಬಾರಿಸುವ ಮಂತ್ರ

ಸೂಚನೆ: ಮುಂದಿನ ಮಂತ್ರಗಳಲ್ಲಿ ಮೊದಲನೆಯದು ಮುಖ್ಯ, ಮಿಕ್ಕವು ಗೌಣ. ಈ ಮಂತ್ರಗಳು ಅಭ್ಯಾಸವಿಲ್ಲದವರು "ಕಲ್ಯಾಣಾದ್ಭುತಗಾತ್ರಾಯ...." ಎಂಬ ಶ್ಲೋಕ ಹೇಳಿಕೊಂಡರೂ ಸಾಕು; ನಮ್ಮ ಹಿರಿಯರು 'ಆಗಮಾರ್ಥಂ ತು....' ಹೇಳಿಕೊಂಡು ಕೊನೆಗೆ 'ಕಲ್ಯಾಣಾದ್ಭುತ....' ಎಂಬುದನ್ನೂ ತಪ್ಪದೆ ಹೇಳಿಕೊಳ್ಳುತ್ತಾ ಬಂದಿದ್ದಾರೆ.

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ।
ಕುರು ಘಂಟಾರವಂ ತತ್ರ ದೇವತಾಹ್ವಾನಲಾಂಛನಮ್ ॥ ೧ ॥

ಪಾಠಾಂತರ—'ಕುರು' ಎಂಬುದಕ್ಕೆ 'ಕುರ್ವೇ' ಎಂದು ಪಾಠವಿದೆ; ಕುರು ಎಂದರೆ 'ನೀನು ಮಾಡು' ಎಂದರ್ಥ; 'ಕುರ್ವೇ' ಎಂದರೆ 'ನಾನು ಮಾಡುತ್ತೇನೆ' ಎಂದರ್ಥ. 'ತತ್ರ' ಎಂಬಲ್ಲಿ 'ಸಮ್ಯಗ್' ಎಂದು ಹೇಳುತ್ತಾರೆ. ತತ್ರ = ಅಲ್ಲಿ; ಪೂಜಾರಂಭದಲ್ಲಿ ಎಂದರ್ಥ. ಸಮ್ಯಕ್ = ಚೆನ್ನಾಗಿ.

(ಶ್ಲೋಕದ ಕನ್ನಡಾರ್ಥ) —ದೇವತೆಗಳು ಬರುವುದಕ್ಕಾಗಿಯೂ, ರಾಕ್ಷಸಾದಿಗಳು ಹೊರಟುಹೋಗುವುದಕ್ಕಾಗಿಯೂ ಅಲ್ಲಿ (ಪೂಜಾರಂಭದಲ್ಲಿ) ಘಂಟಾನಾದವನ್ನು ಮಾಡು (ಕುರ್ವೇ ಎಂಬ ಪಾಠವಾದರೆ ನಾನು ಮಾಡುತ್ತೇನೆ). ಘಂಟಾನಾದವು ದೇವತೆಗಳನ್ನು ಆಹ್ವಾನಿಸುವುದಕ್ಕೆ ಗುರುತು ಅಥವಾ ಸಂಕೇತ. (ಆಗಮ = ಬರುವಿಕೆ, ಗಮನ = ಹೋಗುವಿಕೆ.)

ಅಜ್ಞಾನಾತ್ ಜ್ಞಾನತೋ ವಾಪಿ ಕಾಂಸ್ಯಘಂಟಾಂ ನ ವಾದಯೇತ್ ।
ರಾಕ್ಷಸಾನಾಂ ಪಿಶಾಚಾನಾಂ ತದ್ದೇಶೇ ವಸತಿರ್ಭವೇತ್ ॥ ೨ ॥

(ಅರ್ಥ) ಇದನ್ನು ಪದ್ಯಮಾಲೆಯಲ್ಲಿ ಹೇಳಿದೆ. ತಿಳಿಯದೆಯೋ ಅಥವಾ ತಿಳಿದೂ ಕೂಡ ಕಂಚಿನ (ಕಾಂಸ್ಯ = ಕಂಚು) ಗಂಟೆಯನ್ನು ಬಾರಿಸದಿದ್ದರೆ ಆ ಪ್ರದೇಶದಲ್ಲಿ ರಾಕ್ಷಸರೂ ಪಿಶಾಚಿಗಳೂ ವಾಸಿಸುತ್ತಿರುತ್ತಾರೆ. (ಆದಕಾರಣ ಅವರ ಉಚ್ಚಾಟನೆಗಾಗಿ ಕಂಚಿನ ಗಂಟೆ ಬಾರಿಸಬೇಕು.) ಕಂಚಿನ ಗಂಟೆಯ ನಾದವೇ ಶ್ರೇಷ್ಠ. ಅಲ್ಲದೆ ಕಂಚಿನಲ್ಲಿ ಬರುವಷ್ಟು ಸ್ಫುಟವಾದ ನಾದವು ಬೇರೆ ಯಾವ ಲೋಹದಲ್ಲೂ ಬರುವುದಿಲ್ಲ. ಈ ಕಾರಣದಿಂದಲೇ ದೇವಸ್ಥಾನಗಳಲ್ಲೂ ಮನೆಗಳಲ್ಲೂ ಮಠಗಳಲ್ಲೂ ಹೆಚ್ಚಾಗಿ ಕಂಚಿನ ಗಂಟೆಗಳನ್ನೇ ಬಳಸುತ್ತಾರೆ.

ಸರ್ವವಾದ್ಯಮಯೀ ಘಂಟಾ ದೇವದೇವಸ್ಯ ವಲ್ಲಭಾ ।
ತಸ್ಮಾತ್ ಸರ್ವಪ್ರಯತ್ನೇನ ಘಂಟಾಮಾವಾದಯೇತ್ ತತಃ ॥ ೩ ॥

(ಅರ್ಥ) ಗಂಟೆಯು ಸರ್ವವಾದ್ಯಗಳನ್ನೂ ಒಳಗೊಂಡಿದೆ ಎಂದರೆ ಗಂಟೆ ಬಾರಿಸಿದರೆ ಪಂಚವಾದ್ಯಗಳನ್ನು ಬಾರಿಸಿದಂತೆಯೇ; ಗಂಟಾನಾದದಲ್ಲಿಯೇ ಶ್ರುತಿ, ತಂಬೂರಿ, ತಬಲ ಅಥವಾ ಡೋಲು ಮೊದಲಾದ ಪಕ್ಕವಾದ್ಯಗಳೂ ಅಂತರ್ಭೂತವಾಗಿವೆಯೆಂದರ್ಥ. ಇದರಿಂದಲೇ ಗಂಟೆಯು ದೇವೋತ್ತಮನಾದ ಶ್ರೀಹರಿಗೆ ಬಹಳ ವಲ್ಲಭ = ಪ್ರಿಯ, ಇಷ್ಟವಾಗಿದೆ. ಆದ್ದರಿಂದ ಸರ್ವಪ್ರಯತ್ನಗಳನ್ನೂ ಮಾಡಿ ರಾಕ್ಷಸಾದಿಗಳ ನಿವಾರಣೆಯ ನಿಮಿತ್ತ ಗಂಟೆಯನ್ನು ಬಾರಿಸಬೇಕು.

ಘಂಟಾಯಾಂ ವಸತೇ ಲಕ್ಷ್ಮೀರ್—ಜಿಹ್ವಾಯಾಂ ವಾಯುರಾಸ್ಥಿತಃ ।
ತಸ್ಮಾತ್ ಸರ್ವಪ್ರಯತ್ನೇನ ಘಂಟಾನಾದಂ ಚ ಕಾರಯೇತ್ ॥ ೪ ॥

(ಅರ್ಥ) ಗಂಟೆಯಲ್ಲಿ ಲಕ್ಷ್ಮೀದೇವಿ ಅಭಿಮಾನಿಯಾಗಿ ವಾಸಮಾಡಿಕೊಂಡಿದ್ದಾಳೆ. ಆದರೆ ನಾಲಗೆಯಲ್ಲಿ ಮುಖ್ಯಪ್ರಾಣನು ಸನ್ನಿಹಿತನಾಗಿರುತ್ತಾನೆ. ಆದಕಾರಣ ಸಕಲ ಪ್ರಯತ್ನವನ್ನೂ ಮಾಡಿ ಗಂಟಾನಾದವನ್ನು ಮಾಡಲೇಬೇಕು.

ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥ ಪ್ರದಾಯಿನೇ ।
ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯ (ತೇ ನಮಃ)
ಮಂಗಳಮ್ ॥ ೫ ॥

ಇತಿ ಘಂಟಾನಾದಂ ಕೃತ್ವಾ।

(ಅರ್ಥ) ಅತ್ಯಂತ ಮಂಗಳಕರವಾದ ಜ್ಞಾನಾನಂದಾದಿ ಅನಂತವಾದ ಅದ್ಭುತವಾದ (ಅಪಾರವಾದ) ಕಲ್ಯಾಣಗುಣಗಳೇ ದೇಹವಾಗಿರುವ (ಗಾತ್ರಂ=ದೇಹಃ), ಕೇಳಿದ ಇಷ್ಟಾರ್ಥಗಳೆಲ್ಲವನ್ನೂ ಕೊಡುವ, 'ತಿರುಮಲೈ' ಎಂದು ಪ್ರಸಿದ್ಧವಾಗಿರುವ ವೇಂಕಟಾದ್ರಿಗೆ (ಸಪ್ತಗಿರಿಗೆ—ಏಳು ಬೆಟ್ಟಗಳಿರುವ ಪರ್ವತಕ್ಕೆ) ಒಡೆಯನಾದ ಶ್ರೀನಿವಾಸನಿಗೆ (ತೇ=ನಿನಗೆ) ಪ್ರತ್ಯಕ್ಷವಾಗಿ ನಿಂತಿರುವ ನಿನಗೆ (ನಮಸ್ಕಾರ ಅಥವಾ) ಮಂಗಳ. ಈ ಮಂತ್ರದಿಂದ ಗಂಟೆಯನ್ನು ಬಾರಿಸಿ.

ನಿರ್ಮಾಲ್ಯವಿಸರ್ಜನೆ

ಪದ್ಮಮಾಲೆಯಲ್ಲಿ 'ತತೋ ಜವನಿಕಾಂ ತ್ಯಕ್ತ್ವಾ ನಿರ್ಮಾಲ್ಯಂ ವಿಸೃಜೇತ್ತತಃ। ಸ್ನಾನಪಾತ್ರಂ ತಥಾ ಪೀಠಂ ಯಥಾಸ್ಥಾನಂ ನಿಧಾಯ ಚ।' ಎಂದು ಹೇಳಿರುವುದರಿಂದ ಗಂಟಾನಾದ ಮಾಡಿದ ಬಳಿಕ ಬ್ರಹ್ಮಪಾರಸ್ತವ ಹೇಳಿಕೊಳ್ಳುವಾಗ ಮಧ್ಯೆ ಹಾಕಿದ್ದ ತೆರೆಯನ್ನು ತೆಗೆದು, ಸ್ನಾನಪಾತ್ರಗಳನ್ನೂ ಪೀಠಾದಿ ಉಪಕರಣಗಳನ್ನೂ ಸಂಯಾದ ಸ್ಥಾನದಲ್ಲಿ ಇಟ್ಟು (ನಿಧಾಯ) ನಿರ್ಮಾಲ್ಯವನ್ನು ತೆಗೆದುಹಾಕಬೇಕೆಂದು ಶ್ರೀಮಟ್ಟೀಕಾಕೃತ್ಪಾದರು ಅಪ್ಪಣೆ ಕೊಡಿಸಿದ್ದಾರೆ. ಈಗ ಆ ಕ್ರಮವನ್ನೇ ತಿಳಿಸುವೆವು.

(ಗದ್ಯ) ಪೂಜಾಸಾಧನದ್ರವ್ಯಾಣಿ ದೇವಸ್ಯ ದಕ್ಷಿಣದಿಗ್ಭಾಗೇ ನಿಕ್ಷಿಪ್ಯ।
ಕೃತಾಂಜಲಿಪುಟಸ್ಸನ್ ದೇವಮುತ್ತಿಷ್ಠೇತಿ ವಿಜ್ಞಾಪಯೇತ್ ॥

(ಅರ್ಥ) ದೇವರ ಪೂಜೆಗೆ ಬೇಕಾಗುವ ತಟ್ಟೆಗಳು, ಪಂಚಪಾತ್ರೆಗಳು, ಹೂವು ತುಳಸೀ ಕಲಶ ಮೊದಲಾದ ಪದಾರ್ಥಗಳನ್ನೇ 'ದೇವರ ಬಲಭಾಗ'ದಲ್ಲಿ (ಎಂದರೆ ನಮಗೆ ಎಡಕ್ಕೆ) ಇಡಬೇಕು. ನೀರು ಚೆಲ್ಲುವ ಅರ್ಘ್ಯಪಾತ್ರೆ ಮೊದಲಾದ ಇತರ ಪಾತ್ರೆಗಳನ್ನು 'ನಮ್ಮ ಬಲಕ್ಕೆ ಮುಂಭಾಗದಲ್ಲಿ ಇಟ್ಟುಕೊಳ್ಳಬೇಕು. ಅನಂತರ ಕೈಮುಗಿದುಕೊಂಡು ದೇವರನ್ನು "ಸ್ವಾಮಿ, ಏಳಪ್ಪ" (ಉತ್ತಿಷ್ಠ) ಎಂದು ಕೆಳಗಿನ ಮಂತ್ರದಿಂದ ಪ್ರಾರ್ಥಿಸಿ ದೇವರ ಪೆಟ್ಟಿಗೆಯನ್ನು ತೆಗೆದು, ಮೂರ್ತಿಗಳಿದ್ದರೆ ಆ ಪ್ರತಿಮೆಗಳನ್ನು ಒಂದೊಂದಾಗಿ ತೆಗೆದಿಟ್ಟು

ಸಂಪುಷ್ಟಗಳಲ್ಲಿರುವ ಸಾಲಿಗ್ರಾಮಾದಿ ದೇವರುಗಳನ್ನು ಅಭಿಷೇಕದ ತಟ್ಟೆಯಲ್ಲಿಡಬೇಕು. ನಂತರ ಮುಖ್ಯಪ್ರಾಣದೇವರು, ಗರುಡ-ಶೇಷರು, ಗಣಪತಿ ಮೊದಲಾದ ದೇವರ ಪ್ರತಿಮೆಗಳನ್ನೂ, ಗುರುಗಳ ವೃಂದಾವನಗಳಿದ್ದರೆ ಅವನ್ನೂ ಬೇರೆಬೇರೆ ತಟ್ಟೆಗಳಲ್ಲಿ ತೆಗೆದಿಡಬೇಕು. ಒಂದು ವೇಳೆ ಅಷ್ಟು ಬೇರೆ ಬೇರೆ ತಟ್ಟೆಗಳು ಇಲ್ಲದಿದ್ದರೆ ಸಾಲಿಗ್ರಾಮ-ಪ್ರತಿಮೆ ಬಿಟ್ಟು ಮಿಕ್ಕ ದೇವರನ್ನು ಒಂದರಲ್ಲೇ ಇಟ್ಟರೂ ಕೂಡ ಅವಕ್ಕೆ ಅಭಿಷೇಕ ಮಾಡುವಾಗ, ತೀರ್ಥ ಕೊಡುವಾಗ ಮತ್ತು ಅಭಿಷೇಕ ಮುಗಿದಮೇಲೆ ಬಟ್ಟೆಯಿಂದ ಒರೆಸಿ ಇಡುವಾಗಲೂ 'ತಾರತಮ್ಯಕ್ರಮ'ದಿಂದಲೇ ಮಾಡಬೇಕು. ಸಾಲಗ್ರಾಮಗಳು-ವಿಷ್ಣುಪ್ರತಿಮೆಗಳ ಜೊತೆ ಪ್ರಾಣದೇವರಾದಿ ಯಾವುದನ್ನೂ ಒಂದೇ ತಟ್ಟೆಯಲ್ಲಿ ಸರ್ವಥಾ ಇಡಬಾರದು. ಇಲ್ಲದಿದ್ದರೆ ದೊಡ್ಡ ಅನರ್ಥಕ್ಕೆ ಗುರಿಯಾಗುತ್ತೇವೆ.

ಪರಮಾತ್ಮನನ್ನು ಎಬ್ಬಿಸುವ ಮಂತ್ರಗಳು

ಹರಿಃ ಓಂ ||

ಹಿರಣ್ಯವರ್ಣಾಂ ಹರಿಣೀಂ ಸುವರ್ಣ ರಜತಸ್ರಜಾಮ್ |

ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ ||

(ಮ ಆವಹ)

ಇತಿ ದೇವಸ್ಯ ಮುಖವಸ್ತ್ರಂ ವಿಸೃಜ್ಯ| ಶಯಾನಂ ದೇವಂ ನಿರೀಕ್ಷ್ಯ||

(ಅರ್ಥ) "ಹಿರಣ್ಯವರ್ಣಾಂ..." ಎಂಬ ಶ್ರೀಸೂಕ್ತ ಮಂತ್ರ ಹೇಳಿಕೊಂಡು ದೇವರನ್ನು ಸುತ್ತಿಟ್ಟಿರುವ ವಸ್ತ್ರವನ್ನು ಬಿಚ್ಚಿ ದೇವರನ್ನು ನೋಡಿ, ಮುಂದಿನ 'ಉತ್ತಿಷ್ಠ' ಎಂಬ ಮಂತ್ರ ಹೇಳುತ್ತಾ ದೇವರ ಪ್ರತಿಮೆಗಳನ್ನು ಒಂದೊಂದಾಗಿ ತೆಗೆದಿಡಬೇಕು.

(ಶ್ರೀಸೂಕ್ತಮಂತ್ರದ ಸಾಮಾನ್ಯಾರ್ಥ) ಜಾತವೇದಃ— ಜಾತ-ಸಕಲವನ್ನೂ, ವೇದಃ (ಸಕಾರಾಂತ ಶಬ್ದ, ಸಂಬೋಧನಾರೂಪ)-ತಿಳಿದವನೇ-ಎಂದರೆ ಹೇ ಸರ್ವಜ್ಞ-ನಾದ ನಾರಾಯಣ! ಹಿರಣ್ಯವರ್ಣಾಂ-ಬಂಗಾರದಂತೆ ಚೊಕ್ಕವಾದ ನಿಷ್ಕಳಂಕವಾದ ಬಣ್ಣವುಳ್ಳ; ಹರಿಣೀಂ-ಶ್ರೀಹರಿಯ ಪತ್ನಿಯಾದ ಅಥವಾ ಹರಿಣೀ ಎಂದರೆ ಹೆಣ್ಣುಜಿಂಕೆ— ಅದರಂತೆ ಕೃಶವಾದ, ಕೋಮಲವಾದ, ಬಳುಕುವ ಲಾವಣ್ಯಮಯವಾದ ದೇಹವುಳ್ಳ; ಸುವರ್ಣ-ಬಂಗಾರದ ಮತ್ತು, ರಜತ-ಬೆಳ್ಳಿಯ, ಸ್ರಜಾಂ-ಹಾರಗಳುಳ್ಳ, ಚಂದ್ರಾಂ-(ಚಂದ್ರನಂತೆ) ಆಹ್ಲಾದಕರಳೂ ಪ್ರಕಾಶಿಸುವವಳೂ ಆದ; ಹಿರಣ್ಮಯೀಂ (ಹಿರಕ್+ಮಯೀಂ) ಹಿರಕ್-ಸುಖ, ತನ್ಮಯಳಾದ ಎಂದರೆ ಕೇವಲ ಸುಖಸ್ವರೂಪವಾದ ದೇಹ ಉಳ್ಳ; ಲಕ್ಷ್ಮೀಂ-ಭಕ್ತರಿಗೆ ಅನುಗ್ರಹ ಮಾಡುವ ಭಾಗ್ಯದೇವತೆಯಾದ ಶ್ರೀದೇವಿಯನ್ನು

(ಮಮಾವಹ ಎಂಬ ಪಾಠದಲ್ಲಿ) ಮಮ, (ಮ ಆವಹ ಎಂಬ ಪಾಠದಲ್ಲಿ) ಮೇ-ನನ್ನ ಉದ್ದಿಶ್ಯವಾಗಿ; ಆವಹ-ಕರೆದುಕೊಂಡು ಬಾ.

ತಾತ್ಪರ್ಯ— ಹೇ ನಾರಾಯಣ, ನೀನು ಸರ್ವಜ್ಞ, ಸರ್ವವ್ಯಾಪ್ತ. ನಿನ್ನ ಜೊತೆ ಜೊತೆಯಲ್ಲಿಯೇ ನಿನ್ನ ಪತ್ನಿಯಾದ ಲಕ್ಷ್ಮೀದೇವಿಯೂ ಸರ್ವದಾ ನನ್ನಲ್ಲಿ ಕರುಣೋನ್ಮುಖಳಾಗಿರುವಂತೆ ಅವಳೊಡನೆ ಬಾ. ಆ ದೇವಿಯು ಅಚ್ಚ ಬಂಗಾರದಂತೆ ಕಲ್ಮಶರಹಿತವಾದ ಸ್ವಚ್ಛ ವರ್ಣವುಳ್ಳವಳು; ಶ್ರೀಹರಿಗೆ ಪರಮ ಪ್ರೇಮಾಸ್ಪದಳು, ಶ್ರೀಹರಿಯಿಂದ ಅವಿಯೋಗಿನಿ. ಜಿಂಕೆಯಂತೆ ತೆಳ್ಳಗಿರುವ ಬಳುಕುವ ದೇಹವುಳ್ಳವಳು. ಬೆಳ್ಳಿ ಬಂಗಾರದ ದಿವ್ಯಾಭರಣಗಳನ್ನೂ ಹಾರಗಳನ್ನೂ ಧರಿಸಿದ್ದಾಳೆ. ನೋಡುವುದಕ್ಕೆ ಅತ್ಯಂತ ಆಹ್ಲಾದಕಳೂ ಥಳಥಳ ಹೊಳೆಯುವವಳೂ ಆಗಿದ್ದಾಳೆ. ಅವಳ ದೇಹವು ಮಜ್ಜಾಮಾಂಸಮಯವಾಗಿರದೆ ಕೇವಲ ಸುಖಮಯ ಜ್ಞಾನಾನಂದಮಯವಾದದ್ದಾಗಿದೆ. ಇಂಥಾ ಲಕ್ಷ್ಮೀದೇವಿಯೊಡನೆ ನನ್ನಲ್ಲಿ ಸದಾ ಸನ್ನಿಹಿತನಾಗಿರು ಎಂದರ್ಥ.

ಸೂಚನೆ ಹೆಚ್ಚಿನ ವಿವರಣೆಗಳನ್ನೂ ವ್ಯಾಕರಣಾಂಶಗಳನ್ನೂ ಇಲ್ಲಿ ಹೇಳಿಲ್ಲ.

ಕೃತಾಂಜಲಿಪುಟೋ ಭೂತ್ವಾ ವಿನಯಾವನತ ಕಂಧರಃ ।
ಯಾಚೇ ತ್ವಾಂ ದೇವಪೂಜಾರ್ಥ—ಮುತ್ತಿಷ್ಠ ತ್ವಂ ರಮಾಪತೇ ॥

(ಅರ್ಥ) ಹೇ ಲಕ್ಷ್ಮೀಪತಿಯೇ! ಕೈ ಮುಗಿದುಕೊಂಡು, ವಿನಯದಿಂದ ತಲೆಯನ್ನು (ಕಂಧರ-ತಲೆ) ಬಗ್ಗಿಸಿದವನಾಗಿ, ಹೇ ಸ್ವಾಮಿ, ನಿನ್ನನ್ನು ಬೇಡಿಕೊಳ್ಳುತ್ತೇನೆ, ಪೂಜೆಗಾಗಿ ಏಳು (ಎಂದು ಕೈಮುಗಿದು ಪ್ರಾರ್ಥಿಸಿ ಈ ಋಙ್ಮಂತ್ರ ಪಠಿಸಬೇಕು.)

ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ ।
ಉಪ ಪ್ರ ಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ
ಸಚಾ ॥ (ಋ. ೧/೪೦/೧)

(ಋಗ್ಭಾಷ್ಯ ಮತ್ತು ಮಂತ್ರಾರ್ಥಮಂಜರಿಗಳಿಗೆ ಅನುಸಾರವಾದ ಅರ್ಥ)— ಹೇ ಬ್ರಹ್ಮಣಸ್ಪತೇ— ಬ್ರಹ್ಮ-ವೇದಗಳಿಗೆ, ಪತೇ-ಒಡೆಯನಾದ ಭಗವಂತನೇ, ನಾರಾಯಣನೇ! (ಅಥವಾ ವಾಯುದೇವರೇ), ಉತ್ತಿಷ್ಠ-ಏಳು, ದೇವಯಂತಃ (ದೇವ ಎಂದರೆ ಪೂಜೆ ಅಥವಾ ಸ್ತುತಿ, ಅದ್ದರಿಂದ) ನಿಮ್ಮನ್ನು ಪೂಜಿಸುತ್ತಾ ಮತ್ತು ಸ್ತುತಿಸುತ್ತಾ, ತ್ವಾ-ನಿನ್ನನ್ನು; ಈಮಹೇ-ಶರಣು ಹೊಂದುತ್ತೇವೆ. ಸುದಾನವಃ-ಬಹಳ ಉದಾರಿಗಳಾದ(ದಾನಶೀಲರಾದ), ಮರುತಃ-ನಲವತ್ತೊಂಬತ್ತು ಮರುತ್ತುಗಳೂ,

ಉಪಪ್ರಯಂತು-ನಮ್ಮ ಬಳಿಗೆ ಬರಲಿ. ಇಂದ್ರ-ಹೇ ದೇವೇಂದ್ರನೇ! (ನೀನೂ ಕೂಡ). ಸಚಾ-ಸುಖದಿಂದ (ಸುಖವಾಗಿ), ಪ್ರಾಶೂಃ-ನಮ್ಮ ಈ ಯಜ್ಞಗಳಲ್ಲಿ ಬಹಳ ಭೋಜನ ಮಾಡುವವನಾಗಿ, ಭವ-ಆಗು.

ತಾತ್ಪರ್ಯ—ಸಕಲ ವೇದಗಳಿಗೂ ಒಡೆಯರಾದ ಹೇ ಶ್ರೀಹರಿವಾಯುಗಳೇ! ನಾನು ನಿಮ್ಮ ಪೂಜೆ ಮಾಡುವುದಕ್ಕಾಗಿ ಸಿದ್ಧತೆ ಮಾಡಿಕೊಂಡಿದ್ದೇನೆ, ಸ್ತುತಿಸುತ್ತಿದ್ದೇನೆ, ಏಳಿ, ನನ್ನ ಪೂಜೆಗೆ ದಯಮಾಡಿಸಿರಿ. ನಿಮ್ಮನ್ನು ಸ್ತುತಿಸುತ್ತಾ ನಿಮ್ಮನ್ನೇ ಮೊರೆಹೊಕ್ಕಿದ್ದೇನೆ. ದಾನಶೀಲರಾದ ಮರುತ್ತುಗಳೇ ಶ್ರೀಹರಿವಾಯುಗಳ ಜೊತೆ ನೀವೂ ಸಹ ದಯ-ಮಾಡಿಸಿರಿ, ಬನ್ನಿರಿ. ಹೇ ದೇವೇಂದ್ರ! ನೀನೂ ಸಹ ಈ ನನ್ನ ಪೂಜಾರೂಪದ ಯಜ್ಞ-ದಲ್ಲಿ ನಾನು ಯಥಾಶಕ್ತಿ ಏನು ಅಲ್ಪವನ್ನು ಕೊಡುವೆನೋ ಅದನ್ನೇ ಮಹತ್ತೆಂದು ಭಾವಿಸಿ ಸಂತೋಷದಿಂದ ಹೊಟ್ಟೆ ತುಂಬಿಸಿಕೋ. (ಈ ಮಂತ್ರದಿಂದ ದೇವರ ಪ್ರತಿಮೆಗಳನ್ನು ತೆಗೆದಿಟ್ಟು ಕೆಳಗಿನ ಶ್ಲೋಕಗಳಿಂದ ಭಗವಂತನನ್ನು ವಿನಯದಿಂದ ಪ್ರಾರ್ಥಿಸಿಕೊಳ್ಳ-ಬೇಕು.)

ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೇ।
ಕರುಣಾ(ರಸ)ಮೃತಪೂರ್ಣಾಭ್ಯಾಂ ಲೋಚನಾಭ್ಯಾಂ
ವಿಲೋಕಯ ॥ ೧ ॥

(ಅರ್ಥ) ಹೇ ಕೃಪಾನಿಧೇ ಕೇಶವ! ಉದ್ದುದ್ದವಾಗಿಯೂ, ವಿಶಾಲವಾಗಿಯೂ, ತಂಪಾಗಿಯೂ, ಕರುಣಾಮೃತದಿಂದ (ಕರುಣಾರಸದಿಂದ) ತುಂಬಿದ ನಿನ್ನ ಎರಡೂ ಕಣ್ಣು ಗಳಿಂದ ನನ್ನನ್ನು ನೋಡು.

ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ।
ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪುರುಷೋತ್ತಮ ॥ ೨ ॥

(ಅರ್ಥ) ಹೇ ಪುರುಷಶ್ರೇಷ್ಠ! ನಾರಾಯಣ! ನಾನು ಹಗಲೂ ರಾತ್ರಿಯೂ ಸಾವಿರಾರು ತಪ್ಪುಗಳನ್ನು ಮಾಡುತ್ತಲೇ ಇರುತ್ತೇನೆ. ಹೇ ದೇವ, ನನ್ನ ಆ ಸಕಲಾಪರಾಧ ಗಳನ್ನೂ ಕ್ಷಮಿಸು. (ಶ್ಲೋಕದಲ್ಲಿ 'ನನ್ನಿಂದ ಅಪರಾಧಗಳು ಮಾಡಲ್ಪಡುತ್ತವೆ' ಎಂದು ಕರ್ಮಣಿ ಪ್ರಯೋಗವಿದ್ದರೂ ಕನ್ನಡಕ್ಕೆ ಅನುಗುಣವಾಗಿ ಕರ್ತರಿಯಲ್ಲೇ ಅರ್ಥ ಹೇಳಿದೆ. ಮುಂದೆಯೂ ಹೀಗೆಯೇ ತಿಳಿಯಬೇಕು.)

ಮಾನಸಾನ್ ವಾಚಿಕಾನ್ ದೋಷಾನ್
ಕಾಯಿಕಾನಪಿ ಸರ್ವದಾ।
ವೈಷ್ಣವದ್ವೇಷಹೇತೂಂಶ್ಚ (ಪಾಠಾಂ: ಹೇತೂನ್ ಮೇ)
ಭಸ್ಮಸಾತ್ಕುರು ಮಾಧವ ॥ ೩ ॥

(ಅರ್ಥ) ಹೇ ಲಕ್ಷ್ಮೀಪತೇ (ಮಾ-ಲಕ್ಷ್ಮಿಯ, ಧವ-ಪತಿಯೇ), ನಾನು ಸರ್ವದಾ ತಿಳಿದೂ ತಿಳಿಯದೆಯೂ ವಿಷ್ಣುಭಕ್ತರಲ್ಲಿ (ವೈಷ್ಣವರಲ್ಲಿ ಮನಸ್ಸಿನಿಂದಲೂ, ವಚನಗಳಿಂದಲೂ, ಕಾರ್ಯತಃ ಆಗಿಯೂ ದ್ವೇಷ ಮಾಡುತ್ತಿರುವೆನು, (ವಿಷ್ಣುದ್ವೇಷಕ್ಕಿಂತಲೂ ವೈಷ್ಣವದ್ವೇಷವು ಮಹಾ ಅನರ್ಥಕವಾದ್ದರಿಂದ) ಹೇ ಸ್ವಾಮಿ, ಆ ಸಕಲಾಪರಾಧಗಳನ್ನೂ ಸುಟ್ಟು ಭಸ್ಮ ಮಾಡಿಬಿಡು.

ಜಯಾಚ್ಯುತ ಜಯಾನಂತ ಜಯ ಕೃಷ್ಣ ಹರೇ ಪ್ರಭೋ ।
ಜಯ ಕೇಶವ ಲಕ್ಷ್ಮೀಶೇ—ತ್ಯುಕ್ತ್ವಾ ಕೃಷ್ಣಂ ಪ್ರಪೂಜಯೇತ್ ।

(ಅರ್ಥ) ಅಚ್ಯುತ ನಿನಗೆ ಜಯ, ಅನಂತ ನಿನಗೆ ಜಯ, ಹೇ ಕೃಷ್ಣ ಹೇ ಹರೇ ಹೇ ಪ್ರಭೋ ನಿನಗೆ ಜಯ. ಕೇಶವ, ಲಕ್ಷ್ಮೀಪತೇ, ನಿನಗೆ ಜಯ ಎಂದು ಹೇಳಿ ಶ್ರೀ-ಕೃಷ್ಣನನ್ನು ಪೂಜಿಸಬೇಕು. (ಋಙ್ಮಂತ್ರ) (ಋ. ೧೦/೧೧೨/೯, ಅಷ್ಟ. ೮/೬/೧೩ ವ.)

ನಿಷು ಸೀದ ಗಣಪತೇ ಗಣೇಷು
ತ್ವಾಮಾಹುರ್ವಿಪ್ರತಮಂ ಕವೀನಾಮ್ ।
ನ ಋತೇ ತ್ವತ್ ಕ್ರಿಯತೇ ಕಿಂ ಚನಾರೇ
ಮಹಾಮರ್ಕಂ ಮಘವನ್ ಚಿತ್ರಮರ್ಚ ॥

ಇತಿ ಪ್ರಾರ್ಥ್ಯ।

(ಸಂಸ್ಕೃತಾರ್ಥ) ಈ ಋಕ್ಕಿಗೆ ತತ್ತ್ವಪ್ರಕಾಶಿಕಾ (೩ ಅ., ೨ ಪಾ., ೪ ಸೂ.) ದಲ್ಲಿ ಟೀಕಾಚಾರ್ಯರು ಹೀಗೆ ಅರ್ಥ ಬರೆದಿದ್ದಾರೆ — "ಇಂದ್ರಿಯಗಣಪತೇ, ಧನವನ್ ಯಶಸ್ವಿನ್ ಮಖಪತೇ! ತ್ವಮಿಂದ್ರಿಯ ಗಣೇಷು ನಿಷುಸೀದ। ತತ್ರ ಚ ಸ್ಥಿತ್ವಾ ಮಹಾಂತಂ ಪರಮಾನಂದಮಾಶ್ಚರ್ಯತಮಂ ತ್ವಾಂ ತ್ವಮೇವ ಪೂಜಯ। ಯತಸ್ತ್ವ-ಮೇವ ವಿಶೇಷೇಣ ಜ್ಞಾನಿನಾಂ ಪ್ರಕೃಷ್ಟತಮಮಾಹುರತಸ್ತ್ವೈವ ಪೂಜ್ಯತ್ವಂ, ಯತಶ್ಚ ತ್ವದೃತೇ ದೂರೇ ಸಮೀಪೇ ವಾ ನ ಕೇನ ಕಿಂಚಿತ್ ಕ್ರಿಯತೇ, ಅತಸ್ತ್ವಮೇವ ಪೂಜಕ ಇತ್ಯರ್ಥಃ।"

(ಕನ್ನಡಾರ್ಥ) ಗಣಪತೇ-ಹೇ ಸಕಲೇಂದ್ರಿಯಗಳಿಗೂ ಒಡೆಯನೇ, ಮಘವನ್-ಧನವಂತನೇ ಯಶಸ್ವಿಯೇ ಅಥವಾ ಮಖ(ಯಜ್ಞ)ಗಳ ಒಡೆಯನೇ (ಶ್ರೀಮದಾಚಾರ್ಯರು ಕರ್ಮನಿರ್ಣಯದಲ್ಲಿ ಮಘವನ್ ಶಬ್ದ ಈ ಮೂರು ಅರ್ಥ ಹೇಳಿದ್ದಾರೆ, ಅದನ್ನನುಸರಿಸಿ ಟೀಕಾರಾಯರೂ ಈ ಅರ್ಥ ಹೇಳಿದ್ದಾರೆ ಎಂದು ಶ್ರೀ ಮಂತ್ರಾಲಯದ ರಾಯರು ಭಾವ

ಬೋಧ ಟಿಪ್ಪಣಿಯಲ್ಲಿ ತೋರಿಸಿಕೊಡುತ್ತಾರೆ) ಹೇ ವಿಷ್ಣುವೇ! (ತ್ವಂ-ನೀನು, ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು) ಗಣೇಷು-ಅರ್ಚಕರ (ನಿನ್ನನ್ನು ಪೂಜೆ ಮಾಡುವವರ) ಇಂದ್ರಿಯಗಳ ಸಮೂಹದಲ್ಲಿ, ನಿಷುಸೀದ- ಸು-ಚೆನ್ನಾಗಿ, ನಿಷೀದ-ಕುಳಿತುಕೋ (ಸನ್ನಿಹಿತನಾಗಿರು). ಅಲ್ಲಿ ಸನ್ನಿಹಿತನಾಗಿದ್ದು (ಎಂದು ಸೇರಿಸಿಕೊಳ್ಳಬೇಕು) ಮಹಾಂ-ಮಹಾತ್ಮನಾದ ಎಂದರೆ ಪೂಜ್ಯನಾದ, ಅರ್ಕಂ-(ಅರ್-ಅತಿಶಯವಾಗಿ, ಕಂ-ಸುಖವುಳ್ಳ) -ಪರಮಾನಂಧಸ್ವರೂಪನಾದ, ಚಿತ್ರಂ-ಆಶ್ಚರ್ಯಮಯನಾದ, ತ್ವಾಂ-ನಿನ್ನನ್ನು, ಅರ್ಚ-ನೀನೇ ಪೂಜಿಸಿಕೋ. ಏಕೆಂದರೆ, ತ್ವಾಂ-ನಿನ್ನನ್ನೇ, ಕವೀನಾಂ-ಜ್ಞಾನಿಗಳ ಮಧ್ಯದಲ್ಲಿ, ವಿಪ್ರತಮಂ—ವಿ-ವಿಶೇಷವಾಗಿ, ಪ್ರ-ಪ್ರಕೃಷ್ಟ(ಶ್ರೇಷ್ಠ)ರಾದವರಲ್ಲಿ, ತಮಂ-ಅತ್ಯಂತ ಶ್ರೇಷ್ಠನೆಂದು (ಸರ್ವಶ್ರೇಷ್ಠನೆಂದು), ಆಹುಃ-ಜ್ಞಾನಿಗಳು ಹೇಳುತ್ತಾರೆ. ಅಷ್ಟೇ ಅಲ್ಲ; ತ್ವತ್ ಋತೆ-ನೀನಿಲ್ಲದೆ (ನಿನ್ನನ್ನು ಬಿಟ್ಟರೆ), ಆರೇ-ದೂರದಲ್ಲಾಗಲೀ ಹತ್ತಿರದಲ್ಲಾಗಲೀ ('ಆರಾತ್ ದೂರ-ಸಮೀಪಯೋಃ' ಎಂದು ಅಮರ), ಕಿಂಚನ-ಏನೂ—ರೆಪ್ಪೆ ಹಾಕುವುದೂ ಕೂಡ, (ಕೇನಾಪಿ-ಯಾರಿಂದಲೂ—ಎಂದು ಸೇರಿಸಿಕೊಳ್ಳಬೇಕು), ನ ಕ್ರಿಯತೇ-ಮಾಡಲ್ಪಡುವುದಿಲ್ಲ. ಆದ್ದರಿಂದ ನಿನಗೆ ನೀನೇ ಪೂಜಕನೆಂದು ಅರ್ಥ.

ಮಂತ್ರದ ಭಾವಾರ್ಥ— ಹೇ ವಿಷ್ಣೋ! ನೀನು ಸಕಲೇಂದ್ರಿಯಗಳಿಗೂ ಒಡೆಯ. ನೀನು ಅಪರಿಮಿತವಾದ ಐಶ್ವರ್ಯವುಳ್ಳವನಾದ್ದರಿಂದಲೂ, ಲೋಕೋತ್ತರವಾದ ಕೀರ್ತಿಯುಳ್ಳವನಾದ್ದರಿಂದಲೂ ಸಕಲಯಜ್ಞಭೋಕ್ತನಾದ್ದರಿಂದಲೂ ಮಘವನ್(ದೇವೇಂದ್ರ) ಶಬ್ದವಾಚ್ಯನಾಗಿದ್ದೀ. ಇಂಥಾ ನೀನು ನಮ್ಮ ಸಕಲೇಂದ್ರಿಯಗಳಲ್ಲೂ ಸನ್ನಿಹಿತನಾಗಿರು. ಮತ್ತು ಸಕಲೇಂದ್ರಿಯಗಳಿಂದಲೂ ನಾನು ನಿನ್ನನ್ನು ಪೂಜಿಸುವಂತೆ ಪ್ರೇರಿಸಿ ಪರಮಾನಂದಸ್ವರೂಪಿಯೂ ಅತ್ಯಂತ ಆಶ್ಚರ್ಯಮಯನೂ ಪರಮ ಪೂಜ್ಯನೂ ಆದ ನಿನ್ನನ್ನು ನೀನೇ ಪೂಜಿಸಿಕೋ. ಏಕೆಂದರೆ ಬ್ರಹ್ಮಜ್ಞಾನಿಗಳು ನೀನೇ ಜ್ಞಾನಿಗಳಲ್ಲೆಲ್ಲಾ ಶ್ರೇಷ್ಠತಮನೆಂದು ಹೇಳುವರಲ್ಲದೆ ನೀನಿಲ್ಲದೆ ಯಾವ ಸಣ್ಣ ಕೆಲಸವೂ ಸಹ—ರೆಪ್ಪೆ ಹಾಕುವುದೂ ಸಹ ಹತ್ತಿರದಲ್ಲೇ ಆಗಲಿ ದೂರದಲ್ಲೇ ಆಗಲಿ ಎಲ್ಲೂ ಸಾಧ್ಯವಿಲ್ಲ. ಹೀಗಿರುವಾಗ ನಾನು ನಿನ್ನನ್ನು ಪೂಜಿಸುವುದೆಲ್ಲಿ ಬಂತು!—ಈ ರೀತಿ ಪರಮಾತ್ಮನನ್ನು ಪ್ರಾರ್ಥಿಸಿ ಸಾಲಿಗ್ರಾಮಗಳ ಸಂಪುಟವನ್ನು 'ಸಕ್ತುಮಿವ....' ಎಂಬ ಮಂತ್ರದಿಂದ ತೆಗೆದು ಸಾಲಿಗ್ರಾಮಗಳನ್ನೂ ಪ್ರಾಣದೇವರು-ಗರುಡಶೇಷಾದಿಗಳನ್ನೂ ಗುರುಗಳ ವೃಂದಾವನಗಳನ್ನೂ ಹಿಂದೆ ತಿಳಿಸಿದಂತೆ ಬೇರೆಬೇರೆ ತಟ್ಟೆಗಳಲ್ಲಿ ಇಡಬೇಕು. ಸಾಲಿಗ್ರಾಮಗಳು ವಿಷ್ಣುಪ್ರತಿಮೆಗಳ ಜೊತೆ ಪ್ರಾಣದೇವರನ್ನಾಗಲಿ ಗರುಡಶೇಷಾದಿಗಳನ್ನಾಗಲಿ ಗುರುಗಳ ವೃಂದಾವನಗಳನ್ನಾಗಲಿ ಸರ್ವಥಾ ಇಡಬಾರದು.

ಸಂಪುಟ ತೆಗೆಯುವ ಮಂತ್ರ

ಓಂ॥ ಸಕ್ತುಮಿವ ತಿತಉನಾ ಪುನಂತೋ

ಯತ್ರ ಧೀರಾ ಮನಸಾ ವಾಚಮಕ್ರತ।

ಅತ್ರಾ ಸಖಾಯಃ ಸಖ್ಯಾನಿ ಜಾನತೇ

ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ॥

(ಋ. ೧೦/೭೧/೨; ಅಷ್ಟ. ೮/೨/೨೪)

ಇತಿ ಲಕ್ಷ್ಮೀಮಂತ್ರೇಣ ಸಂಪುಟೋದ್ಘಾಟನಂ ಕುರ್ಯಾತ್॥

(ಅರ್ಥ) 'ಸಕ್ತುಮಿವ' ಎಂಬ ಲಕ್ಷ್ಮೀಸ್ತುತಿಪರವಾದ ಋಙ್ಮಂತ್ರದಿಂದ ಸಂಪುಟವನ್ನು ತೆಗೆಯಬೇಕು. ಮತ್ತು ಅದರಲ್ಲಿರುವ ಸಾಲಿಗ್ರಾಮಗಳನ್ನೂ ವಿಷ್ಣು-ಪ್ರತಿಮಾದಿಗಳನ್ನೂ ಅಭಿಷೇಕದ ತಟ್ಟೆಯಲ್ಲಿ ಇಡಬೇಕು.

ಮಂತ್ರಾರ್ಥ— ಧೀರಾಃ-ಉಪಕ್ರಮಾದಿ ಲಿಂಗಗಳನ್ನು ಬಲ್ಲ ಸಮರ್ಥರು, ಮನಸಾ-(ಮನು ಅವಬೋಧನ ಇತಿ ಧಾತೋಃ) ಜ್ಞಾನದಿಂದ, ವಾಚಂ-ಸಕಲ ವೇದ-ವಾಕ್ಯಗಳನ್ನೂ, ತಿತಉನಾ-ಒಂದರಿ (ಜರಡಿ)ಯಿಂದ, ಸಕ್ತುಂ ಇವ-ಧಾನ್ಯದ ಕಾಳುಗಳನ್ನು ಶೋಧಿಸುವಂತೆ, ಪುನಂತಃ-ಸಮನ್ವಯ ಮಾಡಿ ಶೋಧಿಸುತ್ತಾ, ಯತ್ರ-ಎಲ್ಲಿ, ಅಕ್ರತ-ಪರಮಾತ್ಮಪರವಾಗಿ ಅನ್ವಯಿಸಿದರೋ, ಅತ್ರ-ಅಲ್ಲಿಯೇ, ಸಖಾಯಃ-ಸಾರರೂಪನೂ (ಸ) ಪ್ರಕಾಶರೂಪನೂ ಖ್ಯಾತನೂ (ಖ) ಜ್ಞಾನರೂಪನೂ (ಪಂ-ಗತ್ಯರ್ಥತ್ವಾತ್ ಜ್ಞಾನಪರತ್ವಂ) ಆದ ಭಗವದ್ರೂಪಗಳು, ಸಖ್ಯಾನಿ-ಸುಖಪ್ರದಗಳಾಗಿ, ಜಾನತೇ-ತಿಳಿಯುತ್ತವೆ, ಪ್ರಕಟವಾಗುತ್ತವೆ. ಏಷಾಂ-ಈ ರೂಪಗಳ, ಅಧಿವಾಚಿ-ವಾಚ್ಯತ್ವ ವಿಷಯದಲ್ಲಿ, ಭದ್ರಾ-ಮಂಗಳಕರವಾದ, ಲಕ್ಷ್ಮೀಃ-ಶ್ರೀದೇವಿಯು, ನಿಹಿತಾ-ಪ್ರಸನ್ನಳಾಗಿರುತ್ತಾಳೆ.

ತಾತ್ಪರ್ಯ— ಉಪಕ್ರಮಾದಿ ಲಿಂಗಗಳನ್ನು ಬಲ್ಲ ಮಹಾಜ್ಞಾನಿಗಳು ಸಕಲ ವೈದಿಕವಾಕ್ಯಗಳಿಗೂ ತಾತ್ಪರ್ಯಲಿಂಗಗಳಿಂದ ಶೋಧಿಸಿ ಜರಡಿಯು (ಮಂದರಿಯು)-ಕಸಕಡ್ಡಿಗಳನ್ನು ಧಾನ್ಯದಿಂದ ಬೇರ್ಪಡಿಸಿ ಶುದ್ಧ ಮಾಡುವಂತೆ ವಿಷ್ಣುಪರವಾಗಿ ಅನ್ವಯಿಸುತ್ತಾರೆ. ಆಗಲೇ ಅವುಗಳಲ್ಲಿ (ವೇದವಾಕ್ಯಗಳಲ್ಲಿ) ಭಗವಂತನ ಅನಿರುದ್ಧ-ವಾಸುದೇವಾದಿ ರೂಪಗಳು ಪ್ರಕಟವಾಗುತ್ತವೆ. ಆದರಿಂದಲೇ ಶ್ರೀದೇವಿಯೂ ಪ್ರಸನ್ನಳಾಗಿ ಮೋಕ್ಷಾದಿ ಪುರುಷಾರ್ಥಗಳನ್ನು ಪರಮಾತ್ಮನ ದ್ವಾರಾ ಅನುಗ್ರಹಿಸುವಳೆಂದು ಅರ್ಥ.

(ನಾರಾಯಣಭಟ್ಟರ ಈ ಮಂತ್ರಕ್ಕೆ ಹೀಗೆ ಅರ್ಥ. ಬ್ರಾಹ್ಮಣರು ಮಾತಾಡುವಾಗ ಆಲೋಚಿಸಿ—ಜರಡಿಯು ಧಾನ್ಯವನ್ನು ಶೋಧಿಸುವಂತೆ-ಶೋಧಿಸಿ ಮಾತು ಹೇಳುತ್ತಾರೆ. ಇದರಿಂದ ಸ್ನೇಹವೂ ಬೆಳೆಯುವುದು, ಅವರ ಮಾತಿನಲ್ಲಿ ಶ್ರೇಯಸ್ಸು ಇರುತ್ತದೆ.)

ಪ್ರಾರ್ಥನಾ ಶ್ಲೋಕಗಳು

ಆರಾಧ್ಯಸೇ ಪ್ರಾಣಭೃತಾಂ ಪ್ರಣೇತ್ರಾ
ಪ್ರಾಣಾಧಿನಾಥೇನ ಸಮೀರಣೇನ।
ನಾರಾಯಣ ಜ್ಞಾನಸುಖೈಕಪೂರ್ಣ
ಸ್ವಾಮಿನ್ ಮಮ (ನಮಃ) ಶ್ರೀರಮಣ ಪ್ರಸೀದ ॥ ೧ ॥

(ಅರ್ಥ) ಇದು ಪದ್ಮಮಾಲಾದಲ್ಲಿ ಹೇಳಿದ ಶ್ಲೋಕ.) ಸಕಲೇಂದ್ರಿಯಾಭಿಮಾನಿಗಳಿಗೂ ಒಡೆಯನಾದ, ಮತ್ತು ಸಕಲ ಜೀವರಲ್ಲೂ ಸರ್ವೋತ್ತಮನಾದ, ಶ್ರೀಮುಖ್ಯಪ್ರಾಣನಿಂದ, ಹೇ ನಾರಾಯಣ, ನೀನು ಆರಾಧಿಸಲ್ಪಡುವಿ. (ಅದಕಾರಣ ನಾವು ಮಾಡುವ ಸೇವೆ ಯಾವ ಗಣನೆಗೂ ಸೇರುವುದಿಲ್ಲ. ಆದರೂ ಕೂಡ ಕೇವಲ ಜ್ಞಾನಾನಂದಗಳಿಂದಲೇ ಪರಿಪೂರ್ಣನಾದ ಹೇ ಸ್ವಾಮಿ, ಲಕ್ಷ್ಮೀವಲ್ಲಭ! ನನ್ನ (ಅಲ್ಪ ಸೇವೆಯಿಂದಲೇ) ತೃಪ್ತನಾಗು, ನಿನಗೆ ನಮಸ್ಕಾರ । ೧ ।

ಬಿಂಬೋಽಸಿ ಪ್ರತಿಬಿಂಬೋಽಸ್ಮಿ ತವ ಯದ್ಯಪಿ ಚಾಂತರಮ್।
ಸ್ವಾಮಿನ್ನಿರ್ದೋಷ ಮದ್ದೋಷಂ ವಿರೇಚಯ ನಮೋಽಸ್ತು ತೇ॥೨॥

(ಅರ್ಥ) ಹೇ ಭಗವಂತ, ನೀನು ಬಿಂಬವಾಗಿದ್ದೀಯೆ. ನಾನು ನಿನ್ನ ಪ್ರತಿಬಿಂಬನಾಗಿದ್ದೇನೆ ನಿನಗೂ ನನಗೂ ಅಪಾರವಾದ ವ್ಯತ್ಯಾಸ. ಆದರೂ ಕೂಡ ನೀನು ನಿರ್-ದೋಷನಾದ್ದರಿಂದ ನನ್ನ ಸಕಲ ದೋಷಗಳನ್ನೂ ಹೊಡೆದೋಡಿಸು, ಹೊರಗೆ ಹಾಕಿಬಿಡು (ಉಚ್ಚಾಟನೆ ಮಾಡಿಬಿಡು). ನಿನಗೆ ನಮಸ್ಕಾರ. (ಇದೂ ಪದ್ಮಮಾಲಾದಲ್ಲಿ ಹೇಳಿದೆ.)

ಭಗವನ್ ಯನ್ಮಯಾ ಕರ್ಮ ಶುಭಂ ಕಾರಯಸೇ ಪ್ರಭೋ।
ತತ್‌ಸರ್ವಂ ವಿಷ್ಣುಪೂಜಾಽಸ್ತು ತವ ದೇವ ಪ್ರಸಾದತಃ ॥ ೩ ॥

(ಅರ್ಥ) (ಇದೂ ಪದ್ಮಮಾಲೋಕ್ತ ಶ್ಲೋಕ) ಹೇ ಭಗವಂತ! ಪ್ರಭುವೇ! ನನ್ನ ಮುಖಾಂತರ ಯಾವ ಶುಭಕರ್ಮವನ್ನು ಮಾಡಿಸುವೆಯೋ ಅದೆಲ್ಲವೂ, ಹೇ ದೇವ ನಿನ್ನ ಪರಮಾನುಗ್ರಹದಿಂದ, ವಿಷ್ಣುಪೂಜೆಯೇ ಆಗಲಿ.

ಇತಿ ಪ್ರಾರ್ಥ್ಯ। ಪೂಜಾಸಂಕಲ್ಪಂ ಕುರ್ಯಾತ್

ಈ ರೀತಿ ಪ್ರಾರ್ಥನೆ ಮಾಡಿ, ಪೂಜೆಗಾಗಿ ಸಂಕಲ್ಪ ಮಾಡಬೇಕು. ಕೆಲವರು ಇಲ್ಲೇ ಸಂಕಲ್ಪಕ್ಕೆ ಪೂರ್ವದಲ್ಲಿಯೇ ಮಂಟಪಧ್ಯಾನವನ್ನು ಹೇಳಿಕೊಳ್ಳುತ್ತಾರೆ. ಪದ್ಯಮಾಲಾ ದಲ್ಲೂ ಹಾಗೆಯೇ ಕೊಟ್ಟಿದೆ. ಆದ್ದರಿಂದ ಮೊದಲು ಮಂಟಪಧ್ಯಾನ ಹೇಳಿ ಆಮೇಲೆ ಸಂಕಲ್ಪ ಮಾಡೋಣ.

ಅಥ ಮಂಟಪಧ್ಯಾನಮ್

ಶಾರ್ದೂಲವಿಕ್ರೀಡಿತವೃತ್ತ (೧೨+೭ ಅಕ್ಷರಗಳು)

ಓಂ॥ ಉತ್ತಪ್ತೋಜ್ಜ್ವಲಕಾಂಚನೇನ ರಚಿತಂ, ತುಂಗಾಂಗರಂಗಸ್ಥಲಂ
ಶುದ್ಧಸ್ಫಾಟಿಕಭಿತ್ತಿಕಾವಿಲಸಿತೈಃ ಸ್ತಂಭೈಶ್ಚ ಹೇಮ್ನೈಃ ಶುಭೈಃ ।
ಮುಕ್ತಾಜಾಲವಿಲಂಬಿಮಂಟಪಯುತಂ
ವಜ್ರೈಶ್ಚ ಸೋಪಾನಕೈರ್-
ನಾನಾರತ್ನವಿನಿರ್ಮಿತೈಶ್ಚ ಕಲಶೈ-ರತ್ಯಂತ ಶೋಭಾವಹಮ್॥ ೧ ॥

(ಕಠಿನ ಶಬ್ದಾರ್ಥ) ಉತ್-ತಪ್ತ-ಚೆನ್ನಾಗಿ ಕಾಯಿಸಿದ, ಕಾಂಚನ-ಬಂಗಾರ, ತುಂಗ-ಎತ್ತರವಾದ, ಅಂಗ-ಅಂಗಳಗಳು, ಭಿತ್ತಿಕಾ-ಗೋಡೆ, ವಿಲಸಿತ-ಶೋಭಿಸುವ, ಹೇಮ-ಬಂಗಾರದ, ಮುಕ್ತಾ-ಜಾಲ-ಮುತ್ತುಗಳ ಸಾಲು.

(ಭಾವಾರ್ಥ) ಭಗವಂತನನ್ನು ಕೂಡಿಸುವ ಮಂಟಪವು ಚೆನ್ನಾಗಿ ಕಾಯಿಸಿ ಪರಿ-ಶುದ್ಧ ಮಾಡಿದ ಚೊಕ್ಕ ಬಂಗಾರದಿಂದ ಮಾಡಿದ್ದಾಗಿದೆ. ಎತ್ತರವಾದ ಅಂಗಳಗಳೂ ರಂಗಸ್ಥಳಗಳೂ ಇವೆ. ಶುದ್ಧ ಸ್ಫಟಿಕಮಣಿಮಯವಾದ ಗೋಡೆಗಳಿಂದಲೂ ಶುಭಾವಹ ವಾದ ಬಂಗಾರದ ಕಂಬಗಳಿಂದಲೂ ಶೋಭಿಸುತ್ತಿದೆ. ಮಂಟಪದಲ್ಲಿ ಅಲ್ಲಲ್ಲಿ ಮುತ್ತಿನ ಗೊಂಚಲುಗಳನ್ನು ತೂಗಿಹಾಕಿದ್ದಾರೆ. ವಜ್ರದ ಸೋಪಾನಗಳನ್ನು ಕಟ್ಟಿದ್ದಾರೆ. ನಾನಾ ರತ್ನಗಳಿಂದ ರಚಿತವಾದ ಕಲಶಗಳಿಂದ ಬಹಳ ಶೋಭಾಯಮಾನವಾಗಿದೆ.

[1]ದ್ವಾರೈಶ್ಚಾಮರ ರತ್ನರಾಜಖಚಿತೈಃ ಶೋಭಾವಹಂ ಮಂಟಪಂ[2]
ರತ್ನಾಗ್ರ್ಯೈರಪಿ[3] ಶಂಖಪದ್ಮಧವಳೈಃ ಪ್ರಭ್ರಾಜಿತಂ ಸ್ವಸ್ತಿಕೈಃ ।

ಪಾಠಾಂತರಗಳು : 1. ಕುಂಭಕೋಣದ 'ಗೋಪಾಲವಿಲಾಸ' ಪುಸ್ತಕದಲ್ಲಿ 'ದ್ವಾರೈ ಸ್ವಸ್ತಿಕೈಃ' ಎಂಬ ಪೂರ್ವಾರ್ಧವು ಮೊದಲನೆಯ ಶ್ಲೋಕದ ಉತ್ತರಾರ್ಧ-ವಾಗಿಯೂ, 'ಮುಕ್ತಾಜಾಲ . ಶೋಭಾವಹಂ' ಎಂಬ ಉತ್ತರಾರ್ಧವು ೨ನೇ ಶ್ಲೋಕದ ಪೂರ್ವಾರ್ಧವಾಗಿಯೂ (ಹಿಂದುಮುಂದಾಗಿ) ಪಠಿತವಾಗಿದೆ. 2. ಮಂಡಿತೈಃ. 3. ಶತ್ರಾನ್ಯೈರಪಿ. 4. ರತ್ನರಾಜಿ.

ಮಾಣಿಕ್ಯೋಜ್ಜ್ವಲದೀಪದೀಪ್ತಿವಿಲಸಲ್ಲಕ್ಷ್ಮೀವಿಲಾಸಾಸ್ಪದಂ
ಧ್ಯಾಯೇನ್ಮಂಟಪಮರ್ಚನೇಷು ಸಕಲೈರೇವಂ ವಿಧೈಃ ಸಾಧಕೈಃ ||೨||

(ಕಠಿನ ಶಬ್ದಾರ್ಥ) ರತ್ನರಾಜ-ಶ್ರೇಷ್ಠ ರತ್ನಗಳಿಂದ, ರಾಜಿ-ಪ್ರಕಾಶದಿಂದ, ಶೋಭಾವಹಂ-ಶೋಭಿಸುವ, ಧವಳೈಃ-ಬೆಳ್ಳಗಿರುವ, ಪ್ರಭ್ರಾಜಿತಂ-ಥಳಥಳಿಸುವ, ವಿಲಸತ್-ಶೋಭಿಸುವ, ಪ್ರಕಾಶಿಸುವ.

(ಭಾವಾರ್ಥ) ದಿವ್ಯವಾದ ಬಾಗಿಲುಗಳಿಂದಲೂ, ರತ್ನಗಳ (ರಾಜಿ) ಕಾಂತಿಯಿಂದ ಹೊಳೆಯುವ ಚಾಮರಗಳಿಂದಲೂ ಉತ್ತಮ ರತ್ನಗಳಿಂದಲೂ ಮಂಟಪವು ಶೋಭಾಯಮಾನವಾಗಿದೆ. ಬೆಳ್ಳಗಿರುವ ಶಂಖಗಳಿಂದಲೂ ಪದ್ಮಗಳಿಂದಲೂ ಅಲಂಕೃತವಾದ ಸ್ವಸ್ತಿಕ ಚಿಹ್ನೆಗಳಿಂದ ಪ್ರಕಾಶಮಾನವಾಗಿದೆ. ಥಳಥಳ ಹೊಳೆಯುವ ಮಾಣಿಕ್ಯಗಳ ಪ್ರಕಾಶ (ದೀಪ)ದಿಂದ ಶೋಭಿಸುವ ಲಕ್ಷ್ಮೀದೇವಿಯ ವಿಲಾಸದಿಂದ ತುಂಬಿರುವ ದಿವ್ಯವಾದ ಮಂಟಪವನ್ನು ಪೂಜಾಕಾಲದಲ್ಲಿ ಸಕಲ ಪೂಜಕರೂ (ಪೂಜೆ ಮಾಡುವವರೂ) ಧ್ಯಾನ ಮಾಡಬೇಕು.

ಅನುಷ್ಟುಬ್

ಸಮ್ಮಾರ್ಜನ್ಯೈ ರಂಗವಲ್ಲೀ—ಧ್ವಜಕೇತಕತೋರಣೈಃ |
ವಿತಾನೈರಿಕ್ಷುಕದಳೀ—ಪೂರ್ಣಕುಂಭಾಂಕುರಾದಿಭಿಃ || ೩ ||

ಗೀತವಾ(ದ್ಯಾ)ದಿತ್ರ ನೃತ್ಯೈಶ್ಚ ಪುರಾಣಪಠನೈಃ ಶುಭೈಃ |
ಶೋಭಮಾನಂ ಮಹಾಪುಣ್ಯಂ ವರ್ಧಮಾನಂ ಮನೋಹರಂ || ೪ ||
ಇತಿ ಮಂಟಪಂ ಧ್ಯಾತ್ವಾ||

(ಅರ್ಥ) ಮಂಟಪದಲ್ಲಿ ಚೆನ್ನಾಗಿ ಗುಡಿಸಿ ಸಾರಿಸಿದೆ (ಸಂಮಾರ್ಜನ-ಸಾರಿಸುವುದು) ರಂಗೋಲಿಯನ್ನು ಹಾಕಿದೆ. ಧ್ವಜವನ್ನೂ ಪತಾಕೆಗಳನ್ನೂ ತೋರಣವನ್ನೂ ಕಟ್ಟಿದೆ. ಕಬ್ಬಿನ ಜಲ್ಲೆಗಳನ್ನೂ (ಇಕ್ಷು) ಬಾಳೆಕಂಬಗಳನ್ನೂ (ಕದಳೀ) ಸಾಲುಸಾಲಾಗಿ (ವಿತಾನ) ಕಟ್ಟಿದೆ. ಪೂರ್ಣಕುಂಭಗಳನ್ನಿಟ್ಟು ಅದರಲ್ಲೇ ಅಂಕುರಾರ್ಪಣ ಮಾಡಿದೆ. (ಸೂಚನೆ: ದೇವಸ್ಥಾನಗಳಲ್ಲಿ ವಿಶೇಷೋತ್ಸವಗಳಲ್ಲಿಯೂ ರಥೋತ್ಸವದಲ್ಲಿಯೂ 'ಅಂಕುರಾರ್ಪಣ' ಮಾಡಿಸುವುದು ಆಗಮೋಕ್ತವಾದ ಒಂದು ವಿಧಿ) ‖ ೩ ‖ ಕೆಲವರು ಹಾಡು ಹೇಳುತ್ತಲಿದ್ದಾರೆ. ಕೆಲವರು ವಾದ್ಯ ನುಡಿಸುತ್ತಿದ್ದಾರೆ. ಕೆಲವರು ನೃತ್ಯ ಮಾಡುತ್ತಿದ್ದಾರೆ. ಕೆಲವರು ಪುರಾಣಪಠನ ಮಾಡುತ್ತಿದ್ದಾರೆ. ಹೀಗೆ ಆ ಮಂಟಪವು ನಾನಾ ವಿಧವಾದ ಶುಭ ಕಾರ್ಯಗಳಿಂದ ತುಂಬಿದ್ದು ಮಹಾಪುಣ್ಯಕ್ಕೆ ನೆಲೆಮನೆಯಂತೆ ಕಂಗೊಳಿಸುತ್ತಿದೆ. ಈ ರೀತಿ ಮಂಟಪವನ್ನು ಚಿಂತಿಸಬೇಕು.

ಮಂಟಪಧ್ಯಾನ ಮುಗಿದ ಬಳಿಕ ಪೂಜಾಸಂಕಲ್ಪ ಮಾಡಬೇಕು.

ದೇಶ-ಕಾಲೌ ಸಂಕೀರ್ತ್ಯ (ಸಂವತ್ಸರ ಮಾಸ ತಿಥ್ಯಾದಿಗಳನ್ನು ಹೇಳಿ) । ಏವಂಗುಣವಿಶೇಷಣವಿಶಿಷ್ಟಾಯಾಂ ಶುಭತಿಥೌ ಭಗವತೋ ಬಲೇನ ಭಗವತೋ ವೀರ್ಯೇಣ ಭಗವತಸ್ತೇಜಸಾ ಭಗವತಃ ಕರ್ಮಣಾ ಮನುನಾಮಕ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣಪ್ರೇರಣಯಾ ಮನುನಾಮಕ ಶ್ರೀಭಾರತೀರಮಣಮುಖ್ಯ-ಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಮನುನಾಮಕ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮದನಿರುದ್ಧಪ್ರದ್ಯುಮ್ನ ಸಂಕರ್ಷಣವಾಸುದೇವಾತ್ಮಕ—ಶ್ರೀಲಕ್ಷ್ಮೀನಾರಾಯಣಸ್ಯ (ಅಥವಾ ತಮ್ಮ ಇಷ್ಟದೇವತೆಯ ಅಥವಾ ಕುಲದೇವತೆಯ ಹೆಸರನ್ನು ಹೇಳಿಕೊಂಡು) ಯಥಾಮತಿ ಯಥಾಶಕ್ತಿ ತಂತ್ರಸಾರೋಕ್ತಪ್ರಕಾರೇಣ ಧ್ಯಾನಾವಾಹನಾದಿ ಷೋಡಶೋಪಚಾರಪೂಜಾಂ ಕರಿಷ್ಯೇ॥ ಇತಿ ಜಲಂ ವಿಸೃಜೇತ್॥ (ನೀರನ್ನು ಬಿಡಬೇಕು)

ನಿರ್ಮಾಲ್ಯ ವಿಸರ್ಜನೆ

ದೇವಸ್ಯ ವಾಮಭಾಗೇ ಕೃತಾಂಜಲಿಪುಟಾಯ ಸಸ್ತ್ರೀಕಾಯ ಸಲಕ್ಷಣಾಯ ಶಂಕರಾಯ ನಮಃ । ತನ್ಮಸ್ತಕೇ ಭೂಂ ಭುವೇ ನಮಃ । ಸುವರ್ಣಪಾತ್ರಂ ವಿಚಿಂತ್ಯ, ತತ್ರ ನಿರ್ಮಾಲ್ಯಂ ವಿಸೃಜೇತ್ ॥

ದೇವರ ಎಡಭಾಗದಲ್ಲಿ ರುದ್ರದೇವರು ಇರುತ್ತಾರೆಂದು ಧ್ಯಾನಿಸಬೇಕು. ಮತ್ತು ಅಲ್ಲಿಯೇ ಒಂದು ಬಂಗಾರದ ಪಾತ್ರೆ ಇರುವುದೆಂದು ಊಹಿಸಿ ದೇವರ ನಿರ್ಮಾಲ್ಯವನ್ನು ತೆಗೆದು ಅಲ್ಲಿ ಹಾಕಬೇಕು. ನಿರ್ಮಾಲ್ಯವಿಸರ್ಜನೆಯ ಬಗ್ಗೆ ತೆಲುಗು ಪುಸ್ತಕದಲ್ಲಿ ಹೀಗೆ ಹೇಳಿದೆ—'ಅರುಣೋದಯವೇಳಾಯಾಂ ನಿರ್ಮಾಲ್ಯಂ ಶಲ್ಯತಾಂ ವ್ರಜೇತ್' ಎಂದರೆ ಅರುಣೋದಯಕಾಲದಲ್ಲಿ ನಿರ್ಮಾಲ್ಯವು ದೇವರಿಗೆ ಮುಳ್ಳುಗಳಂತೆ ಚುಚ್ಚುವಂತಾಗುತ್ತವೆಯೆಂದು ಹೇಳಿರುವುದರಿಂದ ನಿರ್ಮಾಲ್ಯತುಳಸೀಪುಷ್ಪಾದಿಗಳನ್ನು ಆದಷ್ಟು ಬೇಗ ವಿಸರ್ಜನೆ ಮಾಡಬೇಕು.

ಶಂಖಕ್ಕೆ ಸ್ವಲ್ಪ ನೀರು ಹಾಕಿ ಚೆನ್ನಾಗಿ ತೊಳೆದು 'ಸಹಸ್ರಾರ ಹುಂ ಫಟ್' ಎಂದು ಹೇಳಿ ಆ ನೀರನ್ನು ಚೆಲ್ಲಿಬಿಟ್ಟು ಪುನಃ ಶಂಖಕ್ಕೆ ನೀರು ಹಾಕಿಕೊಂಡು ಈ ಮುಂದಿನ ಮಂತ್ರ ಹೇಳಿಕೊಂಡು ಸಾಲಿಗ್ರಾಮಾದಿಗಳಿಗೆ ಚೆನ್ನಾಗಿ ಅಭಿಷೇಕ ಮಾಡಬೇಕು.

ಸೂಚನೆ: ಯಾವಾಗಲೂ ಉದ್ಧರಣೆಯಿಂದಾಗಲಿ, ಬೇರೆ ಪಾತ್ರೆಯಿಂದಾಗಲಿ ಶಂಖಕ್ಕೆ ನೀರು ಹಾಕಬೇಕೇ ವಿನಾ, ಶಂಖವನ್ನೇ ನೀರಿನಲ್ಲಿ ಅದ್ದಿ (ಮುಳುಗಿಸಿ) ನೀರು ತುಂಬಿಕೊಳ್ಳಬಾರದು; ಸರ್ವಥಾ ನಿಷಿದ್ಧ. ಏಕೆಂದರೆ—

ಸಾಕ್ಷಾಚ್ಛಂಖೇನ ಚೋದ್ಧೃತ್ಯ ಜಲಂ ಯಸ್ತ್ವಭಿಷೇಚಯೇತ್ ।
ಶ್ವಾನಮೂತ್ರಸಮಂ ಪ್ರೋಕ್ತಂ ಸತ್ಯಂ ಸತ್ಯಂ ಯುಧಿಷ್ಠಿರ ॥
ತ್ರಿವಾರಂ ಶೋಧಿತೈಸ್ತೀರ್ಥೈಃ ಸಾಲಗ್ರಾಮವಿಶೋಧನಮ್ ।
ಕುರ್ಯಾಚ್ಛಂಖತ್ರಯಾದ್ಭಿಶ್ಚ ಪರಿಷಿಚ್ಯ ತತಃ ಪರಮ್ ॥
ಪ್ರಕ್ಷಾಲಯೇಚ್ಛಿಲಾದೀಂಶ್ಚ ಅಹಂ ರುದ್ರೇತಿ ಮಂತ್ರತಃ ॥

ಎಂದು ಪ್ರಮಾಣವಿದೆ (ತೆಲುಗು ಆಹ್ನಿಕಮಂಜರಿಯಿಂದ).

(ಅರ್ಥ) ಹೇ ಧರ್ಮರಾಜ, ಶಂಖವನ್ನೇ ನೇರವಾಗಿ ನೀರಿನಲ್ಲಿ ಅದ್ದಿ ನೀರು ತೆಗೆದುಕೊಂಡು ಯಾರು ಅಭಿಷೇಕ ಮಾಡುತ್ತಾರೋ ಅದು ನಾಯಿಯ ಮೂತ್ರಕ್ಕೆ ಸಮಾನ, ನಿಜ, ನಿಜ. ಮೂರಾವರ್ತಿ ಶೋಧಿತವಾದ ನೀರಿನಿಂದ ಸಾಲಿಗ್ರಾಮಾದಿಗಳನ್ನು ಮೂರು ಸರಿ ನೀರು ಹಾಕಿ ತೊಳೆದು ಚೆಲ್ಲಿ ಕಡೆಗೆ 'ಅಹಂ ರುದ್ರೇಭಿಃ........' ಎಂಬ ಅಂಭೃಣೀಸೂಕ್ತದಿಂದ ಅಭಿಷೇಕ ಮಾಡಬೇಕು ಎಂದು ಪ್ರಮಾಣವಿದೆ. (ಶಂಖಕ್ಕೆ ಸಂಬಂಧಿಸಿದ ಹೆಚ್ಚಿನ ವಿಚಾರಗಳನ್ನು 'ಶಂಖಪೂಜಾವಿಧಾನ'ವನ್ನು ವಿವರಿಸುವಾಗ ಹೇಳುವೆವು.)

ಸಾಲಿಗ್ರಾಮಾದಿಗಳಿಗೆ ಹಿಂದಿನ ದಿವಸ ಹಚ್ಚಿದ್ದ ಗಂಧಾಕ್ಷತಾದಿಗಳು ನಿಶ್ಶೇಷವಾಗಿ ಹೋಗುವಂತೆ ಚೆನ್ನಾಗಿ ನೀರು ಹಾಕಿ ತೊಳೆದು ಆ ನೀರನ್ನು ಚೆಲ್ಲಿಬಿಡಬೇಕು. ಹಿಂದಿನ ನಿರ್ಮಾಲ್ಯಾದಿಗಳನ್ನು 'ಕಲಿ' ಎನ್ನುತ್ತೇವೆ. ಇದಕ್ಕೆ ಹೇಳುವ ಮಂತ್ರ—

ಸಾಲಿಗ್ರಾಮಶಿಲಾಯಾಂ ತು [1]ನಿತ್ಯಂ ಸನ್ನಿಹಿತಃ ಕಲಿಃ ।
ಭೀಮಸೇನ ಮಹಾಬಾಹೋ ಗದಯಾ [2]ನೋದನಂ ಕುರು ॥

ದ್ರೌಪದೀರಮಣ ಭೀಮಸೇನ। ದ್ರೌಪದೀರಮಣ ಭೀಮಸೇನ। ಇತಿ ಮಂತ್ರೇಣ ಸಾಲಿಗ್ರಾಮಂ ಪ್ರಕ್ಷಾಳ್ಯ। ಜಲಂ ವಿಸೃಜ್ಯ। ಪೃಥಗುದಕೇನ ಲಕ್ಷ್ಮೀಸೂಕ್ತೇನಾಭಿಷೇಕಂ ಕುರ್ಯಾತ್ ॥

(ಅರ್ಥ) ಸಾಲಿಗ್ರಾಮದ ಶಿಲೆಯಲ್ಲಿ ಕಲಿಯು ಸದಾ ಸನ್ನಿಹಿತನಾಗಿರುತ್ತಾನೆ. (ಪಾಠಾಂತರ ರೀತ್ಯಾ—ಸಾಲಿಗ್ರಾಮಶಿಲೆಯಲ್ಲಿ ವಾಸಿಸುತ್ತಿರುವ ಕಲಿಯನ್ನು ಶಕ್ತಿಯಿಂದ)

---

[1] ಪಾಠಾಂತರ—'ನಿತ್ಯಂ....ಕಲಿಃ' ಎಂಬುದಕ್ಕೆ 'ವಸಂತಂ ಕಲಿಮೋಜಸಾ' ಎಂಬ ಪಾಠವಿದೆ. [2] ಪೋಥನಂ

ಮಹಾಬಲಶಾಲಿಯಾದ ಹೇ ಭೀಮಸೇನ, ನಿನ್ನ ಗದೆಯಿಂದ ಓಡಿಸು (ಹೊರಹಾಕು). ದ್ರೌಪದೀರಮಣ ಭೀಮಸೇನ, (ಈ ನಾಮೋಚ್ಚಾರಣಮಾತ್ರದಿಂದ ಕಲಿ ನಿವೃತ್ತನಾಗುತ್ತಾನೆ.) ಈ ಮಂತ್ರ ಹೇಳಿಕೊಂಡು ಸಾಲಿಗ್ರಾಮಗಳ ಮೇಲೆ ಶಂಖದಿಂದ ನೀರು ಅಭಿಷೇಕ ಮಾಡಿ ಚೆನ್ನಾಗಿ ತೊಳೆದು—ಆ ನೀರನ್ನು ಚೆಲ್ಲಿ, ಪುನಃ ಬೇರೆ ನೀರಿನಿಂದ, ಅಂಭೃಣೀಸೂಕ್ತ ಹೇಳಿಕೊಂಡು, ಅಭಿಷೇಕ ಮಾಡಬೇಕು. ಈ ರೀತಿ ಅಭಿಷೇಕ ಮಾಡಿದ ನೀರಿಗೇ 'ನಿರ್ಮಾಲ್ಯತೀರ್ಥ'ವೆಂದು ಹೆಸರು.

ಮುಖ್ಯಪ್ರಾಣಾದಿಗಳ ಅಭಿಷೇಕ

ಕಲಶಸ್ಯ ಶೇಷೋದಕೇನ ವಾಯುಸ್ತುತ್ಯಾ ಮುಖ್ಯಪ್ರಾಣಾಭಿಷೇಕಂ ಕುರ್ಯಾತ್ ||

(ಅರ್ಥ) ಸಾಲಗ್ರಾಮಗಳಿಗೆ ನಿರ್ಮಾಲ್ಯವಿಸರ್ಜನೆಗೆ ಉಪಯೋಗಿಸಿದ ನೀರಿನ ಪಾತ್ರೆಯಲ್ಲಿ ಮಿಕ್ಕ ನೀರಿನಿಂದ ವಾಯುಸ್ತುತಿ ಹೇಳಿಕೊಂಡು ಮುಖ್ಯಪ್ರಾಣದೇವರಿಗೂ ಗರುಡ-ಶೇಷಾದಿಗಳಿಗೂ, ಗುರುಗಳ ವೃಂದಾವನಗಳಿಗೂ ಅಭಿಷೇಕ ಮಾಡಿ ಆ ಪ್ರತಿಮೆಗಳಿಗೆ ಹಚ್ಚಿದ್ದ ಹಿಂದಿನ ಗಂಧಾಕ್ಷತೆಗಳ ಕಲೆಯೆಲ್ಲವೂ ಹೋಗುವಂತೆ ಚೆನ್ನಾಗಿ ಅಭಿಷೇಕ ಮಾಡಬೇಕು.

ಬ್ರಹ್ಮಯಜ್ಞವನ್ನು ನಿತ್ಯ ಮಾಡುವ ಅಭ್ಯಾಸವುಳ್ಳವರು ಈ ನಿರ್ಮಾಲ್ಯತೀರ್ಥದಿಂದಲೇ ಬ್ರಹ್ಮಯಜ್ಞಾಂಗದ ತರ್ಪಣವನ್ನೂ ಕೊಡುವ ಪದ್ಧತಿಯಿದೆ. ಆದರೆ ಹಾಗೆ ತರ್ಪಣ ಕೊಡುವುದಿದ್ದರೆ ತೀರ್ಥವನ್ನು ಮೊದಲೇ ಇಬ್ಭಾಗ ಮಾಡಿ ತರ್ಪಣ ಕೊಡುವ ಭಾಗವನ್ನು ಬೇರೆ ತೆಗೆದಿಟ್ಟುಕೊಳ್ಳಬೇಕು. ನಂತರ ನಿರ್ಮಾಲ್ಯತೀರ್ಥವನ್ನು ಪ್ರಾಣದೇವರು-ಗರುಡಶೇಷಾದಿಗಳು, ಗುರುಗಳ ವೃಂದಾವನಗಳು ಎಲ್ಲರಿಗೂ ಕೊಟ್ಟು ಕೊನೆಗೆ ತಾನೂ ತೆಗೆದುಕೊಂಡು ಇತರರಿಗೂ ಕೊಡಬಹುದು. ಈ ತೀರ್ಥಸೇವನೆಯಿಂದ ದೇಹವು ಶುದ್ಧಿಯಾಗುತ್ತದೆ. ವೈಷ್ಣವತ್ವ ಸಿದ್ಧಿಯಾಗಿ ಮುಂದಿನ ಪೂಜೆಗೆ ಅರ್ಹವಾಗುತ್ತದೆ.

ಇಲ್ಲಿಗೆ ನಿರ್ಮಾಲ್ಯವಿಸರ್ಜನೆಯ ಘಟ್ಟ ಮುಗಿದಂತಾಯಿತು.

ಈಗ ಪದ್ಯಮಾಲೆಯಲ್ಲಿ ಹೇಳಿದಂತೆ ಪಾಪಪುರುಷವಿಸರ್ಜನಾದಿಗಳನ್ನೂ, ತತ್ವನ್ಯಾಸ ಮಾತೃಕಾನ್ಯಾಸಗಳನ್ನೂ ಮೂಲಮಂತ್ರಾದಿಗಳ ಜಪವನ್ನೂ ಮಾಡಬಹುದು. ಆಮೇಲೆ ಕಲಶಪೂಜೆ ಮಾಡಿ, ಪೂಜೆ ಮುಂದುವರಿಸಬೇಕು.

ಅಂಭೃಣೀಸೂಕ್ತ

ಹರಿಃ ಓಂ। 'ಅಹಂ ರುದ್ರೇಭಿಃ ' ಎಂದು ಆರಂಭವಾಗಿ '...ಮಹಿನಾ ಸಂ ಬಭೂವ।' ಎಂದು ಕೊನೆಯಾಗುವ ಸೂಕ್ತವೇ ಅಂಭೃಣೀಸೂಕ್ತ. ಕೆಲವರು ಇದನ್ನು ದೇವೀಸೂಕ್ತವೆಂದೂ ಕರೆಯುವುದುಂಟು. ಈ ಸೂಕ್ತವು ಋಗ್ವೇದದಲ್ಲಿ ಹತ್ತನೇ

ಮಂಡಲದಲ್ಲಿ ೧೫ನೇ ಸೂಕ್ತ; ೮ನೇ ಅಷ್ಟಕದ ಏಳನೇ ಅಧ್ಯಾಯದಲ್ಲಿ ೧೧-೧೨ನೇ ವರ್ಗ; ಈ ಸೂಕ್ತದಲ್ಲಿ ಎಂಟು ಋಕ್ಕುಗಳಿವೆ. ಈ ಸೂಕ್ತವು ಲಕ್ಷ್ಮೀದೇವಿಯ ಮಹಿಮಾಪ್ರತಿಪಾದಕವಾಗಿದೆ. ಇದಕ್ಕೆ ಮಂತ್ರಾಲಯದ ರಾಯರು ವಿಸ್ತಾರವಾದ ಅರ್ಥ-ವಿವರಣೆಯನ್ನು ಬರೆದಿದ್ದಾರಾದರೂ ಅದು ಈಗ ಉಪಲಭ್ಯವಿಲ್ಲ. [2]ಧೀರೇಂದ್ರ-ಸ್ವಾಮಿಗಳು ಬರೆದ ವ್ಯಾಖ್ಯಾನ, [3]ವಾದಿರಾಜರು ಬರೆದ ವ್ಯಾಖ್ಯಾನ ಇವುಗಳನ್ನು ಅನುಸರಿಸಿ ಈ ಸೂಕ್ತಕ್ಕೆ ಕನ್ನಡದಲ್ಲಿ ಅರ್ಥವು ಪ್ರಕಟವಾಗಿರುವ ಕಾರಣ ಈ ಸೂಕ್ತದ ಮಂತ್ರಗಳನ್ನಾಗಲೀ ಅರ್ಥವನ್ನಾಗಲೀ ಇಲ್ಲಿ ಕೊಟ್ಟಿಲ್ಲ.

ಕಲಶಪೂಜೆ

ಪೀಠಿಕೆ : ಪೂಜಾದಿ ಸಕಲ ಕಾರ್ಯಗಳಿಗೂ ನೀರು ಬೇಕೇಬೇಕು. ನೀರು ಶುದ್ಧ ವಾಗಿದ್ದರೆ ಮಾತ್ರ ಪೂಜಾದಿಗಳೆಲ್ಲವೂ ಶುದ್ಧವಾಗುತ್ತವೆ. ನೀರನ್ನು ಶುದ್ಧ ಮಾಡುವ ಬಗೆ ಹೇಗೆ? ಶುದ್ಧ ನೀರೆಂದರೇನು? ಎಂಬ ಪ್ರಶ್ನೆಗಳು ಹುಟ್ಟುತ್ತವೆ. ನದಿಯ ನೀರು ಸರ್ವೋತ್ತಮ. ಅದರಲ್ಲೂ ಸಮುದ್ರಕ್ಕೆ ಸೇರುವ ನದಿಗಳು ಇನ್ನೂ ಉತ್ತಮ. ನದಿಯ ನೀರು ಬಿಟ್ಟರೆ ಕೊಳದ, ಬಾವಿಯ ಅಥವಾ ಕೆರೆಯ ನೀರು ಪ್ರಶಸ್ತ. ಯಾವ ನೀರೇ ತಂದರೂ ಅದನ್ನು 'ತ್ರಿವಾರಂ ಶೋಧಿತ್ಯೈಸ್ತೀರ್ಥೈಃ' (ಮೂರು ಸರಿ ಶೋಧಿಸಿದ ನೀರಿನಿಂದ) ಎಂಬ ಪ್ರಮಾಣದಂತೆ ಮೂರು ಸರಿ ಶೋಧಿಸಿ ತರಬೇಕು.

ಹೀಗೆ ಶೋಧಿಸಿ ತಂದ ನೀರೂ ಸಹ ಪೂಜೆಗೆ ಯೋಗ್ಯವಾಗಬೇಕಾದರೆ ಗಂಗಾದಿ ಸಕಲ ತೀರ್ಥಾಭಿಮಾನಿಗಳನ್ನೂ ಅದಕ್ಕೂ ಹೆಚ್ಚಾಗಿ ತಂತ್ರಸಾರದಲ್ಲಿ ಹೇಳಿದಂತೆ ಕಲಶ-ದೇವತೆಗಳೆಂಬ ನೂರು ಭಗವದ್ರೂಪಗಳನ್ನೂ ಆ ನೀರಿನಲ್ಲಿ ಆವಾಹನೆ ಮಾಡಿ ಅರ್ಚನೆ ಮಾಡಬೇಕು. ಆಗಲೇ ಆ ನೀರು ಪಾವನವಾಗಿ ಪೂಜೆಗೆ ಯೋಗ್ಯವಾಗುತ್ತದೆ.

ಕಲಶಗಳ ಸಂಖ್ಯೆ: ಪದ್ಯಮಾಲೆಯಲ್ಲಿ ಏಳು ಕಲಶಗಳಿರಬೇಕೆಂದೂ, ಅದು ಸಾಧ್ಯ ವಿಲ್ಲದಿದ್ದರೆ ಐದಾಗಲೀ ಮೂರಾಗಲೀ ಎರಡಾಗಲೀ ಇರಬೇಕೆಂದೂ ಅದೂ ಸಾಧ್ಯವಿಲ್ಲದ ಸಂದರ್ಭದಲ್ಲಿ ಒಂದು ಕಲಶವನ್ನೇ ಇಡಬಹುದೆಂದೂ, ಅದರ ನೀರನ್ನೇ ಬೇರೆಬೇರೆಯಾಗಿ ತೆಗೆದುಕೊಂಡು ಬಳಸಬೇಕೆಂದೂ ಹೇಳಿದ್ದಾರೆ. ಅವರ ವಿವರಣೆ ಹೀಗಿದೆ—

---

[2] ಪವನ ಪರಿಮಳ ಪ್ರಕಾಶನ, 421/6, ಅಮರಜ್ಯೋತಿ ಲೇಔಟ್, ನಾಗರಭಾವಿ ರಸ್ತೆ, ವಿಜಯನಗರ, ಬೆಂಗಳೂರು-560040 ಇವರಿಂದ ಪ್ರಕಟಿತ.

[3] ಐತರೇಯ ಪ್ರಕಾಶನ, ಲೇಖಕರು, ಶ್ರೀ ವಿ. ಪ್ರಭಂಜನಾಚಾರ್ಯ, ಎಂ.ಎ., ನಂ. 6, 1ನೇ ಕ್ರಾಸ್, 14ನೇ ಮೈನ್, ಬನಶಂಕರಿ 2ನೇ ಸ್ಟೇಜ್, ಬೆಂಗಳೂರು 560050. ಇವರಿಂದ ಪ್ರಕಟಿತ.

ನೈವೇದ್ಯಪ್ರೋಕ್ಷಣಾರ್ಥಂ ಚ ಪಂಚಪಾತ್ರಪ್ರಪೂರಣೇ ।
ಪಾನೀಯಾರ್ಥಂ ಪೃಥಕ್‌ಚೈಕಂ ಕಲಶಂ ತ್ರಿತಯಂ ಭವೇತ್ ॥ ೪೫ ॥

(ಅರ್ಥ) ನೈವೇದ್ಯವನ್ನು ಪ್ರೋಕ್ಷಿಸುವುದಕ್ಕೆ ಒಂದು ಕಲಶ, ಅರ್ಘ್ಯಾದಿ ಪಂಚ ಪಾತ್ರೆಗಳಿಗೆ ಹಾಕುವುದಕ್ಕೆ ಒಂದು, ದೇವರಿಗೆ ಕುಡಿಯುವುದಕ್ಕೆ (ನೈವೇದ್ಯಕ್ಕೆ ಇಡಲು) ಒಂದು, ಹೀಗೆ ಮೂರು ಕಲಶಗಳು ಬೇರೆಬೇರೆ ಬೇಕು.

ಪಂಚೈತೇ ಕಲಶಾಃ ಪ್ರೋಕ್ತಾ ಗಂಧಾರ್ಥಂ ದ್ವೌ ಪುನಃ ಪೃಥಕ್ ।
ಸಂಭವೇ ಸಪ್ತ ಕಲಶಾಃ ಪಂಚ ವಾಥ ತ್ರಯೋ ದ್ವಯಮ್ ॥ ೪೬ ॥
ಅಸಂಭವೇ ಚ ಸರ್ವೇಷಾಂ ಭಿನ್ನಪಾತ್ರಾಣಿ ಕಾರಯೇತ್ ।
ಏಕಸ್ಮಾದಪಿ ಪಶ್ಚಾತ್ ತಂ ಕಲಶಂ ಪೂಜಯೇದ್‌ಬುಧಃ ॥ ೪೭ ॥

— ಪದ್ಯಮಾಲಾ

(ಅರ್ಥ) ಸ್ನಾನಕ್ಕೆ ಒಂದು ಬೃಹತ್ಕಲಶ, ಕುಂಭೋದಕಕ್ಕೆ ಒಂದು ಹೀಗೆ ಇನ್ನೂ ಎರಡು ಸೇರಿ ಐದು ಕಲಶಗಳನ್ನೂ ಸ್ಥಾಪಿಸಬಹುದು. ಇನ್ನೂ ಸಾಧ್ಯವಿದ್ದರೆ ಗಂಧಾರ್ಥ ಎಂದರೆ ಗಂಧೋದಕಕ್ಕಾಗಿ ಅಥವಾ ಗಂಧ ತೇಯುವುದಕ್ಕಾಗಿ ಒಂದು, ಹಸ್ತಪ್ರಕ್ಷಾಳನಕ್ಕಾಗಿ ಒಂದು ಹೀಗೆ ಏಳು ಕಲಶಗಳವರೆಗೂ ಇಡಬಹುದು. ಅದು ಸಾಧ್ಯವಿಲ್ಲದಿದ್ದರೆ ಶಕ್ತಿಯಿದ್ದಷ್ಟು—ಐದು, ಮೂರು ಅಥವಾ ಎರಡು ಇಡಬಹುದು. ಎಲ್ಲವೂ ಅಸಾಧ್ಯವಾದರೆ ಕಡೇಪಕ್ಷ ಒಂದು ಕಲಶವನ್ನಾದರೂ ಇಟ್ಟು ಅದರಿಂದಲೇ ತುಂಬಿ ತುಂಬಿ ಬೇರೆ-ಬೇರೆ ಕೆಲಸಗಳಿಗೆ ಉಪಯೋಗಿಸಬಹುದೆಂದು ಟೀಕಾಚಾರ್ಯರೇ ಹೇಳಿದ್ದಾರೆ.

ಆದರೆ ಕಲಶದ ಸಂಖ್ಯೆಗಳನ್ನು ಹೆಚ್ಚಿಸುವುದಕ್ಕಿಂತಲೂ ಪೂಜಾವಿಧಾನವನ್ನೂ ಕಲಶದಲ್ಲಿ ದೇವತೆಗಳನ್ನು ಅನುಸಂಧಾನ ಮಾಡುವ ಕ್ರಮವನ್ನೂ ಅರಿತುಕೊಂಡು ಅದರಂತೆ ನಡೆಯುವುದು ಉತ್ತಮಪಕ್ಷ. ಇದನ್ನೇ ಟೀಕಾಚಾರ್ಯರು 'ಪಶ್ಚಾತ್ ತಂ ಕಲಶಂ ಪೂಜಯೇದ್ ಬುಧಃ' ಎಂಬುದರಿಂದ ಸೂಚಿಸಿದ್ದಾರೆ. ಇಲ್ಲಿ 'ಬುಧಃ' ಎಂಬುದು ಬಹು ಮುಖ್ಯ. 'ಬುಧ್' ಎಂದರೆ ತಿಳಿ, ತಿಳಿದುಕೋ ಎಂದರ್ಥ. ಆದಕಾರಣ ಬುಧಃ ಎಂದರೆ ಶ್ರೀಮದಾಚಾರ್ಯರು ಹೇಳಿದ ಅನುಸಂಧಾನಕ್ರಮವನ್ನು 'ತಿಳಿದುಕೊಂಡು' ಆ ಕಲಶವನ್ನು ಪೂಜೆ ಮಾಡಬೇಕೆಂದು ಅಪ್ಪಣೆ ಮಾಡಿದ್ದಾರೆ. 'ತಂ ಕಲಶಂ' ಎಂದು ಏಕವಚನ ಹೇಳಿದ್ದರಿಂದ ಒಂದು ಕಲಶ ಇಡುವುದೇ ಎಲ್ಲರಿಗೂ ಸಾಧ್ಯ ಎಂಬುದನ್ನೂ ಸೂಚಿಸಿದ್ದಾರೆ. ಈಗ ಪೂಜಾಕ್ರಮವನ್ನು ತಿಳಿಸುವೆವು.

ಕಲಶಪೂಜಾ ವಿಧಾನ

ತದಂಗತ್ವೇನ ಕಲಶಾರಾಧನಂ ಚ ಕರಿಷ್ಯೇ । ಕಲಶಂ ಗಂಧಾಕ್ಷತಾದಿಭಿ-ರಲಂಕೃತ್ಯ। ಶ್ರೀಬೀಜಂ ವಿಲಿಖ್ಯ। ಷಟ್ಕೋಣಪದ್ಮಂ ಧ್ಯಾತ್ವಾ। ತುಲಸೀ-ದಲಾನಿ ನಿಕ್ಷಿಪ್ಯ॥

(ಅರ್ಥ) ಪೂಜೆಯ ಅಂಗವಾಗಿ ಕಲಶವನ್ನು ಪೂಜಿಸುತ್ತೇನೆ. ಕಲಶಕ್ಕೆ ಗಂಧ, ಅಕ್ಷತೆ ಹಚ್ಚಿ ಅಲಂಕರಿಸಿ (ನಾಲ್ಕು ಕಡೆಗಳಲ್ಲೂ ಹಚ್ಚುವುದು ವಾಡಿಕೆ), 'ಶ್ರೀಂ' ಎಂದು ತುಳಸಿಯಿಂದ ನೀರಿನಲ್ಲಿ ಬರೆದು, ಅದರ ಸುತ್ತಲೂ ಷಡ್ದಳ ಪದ್ಮವನ್ನು ಬರೆಯಬೇಕು. ಕಲಶದ ಮೇಲೆ ತುಲಸೀದಳ ಇಟ್ಟು, ಈ ಮುಂದೆ ಹೇಳಿರುವಂತೆ ತಾರ್ಕ್ಷ್ಯಾದಿ ಮುದ್ರೆಗಳನ್ನು ತೋರಿಸಬೇಕು. (ಈ ಮುದ್ರೆಗಳನ್ನು ಉಡುಪಿಯ ಆಹ್ನಿಕಮಂಜರಿಯಲ್ಲಿ ನೋಡಬಹುದು.)

ನಿರ್ವಿಷೀಕರಣಾರ್ಥಂ ತಾರ್ಕ್ಷ್ಯಮುದ್ರಾಂ, ಅಮೃತೀಕರಣಾರ್ಥಂ ಧೇನುಮುದ್ರಾಂ, ಪವಿತ್ರೀಕರಣಾರ್ಥಂ ಶಂಖಮುದ್ರಾಂ, ಸಂರಕ್ಷಣಾರ್ಥಂ ಚಕ್ರಮುದ್ರಾಂ, ದಿಗ್ಬಂಧನಾರ್ಥ ಗದಾಮುದ್ರಾಂ, (ಜಲಶೋಧನಾರ್ಥಂ ಪದ್ಮಮುದ್ರಾಂ) ಚ ಪ್ರದರ್ಶ್ಯ। ಕಲಶಂ ಸ್ಪೃಷ್ಟ್ವಾ।

(ಅರ್ಥ) ವಿಷಪರಿಹಾರಕ್ಕೆ ಗರುಡ (ತಾರ್ಕ್ಷ್ಯ) ಮುದ್ರೆಯನ್ನೂ, ಅಮೃತದಂತೆ ಆಗುವುದಕ್ಕಾಗಿ ಧೇನುಮುದ್ರೆಯನ್ನೂ, ಪವಿತ್ರವಾಗುವುದಕ್ಕಾಗಿ ಶಂಖಮುದ್ರೆಯನ್ನೂ, ಸಂರಕ್ಷಣೆಗಾಗಿ ಚಕ್ರಮುದ್ರೆಯನ್ನೂ, ದಿಗ್ಬಂಧನಕ್ಕಾಗಿ ಗದಾಮುದ್ರೆಯನ್ನೂ (ಜಲವನ್ನು ಶೋಧಿಸುವುದಕ್ಕಾಗಿ ಪದ್ಮಮುದ್ರೆಯನ್ನೂ) ತೋರಿಸಿ, ಕಲಶದ ಮೇಲೆ ಕೈಯಿಟ್ಟು (ಕಲಶವನ್ನು ಎರಡೂ ಕೈಗಳಿಂದ ಮುಟ್ಟಿಕೊಂಡು) ಕೆಳಗಿನ ಮಂತ್ರಗಳನ್ನು ಹೇಳಬೇಕು.

ಕಲಶಾಭಿಮಂತ್ರಣ ಮಂತ್ರಾಃ

ಈ ಶ್ಲೋಕಗಳಲ್ಲಿ ಯಾವ ಯಾವ ದೇವತೆಗಳನ್ನು ಕಲಶದಲ್ಲಿ ಚಿಂತಿಸಬೇಕೆಂದು ಹೇಳಿದೆ. ಈ ಪೈಕಿ ಮೊದಲನೆಯ ಆರು ಶ್ಲೋಕಗಳು ಸಾಮಾನ್ಯವಾಗಿ ಎಲ್ಲರೂ ಹೇಳುವಂಥವು. ಕಡೇ ಮೂರು ಶ್ಲೋಕಗಳನ್ನು ಮಾತ್ರ ಶ್ರೀಮದಾಚಾರ್ಯರು ತಂತ್ರಸಾರದಲ್ಲಿ (೨ ಅಧ್ಯಾಯ) ಹೇಳಿದ್ದಾರೆ; ಈ ಅನುಸಂಧಾನ ಮಧ್ವಮತಾನುಯಾಯಿಗಳಾದ ವೈಷ್ಣವರಿಗೆ ಮೀಸಲಾದದ್ದು. ಇತರರಿಗೆ ಇದು ಗೊತ್ತೇ ಇಲ್ಲ.

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ ।
ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ ॥

(ಅರ್ಥ) ಕಲಶಪಾತ್ರೆಯ ಬಾಯಲ್ಲಿ ಮುಖದಲ್ಲಿ—ಮೇಲ್ಭಾಗದಲ್ಲಿ—ತೆರೆದಿರುವ ಭಾಗದಲ್ಲಿ) ವಿಷ್ಣು ಸನ್ನಿಹಿತನಾಗಿರುತ್ತಾನೆ. ಅದರ ಕಂಠದಲ್ಲಿ ರುದ್ರದೇವರು ಸನ್ನಿಹಿತರಾಗಿರುತ್ತಾರೆ. ಮೂಲದಲ್ಲಿ (ಬುಡದಲ್ಲಿ—ಕೆಳಭಾಗದಲ್ಲಿ) ಚತುರ್ಮುಖಬ್ರಹ್ಮನು ಇರುತ್ತಾನೆ. ಹೀಗೆ ತ್ರಿಮೂರ್ತಿಗಳೂ ಅಲ್ಲಿ ಸನ್ನಿಹಿತರಾಗಿರುತ್ತಾರೆ ಮಧ್ಯಭಾಗದಲ್ಲಿ (ಹೊಟ್ಟೆಯ ಭಾಗದಲ್ಲಿ) ಮಾತೃಗಣಗಳು ಇರುತ್ತಾರೆಂದು ತಿಳಿದವರು ಹೇಳುತ್ತಾರೆ.

ಇಲ್ಲಿ ಮಾತೃಗಣವೆಂದರೆ ಸಾಮಾನ್ಯವಾಗಿ 'ಬ್ರಾಹ್ಮೀ ಮಾಹೇಶ್ವರೀ ಚೈವಾ ಕೌಮಾರೀ ವೈಷ್ಣವೀ ತಥಾ। ವಾರಾಹೀ ಚೈವ ಚೇಂದ್ರಾಣೀ ಚಾಮುಂಡಾಃ ಸಪ್ತ ಮಾತರಃ।' ಎಂಬ ಪ್ರಸಿದ್ಧರಾದ ಸಪ್ತಮಾತೃಗಳೆಂಬುದು ಒಂದು ಸಾಮಾನ್ಯಾರ್ಥ. ನವದುರ್ಗೆಯರೆಂಬ ಒಂಬತ್ತು ದುರ್ಗಾರೂಪಗಳೆಂಬುದು ಇನ್ನೊಂದು ಅರ್ಥ. ಆದರೆ ಅ-ಅಕಾರಾದಿ ವರ್ಣಗಳಿಗೆ (ಮಾತೃಕೆಗಳಿಗೆ) ಅಭಿಮಾನಿಗಳಾದ ವರ್ಣಾಭಿಮಾನಿದೇವತೆ-ಗಳೆಂಬುದು ಪ್ರಧಾನಾರ್ಥ. ಈ ವರ್ಣಾಭಿಮಾನಿ ದೇವತೆಗಳಿಗೆ ನಿಯಾಮಕಗಳಾದ ಅಜಾದಿ ಭಗವದ್ರೂಪಗಳೂ ಕಲಶದಲ್ಲಿರುತ್ತವೆಯೆಂಬುದು ಮುಂದೆ ಏಳನೇ ಶ್ಲೋಕ ದಿಂದ ಗೊತ್ತಾಗುತ್ತದೆ. (ಈ ರೀತಿ ಈ ದೇವತೆಗಳು ಈ ಭಾಗಗಳಲ್ಲಿ ಸನ್ನಿಹಿತರಾಗಿದ್ದಾ ರೆಂದು ನಾವು ಧ್ಯಾನ ಮಾಡಬೇಕೆಂದು ಭಾವ.)

ಕುಕ್ಷೌ ತು ಸಾಗರಾಃ ಸರ್ವೇ ಸಪ್ತದ್ವೀಪಾ ವಸುಂಧರಾ।
ಋಗ್ವೇದೋಽಥ ಯಜುರ್ವೇದಃ ಸಾಮವೇದೋ ಹ್ಯಥರ್ವಣಃ।
ಅಂಗೈಶ್ಚ ಸಹಿತಾಸ್ಸರ್ವೇ ಕಲಶಂ ತು ಸಮಾಶ್ರಿತಾಃ ॥ ೨ ॥

(ಅರ್ಥ) ಕಲಶದ ಹೊಟ್ಟೆಯ ಭಾಗದಲ್ಲಿ ಸಕಲ ಸಾಗರಾಭಿಮಾನಿಯಾದ ವರುಣನೂ ಜಂಬೂ-ಪ್ಲಕ್ಷ ಕುಶ-ಕ್ರೌಂಚಾದಿ ಸಪ್ತದ್ವೀಪಸಹಿತಳಾದ ಭೂದೇವಿಯೂ ಇರುತ್ತಾರೆ. ಕಲಶದಲ್ಲಿ ಋಗ್ವೇದ-ಯಜುರ್ವೇದ-ಸಾಮವೇದ-ಅಥರ್ವಣವೇದಾಭಿಮಾನಿ ದೇವತೆ ಗಳೂ ಶಿಕ್ಷಾ ವ್ಯಾಕರಣಾದಿ ಷಡಂಗಗಳ ದೇವತೆಗಳೂ ಸನ್ನಿಹಿತರಾಗಿರುತ್ತಾರೆ.

ಅತ್ರ ಗಾಯತ್ರೀ ಸಾವಿತ್ರೀ ಶಾಂತಿಃ ಪುಷ್ಟಿಕರೀ ತಥಾ।
ಆಯಾಂತು ದೇವಪೂಜಾರ್ಥ—ಮಭಿಷೇಕಾರ್ಥ[1]ಸಿದ್ಧಯೇ ॥ ೩ ॥

[1] ಪಾಠಾಂತರ : ಕಾರ್ಥಮಾದರಾತ್

(ಅರ್ಥ) ಇಲ್ಲಿ ಗಾಯತ್ರೀ ಸಾವಿತ್ರೀ ಶಾಂತಿ ಪುಷ್ಟಿಕರೀ ಮೊದಲಾದ ಸಕಲ ಮಂತ್ರದೇವತೆಗಳೂ ಭಗವಂತನಿಗೆ ಪೂಜೆ ಮಾಡುತ್ತಾ ಅಭಿಷೇಕವು ಸಫಲವಾಗುವು ದಕ್ಕಾಗಿ ಆದರದಿಂದ ಬರಲಿ, ಬಂದು ಸನ್ನಿಹಿತರಾಗಲಿ.

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ।
ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥ ೪ ॥

ಸೂಚನೆ— ಈ ಶ್ಲೋಕದಲ್ಲಿರುವ ಗಂಗೇ ಯಮುನೇ ಮೊದಲಾದ ಸಕಲ ನದಿಗಳ ಹೆಸರುಗಳೂ ಸಂಬೋಧನೆಯಲ್ಲಿವೆ; ಆದ್ದರಿಂದಲೇ ಗೋದಾವರೀ, ಕಾವೇರೀ ಮೊದ ಲಾದುವು ಹ್ರಸ್ವಸ್ವರಾಂತವಾಗಿವೆ. ಇಲ್ಲಿ ದೀರ್ಘಸ್ವರ ಹೇಳಬಾರದು.

(ಅರ್ಥ) ಹೇ ಗಂಗಾದೇವಿ, ಯಮುನೆಯೇ, ಗೋದಾವರಿಯೇ, ಸರಸ್ವತಿಯೇ, ನರ್ಮದೆಯೇ, ಸಿಂಧುವೇ, ಕಾವೇರಿಯೇ, ನೀವೆಲ್ಲ ಈ ನೀರಿನಲ್ಲಿ ಸನ್ನಿಹಿತರಾಗಿರಿ.

ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಃ ಸರಿತಸ್ತಥಾ ।
ಆಗಚ್ಛಂತು ಪವಿತ್ರಾಣಿ ಪೂಜಾಕಾಲೇ ಸದಾ ಮಮ ॥ ೫ ॥

(ಅರ್ಥ) ಪುಷ್ಕರಾದಿ ಸಕಲ ತೀರ್ಥಾಭಿಮಾನಿ ದೇವತೆಗಳೂ ಗಂಗಾದಿ ಪವಿತ್ರ ನದ್ಯಭಿಮಾನಿಗಳೂ ಸದಾ ನನ್ನ ಪೂಜಾಕಾಲದಲ್ಲಿ ಈ ಕಲಶೋದಕದಲ್ಲಿ ಬಂದು ಸನ್ನಿಹಿತರಾಗಲಿ.

ವೇದಮಂತ್ರ

ಇಮಂ ಮೇ ಗಂಗೇ ಯಮುನೇ ಸರಸ್ವತಿ
ಶತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾ
ಽಽರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥ ೬ ॥

(ಋ. ೧೦/೭೫/೫; ಅಷ್ಟ ೮, ಅ. ೩, ವರ್ಗ ೬)

ಮೇಲೆ ಕೊಟ್ಟಿರುವುದು ಋಗ್ವೇದ ಸ್ವರ. ಯಜುರ್ವೇದದಲ್ಲೂ ತೈತ್ತಿರೀಯಾರಣ್ಯಕದಲ್ಲಿ ೧೦ನೇ ಪ್ರಶ್ನೆಯಲ್ಲಿ (ಎಂದರೆ ಮಹಾನಾರಾಯಣೋಪನಿಷತ್ತಿನಲ್ಲಿ) ೧ನೇ ಅನುವಾಕದಲ್ಲಿ ೧೩ನೇ ಮಂತ್ರವಾಗಿಯೂ ಪಠಿತವಾಗಿದೆ. ಯಜುರ್ವೇದಪಾಠದಲ್ಲಿ ಸ್ವರವ್ಯತ್ಯಾಸವಿದೆ; ಬೇಕಾದವರು ನೋಡಿಕೊಳ್ಳಬಹುದು.

ಮಂತ್ರದ ಬಗ್ಗೆ ವಿವರಣೆ

ಈ ಮಂತ್ರದಲ್ಲಿ ಒಟ್ಟು ಹತ್ತು ನದಿಗಳ ಹೆಸರುಗಳಿವೆ. ಇವುಗಳ ಪೈಕಿ ಗಂಗೇ ಯಮುನೇ ಸರಸ್ವತಿ ಶತುದ್ರಿ ಮರುದ್ವೃಧೇ ಆರ್ಜೀಕೀಯೇ ಇವು ಆರೂ ಸಂಬೋಧನೆಗಳು. ಪರುಷ್ಣಿಯಾ ಅಸಿಕ್ನಿಯಾ ವಿತಸ್ತಯಾ ಸುಷೋಮಯಾ ಎಂಬ ನಾಲ್ಕು ತೃತೀಯಾ ವಿಭಕ್ತ್ಯಂತ ನದೀ ಹೆಸರುಗಳು. ಸಚತ, ಶ್ರುಣುಹಿ ಎರಡೂ ಕ್ರಿಯೆಗಳು. ಸ್ತೋಮಂ ಕರ್ಮಪದ. ಇಮಂ ಅದಕ್ಕೆ ವಿಶೇಷಣ.

ಇವುಗಳಲ್ಲಿ ಸುಷೋಮಾ ಎಂಬುದು (ಸುಷೋಮಯಾ ಎಂಬುದರ ಪ್ರಥಮಾ ವಿಭಕ್ತಿರೂಪ) ಸಿಂಧೂನದಿಯ ಹೆಸರೆಂದು ನಿರುಕ್ತಿಕಾರರು ಹೇಳಿದ್ದಾರೆ. ಏಕೆಂದರೆ

ಸಿಂಧು ಶಬ್ದಕ್ಕೆ ಹರಿಯುವುದು ಎಂಬರ್ಥ; ಈ ನದಿಗೇ ಶತುದ್ರಿ, ಪರುಷ್ಣಿ, ಅಸಿಕ್ನಿ ಮೊದಲಾದ ಅನೇಕ ನದಿಗಳು ಬಂದು ಸಂಗಮವಾಗಿ ಇದರೊಂದಿಗೆ ಸಮುದ್ರ ಸೇರುವುವು. ಹೀಗೆ ಈ ನದಿಗೆ ಸಿಂಧು ಎಂಬ ಹೆಸರು ಬಂತೆಂದು ನಿರುಕ್ತಕಾರರು ಹೇಳುತ್ತಾರೆ. ಆಧುನಿಕ ಪಾಶ್ಚಾತ್ಯ ವಿದ್ವಾಂಸರಲ್ಲಿ ಕೆಲವರು ಈ ನದಿಯ ಎರಡೂ ದಡಗಳಲ್ಲಿ ಉತ್ತಮವಾದ ಸೋಮಲತೆಯ ಸಸ್ಯಗಳು ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಈ ನದಿಗೆ 'ಸು'-ಒಳ್ಳೆಯ ಅಥವಾ ಉತ್ತಮವಾದ, ಸೋಮ-ಸೋಮಲತೆಯುಳ್ಳ ನದೀ—ಸುಷೋಮಾ ಎಂಬ ಹೆಸರು ಬಂದಿರಬಹುದೆಂದು ಅಭಿಪ್ರಾಯಪಡುತ್ತಾರೆ.

ಇನ್ನು ಈ ಮಂತ್ರದಲ್ಲಿ ಬಂದಿರುವ ಅನೇಕ ಹೆಸರುಗಳು ಈಗ ಪಂಜಾಬಿನಲ್ಲಿ (ಪಶ್ಚಿಮ ಪಂಜಾಬಿನಲ್ಲಿ) ಹರಿಯುವ ನದಿಗಳೆಂದೂ ಗುರುತಿಸಿದ್ದಾರೆ—ಶತುದ್ರಿ-ಸಟ್ಲೆಜ್, ಪರುಷ್ಣಿ-ರಾವಿ, ಅಸಿಕ್ನಿ-ಚೀನಾಬ್, ವಿತಸ್ತಾ-ಜೀಲಂ, ಆರ್ಜೀಕೀಯಾ-ಬಿಯಾಸ್, ಸುಷೋಮಾ-ಸಿಂಧು, ಮತ್ತು ಮರುದ್ವೃಧಾ-ಜೀಲಂ-ಚೀನಾಬ್ ಎರಡೂ ಸೇರಿದ (ತುಂಗಭದ್ರೆಯಂತೆ) ನದೀ. (ಈ ವಿಚಾರಗಳನ್ನು ಹೆಚ್. ಪಿ. ವೆಂಕಟರಾಯರ ಋಗ್ವೇದ, ಮೈಸೂರು ಅರಮನೆ ಸಂಸ್ಕರಣದ ೨ನೇ ಭಾಗದಿಂದ ಸಂಗ್ರಹಿಸಿದ್ದೇನೆ.)

ಮಂತ್ರದ ಅರ್ಥ: (ಧೀರೇಂದ್ರರ ವ್ಯಾಖ್ಯಾನಾನುಸಾರ) ಶೃಣುಹ್ಯಾ ಎಂಬಲ್ಲಿ ಶೃಣುಹಿ + ಆ ಎಂದು ಪದಚ್ಛೇದ. ಮತ್ತು 'ಮೇ ಇಮಂ ಸ್ತೋಮಂ ಆ ಶೃಣುಹಿ, ಆ ಸಚತ' ಎಂಬುದೇ ವಾಕ್ಯದ ಮುಖ್ಯಭಾಗ. ಇದಕ್ಕೆ 'ನನ್ನ ಈ ಸ್ತೋತ್ರವನ್ನು ಕೇಳಿರಿ, ಕೇಳಿ ಇಲ್ಲಿ ಸನ್ನಿಹಿತರಾಗಿರಿ' ಎಂಬುದೇ ಮುಖ್ಯಾಭಿಪ್ರಾಯ. ಮಿಕ್ಕ ಪದಗಳೆಲ್ಲ ನದಿಗಳ ಹೆಸರುಗಳೇ. ಒಟ್ಟಿನಲ್ಲಿ ಈ ಮಂತ್ರಕ್ಕೆ ಹೀಗೆ ಅನ್ವಯಾರ್ಥ—

ಅನ್ವಯಾರ್ಥ: ಗಂಗೇ-ಹೇ ಭಾಗೀರಥಿಯೇ, ಯಮುನೇ-ಹೇ ಸೂರ್ಯ-ತನಯೇ (ಯಮುನೆಯು ಸೂರ್ಯನ ಮಗಳು ಮತ್ತು ಯಮರಾಜನ ಸಹೋದರಿಯೂ ಆಗಿದ್ದಾಳೆ), ಸರಸ್ವತಿ-ಹೇ ಸರಸ್ವತಿಯೇ (ಈ ಮೂರು ನದಿಗಳೂ ಪ್ರಯಾಗದಲ್ಲಿ ತ್ರಿವೇಣಿಯಲ್ಲಿ ಸಂಗಮವಾಗುತ್ತವೆ. ಸರಸ್ವತಿಯು ಗುಪ್ತನದೀ), ಶತುದ್ರಿ-ಎಲೈ ಶತುದ್ರಿಯೇ (ಸಟ್ಲೆಜ್ ನದಿಯೇ), ಪರುಷ್ಣಿಯಾ, ಅಸಿಕ್ನಿಯಾ-ಪರುಷ್ಣಿ ಮತ್ತು ಅಸಿಕ್ನಿಗಳೆಂಬ (ರಾವೀ ಮತ್ತು ಚೀನಾಬ್‌ಗಳೆಂಬ) ನದಿಗಳೊಡನೆ ಕೂಡಿದ, ಮರುದ್ವೃಧೇ-ಹೇ ಮರುದ್ವೃಧೆಯೇ (ಜೀಲಂ ನದಿಯೇ), ವಿತಸ್ತಯಾ ಸುಷೋಮಯಾ-ವಿತಸ್ತಾ ಮತ್ತು ಸಿಂಧೂಗಳೊಡನೆ (ಜೀಲಂ ಮತ್ತು ಸಿಂಧೂನದಿಗಳೊಡನೆ) ಕೂಡಿದ, ಆರ್ಜೀಕೀಯೇ-ಎಲೈ ಆರ್ಜೀಕಾ (ಬಿಯಾಸ್) ನದಿಯೇ! ಮೇ-ನನ್ನ, ಇಮಂ ಸ್ತೋಮಂ-ವೇದಮಂತ್ರರೂಪವಾದ ಸ್ತುತಿಯನ್ನು, ಆ ಶೃಣುಹಿ-ಕೇಳು (ಏಕವಚನ, ಒಬ್ಬೊಬ್ಬರಿಗೂ ಸಂಬೋಧಿಸಿ ಹೇಳಿದ ಮಾತು), ಮತ್ತು, ಆ ಸಚತ (ಇದು ಬಹು-ವಚನರೂಪ)-ಎಲ್ಲರೂ ಈ ನೀರಿನಲ್ಲಿ ಸನ್ನಿಹಿತರಾಗಿರಿ, ಅಥವಾ ಎಲ್ಲರೂ ಸೇರಿ ಶ್ರೀಹರಿಯನ್ನು, ಅಸೇಚಯತ ವಾ-ಸ್ನಾನ ಮಾಡಿಸಿರಿ—ಸ್ನಾನಕ್ಕೆ ಅನುಕೂಲರಾಗಿರಿ.

ಮಂತ್ರದ ಭಾವಾರ್ಥ: ಹೇ ಗಂಗಾ ಯಮುನಾ ಸರಸ್ವತೀ—(ಈ ಮೂರೂ ಉತ್ತರಭಾರತದ ಪ್ರಸಿದ್ಧ ನದಿಗಳು), ಶತುದ್ರಿ, ಅಸಿಕ್ನೀ, ಮರುದ್ವೃಧಾ, ವಿತಸ್ತಾ, ಆರ್ಜೀಕೀಯಾ ಮತ್ತು ಸಿಂಧು (ಈ ಏಳೂ ಪಶ್ಚಿಮ ಪಂಜಾಬಿನ ನದಿಗಳು), ಈ ಹೆಸರಿನ ಹೇ ದಶನದೀದೇವತೆಗಳಿರಾ! ನೀವು ನನ್ನ ಈ ವೇದೋಕ್ತ ಸ್ತೋತ್ರವನ್ನು ಕೇಳಿ ಈ ಕಲಶೋದಕದಲ್ಲಿ ಸನ್ನಿಹಿತರಾಗಿರಿ ಮತ್ತು ಶ್ರೀಹರಿಯ ಅಭಿಷೇಕಕ್ಕೆ ಅನುಕೂಲ ಮಾಡಿ-ಕೊಡಿ—ಎಂದು ಭಾವ.

ತಂತ್ರಸಾರೋಕ್ತ ಶ್ಲೋಕಗಳು

ಏಕಪಂಚಾಶದ್ವರ್ಣಾನಾಂ ಚತುರ್ವಿಂಶತಿಮೂರ್ತಯಃ ।
ಆತ್ಮಾದ್ಯಾ ವಾಸುದೇವಾದ್ಯಾ ವಿಶ್ವಾದ್ಯಾ ಮತ್ಸ್ಯಕಚ್ಛಪೌ ॥ ೭ ॥
ಕೋಲೋ ನೃಸಿಂಸ್ಸ-(ಹಶ್ಚ) ವಟುರ್—ಜಾಮದಗ್ನಿ (ದಗ್ನ್ಯ) ರಘೂದ್ವಹೌ ।
ವಾಸಿಷ್ಠ-ಯಾದವೌ ಕೃಷ್ಣಾ—ವಾತ್ರೇಯೋ ಬುದ್ಧ-ಕಲ್ಕಿನೌ ॥ ೮ ॥
ಶಿಂಶುಮಾರಶ್ಚೇತಿ ಶತಂ ಕಲಾಃ ಕಲಶ (ದೇವತಾಃ) ನಾಮಕಾಃ ।
ಏತಾಭಿಃ ಸಹಿತಾಂ ಮೂಲ—ಮೂರ್ತಿಮಾವಾಹಯೇದ್ ಘಟೇ (-ಮಾವಾಹಯೇತ್ ಸುಧೀಃ) ॥ ೯ ॥

ಕನ್ನಡಾರ್ಥ: ವರ್ಣಾನಾಂ ಏಕಪಂಚಾಶತ್ ಮೂರ್ತಯಃ-ಅಕಾರ ಆಕಾರದಿಂದ ಆರಂಭಿಸಿ ಳ-ಕ್ಷ ಗಳ ವರೆಗೆ ಇರುವ ಐವತ್ತೊಂದು ಅಕ್ಷರಗಳ ಐವತ್ತೊಂದು ಭಗವನ್-ಮೂರ್ತಿಗಳು; ಇವುಗಳು ಅಜ, ಆನಂದ, ಇಂದ್ರ ಎಂದು ಆರಂಭಿಸಿ ಹಂಸ, ಳಾಳುಕ ಎಂದು ಐವತ್ತು, ಕ್ಷಕಾರಕ್ಕೆ ನೃಸಿಂಹ ಎಂಬುದನ್ನು ತಂತ್ರಸಾರದಲ್ಲಿ ಒಂದನೇ ಅಧ್ಯಾಯದ ೬-೧೦ ಶ್ಲೋಕಗಳಲ್ಲಿ ಹೇಳಿದೆ. (೨) ಚತುರ್ವಿಂಶತಿ ಮೂರ್ತಯಃ-ಕೇಶವಾದಿ ಇಪ್ಪತ್ತ-ನಾಲ್ಕು ರೂಪಗಳು, (೩) ಆತ್ಮಾದ್ಯಾಃ-ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ಎಂಬ ನಾಲ್ಕು ರೂಪಗಳು, (೪) ವಾಸುದೇವಾದ್ಯಾಃ-ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಈ ನಾಲ್ಕು ಮೂರ್ತಿಗಳು, ವಿಶ್ವಾದ್ಯಾಃ-ವಿಶ್ವ ತೈಜಸ ಪ್ರಾಜ್ಞ ತುರೀಯ ಗಳೆಂಬ ನಾಲ್ಕು ರೂಪಗಳು, (೫) ದಶಾವತಾರದ ಹತ್ತು ರೂಪಗಳು—ಮತ್ಸ್ಯ-ಮತ್ಸ್ಯ, ಕಚ್ಛಪ-ಕೂರ್ಮ, ಕೋಲಃ-ವರಾಹ, ವಟುಃ-ವಾಮನ, ಜಾಮದಗ್ನ್ಯ-ಪರಶುರಾಮ, ರಘೂದ್ವಹ-ದಾಶರಥಿ ರಾಮ ಅಥವಾ ಸೀತಾರಾಮ, ಯಾದವಕೃಷ್ಣ-ಯದುಕುಲದಲ್ಲಿ ಹುಟ್ಟಿದ ರುಕ್ಮಿಣೀಪತಿ ಕೃಷ್ಣ, (೬) ವಾಸಿಷ್ಠಕೃಷ್ಣ-ಎಂದರೆ ವಸಿಷ್ಠರ ಮರಿಮೊಮ್ಮಗ ನಾದ ವೇದವ್ಯಾಸರು, ಆತ್ರೇಯ-ದತ್ತಾತ್ರೇಯ, ಕಡೆಯದು ಶಿಂಶುಮಾರನೆಂಬ

ಸಪ್ತರ್ಷಿಮಂಡಲದಲ್ಲಿ ವ್ಯಾಪ್ತನಾಗಿರುವ ಚೇಳಿನ ಆಕಾರದ ಭಗವನ್ಮೂರ್ತಿ (೫೧+೨೪+೪+೪+೪+೧೦+೧+೧+೧=೧೦೦), ಇತಿ-ಈ ಪ್ರಕಾರ, ಶತಂ ಕಲಾಃ-ಒಂದು ನೂರು ರೂಪಗಳಿಂದ ಕೂಡಿದ, ಕಲಶನಾಮಕಾಃ-ಕಲಶಗಳೆಂಬ ಹೆಸರೇ ಉಳ್ಳ, ಕಲಶ-ದೇವತಾಃ-ಕಲಶದೇವತೆಗಳೆಂಬ ಭಗವದ್ರೂಪಗಳನ್ನು, ಘಟೇ-ಕಲಶದಲ್ಲಿ, ಸುಧೀಃ-ಜ್ಞಾನಿಯು, ಆವಾಹಯೇತ್-ಆವಾಹನೆ ಮಾಡಬೇಕು.

ಭಾವಾರ್ಥ : ಕಲಶದಲ್ಲಿ ಸಾಗರಾಭಿಮಾನಿಗಳು ನದೀ-ನದಾಭಿಮಾನಿಗಳು, ತೀರ್ಥ-ಕ್ಷೇತ್ರಾದ್ಯಭಿಮಾನಿಗಳೇ ಮೊದಲಾದ ದೇವತೆಗಳಲ್ಲದೆ ಸಾಕ್ಷಾನ್ನಾರಾಯಣನೇ

ಅಜಾದಿ ಪಂಚಾಶನ್ಮೂರ್ತಿ	೫೧
ಕೇಶವಾದಿ ೨೪ ಮೂರ್ತಿ	೨೪
ಆತ್ಮಾದಿ ಚತುರ್ಮೂರ್ತಿ	೪
ವಾಸುದೇವಾದಿ ಚತುರ್ಮೂರ್ತಿ	೪
ವಿಶ್ವಾದಿ ಚತುರ್ಮೂರ್ತಿ	೪
ದಶಾವತಾರಗಳು	೧೦
ವೇದವ್ಯಾಸ, ದತ್ತಾತ್ರೇಯ, ಶಿಂಶುಮಾರ	೩
ಒಟ್ಟು	೧೦೦

ಹೀಗೆ ನೂರು ರೂಪಗಳಿಂದ ಕಲಶನಾಮಕನಾಗಿಯೇ ಸನ್ನಿಹಿತನಾಗಿದ್ದಾನೆಂದು ತಿಳಿದು ಆವಾಹನೆ ಮಾಡಬೇಕು. ಆ ಭಗವಂತ ಸುಖರೂಪಿಯಾದ್ದರಿಂದ 'ಕ' ಎಂದೂ, ಪ್ರಕಾಶರೂಪನೂ (ಲಸ್-ಪ್ರಕಾಶಿಸು) ಲಯಕಾರನೂ (ಲೀ-ಲೀನ) ಆದ್ದರಿಂದ 'ಲ' ಎಂದೂ, ಸುಖಪ್ರದನಾದ್ದರಿಂದಲೂ ಮಂಗಳಸ್ವರೂಪನಾದ್ದರಿಂದಲೂ 'ಶ' ಎಂದೂ ವಾಚ್ಯನಾಗಿ 'ಕಲಶ'ನಾಮಕನಾಗಿದ್ದಾನೆ.

ವಿಷ್ಣುಗಾಯತ್ರೀ

ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್ ॥

(ಅರ್ಥ). ನಾರಾಯಣಾಯ-(ದ್ವಿತೀಯಾರ್ಥದಲ್ಲಿ ಚತುರ್ಥೀ ಬಂದಿದೆ) ನಾರಾಯಣನನ್ನು ನಾರ-ಗುಣಗಳಿಗೆ, ಅಯನ-ಆಶ್ರಯನೆಂದು ಅರ್ಥಾತ್ ಅನಂತಕಲ್ಯಾಣ-ಗುಣಪರಿಪೂರ್ಣನೆಂದು, ವಿದ್ಮಹೇ-ನಾವು ತಿಳಿಯುತ್ತೇವೆ. (ಶಾಸ್ತ್ರಾರ್ಥ ವಿಚಾರ ಮಾಡಿ ನಿಶ್ಚಯಪೂರ್ವಕವಾಗಿ ತಿಳಿಯುತ್ತೇವೆ ಎಂದು ಭಾವ.) ವಾಸುದೇವಾಯ-ವಾಸುದೇವ-

ನನ್ನು (ವಾಸನಾತ್ ವಾಸುದೇವೋಽಸಿ-ಸರ್ವತ್ರ ವಾಸ ಮಾಡುವುದರಿಂದ ನೀನು ವಾಸುದೇವನಾಗಿದ್ದೀಯೆ. ವಾಸಿತಂ ತೇ ಜಗತ್‌ತ್ರಯಮ್-ಮೂರು ಲೋಕವೂ ನಿನ್ನಲ್ಲಿ ವಾಸ ಮಾಡುತ್ತದೆ. ಆದ್ದರಿಂದಲೂ ನೀನು ವಾಸುದೇವ. ಸರ್ವಭೂತನಿವಾಸೋಽಸಿ-ನೀನು ಸಕಲ ಪ್ರಾಣಿಗಳ ಮತ್ತು ಪೃಥಿವ್ಯಾದಿ ಪಂಚಭೂತಗಳಲ್ಲೂ ಪ್ರೇರಕನಾಗಿ ವಾಸ ಮಾಡುತ್ತಿರುವಿ. ವಾಸುದೇವ ನಮೋಽಸ್ತು ತೇ-ಈ ಮೂರು ಕಾರಣಗಳಿಂದ ವಾಸುದೇವನಾಮಕನಾದ ನಿನಗೆ ನಮಸ್ಕಾರ ಎಂದು ಭಾರತದಲ್ಲಿ ವಿಷ್ಣುಸಹಸ್ರನಾಮಪ್ರಸಂಗದಲ್ಲಿ ಹೇಳಿರುವುದರಿಂದ) ಬ್ರಹ್ಮಾಂಡದ ಒಳಗೆ ಹೊರಗೆಲ್ಲಾ ವ್ಯಾಪಿಸಿಕೊಂಡು ವಾಸ ಮಾಡುವುದರಿಂದಲೂ, ಹದಿನಾಲ್ಕು ಲೋಕವೂ ಅವನಲ್ಲಿ ವಾಸಮಾಡಿಕೊಂಡಿರುವುದರಿಂದಲೂ ಸಕಲ ಪ್ರಾಣಿಗಳಲ್ಲೂ ಪೃಥಿವ್ಯಾದಿ ಪಂಚಭೂತಗಳಲ್ಲೂ ಅವನು ಪ್ರೇರಕನಾಗಿ ವಾಸ ಮಾಡಿಕೊಂಡಿರುವುದರಿಂದಲೂ ಆ ನಾರಾಯಣನಿಗೆ ವಾಸುದೇವನೆಂಬ ಹೆಸರಿದೆಯೆಂದು, ಧೀಮಹಿ-ನಾವು ಧ್ಯಾನಿಸುತ್ತೇವೆ. (ವಾಸುದೇವ ಶಬ್ದಕ್ಕೆ ಗೀತಾಭಾಷ್ಯದಲ್ಲೂ ಬೇರೆ ಅರ್ಥ ಹೇಳಿದೆಯೆಂದು ಧೀರೇಂದ್ರಸ್ವಾಮಿಗಳು ತೋರಿಸಿದ್ದಾರೆ. ವಿಷ್ಣುಃ-ವಿಷ್ಲೃ ವ್ಯಾಪ್ತೌ-ವ್ಯಾಪಿಸು ಎಂಬ ಧಾತುವಿಗೆ ವ್ಯಾಪ್ತನಾಗು ಎಂದರ್ಥವಿರುವುದರಿಂದ ಅದರ ಮೇಲೆ 'ವಿಷೇಃ ಕಿಚ್ಚ' ಎಂಬ ಉಣಾದಿ ಸೂತ್ರದಂತೆ ನು ಪ್ರತ್ಯಯ ಬಂದು ವಿಷ್ಣು ಎಂದಾಗುತ್ತದೆ, ಇದಕ್ಕೆ ಸರ್ವತ್ರ ವ್ಯಾಪ್ತನಾದವನು ಎಂದರ್ಥ. ಅಥವಾ ವಿಶ ಪ್ರವೇಶನೇ ಎಂದಿರುವುದರಿಂದ ಸರ್ವರಲ್ಲೂ ಪ್ರವಿಷ್ಟನಾದವನು ಅಥವಾ ಅಂತರ್ಯಾಮೀ ಎಂದೂ ಅರ್ಥವಾಗುತ್ತದೆ. ಗೀತಾಭಾಷ್ಯೋದಾಹೃತ ಮೋಕ್ಷಧರ್ಮ (ಭಾರತ, ಶಾಂತಿಪರ್ವ) ವಚನದಂತೆ—ವೀ ಎಂದರೆ ಪ್ರಕಾಶಿಸು ಎಂದರ್ಥ. ಈ ವೀ ಧಾತುವಿಗೆ ಷ್ಣು ಪ್ರತ್ಯಯ ಬಂದು ಸ್ವರವು ಹ್ರಸ್ವವಾಗುವುದರಿಂದ ವಿಷ್ಣು ಎಂದಾಗುವುದು; ಇದರಂತೆ ಪ್ರಕಾಶಿಸುವವನು ಎಂದರ್ಥವಾಗುತ್ತದೆ. ವಿಶೇಷೇಣ ಕ್ರಾಮತೀತಿ ವಾ ವಿಷ್ಣುಃ-ತ್ರಿವಿಕ್ರಮಾವತಾರದಲ್ಲಿ ಮೂರು ಲೋಕವನ್ನು ಆಕ್ರಮಿಸಿದ್ದರಿಂದಲೂ ವಿಷ್ಣು. ವಿ ಉಪಸರ್ಗ, ಕ್ರಮು ಧಾತು, ಷ್ಣು ಪ್ರತ್ಯಯ ಸೇರಿ ಪೃಷೋದರ ಎಂಬಂತೆ ವಿಷ್ಣು ಎಂದಾಗಿದೆ. ಹೀಗೆ ಸರ್ವವ್ಯಾಪ್ತನಾದ್ದರಿಂದಲೂ ಸರ್ವತ್ರ ಪ್ರವಿಷ್ಟನಾದ್ದರಿಂದಲೂ ಕಾಂತಿಯುಳ್ಳವನಾದ್ದರಿಂದಲೂ ಮೂರು ಹೆಜ್ಜೆಗಳಿಂದ ಸಮಸ್ತವನ್ನೂ ಆಕ್ರಮಿಸಿದ್ದರಿಂದಲೂ ವಿಷ್ಣುನಾಮಕನಾದ ಭಗವಂತನು, ನಃ-ನಮ್ಮ (ನಮ್ಮೆಲ್ಲರ) (ರಮಾಬ್ರಹ್ಮಾದಿ ಸಕಲರ), ತತ್-ಬುದ್ಧಿಯನ್ನು, ಪ್ರಚೋದಯಾತ್-ಪ್ರೇರಿಸಲಿ. ಅಥವಾ ವಿಷ್ಣುವು, ನಃ-ನಮ್ಮನ್ನು, ತತ್-ಅವನ ಧ್ಯಾನದಲ್ಲಿ, ಪ್ರಚೋದಯಾತ್-ಪ್ರೇರಿಸಲಿ ಎಂದೂ ಅರ್ಥವಾಗುತ್ತದೆ.

ಭಾವಾರ್ಥ—ಸಕಲ ಶಾಸ್ತ್ರಾಧ್ಯಯನ ಮಾಡಿ ಅದರಿಂದ ಸಕಲ ವೇದಪ್ರತಿಪಾದ್ಯನಾದ ನಾರಾಯಣನು ಅನಂತಕಲ್ಯಾಣ ಪರಿಪೂರ್ಣನೆಂದು ನಾವು ತಿಳಿದುಕೊಳ್ಳುತ್ತೇವೆ. ಅನಂತರ ಆ ನಾರಾಯಣನೇ ಸಕಲ ಲೋಕಗಳಲ್ಲಿ ವಾಸಿಸುವುದರಿಂದಲೂ ಸಕಲ ಜಗತ್ತೂ

ಆವನಲ್ಲೇ ಆವಾಸವಾಗಿರುವುದರಿಂದಲೂ ಅಲ್ಲದೆ ಅವನು ಎಲ್ಲರ ಹೃದಯದಲ್ಲೂ ವಾಸ-ವಾಗಿದ್ದು ಪ್ರೇರಕನಾಗಿರುವುದರಿಂದಲೂ ವಾಸುದೇವನೆಂದು ಕರೆಯಲ್ಪಡುತ್ತಾನೆಂದು ಧ್ಯಾನಮಾಡುತ್ತೇವೆ. ಸರ್ವತ್ರ ವ್ಯಾಪ್ತನಾದ, ಸರ್ವತ್ರ ಪ್ರವಿಷ್ಟನಾದ, ಅಪರಿಮಿತ ಕಾಂತಿಯುಳ್ಳ ಮತ್ತು ಮೂರು ಹೆಜ್ಜೆಯಿಂದಲೇ ಸಕಲ ಜಗತ್ತನ್ನೂ ಆಕ್ರಮಿಸಿದ ಆ ವಿಷ್ಣುವು ನಮ್ಮ ಮನಸ್ಸನ್ನು ಅವನ ಧ್ಯಾನದಲ್ಲೇ ನಿರತವಾಗಿರುವಂತೆ ಪ್ರೇರಿಸಲಿ ಎಂಬುದೇ ಈ ಮಂತ್ರದ ಅರ್ಥ.

ಈ ಪ್ರಕಾರ ಕಲಶದಲ್ಲಿ ಸಕಲ ಸಮುದ್ರ-ನದ್ಯಾದಿಗಳ ದೇವತೆಗಳನ್ನೂ ಅಜಾದಿ ಶತಕಲಾಸಹಿತವಾದ ಭಗವದ್ರೂಪಗಳನ್ನೂ ಈ ಮಂತ್ರಗಳಿಂದ ಆವಾಹನೆ ಮಾಡಬೇಕು. ಅನಂತರ ತಂತ್ರಸಾರದಲ್ಲಿ " ಏತಾಭಿಃ ಸಹಿತಾಂ ಮೂಲ—ಮೂಲಮೂರ್ತಿಂ ಕುಂಭೋ-ದಕೇ ಸುಧೀಃ । ಪೂರ್ವೋಕ್ತವಿಧಿನಾಭ್ಯರ್ಚ್ಯ" (೨/೯-೧೦) ಎಂದು ಹೇಳಿದ ಪ್ರಕಾರ ದೇವರಿಗೆ ಮಾಡುವಂತೆ ಷೋಡಶೋಪಚಾರ ಪೂಜೆಗಳನ್ನೂ—ಅರ್ಘ್ಯ, ಪಾದ್ಯ, ಅಭಿಷೇಕ ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಮಂಗಳಾರತಿ ಎಲ್ಲವನ್ನೂ ನ್ಯಾಯವಾಗಿ ಕಲಶಕ್ಕೇ ಸಂಕ್ಷೇಪವಾಗಿಯಾದರೂ ಮಾಡಬೇಕು. ಆದರೆ ನೂರಾರು ಕೆಲಸಗಳಲ್ಲಿ ತೊಳಲುವ ನಮಗೆ ಅದು ಪ್ರಾಯಶಃ ಅಸಾಧ್ಯವೇ ಸರಿ. ಆದಕಾರಣ ಅದನ್ನೇ ಅತ್ಯಂತ ಸಂಗ್ರಹವಾಗಿಯಾದರೂ ಮಾಡಬೇಕು. ಹೇಗೆಂದರೆ—

ಆವಾಹಿತ ಕಲಶದೇವತಾಭ್ಯೋ ನಮಃ । ಧ್ಯಾನಾವಾಹನಾದಿ ಷೋಡಶೋಪಚಾರಪೂಜಾಸ್ಸಮರ್ಪಯಾಮಿ ॥

ಎಂದು ಹೇಳಿ ಒಂದು ಉದ್ಧರಣೆ ಕಲಶದ ನೀರನ್ನು ತೆಗೆದು ಅರ್ಘ್ಯದ ಬಟ್ಟಲಿಗೆ ಹಾಕ-ಬೇಕು. ಇಷ್ಟರಿಂದಲೇ ಷೋಡಶೋಪಚಾರ ಪೂಜೆ ಮುಗಿಯಿತೆಂದು ಭಾವಿಸಿಕೊಳ್ಳ-ಬಹುದು. ಮಠಗಳಲ್ಲಿ ಮಾತ್ರ ಕಲಶಕ್ಕೆ ಗಂಧ ಅಕ್ಷತೆ ಹೂವು-ತುಳಸಿ ಏರಿಸಿ ಧೂಪ ದೀಪ ನೈವೇದ್ಯ ಮಂಗಳಾರತಿ ಎಲ್ಲವನ್ನೂ ಮಾಡುತ್ತಾರೆ. ಸಾಧ್ಯವಿದ್ದಾಗ ವರ್ಷಕ್ಕೆ ಒಮ್ಮೆಯಾದರೂ—ವಿಜಯದಶಮಿಯಲ್ಲೋ ದೀಪಾವಳಿಯಲ್ಲೋ ಒಂದು ದಿನವಾದರೂ ನಾವು ಈ ರೀತಿ ಪೂಜೆ ಮಾಡುವುದು ಉತ್ತಮ.

ಸೂಚನೆ— ಸಂಸ್ಕೃತದಲ್ಲಿ 'ಪೂಜಾ' ಶಬ್ದ ಸ್ತ್ರೀಲಿಂಗ. ಇದಕ್ಕೆ 'ಪೂಜೆಗಳನ್ನು' ಎಂಬ ಅರ್ಥ ಬರುವ ದ್ವಿತೀಯಾಬಹುವಚನದಲ್ಲಿ 'ಪೂಜಾಃ' ಎಂದೇ ರೂಪವಾಗುತ್ತದೆ. ಆದ್ದರಿಂದ 'ಷೋಡಶೋಪಚಾರಪೂಜಾಃ ಸಮರ್ಪಯಾಮಿ' ಎಂದೇ ಹೇಳಬೇಕು. 'ಪೂಜಾಃ ಸಮರ್ಪಯಾಮಿ, ಪೂಜಾಸ್ಸಮರ್ಪಯಾಮಿ' ಎರಡೂ ಸರಿ. ಆದರೆ ತಿಳಿವಳಿಕೆ ಇಲ್ಲದೆ ಕೆಲವರು 'ಪೂಜಾನ್ ಸಮರ್ಪಯಾಮಿ' ಎಂದು ಹೇಳುವುದುಂಟು; ಇದು ಮಾತ್ರ ವ್ಯಾಕರಣರೀತ್ಯಾ ತಪ್ಪು.

ಹೀಗೆ ಕಲಶಪೂಜೆ ಮಾಡಿದ ಬಳಿಕ ಪದ್ಮಮಾಲೆಯಲ್ಲಿ ಹೇಳಿದಂತೆ 'ಸರ್ವಕ್ಷೇತ್ರೇತಿ ಮಂತ್ರೇಣ ಕಲಶಂ ಪ್ರಾರ್ಥಯೇತ್ ತತಃ.' 'ಸರ್ವಕ್ಷೇತ್ರ....' ಎಂಬ ಮಂತ್ರದಿಂದ ಕಲಶವನ್ನು ಪ್ರಾರ್ಥಿಸಿ ಕಲಶಪೂಜೆಯನ್ನು ಮುಗಿಸಬೇಕು.

ಕಲಶ ಪ್ರಾರ್ಥನೆ

ಕಲಶಃ ಕೀರ್ತಿಮಾಯುಷ್ಯಂ ಪ್ರಜ್ಞಾಂ ಮೇಧಾಂ ಶ್ರಿಯಂ ಬಲಮ್ ।
ಯೋಗ್ಯತಾಂ ಪಾಪಹಾನಿಂ ಚ ಪುಣ್ಯವೃದ್ಧಿಂ ಚ ಸಾಧಯೇತ್ ॥ ೧ ॥

—ತಂತ್ರಸಾರ ೩-೧೩

(ಅರ್ಥ) ಕಲಶವು ಕೀರ್ತಿಯನ್ನೂ ಆಯುಸ್ಸನ್ನೂ ಬುದ್ಧಿಯನ್ನೂ ಮೇಧಾಶಕ್ತಿಯನ್ನೂ ಸಂಪತ್ತನ್ನೂ ಪೂಜೆ ಮಾಡಲು ಅರ್ಹತೆಯನ್ನೂ ಪಾಪಪರಿಹಾರವನ್ನೂ ಪುಣ್ಯ-ವೃದ್ಧಿಯನ್ನೂ ಸಾಧಿಸಿಕೊಡುತ್ತದೆ.

ಸರ್ವತೀರ್ಥಮಯೋ ಯಸ್ಮಾತ್ ಸರ್ವಕ್ಷೇತ್ರಮಯೋ ಯತಃ ।
ಅತೋ ಹರಿಪ್ರಿಯೋಽಸಿ ತ್ವಂ ಪೂರ್ಣಕುಂಭ ನಮೋಽಸ್ತು ತೇ ॥ ೨ ॥

ಅನೇನ ಯಥಾಶಕ್ತಿ ಕಲಶಾರಾಧನೇನ ಭಗವಾನ್ ಮನುನಾಮಕ ಭಾರತೀರಮಣಮುಖ್ಯಪ್ರಾಣಾಂತರ್ಗತಃ ಶ್ರೀಅಜಾದಿಶತಕಲಾಸಹಿತಃ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಂ ಸುಪ್ರೀತೋ ವರದೋ ಭವತು ॥ ಶ್ರೀಕೃಷ್ಣಾರ್ಪಣಮಸ್ತು ॥

(ಅರ್ಥ) ಹೇ ಪೂರ್ಣಕುಂಭವೇ, ನೀನು ಸರ್ವತೀರ್ಥಾಭಿಮಾನಿ ದೇವತೆಗಳ ಸನ್ನಿ-ಧಾನವುಳ್ಳವನಾಗಿದ್ದೀಯೆ. ಸರ್ವಕ್ಷೇತ್ರಾಭಿಮಾನಿಗಳೂ ನಿನ್ನಲ್ಲಿ ಅಡಕವಾಗಿದ್ದಾರೆ. ಅದ ಕಾರಣವೇ ನೀನು ಶ್ರೀಹರಿಗೆ ಬಹಳ ಪ್ರಿಯನಾಗಿದ್ದೀಯೆ. ಇಂಥಾ ನಿನಗೆ ನಮಸ್ಕಾರ.

ಈ ಪ್ರಕಾರ ನನ್ನ ಶಕ್ತ್ಯನುಸಾರವಾಗಿ ಮಾಡಿದ ಈ ಕಲಶಾರಾಧನೆಯಿಂದ ಮನು-ನಾಮಕನಾದ ಭಾರತೀಪತಿಯಾದ ಶ್ರೀಮುಖ್ಯಪ್ರಾಣನಲ್ಲಿ ಅಂತರ್ಗತನಾದ ಅಜಾದಿ ನೂರು ರೂಪಗಳಿಂದ ಸನ್ನಿಹಿತನಾದ ಶ್ರೀಲಕ್ಷ್ಮೀನಾರಾಯಣನು ಸುಪ್ರೀತನಾಗಲಿ. (ಎಂದು ಹೇಳಿ ಇನ್ನೊಂದು ಉದ್ಧರಣೆ ನೀರನ್ನು ಕೈಗೆ ಹಾಕಿಕೊಂಡು ಅರ್ಘ್ಯದ ಬಟ್ಟಲಿಗೆ ಹಾಕಿಬಿಡ-ಬೇಕು. ಇಲ್ಲಿಗೆ ಕಲಶಪೂಜೆ ಮುಗಿಯಿತು.)

ಕಲಶಪೂಜಾವಿಧಾನಂ ತು ತಂತ್ರಸಾರೋಕ್ತಮಾರ್ಗತಃ ।
ಅತ್ಮೋದ್ಧಾರಾಯ ಮಂದೋಽಪಿ—ಕಾರಾರ್ಥಂ ಚ ಯಥಾಮತಿ ॥
ಸಂಪ್ರೋಕ್ತಂ ವಿಷ್ಣುತೀರ್ಥೇನ ಕನ್ನಡೇ ಹ್ಯರ್ಥಪೂರ್ವಕಮ್ ।
ಮಧ್ವೇಶೇ ಹ್ಯರ್ಪ್ಯತೇ ಭಕ್ತ್ಯಾ ಪ್ರೀಯತಾಂ ಪ್ರಾಣಮಾಪತಿಃ ॥

ಪ್ರಸಂಗವಶಾತ್ ಎರಡು ವಿಚಾರಗಳು

ಮೇಲೆ ಕಲಶಪೂಜೆ ಮಾಡಿ ಮುಗಿಸುವಾಗ 'ಮುನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ' ಎಂದು ಹೇಳಿ 'ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಂ' ಎಂದು ಸಮಾಪ್ತಿ ಮಾಡಿದೆ. ಇಲ್ಲಿ ಹೀಗೆ ಪೂರ್ವಪಕ್ಷ ಬರಬಹುದು—ಸುಮ್ಮನೆ 'ನಾರಾಯಣಃ ಪ್ರೀಯತಾಂ' ಎಂದೇಕೆ ಹೇಳಬಾರದು ? 'ಭಾರತೀರಮಣ ಮುಖ್ಯಪ್ರಾಣಾಂತರ್ಗತ' ಎಂದೇಕೆ ಸೇರಿಸಬೇಕೆಂಬುದು ಒಂದು ವಿಚಾರ.

ಅದೇ ರೀತಿ 'ಭಾರತೀರಮಣ' ಎಂದು ಹೇಳದೆ 'ಮುನುನಾಮಕ' ಎಂದೇಕೆ ಸೇರಿಸಬೇಕು ? ಎಂಬುದು ಎರಡನೇ ವಿಚಾರ. ಈ ಎರಡು ವಿಚಾರಗಳನ್ನೂ ಮೊದಲು ತಿಳಿಸಿ ಅನಂತರ ಮುಂದಿನ ಶಂಖಪೂಜೆಗೆ ಹೋಗುವೆವು. ಮೊದಲು 'ಮುನುನಾಮಕ' ಎಂಬುದೇ ಸ್ವಲ್ಪ ಸುಲಭವಾದಕಾರಣ ಅದನ್ನೇ ತೆಗೆದುಕೊಳ್ಳೋಣ.

ಮುನುನಾಮಕ ಎಂದರೇನು ?

ದೇವತೆಗಳಲ್ಲಿ ಹೇಗೆ ಬ್ರಹ್ಮ, ವಾಯು, ರುದ್ರ, ಇಂದ್ರ, ಚಂದ್ರ ಮೊದಲಾದ ಹೆಸರಿನವರಿರುತ್ತಾರೋ ಹಾಗೆಯೇ ಈ ಹೆಸರೇ ಇರುವ ದೈತ್ಯರೂ ಇರುತ್ತಾರೆ. ಈ ದೈತ್ಯರಿಗೆ ಬ್ರಹ್ಮ ವಾಯು ರುದ್ರ ಇಂದ್ರ ಮೊದಲಾದ ಹೆಸರುಗಳು ಮಾತ್ರವೇ ಅಲ್ಲದೆ (ದೀನತ್ವಾತ್ ದೇವಾಃ) ದೀನರಾದ್ದರಿಂದ ದೇವ ಎಂಬ ಅರ್ಥದಲ್ಲಿ 'ದೇವ' ಎಂಬ ಹೆಸರೂ ಸಹ ಹೊಂದುತ್ತದೆ. ಬ್ರಹ್ಮದೇವರು, ವಾಯುದೇವರು, ರುದ್ರದೇವರು ಎಂದು ಹೇಳಿದರೆ ಬ್ರಹ್ಮನಾಮಕ ದೈತ್ಯನಿಗೂ ವಾಯು ರುದ್ರ ಇತ್ಯಾದಿ ಹೆಸರುಳ್ಳ ದೈತ್ಯರಿಗೂ ಅನ್ವಯಿಸುತ್ತದೆ. ಹೀಗೆ ನಾವು ಮಾಡುವ ಪೂಜಾದಿಗಳೆಲ್ಲವನ್ನೂ ಆಯಾ ಹೆಸರಿನ ದೈತ್ಯರೇ ಅಪಹರಿಸಿಬಿಡುತ್ತಾರೆ. ಈ ವಿಷಯ ಗೀತಾತಾತ್ಪರ್ಯದಲ್ಲಿ ಹೇಳಿರುವ ಈ ಪ್ರಮಾಣದಿಂದ ಗೊತ್ತಾಗುತ್ತದೆ—

> ದೀನತ್ವಾದ್ದೇವನಾಮಾನ—ಸ್ತ್ವನ್ಯೇ ಬ್ರಹ್ಮಾದಿನಾಮಕಾಃ ।
> ಅವೈಷ್ಣವಕೃತೋ ಯಜ್ಞೋ ದೀನ್ಯೈರ್ದೇವೈಃ ಸ್ತು ಭುಜ್ಯತೇ ॥

(ಅರ್ಥ) (ಬ್ರಹ್ಮಾದಿ ಬೇರೆಬೇರೆ ಹೆಸರುಗಳುಳ್ಳ ದೇವತೆಗಳೇ ಅಲ್ಲದೆ) ಬ್ರಹ್ಮ ಇಂದ್ರ ರುದ್ರ ಮೊದಲಾದ ಹೆಸರುಗಳೇ ಇರುವ ಬೇರೆಯ (ಅನ್ಯೇ) ದೈತ್ಯರೂ ಇದ್ದಾರೆ. ಇವರಿಗೂ ದೀನರಾದ್ದರಿಂದ ದೇವತೆಗಳೆಂಬ ಹೆಸರೇ ಇದೆ. ಅವೈಷ್ಣವರು ಮಾಡುವ ಪೂಜಾ ಯಜ್ಞಾದಿ ಸಕಲ ಕರ್ಮಗಳನ್ನೂ ದೀನರಾದ್ದರಿಂದ ದೇವತೆಗಳೆಂಬ ಹೆಸರಿನ ಈ ಬ್ರಹ್ಮಾದಿನಾಮಕರಾದ ದೈತ್ಯರೇ ಅಪಹರಿಸಿಬಿಡುತ್ತಾರೆ (ಭುಜ್ಯತೇ).

ಹಾಗಾದರೆ ಪರಿಹಾರೋಪಾಯವೇನು ?* ಎಂದರೆ ಆ ಪ್ರಮಾಣವೇ ಹೇಳುತ್ತದೆ—

> ಮನವೋ ಬೋಧವೈಶೇಷ್ಯಾತ್ ದೇವಾ ಬ್ರಹ್ಮಾದಯಃ ಸ್ಮೃತಾಃ ।

(ಅರ್ಥ) ನಿಜವಾಗಿಯೂ ದೇವತೆಗಳ ಗುಂಪಿಗೇ ಸೇರಿದ ಬ್ರಹ್ಮಾದಿ ದೇವತೆಗಳು ಮಹಾಜ್ಞಾನಿಗಳಾದ್ದರಿಂದ 'ಮನು'ನಾಮಕರಾಗಿದ್ದಾರೆ. 'ಮನು ಅವಬೋಧನೇ' ತಿಳಿ ಎಂದು ಅರ್ಥವುಳ್ಳ ಮನ್ ಧಾತುವಿಗೆ 'ಶೃಸ್ವ್...ಮನಿಭ್ಯಶ್ಚ' (ಉ. ೧-೧೦) ಎಂಬ ಉಣಾದಿ ಸೂತ್ರದಿಂದ ಉಣ್ ಪ್ರತ್ಯಯ ಬಂದು 'ಮನು' ಎಂದಾಗುವುದರಿಂದ 'ಜ್ಞಾನ-ವುಳ್ಳಂಥಾ' ದೇವತೆಗಳು ಎಂದಾಗುತ್ತದೆ ; ಇದು ದೈತ್ಯರಿಗೆ ಅನ್ವಯಿಸುವುದಿಲ್ಲ. ಅದ-ಕಾರಣ ವೈಷ್ಣವರಾದ ನಾವು ಮಾಡುವ ಪೂಜಾದಿಗಳು ಸರಿಯಾದ ಬ್ರಹ್ಮಾದಿದೇವತೆಗಳಿಗೇ ಸೇರಬೇಕೆಂದು ಇಷ್ಟಪಟ್ಟರೆ ಅವರ ಹೆಸರಿನ ಹಿಂದೆ 'ಮನುನಾಮಕ' ಸೇರಿಸಬೇಕು, ಆಗ ನಿಜವಾದ (ನ್ಯಾಯವಾದ) ಆ ದೇವತೆಗಳಿಗೇ ಸೇರುತ್ತದೆ. ಈ ವಿಷಯವೂ ಮೇಲೆ ಉದಹರಿಸಿದ ಪ್ರಮಾಣದ—

ವೈಷ್ಣವೈಸ್ತು ಕೃತೋ ಯಜ್ಞೋ ದೇವೈರ್ಹಿ 'ಮನುನಾಮಕೈಃ' ।
ಭುಜ್ಯತೇ (ಇತಿ ಶೇಷಃ) ಎಂಬುದರಿಂದ ಗೊತ್ತಾಗುತ್ತದೆ.

(ಅರ್ಥ) 'ತು' ಶಬ್ದವು ವಿರೋಧವನ್ನು ತೋರಿಸುತ್ತದೆ. ಅವೈಷ್ಣವರ ಪೂಜಾದಿಗಳನ್ನು ದೀನರಾದ ಬ್ರಹ್ಮಾದಿನಾಮಕ ದೈತ್ಯರು ತೆಗೆದುಕೊಳ್ಳುತ್ತಾರೆ. 'ತು' ಅದಕ್ಕೆ ವಿರುದ್ಧವಾಗಿ ಎಂದರ್ಥ. ವೈಷ್ಣವರು ಮಾಡುವ ಪೂಜಾದಿರೂಪ ಯಜ್ಞವು 'ಮನು-ನಾಮಕ'ರಾದ ಎಂದರೆ ಜ್ಞಾನಪ್ರಧಾನರಾದ 'ದೇವತೆಗಳಿಂದಲೇ' ಸ್ವೀಕರಿಸಲ್ಪಡುತ್ತದೆ.

ಇದರಿಂದ 'ಮನುನಾಮಕ' ಎಂಬ ವಿಶೇಷಣ ಸೇರಿಸಿದರೆ ಮಾತ್ರ ನಿಜವಾದ ದೇವತೆಗಳಿಗೆ ಸೇರುತ್ತದೆ ; ಇಲ್ಲದಿದ್ದರೆ ದೀನರಾದ್ದರಿಂದ ದೇವತೆಗಳೆಂಬ ಹೆಸರೇ ಇರುವ ಬ್ರಹ್ಮಾದಿನಾಮಕ ದೈತ್ಯರ ಪಾಲಾಗುತ್ತದೆಯೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

'ಬೋಧವೈಶೇಷ್ಯಾತ್' ದೈತ್ಯರಿಗೂ ಸ್ವಲ್ಪಸ್ವಲ್ಪ ಜ್ಞಾನವಿರುವುದರಿಂದ ಅವರಿಗೂ 'ಮನುನಾಮಕ' ಎಂಬ ವಿಶೇಷಣ ಅನ್ವಯಿಸಬಹುದಲ್ಲಾ ಎಂದರೆ ಸಮಾಧಾನವನ್ನು 'ಬೋಧವೈಶೇಷ್ಯಾತ್' ಎಂಬ ವಿಶೇಷಣ ಹೇಳುತ್ತದೆ. ವಿಶೇಷವಾದ ಜ್ಞಾನವುಳ್ಳವರಿಗೆ ಮಾತ್ರ 'ಮನು' ಶಬ್ದ ಅನ್ವಯಿಸುತ್ತದೆ. ಅದಕಾರಣ ಅದು ದೇವತೆಗಳಿಗಲ್ಲದೆ ಬೇರೆ ಯಾರಿಗೂ (ಪಂಡಿತರಿಗೂ, ಮನುಷ್ಯರಿಗೂ, ಋಷಿಗಳಿಗೂ ಸಹ) ಅನ್ವಯಿಸುವುದಿಲ್ಲ.

ಈ ವಿಷಯವನ್ನು ಗೀತಾತಾತ್ಪರ್ಯದಲ್ಲಿ ಮಾತ್ರವಲ್ಲ, ಛಾಂದೋಗ್ಯಭಾಷ್ಯದಲ್ಲೂ ಭಾಗವತ ತಾತ್ಪರ್ಯದಲ್ಲೂ ಆಚಾರ್ಯರು ಹೇಳಿದ್ದಾರೆ.

ಛಾಂದೋಗ್ಯಭಾಷ್ಯದಲ್ಲಿ ಹೇಳಿದ ವಿಚಾರ

ಪೂಜೆಗೆ ಯಾರು ಅರ್ಹರು ? ಎಂಥಾ ಪೂಜೆ ಮಾಡಬೇಕು ? ಎಂದು ಪ್ರಸಕ್ತಿ ಬಂದಾಗ ಶ್ರೀಹರಿ ಒಬ್ಬನನ್ನು ಮಾತ್ರವೇ ಸ್ವತಂತ್ರನೆಂದು ತಿಳಿದು ಪೂಜಿಸಬೇಕು,

ಲಕ್ಷ್ಮೀ-ಬ್ರಹ್ಮಾದಿ ಮಿಕ್ಕ ಸಕಲ ದೇವತೆಗಳನ್ನೂ 'ಭಾಗವತಾ ಇತಿ ಜ್ಞಾತ್ವಾ' ವಿಷ್ಣು-ಭಕ್ತರು—ವಿಷ್ಣುಪರಿವಾರ ಎಂದು ತಿಳಿದುಕೊಂಡೇ ಪೂಜಿಸಬೇಕು; ಅಷ್ಟೇ ಹೊರತು

ಸ್ವತಂತ್ರಪೂಜ್ಯತಾಬುದ್ಧ್ಯಾ ನ ದದ್ಯಾತ್ ಕಿಂಚ ಕಸ್ಯಚಿತ್ ।

ಎಂದರೆ ಸ್ವತಂತ್ರವಾಗಿ ಪೂಜಾರ್ಹರು ಎಂಬ ಬುದ್ಧಿಯಿಂದ ಯಾರಿಗೂ ಯಾವ ಪೂಜೆಯನ್ನೂ ಮಾಡಬಾರದು ಎಂದು ಹೇಳುವ ಸಂದರ್ಭದಲ್ಲಿ—

ಮನವೋ ಮಾನವಾಶ್ಚೈವ ಸಂಪೂಜ್ಯಾ ನೈವ ದೇವತಾಃ ।

ಎಂಬ ಸ್ಮೃತಿಯ ಅರ್ಥವನ್ನು ವಿವರಿಸುತ್ತಾರೆ. ಈ ಸ್ಮೃತಿಗೆ ಆಪಾತತಃ ಹೀಗೆ ಅರ್ಥವಿದ್ದಂತೆ ಕಾಣುತ್ತದೆ—'ಮನುಗಳೂ ಮಾನವರೂ ಮಾತ್ರವೇ (ಏವ) ಪೂಜಾಯೋಗ್ಯರು. ದೇವತೆಗಳು ಸರ್ವಥಾ ಅಲ್ಲ.' ನಿಜ, ಇದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಆದ್ದರಿಂದ ಶ್ರೀಮದಾಚಾರ್ಯರು ಪ್ರಮಾಣಗಳಿಂದ ಇದರ ಅರ್ಥ ವರ್ಣಿಸುತ್ತಾರೆ—

ಬ್ರಹ್ಮಾದ್ಯಾ ಮನುಸಂಜ್ಞಾ ಯೇ ...
ಮಾನವಾಖ್ಯಾಶ್ಚ ಮುನಯಃ ತಾನ್ ಯಜಂತಿ ನ ಚೇತರಾನ್ ॥

(ಅರ್ಥ) ವಿಶೇಷ ಜ್ಞಾನವುಳ್ಳವರಾದ್ದರಿಂದ (ಬೋಧವೈಶೇಷ್ಯಾತ್) ಬ್ರಹ್ಮಾದಿ ದೇವತೆಗಳಿಗೇ 'ಮನು'ಗಳೆಂದು ಹೆಸರು. (ಮನು ಎಂಬ ಹೆಸರು ಬೇರೆ ಯಾರಿಗೂ ಅನ್ವಯಿಸುವುದಿಲ್ಲ, ಕೇವಲ 'ದೇವತೆ'ಗಳಿಗೇ ಅನ್ವಯಿಸುತ್ತದೆ. ಗೀತಾತಾತ್ಪರ್ಯದಲ್ಲಿ (೧ ಅ., ೬ ಶ್ಲೋ.)—

ಮರೀಚ್ಯಾದ್ಯಾಸ್ತು ತತ್ಪುತ್ರಾ 'ಮಾನವಾ' ನಾಮತಃ ಸ್ಮೃತಾಃ ।

ಎಂದು ಹೇಳಿರುವುದರಿಂದ—ಮನುನಾಮಕರಾದ ಬ್ರಹ್ಮಾದಿ ದೇವತೆಗಳ ಮಕ್ಕಳಾದ್ದರಿಂದ ಮರೀಚಿ, ಅತ್ರಿ ಮೊದಲಾದ ಮಹರ್ಷಿಗಳಿಗೆ 'ಮಾನವ'ರೆಂದು ಹೆಸರು. ಹೀಗೆ ವಿಶೇಷ ಜ್ಞಾನವುಳ್ಳವರಾದ್ದರಿಂದ 'ಮನುನಾಮಕ'ರಾದ ಬ್ರಹ್ಮಾದಿ ದೇವತೆಗಳನ್ನೂ ಅವರ ಮಕ್ಕಳಾದ್ದರಿಂದ 'ಮಾನವನಾಮಕರಾದ' ಮರೀಚಿ, ಅತ್ರಿಯೇ ಮೊದಲಾದ ಬ್ರಹ್ಮರ್ಷಿಗಳನ್ನು ಮಾತ್ರವೇ ವಿಷ್ಣುಭಕ್ತರೆಂಬ ಭಾವನೆಯಿಂದ ಸಕಲ ವೈಷ್ಣವರೂ ಪೂಜಿಸುತ್ತಾರೆ. 'ದೇವತೆ'ಗಳೆಂಬ ಹೆಸರಿದ್ದರೂ ಬೇರೆಯವರನ್ನು (ನ ಚೇತರಾನ್) ಪೂಜಿಸುವುದಿಲ್ಲ. ಏಕೆ ಪೂಜಿಸುವುದಿಲ್ಲವೆಂದರೆ ಕಾರಣ ಹೇಳುತ್ತಾರೆ—

ಅಪಭ್ರಷ್ಟಾ ಅದೇವಾಶ್ಚ ಬ್ರಹ್ಮಾದ್ಯಾಖ್ಯಾಯುತಾ ಅಪಿ ।
ದೇವಸಂಜ್ಞಾಶ್ಚ ದೀನತ್ವಾತ್ ಪೂಜಯೇಯುರ್ನ ತಾನ್ ಕ್ವಚಿತ್ ॥

(ಅರ್ಥ) ಅಸುರಾದಿಗಳಿಗೂ ದೇವ ಎಂಬ ಹೆಸರು 'ದೀನತ್ವಾತ್' ದೀನರಾದ್ದರಿಂದ (ಕಂಗಾಲಿಗಳಂತೆ ಆಹ್ವಾನವಿಲ್ಲದೆ ಬಂದು ಪೂಜಾದಿಗಳನ್ನು ಸ್ವೀಕರಿಸುವುದರಿಂದ) ದೇವ-ದೇವತೆ ಎಂಬ ಹೆಸರುಗಳು ಕೂಡುತ್ತವೆ. ಅಷ್ಟೇ ಅಲ್ಲದೆ ಅವರಲ್ಲೂ ಬ್ರಹ್ಮ ರುದ್ರ ಮೊದಲಾದ ಹೆಸರುಳ್ಳವರೂ ಇದ್ದಾರೆ. ಆದರೂ ಅವರೆಲ್ಲ ಅಪಭ್ರಷ್ಟರು, ನಿಜವಾದ ದೇವತೆಗಳಿಗಿಂತ ಸರ್ವಥಾ ಬೇರೆ (ಅದೇವಾಃ). ಅವರನ್ನು ವಿಷ್ಣುಭಕ್ತರು ಸರ್ವಥಾ ಪೂಜಿಸುವುದಿಲ್ಲ.

ದೇವತೆಗಳಿಗೂ ಮನುನಾಮಕ ದೇವತೆಗಳಿಗೂ ಇರುವ ವ್ಯತ್ಯಾಸ

ಯದ್ಭಾಗವತಬುದ್ಧ್ಯೈವ ದತ್ತಂ ಬ್ರಹ್ಮಾದಯಃ ಸುರಾಃ ।
ವೈದಿಕಾಃ ಪ್ರತಿಗೃಹ್ಣೀಯು—ರಪಭ್ರಷ್ಟಾಸ್ತಥೇತರತ್ ॥

(ಅರ್ಥ) ವೇದೋಕ್ತರಾದ ಬ್ರಹ್ಮಾದಿ ದೇವತೆಗಳು ಭಗವದ್ಭಕ್ತರೆಂಬ ವಿಚಾರದಿಂದ ಮಾತ್ರ ಏನು ಪೂಜಾದಿಗಳನ್ನು ಕೊಡುತ್ತೇವೋ ಅದನ್ನು ಮಾತ್ರ ಸ್ವೀಕರಿಸುತ್ತಾರೆ. ಅದಕ್ಕೆ ಪ್ರತಿಯಾಗಿ ಅಪಭ್ರಷ್ಟದೇವತೆಗಳಾದ ಬ್ರಹ್ಮರುದ್ರೇಂದ್ರಾದಿ ನಾಮಧಾರಿಗಳಾದ ಅಸುರರು ಹಾಗಲ್ಲ, ಅಯೋಗ್ಯರೀತಿಯಿಂದ ಕೊಟ್ಟ ಪೂಜಾದಿಗಳನ್ನೂ ಸಹ ಸ್ವೀಕರಿಸುತ್ತಾರೆ.

ವಿವರಣೆಯ ಸಾರಾಂಶ: ಬ್ರಹ್ಮಾದಿ ವೇದೋಕ್ತ ದೇವತೆಗಳೆಲ್ಲರೂ ಹರಿಭಕ್ತರು—ವೈಷ್ಣವೋತ್ತಮರು. ಅವರು ಜ್ಞಾನಿಗಳಲ್ಲಿ ಅಗ್ರಗಣ್ಯರು. ಆದ್ದರಿಂದ ಅವರಿಗೆ 'ಮನು' ಗಳೆಂದು ಹೆಸರು. ಅವರು ಅಕ್ರಮವಾಗಿ ಮಾಡಿದ ಅಥವಾ ವಿಷ್ಣುಭಕ್ತಿಯಿಲ್ಲದೆ ಮಾಡಿದ ಅಥವಾ ತಾರತಮ್ಯಜ್ಞಾನವಿಲ್ಲದೆ ಮಾಡಿದ ಪೂಜಾದಿಗಳನ್ನು ಸರ್ವಥಾ ಸ್ವೀಕರಿಸುವುದಿಲ್ಲ. ಅಷ್ಟೇ ಅಲ್ಲದೆ 'ಮನುನಾಮಕ' ಎಂಬ ವಿಶೇಷಣ ಸೇರಿಸದೆ ಬ್ರಹ್ಮ-ವಾಯು-ರುದ್ರ-ಗಣೇಶ ಎಂದು ಹೇಳಿದರೆ ಅದೆಲ್ಲವೂ ಕಂಗಾಳಿಗಳಾದ (ದೀನರಾದ್ದರಿಂದ) ದೇವತಾನಾಮಕ ಆಯಾ ಹೆಸರಿನ ಅಸುರರಿಗೇ ಸೇರಿಹೋಗುತ್ತದೆ. ಆದಕಾರಣ ನಮ್ಮ ಸೇವೆ—ನಮ್ಮ ಪೂಜೆ ಯಾವುದೇ ಆಗಲಿ ವೇದೋಕ್ತರಾದ ಬ್ರಹ್ಮವಾಯ್ವಾದಿ ಉದ್ದಿಷ್ಟದೇವತೆಗಳಿಗೇ ನೇರವಾಗಿ ಮುಟ್ಟಬೇಕಾದರೆ ಅವರ ಹೆಸರಿನ ಹಿಂದೆ 'ಮನುನಾಮಕ' ಎಂಬ ವಿಶೇಷಣ ಸೇರಿಸಲೇಬೇಕು; ಸೇರಿಸಿ ಮನುನಾಮಕ ಬ್ರಹ್ಮಾ, ಮನುನಾಮಕ ಮುಖ್ಯಪ್ರಾಣ, ಮನುನಾಮಕ ರುದ್ರ, ಮನುನಾಮಕ ವಿಘ್ನೇಶ್ವರ ಎಂದೇ ಹೇಳುವುದು ಉತ್ತಮ ಪಕ್ಷ. ಅಕಸ್ಮಾತ್ ಸೇರಿಸದಿದ್ದರೂ ಇವರೆಲ್ಲ ವಿಷ್ಣುಭಕ್ತರು, ವಿಷ್ಣುಪರಿವಾರಕ್ಕೆ ಸೇರಿದವರು, ಮಹಾಜ್ಞಾನಿಗಳು ಎಂಬ ತಿಳಿವಳಿಕೆಯಾದರೂ ಇರಲೇಬೇಕು. ಇಲ್ಲದಿದ್ದರೆ ಎಲ್ಲವೂ ದೈತ್ಯರ ಪಾಲಾಗುತ್ತದೆ, ನಿಸ್ಸಂಶಯ.

ಸ್ತ್ರೀದೇವತೆಗಳಿಗೆ ಅನ್ವಯಿಸುವಾಗ 'ಮನುನಾಮಿಕ' ಎಂದಾಗುತ್ತದೆ; ಮನುನಾಮಿಕ ಪಾರ್ವತ್ಯಂತರ್ಗತ, ಮನುನಾಮಿಕ ತುಲಸ್ಯಂತರ್ಗತ ಇತ್ಯಾದಿ.

'ಮನು'ಶಬ್ದಪ್ರಯೋಗಸ್ಯ ಸಾರ್ಥಕ್ಯಂ ದೇವನಾಮಸು ।
ವರ್ಣಿತಂ ವಿಷ್ಣುತೀರ್ಥೇನ ಸುಖತೀರ್ಥಮತಂ ಯಥಾ ॥

ವಾಯುದೇವರ ಹಿರಿಮೆ—'ಮುಖ್ಯಪ್ರಾಣಾಂತರ್ಗತ' ಎಂದರೇನು?

ಸಕಲ ವೈಷ್ಣವರೂ ಯಾವ ಸಂಕಲ್ಪವನ್ನು ಏತಕ್ಕೇ ಮಾಡಲಿ, 'ಪರಮೇಶ್ವರ ಪ್ರೇರಣಯಾ ಪರಮೇಶ್ವರಪ್ರೀತ್ಯರ್ಥಂ' ಎಂದಾಗಲಿ 'ನಾರಾಯಣಪ್ರೇರಣಯಾ ನಾರಾ-

ಯಣ ಪ್ರೀತ್ಯರ್ಥಂ' ಎಂದಾಗಲಿ ನೇರವಾಗಿ ಹೇಳಿ ಸಂಕಲ್ಪ ಮಾಡುವುದಿಲ್ಲ. ಅವರು ಎಲ್ಲದಕ್ಕೂ—ಶುಭಕ್ಕಾಗಲಿ ಅಶುಭಕ್ಕಾಗಲಿ ಎಲ್ಲ ಕಾರ್ಯಗಳಲ್ಲೂ ಸಂಕಲ್ಪ ಮಾಡುವಾಗ 'ಭಾರತೀರಮಣಮುಖ್ಯಪ್ರಾಣಾಂತರ್ಗತ' ಎಂದು ಹೇಳಿಕೊಂಡೇ ಮುಂದೆ ದೇವರ ಹೆಸರನ್ನು ಹೇಳಿಕೊಳ್ಳುತ್ತಾರೆ. ಯದ್ಯಪಿ ಈ ವಿಚಾರ ಬಹಳ ಮುಖ್ಯವಾದರೂ ಅನೇಕರು ಸಾಮಾನ್ಯವಾಗಿ ಈ ವಿಚಾರವನ್ನು ಹೆಚ್ಚು ಗಮನಿಸುವುದೂ ಇಲ್ಲ, ಇದರಲ್ಲಿ ಏನು ಮಹತ್ವವಿದೆ ಎಂದು ತಿಳಿಯಲು ಕುತೂಹಲವನ್ನೂ ಹೊಂದಿರುವುದಿಲ್ಲ. ಆದರೆ ನಾವು ಶೋಧನಾತ್ಮಕ ವಿಚಾರಪೂರ್ಣದೃಷ್ಟಿಯಿಂದಲೇ ಎಲ್ಲವನ್ನೂ ತಿಳಿಯಲು ಹೊರಟಿರುವುದರಿಂದ ಮೊದಲು ಈ ವಿಚಾರಕ್ಕೇ ಹೋಗೋಣ.

ಶಬ್ದದ ಅರ್ಥ: ಈಗ 'ಅಂತರ್ಗತ' ಎಂಬಲ್ಲಿ ಅಂತರ್ + ಗತ ಎಂದು ಎರಡು ಪದಗಳಿವೆ; ಇವಕ್ಕೆ ಒಳಗೆ ಇರುವ ಎಂದರ್ಥ. ಅದಕ್ಕೆ ಮುಖ್ಯಪ್ರಾಣನ ಹೃದಯಾಂತರ್-ಗತನಾದ ಎಂದೇ ಅರ್ಥ. ಮುಖ್ಯಪ್ರಾಣನಲ್ಲಿ ಯಾವ ಕಾಲಕ್ಕೂ ಅಸುರಾವೇಶವಿಲ್ಲ, ಅಜ್ಞಾನದ ಸ್ಪರ್ಶವೂ ಇಲ್ಲ. ಆದಕಾರಣ ಅವರ ಹೃದಯದಲ್ಲಿರುವ ಭಗವದ್ರೂಪವು ಅತ್ಯಂತ ಶುದ್ಧವಾಗಿ—ಅಜ್ಞಾನದ ಮುಸುಕಿನಿಂದ ರಹಿತವಾದದ್ದಾಗಿರುತ್ತದೆ. ನಿರ್ಮಲ-ವಾದ ಕನ್ನಡಿಯಲ್ಲಿ ಹೇಗೆ ಪ್ರತಿಬಿಂಬವು ನಿಷ್ಕಲ್ಮಶವಾಗಿ ಸ್ಫುಟವಾಗಿ ಕಾಣುವುದೋ ಹಾಗೆ ಶ್ರೀಹರಿಯು ಸನ್ನಿಧಾನವು ಮುಖ್ಯಪ್ರಾಣನ ಹೃದಯದಲ್ಲಿ ಸ್ಫುಟವಾಗಿರುವುದರಿಂದ ನಾವು ಅರ್ಪಿಸುವ ಸಕಲವೂ ನೇರವಾಗಿ ಆ ಶ್ರೀವಿಷ್ಣುವಿಗೇ ಹೋಗುವುದು. ಈ ಕಾರಣ-ದಿಂದಾಗಿಯೇ 'ಮುಖ್ಯಪ್ರಾಣಾಂತರ್ಗತ' ಎಂದು ಹೇಳಬೇಕೆಂದು ಹಿರಿಯರಾದ ಜ್ಞಾನಿಗಳು ಪದ್ಧತಿ ಹಾಕಿಕೊಟ್ಟಿದ್ದಾರೆ.

ಈಗ ವಾಯುದೇವರಿಗೆ ಆ ಉಚ್ಚಸ್ಥಾನ ಹೇಗೆ ದೊರಕಿತೆಂಬ ಪ್ರಶ್ನೆ ಉದ್ಭವಿಸುವುದು. ಆದಕಾರಣ ಅದನ್ನೇ ವಿಮರ್ಶೆ ಮಾಡೋಣ.

ವಾಯುಜೀವೋತ್ತಮತ್ವ: ಬ್ರಹ್ಮನ ಸೃಷ್ಟಿಯಲ್ಲಿ ಎಂಬತ್ತನಾಲ್ಕು ಲಕ್ಷ ಜೀವ ರಾಶಿಗಳಿರುವರೆಂದು ಪ್ರಸಿದ್ಧಿಯಿದೆ. ಇವರಲ್ಲೆಲ್ಲಾ ಅತ್ಯಂತ ಜ್ಯೇಷ್ಠರೂ ಶ್ರೇಷ್ಠರೂ ಆದವರು ಬ್ರಹ್ಮದೇವರು; ಮುಂದಿನ ಕಲ್ಪದಲ್ಲಿ ಆ ಬ್ರಹ್ಮಪದವಿಗೆ ಬರುವವರೇ ವಾಯು-ದೇವರು. ಹೀಗೆ ಬ್ರಹ್ಮವಾಯುಗಳಿಬ್ಬರೂ ಪ್ರಾಯಶಃ ಸಮಾನರು. ಇದನ್ನು ಬೃಹದ್-ಭಾಷ್ಯದಲ್ಲಿ (೪/೬/೨೮) ಹೇಳಿದ

> ಉತ್ತಮಃ ಸರ್ವದೇವೇಷು ಪ್ರಾಣ ಏವ ಹರೇರನು ।
> ಚತುರ್ಮುಖಸ್ಯ ಪ್ರಾಣಸ್ಯ ನ ವಿಶೇಷೋಽಸ್ತಿ ಕಶ್ಚನ ॥

ಎಂಬ ಪ್ರಮಾಣವು ಸಮರ್ಥಿಸುತ್ತದೆ. ಶ್ರೀಹರಿಯನ್ನು ಬಿಟ್ಟರೆ ಸಕಲ ದೇವತೆಗಳಲ್ಲೂ ಮುಖ್ಯಪ್ರಾಣನೇ ಉತ್ತಮನು. ಚತುರ್ಮುಖನಿಗೂ ಮುಖ್ಯಪ್ರಾಣನಿಗೂ ಹೆಚ್ಚೇನೂ ವಿಶೇಷವಿಲ್ಲ. ಹೀಗೆ ವಾಯುದೇವರು ಜೀವೋತ್ತಮರೆಂದು ಸಿದ್ಧವಾಗುತ್ತದೆ.

ಉಪನಿಷತ್ತುಗಳಲ್ಲಿ ಪ್ರತಿಪಾದನೆ : ಈ ವಿಷಯವು ಅನೇಕ ಉಪನಿಷತ್ತುಗಳಲ್ಲೂ ಭಾಗವತ-ಭಾರತಗಳಲ್ಲೂ ಬ್ರಹ್ಮಸೂತ್ರಗಳಲ್ಲೂ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಕೇವಲ ಒಂದೆರಡು ವಾಕ್ಯಗಳನ್ನು ಮಾತ್ರ ಇಲ್ಲಿ ದೃಷ್ಟಾಂತವಾಗಿ ಹೇಳುವೆವು. ಷಟ್ ಪ್ರಶ್ನೋಪನಿಷತ್ತಿನಲ್ಲಿ (೨/೫) 'ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್' ಎಂದು ಹೇಳಿದೆ. ರಥದ ಚಕ್ರದ ನಾಭಿಯಲ್ಲಿ (ಮಧ್ಯದ ಗುಂಟನೆಂಟ ಮರದ ತುಂಡಿನಲ್ಲಿ) ಚಕ್ರದ ಎಲ್ಲಾ ಅಡ್ಡಗೋಲುಗಳೂ ಹೇಗೆ ಆಶ್ರಿತವಾಗಿವೆಯೋ ಹಾಗೆ ಸಕಲವೂ ಪ್ರಾಣನಲ್ಲಿ ಆಶ್ರಿತವಾಗಿದೆ—ಅವನ ಅಧೀನವಾಗಿದೆ—ಎಂದು ಹೇಳಿವೆ. ಐತರೇಯೋಪನಿಷತ್ತಿನಲ್ಲಿ (೩/೨/೧) 'ಪ್ರಾಣೋ ವಂಶ ಇತಿ ಸ್ಥವಿರಃ ಶಾಕಲ್ಯಃ' ಎಂಬ ಖಂಡದಲ್ಲಿ ಸ್ಥವಿರಶಾಕಲ್ಯ-ರೆಂಬ ಮಹರ್ಷಿಗಳು ಪ್ರಾಣದೇವರನ್ನು ಮನೆಯ ಸೂರಿಗೆ ಬಿಗಿದಿರುವ ಹೆಬ್ಬಿದಿರೆಂದು ವರ್ಣಿಸಿದ್ದಾರೆ. ಎಂದರೆ ಮನೆಯ ಸೂರಿಗೆ (ಛಾವಣಿಗೆ) ಹಾಕಿ ಬಿಗಿದ ಚಿಕ್ಕ ಚಿಕ್ಕ ಬಿದಿರುಗಳಿಗೆಲ್ಲಾ ಮಧ್ಯದ ದೊಡ್ಡ ಬಿದಿರು ಹೇಗೆ ಆಶ್ರಯವಾಗಿದೆಯೋ ಹಾಗೆ ಮುಖ್ಯಪ್ರಾಣನು ದೇಹದ ಇಂದ್ರಿಯಾಭಿಮಾನಿಗಳೇ ಮೊದಲಾದ ಸಕಲ ದೇವತೆಗಳಿಗೂ ಮುಖ್ಯಾಶ್ರಯ-ನಾಗಿದ್ದಾನೆಂದು ವರ್ಣಿಸಿದ್ದಾರೆ.

ವಾಯುದೇವರಿಗೆ ಅಸುರಾವೇಶವಿಲ್ಲ : ರುದ್ರಾದಿ ಸಕಲ ದೇವತೆಗಳಿಗೂ ಅಸುರಾ-ವೇಶವೂ ಉಂಟು, ಅಜ್ಞಾನಾದಿ ದೋಷಗಳೂ ಉಂಟು; ಇವು ಪ್ರಾಣದೇವರಿಗೆ ಮಾತ್ರ ಇಲ್ಲವೆಂಬುದನ್ನು ಛಾಂದೋಗ್ಯ, ಬೃಹದಾರಣ್ಯ, ಐತರೇಯ, ಷಟ್ಪ್ರಶ್ನ ಎಲ್ಲಾ ಉಪ-ನಿಷತ್ತುಗಳಲ್ಲೂ ಅನೇಕ ಆಖ್ಯಾಯಿಕೆ (ನಡೆದ ಘಟನೆ)ಗಳ ಮುಖಾಂತರ ನಿರೂಪಣೆ ಮಾಡಿದ್ದಾರೆ. ವಿಷ್ಣುಪ್ರಸಾದವನ್ನು ಸಂಪಾದಿಸಲು ಹೊರಟಾಗ ಗರುಡ-ಶೇಷ-ರುದ್ರಾದಿ ಸಕಲ ದೇವತೆಗಳೂ ಅಸುರರಿಂದ ಭಗ್ನರಾಗಿ ವಿಫಲರಾದರೆಂದೂ ಪ್ರಾಣದೇವರೊಬ್ಬರು ಮಾತ್ರ ಸಫಲರಾದರೆಂದೂ ನಿರೂಪಣೆ ಮಾಡಿದೆ. ಅಷ್ಟೇ ಅಲ್ಲದೆ 'ಪ್ರಾಣದೇವರೊಬ್ಬರೇ' ನಿರಾತಂಕವಾಗಿ ವಿಷ್ಣುಪ್ರಸಾದ ಕೊಡಿಸಬಲ್ಲವರಾದಕಾರಣ ಈ ವಾಯುದೇವರ ಮುಖಾಂತರ ಹೋದರೆ ಮಾತ್ರವೇ ಶ್ರೀಹರಿಯ ಪ್ರಸಾದ ತಪ್ಪದೆ ದೊರಕುವುದೆಂದು ಬೃಹದಾರಣ್ಯಕೋಪನಿಷತ್ತು (೩/೩/೨೮) ಸಾರಿ ಹೇಳುತ್ತದೆ—'ತಸ್ಮಾದು ತೇಷು ವರಂ ವೃಣೀತ....ಯಂ ಕಾಮಂ ಕಾಮಯತೇ ತಮಾಗಾಯತಿ ।'

(ಅರ್ಥ) ಆದಕಾರಣ—ವಾಯುದೇವರ ಪದವಿಗೆ ಬರುವವರೇ ಸರ್ವಜೀವೋತ್ತಮರಾದ ಕಾರಣವೂ, ಅವರಿಗೆ ದೈತ್ಯಬಾಧೆಯೂ, ಅಜ್ಞಾನಾದಿ ದೋಷಗಳೂ, ಅಪ-ಮೃತ್ಯುವೂ ಇಲ್ಲವಾದ ಕಾರಣವೂ—ಅವರ ಮುಖಾಂತರವಾಗಿಯೇ (ಉ ಎಂಬ ಅವ್ಯಯ ಅವಧಾರಣಾರ್ಥಕ) ಶ್ರೀಹರಿಯಲ್ಲಿ ವರವನ್ನು ಬೇಡಬೇಕು...ಅವರು (ಪ್ರಾಣದೇವರು) ಆ ಯಜಮಾನ (ಭಕ್ತ)ನಿಗಾಗಿ ಯಾವ ಯಾವ ವರ ಬೇಡುತ್ತಾರೋ ಆಯಾ ಇಷ್ಟಾರ್ಥ-ವನ್ನು ತಪ್ಪದೇ ಕೊಟ್ಟೇಕೊಡಿಸುತ್ತಾರೆ. ಆಙ್ ಉಪಸರ್ಗವು ನಿರ್ಧಾರಣಾರ್ಥಕ.)

ದ್ವಾತ್ರಿಂಶಲ್ಲಕ್ಷಣೋಪೇತರು: ತಂತ್ರಸಾರದಲ್ಲಿ (ಅಧ್ಯಾಯ ೩) ಪ್ರತಿಮೆಯ ಲಕ್ಷಣ ಹೇಳುವಾಗ ಅದು ತೊಂಬತ್ತಾರು ಅಂಗುಲ ಎತ್ತರವಿರಬೇಕೆಂದೂ ಕೈಕಾಲು ಕಣ್ಣು ಕಿವಿ ಮೂಗುಗಳಿಂದ ಹಿಡಿದು ಉಗುರಿನವರೆಗೆ ಯಾವಯಾವ ಅಂಗ ಎಷ್ಟೆಷ್ಟು ಉದ್ದ ದಪ್ಪ ಅಗಲ ಇರಬೇಕೆಂಬ ಪ್ರಮಾಣ ಹೇಳಿದ್ದಾರೆ. ಅಲ್ಲದೆ ಶಾಸ್ತ್ರದಲ್ಲಿ ಉತ್ತಮಪುರುಷನಲ್ಲಿ ಇರಬೇಕಾದ ಮೂವತ್ತೆರಡು ಸಲ್ಲಕ್ಷಣಗಳನ್ನು ಹೇಳಿದ್ದಾರೆ. ಶ್ರೀಹರಿಯನ್ನು ಬಿಟ್ಟರೆ ಬ್ರಹ್ಮ-ವಾಯು ಈ ಇಬ್ಬರಲ್ಲಿ ಮಾತ್ರವೇ ಆ ಮೂವತ್ತೆರಡು ಲಕ್ಷಣಗಳೂ ಇರುವುವಲ್ಲದೆ ಪ್ರತಿಮೆಗೆ ಹೇಳಿದ ಸಕಲ ಲಕ್ಷಣಗಳೂ ಇವರಲ್ಲಿ ಪ್ರಮಾಣಕ್ಕೆ ತಕ್ಕಂತೆಯೇ ಇವೆ. ಈ ಪ್ರಕಾರ ವಾಯುದೇವರಲ್ಲಿ ಸಮಗ್ರ ಗುರುಲಕ್ಷಣಗಳೂ ಇರುವುದರಿಂದ ಅವರು ಅತ್ಯಂತ ಶ್ರೇಷ್ಠಗುರುಗಳೂ ಆಗಿದ್ದಾರೆ. ರುದ್ರಾದಿಗಳಿಗೆ ಕೇವಲ ಇಪ್ಪತ್ತೆಂಟು ಲಕ್ಷಣಗಳಿವೆಯೆಂದೂ ಇಂದ್ರನಿಗೆ ಇಪ್ಪತ್ತನಾಲ್ಕು ಲಕ್ಷಣಗಳೆಂದೂ ಮಿಕ್ಕವರಿಗೆ ಅದಕ್ಕೂ ಕಡಿಮೆ ಲಕ್ಷಣಗಳೆಂದೂ ಬೃಹದ್ಭಾಷ್ಯೋದಾಹೃತ (೩/೩/೨೮) ಮಹಾಸಂಹಿತಾವಾಕ್ಯ ತಿಳಿಸುತ್ತದೆ.

ಪ್ರಾಣ ಎಲ್ಲೋ ಹರಿ ಅಲ್ಲೇ: ಷಟ್ಪ್ರಶ್ನದಲ್ಲಿ 'ಕಸ್ಮಿನ್ನಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮಿ' ಎಂಬ ವಾಕ್ಯವಿದೆ. ವಿಷ್ಣು ಪ್ರಾಣನನ್ನು ಸೃಷ್ಟಿಸುವಾಗ 'ಇವನು ಎಲ್ಲಿಂದ ಹೊರಡುವನೋ ಅಲ್ಲಿಂದ ನಾನೂ ಹೊರಡುವೆನು. ಇವನೆಲ್ಲಿದ್ದರೆ ಅಲ್ಲಿ ನಾನೂ ಇರುವೆನೆ'ಂದು ಸಂಕಲ್ಪ ಮಾಡಿದ್ದನು. ಆದಕಾರಣ ಪ್ರಾಣದೇವರಿಲ್ಲದ ಕಡೆ ಶ್ರೀಹರಿಯ ಸನ್ನಿಧಾನ ಇರುವುದೇ ಇಲ್ಲ. ಇದನ್ನೇ ವಿಸ್ತರಿಸಿ ಪುರಂದರದಾಸರು 'ಹನುಮನ ಮತವೇ ಹರಿಯ ಮತವೋ' ಎಂದು ಹೇಳಿ ಅದನ್ನು ಅನೇಕ ನಿದರ್ಶನಗಳಿಂದ ಸಮರ್ಥಿಸಿದ್ದಾರೆ. 'ಯೇನಾಹಮಿಹ ದುರ್ಮಾರ್ಗಾತ್' ಎಂಬ ಶ್ಲೋಕದಲ್ಲಿ ಮಧ್ವರಾಯರೇ ನಮ್ಮನ್ನು ದುರ್ಮಾರ್ಗದಿಂದ ಪಾರುಮಾಡಿ ಶ್ರೀವೈಷ್ಣವಮಾರ್ಗದಲ್ಲಿ ಹಾಕಿದರೆಂದು ಹೇಳಿದಂತೆ ನಮ್ಮನ್ನು ಸನ್ಮಾರ್ಗಕ್ಕೆ ಒಯ್ಯುವವರೇ ಪ್ರಾಣದೇವರು. ಅಷ್ಟೇ ಅಲ್ಲ. ಎಲ್ಲಿಯವರೆಗೆ ಮುಖ್ಯಪ್ರಾಣನು ದೇಹದಲ್ಲಿರುವನೋ ಅಲ್ಲಿಯವರೆಗೆ ಸಕಲ ಕಾರ್ಯಗಳೂ ನಡೆಯುತ್ತವೆ. ಹೀಗೆ ಅವರ ಸನ್ನಿಧಾನವೇ ನಮ್ಮ ಸಕಲ ಕರ್ಮಗಳಿಗೂ ಮುಖ್ಯಕಾರಣ. ಆದಕಾರಣ ನಾವು ಸಕಲ ಕಾರ್ಯಗಳನ್ನೂ ಶ್ರೀಹರಿಯಲ್ಲಿ ಆ ಮುಖ್ಯ-ಪ್ರಾಣನ ಮುಖಾಂತರವೇ ಸಮರ್ಪಿಸಬೇಕು; 'ತಸ್ಮಿನ್ನಪೋ ಮಾತರಿಶ್ವಾ ದಧಾತಿ' — ಆ ಮುಖ್ಯಪ್ರಾಣ ನಮ್ಮ ಸಕಲ ಕರ್ಮಗಳನ್ನೂ ಆ ಹರಿಯಲ್ಲಿ ಸಮರ್ಪಿಸುತ್ತಾನೆ, ಆಗಲೇ ಶ್ರೀಹರಿ ಅದನ್ನು ಸ್ವೀಕರಿಸುತ್ತಾನೆಂದು ಈಶಾವಾಸ್ಯಶ್ರುತಿ (ಮಂತ್ರ ೪) ಹೇಳುತ್ತದೆ.

ಯುವರಾಜನ ಹೋಲಿಕೆ: ಶ್ರೀಹರಿಯು ಮಹಾಮಹಿಮ; ಅವನ ಬಳಿಗೆ ಎಲ್ಲರೂ ಹೋಗಲಾರರು. ರಾಜನ ಬಳಿಗೆ ಸರ್ವಸಾಮಾನ್ಯ ಜನರು ಹೋಗುವುದು ಅಸಾಧ್ಯವಾದರೂ ಯುವರಾಜನ ಸಹಾಯದಿಂದ ಅವನ ಬಳಿಗೆ ಹೇಗೆ ಸುಲಭವಾಗಿ ಹೋಗ-

ಬಹುದೋ ಅದರಂತೆ ಮುಖ್ಯಪ್ರಾಣನ ಸಹಾಯದಿಂದ ನಾವು ಸುಖವಾಗಿ ಶ್ರೀಹರಿಯ ಬಳಿಗೆ ಹೋಗಬಹುದೆಂದು ಬೃಹದಾರಣ್ಯಕೋಪನಿಷತ್ತು (೩/೫/೮) ತಿಳಿಸುತ್ತದೆ. ಅಷ್ಟೇ ಅಲ್ಲ. ಮಂತ್ರಾಲಯದ ರಾಯರು 'ಪ್ರಾತಃಸಂಕಲ್ಪಗದ್ಯ'ದಲ್ಲಿ ಹೇಳಿದಂತೆ—ಸರ್ವ ಕರ್ಮವನ್ನು ಮಾಡುವವರೂ ಮಾಡಿಸುವವರೂ, ಸರ್ವಕರ್ಮಗಳನ್ನು ಶುದ್ಧಿ ಮಾಡು-ವವರೂ ಸರ್ವಕರ್ಮಗಳಿಗೆ ಸಿದ್ಧಿ ಕೊಡಿಸುವವರೂ, ಸರ್ವಕರ್ಮಗಳಿಗೆ ಫಲವನ್ನು ಕೊಡಿಸುವವರೂ ಆ ಮುಖ್ಯಪ್ರಾಣದೇವರೇ. ಆದಕಾರಣ ಆ ಮುಖ್ಯಪ್ರಾಣದೇವರ ಮುಖಾಂತರ ಸಮರ್ಪಿಸಿದ ಕರ್ಮಗಳು ಮಾತ್ರ ಫಲಕಾರಿಯಾಗುತ್ತವೆ. ಏಕೆಂದರೆ ಅವನ್ನೆಲ್ಲಾ ಪ್ರಾಣದೇವರು ಶುದ್ಧಿಮಾಡಿ, ಸಿದ್ಧ ಮಾಡಿ ನಮಗೆ ಫಲ ಕೊಡಿಸುತ್ತಾರೆ. ಆದ್ದರಿಂದ ಸಕಲ ಸದ್ವೈಷ್ಣವರೂ ಶುಭಕಾರ್ಯಗಳನ್ನು ಮಾಡುವಾಗಲೂ, ಶ್ರಾದ್ಧಾದಿ ಅಶುಭ ಕಾರ್ಯಗಳನ್ನು ಮಾಡುವಾಗಲೂ ನಿಯಮೇನ ಅವೆಲ್ಲ ಕಾರ್ಯಗಳನ್ನೂ ಮುಖ್ಯಪ್ರಾಣನ ಮುಖಾಂತರವೇ ಸಮರ್ಪಿಸಿ ಶ್ರೀಕೃಷ್ಣಾರ್ಪಣವೆನ್ನುತ್ತಾರೆ. ಈ ವಿಷಯವನ್ನೇ ಪುರಂದರದಾಸಾರ್ಯರು 'ಮಧ್ವರಾಯರ ನೆನೆದು ಪರಿಶುದ್ಧರಾಗಿರೋ' ಎಂಬ ಕೀರ್ತನೆಯಲ್ಲಿ ಹೇಳಿದ್ದಾರೆ. (ಇದಕ್ಕೂ ಹೆಚ್ಚಿನ ಪ್ರಮೇಯಾಂಶಗಳನ್ನು ಶ್ರೀಮದ್ವಾದಿ-ರಾಜಸ್ವಾಮಿಗಳು 'ಸರಸಭಾರತೀವಿಲಾಸ'ದಲ್ಲಿ ನಿರೂಪಣೆ ಮಾಡಿದ್ದಾರೆ. ಅದರಿಂದಲೂ ತಿಳಿಯಬಹುದು.)

ಇತರ ದೇವತೆಗಳ ಭಜನೆ ಅವಿಧಿ: ಶ್ರೀಕೃಷ್ಣನು ಭಗವದ್ಗೀತೆಯಲ್ಲಿ (೯-23) 'ಯೇಽಪ್ಯನ್ಯದೇವತಾ ಭಕ್ತಾಃ' ಎಂಬ ಶ್ಲೋಕದಲ್ಲಿ ಇತರ ದೇವತೆಗಳನ್ನು ಭಜಿಸುವವ-ರೆಲ್ಲರೂ ನನ್ನನ್ನೇ 'ಅವಿಧಿಪೂರ್ವಕವಾಗಿ' ಭಜಿಸುವರೆಂದು ಹೇಳಿರುವುದರಿಂದ ವಿಷ್ಣು-ಭಕ್ತರೆಂದು ತಿಳಿಯದೆ ಇತರ ದೇವತೆಗಳನ್ನು ಆರಾಧಿಸುವುದು ಅವಿಧಿಯಾಗುತ್ತದೆ. ಅದೇ ರೀತಿ ವಿಷ್ಣುವನ್ನು ಮುಖ್ಯಪ್ರಾಣನ ದ್ವಾರಾ ಹೋಗದೆ ಆರಾಧಿಸುವುದೂ ಕೂಡ ಕೇವಲ ಅವಿಧಿಯೂ ಆಗುವುದಲ್ಲದೆ ನಿಷ್ಫಲವೂ ಆಗುತ್ತದೆ. ಆದಕಾರಣ ನಾವು ಯಾವಾಗಲೂ ಯಾವ ದೇವತೆಗಳನ್ನು ಆರಾಧಿಸಿದರೂ ಅವರು ವಿಷ್ಣುಪರಿವಾರವೆಂದು ತಿಳಿಯುವುದಲ್ಲದೆ ಅವರೆಲ್ಲರಿಗೂ ಅಂತರ್ಯಾಮಿಯಾಗಿ ಪ್ರೇರಕನಾದ 'ಮುಖ್ಯಪ್ರಾಣ'ನ ಮುಖಾಂತರವೇ ಸರ್ವಸ್ವಾಮಿಯಾದ ಶ್ರೀಹರಿಯನ್ನು ಆರಾಧಿಸಬೇಕೆಂಬುದೇ ಸಕಲಶಾಸ್ತ್ರಸಮ್ಮತವಾದ ನಿರ್ಣಯ.

ಶಂಖಪೂಜೆ

ಶಂಖದ ಬಗ್ಗೆ ವಿಧಿಗಳು: ಶಂಖವು ಪೂಜಾದ್ರವ್ಯಗಳಲ್ಲಿ ಅತಿ ಮುಖ್ಯವಾದ ಸಾಧನಗಳ ಪೈಕಿ ಒಂದಾಗಿದೆ. ಪ್ರಾಯಶಃ ದ್ವಾರಕಾದಲ್ಲಿ ಸಮುದ್ರದಲ್ಲಿ ದೊರಕುವ ಶಂಖಗಳೇ ಶ್ರೇಷ್ಠವೆಂದು ಹೇಳುತ್ತಾರೆ. ಶಂಖವು ಲಕ್ಷ್ಮೀಸ್ವರೂಪವೆಂದೂ ತತ್ರಾಪಿ ಬಿಳುಪಾಗಿರುವುದರಿಂದ ಶ್ರೀಸ್ವರೂಪವೆಂದೂ ಹೇಳುತ್ತಾರೆ. ಆದ್ದರಿಂದಲೇ ಶಂಖಕ್ಕೆ ಬೆಳ್ಳಿ

ಅಥವಾ ಬಂಗಾರದ ಕಟ್ಟು ಹಾಕಿಸುವುದು ಪದ್ಧತಿ. ಶಂಖದ ದವಡೆ ಸಾಮಾನ್ಯವಾಗಿ ಎಡ-ಭಾಗಕ್ಕೇ ಇರುವುದು ಹೆಚ್ಚು; ಇಂಥಾ ಶಂಖಗಳೇ ಅಭಿಷೇಕಕ್ಕೆ ಶ್ರೇಷ್ಠ. ಕ್ವಚಿತ್ ಆ ದವಡೆಯು ಬಲಭಾಗಕ್ಕೆ ಇದ್ದರೆ ಅದನ್ನು 'ಬಲಮುರಿ ಶಂಖ' ಎನ್ನುತ್ತಾರೆ; ಇದು ಸಾಲಿ-ಗ್ರಾಮದಷ್ಟೇ ಮಹತ್ತರವಾದುದು, ಮತ್ತು ಪೂಜಾರ್ಹವಾಗುತ್ತದೆ. ಬಲಮುರಿ ಮನೆಯಲ್ಲಿದ್ದರೇ ಸಾಕು, ಮನೆಯಲ್ಲಿ ಸೌಭಾಗ್ಯ ನೆಲೆಸಿದ ಹಾಗೆಯೇ ಎನ್ನುತ್ತಾರೆ ಹಿರಿಯರು.

ಶಂಖವನ್ನು ಇಡುವುದಕ್ಕಾಗಿಯೇ ಒಂದು ತರಹ ಪೀಠವನ್ನು ಮಾಡಿಸುವುದು ಹಿಂದಿನವರ ಪದ್ಧತಿ; ಇದಕ್ಕೆ ಶಂಖಪೀಠವೆಂಬುದು ಸಂಸ್ಕೃತದ ಹೆಸರು, ಅಡ್ಡಣಿಕೆ ಎಂಬುದು ಕನ್ನಡದ ಹೆಸರು. ಶಂಖವನ್ನು ನೇರವಾಗಿ ನೆಲದ ಮೇಲೇ ಇಡಬಾರದು, ಅದು ಒಂದು ಅಪರಾಧವೆನ್ನಿಸುತ್ತದೆ. ಶಂಖವನ್ನು ಯಾವಾಗಲೂ ಪೀಠದ (ಅಡ್ಡಣಿಕೆಯ) ಮೇಲೇ ಇಡಬೇಕು. ಮೇಲೆ ಹೇಳಿದಂತೆ ಶಂಖಕ್ಕೆ ಬೆಳ್ಳಿಯಿಂದ ಕಟ್ಟುಹಾಕಿಸಿರುವುದು ಉತ್ತಮಪಕ್ಷ. ಒಂದು ವೇಳೆ ಹಾಗೆ ಕಟ್ಟು ಹಾಕಿಸದಿದ್ದರೆ ಅಭಿಷೇಕ ಮಾಡುವಾಗ ನೀರು ಶಂಖದ ತುದಿಯಿಂದ ಬೀಳಬಾರದು, ಮಧ್ಯಭಾಗದಿಂದ—ಹೊಟ್ಟೆಭಾಗದಿಂದಲೇ ಬೀಳುವಂತೆ ಬಗ್ಗಿಸಬೇಕು. ಕಟ್ಟು ಹಾಕಿದ್ದಪಕ್ಷದಲ್ಲಿ ತುದಿಯಿಂದ ಅಭಿಷೇಕ ಮಾಡಬಹುದು.

ಶಂಖವನ್ನು ತೊಳೆಯದೆ ಅಭಿಷೇಕಕ್ಕೆ ಉಪಯೋಗಿಸಬಾರದು. 'ಸಹಸ್ರಾರಹುಂ ಫಟ್' ಎಂಬ ಸುದರ್ಶನ ಮಂತ್ರ ಹೇಳಿ ಶಂಖಕ್ಕೆ ಮೊದಲು ಸ್ವಲ್ಪ ನೀರು ಹಾಕಿ ತೊಳೆದು ಚೆಲ್ಲಿ ಆಮೇಲೆ ಪೂಜೆಗೆ ಉಪಯೋಗಿಸಬೇಕು. ಅಲ್ಲದೆ ಹಿಂದೆ ನಿರ್ಮಾಲ್ಯಾಭಿ-ಷೇಕದ ಸಂದರ್ಭದಲ್ಲಿ ಹೇಳಿದಂತೆ ಶಂಖವನ್ನೇ ನೀರಿನಲ್ಲಿ ಅದ್ದಿ ನೀರು ತೆಗೆದು ಅಭಿಷೇಕ ಮಾಡಬಾರದು. ಹಾಗೆ ಮಾಡಿದರೆ ಆ ನೀರು 'ಶ್ವಾನಮೂತ್ರಸಮಂ ಭವೇತ್' ಎಂದಿರುವುದರಿಂದ ನಾಯಿಯ ಮೂತ್ರಕ್ಕೆ ಸಮಾನವಾಗುತ್ತದೆ. ಆದಕಾರಣ ಯಾವಾಗಲೂ ಬೇರೆ ಪಾತ್ರೆಯಿಂದಲೇ ಶಂಖಕ್ಕೆ ನೀರು ಹಾಕಬೇಕೇ ವಿನಾ ಅದನ್ನೇ ಅದ್ದಬಾರದು.

ಅಭಿಷೇಕಾದಿಗಳಿಗೆ ಉಪಯೋಗಿಸುವ ನೀರಿರುವ ಕಲಶಕ್ಕೆ ಹೇಗೆ ಷೋಡಶೋಪ-ಚಾರ ಪೂಜೆ ಮಾಡಿದೆವೋ ಹಾಗೆಯೇ ಪೂಜೆಯ ಮುಖ್ಯಸಾಧನವಾದ್ದರಿಂದ ಶಂಖಕ್ಕೂ ಷೋಡಶೋಪಚಾರ ಪೂಜೆಯನ್ನೇ ಕ್ರಮವಾಗಿ ಮಾಡಬೇಕು. ಕಡೆಯ ಪಕ್ಷ 'ಷೋಡಶೋಪಚಾರಪೂಜಾಃ ಸಮರ್ಪಯಾಮಿ' ಎಂದು ಬಾಯಿಂದಲಾದರೂ ಉಚ್ಚರಿಸಿ, ಹಾಗೆಯೇ ಹದಿನಾರು ಪೂಜೆಗಳನ್ನು ಮಾಡಿದ್ದೇನೆಂದು ಮನಸ್ಸಿನಿಂದಲಾದರೂ ಭಾವಿಸಿಕೊಳ್ಳಬೇಕು. 'ಪದ್ಮಮಾಲಾ'ದಲ್ಲಿ ಹೇಳಿದ ಪೂಜಾಪದ್ಧತಿಯ ಪ್ರಕಾರ ಶಂಖಪೂಜೆಯನ್ನು ಕಲಶಪೂಜೆಯಾದಮೇಲೆ ಮಾಡಬೇಕು. ಕೆಲವರು ಮೊದಲು ಶಂಖಪೂಜೆಯನ್ನೇ ಮಾಡಿ ಆಮೇಲೆ ಕಲಶಪೂಜೆ ಮಾಡುವುದೂ ಉಂಟು. ಅದು ಆಚಾರ ಭೇದ.

ಶಂಖಕ್ಕೆ ಪಾಂಚಜನ್ಯವೆಂಬ ಹೆಸರಿದೆ—ಶಂಖ ಎಂಬ ಪದವು 'ಶಮು ಉಪಶಮೇ' (ದಿವಾದಿ ಪ.)-ಶಾಂತವಾಗು ಎಂಬ ಧಾತುವಿಗೆ 'ಶಮೇಃ ಖಃ' (೧/೧೦೨) ಎಂಬ

ಉಣಾದಿ ಸೂತ್ರದಿಂದ ಖ-ಪ್ರತ್ಯಯ ಸೇರಿ ಆಗಿದೆ. ಶಾಮ್ಯತಿ ಅಶುಭಮಸ್ಮಾದಿತಿ ವಾ ಶಮಯತಿ ಪಾಪಾನ್ಯಶುಭಾನಿ ವೇತಿ ವಾ ಶಂಖಃ। ಯಾವುದರಿಂದ ಅಶುಭಗಳು ತಣ್ಣಗಾಗುವವೋ ಅಥವಾ ಯಾವುದು ಪಾಪಗಳನ್ನೂ ಅಮಂಗಳವನ್ನೂ ಶಮನ ಮಾಡುತ್ತದೋ ಅದೇ ಶಂಖ. ಇದು ವ್ಯಾಕರಣರೀತ್ಯಾ ವ್ಯುತ್ಪತ್ತಿಯಾಯಿತು. 'ಶಂ ಸುಖಂ ಶಂಕರಃ ಶ್ರೇಯಃ' ಎಂದು ಏಕಾಕ್ಷರ ಕೋಶವಿರುವುದರಿಂದ ಶಂ ಎಂದರೆ ಸುಖಸ್ವರೂಪವಾದುದಲ್ಲದೆ ಸುಖವನ್ನು ಉಂಟುಮಾಡುವಂಥಾದ್ದೂ ಶ್ರೇಯಸ್ಕರವೂ ಆದುದು. ಬೃಹದ್ಭಾಷ್ಯದ ಪ್ರಕಾರ (೭/೧/೧) 'ಖಂ ಪ್ರಕಾಶಸ್ವರೂಪತ್ವಾತ್........। ಪುನಃ ಖಂ ಸುಖರೂಪತ್ವಾತ್....ಖ್ಯಾತತ್ವಾಚ್ಚಾಪಿ ತತ್ ಖಂ ಸ್ಮೃತ್' ಪ್ರಕಾಶಸ್ವರೂಪವಾದ್ದರಿಂದಲೂ ಆನಂದಸ್ವರೂಪವಾದ್ದರಿಂದಲೂ ಪ್ರಖ್ಯಾತವಾದ್ದರಿಂದಲೂ ಖ-ಶಬ್ದವಾಚ್ಯವಾಗಿದೆ. ಛಾಂದೋಗ್ಯಭಾಷ್ಯದ ಪ್ರಕಾರ (೪/೧೦/೫) ಖಂ ಎಂದರೆ ಜ್ಞಾನರೂಪವೆಂದೂ ಅರ್ಥವಾಗುತ್ತದೆ. ಹೀಗೆ ಮಂಗಳಸ್ವರೂಪವೂ ಪ್ರಕಾಶಸ್ವರೂಪವೂ ಆಗಿ ಸರ್ವತ್ರ ಪ್ರಖ್ಯಾತವಾಗಿರುವುದರಿಂದ ಸಾಕ್ಷಾದ್ವಿಷ್ಣುವಿಗೂ ಅವನ ಆಯುಧಕ್ಕೂ ಶಂಖ ಎಂಬ ಹೆಸರು ಬಂದಿದೆ.

ಸುಲಕ್ಷಣವಾದ ಶಂಖ ಹೇಗಿರಬೇಕೆಂಬುದನ್ನು ಈ ಶ್ಲೋಕ ತಿಳಿಸುತ್ತದೆ—

ಸುಶ್ವೇತಃ ಪುಂಸಶಿಖಃ ಸ್ನಿಗ್ಧೋ ದೀರ್ಘಾಂಬುಪದ್ಧತಿಃ ।
ಶಂಖಃ ಸ್ಯಾದರ್ಚನೇ ಯೋಗ್ಯೋ ಯೋ ಸವಲ್ಲೀಕಚಕ್ಷುಷಃ ॥

—ಶ್ರೀ ಪ್ರಭಂಜನರ 'ಪದ್ಯಮಾಲಾ'ದಿಂದ

ಅರ್ಥ) ಬಹಳ ಬೆಳ್ಳಗಿರಬೇಕು. ಅದರ ಶಿಖರವು (ಹಿಂಭಾಗವು) ಚೆನ್ನಾಗಿ ಗೋಪುರಾಕಾರವಾಗಿರಬೇಕು, ನುಣುಪಾಗಿರಬೇಕು. ನೀರು ಬೀಳುವ ಅಂಚು (ಹರಿಯು ಅಥವಾ ನಾಲಗೆಯು) ಉದ್ದವಾಗಿರಬೇಕು. ಅದಕ್ಕೆ ರೇಖೆಗಳೂ ಕಣ್ಣೂ ಚೆನ್ನಾಗಿರಬೇಕು. ಅಂಥಾ ಶಂಖವೇ ಪೂಜೆಗೆ ಯೋಗ್ಯ

'ಶಂಖೋ ಲಕ್ಷ್ಮೀಪತೇಃ ಪಾಂಚಜನ್ಯಃ—' ಎಂದು ಅಮರ ಹೇಳುವಂತೆ ವಿಷ್ಣುವಿನ ಶಂಖಕ್ಕೆ ಪಾಂಚಜನ್ಯ ಎಂಬ ಹೆಸರಿದೆ. ಪಂಚಜನ ಎಂಬ ಒಬ್ಬ ದೈತ್ಯನಿದ್ದನು. ವಿಷ್ಣುವು ಅವನನ್ನು ಸಂಹರಿಸಿದಾಗ ಅವನ ಪ್ರಾರ್ಥನೆಯಂತೆ ವಿಷ್ಣು ತನ್ನ ಶಂಖಕ್ಕೆ ಈ ಹೆಸರು ಇಟ್ಟುಕೊಂಡನೆಂದು ಒಂದು ಪೌರಾಣಿಕ ಕಥೆಯಿದೆ ಅದರಂತೆ ಪಂಚಜನೇ ದೈತ್ಯಭೇದೇ ಭವಃ ಪಾಂಚಜನ್ಯಃ-ಪಂಚಜನನೆಂಬ ದೈತ್ಯನ ಹೆಸರಿನಿಂದ ಬಂದಿದ್ದರಿಂದ ಪಾಂಚಜನ್ಯಃ ಎಂದು ಹೆಸರಾಯಿತು. 'ಪಂಚಜನಾತ್' ಎಂಬ ೪/೩/೫೮ರ ವಾರ್ತಿಕದಿಂದ ಯ(ಞ್) ಪ್ರತ್ಯಯ ಬರುತ್ತದೆ. ಶಂಖಮುದ್ರೆ ಹಚ್ಚಿಕೊಳ್ಳುವಾಗ 'ಪಾಂಚಜನ್ಯ ನಿಜ-ಧ್ವಾನ—ಧ್ವಸ್ತಪಾತಕಸಂಚಯ। ತ್ರಾಹಿ ಮಾಂ ಪಾಪಿನಂ ಘೋರ—ಸಂಸಾರಾರ್ಣವ-ಪಾತಿನಮ್ ।' ಎಂದು ಪ್ರಾರ್ಥಿಸುವುದು ವಾಡಿಕೆ. ಇದರ ಅರ್ಥವೇನೆಂದರೆ (ನಿಜ-ತನ್ನ,

ಧ್ವಾನ-ಧ್ವನಿಯಿಂದ, ಧ್ವಸ್ತ-ಧ್ವಂಸಮಾಡಲ್ಪಟ್ಟ, ಪಾತಕ-ಪಾಪಗಳ, ಸಂಚಯ-ಸಮೂಹವುಳ್ಳವನ್ನೇ! ತ್ರಾಹಿ-ಕಾಪಾಡು, ಮಾಂ-ನನ್ನನ್ನು, ಅರ್ಣವ-ಸಮುದ್ರದಲ್ಲಿ) ಹೇ ಪಾಂಚಜನ್ಯವೆಂಬ ಶಂಖವೇ! ನಿನ್ನ ಧ್ವನಿಯನ್ನು ಕೇಳಿದರೇ ಸಾಕು, ಪಾಪಗಳ ರಾಶಿಗಳು ಧ್ವಂಸವಾಗಿ ಹೋಗಿಬಿಡುತ್ತವೆ. ಇಂಥಾ ನೀನು ಸಂಸಾರವೆಂಬ ಅಗಾಧವಾದ ಸಮುದ್ರದಲ್ಲಿ ಬಿದ್ದಿರುವ ಪಾಪಿಯಾದ ನನ್ನನ್ನು ಕಾಪಾಡು. —ಇದರಿಂದ ಶಂಖಕ್ಕೆ ಧ್ವನಿಯನ್ನು ಮಾಡ್ಡೋಣ ಮಾತ್ರದಿಂದ ಪಾಪರಾಶಿಗಳನ್ನು ಧ್ವಂಸಮಾಡುವ ಶಕ್ತಿಯಿದೆ ಯೆಂದು ಹೇಳಿದಂತಾಯಿತು.

ಭಾಗವತ ಷಷ್ಠಸ್ಕಂಧದಲ್ಲಿ ನಾರಾಯಣವರ್ಮದಲ್ಲಿ (೮ ಅಧ್ಯಾಯ, ೨೫ ಶ್ಲೋಕ) ಶಂಖದ ಶಕ್ತಿಯನ್ನು ಪ್ರಾರ್ಥಿಸಿ ಈ ರೀತಿ ಹೊಗಳಿದೆ—

ತ್ವಂ ಯಾತುಧಾನ-ಪ್ರಮಥ-ಪ್ರೇತ-ಮಾತೃ-
ಪಿಶಾಚ-ವಿಪ್ರಗ್ರಹ-ಘೋರದೃಷ್ಟೀನ್ ।
ದರೇಂದ್ರ ವಿದ್ರಾವಯ ಕೃಷ್ಣಪೂರಿತೋ
ಭೀಮಸ್ವನೋಽರೇಃ ಹೃದಯಾನಿ ಕಂಪಯನ್ ॥

(ಅರ್ಥ) (ದರೇಂದ್ರ— ದರ-ಶಂಖಗಳಲ್ಲಿ, ಇಂದ್ರ-ಶ್ರೇಷ್ಠವಾದ) ಹೇ ಪಾಂಚ-ಜನ್ಯವೆಂಬ ವಿಷ್ಣುಶಂಖವೇ! ನೀನು ಭಗವಂತ ಶ್ರೀಹರಿಯಿಂದ ಧ್ವನಿಮಾಡಲ್ಪಟ್ಟರೆ ಸಾಕು, ಭಯಂಕರವಾದ ಶಬ್ದವನ್ನು ಮಾಡುತ್ತಾ (ಭೀಮ-ಭಯಂಕರವಾದ, ಸ್ವನ-ಧ್ವನಿ) ಶತ್ರುಗಳ ಹೃದಯವನ್ನು ಗಡಗಡ ನಡುಗಿಸುತ್ತಾ ಕ್ರೂರವಾದ ದೃಷ್ಟಿಯುಳ್ಳ ಯಾತುಧಾನರೆಂಬ ರಾಕ್ಷಸಗಣಗಳು, ಪ್ರಮಥರೆಂಬ ಈಶ್ವರನ ಭೂತಗಣಗಳು, ಪ್ರೇತ ಗಳು, ಶಾಕಿನಿ ಡಾಕಿನ್ಯಾದಿ ಮಾತೃಗಣಗಳು, ಪಿಶಾಚಿಗಳು, ಬ್ರಹ್ಮರಾಕ್ಷಸರು (ವಿಪ್ರ-ಗ್ರಹ) ಇವರೇ ಮೊದಲಾದ ಸಮಸ್ತ ಶತ್ರುಗಳನ್ನೂ ದಿಕ್ಕಾಪಾಲಾಗಿ ಪಲಾಯನ ಮಾಡು ವಂತೆ ಓಡಿಸು (ವಿದ್ರಾವಯ). ಇದರಿಂದ ಶಂಖದ ಧ್ವನಿ ಕೇಳಿದರೇ ಸಾಕು, ಮೇಲೆ ಹೇಳಿದ ದುಷ್ಟಶಕ್ತಿಗಳೆಲ್ಲ ಪಲಾಯನ ಮಾಡುತ್ತವೆ ಎಂದು ಹೇಳಿದಂತಾಯಿತು.

ಶಂಖಕ್ಕೆ ಈ ಶಕ್ತಿ ಹೇಗೆ ಬಂತೆಂದರೆ—ಶ್ರೀವಿಷ್ಣುವೇ ತನ್ನ ಆಯುಧಗಳಲ್ಲೆಲ್ಲಾ ತಾನೇ ನಿಂತು ಆ ಶಕ್ತಿಯನ್ನು ಪ್ರೇರಿಸುತ್ತಾನೆಂದು ಅದೇ ನಾರಾಯಣವರ್ಮ (ಶ್ಲೋಕ ೩೨)ದಲ್ಲೇ ಹೇಳಿದೆ. 'ಭೂಷಣಾಯುಧಲಿಂಗಾಖ್ಯಾ ಧತ್ತೇ ಶಕ್ತೀಃ ಸ್ವಮಾಯಯಾ।' (ಅರ್ಥ) ಸ್ವಮಾಯಯಾ-ತನ್ನ ಸ್ವರೂಪಸಾಮರ್ಥ್ಯವೆಂಬ ಸ್ವೇಚ್ಛೆಯಿಂದ ತಾನೇ ಕಿರೀಟ-ಕೇಯೂರಾದಿ ಭೂಷಣಗಳು, ಶಂಖಚಕ್ರಾದ್ಯಾಯುಧಗಳು, ಲಿಂಗ-ಶ್ರೀವತ್ಸಾದಿ ಚಿಹ್ನೆಗಳು, ಆಖ್ಯಾಃ-ಈ ಹೆಸರುಗಳನ್ನು ಧರಿಸಿ ಅವುಗಳಲ್ಲಿದ್ದು ಶಕ್ತಿಯನ್ನು ತಾನೇ ಧರಿಸುತ್ತಾನೆ ಅರ್ಥಾತ್ ಶಂಖದಲ್ಲಿದ್ದು ಶಂಖದ ಆ ಶಕ್ತಿಯನ್ನು ತಾನೇ ಪ್ರೇರಿಸುತ್ತಾನೆ ಎಂದರ್ಥ. ಹೀಗೆ ಒಂದು ರೀತಿಯಿಂದ ವಿಷ್ಣುವಿನ ಶಂಖದಲ್ಲಿರುವ ಶಕ್ತಿಯೂ ವಿಷ್ಣುವಿಗೇ

ಸೇರಿದ್ದು ಎಂದು ಹೇಳಿದಂತಾಯಿತು. ಶಂಖದ ಪೂಜೆಯಲ್ಲಿಯೂ ಇದರ ಇನ್ನೂ ಅನೇಕ ಶಕ್ತಿಗಳ ವರ್ಣನೆ ಬರುವುದು.

ಪದ್ಮಮಾಲಾದಲ್ಲಿ (೮೧ ಶ್ಲೋ.) 'ಶ್ರೀಶ್ಚ ಶಂಖಾಧಿದೇವತಾ' ಎಂದು ಹೇಳಿದೆ; ಎಂದರೆ ಶಂಖಕ್ಕೆ ಸಾಕ್ಷಾತ್ ಶ್ರೀದೇವಿಯೇ ಅಭಿಮಾನಿದೇವತೆಯೆಂದು ತಿಳಿಯಬೇಕು. ಈ ವಿಚಾರವನ್ನು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲೂ (ಅ. ೩, ಶ್ಲೋ. ೭೩) ಹೇಳಿದ್ದಾರೆ.

ಇಷ್ಟು ವಿಚಾರಗಳನ್ನು ನೆನಪಿಟ್ಟುಕೊಂಡಿದ್ದರೆ ಪೂಜೆಯಲ್ಲಿ ಶ್ರದ್ಧಾದರಗಳು ಹೆಚ್ಚುತ್ತವೆ.

ಶಂಖಪೂಜಾವಿಧಾನ: ಶಂಖಪೂಜೆ ಹೇಗೆ ಮಾಡಬೇಕೆಂಬುದನ್ನು 'ಪದ್ಮಮಾಲಾ' ದಲ್ಲಿ ಟೀಕಾಚಾರ್ಯರು ಹೀಗೆ ವರ್ಣಿಸಿದ್ದಾರೆ—

ಕಲಶೋದಕಪೂರ್ಣಂ ತು ತತಃ ಶಂಖಂ ಪ್ರಪೂಜಯೇತ್ ।
'ತ್ವಂ ಪುರಾ'ಇತ್ಯಾದಿಕಾನ್ ಮಂತ್ರಾನ್ ಪಠಿತ್ವಾ ಪ್ರಾರ್ಥಯೇತ್ ತತಃ ।
ಜಪೇತ್ ತ್ರಿಃ ಶಂಖಗಾಯತ್ರೀಂ ಪುನಃ ಶಂಖಾದಿಮುದ್ರಿಕಾಃ ।
ದರ್ಶಯಿತ್ವಾಷ್ಟವಾರಂ ಚ ಮೂಲಮಂತ್ರಂ ಜಪೇತ್ ತತಃ ।
ತುಲಸೀದಲಯುಕ್ತೇನ ಶಂಖತೋಯೇನ ಪೂಜಕಃ ।
ಪೂಜಾದ್ರವ್ಯಾಣಿ ಸರ್ವಾಣಿ ಚಾತ್ಮಾನಂ ಪ್ರೋಕ್ಷಯೇತ್ತತಃ ।

(ತೋಯೇನ = ನೀರಿನಿಂದ

(ಸರಳಾರ್ಥ) ಕಲಶಪೂಜೆ ಮುಗಿದ ಬಳಿಕ ಶಂಖವನ್ನು ಕಲಶದ ನೀರಿನಿಂದ ತುಂಬಿ ಶಂಖಪೂಜೆ ಮಾಡಬೇಕು. 'ತ್ವಂ ಪುರಾ....' ಇತ್ಯಾದಿ ಮಂತ್ರಗಳನ್ನು ಹೇಳಿ ಶಂಖವನ್ನು ಪ್ರಾರ್ಥಿಸಬೇಕು. ಆಮೇಲೆ ಶಂಖ ಮೊದಲಾದ ಮುದ್ರೆಗಳನ್ನು ತೋರಿಸಿ ಮೂರು ಸರಿ "ಪಾಂಚಜನ್ಯಾಯ ವಿದ್ಮಹೇ....' ಎಂಬ ಶಂಖಗಾಯತ್ರೀ ಮಂತ್ರವನ್ನು ಜಪಿಸಬೇಕು. ಅನಂತರ ಮೂಲಮಂತ್ರವನ್ನು ಎಂಟು ಸರಿ ಜಪಿಸಬೇಕು. ಅನಂತರ, ಪೂಜೆಮಾಡು-ವಾತನು ಶಂಖದಲ್ಲಿರುವ ನೀರಿನಿಂದ ತುಲಸೀದಳದ ಸಹಿತ ಪೂಜೋಪಕರಣಗಳೆಲ್ಲವನ್ನೂ (ಹೂವುಗಳು, ಹಾರಾದಿಗಳನ್ನೂ, ಪಂಚಾಮೃತದ್ರವ್ಯಗಳಿದ್ದರೆ ಅವನ್ನೂ ಸಹ) ಮೂರು ಸರಿ ಪ್ರೋಕ್ಷಿಸಿ, ಕೊನೆಗೆ ತನ್ನನ್ನೂ ಪ್ರೋಕ್ಷಿಸಿಕೊಳ್ಳಬೇಕು. ಇದೇ ಪೂಜಾವಿಧಿ. ಈಗ ಆ ಕ್ರಮವನ್ನು ತಿಳಿಯೋಣ.

ಶಂಖಪ್ರಾರ್ಥನಾ

ಓಂ ಸಹಸ್ರಾರಹುಂ ಫಟ್ । ಇತಿ ಶಂಖಂ ಪ್ರಕ್ಷಾಲ್ಯ। ಸಲಕ್ಷಣ. ಶಂಖಂ ದೇವಸ್ಯಾಗ್ರೇ ನಿಧಾಯ । ಪ್ರಾರ್ಥಯೇತ್ ॥

'ಓಂ ಸಹಸ್ರಾರಹುಂ ಫಟ್' ಎಂಬ ಮಂತ್ರದಿಂದ ನೀರು ಹಾಕಿ ಶಂಖವನ್ನು ತೊಳೆದು ದೇವರ ಸಮೀಪದಲ್ಲಿಟ್ಟು ಈ ರೀತಿ ಪ್ರಾರ್ಥಿಸಬೇಕು—

ಶಂಖಂ ಚಂದ್ರಾರ್ಕದೈವತ್ಯಂ ಮಧ್ಯೇ ವರುಣದೈವತಮ್ ।
ಪೃಷ್ಠೇ ಪ್ರಜಾಪತಿಂ ವಿದ್ಯಾತ್ (ಉಡುಪಿ ಪಾಠ—ಪ್ರಜಾಪತಿರ್ವೇದಾ)
ಅಗ್ರೇ ಗಂಗಾ ಸರಸ್ವತೀ ॥
ತ್ರೈಲೋಕ್ಯೇ ಯಾನಿ ತೀರ್ಥಾನಿ ವಾಸುದೇವಸ್ಯ ಚಾಜ್ಞಯಾ ।
ಶಂಖೇ ತಿಷ್ಠಂತಿ ವಿಪ್ರೇಂದ್ರ ತಸ್ಮಾಚ್ಛಂಖಂ ಪ್ರಪೂಜಯೇತ್ ॥
ಇತಿ ಪ್ರಾರ್ಥ್ಯ ।

(ಈ ಮಂತ್ರಗಳು ಸ್ಕಾಂದಪುರಾಣವಾಕ್ಯಗಳೆಂದು ವೇ। ಶ್ರೀ। ಪ್ರಭಂಜನಾಚಾರ್ಯರು 'ಪದ್ಯಮಾಲಾ' ಅರ್ಥಪುಸ್ತಕದಲ್ಲಿ ಹೇಳಿದ್ದಾರೆ.)

(ಅರ್ಥ) ಇಡೀ ಶಂಖಕ್ಕೆ ಚಂದ್ರ-ಸೂರ್ಯರು (ಅರ್ಕ-ಸೂರ್ಯ) ದೇವತೆಗಳು. ಅದರ ಮಧ್ಯಭಾಗಕ್ಕೆ ವರುಣನೇ ದೇವತೆ. ಶಂಖದ ಹಿಂಭಾಗ (ಮುಚ್ಚಿದ ಭಾಗ)ಕ್ಕೆ ಚತುರ್ಮುಖಬ್ರಹ್ಮನೇ (ವೇಧಾಃ-ಬ್ರಹ್ಮದೇವರು) ದೇವತೆ. ಅದರ ಅಗ್ರ (ತುದಿಯ) ಭಾಗಕ್ಕೆ (ಬುಡಭಾಗಕ್ಕೆ) ಗಂಗಾದೇವಿಯೂ. ಸರಸ್ವತೀನದಿಯೂ ದೇವತೆಗಳು. ಅಷ್ಟೇ ಅಲ್ಲದೆ ಮೂರು ಲೋಕಗಳಲ್ಲಿರುವ ಮೂರೂವರೆ ಕೋಟಿ (ಸಾರ್ಧತ್ರಿಕೋಟಿ) ತೀರ್ಥಾಭಿಮಾನಿ ದೇವತೆಗಳೂ ಭಗವಂತ ವಾಸುದೇವನ (ಶ್ರೀಹರಿಯ) ಆಜ್ಞೆಯಿಂದ ಈ ಶಂಖದಲ್ಲಿ ಸನ್ನಿಹಿತರಾಗಿರುತ್ತಾರೆ. ಆದಕಾರಣವೇ, ಹೇ ದ್ವಿಜೋತ್ತಮ! (ಯಾರನ್ನು ಕುರಿತು ಈ ಮಾತು ಹೇಳಿದ್ದಾರೋ ಸ್ಕಾಂದಪುರಾಣ ನೋಡಿ ತಿಳಿಯಬೇಕು.) ಶಂಖವನ್ನು ಚೆನ್ನಾಗಿ ಭಕ್ತಿಯಿಂದ ಪೂಜಿಸಬೇಕು. ಹೀಗೆ ಪ್ರಾರ್ಥಿಸಿ.

[ಕರಣಗಳು][1] ಕಲಶಸ್ಯೋದಕಮುದ್ಧರಿಷ್ಯ ಗೃಹೀತ್ವಾ। ಶಂಖಮಾಪೂರ್ಯ। ತುಲಸೀಗಂಧಪುಷ್ಪಾಣಿ ನಿಕ್ಷಿಪ್ಯ॥ ನಿರ್ವಿಷೀಕರಣಾರ್ಥಂ ತಾರ್ಕ್ಷ್ಯಮುದ್ರಾಂ ಪ್ರದರ್ಶಯಾಮಿ। ಅಮೃತೀಕರಣಾರ್ಥಂ ಧೇನುಮುದ್ರಾಂ ಪ್ರದರ್ಶಯಾಮಿ। ಪವಿತ್ರೀಕರಣಾರ್ಥಂ ಶಂಖಮುದ್ರಾಂ ಪ್ರದರ್ಶಯಾಮಿ। ಸಂರಕ್ಷಣಾರ್ಥಂ ಚಕ್ರಮುದ್ರಾಂ ಪ್ರದರ್ಶಯಾಮಿ। ದಿಗ್ಬಂಧನಾರ್ಥಂ ಗದಾಮುದ್ರಾಂ ಪ್ರದರ್ಶಯಾಮಿ॥ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಃ ಸಮರ್ಪಯಾಮಿ॥ ಶಂಖಂ ಸ್ಪೃಷ್ಟ್ವಾ॥

[1] ಎಂದರೆ ಮಂತ್ರವಲ್ಲ, ಮಾಡಬೇಕಾದ ವಿಧಾನಗಳು

(ಅರ್ಥ) ಕಲಶದ ನೀರನ್ನು ಉದ್ಧರಣೆಯಿಂದ ತೆಗೆದು ಶಂಖಕ್ಕೆ ಹಾಕಿ, ಭರ್ತಿ ಮಾಡಿ (ಎಂದರೆ ಶಂಖವನ್ನೇ ಕಲಶದಲ್ಲಿ ಅದ್ದಬಾರದು ಎಂದು ಎಚ್ಚರಿಕೆ), ಶಂಖಕ್ಕೆ ತುಲಸಿಯಿಂದ ಗಂಧ ಹಚ್ಚಿ ಒಂದು ದಳ ತುಳಸಿಯನ್ನೂ ಹೂವನ್ನೂ (ನಿಕ್ಷಿಪ್ಯ-ಇಟ್ಟು) ಏರಿಸಿ, ತಾರ್ಕ್ಷ್ಯ-ಗರುಡ ಮೊದಲಾದ ಐದು ಮುದ್ರೆಗಳನ್ನು ತೋರಿಸಿ, ಶಂಖಕ್ಕೆ ಧ್ಯಾನ-ಆವಾಹನಾದಿ ಹದಿನಾರು ಪೂಜೆಗಳನ್ನು ಸಮರ್ಪಿಸುತ್ತೇನೆಂದು ಮನಸ್ಸು ಪೂಜೆ ಮಾಡಬೇಕು. ಅನಂತರ ಶಂಖವನ್ನು ಮುಟ್ಟಿಕೊಂಡು ಕೆಳಗಿನ ಮಂತ್ರಗಳನ್ನು ಪಠಿಸಬೇಕು.

ಮಂತ್ರಗಳು

ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾ ವಿಧೃತಃ ಕರೇ ।
ನಮಿತಃ ಸರ್ವದೇವೈಶ್ಚ ಪಾಂಚಜನ್ಯ ನಮೋಽಸ್ತು ತೇ ॥ ೧ ॥

ಗರ್ಭಾ ದೇವಾರಿನಾರೀಣಾಂ ವಿಶೀರ್ಯಂತೇ ಸಹಸ್ರಧಾ ।
ತವ ನಾದೇನ ಪಾತಾ(ಳೇ)ಲೇ ಪಾಂಚಜನ್ಯ ನಮೋಽಸ್ತು ತೇ ॥ ೨ ॥

ತವ ನಾದೇನ ಜೀಮೂತಾ ವಿದ್ರವಂತಿ ದಿಶೋ ದಶ ।
ಶಶಾಂಕಾಯುತ-ದೀಪ್ತಾಭ ಪಾಂಚಜನ್ಯ ನಮೋಽಸ್ತು ತೇ ॥ ೩ ॥
(ಈ ಶ್ಲೋಕ ಕುಂಭಕೋಣ ಮತ್ತು ತೆಲುಗು ಪುಸ್ತಕಗಳಲ್ಲಿ ಮಾತ್ರ ಇದೆ)

ದರ್ಶನೇನ ಹಿ ಶಂಖಸ್ಯ ಕಿಂ ಪುನಃ ಸ್ಪರ್ಶನೇನ ಚ ।[1]
ವಿಲಯಂ ಯಾಂತಿ ಪಾಪಾನಿ [2]ತಮಃ ಸೂರ್ಯೋದಯೇ ಯಥಾ ॥ಳ ।
ನತ್ವಾ ಶಂಖಂ ಕರೇ ಧೃತ್ವಾ[3] ಮಂತ್ರೇಣಾನೇನ ವೈಷ್ಣವಃ ।
ಯಃ ಸ್ನಾಪಯತಿ ಗೋವಿಂದಂ ತಸ್ಯ ಪುಣ್ಯಮನಂತಕಮ್ ॥ ೪ ॥

ಶಂಖಗಾಯತ್ರೀ

ಓಂ॥ ಪಾಂಚಜನ್ಯಾಯ ವಿದ್ಮಹೇ [4]ಪಾವಮಾನಾಯ ಧೀಮಹಿ ।
ತನ್ನಃ ಶಂಖಃ ಪ್ರಚೋದಯಾತ್ ॥ [ಇತಿ ತ್ರಿವಾರಂ ಜಪಿತ್ವಾ]

ಕಠಿನ ಪದಾರ್ಥ— ಶ್ಲೋಕ ೧. ವಿಧೃತಃ-ಧರಿಸಲ್ಪಟ್ಟಿದ್ದೀಯೆ. ೨. ದೇವಾರಿ-ದೇವತೆಗಳ ಶತ್ರುಗಳು, ದೈತ್ಯರು. ವಿಶೀರ್ಯಂತೇ-ಸೀಳಿಹೋಗುತ್ತವೆ, ೩. ಜೀಮೂತಾಃ-

---

ಪಾಠಾಂತರಗಳು [1] ದರ್ಶನಾದೇವ ಶಂಖಸ್ಯ ಕಿಂ ಪುನಃ ಸ್ಪರ್ಶನೇ ಕೃತೇ । (ಉಡುಪಿ)
[2] ಹಿಮವದ್ ಭಾಸ್ಕರೋದಯೇ (ಕುಂಭಕೋಣ, ತೆಲುಗು ಇತ್ಯಾದಿ)
[3] ಸ್ಪೃಷ್ಟ್ವಾ (ಉಡುಪಿ) [4] ಮಹಾದರಾಯ ಧೀಮಹಿ । (ಕುಂಭಕೋಣ, ಉಡುಪಿ)

ಮೋಡಗಳು, ವಿದ್ರವಂತಿ-ಓಡುತ್ತವೆ. ದಿಶಃ-ದಿಕ್ಕುಗಳು, ಶಶಾಂಕ-ಚಂದ್ರ, ಅಯುತ-ಹತ್ತು ಸಾವಿರ, ದೀಪ್ತ-ಹೊಳೆಯುವ, ಆಭಾ-ಕಾಂತಿ, ಶಶಾಂಕಾ....ಪ್ರಾಭ-ಹತ್ತು ಸಾವಿರ ಚಂದ್ರರ ಪ್ರಕಾಶದಂತೆ ಹೊಳೆಯುವ ಕಾಂತಿಯುಳ್ಳವನೇ, ೪. ವಿಲಯಂ ಯಾಂತಿ-ನಾಶವಾಗಿ ಹೋಗುತ್ತವೆ, ಭಾಸ್ಕರ-ಸೂರ್ಯ.

ಭಾವಾರ್ಥ— ಹೇ ಪಾಂಚಜನ್ಯವೆಂಬ ಶಂಖವೇ, ನೀನು ಪೂರ್ವದಲ್ಲಿ ಕ್ಷೀರ-ಸಮುದ್ರದಲ್ಲಿ ಜನಿಸಿದಿ ನಿನ್ನನ್ನು ಶ್ರೀವಿಷ್ಣು ಕೈಯಲ್ಲಿ ಧರಿಸಿದನು. (ಅದರಿಂದಲೇ ನೀನು ಮಹಾಪರಾಕ್ರಮಶಾಲಿಯಾದಿ ಎಂದು ಭಾವ.) ಅದರಿಂದಲೇ ನೀನು ಬ್ರಹ್ಮಾದಿ ಸಕಲ ದೇವತೆಗಳಿಂದಲೂ ನಮಸ್ಕೃತನಾಗಿರುವಿ. ನಿನಗೆ ನಮಸ್ಕಾರ. (೧). ಹೇ ಪಾಂಚಜನ್ಯವೇ! ನಿನ್ನ ಧ್ವನಿಯನ್ನು ಕೇಳಿದರೇ ಸಾಕು, ಪಾತಾಳದಲ್ಲಿರುವ ದೈತ್ಯಪತ್ನಿಯರ ಗರ್ಭಗಳು ಸಾವಿರಾರು ಹೋಳುಗಳಾಗಿ ಛಿದ್ರವಾಗಿ (ಸೀಳಿ)ಹೋಗುತ್ತವೆ. ಇಂಥಾ ಪರಾಕ್ರಮವುಳ್ಳ ನಿನಗೆ ನಮಸ್ಕಾರ. (೨). ಹತ್ತುಸಾವಿರ ಚಂದ್ರರ ಪ್ರಕಾಶದಂತೆ ಪ್ರಜ್ವಲಿಸುವ ಕಾಂತಿ-ಯುಳ್ಳ ಹೇ ಪಾಂಚಜನ್ಯ, ನಿನ್ನ ಧ್ವನಿಯನ್ನು ಕೇಳಿ ಮೋಡಗಳು ದಿಕ್ಕಾಪಾಲಾಗಿ ಚೆದುರಿ ಹೋಗುತ್ತವೆ. (ಜೀಮೂತ ಎಂದರ ಪರ್ವತ ಎಂದೂ ಅರ್ಥವಾಗುತ್ತದೆ. ಮೋಡ ಅಥವಾ ಪರ್ವತ ಎರಡನ್ನೂ ರೂಪಕವೆಂದು ಭಾವಿಸಿ ಪರ್ವತದಂತೆ ಅಭೇದ್ಯರಾದ ಶತ್ರುಗಳೂ ಕೂಡ ಮೋಡಗಳಂತೆ ಚೆದರಿ ದಿಕ್ಕಾಪಾಲಾಗಿ ಓಡುತ್ತಾರೆ ಎಂದು ಅರ್ಥ ಹೇಳಿದರೆ ತಪ್ಪಾಗಲಾರದು.) (೩). ಕತ್ತಲೆಯು (ಅಥವಾ ಹಿಮವು) ಸೂರ್ಯೋದಯವಾದ ಕೂಡಲೇ ಹೇಗೆ ಓಡಿಹೋಗುತ್ತದೋ ಹಾಗೆ ಕೇವಲ ಶಂಖದ ದರ್ಶನದಿಂದಲೇ ಪಾಪಗಳು ನಾಶವಾಗಿ ಹೋಗುತ್ತವೆ; ಇನ್ನು ಶಂಖಸ್ಪರ್ಶದಿಂದ ನಾಶವಾಗಿ ಹೋಗುವುವೆಂದು ಹೇಳುವುದೇನಿದೆ. (೪). ಶಂಖಕ್ಕೆ ನಮಸ್ಕಾರ ಮಾಡಿ ಅದನ್ನು ಕೈಯಲ್ಲಿ ಹಿಡಿದುಕೊಂಡು "ಪಾಂಚಜನ್ಯಾಯ..." ಎಂಬ ಈ ಶಂಖಗಾಯತ್ರೀ ಮಂತ್ರದಿಂದ (ಅಭಿಮಂತ್ರಿಸಿ) ಯಾವ ವಿಷ್ಣುಭಕ್ತನು ಶ್ರೀಗೋವಿಂದನಿಗೆ ಅಭಿಷೇಕ ಮಾಡುತ್ತಾನೋ ಅವನಿಗೆ ಅನಂತ ಪುಣ್ಯ ಲಭಿಸುತ್ತದೆ. (೫).

ಶಂಖಗಾಯತ್ರಿಯ ಅರ್ಥ— ಪಾಂಚಜನ್ಯವು ವಿಷ್ಣುವಿನ ಶಂಖವೆಂದೂ ಅದರ ಆದಿಮಧ್ಯಾಂತಗಳಲ್ಲಿ ಬ್ರಹ್ಮದೇವರೂ ವರುಣನೂ ಗಂಗಾ ಸರಸ್ವತಿಯರೂ ಇರುತ್ತಾರೆ. ಚಂದ್ರ-ಸೂರ್ಯರೇ ಅದಕ್ಕೆ ದೇವತೆಗಳು. ಅದು ಪಾಪಸಂಹಾರ ಇತ್ಯಾದಿ ಅದರ ಮಹಿಮೆಯನ್ನು ನಾವು ತಿಳಿಯುತ್ತೇವೆ (ವಿದ್ಮಹೇ). ಅದು ಶಂಖವು ನಮ್ಮ ಸಕಲ ಪಾಪಗಳನ್ನೂ ನಾಶ ಮಾಡಿ ನಮ್ಮನ್ನು ಪಾವನಗೊಳಿಸುತ್ತದೆ. 'ಪೂಞ್ ಪವನೇ' (ಕ್ರ್ಯಾದಿ. ಉಭ.)-ಪವಿತ್ರ ಮಾಡು, ಪರಿಶುದ್ಧ ಮಾಡು ಎಂಬ ಧಾತುವಿನಿಂದ ಪ್ರಸಾತೀತಿ ಪಾವಮಾನಃ ಎಂದಾಗಿದೆ— ಎಂದು ನಾವು ಧ್ಯಾನ ಮಾಡುತ್ತೇವೆ ಧೀಮಹಿ). ಅಥವಾ ಮಹಾದರಾಯ ಎಂಬ ಪಾಠವಾದರೆ ದೄ ವಿದಾರಣೇ (ಕ್ರ್ಯಾದಿ ಪರಸ್ಮೈ) ಸೀಳು ಎಂಬ

ಧಾತುವಿನಿಂದ ಸಕಲ ಪಾಪಗಳನ್ನೂ ಅನಿಷ್ಟಗಳನ್ನೂ ಸೀಳಿಹಾಕುವುದರಿಂದ ದರ (-ಶಂಖ) ಎಂಬ ಹೆಸರುಳ್ಳದ್ದಾಗಿದೆ. ನಾರಾಯಣವರ್ಮದಲ್ಲಿ ಹೇಳಿದ ಪ್ರಕಾರ 'ಧತ್ತೇ ಶಕ್ತೀಃ ಸ್ವಮಾಯಯಾ' ಶ್ರೀವಿಷ್ಣುವೇ ಈ ಪಾಂಚಜನ್ಯದಲ್ಲಿದ್ದು ತನ್ನ ಸ್ವೇಚ್ಛೆಯಿಂದ ಅದರ ಶಕ್ತಿಯನ್ನು ಪ್ರೇರಿಸುವುದರಿಂದ ಇತರ ಶಂಖಗಳಿಗಿಂತ ಇದು ಮಹಾದರ—ಮಹಾಶಂಖ ಆಯಿತು; ಇದರ ಪಾಪನಿರ್ಹರಣಶಕ್ತಿ ಅಪರಿಮಿತವಾದುದು ಎಂದು ನಾವು ಧ್ಯಾನಿಸುತ್ತೇವೆ ಎಂದು ಅರ್ಥವಾಗುತ್ತದೆ. "ದರೋಽಸ್ತ್ರೀ 'ಶಂಖ'-ಭೀ-ಗರ್ತೇ-ಷ್ವಲ್ಪಾರ್ಥೇ ತ್ವ-ವ್ಯಯಂ ದರಮ್'—ವೈಜಯಂತೀಕೋಶ.

ಪಾಪಗಳನ್ನೂ ಅಶುಭವನ್ನೂ ಶಮನ ಮಾಡುವುದರಿಂದಲೂ ಸುಖಸ್ವರೂಪವಾದ್ದರಿಂದಲೂ (ಶಂ), ಪ್ರಕಾಶಸ್ವರೂಪವಾದ್ದರಿಂದಲೂ, ಜ್ಞಾನಸ್ವರೂಪವಾದ್ದರಿಂದಲೂ(ಖ) ಅಥವಾ ಜ್ಞಾನಸ್ವರೂಪವಾದ್ದರಿಂದ (ಶಂ-ಖ) ಪಾಂಚಜನ್ಯಕ್ಕೆ ಶಂಖವೆಂದು ಹೆಸರು. ಅದಕ್ಕೆ ಆ ಶಕ್ತಿಯನ್ನು ಕೊಡುವ ವಿಷ್ಣುವೂ 'ಶಂಖ'ನಾಮಕನಾಗಿದ್ದಾನೆ. ವಿಷ್ಣುವಿನ ಆಯುಧವಾದ ಶಂಖವು ನಮ್ಮನ್ನು (ನಃ) ಆ ವಿಷ್ಣುವನ್ನು ಹೊಂದುವಂತೆ (ತತ್) ಪ್ರೇರಿಸಲಿ (ಪ್ರಚೋದಯಾತ್) ಎಂಬುದೇ ಈ ಶಂಖಗಾಯತ್ರಿಯ ಅರ್ಥ. (ಈ ಶಂಖ-ಗಾಯತ್ರೀ ಮಂತ್ರವನ್ನೇ ಪಾವಿತ್ರ್ಯತೆ ಹೆಚ್ಚುವುದಕ್ಕಾಗಿ, ಸಿದ್ಧಿಸುವುದಕ್ಕಾಗಿ ಮೂರು ಸರಿ ಉಚ್ಚರಿಸಬೇಕು.)

ಕರಣಗಳು : ತತಃ ಅಷ್ಟವಾರಂ ಮೂಲಮಂತ್ರೇಣ ಅಷ್ಟವಾರಮಭಿ-ಮಂತ್ರ್ಯ। ತುಲಸೀದಲಯುಕ್ತೇನ ಶಂಖೋದಕೇನ ಗಾಯತ್ರೀ-ಮೂಲ-ಮಂತ್ರಾಭ್ಯಾಂ ಅಪವಿತ್ರೇತಿ ಮಂತ್ರೇಣ ಚ ಸರ್ವಾಣಿ ಪೂಜಾದ್ರವ್ಯಾಣಿ, ದೇವಂ ಚ ಸಂಪ್ರೋಕ್ಷ್ಯ ಜಲಂ ವಿಸೃಜ್ಯ ಶಂಖಪೂಜಾಂ ಸಮಾಪಯೇತ್ ॥

(ಅರ್ಥ) ಮೂರು ಸಾರಿ ಶಂಖಗಾಯತ್ರಿಯಿಂದ ಅಭಿಮಂತ್ರಿಸಿದ ಬಳಿಕ 'ಪದ್ಮ-ಮಾಲಾ'ದಲ್ಲಿ ಹೇಳಿದ ಪ್ರಕಾರ ಎಂಟಾವರ್ತಿ ಮೂಲಮಂತ್ರದಿಂದ ಜಪಿಸಿ, ಶಂಖದಲ್ಲಿರುವ ನೀರನ್ನು ತುಳಸೀಸಹಿತ ಕೈಗೆ ಬಗ್ಗಿಸಿಕೊಂಡು ಗಾಯತ್ರೀಮಂತ್ರವನ್ನೂ ಮೂಲಮಂತ್ರವನ್ನೂ 'ಅಪವಿತ್ರಃ ಪವಿತ್ರೋ ವಾ....' ಎಂಬ ಮಂತ್ರವನ್ನೂ ಹೇಳಿಕೊಳ್ಳುತ್ತಾ, ಸಕಲ ಪೂಜಾ ದ್ರವ್ಯಗಳನ್ನೂ ಪಂಚಾಮೃತ ದ್ರವ್ಯಗಳಿದ್ದರೆ ಅವನ್ನೂ ವಿಶೇಷತಃ ಪೂಜೆಗಾಗಿ ತಂದಿರುವ ಹೂವನ್ನೂ ತುಳಸೀ ಶಂಖೋದಕಗಳಿಂದ ಪ್ರೋಕ್ಷಿಸಿ, ಕಿಂಚಿತ್ ದೇವರ ಮೇಲೂ ಪ್ರೋಕ್ಷಿಸಿ, ಕೊನೆಯಲ್ಲಿ ತನ್ನ ತಲೆಯ ಮೇಲೆಯೂ ಪ್ರೋಕ್ಷಿಸಿಕೊಂಡು ಮಿಕ್ಕ ನೀರನ್ನೂ ಆ ತುಳಸಿಯನ್ನೂ ವಿಸರ್ಜನೆ ಮಾಡಿ 'ಇತಿ ಶಂಖಪೂಜಾ ಸಂಪೂರ್ಣಾ। ಶ್ರೀ-ಕೃಷ್ಣಾರ್ಪಣಮಸ್ತು' ಎಂದು ಹೇಳಿ ಶಂಖಪೂಜೆಯನ್ನು ಮುಗಿಸಬೇಕು. 'ಪೂಜಾಕಲ್ಪ-ಲತಾ' ಎಂಬ ಗ್ರಂಥದಲ್ಲಿ 'ದೇವಂ ಶಂಖಾಂಬುನಾಽಭ್ಯುಕ್ಷ್ಯ 'ಶ್ರೀ' ಪೂಜಾಸಾಧನಾನಿ ಚ'

ಎಂಬ ವಚನವಿರುವುದರಿಂದ ಪೂಜೋಪಕರಣಗಳ ಮೇಲೆ ಶಂಖೋದಕವನ್ನು ಮೂರು ಸಾರಿ ಪ್ರೋಕ್ಷಿಸಬೇಕೆಂದು ಹೇಳಿದೆ—ಶ್ರೀ ಪ್ರಭಂಜನರ 'ಪದ್ಯಮಾಲಾ' ಪುಸ್ತಕದಿಂದ.

ಶಂಖಪೂಜೆ ಬಗ್ಗೆ ಕೆಲವು ವಿಶೇಷ ವಿಚಾರಗಳು
(ತೆಲುಗು ಪುಸ್ತಕದ ಆಧಾರದಿಂದ)

ಕೆಲವು ಪ್ರಮಾಣವಾಕ್ಯಗಳು

ಸಾಕ್ಷಾಚ್ಛಂಖೇನ ಚೋದ್ಧೃತ್ಯ ಜಲಂ ಯಸ್ತ್ವಭಿಷೇಚಯೇತ್ ।
ಸ್ನಾನಮೂತ್ರಸಮಂ ಪ್ರೋಕ್ತಂ ಸತ್ಯಂ ಸತ್ಯಂ ಯುಧಿಷ್ಠಿರ ॥ ೧ ॥

(ಅರ್ಥ) ಹೇ ಧರ್ಮರಾಜ, ಶಂಖವನ್ನೇ ನೇರವಾಗಿ ಅದ್ದಿ (ಮುಳುಗಿಸಿ) ನೀರನ್ನು ತೆಗೆದುಕೊಂಡು ಯಾರು ಅಭಿಷೇಕ ಮಾಡುತ್ತಾರೋ ಅದು ನಾಯಿಯ ಮೂತ್ರಕ್ಕೆ ಸಮಾನವಾಗುತ್ತದೆ. ಆದ್ದರಿಂದ ಶಂಖಕ್ಕೆ ಬೇರೊಂದು ಪಾತ್ರೆಯಿಂದ ನೀರನ್ನು ಬಗ್ಗಿಸಿ (ಅಥವಾ ಉದ್ಧರಣೆಯಿಂದ ತುಂಬಿಹಾಕಿ) ಅಭಿಷೇಕ ಮಾಡಬೇಕೇ ಹೊರತು ಶಂಖವನ್ನೇ ನೀರಿನಲ್ಲಿ ನೇರವಾಗಿ ಅದ್ದಿ ಅಭಿಷೇಕ ಮಾಡಬಾರದು.

ತ್ರಿವಾರಂ ಶೋಧಿತೈಸ್ತೀರ್ಥೈಃ ಶಾ(ಸಾ)ಲಗ್ರಾಮವಿಶೋಧನಮ್ ।
ಕುರ್ಯಾಚ್ಛಂಖತ್ರಯಾದ್ಭಿಶ್ಚ ಪರಿಷಿಚ್ಯ ತತಃ ಪರಮ್ ।
ಪ್ರಕ್ಷಾಲಯೇಚ್ಛಿಲಾದೀಂಶ್ಚ 'ಅಹಂ ರುದ್ರೇ'ತಿ ಮಂತ್ರತಃ ॥ ೨ ॥

(ಅರ್ಥ) ಮೂರು ಸಾರಿ ಶೋಧಿಸಿದ (ಸೋಸಿದ) ನೀರಿನಿಂದ ಸಾಲಿಗ್ರಾಮವನ್ನು ತೊಳೆಯಬೇಕು. ಹಾಗೆಯೇ ಶಂಖಕ್ಕೆ ಮೂರು ಸಾರಿಯಾದರೂ ನೀರು ಹಾಕಿಕೊಂಡು ಮೂರಾವರ್ತಿಯಾದರೂ 'ಅಹಂ ರುದ್ರೇಭಿಃ' ಎಂಬ ಅಂಭೃಣೀಸೂಕ್ತ ಹೇಳಿಕೊಂಡು ಮೊದಲು ನಿರ್ಮಾಲ್ಯಾಭಿಷೇಕ ಮಾಡಬೇಕು.

ಶಂಖಾಧಃಸ್ಪೃಷ್ಟತೋಯಂ ತು ಸಾಲ(ಲಿ)ಗ್ರಾಮೇ ಪತೇದ್ಯದಿ ।
ತತ್ತೋಯಂ ರುಧಿರಂ ಪ್ರೋಕ್ತಂ ತಥಾ ಶಂಖಾಗ್ರನಿಃಸೃತಮ್ ॥ ೩ ॥

ತಸ್ಮಾಚ್ಛಂಖಾಗ್ರಮಾಚ್ಛಾದ್ಯ ರಜತಸ್ವರ್ಣತಾಮ್ರತಃ ।
ಅಭಿಷೇಕಂ ಕೃತಂ ವಿಷ್ಣೋ—ರಮೃತಸ್ಯಾಭಿಷೇಚನಮ್ ॥ ೪ ॥

(ಅರ್ಥ) ಶಂಖದ ಬುಡ(ಪೃಷ್ಠ)ಭಾಗವು ತಗುಲಿದ ನೀರು (ಎಂದರೆ ನೇರವಾಗಿ ಶಂಖವನ್ನೇ ಮುಳುಗಿಸಿ ತುಂಬಿಕೊಂಡ ನೀರು) ಶಂಖದ ಮೇಲೆ ಬಿದ್ದರೆ ಆ ನೀರು ರಕ್ತಕ್ಕೆ ಸಮವಾಗುತ್ತದೆ. ಅದೇ ರೀತಿ ಶಂಖದ ತುದಿಯಿಂದಲೇ ಅಭಿಷೇಕ ಮಾಡುವ ನೀರೂ ಸಹ ರಕ್ತಕ್ಕೆ ಸಮವಾಗುತ್ತದೆ. (ಆದಕಾರಣ ಶಂಖಕ್ಕೆ ಕಟ್ಟು ಹಾಕಿಲ್ಲದಿದ್ದರೆ ಶಂಖಕ್ಕೆ

ನೀರು ಹಾಕಿಕೊಂಡು ಶಂಖದ ಮಧ್ಯಭಾಗದಿಂದಲೇ ಅಭಿಷೇಕ ಮಾಡಬೇಕೆಂದು ಹಿಂದೆ ತಿಳಿಸಿದ್ದೇವೆ.) ಶಂಖದ ಬುಡಕ್ಕೇ ಆಗಲಿ ತುದಿಗೇ ಆಗಲಿ ನೇರವಾಗಿ ತಗುಲಿದ ನೀರು ರಕ್ತಸಮಾನವಾಗುವುದರಿಂದ ಶಂಖಕ್ಕೆ ಮೇಲುಭಾಗಕ್ಕೂ ಕೆಳಭಾಗಕ್ಕೂ ಬೆಳ್ಳಿ, ಬಂಗಾರ ಅಥವಾ ತಾಮ್ರದ ಕಟ್ಟು ಹಾಕಿಸಿ ಅದರಿಂದಲೇ ಅಭಿಷೇಕ ಮಾಡಬೇಕು. ಹಾಗೆ ಕಟ್ಟು ಹಾಕಿದ ಶಂಖದಿಂದ ವಿಷ್ಣುವಿಗೆ ಅಭಿಷೇಕ ಮಾಡಿದರೆ ಅಮೃತದಿಂದ ಅಭಿಷೇಕ ಮಾಡಿದಂತೆಯೇ ಆಗುತ್ತದೆ.

ಶಂಖಸ್ಯ ಪೃಷ್ಟಸಂಸ್ಪೃಷ್ಟಂ ಜಲಂ ಪಾಪಕರಂ ಧ್ರುವಮ್ ।
ತೇನ ನ ಸ್ನಾಪಯೇತ್ ವಿಷ್ಣುಂ ಸ್ನಾಪನಾತ್ ಪಾಪಸಂಭವಃ ॥ ೫ ॥

(ಅರ್ಥ) ಶಂಖದ ಬುಡ ತಗುಲಿದ ನೀರಿನಿಂದ ವಿಷ್ಣುಪ್ರತಿಮೆಗಳಿಗಾಗಲಿ ಸಾಲ(ಲಿ)-ಗ್ರಾಮಕ್ಕಾಗಲಿ ಅಭಿಷೇಕ ಮಾಡಬಾರದು; ಆ ನೀರು ಪಾಪಕರವಾದುದು. ಒಂದು ವೇಳೆ ಅಂತಹ ನೀರಿನಿಂದ ಅಭಿಷೇಕ ಮಾಡಿದರೆ ಪಾಪವೇ ಸಂಭವಿಸುತ್ತದೆ.

ವಿನಾಽಽಧಾರೇಣ ಶಂಖಸ್ಯ ನ ಯೋಗ್ಯಂ ಹರಿಪೂಜನಮ್ ।
ತಸ್ಮಾದ್ ವಿಧಿವದಾಧಾರಂ ಶಂಖಸ್ಯ ತು ಪ್ರಕಲ್ಪಯೇತ್ ॥ ೬ ॥

(ಅರ್ಥ) ಶಂಖವನ್ನು ಒಂದು ಪೀಠ (ಆಧಾರ)ವಿಲ್ಲದೆ ನೆಲದ ಮೇಲಾಗಲಿ ಮಣೆಯ ಮೇಲಾಗಲಿ ಇಡಬಾರದು. ಹಾಗೆ ಪೀಠವಿಲ್ಲದೆ ನೆಲದ ಮೇಲಿಟ್ಟ ಶಂಖದಿಂದ ವಿಷ್ಣು-ಪೂಜೆ ಮಾಡುವುದು ಅನುಚಿತ, ಅಕ್ರಮ. ಆದಕಾರಣ ಶಂಖಕ್ಕೆ ಒಂದು ಪೀಠವನ್ನು ಮಾಡಿಸಿ ಇಟ್ಟುಕೊಂಡಿರಲೇಬೇಕು. ಆ ಪೀಠವು ಕೂರ್ಮಾಕಾರವಾಗಿರಬೇಕು.

(ವೇ। ಶ್ರೀ। ಪ್ರಭಂಜನಾಚಾರ್ಯರ 'ಪದ್ಯಮಾಲಾ'ದಿಂದ)

ಶಂಖೇನೈವಾಭಿಷೇಕೇ ತು ತೀರ್ಥಂ ಸ್ಯಾನ್ನೈವ ಚಾನ್ಯಥಾ ॥ ೭ ॥

(ಅರ್ಥ) ಶಂಖದಿಂದ ಅಭಿಷೇಕ ಮಾಡಿದರೆ ಮಾತ್ರವೇ ತೀರ್ಥವಾಗುತ್ತದೆಯೇ ಹೊರತು ಶಂಖವಿಲ್ಲದಿದ್ದರೆ ತೀರ್ಥವೇ ಆಗುವುದಿಲ್ಲ (ಎಂದು ಪಂಚರಾತ್ರದಲ್ಲಿ ಹೇಳಿದೆ). ಆದ್ದರಿಂದಲೇ 'ಶಂಖದಿಂದ ಬಿದ್ದರೇ ತೀರ್ಥ' ಎಂಬ ಗಾದೆ ಬಂದಿದೆ.

ಉದಕಂ ಚಂದನಂ ಚಕ್ರಂ 'ಶಂಖಶ್ಚ' ತುಲಸೀದಲಮ್ ।
ಘಂಟಾ ಪುರುಷಸೂಕ್ತಂ ಚ ತಾಮ್ರಪಾತ್ರಮಥಾಷ್ಟಮಮ್ ।
ಸಾಲಿಗ್ರಾಮಶಿಲಾ ಚೈವ ನವಭಿಸ್ತೀರ್ಥಮುಚ್ಯತೇ । ೮ ।　　—ಸ್ಮೃತಿ

(ಅರ್ಥ) ನೀರು, ಚಂದನ (ಗಂಧೋದಕ), ಚಕ್ರ (ಚಕ್ರಾಂಕಿತ ಎಂದರ್ಥ), 'ಶಂಖ', ತುಲಸೀದಳ. ಘಂಟೆ, ಪುರುಷಸೂಕ್ತ, ತಾಮ್ರದ ಪಾತ್ರೆ, ಮತ್ತು ಸಾಲಿಗ್ರಾಮ ಈ ಒಂಬತ್ತರ ಯೋಗವಿದ್ದರೆ ಮಾತ್ರ ತೀರ್ಥವಾಗುತ್ತದೆ; ಇಲ್ಲದಿದ್ದರೆ ಅದು ಯೋಗ್ಯ-ವಾದ ತೀರ್ಥವೇ ಅಲ್ಲ. ಹೀಗೆ ತೀರ್ಥವಾಗಬೇಕಾದರೆ ಶಂಖವಿರಲೇಬೇಕು.

ಉದ್ಧರಿಣ್ಯಾಂ ಜಲಂ ಗ್ರಾಹ್ಯಂ ನಾಪ್ಸು ಶಂಖಂ ನಿಮಜ್ಜಯೇತ್ ।
ಶಂಖಸ್ಯ ಸ್ಪೃಷ್ಟಸಂಸ್ಪೃಷ್ಟಂ ಪಯಃ ಪಾಪಕರಂ ಧ್ರುವಮ್ ॥ ೯ ॥

(ಅರ್ಥ) ಶಂಖಕ್ಕೆ ನೀರನ್ನು ಉದ್ಧರಣೆ ಅಥವಾ ಬೇರೆ ಪಾತ್ರೆಯಿಂದ ತುಂಬಿ ಹಾಕಬೇಕೇ ವಿನಾ ಶಂಖವನ್ನೇ ನೀರಲ್ಲಿ (ಅಪ್ಸು) ಅದ್ದಬಾರದು. ಶಂಖದ ಬುಡಭಾಗ ತಗುಲಿದ ನೀರು ಖಂಡಿತವಾಗಿಯೂ (ತಪ್ಪದೆ) ದೂಷಿತವಾಗುತ್ತದೆ

ಯಸ್ತು ಶಂಖಂ ಭುವಿ ಸ್ಥಾಪ್ಯ ಪೂಜಯೇನ್ಮಾಧವಂ ಪ್ರಭುಮ್ ।
ತಸ್ಯ ಪೂಜಾಂ ನ ಗೃಹ್ಣಾತಿ ತಸ್ಮಾತ್ ಪೀಠಂ ಪ್ರಕಲ್ಪಯೇತ್ ॥ ೧೦ ॥

(ಅರ್ಥ) ಶಂಖವನ್ನು ಬರೀ ನೆಲದ ಮೇಲಿಟ್ಟು ಯಾರು ಶ್ರೀಹರಿಯನ್ನು ಪೂಜಿಸುತ್ತಾರೋ ಅವರ ಆ ಪೂಜೆಯನ್ನು ಶ್ರೀಹರಿಯು ಸ್ವೀಕರಿಸುವುದೇ ಇಲ್ಲ. ಆದಕಾರಣ ಶಂಖಕ್ಕೆ ಕೂರ್ಮಾಕಾರದ ಒಂದು ಪೀಠವನ್ನು (ಅಡ್ಡಣಿಕೆಯನ್ನು) ಮಾಡಿಸಲೇಬೇಕು.

ಕ್ಷೀರಾದಿ ಗಂಗಾತೀರ್ಥಂ ವಾ ತ್ರೈಲೋಕ್ಯಂ ತೀರ್ಥವಾರ್ಯಪಿ ।
ಶಂಖೇ ಕೃತ್ವಾ ಸ್ನಾಪನಂ ಸ್ಯಾ—ದನ್ಯಥಾ ನಿಷ್ಫಲಂ ಭವೇತ್ ॥ ೧೧ ॥

(ಅರ್ಥ) ಹಾಲು ಮೊಸರು ಮೊದಲಾದ ಪಂಚಾಮೃತದ್ರವ್ಯಗಳನ್ನಾಗಲಿ, ಗಂಗಾದಿ ತೀರ್ಥಗಳ ನೀರನ್ನಾಗಲಿ ಎಷ್ಟೇ ಪವಿತ್ರವಾದ ನೀರಾಗಿದ್ದರೂ ಅದನ್ನು ವಿಷ್ಣುವಿಗೆ ಅಭಿಷೇಕ ಮಾಡುವಾಗ ಶಂಖಕ್ಕೆ ಹಾಕಿಯೇ ಅಭಿಷೇಕ ಮಾಡಬೇಕು. ಇಲ್ಲದಿದ್ದರೆ ಆ ಅಭಿಷೇಕ ನಿಷ್ಫಲವಾಗುತ್ತದೆ. ಹೀಗೆ ವಿಷ್ಣುಪ್ರತಿಮೆಗಳಿಗೂ ಸಾಲಿಗ್ರಾಮಗಳಿಗೂ ಅಭಿಷೇಕ ಮಾಡುವಾಗ 'ಶಂಖದಿಂದಲೇ' ಅಭಿಷೇಕ ಮಾಡಬೇಕೆಂದು ಅರ್ಥ. ಇದಕ್ಕೆ ಪ್ರತಿಯಾಗಿ ಮಿಕ್ಕ ದೇವತೆಗಳು ಯಾರಿಗೂ, ಪ್ರಾಣದೇವರಿಗೂ ಸಹ, ಶಂಖದಿಂದ ಅಭಿಷೇಕ ಮಾಡಬಾರದು—

ಶಿವಂ ವಾಪ್ಯನ್ಯದೇವಂ ವಾ ಯಃ ಪುಮಾನ್ ಶಂಖವಾರಿಣಾ ।
ಪೂಜಯೇತ್ ತು ಪ್ರಮಾದೇನ ಸೋಽಪರಾಧೀ ಭವೇದ್ ಧ್ರುವಮ್ ॥ ೧೨ ॥

(ಅರ್ಥ) ಶಿವನನ್ನಾಗಲೀ, ಗಣಪತ್ಯಾದಿ ಮಿಕ್ಕ ದೇವತೆಗಳನ್ನಾಗಲೀ ಶಂಖದ ನೀರಿನಿಂದ ಪ್ರಮಾದವಶದಿಂದ ಅಭಿಷೇಕ ಮಾಡಿದರೂ ಅವನು ಅಪರಾಧಿಯಾಗುತ್ತಾನೆ.

ಇಲ್ಲಿಗೆ ಶಂಖಪೂಜಾವಿಧಿ ಮುಗಿಯಿತು.

ಪಂಚಪಾತ್ರಪೂಜಾ

ಷೋಡಶೋಪಚಾರಗಳ ಪೈಕಿ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ ಮತ್ತು ಸ್ನಾನ ಈ ಐದೂ ಒಂದು ಗುಂಪಿಗೆ ಸೇರುತ್ತವೆ; ಇವು ಐದೂ ಸ್ನಾನದ ಅಂಗವೆಂದೇ ಹೇಳಬಹುದು 'ಪಾದಾರ್ಘಾಭ್ಯಾಂ ಚ' (ಪಾ. ೫-೪-೨೫) ಎಂಬ ಸೂತ್ರದಂತೆ ಪಾದ ಮತ್ತು ಅರ್ಘ (-ಪೂಜೆ) ಶಬ್ದಗಳ ಮೇಲೆ ತಾದರ್ಥ್ಯದಲ್ಲಿ ಯತ್‌ಪ್ರತ್ಯಯ ಬಂದು ಪಾದ್ಯ-ಅರ್ಘ್ಯ ಎಂದಾಗಿದೆ. ಪಾದಾರ್ಥಮುದಕಂ ಪಾದ್ಯಂ ಕಾಲುಗಳನ್ನು ತೊಳೆದು ಕೊಳ್ಳುವುದಕ್ಕಾಗಿ ಕೊಡುವ ನೀರಿಗೆ ಪಾದ್ಯವೆಂದು ಹೆಸರು. ಅರ್ಘಾರ್ಥಮುದಕಂ ಅರ್ಘ್ಯಂ-ಕೈ ತೊಳೆದುಕೊಳ್ಳುವುದಕ್ಕೆ ಕೊಡುವ ನೀರಿಗೆ ಅರ್ಘ್ಯವೆಂದು ಹೆಸರು. ಮನೆಗೆ ಯಾರಾದರೂ ಹಿರಿಯರು ಅಥವಾ ಸ್ವಾಮಿಗಳು ಬಂದರೆ ಮನೆಯೊಳಗೆ ಬರುವುದಕ್ಕೆ ಮುಂಚೆಯೇ ಅವರಿಗೆ ಕೈ ಕಾಲುಗಳನ್ನು ತೊಳೆದುಕೊಳ್ಳುವುದಕ್ಕೆ ನೀರು ಕೊಡುವುದು ನಮ್ಮ ಪ್ರಾಚೀನರ ಪದ್ಧತಿ. ಪಾಣಿಪಾದಂ ಪ್ರಕ್ಷಾಲ್ಯ-ಕೈ ಕಾಲುಗಳನ್ನು ತೊಳೆದು ಕೊಳ್ಳದೆಯೇ ಪ್ರಾಚೀನ ಸಂಪ್ರದಾಯ ಬಲ್ಲವರು ಯಾರೂ ಮನೆಯೊಳಗೆ ಬರುವುದೆ ಇಲ್ಲ —ಹೊಸಿಲು ಸಹ ದಾಟುವುದಿಲ್ಲ. ಸ್ನಾನ ಮಾಡುವಾಗಲು ಸಹ ಮೊದಲು ಕೈಕಾಲು ತೊಳೆದುಕೊಂಡು, ಒಂದು ಸರಿ ಮುಳುಗು ಹಾಕಿ ಅಥವ ಸ್ನಾನ ಮಾಡಿ, ಆಚಮನ ಮಾಡಿ ಸಂಕಲ್ಪ ಮಾಡಿಯೇ ನದಿಗಳಲ್ಲೂ ತೀರ್ಥಕ್ಷೇತ್ರಗಳಲ್ಲೂ ಸ್ನಾನ ಮಾಡುವುದು ಸಹ ಸಂಪ್ರದಾಯ. ಇದರಿಂದ ಅರ್ಘ್ಯ ಪಾದ್ಯ ಆಚಮನ, ಮಧುಪರ್ಕ ಇವೆಲ್ಲ ಸ್ನಾನದ ಅಂಗವೆಂದು ಸ್ಪಷ್ಟವಾಗುವುದು.

ಪ್ರಕೃತ ಭಗವಂತನಿಗೆ ಸ್ನಾನ ಮಾಡಿಸುವಾಗಲೂ ಅರ್ಘ್ಯ-ಪಾದ್ಯಾದಿಗಳನ್ನು ಸಮರ್ಪಿಸುವುದು ಕರ್ತವ್ಯವೆಂದು ಸ್ಪಷ್ಟವಾಗುತ್ತದೆ. ಭಗವಂತನ ಪೂಜೆಯಲ್ಲಿ ವಿಶೇಷ ಆಸಕ್ತಿಯುಳ್ಳ ಹಿರಿಯರೆಲ್ಲರೂ ಈ ಪಂಚವಿಧ ಉಪಚಾರಕ್ಕಾಗಿಯೇ ಐದು ಚಿಕ್ಕ-ಚಿಕ್ಕ ಪಾತ್ರೆಗಳನ್ನು ಇಟ್ಟುಕೊಳುತ್ತಿದ್ದರು. ಆದ್ದರಿಂದ ಅರ್ಘ್ಯಾದಿ ಐದು ಉಪಚಾರಗಳಿಗೆ ಉಪಯೋಗಿಸುವ ನೀರಿಗಾಗಿಯೇ ಐದು ಪಾತ್ರೆಗಳನ್ನು ಬೇರೆಯಾಗಿಯೇ ಇಟ್ಟಿರುತ್ತಿದ್ದರು. ಅದಕ್ಕಾಗಿಯೇ ಈ ಐದು ಪಾತ್ರೆಗಳ ಪೂಜೆಗೆ 'ಪಂಚಪಾತ್ರಪೂಜಾ' ಎಂಬ ಹೆಸರು ಪ್ರಸಿದ್ಧಿಗೆ ಬಂತು.

ಆಚಮನವನ್ನು ಸ್ನಾನಕ್ಕೆ ಮೊದಲು ಒಂದು ಸಾರಿ ಮಾಡಿ ಸಂಕಲ್ಪ ಹೇಳಿಕೊಂಡು ಸ್ನಾನ ಮಾಡುತ್ತಾರೆ. ಸ್ನಾನವಾದ ಬಳಿಕ, ಒರಸಿಕೊಳ್ಳುವುದಕ್ಕೆ ಮುಂಚೆ ಇನ್ನೊಂದು ಸಾರಿಯೂ ಶುದ್ಧವಾಗುವುದಕ್ಕಾಗಿ ಆಚಮನ ಮಾಡಬೇಕು; ಇದಕ್ಕೆ ಪುನರಾಚಮನವೆಂದು ಹೆಸರು. ಒಂದು ಸಾರಿ ಆಚಮನ ಮಾಡಿದ ಬಳಿಕ ಪುನಃ ಅದರಲ್ಲೇ ಆಚಮನ ಮಾಡಬಾರದಾದ್ದರಿಂದ ಭಗವಂತನಿಗೆ ಪುನರಾಚಮನಕ್ಕೆ ನೀರು ಕೊಡುವುದಕ್ಕಾಗಿಯೇ

ಇನ್ನೊಂದು ಪಾತ್ರೆಯಲ್ಲಿ ಇಟ್ಟುಕೊಂಡಿರಬೇಕು. ಹೀಗೆ 'ಪಂಚಪಾತ್ರಪೂಜಾ' ಎಂಬ ಹೆಸರು ಪ್ರಸಿದ್ಧವಾಗಿದ್ದರೂ ಆರು ಪಾತ್ರೆಗಳೇ ಇರಬೇಕು ಎನ್ನುವ ಅಂಶವನ್ನು ಶೇಷಾ-ಚಾರ್ಯಪುತ್ರರಾದ ರಾಮಾಚಾರ್ಯ ಎಂಬುವರು 'ಪೂಜಾಕಲ್ಪಲತಾ' ಎಂಬ ಗ್ರಂಥದಲ್ಲಿ ಹೀಗೆ ತೋರಿಸಿದ್ದಾರೆ (ಶ್ರೀ ಪ್ರಭಂಜನರ 'ಪದ್ಯಮಾಲಾ' ಪುಸ್ತಕ, ಪುಟ 23)—
ಅತ್ರ ಮಧ್ಯೇ ಸ್ಥಾಪನೀಯಂ ಪಾತ್ರದ್ವಯಂ ಮಧ್ಯಮಕ್ಷೇನ ಅನುಗಮ್ಯ ಪಂಚ ಇತ್ಯುಕ್ತಮ್। ವಸ್ತುತಸ್ತು ಷಟ್‌ಪಾತ್ರಾಣ್ಯೇವ ವಿವಕ್ಷಿತಾನಿ। ಅನುಪದಮೇವ 'ಮಧ್ಯೇ ದ್ವೇ ಸರ್ವಪಾತ್ರಾಣಾಮ್' ಇತಿ ಪಾತ್ರದ್ವಯಸ್ಯಾಪಿ ವಕ್ಷ್ಯಮಾಣತ್ವಾತ್।........ ... ಅರ್ಘ್ಯಾದ್ಯುಪಚಾರಷಟ್ಕ-ಸಮರ್ಪಣೋಕ್ತ್ಯಾ-ಷಟ್ಪಾತ್ರಪಕ್ಷಸ್ಯೈವ ವಕ್ಷ್ಯಮಾಣ-ತ್ವಾಚ್ಚ —ಇತಿ।

ಇದರ ಅರ್ಥವೇನೆಂದರೆ—ಟೀಕಾರಾಯರು ಪದ್ಯಮಾಲಾದಲ್ಲಿ 'ಪಂಚಪಾತ್ರಾಣಿ ಆಸಾದಯೇತ್'—ಐದು ಪಾತ್ರೆಗಳನ್ನು ಜೋಡಿಸಿಡಬೇಕೆಂದು ಮೊದಲು ಹೇಳಿದ್ದರೂ ಆಮೇಲೆ ಮುಂದೆ ಅವನ್ನು ಜೋಡಿಸುವ ಕ್ರಮ ಹೇಳುವಾಗ ನಾಲ್ಕು ದಿಕ್ಕುಗಳಲ್ಲೂ ಒಂದೊಂದು ಪಾತ್ರೆ ಇಡಬೇಕೆಂದು ಹೇಳಿ 'ಮಧ್ಯೆ ಎರಡು ಇಡಬೇಕು' ಎಂದು ಹೇಳಿರುವುದರಿಂದಲೂ ಉಪಚಾರ ಹೇಳುವಾಗಲೂ ಆರನ್ನೇ ಹೇಳಿರುವುದರಿಂದಲೂ ಪಂಚಪಾತ್ರೆಗಳೆಂದು ವ್ಯವಹಾರವಿದ್ದರೂ ವಸ್ತುತಃ ಆರು ಪಾತ್ರೆಗಳೇ ಆಗುತ್ತವೆ—ಎಂದರ್ಥ. ಪುನರಾಚಮನವನ್ನು ಆಚಮನದ ಜೊತೆಯೋ ಅಥವಾ ಸ್ನಾನದ ಜೊತಯೋ ಸೇರಿಸಿ 'ಐದು' ಎಂದು ವ್ಯವಹಾರದಲ್ಲಿ ಬಂದಿದೆ.

ಇರಲಿ. ಐದು ಅಥವಾ ಆರು ಬೇರೆ ಪಾತ್ರೆಗಳನ್ನು ಇಟ್ಟುಕೊಳ್ಳಲು ಅನುಕೂಲವಿಲ್ಲದೇ ಇದ್ದಾಗ ಸ್ನಾನಕ್ಕಂತೂ (ಅಭಿಷೇಕಕ್ಕೆ—ತೀರ್ಥಕ್ಕೆ) ಒಂದು ಪಾತ್ರೆಯನ್ನಾದರೂ ಇಟ್ಟುಕೊಳ್ಳಲೇಬೇಕಲ್ಲ. ಅದರಲ್ಲೇ ಆರು ಸಲ ಉದ್ಧರಣೆಯಿಂದ ಎತ್ತಿ ಎತ್ತಿ ಹಾಕಬಹುದು, ಆದೂ ಅಡ್ಡಿಯಿಲ್ಲ. ಅಥವಾ ಶಂಖದಲ್ಲೇ ಹಾಕಬೇಕೆಂದರೆ ಬೇರೆ ಶಂಖವನ್ನೇ ಉಪಯೋಗಿಸಬೇಕೆಂದು ಒಂದು ಪ್ರಮಾಣ ಹೇಳುತ್ತದೆ—

ಪಾತ್ರಾಣಾಮಭಾವೇ ಶಂಖೇನೈವ ಅರ್ಘ್ಯಾದಿ ದದ್ಯಾತ್। ಉಕ್ತಂ ಚ— 'ಪಾತ್ರಾಣಮಪ್ಯಭಾವೇ ತು ಶಂಖ ಏವ ವಿಶಿಷ್ಯತೇ' 'ತದಭಾವೇ ಹ್ಯನ್ಯಶಂಖೇ ತಾನಿ ತಾನಿ ಪ್ರಕಲ್ಪಯೇತ್।' (ಪೂಜಾಕಲ್ಪಲತೆ) (ಅರ್ಥ) ಬೇರೆ ಬೇರೆ ಪಾತ್ರೆಗಳೇ ಇಲ್ಲದಿದ್ದರೆ ಬೇರೆ ಒಂದು ಶಂಖದಿಂದಲೇ ಅವುಗಳನ್ನೆಲ್ಲಾ ಕೊಡಬಹುದು.

ಐದು (ಆರು) ಪಾತ್ರೆಗಳಿದ್ದರೆ ಅವುಗಳಲ್ಲಿ ಸ್ನಾನದ ಪಾತ್ರೆಯನ್ನು ಆಗ್ನೇಯದಲ್ಲೂ ಪಾದ್ಯವನ್ನು ನೈಋತ್ಯದಲ್ಲೂ ಅರ್ಘ್ಯವನ್ನು ವಾಯುವ್ಯದಲ್ಲೂ ಆಚಮನೀಯವನ್ನು ಈಶಾನ್ಯದಲ್ಲೂ ಇಟ್ಟು ಮಧ್ಯದಲ್ಲಿ ಮಧುಪರ್ಕವನ್ನೂ (ಬಲಗಡೆ) ಪುನರಾಚಮನವನ್ನೂ

(ಎಡಗಡೆ) ಇಡಬೇಕು. ಅನಂತರ ಅವುಗಳಲ್ಲಿ ಗಂಧವನ್ನೂ ತುಲಸೀ-ಪುಷ್ಪಗಳನ್ನೂ ಹಾಕಬೇಕು. ಈ ಕ್ರಮವನ್ನು ಪದ್ಮಮಾಲೆಯಲ್ಲಿ ಹೀಗೆ ಹೇಳಿದೆ—

ಪಾತ್ರಾಣ್ಯಾಸಾದಯೇತ್ ಪೂರ್ವಂ ಪಂಚ ಪೂಜಾವಿಧೌ ಸದಾ ।
ಅರ್ಘ್ಯಂ ವಾಯುಪದೇ ಪ್ರೋಕ್ತಂ ನೈರ್ಋತ್ಯಾಂ ಪಾದ್ಯಮೇವ ಚ ।
ಈಶೇ ತ್ವಾಚಮನೀಯಂ ಸ್ಯಾದ್ (ಪಾಠಾಂ. -ನೀಯಂ ಚ)
ಸ್ನಾನೀಯಂ ಚಾಗ್ನಿಕೋಣಕೇ ।
ಮಧ್ಯೇ ದ್ವೇ ಸರ್ವಪಾತ್ರಾಣಾಂ ಶುದ್ಧತೋಯೇನ ಪೂರಯೇತ್ ।
ಏಕಂ ಸ್ಯಾನ್ಮಧುಪರ್ಕೇಽನ್ಯತ್ ಪುನರಾಚಮನೇ ತಥಾ।
ನಿಕ್ಷಿಪೇದ್ ಗಂಧತುಲಸೀ—ಪುಷ್ಪಾದೀನಿ ಯಥಾಕ್ರಮಮ್ ।

ಇದರ ಅರ್ಥ ಸ್ಪಷ್ಟವಾಗಿರುವುದರಿಂದ ಬರೆಯಬೇಕಾಗಿಲ್ಲ. 'ಪುಷ್ಪಾದೀನಿ'-ಪುಷ್ಪ ಮೊದಲಾದವುಗಳನ್ನು ಎಂದಿರುವುದರಿಂದ ಕುಶಾಗ್ರವನ್ನೂ ಕೇಸರಿ-ಪಚ್ಚಕರ್ಪೂರ ಮೊದಲಾದುವನ್ನೂ ಸೇರಿಸಬೇಕೆಂದು ಸೂಚಿಸಿದ್ದಾರೆ ಎಂದು ಪೂಜಾಕಲ್ಪಲತಾಕಾರರು ತೋರಿಸುತ್ತಾರೆ—ಅತ್ರ ಆದಿಪದೇನ ಕುಶಾಗ್ರಾದೀನಾಂ ಸಂಗ್ರಹಃ । ಇಲ್ಲಿ ಆದಿ ಎಂಬ ಪದ ಹೇಳಿರುವುದರಿಂದ ಕುಶಾಗ್ರ ಮೊದಲಾದುವನ್ನೂ ಸೂಚಿಸಿದ್ದಾರೆ. ಹಾಗೆಯೇ ಸ್ಪಷ್ಟವಾಗಿ ಏಕೆ ಹೇಳಲಿಲ್ಲ ಎಂದರೆ ಅದಕ್ಕೆ ಕಾರಣವನ್ನೂ ಹೇಳುತ್ತಾರೆ—ಏತೇಷಾಮಲಾಭೇ ಗಂಧ-ತುಳಸೀಪುಷ್ಪೈರೇವ ನಿರ್ವಾಹ ಇತಿ ಸೂಚನಾಯ ತೇಷಾಂ ಸಾಕ್ಷಾದುಕ್ತಿಃ, ಇತರೇಷಾಂ ತ್ವಾದಿಪದೋಕ್ತಿರಿತಿ ಜ್ಞಾತವ್ಯಮ್ । ಕುಶಾಗ್ರಾದಿಗಳು ಸಿಗದಿದ್ದರೆ ಗಂಧ ತುಲಸೀ ಪುಷ್ಪಗಳಿಂದಲೇ ಕೆಲಸ ನಡೆಸಬಹುದು ಎಂಬುದನ್ನು ಸೂಚಿಸುವುದಕ್ಕಾಗಿ ಆ ಮೂರನ್ನು ಸ್ಪಷ್ಟವಾಗಿ ಹೇಳಿ ಮಿಕ್ಕವನ್ನು 'ಆದಿ' ಪದದಿಂದ ಸೂಚಿಸಿದರೆಂದು ತಿಳಿಯಬೇಕು.

ಪಂಚಪಾತ್ರೆಗಳನ್ನು ಇಡುವ ಕ್ರಮವನ್ನು ನೆನಪಿಟ್ಟುಕೊಳ್ಳಲು ಈ ಶ್ಲೋಕವು ಸಹಾಯ ಮಾಡುತ್ತದೆ :

ಅರ್ಘ್ಯಂ ವಾಯುಪದೇಪ್ರೋಕ್ತಂ ನೈರ್ಋತ್ಯಾಂ ಪಾದ್ಯಮೇವ ಚ।
ಈಶೇ ತ್ವಾಚಮನೀಯಂ ಸ್ಯಾತ್ ಸ್ನಾನೀಯಂ ಚಾಗ್ನಿಕೋಣಕೇ ।
ಮಧ್ಯೇ ತು ಮಧುಪರ್ಕಂ ಚ ಪುನರಾಚಮನೀಯಕಮ್
(ಪಾಠಾಂ. ಪುನರಾಚಮನಂ ತಥಾ)।

ಆವಾಹ್ಯ ದೇವತೆಗಳು : ಅರ್ಘ್ಯದಲ್ಲಿ ಲಕ್ಷ್ಮೀದೇವಿಯನ್ನೂ ಪಾದ್ಯದಲ್ಲಿ ಸರಸ್ವತಿಯನ್ನೂ ಆಚಮನೀಯದಲ್ಲಿ ರತಿಯನ್ನೂ ಮಧುಪರ್ಕದಲ್ಲಿ ಪಿತಾಮಹ(ಬ್ರಹ್ಮ)ನನ್ನೂ ಸ್ನಾನೀಯದಲ್ಲಿ ವರುಣನನ್ನೂ ಪುನರಾಚಮನೀಯದಲ್ಲಿ ಶಾಂತಿಯನ್ನೂ ಸ್ಥಾಪಿಸಿ ತದಂತರ್ಗತ ವಾಸುದೇವಾದಿ ಪಂಚಮೂರ್ತಿಗಳನ್ನೂ ಧ್ಯಾನ ಮಾಡಬೇಕು. ಬಳಿಕ ಅವುಗಳಲ್ಲಿ

ಕ್ರಮವಾಗಿ ದಾನ-ಅಂಜಲಿ-ಗೋಕರ್ಣ-ಸೂಕರ ಮತ್ತು ಹಂಸಮುದ್ರೆಗಳನ್ನು ತೋರಿಸಬೇಕು.

ಅರ್ಘ್ಯೇ ಲಕ್ಷ್ಮೀಂ ತದಂತರ್ಗತಂ ವಾಸುದೇವಂ ಧ್ಯಾಯಾಮಿ। ಪಾದ್ಯೇ ಸರಸ್ವತೀಂ ತದಂತರ್ಗತಂ ಸಂಕರ್ಷಣಂ ಧ್ಯಾಯಾಮಿ। ಆಚಮನೀಯೇ ರತಿಂ ತದಂತರ್ಗತಂ ಪ್ರದ್ಯುಮ್ನಂ ಧ್ಯಾಯಾಮಿ। ಮಧುಪರ್ಕೇ ಪಿತಾಮಹಂ ತದಂತರ್ಗತಮನಿರುದ್ಧಂ ಧ್ಯಾಯಾಮಿ। ಸ್ನಾನೀಯೇ ವರುಣಂ ತದಂತರ್ಗತಂ ನಾರಾಯಣಂ ಧ್ಯಾಯಾಮಿ। ಪುನರಾಚಮನೀಯೇ ಶಾಂತಿಂ ಧ್ಯಾಯಾಮಿ ॥

ಅರ್ಘ್ಯಂ ಶ್ರಿಯಾ ಸಮಾಯುಕ್ತಂ ಪಾದ್ಯಪಾತ್ರೇ ಸರಸ್ವತೀಮ್ ।
ರತಿಮಾಚಮನೀಯೇ ಚ ಮಧುಪರ್ಕೇ ಪಿತಾಮಹಮ್ ।
ಶಾಂತಿಂ ಚ ಪುನರಾಚಾಮೇ ಸ್ನಾನೀಯೇ ವರುಣಂ ಸ್ಮರೇತ್ ।

(ಅನಿರುದ್ಧಸಂಹಿತೆಯ 17 ಅ. 30-31 ಶ್ಲೋಕಗಳಲ್ಲಿ ಈ ಬಗ್ಗೆ ವಿವರಗಳು ಬಂದಿವೆ.—ಶ್ರೀ ಪ್ರಭಂಜನರು)

ಅರ್ಘ್ಯೇ ತು ದಾನಮುದ್ರಾ ಚ ಪಾದ್ಯೇ ಚಾಂಜಲಿಮುದ್ರಿಕಾ ।
ಗೋಕರ್ಣಾಕೃತಿರಾ(ಚಾಮೇ)ಚಮ್ಯೇ ಮಧುಪರ್ಕೇ ಚ ಸೂಕರೀ ।
ಹಂಸೀ ಚ ಪುನರಾಚಮ್ಯೇ ಪಂಚಮುದ್ರಾಃ ಪ್ರಕೀರ್ತಿತಾಃ ।

ಆವಾಹಿತ ಲಕ್ಷ್ಮ್ಯಾದಿ ದೇವತಾಭ್ಯೋ ನಮಃ। ತದಂತರ್ಗತ ಮನುನಾಮಕ ಭಾರತೀರಮಣಮುಖ್ಯಪ್ರಾಣಾಂತರ್ಗತ ವಾಸುದೇವಾದಿ ಪಂಚರೂಪಿಣೇ ಶ್ರೀಹರಯೇ ನಮಃ। ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಃ ಸಮರ್ಪಯಾಮಿ ॥

(ಎಂದು ಹೇಳಿ ಪಂಚಪಾತ್ರೆಗಳ ಮೇಲೆ ಗಂಧ-ತುಳಸೀ-ಪುಷ್ಪಗಳನ್ನು ಏರಿಸಿ ಕೈ ಮುಗಿಯಬೇಕು.)

ದಾನ ಕೊಡುವಾಗ ಹೇಗೆ ಐದು ಬೆಟ್ಟುಗಳನ್ನೂ ಒಟ್ಟಿಗೆ ಸೇರಿಸುವೆವೋ ಹಾಗೆ ಐದು ಬೆಟ್ಟುಗಳನ್ನೂ ಜೋಡಿಸಿ ತೋರಿಸುವುದಕ್ಕೆ ದಾನಮುದ್ರೆಯೆಂದು ಹೆಸರು. ಎರಡು ಬೊಗಸೆಗಳನ್ನೂ ಪ್ರಾರ್ಥಿಸಿಕೊಳ್ಳುವಂತೆ ಹಿಡಿಯುವುದಕ್ಕೆ ಅಂಜಲಿಮುದ್ರೆಯೆಂದು ಹೆಸರು. ಮಿಕ್ಕ ಮೂರು ಮುದ್ರೆಗಳ ಲಕ್ಷಣವನ್ನು ಹಿರಿಯರಿಂದ ಕೇಳಿ ತಿಳಿದುಕೊಳ್ಳಬೇಕು.

ಇತಿ ಪಂಚಪಾತ್ರಪೂಜಾ ಸಂಪೂರ್ಣಾ

ಪಂಚಾಮೃತದ್ರವ್ಯಪೂಜಾ

ಪಂಚಾಮೃತಗಳು: ಆಕಳ ಹಾಲು, ಆಕಳ ಮೊಸರು, ಆಕಳ ತುಪ್ಪ, ಜೇನು-ತುಪ್ಪ, ಸಕ್ಕರೆ (ಶರ್ಕರಾ)—ಈ ಐದಕ್ಕೇ ಮುಖ್ಯವಾಗಿ ಪಂಚಾಮೃತಗಳೆಂದು ಹೆಸರು. ಇವುಗಳ ಜೊತೆ ಫಲ ಎಂಬ ರೂಪದಿಂದ ಬಾಳೆಹಣ್ಣು ಮತ್ತು ಎಳನೀರು ಅಥವಾ ತೆಂಗಿನ ನೀರು ಇವೂ ಪಂಚಾಮೃತದ್ರವ್ಯಗಳಲ್ಲೇ ಸೇರಿವೆ. ಕೆಲವರು ಕಬ್ಬಿನ ರಸದಿಂದಲೂ ಅಭಿ-ಷೇಕ ಮಾಡುವುದುಂಟು. ಪಂಚಗವ್ಯದಲ್ಲೂ ಪಂಚಾಮೃತದಲ್ಲೂ ವ್ರತಗಳ ಭೇದದಿಂದ ದಧಿ ಕ್ಷೀರಗಳಿಗೆ ನಿಷೇಧವಿಲ್ಲವೆಂದು ಶಾಸ್ತ್ರವಿದ್ದರೂ ಆಚಾರದಲ್ಲಿ ಮಾತ್ರ ಹಾಲಿನ ವ್ರತದಲ್ಲಿ ಹಾಲನ್ನೂ ದಧಿವ್ರತದಲ್ಲಿ ಮೊಸರನ್ನೂ ಮಠಗಳಲ್ಲಿ ಪಂಚಾಮೃತಕ್ಕೆ ಬಳಸುವುದಿಲ್ಲ. ಕ್ವಚಿತ್ ಬೆಣ್ಣೆ ತೆಗೆದ ಮತ್ತು ಕಡೆದ ಮೊಸರನ್ನು ಉಪಯೋಗಿಸುವರಾದರೂ ಹಾಲಿನ ವ್ರತದಲ್ಲಿ ಹಾಲನ್ನು ಬಳಸುವುದು ಕಡಿಮೆ. ಕೆಲವರು ಕ್ಷೀರಕ್ಕೆ ಬದಲಾಗಿ ಕಲ್ಲುಸಕ್ಕರೆ ಕರಗಿದ ನೀರನ್ನು ಉಪಯೋಗಿಸುವುದೂ ಉಂಟು.

ಪರಮಾತ್ಮನಿಗೆ ನೀರಿನಿಂದ ಅಭಿಷೇಕ ಮಾಡುವುದಕ್ಕಿಂತಲೂ ಪಂಚಾಮೃತಾಭಿಷೇಕ ಮಾಡಿದರೆ ಬಹಳ ಪ್ರೀತಿಯಂತೆ. ಆದಕಾರಣ ಪ್ರಾಯಶಃ ಎಲ್ಲಾ ಮಠಗಳಲ್ಲೂ ಯುಗಾದಿಪಾಡ್ಯದ ದಿನವೂ ಶ್ರೀರಾಮನವಮಿಯಂದೂ, ಬಲಿಪಾಡ್ಯಮಿಯಂದೂ ದಿನವೂ ಮಠದ ಎಲ್ಲಾ ಮೂರ್ತಿಗಳಿಗೂ ಸಾಲಿಗ್ರಾಮಾದಿಗಳಿಗೂ 'ಮಹಾಭಿಷೇಕ'ವೆಂದು ಕೊಡಗಟ್ಟಲೆ ಪಂಚಾಮೃತದ್ರವ್ಯದಿಂದ ಅಭಿಷೇಕ ಮಾಡುವುದುಂಟು. ಅನೇಕ ಶಿಷ್ಯರೂ ಸಹ ತಮ್ಮ ತಮ್ಮ ಉಪಾಸ್ಯಮೂರ್ತಿಗಳಿಗೆ ಬಲಿಪಾಡ್ಯದ ದಿವಸವಾದರೂ ಪಂಚಾಮೃತಾ-ಭಿಷೇಕ ಮಾಡದೇ ಇರುವುದಿಲ್ಲ.

ಈ ಪಂಚಾಮೃತಾಭಿಷೇಕದಲ್ಲೇನು ವಿಶೇಷವೆಂಬುದನ್ನು ಕೆಳಗಿನ ಪ್ರಮಾಣ-ಶ್ಲೋಕಗಳು ಸ್ಪಷ್ಟಪಡಿಸುತ್ತವೆ.

ಪಂಚಾಮೃತಾಭಿಷೇಕದ ಮಹಿಮೆ: (ತೆಲುಗು ಪುಸ್ತಕದಿಂದ) ಪಂಚಾಮೃತದ್ರವ್ಯ-ಗಳಲ್ಲಿ ಒಂದೊಂದರಿಂದ ಅಭಿಷೇಕ ಮಾಡಿದರೇ ಮಹಾಪುಣ್ಯವಿದೆಯಂತೆ; ಎಲ್ಲಾ ಸೇರಿದರೆ ಮತ್ತೇನು ಹೇಳುವುದು?

ದಶಾಪರಾಧಾನ್ ತೋಯೇನ ಕ್ಷೀರೇಣ ಚ ಶತಂ ತಥಾ ।
ಸಹಸ್ರಂ ಕ್ಷಮತೇ ದಧ್ನಾ ಮಧುನಾ ಚಾಯುತಂ ತಥಾ ॥
ಘೃತಾಭಿಷೇಕೇ ಲಕ್ಷಂ ತು ಇಕ್ಷುಸಾರಾತ್ ತ್ರಿಲಕ್ಷಕಮ್ ।
ನಾರಿಕೇಳಾಂಬುನಾ ಕೋಟಿಂ ಅನಂತಂ ಗಂಧವಾರಿಣಾ ॥

(ಈ ಶ್ಲೋಕಗಳನ್ನು ಶ್ರೀ ಪ್ರಭಂಜನರವರೂ ಪದ್ಮಮಾಲಾದಲ್ಲಿ ಉದಹರಿಸಿದ್ದಾರಲ್ಲದೆ ಇವು 'ಪಂಚಸಂಸ್ಕಾರಸಂಗ್ರಹ'ದಲ್ಲಿ ಇವೆಯೆಂದು ಆಕರವನ್ನೂ ಸೂಚಿಸಿದ್ದಾರೆ.)

(ಅರ್ಥ) ನೀರಿನಿಂದ ಅಭಿಷೇಕ ಮಾಡಿದರೆ ಹತ್ತು ಅಪರಾಧಗಳನ್ನು ಸ್ವಾಮಿ ಭಗವಂತ ಕ್ಷಮಿಸುತ್ತಾನೆ. ಕ್ಷೀರಾಭಿಷೇಕದಿಂದ ನೂರು ಅಪರಾಧಗಳನ್ನೂ, ದಧಿ ಅಭಿಷೇಕದಿಂದ ಸಾವಿರವನ್ನೂ, ಮಧು ಅಭಿಷೇಕದಿಂದ ಹತ್ತುಸಾವಿರವನ್ನೂ, ತುಪ್ಪದ ಅಭಿಷೇಕದಿಂದ ಲಕ್ಷ ಅಪರಾಧಗಳನ್ನೂ, ಕಬ್ಬಿನ ಹಾಲಿನಿಂದ (ರಸದಿಂದ) ಅಭಿಷೇಕ ಮಾಡಿದರೆ ಮೂರು ಲಕ್ಷ ತಪ್ಪುಗಳನ್ನೂ, ಎಳನೀರಿನಿಂದ ಕೋಟಿ ತಪ್ಪುಗಳನ್ನೂ, ಗಂಧೋದಕದಿಂದ ಅನಂತ ಅಪರಾಧಗಳನ್ನೂ ಕ್ಷಮಿಸುತ್ತಾನೆ.

ಪಂಚಾಮೃತದ್ರವ್ಯಗಳ ಅಭಿಷೇಕದಲ್ಲೇ ಇರುವ ತಾರತಮ್ಯವನ್ನು ಕೆಳಗಿನ ಸ್ಮೃತಿ-ವಾಕ್ಯ ತೋರಿಸುತ್ತದೆ—

ಕುರ್ವಂತಿ ಕ್ಷೀರಸ್ನಪನಂ ಯೇ ನರಾಃ ಕೃಷ್ಣಮೂರ್ಧನಿ ।
ಜ್ಞಾತ್ವಾಽಶ್ವಮೇಧಜಂ ಪುಣ್ಯಂ ಬಿಂದುನಾ ಬಿಂದುನಾ ಸ್ಮೃತಮ್ ॥

(ಅರ್ಥ) (ಮೂರ್ಧನಿ-ನೆತ್ತಿಯಲ್ಲಿ, ತಲೆಯ ಮೇಲೆ) ಯಾವ ಮನುಷ್ಯರು ಕ್ಷೀರಾಧಿದೇವತೆ ಶ್ರೀ ಗೋಪಾಲನೆಂದು ತಿಳಿದು (ಜ್ಞಾತ್ವಾ) ಶ್ರೀಕೃಷ್ಣನ ನೆತ್ತಿಯಮೇಲೆ (ಶ್ರೀ-ಹರಿಗೆ ಎಂದರ್ಥ) ಕ್ಷೀರಾಭಿಷೇಕ ಮಾಡುತ್ತಾರೋ ಅವರಿಗೆ ಒಂದೊಂದು ತೊಟ್ಟು (ಬಿಂದು) ಕ್ಷೀರಕ್ಕೂ ಒಂದೊಂದು ಅಶ್ವಮೇಧಯಾಗ ಮಾಡಿದ ಫಲ ಬರುತ್ತದೆ.

ಕ್ಷೀರಾದ್ ದಶಗುಣಂ ಚೈವ ಘೃತಂ ಚೈವ ದಶೋತ್ತರಮ್ ।
ಘೃತಾದ್ ದಶಗುಣಂ ಕ್ಷೌದ್ರಂ ಸ್ವಾದೂದಂ ಚ ದಶೋತ್ತರಮ್ ॥

(ಅರ್ಥ) (ಕ್ಷೌದ್ರಂ-ಜೇನುತುಪ್ಪ) ಕ್ಷೀರಾಭಿಷೇಕಕ್ಕಿಂತ ಮೊಸರಿನಿಂದ ಅಭಿಷೇಕ ಮಾಡುವುದು ಹತ್ತುಪಟ್ಟು ಶ್ರೇಷ್ಠ. ಅದಕ್ಕಿಂತಲೂ ಹತ್ತು ಗುಣ ಶ್ರೇಷ್ಠ ಘೃತದಿಂದ ಅಭಿಷೇಕ. ಘೃತಾಭಿಷೇಕಕ್ಕೂ ಹತ್ತು ಗುಣ ಶ್ರೇಷ್ಠ ಜೇನುತುಪ್ಪದಿಂದ ಅಭಿಷೇಕ. ಸಕ್ಕರೆಯಿಂದ (ಸ್ವಾದೂದಕ) ಅಭಿಷೇಕ ಮಾಡುವುದು ಮಧುವಿನಿಂದ ಅಭಿಷೇಕ ಮಾಡುವುದಕ್ಕಿಂತ ಹತ್ತುಪಟ್ಟು ಅಧಿಕ.

ಆದಕಾರಣವೇ ಗುಡಿಗಳಲ್ಲೂ ವೃಂದಾವನಗಳ ಪೂಜೆಗಳು ನಡೆಯುವ ಮಠಗಳಲ್ಲೂ ಪಂಚಾಮೃತಾಭಿಷೇಕಕ್ಕೆ ಅಷ್ಟೊಂದು ಪ್ರಾಶಸ್ತ್ಯವಿದೆಯೆಂದು ತಿಳಿಯಬೇಕು.

ಸೂಚನೆ— ಪ್ರತಿನಿತ್ಯವೂ ಪಂಚಾಮೃತವನ್ನು ಮಾಡುವ ಸಂಭವವಿಲ್ಲವಾದ್ದರಿಂದ ನಿತ್ಯಪೂಜೆಯಲ್ಲಿ ಪಂಚಾಮೃತದ್ರವ್ಯಸಂಬಂಧಿ ಈ ವಿಷಯವನ್ನು ಬಿಟ್ಟುಬಿಡಬಹುದು. ಪಂಚಾಮೃತಾಭಿಷೇಕ ಮಾಡುವಾಗ ಮಾತ್ರ ಈ ವಿಧಿಗಳನ್ನು ಅನುಸರಿಸಬೇಕು—ಅನುಸರಿಸುವುದು ಶ್ರೇಷ್ಠ.

ಪಂಚಾಮೃತದ್ರವ್ಯಗಳನ್ನು ಹೇಗೆ ಜೋಡಿಸಿ ಇಡಬೇಕು: ಪಂಚಪಾತ್ರೆಗಳನ್ನು ಹೇಗೆ ವಿಧ್ಯುಕ್ತಪ್ರಕಾರ ಇಡಬೇಕೆಂದಿದೆಯೋ ಪಂಚಾಮೃತದ್ರವ್ಯಗಳನ್ನೂ ಹಾಗೆಯೇ ಜೋಡಿಸಿಡುವ ಒಂದು ವಿಶಿಷ್ಟಕ್ರಮವಿದೆ. ಅದನ್ನು ಈ ಸ್ಮೃತಿವಾಕ್ಯ ತಿಳಿಸುತ್ತದೆ—

ಮಧ್ಯೇ ಕ್ಷೀರಂ ತು ದಧ್ಯಾದಿ ನ್ಯಸೇತ್ ಪೂರ್ವಾದಿಷು ಕ್ರಮಾತ್।

ಮಧ್ಯದಲ್ಲಿ ಹಾಲಿನ ಪಾತ್ರೆಯನ್ನಿಟ್ಟು ಪೂರ್ವದ ಕಡೆ ಮೊಸರನ್ನೂ ಬಲಗಡೆ (ನಮಗೆ ಬಲಕ್ಕೆ) ತುಪ್ಪವನ್ನೂ, ಪಶ್ಚಿಮಕ್ಕೆ ಮಧುವನ್ನೂ ಎಡಕ್ಕೆ ಸಕ್ಕರೆಯನ್ನೂ ವಾಯುವ್ಯಕ್ಕೆ ಫಲಗಳನ್ನೂ ಇಡಬೇಕು. (ಪೂಜೆಯ ಕಾಲದಲ್ಲಿ ದೇವರಿಗೂ ಪೂಜಕನಿಗೂ ಮಧ್ಯೆ ಇರುವ ಭಾಗವೇ ಪೂರ್ವ ಎನಿಸಿಕೊಳ್ಳುತ್ತದೆ.)

ದೇವರು ಇರುವ ಮಣೆ (ಪಾತ್ರೆ)

ಪೂರ್ವ

ದಧಿ

ಶರ್ಕರಾ   ಹಾಲು   ಘೃತ

ಫಲಗಳು   ಮಧು

ದ್ರವ್ಯಗಳಲ್ಲಿ ಭಗವನ್ಮೂರ್ತಿಗಳು: ಅರ್ಘ್ಯ-ಪಾದ್ಯಾದಿ ಪಾತ್ರೆಗಳಲ್ಲಿ ವಾಸುದೇವಾದಿ ಭಗವನ್ಮೂರ್ತಿಗಳನ್ನು ಚಿಂತಿಸಿದಂತೆಯೇ ಪಂಚಾಮೃತದ್ರವ್ಯಗಳಲ್ಲೂ ಸಹ ತತ್ಸನ್ನಿಹಿತ ಈ ಭಗವನ್ಮೂರ್ತಿಗಳನ್ನು ಚಿಂತಿಸಬೇಕು—

ದುಗ್ಧೇ ತು ದೇವೋ ಗೋವಿಂದೋ ದಧ್ನಿ ವೈ ದಧಿವಾಮನಃ।
ಆಜ್ಯಂ ತು ವಿಷ್ಣುದೈವತ್ಯಂ ಮಧುನಿ ಮಧುಸೂದನಃ ।
ಅಚ್ಯುತಃ ಶರ್ಕರಾಯಾಂ ತು ಫಲೇ ನಾರಾಯಣಸ್ತಥಾ ।
ಇಕ್ಷುರಸೇಽನಿರುದ್ಧಶ್ಚ ಧ್ಯೇಯಾಃ ಪಂಚಾಧಿದೇವತಾಃ ।

(ಮತ್ತೊಂದು ತೆಲುಗು ಆಹ್ನಿಕಪದ್ಧತಿಯಿಂದ)

ಕ್ಷೀರೇ ಗೋವಿಂದಮಾವಾಹಯಾಮಿ। ದಧ್ನಿ ದಧಿವಾಮನಮಾವಾಹಯಾಮಿ। ಆಜ್ಯೇ ವಿಷ್ಣುಮಾವಾಹಯಾಮಿ। ಮಧುನಿ ಮಧುಸೂದನಮಾವಾಹಯಾಮಿ। ಶರ್ಕರಾಯಾಮಚ್ಯುತಮಾವಾಹಯಾಮಿ। ಫಲೇಷು ನಾರಾಯಣಮಾವಾಹಯಾಮಿ। (ಇಕ್ಷುರಸೇ ನಿರುದ್ಧಮಾವಾಹಯಾಮಿ ॥)

ಎಂದು ಹೇಳಿ ತುಳಸಿಯ ದಳಗಳನ್ನು ಹಾಕಬೇಕು ಅಥವಾ ತುಳಸೀದಳವನ್ನು ಕಲಶೋದಕದಲ್ಲಿ ಅದ್ದಿ ಪ್ರೋಕ್ಷಿಸಬೇಕು. ಅನಂತರ ತಾರ್ಕ್ಷ್ಯ, ಧೇನು, ಶಂಖ, ಚಕ್ರ, ಗದಾ ಎಂಬ ಪಂಚಮುದ್ರೆಗಳನ್ನು ಅವಕ್ಕೆ ತೋರಿಸಿ ಮೂಲಮಂತ್ರದಿಂದ ೮ ಸಾರಿ ಅಭಿಮಂತ್ರಿಸಿ

ಓಂ ಪಂಚಾಮೃತದೇವತಾಭ್ಯೋ ನಮಃ। ಆವಾಹನಾದಿ ಷೋಡಶೋಪಚಾರ ಪೂಜಾಃ ಸಮರ್ಪಯಾಮಿ ॥

ಎಂದು ಹೇಳಿ ಕೈ ಮುಗಿದು ವಿಷ್ಣುಗಾಯತ್ರಿಯಿಂದಲೂ (ಓಂ ನಾರಾಯಣಾಯ ವಿದ್ಮಹೇ ಇತ್ಯಾದಿ) ಅಭಿಮಂತ್ರಿಸಬೇಕು.

॥ ಇತಿ ಪಂಚಾಮೃತದ್ರವ್ಯಪೂಜಾ ಸಂಪೂರ್ಣಾ ॥

ಘಂಟೆಯ ಪೂಜೆ

ಕಲಶಪೂಜೆ, ಶಂಖಪೂಜೆ, ಪಂಚಪಾತ್ರಪೂಜೆ, ಪಂಚಾಮೃತದ್ರವ್ಯಪೂಜೆಗಳನ್ನು ಮಾಡಿದ ಬಳಿಕ ಪೂಜೆಗೆ ಅನಿವಾರ್ಯವಾದ ಅಂಗಗಳಾದ ಘಂಟೆಗೂ ದೀಪದ ಕಂಬಕ್ಕೂ ಪೂಜೆ ಮಾಡುವುದು ಕುಂಭಕೋಣ ಪುಸ್ತಕದಲ್ಲೂ ಉಡುಪಿಯ ಆಹ್ನೀಕಮಂಜರಿಯಲ್ಲೂ ಇದೆ. ಆದಕಾರಣ ಆ ಪೂಜೆಗಳನ್ನೂ ಇಲ್ಲಿ ಕೊಟ್ಟಿದೆ.

ಘಂಟಾಯಾಂ ಬ್ರಹ್ಮಣೇ ನಮಃ। ಮುಕುಟೇ ಗರುಡಾಯ ನಮಃ। ದಂಡೇ ನಾಗಾಯ ನಮಃ। ಸ್ವರೇ ಸರಸ್ವತ್ಯೈ ನಮಃ। ನಾದೇ ಪ್ರಜಾಪತಯೇ ನಮಃ। ಇತ್ಯೇಕೈಕವಾರಂ ಪುಷ್ಪಂ ಸಮರ್ಪಯೇತ್ ॥

(ಅರ್ಥ) ಇಡೀ ಗಂಟೆಯಲ್ಲಿ ಸನ್ನಿಹಿತರಾಗಿರುವ ಬ್ರಹ್ಮದೇವರಿಗೆ ನಮಸ್ಕಾರ. ಗಂಟೆಯ ಶಿರೋಭಾಗಕ್ಕೆ (ಮೇಲ್ಭಾಗಕ್ಕೆ) ಅಭಿಮಾನಿಯಾದ ಗರುಡನಿಗೆ ನಮಸ್ಕಾರ. ಗಂಟೆಯ ದಂಡಕ್ಕೆ (ಕೈಯಿಂದ ಹಿಡಿಯುಕೊಳ್ಳುವ ದಂಡಾಕಾರವಾದ ಮಧ್ಯಭಾಗಕ್ಕೆ) ಅಭಿಮಾನಿಯಾದ ನಾಗನಿಗೆ ನಮಸ್ಕಾರ. ಸ್ವರಕ್ಕೆ (ಬಾರಿಸಿದಾಗ ಬರುವ ಧ್ವನಿಗೆ) ಅಭಿಮಾನಿಯಾದ ಸರಸ್ವತಿಗೆ ನಮಸ್ಕಾರ. ನಾದಕ್ಕೆ (ನಾದವನ್ನು ಮಾಡುವ ನಾಲಗೆ ಅಥವಾ ಅಲಗಿಗೆ) ಅಭಿಮಾನಿಯಾದ ಪ್ರಜಾಪತಿಗೆ ನಮಸ್ಕಾರ—ಎಂದು ಹೇಳಿಕೊಂಡು ಪ್ರತಿಯೊಂದು ಭಾಗಕ್ಕೂ ಪುಷ್ಪವನ್ನು ಪೂಜಿಸಬೇಕು.

ದೀಪಸ್ತಂಭಪೂಜೆ

ಶ್ರೀವಿಷ್ಣುಪೂಜಾಂಗ ದೀಪಸ್ತಂಭಪೂಜಾಂ ಕರಿಷ್ಯೇ। ದೀಪಸ್ತಂಭೇ ಸಪ್ತವಿಂಶತಿನಕ್ಷತ್ರದೇವತಾಭ್ಯೋ ನಮಃ। ನಾಳೇ ವಾಸುಕಿದೇವತಾಭ್ಯೋ ನಮಃ। ಪಾದೇ ಚಂದ್ರಾರ್ಕಾಭ್ಯಾಂ ನಮಃ। ಧೂಪದೀಪ-ಪಾತ್ರಯೋಃ ಅಗ್ನಯೇ ನಮಃ। ನಾಳಯೋ ವಾಸುಕಿದೇವತಾಭ್ಯೋ ನಮಃ। ಪಾದೇಷು ಚಂದ್ರಾರ್ಕಾಭ್ಯಾಂ ನಮಃ ॥ [ಸಕೃತ್ ಸಕೃತ್ ಪುಷ್ಪಂ ಸಮರ್ಪ್ಯ]

(ಅರ್ಥ) ದೀಪ ಹಚ್ಚಿಡುವ ದೀಪದ ಕಂಭದಲ್ಲಿ ಅಶ್ವಿನೀ-ಭರಣ್ಯಾದಿ ಇಪ್ಪತ್ತೇಳು ನಕ್ಷತ್ರದೇವತೆಗಳೂ ಸನ್ನಿಹಿತರಾಗಿರುತ್ತಾರೆ. ದೀಪ ಹಚ್ಚುವುದಕ್ಕೆ ಬತ್ತಿ ಹಾಕುವ ಮೂತಿಗೆ (ನಾಲಗೆಗೆ) ಸರ್ಪಗಳ ರಾಜನಾದ ವಾಸುಕಿಯು ಅಭಿಮಾನಿ; ಅವನು ಅಲ್ಲಿ ಸನ್ನಿಹಿತನಾಗಿರುವನು. ಅವನಿಗೆ ನಮಸ್ಕಾರ. ದೀಪದ ಕಂಬದ ಪಾದದಲ್ಲಿ (ಬುಡದಲ್ಲಿ) ಚಂದ್ರಸೂರ್ಯರು ಸನ್ನಿಹಿತರಾಗಿರುವರು, ಅವರಿಗೆ ನಮಸ್ಕಾರ. ಇದೇ ರೀತಿ ಧೂಪ ಹಾಕುವ ಪಾತ್ರೆಯಲ್ಲೂ ದೀಪ ಹಚ್ಚಿಡುವ ಪ್ರಣತೆಗಳಲ್ಲೂ ಅಗ್ನಿಯು ಸನ್ನಿಹಿತನಾಗಿರುತ್ತಾನೆ. ಆ ಪಾತ್ರೆಗಳನ್ನು ಹಿಡಿದುಕೊಳ್ಳುವ ನಾಳ (ಹಿಡಿಯ ಭಾಗ)ಗಳಲ್ಲಿಯೂ ವಾಸುಕಿ ಇರುವನು. ಅವುಗಳ ಪಾದ (ಬುಡ)ಗಳಲ್ಲೂ ಚಂದ್ರಸೂರ್ಯರು ಸನ್ನಿಹಿತರಾಗಿರುವರು. ಇವರೆಲ್ಲರಿಗೂ ನಮಸ್ಕಾರ—ಎಂದು ಹೇಳಿ ಒಂದೊಂದು ಹೂವು ಏರಿಸಬೇಕು.

ಈಗ ದೇವರನ್ನು ಇಟ್ಟು ಪೂಜೆ ಮಾಡುವ ಪೀಠದಲ್ಲಿಯೇ ಅನೇಕ ದೇವತೆಗಳಿರುವುದರಿಂದ ಪೀಠಪೂಜೆಯನ್ನು ಮಾಡಬೇಕು.

ಪೀಠಪೂಜೆ

ದೇವರನ್ನು ಇಟ್ಟು ಪೂಜಿಸುವ ಮಂಟಪದ ವರ್ಣನೆಯನ್ನು ಮಂಟಪದ ಧ್ಯಾನದಲ್ಲಿ ತಿಳಿಸಲಾಗಿತ್ತು. ಆ ಮಂಟಪದ ಮಧ್ಯದಲ್ಲಿ ದೇವರನ್ನು ಕೂಡಿಸುವುದಕ್ಕಾಗಿ ಏನು ಮಂಡಾಸನ (ದೇವರ ಮಂಟಪ)ವನ್ನು ಇಟ್ಟು ಅದರೊಳಗೆ ಮೆಟ್ಟಲು-ಮೆಟ್ಟಲಾಗಿ ಪೀಠಗಳನ್ನು ಇಟ್ಟಿರುವುದುಂಟು. ಈ ಪೀಠಗಳಲ್ಲಿ ಸನ್ನಿಹಿತರಾಗಿರುವ ದೇವತೆಗಳ ಧ್ಯಾನಕ್ಕೇ ಪೀಠಪೂಜೆಯೆಂದು ಹೆಸರು. ಈ ಪೀಠಪೂಜಾ ವಿಧಾನವನ್ನು ಶ್ರೀಮದಾಚಾರ್ಯರು ತಂತ್ರಸಾರದ ಪ್ರಥಮಾಧ್ಯಾಯದಲ್ಲಿ ಸುಮಾರು ಹತ್ತು ಶ್ಲೋಕಗಳಲ್ಲಿ (೩೦-೩೯) ಹೇಳಿದ್ದಾರಾದರೂ ಅದರ ಮಹತ್ವ ಅರ್ಥ ತಿಳಿದುಕೊಂಡರೆ ಮಾತ್ರವೇ ತಿಳಿಯುತ್ತದೆ. ಮಹಾನುಭಾವರಾದ ಶ್ರೀ ಟೀಕಾರಾಯರಂತಹ ಜ್ಞಾನಿಗಳೇ ಈ ಶ್ಲೋಕಗಳ ಬಗ್ಗೆ ತಮ್ಮ 'ಪದ್ಮ-ಮಾಲಾ'ದಲ್ಲಿ (ಶ್ಲೋ. ೩೯) 'ಸೂತ್ರತ್ವಾತ್ ತಸ್ಯ ಬೋಧಾರ್ಥಂ ಕ್ವಚಿದ್ ವಕ್ಷ್ಯಾಮಿ ವಿಸ್ತರಮ್' ಎಂದರೆ ಶ್ರೀಮದಾಚಾರ್ಯರ ಮಾತುಗಳು 'ಸೂತ್ರ'ಪ್ರಾಯವಾಗಿರುತ್ತವೆ. ನೋಡುವುದಕ್ಕೆ ಚಿಕ್ಕವಾಗಿದ್ದರೂ ಬಹಳ ಅರ್ಥಗರ್ಭಿತವಾಗಿರುತ್ತವೆ—ಎಂದು ಪ್ರಶಂಸಿಸಿದ್ದಾರೆ.

ಸಾಮಾನ್ಯವಾಗಿ ಎಲ್ಲರೂ 'ವಿಷ್ಣೋರಾಸನ...' ಎಂಬ ಒಂದು ಶ್ಲೋಕವನ್ನು ಹೇಳಿಕೊಂಡೇ ಈ ಪೀಠಪೂಜೆಯನ್ನು ಮುಗಿಸಿಬಿಡುತ್ತಾರಾದಕಾರಣ ನಾವೂ ಸಹ ಇಲ್ಲಿ ಮೊದಲು ಆ ಸಂಕ್ಷಿಪ್ತ ಪೀಠಪೂಜಾಕ್ರಮವನ್ನು ಹೇಳಿ ಅನಂತರ ತಂತ್ರಸಾರದಲ್ಲಿ ಹೇಳಿದ ವಿಸ್ತಾರವಾದ ಕ್ರಮಕ್ಕೆ ಹೋಗುವುದು ಯುಕ್ತವೆನಿಸುತ್ತದೆ.

ಸಂಕ್ಷಿಪ್ತ ಪೀಠಪೂಜೆ

ಪದ್ಮಮಾಲಾದಲ್ಲಿ 'ತುಲಸೀದಲಯುಕ್ತೇನ ಶಂಖತೋಯೇನ ಪೂಜಕಃ । ಪೂಜಾ-ದ್ರವ್ಯಾಣಿ ಸರ್ವಾಣಿ ಪ್ರೋಕ್ಷ್ಯ ಪೀಠಂ ಪ್ರಪೂಜಯೇತ್ ।' ಎಂದರೆ ಪೂಜೆ ಮಾಡುವ ಅರ್ಚಕನು ಗಂಧಪುಷ್ಪ, ಪಂಚಾಮೃತದ್ರವ್ಯಾದಿ ಸಮಸ್ತ ಪೂಜಾಪರಿಕರಗಳನ್ನೂ ತುಲಸಿ ಸಹಿತ ಶಂಖೋದಕದಿಂದ ಪ್ರೋಕ್ಷಿಸಿ (ಗಂಟೆಯ ಪೂಜೆಯನ್ನೂ ದೀಪದ ಪೂಜೆಯನ್ನೂ ಮಾಡಿದ) ಬಳಿಕ ಪೀಠಪೂಜೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಆದಕಾರಣ ಕಲಶ-ಪೂಜೆ, ಶಂಖಪೂಜೆ, ಪಂಚಪಾತ್ರಪೂಜೆ, ಪಂಚಾಮೃತದ್ರವ್ಯಪೂಜೆಯಂತೆಯೇ ಪೀಠ-ಪೂಜೆಯೂ ಪೂಜೆಯ ಮುಖ್ಯ ಅಂಗವೆಂದು ಅರ್ಥವಾಗುತ್ತದೆ. ಹೆಚ್ಚು ಅವಕಾಶವಿಲ್ಲದಿದ್ದರೆ ಈ ಒಂದು ಶ್ಲೋಕವನ್ನು ಹೇಳಿಕೊಂಡರೂ ಸಾಕು.

ಪೀಠಕ್ಕೆ ವಂದನೆ

ವಿಷ್ಣೋರಾಸನಭೂತಾಯ ದಿವ್ಯರತ್ನಮಯಾಯ ಚ ।
ಪ್ರಧಾನಪುರುಷೇಶಾಯ ಮಹಾಪೀಠಾಯ ತೇ ನಮಃ ॥

(ಅರ್ಥ) ವಿಷ್ಣುವಿನ ಆಸನವು ದಿವ್ಯರತ್ನಗಳಿಂದ ಖಚಿತವಾಗಿದೆ. ಅದಕ್ಕೆ ಅಂಗ-ಅಂಗಕ್ಕೂ ಅನೇಕ ದೇವತಾಧೀಶರು ಅಭಿಮಾನಿಗಳಾಗಿದ್ದಾರೆ. ಅಂಥಾ ಮಹಾಪೀಠಕ್ಕೆ ನಮಸ್ಕಾರ.

ವಿಸ್ತಾರವಾದ ಪೀಠಪೂಜೆ—ತಂತ್ರಸಾರೋಕ್ತವಾದುದು

ಶ್ರೀ ಟೀಕಾರಾಯರೇ ಹೇಳಿದಂತೆ ಶ್ರೀಮದಾಚಾರ್ಯರ ಮಾತುಗಳು ಸೂತ್ರ-ಪ್ರಾಯವಾಗಿರುವುದರಿಂದ ಕೆಳಗೆ ತಂತ್ರಸಾರದ ಮೂಲಶ್ಲೋಕಗಳನ್ನು ಕೊಟ್ಟು ಅನಂತರ ಅದರ ಅರ್ಥವನ್ನು ವಿವರಿಸಿ ಕೊನೆಗೆ ಎಲ್ಲ ವಿಚಾರಗಳನ್ನೂ ಸಂಗ್ರಹಿಸಿ ಹೇಳಲಾಗಿದೆ. ಛಲಾರೀಯ ಟೀಕೆಯಲ್ಲದೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರ 'ತಂತ್ರಸಾರ'ದಿಂದಲೂ ಶ್ರೀ ಪ್ರಭಂಜನರ 'ಪದ್ಮಮಾಲಾ' ಪುಸ್ತಕದಿಂದಲೂ ಹೇರಳವಾಗಿ ಉಪಕಾರವಾಗಿದೆ. ಅದಕ್ಕಾಗಿ ನಾನು ಅವರೆಲ್ಲರಿಗೂ ಕೃತಜ್ಞನಾಗಿದ್ದೇನೆ.

1. ಗುರುಪೂಜಾ ವಿಧಾನ

i) ಆಹ್ನಿಕಮಂಜರಿಯಲ್ಲಿ ಪೀಠಪೂಜೆ ಮಾಡುವುದಕ್ಕೆ ಮುಂಚಿತವಾಗಿಯೇ **'ಪೀಠಪೂಜಾಂ ಕರ್ತುಂ ಗುರ್ವನುಜ್ಞಾಸ್ವೀಕಾರಾರ್ಥಂ ಗುರುಪೂಜಾಂ ಕರಿಷ್ಯೇ'** ಎಂದು ಹೇಳಿಕೊಳ್ಳಬೇಕೆಂದು ಬರೆದಿದ್ದಾರೆ. ಎಂದರೆ 'ಪೀಠಪೂಜೆ ಮಾಡುವುದಕ್ಕೆ ಗುರುಗಳ ಅನುಜ್ಞೆ ಪಡೆಯುವುದಕ್ಕಾಗಿ ಗುರುಪೂಜೆಯನ್ನು ಮಾಡು

ತ್ರೀನ್' ಎಂದು ಸಂಕಲ್ಪ ಮಾಡಿಕೊಂಡು ತನ್ನ ಗುರುಗಳನ್ನು ಮನಸಾ ಸ್ಮರಿಸಿಕೊಂಡು ಅನಂತರ ಪೀಠಪೂಜೆಯನ್ನು ಆರಂಭಿಸಬೇಕು.

ii) ಅಷ್ಟಾಕ್ಷರೇಣ ಸಂಪೂಜ್ಯ ಪ್ರಥಮಂ ದೇವತಾಂ ಪರಾನ್। ಮಧ್ಯೇ

ಯಾವ ಸ್ಥಳದಲ್ಲಿ ದೇವರನ್ನು ಸ್ಥಾಪಿಸಬೇಕೋ (ಇಡಬೇಕೋ) ಆ ಸ್ಥಳದ ಮಧ್ಯದಲ್ಲಿ ಮುಖ್ಯದೇವತೆಯಾದ ಶ್ರೀಮನ್ನಾರಾಯಣನನ್ನು ಅಷ್ಟಾಕ್ಷರಮಂತ್ರದಿಂದ (ಮೂಲಮಂತ್ರದಿಂದ) ಪೂಜಿಸಬೇಕು. ಎಂದರೆ 'ಪೀಠಮಧ್ಯೇ ಪರದೇವತಾಯೈ ಶ್ರೀ-ಲಕ್ಷ್ಮೀನಾರಾಯಣಾಯ ನಮಃ। ಓಂ ನಮೋ ನಾರಾಯಣಾಯ।' ಎಂದು ಹೇಳಿ ಒಂದು ದಳ ತುಳಸಿಯನ್ನು ಅಥವಾ ಒಂದು ಹೂವನ್ನು ಹಾಕಿ ಕೈಮುಗಿಯಬೇಕು. ಅಥವಾ ಹೀಗೆ ಹೇಳಿ ಕೈಮುಗಿಯಬೇಕು.

iii) ಸವ್ಯೇ ಗುರೂಂಶ್ಚೈವ (ಸಂಪೂಜ್ಯ)

ಹೀಗೆ ಪೀಠದ ಮಧ್ಯದಲ್ಲಿ ಶ್ರೀ ನಾರಾಯಣನನ್ನು ಧ್ಯಾನಿಸಿ ಆ ಪೀಠದ ಎಡಭಾಗದಲ್ಲಿ (ಎಂದರೆ ಪೂಜೆ ಮಾಡುವವನ ಬಲಭಾಗದ ಪಕ್ಕದಲ್ಲಿ) ಗುರುಗಳನ್ನು ಪೂಜಿಸಬೇಕು ಎಂಬುದು ಪದಶಃ ಅರ್ಥ. ಗುರುಗಳು ಎಂದರೆ ಮುಖ್ಯಪ್ರಾಣದೇವರೆಂದೇ ಅರ್ಥ; ಆದರಾರ್ಥದಲ್ಲಿ ಬಹುವಚನ ಬಂದಿದೆ. (ಗುರೂನ್- ಆದ್ಯಗುರೂನ್ ಮುಖ್ಯವಾಯುಂ। ಬಹುವಚನಂ ತು ಸರ್ವಗುರುತ್ವಾದೇವ। ಎಂದು ಛಲಾರೀ ಟೀಕೆಯಲ್ಲಿ ಹೇಳಿದೆ.) ಇದಕ್ಕೆ 'ಪಾದ್ಮತಂತ್ರ'ವೆಂಬ ಗ್ರಂಥದ 'ಅರ್ಚಯೇದ್ ಗಂಧಪುಷ್ಪಾದ್ಯೈಃ ಪೀಠಪಾರ್ಶ್ವೇ ತು ಸವ್ಯಕೇ। ವಾಯುಮಾದ್ಯಗುರುಂ ಲೋಕೇ' ಎಂಬ ಮಾತು ಪರಿಪೋಷಕವಾಗಿದೆ.

iv) ದಕ್ಷಿಣೇ ಸರ್ವದೇವತಾಃ ॥ (ಸಂಪೂಜ್ಯ) (೫೦)

ಪೀಠಮಧ್ಯದಲ್ಲಿ ಧ್ಯಾನಿಸಿದ ಆ ನಾರಾಯಣನ ಬಲಭಾಗದಲ್ಲಿ (ಎಂದರೆ ಅರ್ಚಕನ ಎಡಭಾಗದ ಪಕ್ಕದಲ್ಲಿ) ಸಕಲ ದೇವತೆಗಳನ್ನೂ ಪೂಜಿಸಬೇಕು ಎಂಬುದು ಪದಶಃ ಅರ್ಥ. ಇಲ್ಲಿ ಸರ್ವದೇವತೆಗಳೆಂದರೆ ಯಾರು ಎಂಬ ಬಗ್ಗೆ ಎರಡು ಪಕ್ಷವಿದೆ; ಎರಡಕ್ಕೂ ಸಂವಾದಿಯಾದ ಪ್ರಮಾಣಗಳಿವೆ. ಒಂದನೇ ಪಕ್ಷದಂತೆ ಬ್ರಹ್ಮ ವಿಷ್ಣು ಮಾಹೇಶ್ವರರೆಂಬ ತ್ರಿಮೂರ್ತಿಗಳು ಎಂದರ್ಥ. ಏಕೆಂದರೆ ಈ ತ್ರಿಮೂರ್ತಿಗಳಲ್ಲೇ ಸಕಲ ದೇವತೆಗಳೂ ಅಡಗಿದ್ದಾರೆಂದು ಅಭಿಪ್ರಾಯವೆಂದು ಕಾಣುತ್ತದೆ. ಇದಕ್ಕೆ ಪಾದ್ಮತಂತ್ರದ 'ಪೀಠಪಾರ್ಶ್ವೇ ತು ದಕ್ಷಿಣೇ। ಬ್ರಹ್ಮಾಣಂ ವಿಷ್ಣುಮೀಶಂ ಚ ಸಮಾರಾಧ್ಯ [ತಥೋತ್ತರೇ]' ಎಂಬ ಮಾತು ಸಂವಾದಿಯಾಗಿದೆ.

ಎರಡನೇ ಪಕ್ಷದಂತೆ ಬ್ರಹ್ಮರುದ್ರೇಂದ್ರಾದಿ ಸಕಲ ದೇವತೆಗಳನ್ನೂ ಗ್ರಹಿಸಬೇಕು. ಆಚಾರ್ಯರ 'ಸರ್ವದೇವತಾಃ' ಎಂಬ ಮಾತಿನ ಧೋರಣೆಯನ್ನು ನೋಡಿದರೆ ಎರಡನೇ

ಪಕ್ಷವೇ ಹೆಚ್ಚು ಸಂಗತವೆಂದು ಕಾಣುತ್ತದೆ. ಅಲ್ಲದೆ ವಿಷ್ಣುತೀರ್ಥರೂ ಸಹ ‘ ಮಧ್ಯೇ ನಾರಾಯಣಂ ದೇವಂ ಪೂಜಯೇದ್ ವಾಮತೋ ಗುರೂನ್। ದಕ್ಷಿಣೇ ದೇವತಾಃ ಸರ್ವಾಃ’ ಎಂದು ಹೇಳಿರುವುದೂ ಸಹ ಮೊದಲನೆಯ ಪಕ್ಷಕ್ಕಿಂತ ಎರಡನೆಯ ಪಕ್ಷದ ಕಡೆಗೇ ವಾಲುವಂತೆ ತೋರುತ್ತದೆ. ‘ಪೂಜಾಕಲ್ಪಲತಾ’ ಎಂಬ ಗ್ರಂಥದಲ್ಲಿ ಎರಡು ಪಕ್ಷಗಳಿಗೂ ಮಧ್ಯಸ್ಥಿಕೆಯಾಗಿ ‘ದಕ್ಷಿಣೇ ಸರ್ವದೇವತಾಭ್ಯೋ ನಮಃ’ ಎಂದು ಹೇಳಿದ್ದಾರೆ. ಪಕ್ಷಗಳು ಭಿನ್ನವಾದರೂ ಒಟ್ಟು ಭಾವ ಒಂದೇ.

v) ಪುನಃ ಸವ್ಯೇ ಸರ್ವಗುರೂನ್ (ಸಂಪೂಜ್ಯ)।

ಮತ್ತೆ ಪುನಃ ಎಡಭಾಗದಲ್ಲಿಯೇ ಸಕಲ ಗುರುಗಳನ್ನೂ ಪೂಜಿಸಬೇಕು ಎಂಬುದು ಆಪಾತತಃ ಅರ್ಥ. ಇಲ್ಲಿಯೂ ಸಹ ‘ಸರ್ವಗುರು’ಗಳು ಯಾರೆಂಬ ಬಗ್ಗೆ ಎರಡು ಭಿನ್ನಾಭಿಪ್ರಾಯಗಳಿವೆ. ಸರ್ವಗುರುಗಳೆಂದರೆ ನಮ್ಮ ಸಿದ್ಧಾಂತದಂತೆ ಪರಮಹಂಸರೆಂಬ ಯೋಗಿವರ್ಯರ ಅನಾದಿಪರಂಪರೆಗೇ ಮೂಲಭೂತರಾದ, ಬ್ರಹ್ಮನ ಮಾನಸಪುತ್ರರಾದ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರೆಂಬ ನಾಲ್ವರು ಮಾತ್ರವೇ ಗ್ರಾಹ್ಯರೆಂಬುದು ಪ್ರಥಮಪಕ್ಷ. ಇದಕ್ಕೆ ಪುನಃ ಪಾದ್ಮತಂತ್ರದ ‘ಪೀಠಪಾರ್ಶ್ವೇ ತು ದಕ್ಷಿಣೇ। ಬ್ರಹ್ಮಾಣಂ ವಿಷ್ಣುಮೀಶಂ ಚ ಸಮಾರಾಧ್ಯ, ತಥೋತ್ತರೇ। ‘ಸನತ್ಕುಮಾರಂ ಸನಕಂ ಸನಂದನ ಸನಾತನೌ।’ ಎಂಬ ಮಾತು ಸಂವಾದಿಯಾಗಿದೆ.

‘ಸರ್ವ’ ಎಂದು ಹೇಳಿದ್ದರಿಂದ ‘ಎಲ್ಲ ಗುರುಗಳನ್ನೂ ಧ್ಯಾನಿಸಬೇಕು’ ಎನ್ನುವುದು ಇನ್ನೊಂದು ಪಕ್ಷ. ಛಲಾರೀ ಟೀಕಾಕಾರರೂ ಎರಡು ಪಕ್ಷವನ್ನೂ ಗ್ರಹಣಮಾಡಿದ್ದಾರೆ. ‘ಎರಡನೆಯ ಪಕ್ಷವೇ ಸೊಗಸಾಗಿದೆ’ ಎಂದು ಟಿಪ್ಪಣಿಯವರೂ ‘ಆಚಾರ್ಯರ ಮಾತು ಎರಡನೆಯ ಪಕ್ಷಕ್ಕೇ ಪುಷ್ಟಿಕೊಡುವಂತಿದೆ’ ಎಂದು ಪ್ರಭಂಜನರೂ ಒಪ್ಪುತ್ತಾರೆ. ಇದನ್ನು ಛಲಾರಿಯವರೂ ಪುಷ್ಟೀಕರಿಸುವಂತಿದೆ. ಏಕೆಂದರೆ ‘ಸರ್ವಗುರೂನ್’ ಎಂಬುದಕ್ಕೆ ವ್ಯಾಖ್ಯಾನ ಮಾಡುತ್ತಾ ‘ ಸಾಕ್ಷಾದ್‌ಜ್ಞಾನೋಪದೇಷ್ಟೄನ್ ’ ಎಂದೂ ‘ಅನ್ಯೇಪಿ ಸ್ವಾತ್ಮನೋ ಮುಖ್ಯಾಃ ಕ್ರಮಾದ್ ಗುರವ ಈರಿತಾಃ’ ಇತ್ಯುಕ್ತೋಕ್ತಾನ್ ಎಂದೂ ವಿವರಿಸಿದ್ದಾರೆ. ಎಂದರೆ ತನಗೆ ವಿದ್ಯೆ ಹೇಳಿಕೊಟ್ಟ (ಮಂತ್ರೋಪದೇಶ ಮಾಡಿದ) ಗುರುಗಳನ್ನೂ ಅವರಿಗಿಂತ ಕ್ರಮಕ್ರಮವಾಗಿ ಉತ್ತಮರಾದ ಬ್ರಹ್ಮವಾಯುಗಳವರೆಗಿನ ಸಕಲ ಸ್ವೋತ್ತಮಗುರುಗಳನ್ನೂ—ಹಿಂದೆ ಧ್ಯಾನಮಾಡಿದ ವಾಯುದೇವರ ಎಡಭಾಗದಲ್ಲಿ ಧ್ಯಾನಿಸಬೇಕು ಎಂದು ಎರಡನೇ ಪಕ್ಷದ ಅಭಿಪ್ರಾಯ. ‘ತನಗಿಂತ ಜ್ಞಾನದಲ್ಲಿ ಶ್ರೇಷ್ಠರಾದ ಎಲ್ಲರನ್ನೂ ಕ್ರಮವಾಗಿ ಗುರುಗಳೆಂದು ತಿಳಿಯಬೇಕೆಂ’ದು ತಾತ್ಪರ್ಯ ನಿರ್ಣಯದಲ್ಲಿ (೧ ಅ. ೧೨೫ ಶ್ಲೋ.) ಹೇಳಿರುವ ಪ್ರಕಾರ ‘ಸರ್ವಗುರೂನ್’ ಎಂದರೆ ತನಗಿಂತ ಜ್ಞಾನಿಶ್ರೇಷ್ಠರಾದ ಸಕಲರನ್ನೂ ಪೀಠದ ಎಡಭಾಗದಲ್ಲಿ ಧ್ಯಾನಿಸಬೇಕೆಂದು ಅರ್ಥ.

ಮಧ್ಯೇ ಎಂಬುದಕ್ಕೇ ಅರ್ಥಾಂತರ

i) ನೇ ವಾಕ್ಯದಲ್ಲಿರುವ 'ಮಧ್ಯೇ' ಎಂಬುದಕ್ಕೆ 'ಪೀಠದ ಮಧ್ಯದಲ್ಲಿ' ಎಂದು ಅರ್ಥ ಹೇಳಲಾಗಿತ್ತು. ಮತ್ತೆ ಕೆಲವರು ಈ 'ಮಧ್ಯೇ' ಎಂಬುದಕ್ಕೆ 'ವಕ್ಷ್ಯಮಾಣ ಪೀಠದೇವತಾನಾಂ ಮಧ್ಯೇ, ಸ್ವಪೂಜ್ಯ ಪ್ರತಿಮಾ ಮಧ್ಯೇ ವಾ' ಎಂದು ಅರ್ಥ ಹೇಳುತ್ತಾರೆಂದು ಛಲಾರೀಯ ಟೀಕೆಯಲ್ಲಿ ತೋರಿಸಿದ್ದಾರೆ. ಅದರಂತೆ 'ಮಧ್ಯೇ' ಎಂದರೆ ಮುಂದೆ ಹೇಳಲ್ಪಡುವ ಧರ್ಮ-ಜ್ಞಾನ ವೈರಾಗ್ಯಾದಿ ಪೀಠದೇವತೆಗಳ ಮಧ್ಯದಲ್ಲಿ (ಎಂದರೆ ಆ ದೇವತೆಗಳ ಜೊತೆಯಲ್ಲೇ ಎಂದರ್ಥ, ಅದರ ನಡುವೆ ಎಂದರ್ಥವಲ್ಲ) ಅಥವಾ ತಾನು ಪೂಜಿಸುವ ಪ್ರತಿಮೆಯ ಮಧ್ಯದಲ್ಲಿ (ಇಲ್ಲೂ 'ನಡುವೆ' ಎಂದರ್ಥವಲ್ಲ, ಪ್ರತಿಮೆಯ ಒಂದು ಭಾಗದಲ್ಲಿ) ಎಂದರ್ಥ. ಈ ಪಕ್ಷದಲ್ಲಿ ಪೀಠದ ಎಡಕ್ಕೆ ಬಲಕ್ಕೆ ಎಂಬ ಪ್ರಶ್ನೆ ಬರುವುದಿಲ್ಲ. ಪ್ರತಿಮೆಯ ಎಡ ಮತ್ತು ಬಲಪಾರ್ಶ್ವದಲ್ಲಿ ಎಂದೇ ಅರ್ಥ ಮಾಡಿಕೊಳ್ಳಬೇಕು.

ಅಲ್ಲದೆ 'ಸರ್ವದೇವತಾಃ' ಎಂದರೆ 'ನವಕೋಟಿಸಂಖ್ಯಾಕ ದೇವತಾಃ' ಎಂದೂ, 'ಸರ್ವ ಗುರೂನ್' ಎಂದರೆ 'ಮೂಲಗುರೂನ್ ಸರ್ವಗುರೂನ್' ಎಂದೂ ಅರ್ಥ ಹೇಳಬೇಕು. ಏಕೆಂದರೆ 'ಅನುಜ್ಞಾಂ ಭಕ್ತಿಪೂರ್ವಕಮ್ । ಆದಾಯೇಭ್ಯಃ' ಎಂದು ಹೇಳಿರುವುದರಿಂದ ಎಂದು ತೋರಿಸಿದ್ದಾರೆ. ಸರ್ವದೇವತಾಃ ಎಂದರೆ ಒಂಬತ್ತು ಕೋಟಿ ದೇವತೆಗಳೆಂದು ಗ್ರಹಣ ಮಾಡಬೇಕೆಂದೂ, ಸರ್ವಗುರೂನ್ ಎಂದರೆ ತನ್ನ ಸಾಕ್ಷಾತ್ ಗುರು, ಪರಮ ಗುರು, ಆದಿಗುರು, ಮೂಲಗುರುಗಳು ಮಾತ್ರವಲ್ಲದೆ ಸ್ತೋತ್ತಮರಾದ ಮತ್ತು ಸಂಪ್ರದಾಯಪ್ರವರ್ತಕರಾದ ಸಕಲ ಗುರುಗಳನ್ನೂ ಗ್ರಹಣ ಮಾಡಬೇಕೆಂದೂ ಅರ್ಥ ವಾಯಿತು. ಭಾರತೀ-ಸರಸ್ವತೀ, ಬ್ರಹ್ಮ-ವಾಯು, ಲಕ್ಷ್ಮೀ-ನಾರಾಯಣರು ಇವರಿಷ್ಟು ಮಂದಿಯೂ ದೇವತಾತ್ವೇನ ಗ್ರಹಣ ಮಾಡಿದಾಗಲೂ ಬರುತ್ತಾರೆ. ಮೂಲಗುರುತ್ವೇನ ಗುರುಗಳಾಗಿಯೂ ಎರಡು ವಿವಕ್ಷೆಯಿಂದಲೂ ಬರುತ್ತಾರೆಂಬುದನ್ನೂ ಗಮನಿಸಬೇಕು.

'ಗುರುಪೂಜೆ' ಎಂದರೆ ವಿಶೇಷಾರ್ಥ— ಈ ಪೀಠಪೂಜಾ ಸಂದರ್ಭದಲ್ಲಿ 'ಗುರೂನ್ ಸಂಪೂಜ್ಯ'–'ಗುರುಗಳಿಗೆ ಪೂಜೆ ಮಾಡಿ' ಎಂದರೆ ಷೋಡಶೋಪಚಾರ ಪೂಜೆಯೆಂದರ್ಥವಲ್ಲ; ಪರಂತು 'ಗುರುಪೂಜನಂ ನಾಮ ತದ್ಧ್ಯಾನಮೇವ' ಎಂದರೆ ಆ ಗುರುಗಳನ್ನು ಸ್ಮರಿಸುವಿಕೆ ಎಂದು ಮಾತ್ರವೇ ತಿಳಿಯಬೇಕು. ಸ್ಮರಿಸುವುದಾದರೂ ಹೇಗೆ ಎಂದರೆ —

> ಶ್ವೇತಾಂಬರಧರಾ ಗೌರಾ ಗುರವಃ ಪುಸ್ತಕಾನ್ವಿತಾಃ ।
> ವ್ಯಾಖ್ಯಾನಮುದ್ರಯಾ ಯುಕ್ತಾ ಧ್ಯಾಯಂತೋ ವೈ ನಿಜಂ ಹರಿಮ್ ।
> ಧ್ಯಾತವ್ಯಾಃ ಪೂಜನಾದೌ ಚ ತದ್‌ಜ್ಞಾನಾದ್ ಜ್ಞಾನವಾನ್ ಭವೇತ್ ॥
>
> —ಆಗಮೇ

ಅರ್ಥ : ಆ ಗುರುಗಳೆಲ್ಲರೂ ಬಿಳಿ ಬಟ್ಟೆ ಧರಿಸಿದ್ದಾರೆ, ಬೆಳ್ಳಗಿದ್ದಾರೆ, ಎಲ್ಲರೂ ಎಡಗೈಗಳಲ್ಲಿ ಪುಸ್ತಕಗಳನ್ನು ಹಿಡಿದಿದ್ದಾರೆ. ಬಲಗೈಯಿಂದ ವ್ಯಾಖ್ಯಾನ ಮಾಡುವ ಮುದ್ರೆಯನ್ನು (ಭಂಗಿಯನ್ನು-ಭಾವವನ್ನು) ತೋರಿಸುತ್ತಿದ್ದಾರೆ. ತಮ್ಮ ಅಂತರ್ಯಾಮಿಯಾದ ಭಗವಂತನಲ್ಲಿ ನೆಟ್ಟಮನಸ್ಸುಳ್ಳವರಾಗಿದ್ದಾರೆ. ಈ ರೀತಿ ಆ ಗುರುಗಳನ್ನು ಸ್ಮರಿಸಬೇಕು. ಅವರ ಸ್ಮರಣ ಮಾತ್ರದಿಂದಲೇ ಜ್ಞಾನಲಾಭವಾಗುತ್ತದೆಯೆಂದು ಆಗಮದಲ್ಲಿ ಹೇಳಿದೆ. (ಛಲಾರಿ ಟೀಕೆ)

ಹೇಳಿದ ವಿಚಾರಗಳ ಪುನರಾವೃತ್ತಿ: ಯಾವ ಆಸನದಲ್ಲಿ (ಪೀಠದಲ್ಲಿ) ಪೂಜೆ ಮಾಡಬೇಕಾದ ಮೂರ್ತಿಯನ್ನು ಇಡಬೇಕೋ ಆ ಸ್ಥಳಗಳಲ್ಲಿ ಪೂಜೆ ಮಾಡಬೇಕಾದ ಭಗವನ್ಮೂರ್ತಿಗಳನ್ನು ಇಟ್ಟು ಅವುಗಳ ಮೇಲೆ (ಮಧ್ಯದಲ್ಲಿ) 'ಓಂ ನಮೋ ನಾರಾಯಣಾಯ ಓಂ। ಮಧ್ಯೇ ಪರದೇವತಾಯೈ ಶ್ರೀಲಕ್ಷ್ಮೀನಾರಾಯಣಾಯ ನಮಃ' ಎಂದು ಹೂವನ್ನು ಅಥವಾ ತುಳಸೀದಳವನ್ನು ಹಾಕಿ* ಕೈ ಮುಗಿಯಬೇಕು. ಅನಂತರ ಆ ಪೀಠದ ಹೊರಭಾಗದಲ್ಲಿ (ದೇವರಿಗೆ) ಎಡಪಕ್ಕದಲ್ಲಿ ಮುಖ್ಯಪ್ರಾಣದೇವರನ್ನೂ, ಬಲಭಾಗದಲ್ಲಿ ೧ನೇ ಪಕ್ಷದಂತೆ ಬ್ರಹ್ಮ-ವಿಷ್ಣು-ಮಹೇಶ್ವರರನ್ನೂ ೨ನೇ ಪಕ್ಷದಂತೆ ಬ್ರಹ್ಮರುದ್ರೇಂದ್ರಾದಿ ಒಂಬತ್ತು ಕೋಟಿ ದೇವತೆಗಳನ್ನೂ ಧ್ಯಾನ ಮಾಡಬೇಕು. ಅನಂತರ ಪುನಃ (ದೇವರ) ಎಡಕ್ಕೆ—ಪ್ರಾಣದೇವರ ಎಡಪಾರ್ಶ್ವದಲ್ಲಿ ೧ನೇ ಪಕ್ಷದಂತೆ ಸನಕಾದಿ ನಾಲ್ಕು ಮಂದಿ ಬ್ರಹ್ಮನ ಮಾನಸಪುತ್ರರನ್ನು (ಯೋಗೀಶ್ವರರನ್ನು) ಧ್ಯಾನ ಮಾಡಬೇಕು. ೨ನೇ ಪಕ್ಷದಂತೆ ನಮ್ಮ ವಿದ್ಯಾಗುರುಗಳಿಂದ ಆರಂಭಿಸಿ ಪರಮ ಗುರುಗಳು, ಅವರ ಗುರುಗಳು, ಮತತ್ರಯದ ಗುರುಪರಂಪರೆಯ ಗುರುಗಳು, ಅವರಿಗೆಲ್ಲಾ ಆದಿಗುರುಗಳಾದ ಶ್ರೀಮಧ್ವಾಚಾರ್ಯರು, ಅವರ ಉಪಾಸ್ಯರಾದ ಶ್ರೀ ವೇದವ್ಯಾಸದೇವರು, ಭಾರತ್ಯಾದಿ ನಾರಾಯಣದೇವರ ವರೆಗಿನ ಸಕಲ ಮೂಲಗುರುಗಳು ಎಲ್ಲರೂ (ಮುಖ್ಯಪ್ರಾಣದೇವರ ಎಡಕ್ಕೆ) ಸನ್ನಿಹಿತರಾಗಿದ್ದಾರೆಂದು ಮನಸಾ ಚಿಂತಿಸಿ (ಚಿಂತಿಸುವಾಗ ಅವರೆಲ್ಲ ಪುಸ್ತಕ ಹಿಡಿದಿದ್ದಾರೆಂದೂ, ಉಪದೇಶ ಮಾಡುತ್ತಿದ್ದಾರೆಂದೂ, ಸನ್ಯಾಸಿಗಳಾದವರು ಕಾಷಾಯವಸ್ತ್ರ ಧರಿಸಿದ್ದಾರೆಂದೂ ಧ್ಯಾನಿಸಿ) ಅವರೆಲ್ಲರಿಗೂ ಮನಸಾ ವಂದಿಸಿ 'ಪೀಠಪೂಜೆ ಮಾಡಲು ಅಪ್ಪಣೆಯಾಗಬೇಕು' ಎಂದು ಮನಸ್ಸಿನಲ್ಲೇ ಸ್ಮರಿಸಿಕೊಂಡು ಮುಂದಿನ ಪೀಠಪೂಜಾಕ್ರಮವನ್ನು ಆರಂಭಿಸಬೇಕೆಂದು ಭಾವ.

ಈ ಅನುಸಂಧಾನವು ಮನಸ್ಸಿಗೆ ಹತ್ತುವುದಕ್ಕೆ ಕೆಳಗಿನ ಚಿತ್ರವು ಸಹಾಯ ಮಾಡುವುದೆಂದು ಅಚ್ಚಿಸಲಾಗಿದೆ—

---

* ಪ್ರತಿನಿತ್ಯದ ಪೂಜೆಯಲ್ಲಿ ಪೂಜೆಗೆ ಮಂತ್ರಾಕ್ಷತೆಗಳನ್ನು ಏರಿಸಬಾರದು. ಅದು ನಿಷಿದ್ಧ. ಹೂವು ತುಳಸೀ ಹೆಚ್ಚಿಲ್ಲದಿದ್ದರೆ ಮನಸಾ ಸ್ಮರಣೆ ಮಾಡಿ ಕೈಮುಗಿದರೇ ಸಾಕು.



ಚಿತ್ರ 1—ಗುರುಪೂಜಾವಿಧಾನದ ಚಿತ್ರ

II. ಪೀಠದ ಕೆಳಗಿನ ನಾಲ್ಕು ಕಾಲುಗಳು

(ಅವತಾರಿಕೆ) (ಛಲಾರೀ ಟೀಕೆ) ಗುರ್ವಾಜ್ಞಾ ಸ್ವೀಕಾರಾರ್ಥಂ ಗುರುಪೂಜಾ-ಮುಕ್ತ್ವಾ ಇದಾನೀಂ ಪೀಠಪೂಜಾಮಾಹ । ಪೀಠಪೂಜೆ ಆರಂಭಿಸಲು ಗುರುಗಳ ಆಜ್ಞಾ-ಸ್ವೀಕಾರ ಮಾಡುವುದಕ್ಕೆ ಗುರುಪೂಜಾ ವಿಧಾನವನ್ನು ಹೇಳಿ, (ಅವರೆಲ್ಲರ ಅನುಜ್ಞೆಯನ್ನು ಕೇಳಿಕೊಳ್ಳಬೇಕೆಂದು ಸೂಚಿಸಿ) ಈಗ ಪೀಠಪೂಜಾಕ್ರಮವನ್ನೇ ಆರಂಭಿಸುತ್ತಾರೆ.

ಮೇಜು ಅಥವಾ ಕುರ್ಚಿಯು ನಾಲ್ಕು ಕಾಲುಗಳ ಮೇಲೆ ನಿಂತಿರುವಂತೆಯೇ ದೇವರ ಮಂದಾಸನವೂ (ಪೀಠವೂ) ನಾಲ್ಕು ಕಾಲುಗಳ ಮೇಲೆ ನಿಂತಿರುತ್ತದೆ. ಪೀಠವ ಕೆಳಗಿನ ಈ ನಾಲ್ಕು ಕಾಲುಗಳಲ್ಲಿ ಸನ್ನಿಹಿತರಾಗಿರುವ ದೇವತೆಗಳನ್ನು ಮೊದಲು ಹೇಳುತ್ತಾರೆ. ಇಲ್ಲಿಂದ ಮುಂದೆ ಉದ್ದಕ್ಕೂ ನಾಲ್ಕು ಪಾರ್ಶ್ವ (ಪಕ್ಕ)ಗಳಲ್ಲಿರುವ ದೇವತೆಗಳನ್ನು 'ಪೂರ್ವಾದಿ' ಕ್ರಮದಿಂದ ಹೇಳುತ್ತಾರೆ. ಆದರೆ 'ಪೂರ್ವ' ಯಾವುದೆಂಬುದೇ ಗೊತ್ತಾಗದೆ ಹೋದರೆ ಮಿಕ್ಕದ್ದು ಯಾವುದೂ ತಿಳಿಯುವುದಿಲ್ಲ. ಆದಕಾರಣ ಟೀಕಾಕಾರರು (ಛಲಾರಿ) ಮೊದಲು ದಿಕ್ಕುಗಳ ಪರಿಚಯ ಮಾಡಿಸುತ್ತಾರೆ.

ಪೂರ್ವಾದಿ ದಿಕ್ಕುಗಳ ಪರಿಚಯ

ನರಸಿಂಹಪುರಾಣದಲ್ಲಿ ಈ ದಿಕ್ಕುಗಳನ್ನು ನಿರ್ಧರಿಸುವ ಬಗೆಯನ್ನು ಹೀಗೆ ಹೇಳಿದೆ —

ದೇವಸಾಧಕಯೋರಂತಃ ಪೂರ್ವಾ ಸಾ ದಿಗಿಹೋಚ್ಯತೇ ।

೧) ದೇವರಿಗೂ ಪೂಜೆ ಮಾಡುವ ಅರ್ಚಕನಿಗೂ ಮಧ್ಯೆ ಇರುವ ಭಾಗಕ್ಕೇ ಪೂಜಾ ವಿಧಿಯಲ್ಲಿ ಪೂರ್ವದಿಕ್ಕೆಂದು ವ್ಯವಹಾರ ಮಾಡಲಾಗುತ್ತದೆ.

ದೇವಸ್ಯ ಮುಖಮಾರಭ್ಯ ದಿಶಂ ಪ್ರಾಚೀಂ ಪ್ರಕಲ್ಪಯೇತ್ ।
ತದಾದಿ ಪರಿವಾರಾಣಾ—ಮಂಗಾದ್ಯಾವರಣ ಸಂಸ್ಥಿತಿಃ ।

೨) ದೇವರ ಮುಖವನ್ನೇ ಪೂರ್ವದಿಕ್ಕೆಂದು ಕಲ್ಪಿಸಿಕೊಂಡು ಅದರಿಂದ ದಕ್ಷಿಣಾದಿ ದಿಕ್ಕುಗಳನ್ನೂ ಆಗ್ನೇಯಾದಿ ಮೂಲೆಗಳನ್ನೂ ಊಹಿಸಿಕೊಳ್ಳಬೇಕು—ಎಂದು ನರ-

ಸಿಂಹಪುರಾಣದಲ್ಲಿ ಹೇಳಿರುವುದರಿಂದ ದೇವರ ಮುಂಭಾಗವೇ ಪೂರ್ವದಿಕ್ಕು; ಹಿಂದಿನ ಭಾಗವೇ ಪಶ್ಚಿಮ. ದೇವರ ಬಲಭಾಗ (ಅರ್ಚಕನ ಎಡಭಾಗ)ವೇ ದಕ್ಷಿಣ; ಎಡಭಾಗ (ಅರ್ಚಕನ ಬಲಭಾಗ) ಉತ್ತರ. ಪೂರ್ವಾದಿ ದಿಕ್ಕುಗಳು ನಿರ್ಧಾರವಾದ್ದರಿಂದ ಅಗ್ನೇಯಾದಿ ಮೂಲೆಗಳನ್ನು ಗುರುತಿಸುವುದೂ ಸುಲಭ. ಕೆಳಗಿನ ಚಿತ್ರವು ನಾಲ್ಕು ದಿಕ್ಕುಗಳನ್ನೂ ನಾಲ್ಕು ಮೂಲೆಗಳನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ—

ನೈಋರ್ತ್ಯ	ಪಶ್ಚಿಮ	ವಾಯುವ್ಯ
ದಕ್ಷಿಣ	□ ದೇವರು ಮುಖ	ಉತ್ತರ
ಅಗ್ನೇಯ	ಪೂರ್ವ	ಈಶಾನ್ಯ

ಚಿತ್ರ 2—ದಿಕ್ಕುಗಳು ಮತ್ತು ಮೂಲೆಗಳು

ಕೆಳಗಿನ ನಾಲ್ಕು ಕಾಲುಗಳಲ್ಲಿ ಯಾವಯಾವ ದೇವತೆಗಳನ್ನು ಧ್ಯಾನ ಮಾಡಬೇಕೆಂದರೆ—

.. .. ಅಗ್ನೇಯಾದಿಷು ಚ ಕ್ರಮಾತ್ ।
ಗರುಡಂ ವ್ಯಾಸದೇವಂ ಚ ದುರ್ಗಾಂ ಚೈವ ಸರಸ್ವತೀಮ್ ॥ ೫೧ ॥

ಸೂಚನೆ— ಈ ಶ್ಲೋಕಗಳಲ್ಲಿರುವ 'ಗರುಡಂ ವ್ಯಾಸದೇವಂ' ಮೊದಲಾದ ದ್ವಿತೀಯಾ ವಿಭಕ್ತಿಗಳಿಗೆ ಮುಂದಿನ (೫೨ನೇ) ಶ್ಲೋಕದಲ್ಲಿರುವ 'ಪೂಜಯೇತ್' ಎಂಬ ಕ್ರಿಯೆಯೊಡನೆ ಅನ್ವಯ ಹೇಳಬೇಕು.

(ಅರ್ಥ) ಕೆಳಗಿನ ನಾಲ್ಕು ಕಾಲುಗಳಲ್ಲಿ ಅಗ್ನೇಯದಲ್ಲಿರುವುದರಲ್ಲಿ ಗರುಡನೂ, ನೈಋರ್ತ್ಯದಲ್ಲಿರುವುದರಲ್ಲಿ ವೇದವ್ಯಾಸದೇವರೂ, ವಾಯುವ್ಯದಲ್ಲಿ ದುರ್ಗಾದೇವಿಯೂ, ಈಶಾನ್ಯದಲ್ಲಿ ಸರಸ್ವತಿಯೂ ಸನ್ನಿಹಿತರಾಗಿರುವರೆಂದು ಅರ್ಚಿಸಬೇಕು. ಮತ್ತು ಅವರಿಗೆ ವಂದಿಸಬೇಕು.

ವಿವರಣೆ— ಪೀಠದ ಮುಂಭಾಗದಲ್ಲಿ (ನಮಗೆ ಎಡಗಡೆ ಇರುವ) ಅಗ್ನೇಯಮೂಲೆಯಲ್ಲಿರುವ ಮಣೆಯ ಕಾಲಿನಲ್ಲಿ ಗರುಡನೂ, ಅದರ ಹಿಂದೆ ಇರುವ ನೈಋರ್ತ್ಯದ ಕಾಲಿನಲ್ಲಿ ವೇದವ್ಯಾಸದೇವರೂ, ಹಿಂದುಗಡೆಯ ಇನ್ನೊಂದು ಮೂಲೆಯಲ್ಲಿ (ವಾಯುವ್ಯದಲ್ಲಿ) ದುರ್ಗಾದೇವಿಯೂ, ಮುಂಭಾಗದಲ್ಲಿ (ನಮಗೆ ಬಲಕ್ಕೆ ಇರುವ ಮೂಲೆಯಲ್ಲಿ—ಎಂದರೆ) ಈಶಾನ್ಯದಲ್ಲಿ ಸರಸ್ವತೀದೇವಿಯೂ ಸನ್ನಿಹಿತರಾಗಿರುವರು. ಇವರಿಗೆಲ್ಲಾ ಕ್ರಮವಾಗಿ 'ನಮಃ', 'ನಮಃ' ಎಂದು ಹೇಳಿಕೊಂಡುಹೋಗಬೇಕೆಂದು ಭಾವ.

III. ಪೀಠದ ಮೇಲ್ಭಾಗದ ಹಲಗೆಯಲ್ಲಿ

ನಾಲ್ಕು ಕಾಲುಗಳೂ ಯಾವ ಪೀಠದ ಅಡಿಭಾಗವನ್ನು ಹೊತ್ತಿರುತ್ತವೋ ಆ ಭಾಗದ ದೇವತೆಗಳನ್ನು ಹೇಳುತ್ತಾರೆ. ಈ ಮೇಲ್ಭಾಗದಲ್ಲಿ ಪುನಃ ಎರಡು ಭಾಗ ಮಾಡಿಕೊಂಡು ಮೊದಲು ನಾಲ್ಕು ಮೂಲೆಗಳಲ್ಲಿರುವ ದೇವತೆಗಳನ್ನು ಹೇಳಿ ಅನಂತರ ನಾಲ್ಕು ಮಧ್ಯದ (ಮುಖ್ಯ) ದಿಕ್ಕುಗಳಲ್ಲಿರುವ ದೇವತೆಗಳನ್ನು ಹೇಳುತ್ತಾರೆ—

ಧರ್ಮಂ ಜ್ಞಾನಂ ಚ ವೈರಾಗ್ಯ—ಮೈಶ್ವರ್ಯಂ ಚೈವ ಕೋಣಗಾನ್ ।

ಪೀಠದ ಕೆಳದಿಂಡಿನ ಆಗ್ನೇಯ ಮೂಲೆಯಲ್ಲಿ ಧರ್ಮಾಧಿಪತಿಯನ್ನೂ, ನೈರುತ್ಯ ಮೂಲೆಯಲ್ಲಿ ಜ್ಞಾನಾಧಿಪತಿಯನ್ನೂ, ವಾಯವ್ಯ ಮೂಲೆಯಲ್ಲಿ ವೈರಾಗ್ಯಾಧಿಪತಿಯನ್ನೂ, ಈಶಾನ್ಯದಲ್ಲಿ ಐಶ್ವರ್ಯಾಧಿಪತಿಯನ್ನೂ ಪೂಜಿಸಬೇಕು ಅರ್ಥಾತ್ ಧ್ಯಾನಿಸಬೇಕು. ಈ ಅಧಿಪತಿಗಳ ಹೆಸರನ್ನು ಮುಂದೆ ಆಚಾರ್ಯರೇ ಹೇಳುವವರಿದ್ದಾರೆ. ಆ ದೇವತೆಗಳ ಹೆಸರು ತಿಳಿದ ಬಳಿಕ ಅವರ ರೂಪವಿಶೇಷಗಳು ಹೇಗಿರುತ್ತವೆಯೆಂಬುದನ್ನು ಪ್ರಮಾಣಾಂತರವು ತಿಳಿಸುತ್ತದೆ; ಅದನ್ನೂ ಅಲ್ಲೇ ಹೇಳುವೆವು.

ತದಂತಃ ಪೂರ್ವದಿಕ್-ಪೂರ್ವ—ಮಧರ್ಮಾದೀಂಶ್ಚ ಪೂಜಯೇತ್ ॥೫೨॥

ತದಂತಃ ಎಂದರೆ ಆ ಎರಡೆರಡು ಮೂಲೆಗಳ ಮಧ್ಯದಲ್ಲಿರುವ, ಪೂರ್ವದಿಕ್-ಪೂರ್ವಂ-ಪೂರ್ವಾದಿ ನಾಲ್ಕು (ಮುಖ್ಯ) ದಿಕ್ಕುಗಳಲ್ಲಿ; ಎಂದರೆ ಈಶಾನ್ಯ-ಆಗ್ನೇಯಗಳ ಮಧ್ಯದಲ್ಲಿರುವ ಪೂರ್ವದಿಕ್ಕು, ಆಗ್ನೇಯ-ನೈರುತ್ಯಗಳ ಮಧ್ಯೆ ದಕ್ಷಿಣದಿಕ್ಕು, ನೈರುತ್ಯ ವಾಯವ್ಯಗಳ ಮಧ್ಯೆ ಪಶ್ಚಿಮದಿಕ್ಕು, ವಾಯುವ್ಯ ಈಶಾನ್ಯಗಳ ಮಧ್ಯೆ ಉತ್ತರದಿಕ್ಕು.

ಈ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಅಧರ್ಮ ಮೊದಲಾದ ನಾಲ್ಕು ವಿರುದ್ಧ ಗುಣಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಧ್ಯಾನಿಸಬೇಕು. ಅರ್ಥಾತ್ ಪೂರ್ವದಲ್ಲಿ ಅಧರ್ಮಾಧಿಪತಿಯನ್ನೂ ದಕ್ಷಿಣದಲ್ಲಿ ಅಜ್ಞಾನಾಧಿಪತಿಯನ್ನೂ ಪಶ್ಚಿಮದಲ್ಲಿ ಅವೈರಾಗ್ಯಾಧಿಪತಿಯನ್ನೂ ಉತ್ತರದಲ್ಲಿ ಅನೈಶ್ವರ್ಯಾಧಿಪತಿಯನ್ನೂ ಅರ್ಚಿಸಬೇಕು (ಧ್ಯಾನಿಸಬೇಕು) ಎಂದರ್ಥ.

ಅಧರ್ಮ ಅಜ್ಞಾನಾದಿ ಅಭಿಮಾನಿದೇವತೆಗಳನ್ನು ಪೂಜಿಸಬೇಕೆಂದು ಹೇಳಿದಕಾರಣ ಸಾಮಾನ್ಯವಾಗಿ ನಮಗೆ ಬರುವ ಒಂದು ಸಂಶಯವನ್ನು ಛಲಾರೀ ಟೀಕಾಕಾರರೇ ತೋರಿಸುತ್ತಾರೆ—ಧರ್ಮ ಜ್ಞಾನಾದಿಗಳು ನಮಗೆ ಅತ್ಯವಶ್ಯಕವಾಗಿ ಬೇಕಾಗಿರುವುದರಿಂದ ಆಯಾ ಅಭಿಮಾನಿ ದೇವತೆಗಳನ್ನು ಪೂಜಿಸುವುದೇನೋ ಯುಕ್ತವಾಗಿದೆ. ಅಧರ್ಮಾದಿಗಳು ವರ್ಜ್ಯವಾದ್ದರಿಂದ ಆ ದೇವತೆಗಳನ್ನು ಪೂಜಿಸುವುದು ಹೇಗೆ ಯುಕ್ತವಾಗುತ್ತದೆ? ಎಂದು ಸಂದೇಹ ಬಂದರೆ ಅದರ ಪರಿಹಾರಕ್ಕಾಗಿ ಆಚಾರ್ಯರು ವಿವರಣೆ ಹೇಳುತ್ತಾರೆ—

ಅಪೂಜಿತಾ ಅಧರ್ಮಾದಿ—ದಾತಾರಸ್ತೇ ತಥಾಽಭಿಧಾಃ ।

ಅಧರ್ಮ ಅಜ್ಞಾನಾದಿ ನಾಲ್ಕು ಧರ್ಮ(ಗುಣ)ಗಳಿಗೆ ಅಭಿಮಾನಿಗಳಾದ ಈ ದೇವತೆಗಳನ್ನು ಪೂಜಿಸದೇ ಹೋದರೆ ಅವರು ನಮಗೆ ಅಧರ್ಮ ಅಜ್ಞಾನಾದಿಗಳನ್ನೇ ಕೊಡುವರು. ಅದ್ದರಿಂದಲೇ ಅವರಿಗೆ ಅಜ್ಞಾನಾದಿ ಹೆಸರುಗಳು ಬಂದಿವೆ. ಏವಂ ಚ ಅಧರ್ಮ ಅಜ್ಞಾನಾದಿ "ದೋಷಗಳ ನಿವಾರಣೆಗಾಗಿಯೇ" ಅಧರ್ಮಾದ್ಯಭಿಮಾನಿ ದೇವತೆಗಳನ್ನು ಧ್ಯಾನಮಾಡಬೇಕೆಂದು ಹೇಳಿದಂತಾಯಿತು.

ಅಧರ್ಮಾದಿಗಳ ಅಭಿಮಾನಿಗಳು ಯಾರೆಂದರೆ ಕ್ರಮವಾಗಿ ಅವರ ಹೆಸರನ್ನು ಹೇಳುತ್ತಾರೆ—

ನಿರ್ಋತಿಶ್ಚೈವ ದುರ್ಗಾ ಚ ಕಾಮೋ ರುದ್ರಶ್ಚ ದೇವತಾಃ ॥ ೫೩ ॥

೧) ಅಧರ್ಮಾಧಿಪತಿಯು ನಿರ್ಋತಿ, ೨) ಅಜ್ಞಾನಾಧಿಪತಿ ದುರ್ಗಾದೇವಿ, ೩) ಅವೈರಾಗ್ಯಾಧಿಪತಿ ಕಾಮ (ಮನ್ಮಥ), ಮತ್ತು ೪) ಅನೈಶ್ವರ್ಯಾಧಿಪತಿ ರುದ್ರದೇವರು.

ಅಧರ್ಮಾದ್ಯಭಿಮಾನಿ ದೇವತೆಗಳನ್ನು ಹೇಳಿದ ಬಳಿಕ ಪ್ರಸಂಗಾತ್ ಧರ್ಮಾದಿ ಅಭಿಮಾನಿದೇವತೆಗಳನ್ನೂ ಹೇಳುತ್ತಾರೆ—

ಯಮಾ ವಾಯು ಶಿವೇಂದ್ರಾಶ್ಚ ಜ್ಞೇಯಾ ಧರ್ಮಾದಿದೇವತಾಃ ।

೧) ಯಮಧರ್ಮನು ಧರ್ಮಾಭಿಮಾನಿದೇವತೆ. ೨) ಮುಖ್ಯವಾಯುವು ಜ್ಞಾನಾಭಿಮಾನಿದೇವತೆ. ೩) ಶಿವನು (ಮಹದೇವರು) ವೈರಾಗ್ಯಾಭಿಮಾನಿದೇವತೆ, ಮತ್ತು ೪) ದೇವೇಂದ್ರನು ಐಶ್ವರ್ಯಾಭಿಮಾನಿದೇವತೆ. ಈ ದೇವತೆಗಳು ಕ್ರಮವಾಗಿ ಆಗ್ನೇಯಾದಿ ನಾಲ್ಕು ಮೂಲೆಗಳಲ್ಲಿ ಪೀಠದ ಹಲಗೆಯ ಮೇಲ್ಭಾಗದಲ್ಲಿರುತ್ತಾರೆಂದು ತಿಳಿದು ಪೂಜಿಸಬೇಕು. ಈ ನಾಲ್ಕು ದೇವತೆಗಳು ಹೇಗಿರುತ್ತಾರೆಂಬ ವಿವರವನ್ನು 'ಗುರ್ವರ್ಥದೀಧಿತಿ' ಎಂಬ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆಯೆಂದು ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲಿ ಕೊಟ್ಟಿದೆ—

ಧರ್ಮಂ ವೃಷತನುಂ ರಕ್ತವರ್ಣಮಾದೌ ಪ್ರಪೂಜಯೇತ್ ।

ಧರ್ಮಾಭಿಮಾನಿಯಾದ ಯಮಧರ್ಮನು ಎತ್ತಿನ (ವೃಷಭ) ಆಕಾರವಾಗಿದ್ದಾನೆ. ಕೆಂಪುಬಣ್ಣದ ಎತ್ತಿನಂತೆ ಇರುತ್ತಾನೆಂದು ತಿಳಿದು ಪೂಜಿಸಬೇಕು.

ಸಿಂಹಾಕಾರಂ ತತೋ ಜ್ಞಾನಂ ಶ್ಯಾಮವರ್ಣಂ ಸಮಾಹಿತಃ ।

(ಸಮಾಹಿತಃ ಎಂದರೆ ಸಮಾಧಾನವಾದ ಮನಸ್ಸುಳ್ಳವನಾಗಿ ಎಂಬುದು ಅರ್ಚಕನ ವಿಶೇಷಣ) ಪೂಜಯೇತ್ ಎಂಬುದರೊಡನೆ ಅನ್ವಯ. ಸಮಾಧಾನ ಮನಸ್ಸಿನಿಂದ ತಿಳಿದು ಪೂಜಿಸಬೇಕೆಂದು ವಾಕ್ಯದ ಅನ್ವಯ.

ಜ್ಞಾನಾಭಿಮಾನಿಯಾದ ಮುಖ್ಯಪ್ರಾಣ ಸಿಂಹಾಕಾರವಾಗಿದ್ದಾನೆಂದೂ ಶ್ಯಾಮವರ್ಣವುಳ್ಳವನೆಂದೂ ತಿಳಿದು ಸಮಾಧಾನಚಿತ್ತದಿಂದ ಅರ್ಚಿಸಬೇಕು.

ಭೂತಾಕಾರಂ ಚ ವೈರಾಗ್ಯಂ ಪೀತವರ್ಣಂ ಯಜೇತ್ ತತಃ ।

ವೈರಾಗ್ಯಾಧಿಪತಿಯಾದ ಮಹದೇವರು (ಶಿವನು) ಭೂತಾಕಾರ ಧರಿಸಿದ್ದಾನೆಂದೂ, ಹಳದೀಬಣ್ಣವುಳ್ಳವನೆಂದೂ ತಿಳಿದು ಪೂಜಿಸಬೇಕು.

ಕೃಷ್ಣವರ್ಣಂ ಗಜಾಕಾರ—ಮೈಶ್ವರ್ಯಂ ಸಾಧು ಪೂಜಯೇತ್ ।

ಐಶ್ವರ್ಯಾಧಿಪತಿಯಾದ ದೇವೇಂದ್ರನು ಕರೀ (ಕಪ್ಪು) ಬಣ್ಣದ ಆನೆಯ ರೂಪ ಧರಿಸಿದ್ದಾನೆಂದು ತಿಳಿದು ಪೂಜಿಸಬೇಕು.

ಸಂವಾದಿ ಪ್ರಮಾಣಾಂತರಗಳು— ತಂತ್ರಸಾರದಲ್ಲಿ ಹೇಳಿದ ಮೇಲಿನ ವಿಚಾರಗಳೇ ಗ್ರಂಥಾಂತರಗಳಲ್ಲೂ ಉಕ್ತವಾಗಿವೆ. ಕೆಲವನ್ನು ಶ್ರೀ ಪ್ರಭಂಜನರು ತಮ್ಮ 'ಪದ್ಯ-ಮಾಲಾ'ದಲ್ಲಿ ಉದಹರಿಸಿದ್ದಾರೆ. ಕೆಳಗೆ ಉದ್ಧರಣಗಳನ್ನೂ ಅವುಗಳ ಅರ್ಥವನ್ನೂ ಕೊಟ್ಟಿದೆ.

I. ವಿಷ್ಣುತೀರ್ಥೀಯ, III-95

ಧರ್ಮಾದಯಃ ಪಾದರೂಪಾ ಪೀಠಸ್ಯ ಫಲಕಾಃ ಪರೇ ।

ಪೀಠಕ್ಕೆ ಕಾಲಿನಂತಿರುವ (ಎಂದರೆ ಅಡಿಭಾಗವಾದ) ಹಲಗೆಯ ಮೇಲ್ಭಾಗದಲ್ಲಿರುವ ರೂಪಗಳೇ ಧರ್ಮಾದಿಗಳು.

II. ಯೋಗದೀಪಿಕಾ, III, 11-12

ಅಗ್ನ್ಯಾದಿಕೋಣಗಾನಾಂ ಚೇತ್ ಪೀಠಪಾದಪದಾಸ್ಥಿತಾನ್ ।

ವಿಪಶ್ಚಿದ್ ಗರುಡಂ ವ್ಯಾಸಂ ದುರ್ಗಾಂ ಚೈವ ಸರಸ್ವತೀಮ್ ॥

(ವಿಪಶ್ಚಿತ್-ಜ್ಞಾನಿಯಾದವನು, ಪೂಜಯೇತ್ ಎಂಬುದರೊಡನೆ ಅನ್ವಯವಾಗುತ್ತದೆ. ಪೂಜೆ ಮಾಡುವವನು ಈ ರೀತಿ ತಿಳಿದುಕೊಂಡು ಪೂಜಿಸಬೇಕೆಂದು ಅಭಿಪ್ರಾಯ.)

ಪೀಠದ ಕೆಳಗಡೆಯ ನಾಲ್ಕು ಕಾಲುಗಳಲ್ಲಿ ಅಗ್ನೇಯಾದಿ ನಾಲ್ಕು ಮೂಲೆಗಳಲ್ಲಿ ಕ್ರಮವಾಗಿ ಗರುಡನೂ ವೇದವ್ಯಾಸರೂ ದುರ್ಗಾದೇವಿಯೂ ಸರಸ್ವತಿಯೂ ಸನ್ನಿಹಿತರಾಗಿದ್ದಾರೆಂದು ತಿಳಿದು ಅರ್ಚಿಸಬೇಕು.

ಧರ್ಮಂ ಜ್ಞಾನಂ ಚ ವೈರಾಗ್ಯ—ಮೈಶ್ವರ್ಯಂ ಚ ತತಃ ಪರಮ್ ।

ತನ್ಮೂರ್ಧಗಾನ್..................ಫಲಕಾಶ್ರಯಾನ್ ॥

ಕೆಳಗಿನ ನಾಲ್ಕು ಕಾಲುಗಳ ಮೇಲೆ ಕುಳಿತಿರುವ ಹಲಗೆಯ ಮೇಲ್ಭಾಗದ ನಾಲ್ಕು (ಅಗ್ನೇಯಾದಿ) ಮೂಲೆಗಳಲ್ಲಿ ಕ್ರಮವಾಗಿ ಧರ್ಮ ಜ್ಞಾನ ವೈರಾಗ್ಯ ಮತ್ತು ಐಶ್ವರ್ಯಗಳ ಅಭಿಮಾನಿದೇವತೆಗಳು (ಎಂದರೆ ಯಮ, ವಾಯು, ಶಿವ, ಇಂದ್ರರು) ಸನ್ನಿಹಿತರಾಗಿದ್ದಾರೆಂದು ತಿಳಿದು ಅವರನ್ನು ಅರ್ಚಿಸಬೇಕು.

......ಅಧರ್ಮಾದೀನ್ ಪೂರ್ವಾದೌ ಫಲಕಾಶ್ರಯಾನ್ ॥

ಮತ್ತು ಅದೇ ಮೇಲುಹಲಗೆಯ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಅಧರ್ಮ, ಅಜ್ಞಾನ, ಅವೈರಾಗ್ಯ ಮತ್ತು ಅನೈಶ್ವರ್ಯಗಳಿಗೆ ಅಭಿಮಾನಿಗಳಾದ ನಿರ್ಋತಿ ದುರ್ಗಾ ಕಾಮ ಮತ್ತು ರುದ್ರರು ಸನ್ನಿಹಿತರಾಗಿರುವರೆಂದು ತಿಳಿದು ಅವರನ್ನು (ಈ ನಾಲ್ಕು ದೋಷಗಳ ನಿವಾರಣಾರ್ಥ) ಪೂಜಿಸಬೇಕು.

III. ಅಗ್ನಿಪುರಾಣದಿಂದ (23 ಅಧ್ಯಾಯ)

ಧರ್ಮಂ ಜ್ಞಾನಂ ಚ ವೈರಾಗ್ಯ—ಮೈಶ್ವರ್ಯಂ ವಹ್ನಿದಿಙ್ಮುಖಾಃ ।
ಅಧರ್ಮಾದೀನಿ ಗಾತ್ರಾಣಿ ಪೂರ್ವಾದೌ ಯೋಗಪೀಠಕೇ ॥

(ವಹ್ನಿ–ಅಗ್ನಿ, ವಹ್ನಿದಿಙ್ಮುಖಾಃ ಆಗ್ನೇಯಾದಿ ದಿಙ್ಮೂಲೆಗಳಲ್ಲಿ, ಗಾತ್ರಾಣಿ ರೂಪಗಳನ್ನು. ಮಿಕ್ಕ ಭಾಗ ಸ್ಪಷ್ಟವಾಗಿದೆ.)

IV. ಗರುಡಪುರಾಣ (ಅಧ್ಯಾಯ 14?)

ಧರ್ಮಂ ಜ್ಞಾನಂ ಚ ವೈರಾಗ್ಯ—ಮೈಶ್ವರ್ಯಂ ಚ ಯಥಾಕ್ರಮಮ್ ।
ಆಗ್ನೇಯಾದೌ ಚ ಪೂರ್ವಾದಾ—ವಧರ್ಮಾದೀಂಶ್ಚ ವಿನ್ಯಸೇತ್ ॥

(ವಿನ್ಯಸೇತ್–ಇದ್ದಾರೆಂದು ಅನುಸಂಧಾನ ಮಾಡಿಕೊಳ್ಳಬೇಕು. ಮಿಕ್ಕ ಭಾಗ ಸ್ಪಷ್ಟವಾಗಿದೆ.)

IIIನೇ ಭಾಗದ ಪುನರಾವೃತ್ತಿ—

ಪೀಠವು ತನ್ನ ಈ ನಾಲ್ಕು ಕಾಲುಗಳನ್ನು ಆಶ್ರಯಿಸಿ ನೆಲದ ಮೇಲೆ ಕುಳಿತಿರುವುದಷ್ಟೆ. ಈ ನಾಲ್ಕು ಕಾಲುಗಳಲ್ಲಿ ಕ್ರಮವಾಗಿ ಗರುಡ ವ್ಯಾಸ ದುರ್ಗಾ ಸರಸ್ವತಿಯರನ್ನು ಧ್ಯಾನಿಸಿ ಪೂಜಿಸಬೇಕೆಂದು iiನೇ ಭಾಗದಲ್ಲಿ ವಿವರಿಸಲಾಯಿತು. ಈ ನಾಲ್ಕು ಕಾಲುಗಳ ಮೇಲೆ ಒಂದು ಹಲಗೆ ಇರುತ್ತದೆ. ಅದಕ್ಕೆ ಯೋಗಫಲಕವೆಂದು ಹೆಸರು. 'ಯೋಗ' ಎಂದರೆ 'ಕೂಡಿಸು, ಹೊಂದಿಸು' ಎಂದರ್ಥ. ಪೀಠದ ಕಾಲುಗಳನ್ನೂ ಮೇಲ್ಭಾಗವನ್ನೂ 'ಕೂಡಿಸುವ' ಅಥವಾ 'ಹೊಂದಿಸುವ' ಹಲಗೆಯಾದ್ದರಿಂದ ಇದಕ್ಕೆ ಈ ಹೆಸರು ಅನ್ವರ್ಥವಾಗಿ ಬಂದಿದೆ. ಈ ಯೋಗಫಲಕದ ಆಗ್ನೇಯ ಮೂಲೆಯಲ್ಲಿ ಧರ್ಮಾಭಿಮಾನಿಯಾದ ಯಮಧರ್ಮನು ಕೆಂಪುಬಣ್ಣದ ಎತ್ತಿನರೂಪ ಧರಿಸಿ ಸನ್ನಿಹಿತನಾಗಿದ್ದಾನೆಂದು ತಿಳಿದು ಅರ್ಚಿಸಬೇಕು. ಅಥವಾ ಯೋಗಫಲಕೇ (ಉಪರಿ) ಆಗ್ನೇಯಕೋಣೇ ಧರ್ಮಾಧಿಪತಯೇ ವೃಷಭರೂಪಾಯ ರಕ್ತವರ್ಣಾಯ ಯಮಾಯ ನಮಃ ಎಂದು ಹೇಳಿ ಕೈಮುಗಿಯಬೇಕೆಂದು ಭಾವ (ಉಳಿದ ದೇವತೆಗಳ ವಿಚಾರವನ್ನೂ ಹೀಗೆಯೇ ತಿಳಿದುಕೊಳ್ಳಬೇಕು.) ನೈರ್ಋತ್ಯಮೂಲೆಯಲ್ಲಿ ಜ್ಞಾನಾಧಿಪತಿಯಾದ ವಾಯುದೇವರು ಸಿಂಹಾಕಾರರಾಗಿ ಶ್ಯಾಮವರ್ಣವುಳ್ಳವರಾಗಿದ್ದಾರೆಂದೂ, ವಾಯುವ್ಯಮೂಲೆಯಲ್ಲಿ ವೈರಾಗ್ಯಾಧಿಪತಿಯಾದ ಮಹಾದೇವರು (ಶಿವನು) ಪೀತವರ್ಣವುಳ್ಳ ಭೂತಾಕಾರರಾಗಿ ಇದ್ದಾರೆಂದೂ, ಈಶಾನ್ಯಮೂಲೆಯಲ್ಲಿ ಐಶ್ವರ್ಯಾಧಿಪತಿಯಾದ ದೇವೇಂದ್ರನು ಕೃಷ್ಣವರ್ಣದ ಗಜರೂಪಧಾರಿಯಾಗಿ ಸನ್ನಿಹಿತನಾಗಿದ್ದಾನೆಂದೂ ಚಿಂತಿಸಬೇಕು.

ಇನ್ನು ಅದೇ ಯೋಗಫಲಕದ ಮುಂಭಾಗದಲ್ಲಿ (ಎದುರಿಗೆ ಎಂದರೆ ಪೂರ್ವದಿಕ್ಕಿನಲ್ಲಿ) ಅಧರ್ಮಾಧಿಪತಿಯಾದ ನಿರ್ಋತಿಯೂ, ಬಲಗಡೆ (ಎಂದರೆ ದಕ್ಷಿಣದಿಕ್ಕಿನಲ್ಲಿ) ಅಜ್ಞಾನಾಧಿಪತಿಯಾದ ದುರ್ಗಾದೇವಿಯೂ, ಹಿಂಭಾಗದಲ್ಲಿ (ಪಶ್ಚಿಮದಲ್ಲಿ) ಅವೈರಾಗ್ಯಾಧಿಪತಿಯಾದ ಕಾಮನೂ (ಮನ್ಮಥನೂ), ಎಡಗಡೆ (ಉತ್ತರದ ಕಡೆ) ಅನೈಶ್ವರ್ಯಾಧಿಪತಿಯಾದ ರುದ್ರದೇವರೂ ಸನ್ನಿಹಿತರಾಗಿದ್ದಾರೆಂದು ತಿಳಿದು ಅರ್ಚಿಸಬೇಕು.

IV. ಪೀಠಕ್ಕೆ ಆಧಾರವಾದ ಅನಂತಶಕ್ತಿಗಳು

ಇಲ್ಲಿಂದ ಮುಂದೆ, ನಮ್ಮ ಮುಂದಿರುವ ಈ ಪೀಠವು ಮೂಲತಃ ಯಾವ ಯಾವ ಆಧಾರಗಳನ್ನು ಆಶ್ರಯಿಸಿ ನಿಂತಿದೆ ಎಂಬುದನ್ನು ತೋರಿಸುವುದಕ್ಕಾಗಿ ಬ್ರಹ್ಮಾಂಡದ ಕಟಾಹದಿಂದ ಹಿಡಿದು ನಾವು ಅಣಿಗೊಳಿಸಿರುವ ಚಿಕ್ಕ ಪೀಠದವರೆಗೂ ವ್ಯಾಪ್ತವಾಗಿರುವ ಭಗವಂತನ ಭಿನ್ನಭಿನ್ನ ಶಕ್ತಿಗಳನ್ನು ತೋರಿಸುತ್ತಾರೆ.

ಪರಮಃ ಪುರುಷೋ ಮಧ್ಯೇ, ಶಕ್ತಿರಾಧಾರರೂಪಿಣೀ ॥ ೫೪ ॥

ನಾವು ದೇವರನ್ನಿಟ್ಟು ಪೂಜಿಸುತ್ತಿರುವ ಚಿಕ್ಕ ಪೀಠದ ಮಧ್ಯದ ಸರಳರೇಖೆಯಲ್ಲಿ ಎಲ್ಲವಕ್ಕೂ ಕಟ್ಟಕೆಳಗಡೆ, ಬ್ರಹ್ಮಾಂಡದ ಅಡಿಯಲ್ಲಿ, "ಪರಮಪುರುಷ"ನಾದ ವಿರಾಡ್ರೂಪಿ ನಾರಾಯಣನನ್ನು ಸ್ಮರಿಸಬೇಕು. ಈ ಪರಮಪುರುಷನು ಬ್ರಹ್ಮಾಂಡವನ್ನು ಶಿರಸ್ಸಿನಲ್ಲಿ ಧರಿಸಿ ಪೂರ್ವಾಭಿಮುಖನಾಗಿ ಕುಳಿತಿದ್ದಾನೆಂದು ಧ್ಯಾನಿಸಬೇಕು. ಆತನ ಮೇಲೆ ಬ್ರಹ್ಮಾಂಡದ ನವಾವರಣಗಳಿಗೆ ಆಧಾರರೂಪಿಣಿಯಾದ "ಶಕ್ತಿ"ನಾಮಕಳಾದ ರಮಾದೇವಿಯು ಆಧಾರರೂಪಳಾಗಿದ್ದಾಳೆಂದೂ ಧ್ಯಾನಿಸಬೇಕು.

ಕೂರ್ಮೋಽನಂತಶ್ಚ ಪೃಥಿವೀ ಕ್ಷೀರಸಾಗರ ಏವ ಚ ।
ಶ್ವೇತದ್ವೀಪೋ ಮಂಟಪಶ್ಚ ದಿವ್ಯರತ್ನಮಯೋ ಮಹಾನ್ ॥ ೫೪ ॥

ಮೇಲೆ 'ಕೂರ್ಮಃ' ಎಂದು ಏಕವಚನಪ್ರಯೋಗವಿದ್ದರೂ ಅದು ವಸ್ತುತಃ ಮೂರು ಕೂರ್ಮಗಳ ಪ್ರತಿನಿಧಿ. ಮೂರರಲ್ಲಿ ಎರಡು ವಿಷ್ಣುಕೂರ್ಮಗಳು—ಒಂದು ಬೃಹತ್ಕೂರ್ಮ, ಒಂದು ಚಿಕ್ಕ ವಿಷ್ಣುಕೂರ್ಮ. ಈ ಚಿಕ್ಕ ವಿಷ್ಣುಕೂರ್ಮಕ್ಕಿಂತಲೂ ವಾಯುಕೂರ್ಮ ಇನ್ನೂ ಚಿಕ್ಕದು. ಈ ಮೂರು ಕೂರ್ಮಗಳ ವಿಚಾರವು ಬೃಹದಾರಣ್ಯಕ ಉಪನಿಷದ್ಭಾಷ್ಯದಲ್ಲಿ ವಾಯುಕೂರ್ಮದ ವರ್ಣನೆಯ ಸಂದರ್ಭದಲ್ಲಿ (ಅ. ೩, ಬ್ರಾ. ೨, ೩ ಖಂ.) ಪ್ರಸಕ್ತವಾಗಿದೆ.

ಬಿಭರ್ತ್ಯಂಡಂ ಹರಿಃ ಕೂರ್ಮ—ಸ್ತ್ವಂಡೇ ಚಾಪ್ಯುದಕಂ ಮಹತ್ ।
ಉದಕೇ ಕೂರ್ಮರೂಪಸ್ಯ ವಾಯುಃ ಪುಚ್ಛಂ ಸಮಾಶ್ರಿತಃ । ಇತಿ ವೈಭವೇ।
ಸ ಏಷ ಕೂರ್ಮರೂಪೇಣ ವಾಯುರಂಡೋದಕೇ ಸ್ಥಿತಃ ।
ವಿಷ್ಣುನಾ ಕೂರ್ಮರೂಪೇಣ ಧಾರಿತೋಽನಂತಧಾರಕಃ । ಇತಿ ಪ್ರಭಂಜನೇ।

ಈ ಪ್ರಮಾಣಗಳ ಅರ್ಥವೇನೆಂದರೆ, ಶಕ್ತಿನಾಮಕಳಾದ ರಮಾದೇವಿಯು ಮೇಲ್-ಭಾಗದಲ್ಲಿ ಬ್ರಹ್ಮಾಂಡದ ಹೊರಗಡೆ ವಿಷ್ಣುವಿನ ಬೃಹತ್-ಕೂರ್ಮರೂಪವಿದೆ. ಅದು ತನ್ನ ಬೆನ್ನಿನ ಮೇಲೆ ಬ್ರಹ್ಮಾಂಡವನ್ನು ಹೊತ್ತುಕೊಂಡಿದೆ. ಬ್ರಹ್ಮಾಂಡದ ಒಳಗಡೆ ಮತ್ತೊಂದು ಚಿಕ್ಕ ವಿಷ್ಣುಕೂರ್ಮವು ಆ ಬ್ರಹ್ಮಾಂಡದ ಅಗಾಧಜಲಕ್ಕೆ ಆಧಾರಭೂತವಾಗಿ ನಿಂತಿದೆ. ಈ ಎರಡನೇ ವಿಷ್ಣುಕೂರ್ಮವನ್ನು ಆಶ್ರಯಿಸಿಕೊಂಡು ವಾಯುಕೂರ್ಮವು ನಿಂತಿದೆ. (ಈ ಕೂರ್ಮದ ವರ್ಣನೆಯೇ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೀಗೆ ಬಂದಿದೆ—ಈ ವಾಯುಕೂರ್ಮವು ಚಿಕ್ಕವಿಷ್ಣುಕೂರ್ಮವನ್ನು ಆಶ್ರಯಿಸಿ ಅಂಡೋದಕದೊಳಗೆ ನಿಂತಿದೆ. ಅದರ ತಲೆಯು ಪೂರ್ವದಿಕ್ಕಿನಲ್ಲೂ ಪುಚ್ಛವು ಪಶ್ಚಿಮದಲ್ಲೂ ಪಸರಿಸಿದ್ದರೆ ಅದರ ಮುಂದಿನ ಎರಡು ಕಾಲುಗಳು ಆಗ್ನೇಯ ಈಶಾನ್ಯದ ಕಡೆಗೂ ಹಿಂದಿನ ಎರಡು ಕಾಲುಗಳು ನೈಋತ್ಯ ವಾಯವ್ಯದ ಕಡೆಗೂ ಚಾಚಿಕೊಂಡಿವೆ. ಅದರ ಎದೆಯು ಭೂಮಂಡಲವನ್ನು ವ್ಯಾಪಿಸಿಕೊಂಡು ಆಚೆಗೆ ಹೋಗಿದೆ. ಅದರ ಬೆನ್ನು ನಕ್ಷತ್ರಮಂಡಲಗಳಿರುವ ಅಂತರಿಕ್ಷಕ್ಕೆ ತಗುಲಿಕೊಂಡಿದ್ದರೆ ಆಕಾಶವು ಅದರ ಹೊಟ್ಟೆಯಲ್ಲಿ ಅಡಕವಾಗಿಬಿಟ್ಟಿದೆ. ಈ ಕೂರ್ಮದ ಒಂದೊಂದು ಕಾಲುಗಳೇ ಅಂಡೋದಕದಲ್ಲಿ ಒಂದೂಕಾಲು ಲಕ್ಷ ಯೋಜನ ಉದ್ದ ಹರಡಿಕೊಂಡಿದೆಯೆಂದು ಶ್ರೀಮದ್ರಾಘವೇಂದ್ರಸ್ವಾಮಿಗಳು ಆ ಖಂಡಾರ್ಥದಲ್ಲಿ ತಿಳಿಸಿರುವುದನ್ನು ನೋಡಿದರೆ ಆ ವಾಯುಕೂರ್ಮವು ಇನ್ನೆಷ್ಟು ದೊಡ್ಡದೆಂಬುದನ್ನು ಊಹಿಸಿ-ಕೊಳ್ಳಬಹುದು. ವಾಯುಕೂರ್ಮಕ್ಕಿಂತಲೂ ವಿಷ್ಣುಕೂರ್ಮ ಇನ್ನೂ ದೊಡ್ಡದು. ವಾಯುಕೂರ್ಮದ ಪುಚ್ಛವನ್ನು ಆಶ್ರಯಿಸಿಕೊಂಡು ಅನಂತನೆಂಬ ಆದಿಶೇಷನಿದ್ದಾನೆ; ಅವನ ತಲೆಯ ಮೇಲೆ ಭೂಮಿಯು ನಿಂತಿದೆ ಎಂಬುದೇ ಮೇಲಿನ ಪ್ರಮಾಣಗಳ ಅರ್ಥ. ವಾಯುಕೂರ್ಮದ ಈ ಮಹಿಮೆಯನ್ನೇ ಶ್ರೀ ಶ್ರೀಪಾದರಾಯರು 'ಮಧ್ವನಾಮ'ದಲ್ಲಿ ಹೀಗೆ ಸ್ತುತಿಸಿದ್ದಾರೆ—

ಆವ ಕಚ್ಛಪರೂಪದಿಂದ—ಲಂಡೋದಕದಿ
ಓವಿ ಧರಿಸಿಹ ಶೇಷಮೂರುತಿಯನು ।

(ಆವ = ಯಾವಾತನು, ಕಚ್ಛಪ = ಕೂರ್ಮ, ಅಂಡೋದಕದಿ = ಅಂಡೋದಕದಲ್ಲಿ, ರೂಪದಿಂದಲಿ + ಅಂಡೋದಕದಿ ಎಂದು ಲೋಪಸಂಧಿ. ಓವಿ = ವ್ಯಾಪಿಸಿ)

ಅನಂತನಾಮಕನಾದ ಆದಿಶೇಷನ ತಲೆಯ ಮೇಲಿರುವ ಭೂಮಿಗೆ ಭೂದೇವಿ (ಅಥವಾ ಧರಾದೇವಿ) ಅಭಿಮಾನಿ. ಭೂಮಿಯಲ್ಲಿ ಕ್ಷೀರಸಾಗರವನ್ನೂ ಅದಕ್ಕೆ ಅಭಿಮಾನಿಯಾದ ವರುಣನನ್ನೂ ಧ್ಯಾನಿಸಬೇಕು. ಕ್ಷೀರಸಾಗರದ ಮಧ್ಯದಲ್ಲಿ ಶ್ವೇತದ್ವೀಪವನ್ನೂ, ಶ್ವೇತದ್ವೀಪದ ಮಧ್ಯದಲ್ಲಿ ದಿವ್ಯವಾದ, ನಾನಾರತ್ನಮಯವಾದ, ಬಂಗಾರದ ಒಂದು ಮಂಟಪವನ್ನೂ ಧ್ಯಾನಿಸಬೇಕು. ಆ ಪೀಠವೇ ನಾವು ಪೂಜೆ ಮಾಡುತ್ತಿರುವ ಮಂಟಪವೆಂದೂ ಕಲ್ಪಿಸಿಕೊಳ್ಳಬೇಕು.

ಹೀಗೆ ಈ ಪೀಠಪೂಜಾನಿಮಿತ್ತವಾಗಿ ನಾವು ನಮಗೂ ಬ್ರಹ್ಮಾಂಡದ ಕಟಾಹಕ್ಕೂ ಇರುವ ಆಧಾರಾಧೇಯಭಾವವನ್ನು ತಿಳಿದುಕೊಳ್ಳಲು ಶಕ್ಯವಾಗುತ್ತದೆ. ಇದೇ ನಮ್ಮ ಶ್ರೀಮದಾಚಾರ್ಯರ ಪೂಜಾವಿಧಾನದಲ್ಲಿರುವ ವಿಶೇಷ. ಇದನ್ನು ನಿರ್ದೇಶಿಸಿಯೇ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಹೀಗೆ ಬರೆದಿದ್ದಾರೆ: "ಬ್ರಹ್ಮಾಂಡಕಟಾಹವನ್ನು ತಲೆಯಲ್ಲಿ ಧರಿಸಿಕೊಂಡು ನಮ್ಮನ್ನೆಲ್ಲ ಸಲಹುತ್ತಿರುವ ಭಗವದ್ರೂಪದಿಂದ ಮೊದಲುಗೊಂಡು ಬ್ರಹ್ಮಾಂಡದ ಅಣುಮಾತ್ರವಾದ ನಮ್ಮ ಪೀಠದಲ್ಲೂ ಸನ್ನಿಹಿತವಾದ ಭಗವದ್ರೂಪದವರೆಗೆ ನಮ್ಮ ಧ್ಯಾನಕ್ರಮ ಮುಂದುವರೆಯಬೇಕು. ಇದೇ ಭಗವದ್ರೂಪದ ವಿಭೂತಿಸತ್ತ್ವ. ನಮ್ಮ ಪೀಠದಲ್ಲಿ ಕುಳಿತ ಭಗವದ್ರೂಪ ಬ್ರಹ್ಮಾಂಡವನ್ನು ಧರಿಸಿದೆ. ಬ್ರಹ್ಮಾಂಡವನ್ನು ಧರಿಸಿದ ಭಗವದ್ರೂಪ ನಮ್ಮ ಚಿಕ್ಕ ಪೀಠದಲ್ಲಿ ಶೋಭಿಸುತ್ತದೆ.. ಇದು ಪೀಠಪೂಜೆಯಲ್ಲಿ ನಾವು ಅರಿತುಕೊಳ್ಳಬೇಕಾದ ಮಹಿಮೆ." (ತಂತ್ರಸಾರ, 195[illegible]ರ ಸಂಸ್ಕರಣ, ಪು. ೨೦)

ಪೀಠದ ಮೂಲಾಧಾರಗಳ ಪುನರಾವರ್ತನೆ— ಮೇಲೆ ನಿರೂಪಿಸಿದಂತೆ ನಾವು ಪೂಜಿಸುತ್ತಿರುವ ಪೀಠಸ್ಥ ಭಗವನ್ಮೂರ್ತಿಗೂ ಇಡೀ ಬ್ರಹ್ಮಾಂಡವನ್ನು ಹೊತ್ತಿರುವ ಭಗವಂತನ ವಿರಾಡ್ರೂಪಕ್ಕೂ ಇರುವ ಸಂಬಂಧಕ್ರಮವನ್ನು ತಿಳಿಸಿಕೊಡುವುದೇ ಪೀಠಪೂಜೆಯ ಪ್ರಧಾನೋದ್ದೇಶ. ಆದಕಾರಣ ಮೊಟ್ಟಮೊದಲು ನಾವು ಪೂಜಿಸುವ ಭಗವನ್ಮೂರ್ತಿಯನ್ನಿಟ್ಟ ಪೀಠದ ಎಡ-ಬಲ ಪಾರ್ಶ್ವಗಳಲ್ಲೇ (ಪೀಠಕ್ಕೆ ಆಚೆ) ವಾಯುದೇವರೂ ಸಕಲ ಗುರುಗಳೂ ನವಕೋಟಿ ದೇವತೆಗಳೂ ಸನ್ನಿಹಿತರಾಗಿದ್ದಾರೆಂಬುದನ್ನು Iನೇ ವಿಭಾಗದಲ್ಲಿ ಗಮನಿಸಿದೆವು. IIನೇ ವಿಭಾಗದಲ್ಲಿ ಪೀಠದ ಕಾಲುಗಳಲ್ಲಿರುವ ದೇವತೆಗಳನ್ನೂ, IIIನೇ ವಿಭಾಗದಲ್ಲಿ ಯೋಗಫಲಕದ ಮೇಲ್ಭಾಗದಲ್ಲಿ ಎಂಟು ದಿಕ್ಕುಗಳಲ್ಲಿರುವ ದೇವತೆಗಳನ್ನೂ ಗಮನಿಸಿದೆವು. ಹೀಗೆ ಪ್ರತ್ಯಕ್ಷವಾಗಿ ನಮ್ಮ ಎದುರಿಗಿರುವ ಮಂಟಪಕ್ಕೂ ನಮಗೂ ಇರುವ ಸಂಬಂಧವನ್ನು ಅರಿತುಕೊಂಡ ಬಳಿಕ ಆ ಮಂಟಪ ಯಾವ ಆಧಾರದ ಮೇಲೆ ನಿಂತಿದೆಯೆಂಬುದನ್ನು ಅರಿತುಕೊಳ್ಳುವುದೇ ನ್ಯಾಯಸಂಗತವಾಗುತ್ತದೆಯಾದ್ದರಿಂದ ಈ ಕ್ರಮವನ್ನೇ ಅನುಸರಿಸಬೇಕೆಂದು ಪಂಚರಾತ್ರವೂ ವಿಧಿಸುತ್ತದೆ—

ಆದೌ ಸಿಂಹಾಸನಂ ಧ್ಯಾತ್ವಾ ಪೂಜ್ಯಃ ಪರಮಪೂರುಷಃ ।
ಆಧಾರಶಕ್ತಿಃ ಪ್ರಕೃತಿಃ ಕೂರ್ಮೋಽನಂತೋ ವರಾಹಕಃ ।

ಇತ್ಯಾದಿ. ಅದರಂತೆ ಈಗ ಈ ಪೀಠವು ಬುಡದಿಂದ ಕ್ರಮಕ್ರಮವಾಗಿ ಯಾವಯಾವ ಆಧಾರಗಳ ಮೇಲೆ ನಿಂತಿದೆಯೆಂಬುದನ್ನೇ ಗಮನಿಸೋಣ. ಇದೇ IVನೇ ವಿಭಾಗದ ಪ್ರಮೇಯ.

ನಾವು ಪೂಜಿಸುತ್ತಿರುವ ದೇವರ ಪೀಠದ (ಸಿಂಹಾಸನದ ಅಥವಾ ಮಂಟಪದ) ಮಧ್ಯಭಾಗದಿಂದ ಸರಳವಾದ ಒಂದು ರೇಖೆಯನ್ನು ನೇರವಾಗಿ ಕೆಳಗೆ ಎಳೆದರೆ ಅದು ಸವಾವರಣಗಳುಳ್ಳ ಬ್ರಹ್ಮಾಂಡವನ್ನು ತಲೆಯ ಮೇಲೆ ಧರಿಸಿಕೊಂಡು ಪೂರ್ವಾಭಿಮುಖ-

ವಾಗಿ ಪದ್ಮಾಸನದಲ್ಲಿ ಕುಳಿತಿರುವ ಪರಮಪುರುಷನ ಹತ್ತಿರ ಹೋಗಿ ನಿಂತುಬಿಡುತ್ತವೆ. 1) ಅವನೇ (ಆ ಪರಮಪುರುಷನೇ) ಇಡೀ ಬ್ರಹ್ಮಾಂಡಕ್ಕೆ ಆಧಾರ. ಅವನು ತನ್ನ ಆಧಾರದ ಮೇಲೇ ನಿಂತಿದ್ದಾನೆ. ಬ್ರಹ್ಮಾಂಡವು ಅಪ್, ಅಗ್ನಿ, ಈರ (ವಾಯು), ನಭಃ, ಅಹಂಕಾರತತ್ತ್ವ, ಮಹತ್ತತ್ತ್ವ, ಸತ್ತ್ವಗುಣ, ರಜೋಗುಣ, ತಮೋಗುಣಗಳೆಂಬ ಒಂಬತ್ತು ಆವರಣಗಳಿಂದ ಕೂಡಿದೆ. 2) ಪರಮಪುರುಷನ ಆಧಾರದ ಮೇಲೆ ಶಕ್ತಿಯೆಂಬ ನಾಮವುಳ್ಳ ಲಕ್ಷ್ಮೀದೇವಿ ಆ ಬ್ರಹ್ಮಾಂಡವನ್ನು ಧರಿಸಿದ್ದಾಳೆ. 3) ಆ ಶಕ್ತಿಯ ಮೇಲೆ (ಬ್ರಹ್ಮಾಂಡದ ಹೊರಭಾಗದಲ್ಲಿ) ವಿಷ್ಣುಕೂರ್ಮವು ಬ್ರಹ್ಮಾಂಡವನ್ನು ಬೆನ್ನಮೇಲೆಹೊತ್ತುಕೊಂಡಿದೆ. 4) ಈ ವಿಷ್ಣುಕೂರ್ಮದ ಮೇಲ್ಭಾಗದಲ್ಲಿ—ಆದರೆ ಬ್ರಹ್ಮಾಂಡದ ಒಳಗಡೆ—ಅಗಾಧವಾದ ಅಂಡೋದಕಕ್ಕೆ ಆಧಾರಭೂತವಾಗಿ ಮತ್ತೊಂದು ವಿಷ್ಣುಕೂರ್ಮವಿದೆ. 5) ಈ ಎರಡನೇ ವಿಷ್ಣುಕೂರ್ಮದ ಪುಚ್ಛವನ್ನು ಆಶ್ರಯಿಸಿಕೊಂಡು ವಾಯುಕೂರ್ಮ ನಿಂತಿದೆ. 6) ವಾಯುಕೂರ್ಮನ ಪುಚ್ಛವನ್ನಾಶ್ರಯಿಸಿಕೊಂಡು ಅನಂತನೆಂಬ ಆದಿ-ಶೇಷನು ನಿಂತಿದ್ದಾನೆ. 7) ಆದಿಶೇಷನ ತಲೆಯಮೇಲೆ ಭೂಮಿಯು ನಿಂತಿದೆ. ಭೂಮಿಯ ಮೇಲೆ ಕ್ಷೀರಸಾಗರವು ಹರಡಿಕೊಂಡಿದೆ. ಆ ಕ್ಷೀರಸಾಗರಕ್ಕೆ ವರುಣನು ಅಭಿಮಾನಿ. 9) ಕ್ಷೀರಸಾಗರದ ಮಧ್ಯದಲ್ಲಿ ಶ್ವೇತದ್ವೀಪವಿದೆ. 10) ಅದರ ಮಧ್ಯದಲ್ಲಿ ಒಂದು ದಿವ್ಯವಾದ ನಾನಾರತ್ನಮಯವಾದ ಬಂಗಾರದ ಮಂಟಪವು ನಿಂತಿದೆ; ಈ ಮಂಟಪವೇ ಈಗ ನಾವು ಪೂಜಿಸುವ ಕಲ್ಯಾಣಮಂಟಪ ಎಂದು ಕಲ್ಪಿಸಿಕೊಳ್ಳಬೇಕು.

ಹೀಗೆ ಒಂದರ ಮೇಲೆ ಮತ್ತೊಂದು ನಿಂತಿದೆಯೆಂದು ತಿಳಿದು ಧ್ಯಾನಿಸುವುದೇ ಪೀಠಪೂಜೆಯೆಂದು ವಿಷ್ಣುತೀರ್ಥೀಯದಲ್ಲಿ (III-95) ಹೇಳಿದೆ:

ಪರಂ ಬ್ರಹ್ಮೈವ ಮಧ್ಯೇ ಸ್ಯೈ ಕ್ರಮಾದುತ್ತರಮುತ್ತರಮ್ ।
ಆಧಾರಶಕ್ತಿಂ ಕೂರ್ಮಂ ಚಾ—ಪ್ಯನಂತಂ ಪೃಥಿವೀಂ ತಥಾ ।

ವಾಸಿಷ್ಠಸಂಹಿತೆಯಲ್ಲೂ ಹೀಗೆಯೇ ಚಿಂತಿಸಬೇಕೆಂದು ಹೇಳಿದೆ—

ಪುರುಷಾದ್ಯಾಸ್ತು ಪೀಠಾಧಃ ಪೂಜ್ಯಾ ದ್ವೀಪಾವಸಾನಕಾಃ ।
ಧರ್ಮಾದೀನರ್ಚಯೇತ್ ಪೀಠ—ಪಾದಗಾಂಸ್ತತ್ರ ಚಾಂಜಸಾ ।
(ಛಲಾರೀ ಟೀಕೆಯಿಂದ)

(ಅರ್ಥ) ಪರಮಪುರುಷನನ್ನು ಆರಂಭಿಸಿ ಶ್ವೇತದ್ವೀಪ ಮತ್ತು ಅದರಲ್ಲಿರುವ ಮಂಟಪಗಳವರೆಗೆ ಪೀಠದ ಕೆಳಗಿರುವ ಆಧಾರಗಳನ್ನು ಕ್ರಮವಾಗಿ ತಿಳಿದುಕೊಂಡು ಪೂಜಿಸಬೇಕು. ಹಾಗೆಯೇ ಆ ಪೀಠದ ಕಾಲುಗಳಲ್ಲೂ ಯೋಗಫಲಕಾದಿಗಳಲ್ಲೂ ಇರುವ ಗರುಡಾದಿ ಮತ್ತು ಧರ್ಮಾದಿ ದೇವತೆಗಳನ್ನು ತಿಳಿದುಕೊಳ್ಳಬೇಕು.

ಈ ಮುಂದೆ ಕೊಟ್ಟಿರುವ ಚಿತ್ರವು ಪೀಠದ ಕೆಳಗಿರುವ ಹತ್ತು ಆಧಾರಶಕ್ತಿಗಳನ್ನು—ಕೆಳಗಿಂದ ಮೇಲಿನವರೆಗೆ—ತಿಳಿದುಕೊಳ್ಳಲು ಸಹಾಯಮಾಡುತ್ತದೆ. ಈ ಚಿತ್ರವು ಮನಃಪಟಲದಲ್ಲಿ ಮೂಡುವಂತೆ ಮತ್ತೆಮತ್ತೆ ನೋಡಿ ಮುಂದಟ್ಟುಮಾಡಿಕೊಳ್ಳಬೇಕು.

ಯೋಗಫಲಕ

ಮಂಟಪದ ನಾಲ್ಕು ಕಾಲುಗಳು

10 ದ್ವೀಪದ ಮಧ್ಯದಲ್ಲಿರುವ ದಿವ್ಯವಾದ ಮಂಟಪ (ರಮಾರೂಪ)

9 ಕ್ಷೀರಸಾಗರದ ಮಧ್ಯದಲ್ಲಿರುವ ಶ್ವೇತದ್ವೀಪ (ರಮಾರೂಪ)

8 ವರುಣಾಭಿಮನ್ಯವಾದ ಕ್ಷೀರಸಾಗರ

7 ಆದಿಶೇಷನ ತಲೆಯ ಮೇಲಿರುವ ಪೃಥಿವೀ (ಧರಾದೇವಿ)

6 ವಾಯುಕೂರ್ಮದ ಪುಚ್ಛದ ಮೇಲಿರುವ ಅನಂತಾಖ್ಯ ಆದಿಶೇಷ

5 ವಿಷ್ಣುಕೂರ್ಮದ ಪುಚ್ಛವನ್ನು ಆಶ್ರಯಿಸಿರುವ ವಾಯುಕೂರ್ಮ

4 ಬ್ರಹ್ಮಾಂಡದ ಒಳಗಿರುವ ವಿಷ್ಣುಕೂರ್ಮ

3 ಬ್ರಹ್ಮಾಂಡದ ಹೊರಗಿರುವ ವಿಷ್ಣುಕೂರ್ಮ

2 ಆಧಾರರೂಪಿ ಶಕ್ತಿ (ಲಕ್ಷ್ಮೀದೇವಿ)

1 ಪರಮಪುರುಷ ನಾರಾಯಣ (ಪೂರ್ವಾಭಿಮುಖವಾಗಿ ಕುಳಿತಿದ್ದಾನೆ

ಪೀಠಕ್ಕೆ ಕೆಳಗಿರುವ ನಾನಾ ಆಧಾರಗಳು

V ಪೀಠದ ಮೇಲಿರುವ ಭಾಗಗಳು

ಇಲ್ಲಿಂದ ಮುಂದೆ ನಮ್ಮ ಮುಂದಿರುವ ಪೀಠದಲ್ಲೇ ಕೆಳಗೆ ತೋರಿಸಿರುವಂತೆ ಭಿನ್ನಭಿನ್ನ ಭಾಗಗಳು ಇವೆಯೆಂದು ಕಲ್ಪಿಸಿಕೊಂಡು ಆಯಾ ಭಾಗಗಳಲ್ಲಿ ಆಯಾ ದೇವತೆಗಳು ಇದ್ದಾರೆಂದು ಅನುಸಂಧಾನ ಮಾಡಿಕೊಳ್ಳಬೇಕು. "ತಂತ್ರಸಾರ"ದಲ್ಲಿ ದೇವತೆಗಳ ಹೆಸರನ್ನು ಮಾತ್ರ ಹೇಳುತ್ತಾ ಹೋಗಿದ್ದಾರೆ. ಯಾವಯಾವ ಭಾಗದಲ್ಲಿ ಆ ದೇವತೆಗಳು ಇದ್ದಾರೆ ಎಂಬುದನ್ನು ಟೀಕೆಯ ಸಹಾಯದಿಂದ ಅರಿತುಕೊಳ್ಳಬೇಕು. ಆದ್ದರಿಂದ ಪೀಠದಲ್ಲಿ ಯಾವಯಾವ ಭಾಗಗಳಿವೆ ಎಂಬುದನ್ನು ಈಗ ತಿಳಿದುಕೊಳ್ಳೋಣ.

ಯೋಗಫಲಕದವರೆಗೂ ಹಿಂದೆ (ಪುಟ ೯೬ IIIನೇ ಭಾಗದ ಪುನರಾವೃತ್ತಿಯಲ್ಲಿ) ಬಂದಿತ್ತಲ್ಲವೆ. 1. ಆ ಯೋಗಫಲಕದ ಮೇಲೆ ಆಯಾಕಾರದ ಅಥವಾ ಚೌಕನೆಯ (ನಾಲ್ಕು ಮೂಲೆಯ) ಪೀಠವಿದೆ. ಇದನ್ನು 'ಸೋಪಾನಪೀಠ' ಎನ್ನಬಹುದು. 2. ಆ ಸೋಪಾನದ ಮೇಲೆ ಒಂದು ಷಡ್ದಳ (ಆರು ದಳಗಳ) ಪದ್ಮವಿದೆ. 3. ಈ ಪದ್ಮದ ಮೇಲೆ ಮತ್ತೊಂದು ಅಷ್ಟದಳಪದ್ಮವಿದೆ. 4. ಆ ಪದ್ಮದ ಮಧ್ಯದಲ್ಲಿರುವ ಅನುಗ್ರಹವೆಂಬ ಶಕ್ತಿಯಮೇಲೆ ಅನಂತ (ಆದಿಶೇಷ) ನಿದ್ದಾನೆ. ಅವನ ಮೇಲೆ ರಮಾರೂಪ ಯೋಗಪೀಠವನ್ನು ಧ್ಯಾನಿಸಬೇಕು. ಆವಾಹನೆ ಮಾಡಿದ ಬಳಿಕ ದೇವರು ಈ ಯೋಗಪೀಠದಲ್ಲೇ ಕುಳಿತಿದ್ದಾನೆ ಎಂದು ತಿಳಿಯಬೇಕು. ಇಲ್ಲಿಗೆ ಪೀಠಪೂಜೆ ಮುಗಿಯುತ್ತದೆ.

ಈಗ ಒಂದೊಂದು ಭಾಗದಲ್ಲೂ ಯಾವಯಾವ ದೇವತೆಗಳು ಸನ್ನಿಹಿತರಾಗಿದ್ದಾರೆ ನೋಡೋಣ ಬನ್ನಿ. ಯೋಗಫಲಕದ ಮೇಲೆ ಸೋಪಾನಪೀಠವೇ ಮೊದಲು ಇದ್ದರೂ ತಂತ್ರಸಾರದಲ್ಲಿ ಮೊದಲು ಷಡ್ದಳಕಮಲದ ದೇವತೆಗಳನ್ನೇ ಹೇಳಿ ಅನಂತರ ಸೋಪಾನ ದೇವತೆಗಳನ್ನು ಹೇಳಿದ್ದಾರೆ. ಆದ್ದರಿಂದ ನಾವೂ ಆ ಕ್ರಮದಲ್ಲೇ ಹೋಗೋಣ.

ಹೀಗೇ ಏಕೆ? ಎಂದರೆ 'ತಂತ್ರತಿಲಕ'ವೆಂಬ ಗ್ರಂಥದಲ್ಲಿ ಸ್ಪಷ್ಟವಾಗಿ

ಚತುಷ್ಕೋಣಂ ತು ಪೀಠಂ ಸ್ಯಾತ್ ಷಟ್ಕೋಣಂ ತಸ್ಯ ಮಧ್ಯತಃ ।
ತನ್ಮಧ್ಯೇಽಷ್ಟದಲಂ ಪದ್ಮಂ ತತ್ರ ಪದ್ಮೇಶಮರ್ಚಯೇತ್ ॥

ಎಂದರೆ (ಯೋಗಫಲಕದ ಮೇಲೆ) ಮೊದಲು ನಾಲ್ಕು ಮೂಲೆಯ ಪೀಠವಿದೆ. ಅದರ ಮಧ್ಯದಲ್ಲಿ ಆರು ಕೋಣಗಳ (ದಳಗಳ) ಪದ್ಮವಿದೆ. ಆ ಆರು ದಳದ ಪದ್ಮದಲ್ಲಿ ಎಂಟು ದಳದ ಪದ್ಮವಿದೆ. ಅದರ ಮೇಲೆಯೇ ಲಕ್ಷ್ಮೀಪತಿ ನಾರಾಯಣನನ್ನು ಅರ್ಚಿಸಬೇಕೆಂದು ಹೇಳಿರುವುದರಿಂದ ಅನ್ಯಥಾ ಕಲ್ಪನೆ ಮಾಡಲು ಅವಕಾಶವಿಲ್ಲ,

ಹಿಂದೆ, ಕ್ಷೀರಸಾಗರದ ಮಧ್ಯೆ ಶ್ವೇತದ್ವೀಪವಿದೆಯೆಂದೂ ಅದರ ಮಧ್ಯದಲ್ಲಿ ದಿವ್ಯ-ರತ್ನಮಯವಾದ ಪೀಠವಿದೆಯೆಂದೂ ಹೇಳಿದ್ದರು. ಈಗ ಆ ಮಂಟಪದ ಮಧ್ಯದಲ್ಲಿ ಷಡ್ದಳಪದ್ಮವಿದೆಯೆಂದು ಹೇಳಿ ಅದರ ಅಭಿಮಾನಿದೇವತೆಯನ್ನು ಮೊದಲು ತಿಳಿಸುತ್ತಾರೆ-

[ಶ್ವೇತದ್ವೀಪೋ ಮಂಟಪಶ್ಚ ದಿವ್ಯರತ್ನಮಯೋ ಮಹಾನ್ ॥ ೫೫ ॥]
ಪದ್ಮಮೇತತ್ ತ್ರಯಂ ದೇವೀ ರಮೈವ ಬಹುರೂಪಿಣೀ ।

ಶ್ವೇತದ್ವೀಪವೂ ಅದರ ಮಧ್ಯದಲ್ಲಿರುವ ದಿವ್ಯರತ್ನಖಚಿತವಾದ ಮಂಟಪವೂ, ಮಂಟಪದ ಮಧ್ಯದಲ್ಲಿ ಸೋಪಾನದ ಮಧ್ಯದಲ್ಲಿರುವ (ಆರು ದಳದ) ಕಮಲ ಈ ಮೂರೂ ಸಾಕ್ಷಾ ಲ್ಲಕ್ಷ್ಮೀದೇವಿಯ ಸ್ವರೂಪಗಳೇ ಆಗಿವೆ. ಒಬ್ಬಳೇ ಎಲ್ಲಾ ಹೇಗಾಗುತ್ತಾಳೆ ಎಂಬ ಶಂಕೆ ಬಂದರೆ 'ಬಹುರೂಪಿಣೀ'—ಒಬ್ಬಳೇ ಅನೇಕ ರೂಪಗಳನ್ನು ಧರಿಸಿದ್ದಾಳೆ—ಎಂದು ಹೇಳಿದರು. ಅದಕ್ಕಾದರೂ ಶಕ್ತಿ ಎಲ್ಲಿಂದ ಬಂತು? ಎಂದರೆ 'ದೇವೀ'—ನಾನಾ ಸಾಮರ್ಥ್ಯವುಳ್ಳವಳು—ಎಂದು ಸಮಾಧಾನ ಹೇಳುತ್ತಾರೆ.

ರಮಾದೇವಿಯಂತೆಯೇ ಶಿವ, ಸೂರ್ಯ, ಚಂದ್ರ ಮೊದಲಾದವರೂ ಅನೇಕ ಕಡೆ ಇದ್ದಂತೆ ಹೇಳಿದೆ. ಅದಕ್ಕೂ ಇದೇ ವಿವರಣೆ. ದೇವತೆಗಳಿಗೆ ಬಹುರೂಪವಿರುವುದರಿಂದಲೂ ಭಗವಂತನ ಐಶ್ವರ್ಯದಿಂದಲೂ ಒಬ್ಬರೇ ಅನೇಕ ಕಡೆ ಇರುವುದು ವಿರೋಧವಾಗುವುದಿಲ್ಲ. 'ತಾಸಾಂ ಚ ಬಹುರೂಪತ್ವಾ—ದೈಶ್ವರ್ಯಾಚ್ಚ ಪರೇಶಿತುಃ।' (ಬೃಹದ್ಭಾಷ್ಯ ೩/೧/೧)

V. (i) ಷಡ್ದಳಪದ್ಮದಲ್ಲಿ

ಷಡ್ದಳಪದ್ಮದಲ್ಲಿ ಸನ್ನಿಹಿತರಾದ ದೇವತೆಗಳನ್ನು ಹೇಳುತ್ತಾರೆ—

ಸೂರ್ಯಸೋಮಹುತಾಶಾಶ್ಚ ಪದ್ಮೇ ಶ್ರೀಸ್ತ್ರಿಗುಣಾತ್ಮಿಕಾ ॥ ೫೬ ॥

ತಂತ್ರಸಾರದ ಈ ವಾಕ್ಯಕ್ಕೆ ಹೆಚ್ಚಿನ ವಿವರಣೆಯನ್ನು 'ಸಂಗ್ರಹ'ವೆಂಬ ಗ್ರಂಥದಲ್ಲಿ ಹೀಗೆ ಹೇಳಿದೆಯೆಂದು ಛಲಾರೀ ಆಚಾರ್ಯರು ಉದಹರಿಸುತ್ತಾರೆ—

ಪೃಷ್ಠಕೋಣೇಷು ಪದ್ಮಸ್ಯ ಸತ್ವಾದೀನ್ ಕ್ರಮತೋ ಯಜೇತ್ ।
ಗುಣಾನ್ ಯಜೇತ್ ತತಃ ಪೂರ್ವಂ ಸೂರ್ಯಸೋಮಾಗ್ನಿಮಂಡಲಾನ್
(ಸತ್ವಾದೀನ್ ಗುಣಾನ್ ಯಜೇತ್ ಎಂದು ಅನ್ವಯ)

ಅರ್ಥ: ಪದ್ಮದ ಹಿಂಭಾಗದ ಕೋಣಗಳಲ್ಲಿ (ಎಂದರೆ ದಳಗಳಲ್ಲಿ) ಸತ್ವಾದಿಗುಣಗಳ ಅಭಿಮಾನಿಗಳಾದ ಶ್ರೀ-ಭೂ-ದುರ್ಗೆಯರನ್ನು ಕ್ರಮವಾಗಿ ಅರ್ಚಿಸಬೇಕು. ಅದಕ್ಕೆ ಮೊದಲೇ ಮುಂದಿರುವ ಮೂರು ದಳಗಳಲ್ಲಿ ದೀಪಗಳಂತಿರುವ ಸೂರ್ಯ- ಚಂದ್ರ-ಅಗ್ನಿ ಮಂಡಲಗಳನ್ನು ಪ್ರದಕ್ಷಿಣಾಕಾರವಾಗಿ ಅರ್ಚಿಸಬೇಕು.

ಶ್ರೀದೇವಿಯು ಬೆಳ್ಳಗೆ ಕರ್ಪೂರದಂತೆ ಇರುವಳೆಂದೂ, ಭೂದೇವಿ ಪದ್ಮದ ಕೆಂಪು ಛಾಯಾ ಉಳ್ಳವಳೆಂದೂ, ದುರ್ಗಾದೇವಿ ನೀಲಿ ಅಥವಾ ಕಪ್ಪುಬಣ್ಣವುಳ್ಳವಳೆಂದೂ ಶ್ರೀ ವಾದಿರಾಜರು ಒಂದು ಕಡೆ ಹೇಳಿದ್ದಾರೆ. ಅದರಂತೆ ಶ್ರೀದೇವೀರೂಪಗಳಾದ ಸೀತಾ, ರುಕ್ಮಿಣೀ ಮೊದಲಾದವರು ಕರ್ಪೂರದಂತೆ ಬೆಳ್ಳಗಿರುವರೆಂದೂ ಸತ್ಯಭಾಮಾದಿ ಭೂ-ದೇವಿಯ ರೂಪಗಳು ಪದ್ಮವರ್ಣವಾಗಿರುವರೆಂದೂ ತಿಳಿಯಬೇಕು.

ಶ್ರೀದೇವಿ ಸತ್ತ್ವಗುಣಾಭಿಮಾನಿ. ಭೂದೇವಿ ರಜೋಗುಣಾಭಿಮಾನಿ. ದುರ್ಗಾ ತಾಮಸಗುಣಾಭಿಮಾನಿ. ಈ ಮೂವರೂ ಹಿಂದಿನ ಮೂರು ದಳಗಳಲ್ಲಿ ಇರುವರೆಂದು ತಿಳಿದು ಅರ್ಚಿಸಬೇಕು. ಈ ಷಡ್ದಳಪದ್ಮದಲ್ಲಿರುವ ಸೂರ್ಯಾದಿಗಳನ್ನು ತಿಳಿಯಲು ಈ ಮುಂದಿನ ನಕ್ಷೆಯು ಕಿಂಚಿತ್ ಸಹಾಯಕವಾಗಬಹುದೆಂದು ಆಶಿಸುತ್ತೇವೆ.

4 ಶ್ರೀದೇವಿ ಸಂ ಸತ್ವಗುಣ	5 ಭೂದೇವಿ ರಂ ರಜೋಗುಣ	6 ದುರ್ಗಾ ತಂ ತಮೋಗುಣ	ಹಿಂದಿನ ಮೂರು ದಳಗಳು
3 ಮಂ ಅಗ್ನಿಮಂಡಲ	2 ಉಂ ಚಂದ್ರಮಂಡಲ	1 ಅಂ ಸೂರ್ಯಮಂಡಲ	ಮುಂದಿನ ಮೂರು ದಳಗಳು

(ಸಂಖ್ಯೆಗಳು ಪದ್ಮದಳಗಳನ್ನು ಸೂಚಿಸುತ್ತವೆ)

ಸೂರ್ಯ ಚಂದ್ರಾಗ್ನಿಮಂಡಲಗಳಲ್ಲಿ ಪ್ರಣವದ ಮೂರು ಅಕ್ಷರಗಳನ್ನು ಓಂಕಾರ. ಸಹಿತ ಹೇಳಿ ನಮಃ ಶಬ್ದಾಂತವಾಗಿ ಅರ್ಚಿಸಬೇಕೆಂದು 'ಯೋಗದೀಪಿಕಾ' ಎಂಬ ಗ್ರಂಥದಲ್ಲಿ ಹೇಳಿದೆ—'ತಾರಾದ್ಯಾ ಇಮ ಉದ್ದೇಶ್ಯಾನತ್ಯಂತಾ ಮನವಃ ಸ್ವಯಮ್। ಸತಾರಾಂಶಂ ಚಾರ್ಕಸೋಮ—ವಹ್ನಿಮಂಡಲಮೇವ ಚ।' [ತಾರಾದ್ಯಾಃ = ಓಂಕಾರವನ್ನು ಮೊದಲು ಸೇರಿಸಿ, ಇಮೇ = ಪರದೇವತಾದಿ ಮಂತ್ರಗಳು, ಉದ್ದೇಶ್ಯಾಃ =

ಚತುರ್ಥ್ಯಂತವಾಗಿ, ನತ್ಯಂತಾಃ = ಕಡೆಯಲ್ಲಿ ನಮಃ ಸೇರಿಸಿ, ಮನವಃ = ಮಂತ್ರಗಳು, ಸತಾರಾಂಶಂ = ಓಂಕಾರದ ಅಕಾರ-ಉಕಾರ-ಮಕಾರ ಸಹಿತವಾಗಿ]

(ಅರ್ಥ) ಪರದೇವತಾದಿ ಮಂತ್ರಗಳನ್ನು ಹೇಳುವಾಗ ಅವಕ್ಕೆ ಮೊದಲಲ್ಲಿ 'ಓಂ'-ಕಾರ ಸೇರಿಸಿ ಚತುರ್ಥ್ಯಂತವಾಗಿ ಹೇಳಿ 'ನಮಃ' ಸೇರಿಸಿ "ಓಂ ಪರದೇವತಾಯೈ ಲಕ್ಷ್ಮೀ ನಾರಾಯಣಾಯ ನಮಃ" ಇತ್ಯಾದಿ ರೀತಿಯಾಗಿಯೇ ಉದ್ಧಕ್ಕೂ ಹೇಳಬೇಕು. ಇನ್ನು ಸೂರ್ಯಚಂದ್ರಾಗ್ನಿಮಂಡಲಗಳನ್ನು ನಿರ್ದೇಶಿಸುವಾಗ ಓಂಕಾರದ ಜೊತೆ ಓಂಕಾರದ ಅಂಶಗಳಾದ ಅಕಾರ-ಉಕಾರ-ಮಕಾರಗಳನ್ನೂ ಸೇರಿಸಿ—ಓಂ ಅಂ ಸೂರ್ಯಮಂಡ-ಲಾಯ ದಕ್ಷಿಣಪಾರ್ಶ್ವದೀಪರೂಪಾಯ ನಮಃ । ಓಂ ಉಂ ಸೋಮಮಂಡಲಾಯ ಮಧ್ಯದೀಪರೂಪಾಯ ನಮಃ । ಓಂ ಮಂ ಅಗ್ನಿಮಂಡಲಾಯ ವಾಮಪಾರ್ಶ್ವದೀಪ-ರೂಪಾಯ ನಮಃ—ಎಂದು ಉಚ್ಚರಿಸಬೇಕೆಂದು 'ಯೋಗದೀಪಿಕೆ'ಯಲ್ಲಿ ಹೇಳಿದೆ.

V (ii) ಸೋಪಾನದಲ್ಲಿ

ಈ ಪದ್ಯವು ನಿಂತಿರುವ ಸೋಪಾನಪೀಠವೆಂಬ ನಾಲ್ಕು ಮೂಲೆಯ ಪೀಠದ ದೇವತೆಗಳನ್ನು ಹೇಳುತ್ತಾರೆ—

ಆತ್ಮಾಂತರಾತ್ಮ ಪರಮ—ಜ್ಞಾನಾತ್ಮಾನಶ್ಚ ಮೂರ್ತಯಃ ।

ಪಾಠಾಂತರಗಳು : (a) ಆತ್ಮಾಂತರಾತ್ಮಪರಮಾತ್ಮ (b) ಜ್ಞಾನಾತ್ಮಾನಸ್ತು

ಸೋಪಾನಪೀಠದ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಭಗವಂತನ ರೂಪಗಳನ್ನು ಚಿಂತಿಸಿ ಪೂಜಿಸಬೇಕು.



ಸೋಪಾನಪೀಠ ದೇವತೆಗಳು

V (iii) ಅಷ್ಟದಳ ಪದ್ಮದಲ್ಲಿ

ಈಗ ಅಷ್ಟದಳಪದ್ಮದಲ್ಲಿರುವ ಎಂಟು ಮೂರ್ತಿಗಳನ್ನೂ ಎಲ್ಲಕ್ಕೂ ಮಧ್ಯದಲ್ಲಿರುವ ಮೂರ್ತಿಯನ್ನೂ ಹೇಳುತ್ತಾರೆ—

ವಿಮಲೋತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ತಥೈವ ಚ ॥೫೭॥

ಪ್ರಹ್ವೀ ಸತ್ಯಾ ತಥೇಶಾನಾ ಽನುಗ್ರಹಾ ಚೇತಿ ಶಕ್ತಯಃ ।

ಅಷ್ಟದಿಕ್ಷು ಚ ಮಧ್ಯೇ ಚ ಸ್ವರೂಪಾಣ್ಯೇವ ತಾ ಹರೇಃ ॥ ೫೮ ॥

(ಈ ಶ್ಲೋಕವು ಗರುಡಪುರಾಣದಲ್ಲೂ [ಅಧ್ಯಾಯ ೩೪, ಶ್ಲೋಕ ೨೨], ಅಗ್ನಿಪುರಾಣದಲ್ಲೂ [ಅಧ್ಯಾಯ ೨೧, ಶ್ಲೋಕ ೪], ಪದ್ಮಪುರಾಣದಲ್ಲೂ, ಹಾರೀತಾದಿ ಸ್ಮೃತಿಗಳಲ್ಲೂ ಕಂಡುಬರುತ್ತದೆ ಎಂದು ಪ್ರಭಂಜನಾಚಾರ್ಯರು ಹೇಳಿದ್ದಾರೆ.)

(ಅರ್ಥ) ವಿಮಲಾ ಮೊದಲಾದ ಒಂಬತ್ತು ರೂಪಗಳು ಅಷ್ಟದಳದ ಎಂಟು ದಳಗಳಲ್ಲೂ ಮಧ್ಯದಲ್ಲೂ ಇರುತ್ತವೆ. ಈ ಒಂಬತ್ತೂ ಶ್ರೀಯ ಸ್ತ್ರೀರೂಪಗಳೇ ಆಗಿವೆ. ಈ ಒಂಬತ್ತು ರೂಪಗಳಲ್ಲಿ ಒಂದೊಂದೂ ಬೇರೆಬೇರೆ ಕ್ರಿಯೆಗಳನ್ನು ಮಾಡುತ್ತವೆಯೆಂದು ತಿಳಿಯಬೇಕು. ಇದನ್ನು ಉಡುಪಿಯ ಆಹ್ನಿಕಮಂಜರಿಯಿಂದ ಸಂಗ್ರಹಿಸಿದ್ದೇನೆ.—

1. ವಿಮಲಾ-ಛತ್ರಿ ಹಿಡಿದಿದ್ದಾಳೆ; 2. ಉತ್ಕರ್ಷಿಣೀ-ಚಾಮರ ಹಿಡಿದಿದ್ದಾಳೆ; 3. ಜ್ಞಾನಾ-ಬೀಸಣಿಕೆ ಹಿಡಿದಿದ್ದಾಳೆ; 4. ಕ್ರಿಯಾ-ಕನ್ನಡಿ ಹಿಡಿದಿದ್ದಾಳೆ; 5. ಯೋಗಾ-ಹಾಡುತ್ತಿದ್ದಾಳೆ; 6. ಪ್ರಹ್ವೀ-ನರ್ತನ ಮಾಡುತ್ತಿದ್ದಾಳೆ; 7. ಸತ್ಯಾ ವಾದ್ಯ ಹಿಡಿದಿದ್ದಾಳೆ; 8. ಈಶಾನಾ-ಸ್ತೋತ್ರ ಮಾಡುತ್ತಿದ್ದಾಳೆ; ಮತ್ತು 9. ಎಲ್ಲರಿಗೂ ಮಧ್ಯದಲ್ಲಿ ಅನುಗ್ರಹಾಖ್ಯ ಶಕ್ತಿಯು ನಿಂತು ಇವರೆಲ್ಲರೂ ಮಾಡುವ ಸೇವೆಯನ್ನು ಭಗವಂತನಿಗೆ (ಮೂಲಮೂರ್ತಿಗೆ) ಸಮರ್ಪಿಸುತ್ತಿದ್ದಾಳೆಂದು ತಿಳಿಯಬೇಕು. ಈ ಒಂಬತ್ತೂ ಭಗವಂತನ ಶಕ್ತಿರೂಪಗಳೇ ಎಂದು ತಿಳಿಯಬೇಕು. ಇವೆಲ್ಲಕ್ಕೂ ಶಕ್ತಿ ಎಂಬ ಹೆಸರೂ ಉಂಟು.

5. ಯೋಗಾ (ಹಾಡು)	6. ಪ್ರಹ್ವೀ (ನರ್ತನ)	7. ಸತ್ಯಾ (ವಾದ್ಯ)
4. ಕ್ರಿಯಾ (ಕನ್ನಡಿ)	9. ಅನುಗ್ರಹಾ (ಎಲ್ಲ ಸೇವೆ ಸಮರ್ಪಣೆ)	8. ಈಶಾನ (ಸ್ತೋತ್ರ)
3. ಜ್ಞಾನಾ (ಬೀಸಣಿಗೆ)	2. ಉತ್ಕರ್ಷಿಣೀ (ಚಾಮರ)	1. ವಿಮಲಾ (ಛತ್ರ)

ಅಷ್ಟದಳ ಪದ್ಮದ ದೇವತೆಗಳು (ಸಂಖ್ಯೆಗಳು ಪದ್ಮದ ದಳಗಳನ್ನು ಸೂಚಿಸುತ್ತವೆ)

ಭಾಗವತ ಷಷ್ಠಸ್ಕಂಧ ತಾತ್ಪರ್ಯದಲ್ಲಿ (೪/೨೭) ವಿಮಲಾ ಉತ್ಕರ್ಷಿಣೀ ಮೊದಲಾದ ಒಂಬತ್ತು ಭಗವಂತನ ಶಕ್ತಿಗಳ ಜೊತೆಯೇ ಅದೇ ಹೆಸರಿನ ಲಕ್ಷ್ಮಿಯ ಒಂಬತ್ತು ರೂಪಗಳನ್ನೂ ಬ್ರಹ್ಮ ವಾಯು ಶೇಷ ಗರುಡ ಈ ನಾಲ್ಕು ದೇವತೆಗಳ ಒಂಬತ್ತೊಂಬತ್ತು ಶಕ್ತಿರೂಪಗಳನ್ನೂ ಧ್ಯಾನಿಸಿ ಪೂಜಿಸಬೇಕೆಂದು ಹೇಳಿದೆ—

ವಿಷ್ಣೋಃ ಶ್ರಿಯೋ ಬ್ರಹ್ಮಣಶ್ಚ ವಾಯೋಃ ಸಂಕರ್ಷಣಸ್ಯ ಚ ।
ಗರುಡಸ್ಯ ಚ ಸಂಪ್ರೋಕ್ತಾಃ ಪ್ರತ್ಯೇಕಂ ನವಮೂರ್ತಯಃ ।

ಪೂಜ್ಯಾಃ ಸಾತ್ವತತಂತ್ರೇಷು ತತ್ರಾದ್ಯಾ ಮೂರ್ತಯೋ ಹರೇಃ ।
ಪ್ರಧಾನಾಸ್ತಾ ಹಿ ಸರ್ವಾಸಾಂ ಮೂರ್ತೀನಾಂ ಹರಿಮೂರ್ತಯಃ ।
(ಸಾತ್ವತತಂತ್ರೇಷು = ಪಾಂಚರಾತ್ರೋಕ್ತ ಪೂಜಾವಿಧಿಗಳಲ್ಲಿ)

ವಿಷ್ಣುಶಕ್ತಿರೂಪಗಳ ಜೊತೆ ಅದೇ ಹೆಸರಿರುವ ಲಕ್ಷ್ಮೀ ಮತ್ತು ಬ್ರಹ್ಮ, ವಾಯು, ಶೇಷ, ಗರುಡ— ಈ ನಾಲ್ವರ ಸ್ತ್ರೀರೂಪಗಳನ್ನೂ ಪೂಜಿಸಬೇಕು. ಆದರೆ ಹರಿಯ ಶಕ್ತಿ-ರೂಪಗಳೇ ಪ್ರಧಾನವೆಂದು ತಿಳಿಯಬೇಕು.

V (iv) ಅಷ್ಟದಳಪದ್ಮದ ಮೇಲೆ

ತತೋಽನಂತಂ ಯೋಗಪೀಠ—ಸ್ವರೂಪಂ ಪೂಜಯೇದ್ಧರೇಃ ॥ ೫೯ ॥

ತತಃ-ತತ್ರ ಎಂದರ್ಥ; ತತ್ರ ಎಂದರೆ ಅಲ್ಲಿ. ಎಂದರೆ ಪೀಠದ ಮಧ್ಯದಲ್ಲಿರುವ ಎಂಟು ದಳದ ಪದ್ಮದ ಮಧ್ಯದಲ್ಲಿರುವ 'ಅನುಗ್ರಹ' ಎಂಬ ವಿಷ್ಣುಶಕ್ತಿಯ ಮೇಲ್ಭಾಗದಲ್ಲಿ, ಹರೇಃ ಯೋಗಪೀಠಸ್ವರೂಪಂ-ಯೋಗಾಸನರೂಪನಾದ ತಲ್ಪಾಕಾರನಾದ (ಮಲಗಿ ಹಾಸಿಗೆಯಂತಿರುವ), ಅನಂತಂ-ಆದಿಶೇಷನನ್ನು, ಪೂಜಯೇತ್-ಪೂಜಿಸಬೇಕು.

ಎಂದರೆ ಅನುಗ್ರಹಾಖ್ಯ ವಿಷ್ಣುಶಕ್ತಿಯು ವಿಷ್ಣುವಿನ ಹಾಸಿಗೆಯಂತಿರುವ ಆದಿ-ಶೇಷನನ್ನು ಧರಿಸಿದ್ದಾಳೆ. ಅವಳ ಮೇಲೆ ಆದಿಶೇಷ ಪವಡಿಸಿ ವಿಷ್ಣುವಿಗೆ ಆಸನರೂಪನಾಗಿದ್ದಾನೆಂದೂ ಆದಿಶೇಷನ ಮೇಲೆ ರಮಾರೂಪ ಚಿತ್ರಾಸನ ಹಾಸಿದೆ. ಅದರ ಮೇಲೆ ವಿಷ್ಣು ಕುಳಿತಿದ್ದಾನೆಂದು ತಿಳಿಯಬೇಕು. ಇಲ್ಲಿಗೆ ಪೀಠಪೂಜೆಯ ವಿವರಣೆ ಮುಗಿಯಿತು.

(ಪೀಠಪೂಜಾಕ್ರಮದ ಅಂತ್ಯದಲ್ಲಿನ ಚಿತ್ರ ನೋಡಿ)

ಪೀಠಪೂಜೆಯಲ್ಲಿ ಮಂತ್ರಗಳ ಕ್ರಮ

ಇದುವರೆಗೆ ಪೀಠಪೂಜೆಯಲ್ಲಿ ಅನುಸಂಧಾನ ಮಾಡಿಕೊಳ್ಳಬೇಕಾದ ದೇವತಾದಿಗಳ ವಿವರವನ್ನು ಕ್ರಮವಾಗಿ ವರ್ಣಿಸಿದೆವು. ಈಗ ಪೂಜೆಗೆ ಅನುಕೂಲವಾಗುವಂತೆ ಆ ಮಂತ್ರಗಳನ್ನೇ ಕ್ರಮವಾಗಿ ಕೊಟ್ಟಿದ್ದೇವೆ. ಇವುಗಳನ್ನು ಓದುತ್ತಾ ಆಯಾ ಸ್ಥಾನಗಳನ್ನು ನೆನೆಸಿಕೊಂಡು ವಂದಿಸುತ್ತಾ ಹೋಗುವುದೇ ಪೀಠಪೂಜೆಯೆನಿಸಿಕೊಳ್ಳುತ್ತದೆ. ಇದರಲ್ಲೂ ಪುನಃ ಮನಸ್ಸಿಗೆ ಬೋಧವಾಗುವುದಕ್ಕಾಗಿ I, II ಇತ್ಯಾದಿ ಕ್ರಮಗಳನ್ನು ಕೊಟ್ಟಿದ್ದೇವೆ.

I ಗುರುಪೂಜೆ— i) ಪೀಠಪೂಜಾಂ ಕರ್ತುಂ ಗುರ್ವನುಜ್ಞಾಸ್ವೀಕಾರಾರ್ಥಂ ಗುರುಪೂಜಾಂ ಕರಿಷ್ಯೇ । ii) ಪೀಠಮಧ್ಯೇ ಓಂ ನಮೋ ನಾರಾಯಣಾಯ ಓಂ ಪರ-ದೇವತಾಯೈ ಶ್ರೀಲಕ್ಷ್ಮೀನಾರಾಯಣಾಯ ನಮಃ । iii) ವಾಮೇ ಗುರವೇ ಓಂ

ವಾಯುವೇ ನಮಃ । iv) ದಕ್ಷಿಣೇ ಓಂ ಸರ್ವದೇವತಾಭ್ಯೋ (ಬ್ರಹ್ಮರುದ್ರವಿಷ್ಣುಭ್ಯೋ ನಮಃ) ಬ್ರಹ್ಮರುದ್ರಾದಿ ನವಕೋಟಿದೇವತಾಭ್ಯೋ ನಮಃ । v) ಪುನರ್ವಾಮೇ ಓಂ ಸರ್ವಗುರುಭ್ಯಃ ಸನಕಾದಿಭ್ಯೋ ನಮಃ । ಓಂ ಸರ್ವಗುರುಭ್ಯೋ ವಿದ್ಯಾಗುರುಭ್ಯಃ ಸಂಪ್ರದಾಯಕರ್ತೃಭ್ಯೋ ಮೂಲಗುರುಭ್ಯಶ್ಚ ನಮಃ । ಏತೈರನುಜ್ಞಾತಃ ಪೀಠಪೂಜಾಂ ಕರಿಷ್ಯೇ । (ಪುಟ ೯೨ರಲ್ಲಿರುವ ಚಿತ್ರ ನೋಡಿ)

II ಪೀಠಾಧೋಭಾಗೇ ಆಗ್ನೇಯೇ ಓಂ ಗರುಡಾಯ ನಮಃ । ನೈರ್ಋತ್ಯೇ ಓಂ ವೇದವ್ಯಾಸಾಯ ನಮಃ । ವಾಯವ್ಯೇ ಓಂ ದುರ್ಗಾಯೈ ನಮಃ । ಐಶಾನ್ಯೇ ಓಂ ಸರಸ್ವತ್ಯೈ ನಮಃ ।

ವೇದವ್ಯಾಸ ದುರ್ಗಾ
ನೈ | ವಾ
ಆ | ಈ
ಗರುಡ ಸರಸ್ವತೀ

ಪೀಠದ ಕೆಳಗಿರುವ ನಾಲ್ಕು ಕಾಲುಗಳಲ್ಲಿರುವ ದೇವತೆಗಳು

III (i) ಪೀಠಪಾದೋರ್ಧ್ವಭಾಗೇ ಆಗ್ನೇಯೇ ಧರ್ಮಾಧಿಪತಯೇ ವೃಷತನವೇ ರಕ್ತವರ್ಣಾಯ ಓಂ ಧರ್ಮಾಯ ನಮಃ । ನೈರ್ಋತ್ಯೇ ಜ್ಞಾನಾಧಿಪತಯೇ ಸಿಂಹಾಕಾರಾಯ ಶ್ಯಾಮವರ್ಣಾಯ ಓಂ ವಾಯುವೇ ನಮಃ । ವಾಯವ್ಯೇ ವೈರಾಗ್ಯಾಧಿಪತಯೇ ಭೂತಾಕಾರಾಯ ಪೀತವರ್ಣಾಯ ಓಂ ಶಿವಾಯ ನಮಃ । ಐಶಾನ್ಯೇ ಐಶ್ವರ್ಯಾಧಿಪತಯೇ ಗಜಾಕಾರಾಯ ಕೃಷ್ಣವರ್ಣಾಯ ಓಂ ಇಂದ್ರಾಯ ನಮಃ ।

ಜ್ಞಾನ ವೈರಾಗ್ಯ
(ವಾಯು) ನೈ | ವಾ (ಶಿವ)
ಧರ್ಮ ಆ | ಈ ಐಶ್ವರ್ಯ
(ಯಮ) (ಇಂದ್ರ)

ಪೀಠಫಲಕದ ನಾಲ್ಕು ಮೂಲೆಗಳಲ್ಲಿರುವ ದೇವತೆಗಳು

(ii) ಪೀಠಫಲಕೇ ಪೂರ್ವಭಾಗೇ ಅಧರ್ಮಾಧಿಪತಯೇ ಓಂ ನಿರ್ಋತಯೇ ನಮಃ । ದಕ್ಷಿಣೇ ಅಜ್ಞಾನಾಧಿಪತಯೇ ಓಂ ದುರ್ಗಾಯೈ ನಮಃ । ಪಶ್ಚಿಮೇ ಅವೈರಾಗ್ಯಾಧಿ-

ಪತಯೇ ಓಂ ಕಾಮಾಯ ನಮಃ। ಉತ್ತರೇ ಅನೈಶ್ವರ್ಯಾಧಿಪತಯೇ ಓಂ ರುದ್ರಾಯ ನಮಃ ।

ಅವೈರಾಗ್ಯ (ಕಾಮ)
ಪಶ್ಚಿಮ

ಅಜ್ಞಾನ (ಡುಗಾರ್) ದಕ್ಷಿಣ —— | —— ಉತ್ತರ ಅನೈಶ್ವರ್ಯ (ರುದ್ರ)

ಪೂರ್ವ
ಅಧರ್ಮ (ನಿರ್ಋತಿ)

ಪೀಠಫಲಕದ ಪೂರ್ವಾದಿ ದಿಕ್ಕುಗಳಲ್ಲಿರುವ ದೇವತೆಗಳು

IV ಪೀಠಕ್ಕೆ ಆಧಾರಭೂತ ದೇವತೆಗಳು

೧. ಪೀಠಾಧಸ್ತಾತ್ ಓಂ ಪರಮಪುರುಷಾಯ ಪ್ರಾಜ್ಞಾಯೋಪವಿಷ್ಟಾಯ ನಮಃ । ೨. ಆಧಾರರೂಪಿಣ್ಯೈ ಓಂ ಶಕ್ತ್ಯೈ ರಮಾಯೈ ನಮಃ । ೩. ಬ್ರಹ್ಮಾಂಡಾತ್ ಬಹಿಃಸ್ಥಿತಾಯ ಓಂ ವಿಷ್ಣುಕೂರ್ಮಾಯ ನಮಃ । ೪. ಬ್ರಹ್ಮಾಂಡೋದಕಧಾರಕಾಯ ಓಂ ವಿಷ್ಣುಕೂರ್ಮಾಯ ನಮಃ । ೫. ತತ್ಪೃಷ್ಠಸ್ಥಿತಾಯ ಓಂ ವಾಯುಕೂರ್ಮಾಯ ನಮಃ । ೬. ತತ್ಪೃಷ್ಠಸ್ಥಿತಾಯ ಓಂ ಅನಂತಾಖ್ಯ ಶೇಷಾಯ ನಮಃ । ೭. ತತ್ಫಣಾಸ್ಥಿತಾಯೈ ಪೃಥಿವ್ಯಭಿಮಾನಿನ್ಯೈ ಓಂ ಭೂಮ್ಯೈ ನಮಃ । ೮. ತದುಪರಿ ಕ್ಷೀರಸಾಗರಾಭಿಮಾನಿನೇ ಓಂ ವರುಣಾಯ ನಮಃ। ೯. ತನ್ಮಧ್ಯೇ ಓಂ ರಮಾರೂಪಶ್ವೇತದ್ವೀಪಾಯ ನಮಃ। ೧೦. ತನ್ಮಧ್ಯೇ ಓಂ ರಮಾರೂಪಮಹಾದಿವ್ಯರತ್ನಮಂಟಪಾಯ ನಮಃ।

(೧೦೧ನೇ ಪುಟದಲ್ಲಿರುವ ಚಿತ್ರ ನೋಡಿ)

V ಮಂಟಪದಲ್ಲಿರುವ ಸೋಪಾನ ಮತ್ತು ಪದ್ಮದ್ವಯಗಳ ದೇವತೆಗಳು

i) ರಮಾರೂಪಮಹಾದಿವ್ಯರತ್ನಮಂಟಪೇ "ಸೋಪಾನೇ" ಪೂರ್ವೇ ಓಂ ಆತ್ಮನೇ ನಮಃ। ದಕ್ಷಿಣೇ ಓಂ ಅಂತರಾತ್ಮನೇ ನಮಃ। ಪಶ್ಚಿಮೇ ಓಂ ಪರಮಾತ್ಮನೇ ನಮಃ। ಉತ್ತರೇ ಓಂ ಜ್ಞಾನಾತ್ಮನೇ ನಮಃ ।

(ಪುಟ ೧೦೪ರಲ್ಲಿರುವ ಚಿತ್ರ ನೋಡಿ)

ii) ಷಡ್ದಳ ಪದ್ಮದಲ್ಲಿ —

ರಮಾರೂಪಕಂದನಾಳಸಹಿತ ಪದ್ಮಾಯ —। ಪದ್ಮಷಟ್ಕೋಣೇಷು ದಕ್ಷಿಣಕೋಣೇ ಓಂ ಅಂ ಸೂರ್ಯಮಂಡಲಾಯ ದಕ್ಷಿಣಪಾರ್ಶ್ವದೀಪರೂಪಾಯ ನಮಃ। ಸಮ್ಮುಖೇ ಓಂ ಉಂ ಸೋಮಮಂಡಲಾಯ ಸಮ್ಮುಖದೀಪರೂಪಾಯ ನಮಃ। ವಾಮಕೋಣೇ ಓಂ ಮಂ ಹುತಾಶನಾಯ ವಾಮಪಾರ್ಶ್ವದೀಪರೂಪಾಯ ನಮಃ। ಪದ್ಮಪೃಷ್ಠಕೋಣೇ ದೇವಸ್ಯ ದಕ್ಷಿಣಕೋಣೇ ಓಂ ಸಂ ಸತ್ವಾಭಿಮಾನಿನ್ಯೈ ಶ್ರಿಯೈ ನಮಃ। ದೇವಪೃಷ್ಠ-ದಲೇ ಉಪಬರ್ಹಣರೂಪಾಯೈ ಓಂ ರಂ ರಜೋಽಭಿಮಾನಿನ್ಯೈ ಭೂಮ್ಯೈ ನಮಃ। ದೇವವಾಮಕೋಣೇ ಓಂ ತಂ ತಮೋಽಭಿಮಾನಿನ್ಯೈ ದುರ್ಗಾಯೈ ನಮಃ। (ಪುಟ ೧೦೩ರಲ್ಲಿರುವ ಚಿತ್ರ ನೋಡಿ)

iii) ಅಷ್ಟದಳ ಪದ್ಮದಲ್ಲಿ—

ಪೂರ್ವಾದಿ ಕಮಲಾಷ್ಟಪತ್ರೇಷು 1) ಛತ್ರಧಾರಿಣ್ಯೈ ಓಂ ವಿಮಲಾಯೈ ನಮಃ। 2) ಚಾಮರಧಾರಿಣ್ಯೈ ಓಂ ಉತ್ಕರ್ಷಿಣ್ಯೈ ನಮಃ। 3) ವ್ಯಜನಧಾರಿಣ್ಯೈ ಓಂ ಜ್ಞಾನಾಯೈ ನಮಃ। 4) ದರ್ಪಣಧಾರಿಣ್ಯೈ ಓಂ ಕ್ರಿಯಾಯೈ ನಮಃ। 5) ಗಾನಕರ್ತ್ರ್ಯೈ ಓಂ ಯೋಗಾಯೈ ನಮಃ। 6) ನೃತ್ಯಂತ್ಯೈ ಓಂ ಪ್ರಹ್ವ್ಯೈ ನಮಃ। 7) ವಾದ್ಯ-ಹಸ್ತಾಯೈ ಓಂ ಸತ್ಯಾಯೈ ನಮಃ। 8) ಸ್ತೋತ್ರಕರ್ತ್ರ್ಯೈ ಓಂ ಈಶಾನಾಯೈ ನಮಃ। 9) ಏತಾಭಿಃ ಕೃತಸೇವಾಂ ಸಮರ್ಪಯಂತ್ಯೈ ಮಧ್ಯೇ ಓಂ ಅನುಗ್ರಹಾಯೈ ನಮಃ। ಓಂ ಏತಾಭಿಃ ಸಹ ವಿದ್ಯಮಾನಾಭ್ಯೋ ವಿಮಲಾದಿ ರಮಾಶಕ್ತಿರೂಪಾಭ್ಯೋ ನಮಃ। ತಥಾ ಓಂ ತಾದೃಶಾಭ್ಯೋ ಬ್ರಹ್ಮವಾಯುಶೇಷಗರುಡಶಕ್ತಿರೂಪಾಭ್ಯಶ್ಚ ನಮಃ। (ಪುಟ ೧೦೫ರಲ್ಲಿರುವ ಚಿತ್ರ ನೋಡಿ)

iv) ಅಷ್ಟದಳ ಪದ್ಮದ ಮೇಲೆ—

ಅನುಗ್ರಹಾಖ್ಯ ಶಕ್ತ್ಯಾ ಸಹಸ್ರಫಣಾಮಂಡಲಮಂಡಿತಾಯ ತಲ್ಪಾಕಾರಾಯ ಹರೇ ರ್ಯೋಗಾಸನರೂಪಾಯ ಓಂ ಶ್ರೀಮದನಂತಾಯ ನಮಃ। ತದುಪರಿ ಓಂ ರಮಾರೂಪ-ಚಿತ್ರಾಸನಾಯ ನಮಃ। (ಚಿತ್ರ ಮುಂದೆ ಕೊಡಲಾಗುವುದು)

ಇತಿ ಪೀಠಪೂಜಾಕ್ರಮಃ

ತಂತ್ರಸಾರೋಕ್ತಮಾರ್ಗೇಣ ಪೀಠಪೂಜಾವಿಧಿಕ್ರಮಃ
ವಿಷ್ಣುತೀರ್ಥೇನ ಸಂಪ್ರೋಕ್ತಃ ಪ್ರೀತ್ಯೈ ಮಾಧವಮಧ್ವಯೋಃ।

ಪ್ರತಿಮೆಗಳಲ್ಲಿ ಆವಾಹನ ಕ್ರಮ

ಕ) ಪೀಠಿಕೆ: ಪೀಠಪೂಜೆಯನ್ನು ವಿಸ್ತಾರವಾಗಿ ಹೇಳಿದ ಬಳಿಕ, ತಂತ್ರಸಾರದಲ್ಲಿ ಶ್ರೀಮದಾಚಾರ್ಯರು "ತತ್ರಾವಾಹ್ಯ ಹರಿಮ್" (ತಂ. ಸಾ. ೧ ಅಧ್ಯಾಯ, ೫೯ ಶ್ಲೋ.) ಅಲ್ಲಿ ಎಂದರೆ, ಆ ಪೀಠದಲ್ಲಿ ಶ್ರೀಹರಿಯನ್ನು ಆವಾಹನೆ ಮಾಡಿ" ಎಂದು ಮುಂದಿನ ವಿಧಿಯನ್ನು ಸೂಚಿಸಿದ್ದರು. ಶ್ರೀ ಟೀಕಾರಾಯರು ಪದ್ಯಮಾಲಾದಲ್ಲಿ ಅದನ್ನೇ ವಿಸ್ತಾರಮಾಡಿ ಹನ್ನೆರಡು ಶ್ಲೋಕಗಳಲ್ಲಿ (೫೮-೬೯) ಸ್ಪಷ್ಟಪಡಿಸಿದ್ದಾರೆ. ಹೀಗೇಕೆ ಮಾಡಬೇಕಾಗಿತ್ತೆಂದರೆ ಟೀಕಾರಾಯರೆ ಸ್ಪಷ್ಟಪಡಿಸುತ್ತಾರೆ—"ಸೂತ್ರತ್ವಾತ್ ತಸ್ಯ ಬೋಧಾರ್ಥಂ ಕ್ವಚಿತ್ ವಕ್ಷ್ಯಾಮಿ ವಿಸ್ತರಮ್ ॥೫೮॥"—ಆಚಾರ್ಯರ ವಾಕ್ಯಗಳು ಸೂತ್ರಗಳಂತೆ ಸ್ವಲ್ಪ ಅಕ್ಷರಗಳುಳ್ಳವಾದರೂ ಅನೇಕಾರ್ಥಗಳಿಂದ ತುಂಬಿರುತ್ತವೆ. ಆದಕಾರಣ ಅದನ್ನೇ ಸ್ವಲ್ಪ ವಿಸ್ತರಿಸಿ ಹೇಳುತ್ತೇನೆ' ಎನ್ನುತ್ತಾರೆ ಶ್ರೀ ಟೀಕಾರಾಯರು. ಆದರೆ ಆ ಕ್ರಮವನ್ನು ತಿಳಿಸುವುದಕ್ಕೆ ಪೂರ್ವಭಾವಿಯಾಗಿ ಕೆಲವು ಮುಖ್ಯ ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಅತ್ಯವಶ್ಯಕವಾದ್ದರಿಂದ ಅವನ್ನೇ ಮೊದಲು ತಿಳಿಸುತ್ತೇನೆ.

ಖ) ಪೂಜಿಸಲ್ಪಡುವ ಮೂರ್ತಿಗಳು ಅಥವಾ ಪ್ರತಿಮೆಗಳು: ಕಲಿಪ್ರಾಬಲ್ಯದಿಂದ ಈಚೀಚೆಗೆ ಪ್ರಾಯಶಃ ಅನೇಕರ ಮನೆಗಳಲ್ಲಿ ಪ್ರತಿನಿತ್ಯ ದೇವರಪೂಜೆ ನಡೆಯುವ ಹವ್ಯಾಸವೇ ತಪ್ಪಿಹೋಗಿದೆ. ಎಷ್ಟೋ ಮನೆಗಳಲ್ಲಿ ನಾನು ಕಂಡಹಾಗೆ (ವಿಶೇಷವಾಗಿ ಹೊಸ-ಹೊಸದಾಗಿ ಸಂಸಾರ ಹೂಡುತ್ತಿರುವವರ ಮನೆಗಳಲ್ಲಿ) ಒಂದು ಸಾಲಿಗ್ರಾಮವೂ ಸಹ ಇರುವುದಿಲ್ಲ. ಹಿಂದಿನ ಕಾಲದಲ್ಲಿ ಕನ್ಯಾದಾನ ಮಾಡುವಾಗ ಒಂದು ಸಾಲಿಗ್ರಾಮ ಸಹಿತವಾಗಿಯೇ ಧಾರೆಯೆರೆದುಕೊಡುತ್ತಿದ್ದರು. ಈಚೆಗೆ ಸಾಲಿಗ್ರಾಮಗಳು ಸಿಗುವುದೇ ದುರ್ಲಭವಾದ್ದರಿಂದ ಈಗ ಸಾಲಿಗ್ರಾಮಕ್ಕೆ ಬದಲಾಗಿ ಒಂದು ಬೆಳ್ಳಿ ಕೃಷ್ಣನನ್ನು ಕೊಟ್ಟು ಕಾರ್ಯ ಮುಗಿಸುತ್ತಾರೆ. ಇದು ಕಾಲದ ಮಹಿಮೆ. ಸಾಲಿಗ್ರಾಮವೇ ಇಲ್ಲದಿರುವಾಗ ಅವುಗಳ ಪೂಜೆಯ ಪ್ರಸಂಗವೂ ಬರುವುದಿಲ್ಲವೆಂಬುದು ನನ್ನ ಅಭಿಪ್ರಾಯ.

ಆದರೆ ಕೆಲವರ ಮನೆಗಳಲ್ಲಿ ಹಿಂದಿನಿಂದ ಪೂಜಿಸಲ್ಪಡುತ್ತಾ ಬಂದ ಕೃಷ್ಣ, ರಾಮ, ನರಸಿಂಹ, ಹಯಗ್ರೀವ, ವಿಠ್ಠಲ, ಲಕ್ಷ್ಮೀನಾರಾಯಣ, ಶ್ರೀನಿವಾಸದೇವರು ಮೊದಲಾದ ಲೋಹಮಯ ಪ್ರತಿಮೆಗಳು ಇರುತ್ತವೆ. ಅಂಥಾ ಪ್ರತಿಮೆಗಳು ಇದ್ದ ಪಕ್ಷದಲ್ಲಿ ಮಾತ್ರ ಈ 'ಆವಾಹನಕ್ರಮ' ಅನ್ವಯಿಸುತ್ತದೆ. ಅಥವಾ ಹೊಸದಾಗಿ ಬಂದ ಕೃಷ್ಣ ರಾಮ-ನರಸಿಂಹಾದಿ ಪ್ರತಿಮೆಗಳು ನಮಗೆ ಬಂದರೂ ಸಹ ಅವುಗಳನ್ನು ಹೇಗೆ ಅರ್ಚಿಸಬೇಕು ಎಂಬುದನ್ನು ತೋರಿಸಿಕೊಡುವುದೇ ಈ ಕ್ರಮದ ಮುಖ್ಯ ಗುರಿಯಾಗಿದೆ. ಮೂರ್ತಿಗಳೇ ಇಲ್ಲದ ಪಕ್ಷದಲ್ಲಿ ಈ 'ಆವಾಹನ'ದ ಪ್ರಸಕ್ತಿಯೂ ಹುಟ್ಟುವುದೇ ಇಲ್ಲ. ಕೇವಲ ಸಾಲಿ-ಗ್ರಾಮಗಳೇ ಇದ್ದರೂ ಸಹ 'ಆವಾಹನಕ್ರಮ' ಹುಟ್ಟುವುದೇ ಇಲ್ಲ. ಅದಕ್ಕೇ ಬೇರೆ ಕ್ರಮ ಇದೆ. ಅದನ್ನು ಮುಂದೆ ವಿವರಿಸುವೆವು.

ಗ) ಭಿನ್ನಭಿನ್ನ ಪ್ರತಿಮೆಗಳು: ಭಗವಂತನ ಪ್ರತಿಮೆಗಳನ್ನು 'ಲೋಹೈರ್ವಾ ಶಿಲಯಾ ದಾರ್ವಾ ಮೃದಾ ವಾಪಿ ಯಥಾಕ್ರಮಮ್' (ತಂ.ಸಾ. ೪/೧) ಎಂದು ಹೇಳಿದಂತೆ ಲೋಹಗಳಿಂದಲೂ ಕಲ್ಲಿನಿಂದಲೂ ಕಾಷ್ಠ(ಮರ)ದಿಂದಲೂ ಅದೂ ಇಲ್ಲದಿದ್ದರೆ ಮಣ್ಣಿನಿಂದಲೂ ಪ್ರತಿಮೆಗಳನ್ನು ಮಾಡಬಹುದೆಂದು ಆಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಅವುಗಳಲ್ಲಿ ಹೆಚ್ಚಾಗಿ ಮನೆಯಲ್ಲಿ ಪೂಜಿಸುವುದು ಲೋಹದ ಪ್ರತಿಮೆಗಳೇ. ಗುಡಿಗಳಲ್ಲಿ ವಿಶೇಷವಾಗಿ ಶಿಲಾಪ್ರತಿಮೆಗಳನ್ನು ಪೂಜಿಸುತ್ತಾರೆ; ಅಲ್ಲೂ ಉತ್ಸವಮೂರ್ತಿಗಳು ಪ್ರಾಯಶಃ ಲೋಹಮಯದ್ದಾಗಿರುತ್ತವೆ. ಕ್ವಚಿತ್ ಮರದ ಪ್ರತಿಮೆಗಳನ್ನೂ (ವಿಶೇಷವಾಗಿ ಗಂಧದ ಮರದ ಅಥವಾ ಚಂದನದ ಮೂರ್ತಿಗಳನ್ನು) ಪೂಜಿಸುವುದೂ ಉಂಟು. ಮಣ್ಣಿನ ಮೂರ್ತಿಗಳಿಗೆ ಗೌರಿ-ಗಣೇಶ ಹೆಚ್ಚು ಪ್ರಸಿದ್ಧಿಗೆ ಬಂದಿವೆ. ಗೋಕುಲಾಷ್ಟಮೀ ಪೂಜೆಯಲ್ಲಿ ಕೆಲವರು ಮಣ್ಣಿನ ಪ್ರತಿಮೆಗಳನ್ನು ಪೂಜಿಸುವ ವಾಡಿಕೆ ಇದೆ. ಹೀಗೆ ಎಲ್ಲ ವಿಧದ ಮೂರ್ತಿಗಳೂ ಪೂಜ್ಯಗಳೇ ಆಗಿವೆ.

ಆದರೆ ಲೋಹಮಯಮೂರ್ತಿಗಳೇ ಎಲ್ಲಕ್ಕಿಂತ ಶ್ರೇಷ್ಠ. ಅದನ್ನು ಬಿಟ್ಟರೆ ಶಿಲಾಮೂರ್ತಿಗಳು ಶ್ರೇಷ್ಠ. ಲೋಹದ ಮೂರ್ತಿಗಳಲ್ಲೂ ಚೊಕ್ಕ ಬಂಗಾರದ ಪ್ರತಿಮೆಗಳಾದರೆ ಅತ್ಯಂತ ಶ್ರೇಷ್ಠ. ಅದನ್ನು ಬಿಟ್ಟರೆ ಬೆಳ್ಳಿಯ ಪ್ರತಿಮೆಗಳು ಶ್ರೇಷ್ಠ. ಅದೂ ಬಿಟ್ಟರೆ ತಾಮ್ರ ಶ್ರೇಷ್ಠ. ಇದನ್ನು ಪಾದ್ಮಸಂಹಿತೆಯ ಕೆಳಗಿನ ವಾಕ್ಯಗಳು ಸ್ಪಷ್ಟಪಡಿಸುತ್ತವೆ (ಬನ್ನಂಜೆ ಗೋವಿಂದಾಚಾರ್ಯರ ತಂತ್ರಸಾರ ತಾತ್ಪರ್ಯದಿಂದ, ಪುಟ ೪೨, 1958ರ ಮುದ್ರಣ)—

ಹಿರಣ್ಮಯೀ ಪ್ರತಿಕೃತಿಃ ಸರ್ವಸಂಪತ್ಕರೀ ಭವೇತ್ ।

ಬಂಗಾರದ ಪ್ರತಿಮೆಯು ಸರ್ವ ಸೌಭಾಗ್ಯವನ್ನೂ ಉಂಟುಮಾಡುತ್ತದೆ.

ವಿತ್ತಂ ಪಶೂಂಶ್ಚ ವಿಜಯಂ ವಿಜ್ಞಾನಂ ರಾಜತೀಫಲಮ್ ।

ಬೆಳ್ಳಿಯ ಪ್ರತಿಮೆಯು ದುಡ್ಡನ್ನೂ, ದನ ಕರುಗಳ ವೃದ್ಧಿಯನ್ನೂ ಜಯವನ್ನೂ ವಿಜ್ಞಾನವನ್ನೂ ಕೊಡುತ್ತದೆ.

ತಾಮ್ರಾ ಧರ್ಮಂ ಚ ವೃದ್ಧಿಂ ಚ ಕರೋತಿ... ।

ತಾಮ್ರದ ಪ್ರತಿಮೆಗಳು ಧರ್ಮಕ್ಕೆ ಪ್ರೋತ್ಸಾಹಕವೂ, ವೃದ್ಧಿಪ್ರದಗಳೂ ಆಗಿರುತ್ತವೆ.

.. .. ಬಹುಸೌಖ್ಯದಾ ।
ಖೇದಪ್ರದಾ ಶಿಲಾಜಾ ಚ ... ...

ಕಲ್ಲಿನ ಮೂರ್ತಿಗಳು ದುಃಖನಾಶಕವೂ ಬಹುಸೌಖ್ಯಪ್ರದಗಳೂ ಆಗಿರುತ್ತವೆ. ('ಪ್ರದಾ' ಎಂಬಲ್ಲಿ 'ದ'ಕಾರವು 'ದೋ ಅವಖಂಡನೇ'-ಕತ್ತರಿಸು ಎಂಬ ಧಾತುವಿನ ರೂಪ; ದ-ಕೊಡು ಎಂಬ ಧಾತುವಿನ ರೂಪವಲ್ಲ.)

ಘ) ಪ್ರತಿಮೆಗಳ ಲಕ್ಷಣಗಳು : ವಿಷ್ಣುಪ್ರತಿಮೆಗಳಲ್ಲಿ ಅವುಗಳ ಎತ್ತರಕ್ಕೆ ತಕ್ಕಂತೆ ಕೈಕಾಲು ಹಣೆ ಮೊದಲಾದ ಪ್ರತಿಯೊಂದು ಸಣ್ಣಸಣ್ಣ ಅಂಗವೂ ಎಷ್ಟು ದಪ್ಪ, ಎಷ್ಟು ಎತ್ತರ ಇರಬೇಕು, ಸುತ್ತಳತೆ ಎಷ್ಟಿರಬೇಕು, ಒಂದು ಬೆಟ್ಟಿಗೂ ಇನ್ನೊಂದು ಬೆಟ್ಟಿಗೂ ಕೈಗಳ ಉಗುರುಗಳೇ ಎಷ್ಟೆಷ್ಟು ಗಾತ್ರ ಇರಬೇಕು ಎಂಬ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನೂ ಶ್ರೀಮದಾಚಾರ್ಯರು ತಂತ್ರಸಾರದ ತೃತೀಯಾಧ್ಯಾಯದ ಪ್ರಾರಂಭದಲ್ಲಿ ಹೇಳಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ಪ್ರತಿಯೊಂದು ಅಂಗ-ಪ್ರತ್ಯಂಗಗಳೂ ಇದ್ದರೆ ಅದರಲ್ಲಿ ಭಗವಂತನ ಅತ್ಯಂತ ಹೆಚ್ಚು ಸನ್ನಿಧಾನವಿರುತ್ತದೆ. ಅದಕ್ಕೇ ನಮ್ಮ ಮಠಗಳಲ್ಲಿ ಪೂಜ್ಯವಾದ ಮೂರ್ತಿಗಳನ್ನು ಬ್ರಹ್ಮಕರಾರ್ಚಿತ, ಶ್ರೀಮದಾಚಾರ್ಯಕರಾರ್ಚಿತ, ಜಯತೀರ್ಥಕರಾರ್ಚಿತ ಇತ್ಯಾದಿ ಪ್ರತಿಮೆಗಳೆಂದು ಹೇಳುತ್ತಾರೆ. ಬ್ರಹ್ಮಾದಿಗಳು ಕೈಮುಟ್ಟಿ ಪೂಜಿಸಿದರೇ ಸಾಕು, ಆ ಪ್ರತಿಮೆಗಳಲ್ಲಿ ಭಗವತ್ಸಾನ್ನಿಧ್ಯ ಸ್ಥಿರವಾಗಿ ನಿಲ್ಲುತ್ತದೆ—ಎಂಬುದೇ ಇದರ ಹಿನ್ನೆಲೆ.

ಮೇಲೆ ಹೇಳಿದ ಪ್ರತಿಮೆಗಳ ಲಕ್ಷಣಗಳು (ಅಂಗಾಂಗಗಳ ಅಳತೆಗಳು) ಕಡಿಮೆಯಾದಷ್ಟೂ ಸನ್ನಿಧಾನ ಕಡಿಮೆ. ಅದೇ ರೀತಿ ಹೆಚ್ಚು ಹೆಚ್ಚು ಪೂಜಿಸಿದಷ್ಟೂ ಹೆಚ್ಚು ಹೆಚ್ಚು ಸನ್ನಿಧಾನ. ಪೂಜಿಸದೆ ಹಾಗೆಯೇ ಮುಚ್ಚಿಟ್ಟರೆ ಸನ್ನಿಧಾನವೂ ಕಡಿಮೆಯಾಗಿ ಹೋಗುತ್ತದೆ. ದೇವಸ್ಥಾನಗಳಲ್ಲಂತೂ ಒಂದು ದಿನ ಪೂಜೆ ತಪ್ಪಿದರೂ ಪ್ರಾಯಶ್ಚಿತ್ತ ಮಾಡಬೇಕು, ಉದ್ದಕ್ಕೆ ಮೂರು ದಿನ ತಪ್ಪಿಹೋದರೆ ಪುನಃ ಪ್ರತಿಷ್ಠೆಯೇ ಆಗಬೇಕಾಗುತ್ತದೆ. ಆದರೆ ಮನೆಯಲ್ಲಿರುವ ಪ್ರತಿಮೆಗಳಿಗೆ ಈ ವಿಧಿ ಅನ್ವಯಿಸುವುದಿಲ್ಲ.

ಙ) ಪ್ರತಿಮೆಗಳಿಗೆ ಸಂಸ್ಕಾರ : ದೇವಸ್ಥಾನಗಳಲ್ಲಿರುವ ಮೂರ್ತಿಗಳೆಲ್ಲಾ ಕಲ್ಲಿನ ಮೂರ್ತಿಗಳೇ ಆದರೂ ಅವನ್ನು ಗುಡಿಯಲ್ಲಿ ತಂದು ಕೂಡಿಸುವುದಕ್ಕೆ ಪೂರ್ವದಲ್ಲಿ ಅನೇಕ ಪ್ರಕಾರವಾದ ಪ್ರತಿಷ್ಠಾಂಗಭೂತ ಸಂಸ್ಕಾರಗಳನ್ನು ಮಾಡಿರುವುದರಿಂದ ಅವುಗಳಲ್ಲಿ ಭಗವತ್ಸಾನ್ನಿಧ್ಯವಿರುತ್ತದೆ. ಅದರಂತೆಯೇ ಅಂಗಡಿಯಲ್ಲಿರುವ ಲೋಹದ ಪ್ರತಿಮೆಗಳನ್ನೇ ತಂದರೂ ಪೂಜೆಗೆ ಇಟ್ಟುಕೊಳ್ಳುವುದಕ್ಕೆ ಮುಂಚೆ ಪಂಚಗವ್ಯದಲ್ಲೂ ಪಂಚಾಮೃತದಲ್ಲೂ ಅಧಿವಾಸ ಮಾಡಿಸಿ 'ಅಗ್ನ್ಯುತ್ತಾರಣ'ವೆಂಬ ಸಂಸ್ಕಾರವನ್ನು ಮಾಡಿ ಆ ಪ್ರತಿಮೆಗಳಲ್ಲಿ ತತ್ವನ್ಯಾಸ, ಮಾತೃಕಾನ್ಯಾಸಗಳನ್ನು ಕನಿಷ್ಠಪಕ್ಷ ನಾರಾಯಣಾಷ್ಟಾಕ್ಷರ ಮೂಲಮಂತ್ರದಿಂದಲಾದರೂ ನ್ಯಾಸ ಮಾಡಲೇಬೇಕು. ಆಗಲೇ ಅವುಗಳಲ್ಲಿ ಸಾನ್ನಿಧ್ಯ ಬರುತ್ತದೆ. ಇಲ್ಲದಿದ್ದರೆ ಅವುಗಳು ಕೇವಲ ಲೋಹ ಅಥವಾ ಕಲ್ಲುಗಳೇ ಆಗಿರುತ್ತವೆಯೆಂಬುದನ್ನು ಗಮನಿಸಬೇಕು. ಈ ಅನುಸಂಧಾನದ ಅರಿವಿಲ್ಲದೆ ಸುಮ್ಮನೆ ಡಂಭಾಚಾರಕ್ಕೆ ಪೂಜಿಸುವವರನ್ನು ಕುರಿತೇ ಪುರಂದರದಾಸರು 'ಉದರವೈರಾಗ್ಯವಿದು...' ಎಂಬ ಕೀರ್ತನೆ ಹಾಡಿದ್ದಾರೆ. ಕಂಚುಕಾರರ ಅಂಗಡಿಯಂತೆ ಎಂದು ಹಾಸ್ಯಮಾಡಿರುವುದೂ ಈ ಅನುಸಂಧಾನ ತಿಳಿಯದವರನ್ನು ಕುರಿತೇ ಆಗಿದೆ.

ಚ) ಆವಾಹನೆಯ ಆವಶ್ಯಕತೆ : ಪ್ರತಿಷ್ಠೆಯ ಸಂಸ್ಕಾರಗಳಿಂದ ಕಲ್ಲಿನಲ್ಲಿ ಹೇಗೆ ಭಗವತ್ಸಾನ್ನಿಧ್ಯ ಬರುತ್ತದೋ ಅದೇ ರೀತಿ ಮನೆಯಲ್ಲಿ ಪೂಜೆಗಾಗಿ ಇಟ್ಟಿರುವ ಮೂರ್ತಿಗಳಲ್ಲೂ ಭಗವತ್ಸಾನ್ನಿಧ್ಯ ಬರುವುದಕ್ಕಾಗಿಯೇ "ಆವಾಹನೆ" ಮಾಡುತ್ತೇವೆ. ನಮ್ಮ ಹೃದಯದಲ್ಲಿರುವ ನಮ್ಮ ಬಿಂಬಮೂರ್ತಿಯನ್ನು (ಬಿಂಬರೂಪಿ ಪರಮಾತ್ಮನನ್ನು) ಆ ಮೂರ್ತಿಯಲ್ಲಿ ಚಿಂತಿಸುವುದಕ್ಕೇ ಆವಾಹನೆಯೆಂದು ಹೆಸರು. ಆಗಲೇ ಆ ಮೂರ್ತಿ ಪೂಜೆಗೆ ಅರ್ಹವಾಗುತ್ತದೆ. ಆವಾಹನೆ ಇಲ್ಲದಿದ್ದರೆ ಆ ಮೂರ್ತಿ ಕೇವಲ ಲೋಹವೇ ಆಗಿರುತ್ತದೆ.

ಛ) ಪ್ರತಿಮೆಗಳಲ್ಲಿ ನ್ಯಾಸಕ್ರಮ : ಮತ್ತು ನಮ್ಮ ದೇಹದಲ್ಲಿ ಹೇಗೆ ಕಣ್ಣು ಕಿವಿ ಮೂಗುಗಳೆಲ್ಲಾ ಸಜೀವವಾಗಿರುತ್ತವೋ ಅದರಂತೆಯೇ ನಾವು ಪೂಜಿಸುವ ಮೂರ್ತಿಯಲ್ಲೂ ಕಣ್ಣು ಕಿವಿ ಮೂಗು ಮೊದಲಾದ ಇಂದ್ರಿಯಾಭಿಮಾನಿಗಳನ್ನು (ಅರ್ಥಾತ್) ತತ್ತ್ವಾಭಿಮಾನಿಗಳನ್ನು ಆ ಮೂರ್ತಿಯಲ್ಲಿ ಚಿಂತಿಸುವುದಕ್ಕೇ 'ತತ್ತ್ವನ್ಯಾಸ'ವೆಂದು ಹೆಸರು. ನಮ್ಮ ದೇಹದಲ್ಲಿ ಹೇಗೆ ಜೀವವು (ಉಸಿರಾಟವು 'ಪ್ರಾಣ'ವು) ಮುಖ್ಯವಾಗಿ ನೆಲೆಸಿದೆಯೋ ಅದೇ ರೀತಿ ಮೂರ್ತಿ(ಪ್ರತಿಮೆ)ಯಲ್ಲೂ 'ಪ್ರಾಣಾಧಾರಶಕ್ತಿ'ಯನ್ನು ಚಿಂತಿಸುವುದಕ್ಕೇ 'ಮಾತೃಕಾನ್ಯಾಸ'ವೆಂದು ಹೆಸರು.

ಎಲ್ಲ ಭಗವನ್ಮೂರ್ತಿಗಳೂ ಮೂಲರೂಪಿ ನಾರಾಯಣನ ರೂಪಾಂತರಗಳೇ ಆಗಿರುವುದರಿಂದ ನಾರಾಯಣಾಷ್ಟಾಕ್ಷರ ಮಂತ್ರದ ಎಂಟು ಅಕ್ಷರಗಳನ್ನು ಆ ಮೂರ್ತಿಯಾ ಕ್ಲೃಪ್ತವಾದ ಎಂಟು ಅಂಗಗಳಲ್ಲಿ ಧ್ಯಾನ ಮಾಡುವುದರಿಂದ ಆ ಮೂರ್ತಿಯಲ್ಲಿ ಭಗವತ್ ಸನ್ನಿಧಾನವುಂಟಾಗುವುದು. ಹೀಗೆ ಆ ಅಕ್ಷರಗತ ಭಗವನ್ಮೂರ್ತಿಯನ್ನು ಆ ಅಂಗದಲ್ಲಿ ಧ್ಯಾನಿಸುವುದಕ್ಕೇ 'ನ್ಯಾಸ' (ಇಡುವಿಕೆ) ಎಂದು ಹೆಸರು. ಉದಾಹರಣೆಗೆ ನಾರಾಯಣಾಷ್ಟಾಕ್ಷರ ಮಂತ್ರದ ಮೊದಲನೆಯ ಓಂಕಾರಕ್ಕೆ ವಿಶ್ವರೂಪಿ ಪರಮಾತ್ಮ ಪ್ರತಿಪಾದ್ಯದೇವತೆ; ಆ ವಿಶ್ವರೂಪವನ್ನು ಮೂರ್ತಿಯ ನೆತ್ತಿಯಲ್ಲಿ ಚಿಂತಿಸುತ್ತಾ ತುಳಸೀದಳದಿಂದ ನೆತ್ತಿಯನ್ನು ಮುಟ್ಟುತ್ತೇವೆ; ಆದರಿಂದ 'ವಿಶ್ವ'ರೂಪಿ ಪರಮಾತ್ಮ ನೆತ್ತಿಯಲ್ಲಿ 'ನೆಲೆಸುತ್ತಾನೆ'; ಇದೇ 'ನ್ಯಾಸ'. ಹೀಗೆ ಎಂಟು ಸ್ಥಾನಗಳಲ್ಲಿ ಎಂಟು ಮೂರ್ತಿಗಳನ್ನು 'ನ್ಯಾಸ' ಮಾಡಿದರೆ —ಅರ್ಥಾತ್ ಚಿಂತಿಸಿದರೆ ಭಗವಂತನ ಪೂರ್ಣಸಾನ್ನಿಧ್ಯ ಆ ಮೂರ್ತಿಯಲ್ಲಿ ಸಿದ್ಧಿಸುತ್ತದೆ.

ಈ ರೀತಿ ಸೃಷ್ಟಿ-ಸ್ಥಿತಿ-ಲಯ ಕ್ರಮಗಳಿಂದ ಎಂದರೆ ಮೇಲಿಂದ ಕೆಳಕ್ಕೆ (ಸೃಷ್ಟಿ), ಕೆಳಗಿಂದ ಮೇಲಕ್ಕೆ (ಲಯ), ಮೊದಲ ನಾಲ್ಕು ಮೇಲಿಂದ ಕೆಳಕ್ಕೆ, ಕಡೆಯ ನಾಲ್ಕು ಕೆಳಗಿಂದ ಮೇಲಕ್ಕೆ (ಸ್ಥಿತಿ) ಮಾಡಿ. ಪುನಃ ಸೃಷ್ಟಿಕ್ರಮದಲ್ಲಿ—ಹೀಗೆ ನಾಲ್ಕಾವರ್ತಿ ನ್ಯಾಸ ಮಾಡಿದರೆ ಆ ಸನ್ನಿಧಾನ ಮತ್ತೂ ಹೆಚ್ಚಾಗುತ್ತದೆಯೆಂದು ತಂತ್ರಸಾರದಲ್ಲಿ (೪ ಅ., ೧೩೭ ಶ್ಲೋ.) ಹೇಳಿದ್ದಾರೆ—

ಪ್ರತಿಮಾಯಾಂ ಆತ್ಮನಿ ಚ ನ್ಯಾಸೋಽಯಂ ಸನ್ನಿಧಾನಕೃತ್ ।

ಈ ರೀತಿ ನ್ಯಾಸವನ್ನು ತನ್ನಲ್ಲಿಯೂ ಪ್ರತಿಮೆಯಲ್ಲಿಯೂ ಮಾಡಿಕೊಂಡರೆ ಹೆಚ್ಚು ಹೆಚ್ಚು ಸನ್ನಿಧಾನವುಂಟಾಗುತ್ತದೆ ಎಂಬುದು ಅದರ ಅರ್ಥ. ಈ ನ್ಯಾಸವನ್ನು ಎಷ್ಟು ಸರಿ ಮಾಡಿಕೊಳ್ಳಬೇಕೆಂದರೆ—

ಸ್ಥಿತ್ಯಂತಾ ಏವ ವರ್ಣಾನಾಂ ಶ್ರೇಷ್ಠಾ ಏವಂ ಚತುರ್ದಶ ।

(೪ ಅ., ೧೩ ಶ್ಲೋ.)

ಗೃಹಸ್ಥರು ಯಾವಾಗಲೂ ಸ್ಥಿತಿಯಲ್ಲೇ ಕೊನೆ ಮಾಡಬೇಕು. ಹದಿನಾಲ್ಕು ನ್ಯಾಸ ಮಾಡಿಕೊಂಡರೆ ಅವರಿಗೆ ಉತ್ತಮ ಪಕ್ಷ ಎನ್ನುತ್ತಾರೆ ಶ್ರೀಮದಾಚಾರ್ಯರು. ಆಗ ಸೃಷ್ಟಿ ಸ್ಥಿತಿ-ಲಯ ಈ ಕ್ರಮದಲ್ಲಿಯೇ ನಾಲ್ಕು ಸಾರಿ ಮಾಡಿಕೊಂಡು (೧೨ ಸಾರಿ ಆಯಿತು) ಕೊನೆಯಲ್ಲಿ ಸೃಷ್ಟಿ ಮಾಡಿ ಸ್ಥಿತಿಯಿಂದ ಮುಗಿಸಬೇಕು. ಅಲ್ಲಿಗೆ ಹದಿನಾಲ್ಕು ಆಗುತ್ತದೆ; ಸ್ಥಿತ್ಯಂತವೂ ಆಗುತ್ತದೆ. ಸನ್ಯಾಸಿಗಳಿಗಾದರೋ—

ಸಂಹೃತ್ಯಂತಾ ಮೋಕ್ಷಿಣಾಂ ಚ ಏಕವಿಂಶತಿರೇವ ವಾ ।

(ಅಲ್ಲೇ, ೪/೧೩)

ಸನ್ಯಾಸಿಗಳೂ ವಾನಪ್ರಸ್ಥರೂ ಕೊನೆಯಲ್ಲಿ ಲಯ ಬರುವಂತೆ ಇಪ್ಪತ್ತೊಂದು ಸರಿ ಮಾಡಿಕೊಳ್ಳಬಹುದು. ಎಂದರೆ ಸೃಷ್ಟಿ-ಸ್ಥಿತಿ ಲಯ ಈ ರೀತಿ ಏಳಾವರ್ತಿ ಮಾಡಿಕೊಳ್ಳುವುದು ಉತ್ತಮ ಪಕ್ಷ. ಇಪ್ಪತ್ತೊಂದನೆಯದು ಲಯವೇ ಆಗುವುದರಿಂದ ಸರಿ ಹೋಗುತ್ತದೆ.

ಆದರೆ ಪ್ರತಿನಿತ್ಯ ಹದಿನಾಲ್ಕು ಸರಿ ಮಾಡಿಕೊಳ್ಳುವುದೇ ಅಸಾಧ್ಯವಾದ್ದರಿಂದ ಮೊದಲನೆಯ ಸಾರಿ ಹೊಸ ಪ್ರತಿಮೆಯಲ್ಲಿ ನ್ಯಾಸ ಮಾಡುವಾಗ ಈ ರೀತಿ ಮಾಡಬೇಕೆಂದೂ, ಪ್ರತಿನಿತ್ಯ ನಾಲ್ಕು ಸಾರಿ (ಕಡೇ ಪಕ್ಷ ಒಂದೇ ಸಾರಿ) ಮಾಡಿದರೇ ಸಾಕೆಂದೂ ಛಲಾರಿ ಟೀಕೆಯಲ್ಲಿ ಹೇಳಿದೆ.

ಹೀಗೆಯೇ ಕೃಷ್ಣಪ್ರತಿಮೆಯಲ್ಲಿ ಕೃಷ್ಣಮಂತ್ರದಿಂದಲೂ, ರಾಮನ ಪ್ರತಿಮೆಗಳಲ್ಲೂ ಹಯಗ್ರೀವ ಪ್ರತಿಮೆಗಳಲ್ಲೂ ಆಯಾಯಾ ಮಂತ್ರಗಳಿಂದಲೂ ಸಹ ನ್ಯಾಸ ಮಾಡಬಹುದು.

ಜ) ಆವಾಹನೆಯ ಐದು ಹಂತಗಳು: ಈ ಪ್ರಕಾರ 'ಆವಾಹನೆ'ಯಲ್ಲಿ (ಅ) ಹೃದಯದಲ್ಲಿರುವ ಪರಮಾತ್ಮನನ್ನು ಧ್ಯಾನಿಸುವುದು, (ಆ) ಪೂಜಿಸುವ ಮೂರ್ತಿಯಲ್ಲಿ ಅವನನ್ನು ಆವಾಹಿಸುವುದು, ಇ) ಆವಾಹಿತ ಮೂರ್ತಿಯನ್ನು ಅಲ್ಲೇ ಇದ್ದು ನಮ್ಮ ಪೂಜೆ ಸ್ವೀಕರಿಸುವಂತೆ ಪ್ರಾರ್ಥಿಸುವುದು, (ಈ) ಪ್ರತಿಮೆಯಲ್ಲಿ ಇಂದ್ರಿಯಾದಿ ಸಾನ್ನಿಧ್ಯಕ್ಕಾಗಿ ತತ್ವನ್ಯಾಸ ಮಾತೃಕಾನ್ಯಾಸಗಳನ್ನು ಮಾಡುವುದು, (ಉ) ಭಗವತ್ಸಾನ್ನಿಧ್ಯಕ್ಕಾಗಿ

ಮೂಲಮಂತ್ರಗಳಿಂದಲೂ ರಾಮ ಕೃಷ್ಣಾದಿ ಮಂತ್ರಗಳಿಂದಲೂ ವರ್ಣನ್ಯಾಸ ಮಾಡು ವುದು ಎಂದು ಐದು ಹಂತಗಳಿವೆ. ಇವೆಲ್ಲಾ ತನಗಾಗಿ ತನ್ನ ಮನೆಯಲ್ಲಿ ಮಾಡಿಕೊಳ್ಳುವ ಕ್ರಮಗಳು. (ಊ) ಪರರ ಮನೆಯಲ್ಲಿ ಮಾಡುವ ಕ್ರಮವೇ ಬೇರೆ. ಈ ಕ್ರಮದಲ್ಲೇ ಈ ವಿಷಯಗಳನ್ನು ಒಂದೊಂದಾಗಿ ವಿವರಿಸುವೆನು.

ಅ) ಹೃದಯದಲ್ಲಿ ಪರಮಾತ್ಮನನ್ನು ಧ್ಯಾನಿಸುವುದು

(ಪದ ಮಾಲಾ ಶ್ಲೋಕಗಳ ವಿವರಣೆ)

ಅಧೋಮುಖಂ ಹೃತ್ಕಮಲಂ ವಾಯುಬೀಜೇನ ಚೋನ್ಮುಖಮ್।
ಕುರ್ಯಾತ್ ತತೋಽಸ್ಯ ಮುಕುಲಂ ಜ್ಞಾನಾರ್ಕೇಣ ವಿಕಾಸಯೇತ್ ।೫।

(ಶ್ಲೋಕಾರ್ಥ) : ಕೆಳಮುಖವಾಗಿರುವ ಹೃದಯಕಮಲವನ್ನು ವಾಯುಬೀಜ-ಮಂತ್ರದಿಂದ ಊರ್ಧ್ವಮುಖ (ಮೇಲ್ಮುಖ)ವನ್ನಾಗಿ ಮಾಡಬೇಕು. ಅನಂತರ ಅದರ ಮೊಗ್ಗನ್ನು ಜ್ಞಾನಸೂರ್ಯನಿಂದ ಅರಳಿಸಬೇಕು.

ವಿವರಣೆ : ಭಾಗವತ (೧೧ ಸ್ಕಂಧ, ೧೪ ಅ., ೩೬ ಶ್ಲೋಕ)ದಲ್ಲಿ ದೇಹದಲ್ಲಿರುವ ಹೃದಯಕಮಲದ ನಾಳವು ಸಾಮಾನ್ಯವಾಗಿ ಮೇಲ್ಮುಖವಾಗಿರುವುದೆಂದೂ ಪದ್ಮವು ಅಧೋಮುಖವಾಗಿರುವುದೆಂದೂ (ಬಗ್ಗಿಕೊಂಡಿರುವುದೆಂದೂ) ಹೇಳಿದೆ. ಹೀಗೆ ಕೆಳ-ಮುಖವಾಗಿರುವ ಪದ್ಮವನ್ನು 'ಓಂ ಯಂ ಓಂ' ಎಂಬ ವಾಯುಮಂತ್ರ ಜಪಿಸಿ ಮೇಲ್-ಮುಖವಾಗಿ ಮಾಡಬೇಕು—ಎಂದರೆ ಮೇಲ್ಮುಖವಾಯಿತೆಂದು ಭಾವಿಸಿಕೊಳ್ಳಬೇಕು. ಅನಂತರ ಆ ಕಮಲವು ಮೊಗ್ಗಿನಂತೆ ಮುಚ್ಚಿಕೊಂಡಿರುವುದರಿಂದ ಅದನ್ನು 'ಪ್ರಣವೇನ ಉನ್ಮುಖೀಕೃತ್ಯ'-'ಪ್ರಣವಮಂತ್ರದಿಂದ ಅರಳಿಸಿ' ಎಂಬ ಶಿಷ್ಟಪ್ರಯೋಗವಿರುವುದರಿಂದ 'ಓಂಓಂಓಂ' ಎಂದು ಹೇಳಿಕೊಂಡು ಈ ಪ್ರಣವಮಂತ್ರದಿಂದ (ಎಂದರೆ ಜ್ಞಾನವೆಂಬ ಸೂರ್ಯನಿಂದ) ಆ ಕಮಲವು ಅರಳುತ್ತದೆ ಎಂದು ಕಲ್ಪಿಸಿಕೊಳ್ಳಬೇಕು. (ಪೂಜಾ-ಕಲ್ಪಲತಾ ಪ್ರಕಾರ ಅರ್ಥ.)

ತತ್ಕರ್ಣಿಕಾಸ್ಥಿತಂ ದೇವಂ ನಾರಾಯಣಮಜಂ ವಿಭುಮ್ ।
'ಉದ್ಯದ್ ಭಾಸ್ವ'ದಿತಿ ಧ್ಯಾತ್ವಾ ಸಪುಷ್ಪತುಲಸೀಕರಃ ।
ಕೃತಾಂಜಲಿಪುಟೋ ಭೂತ್ವಾ 'ಅತ್ರೇ'ತ್ಯೇಕಾಮ್ಬುಜಂ ಪಠೇತ್ ।೬।

(ಶ್ಲೋಕಾರ್ಥ) ಅದರ ಎಂದರೆ ಅರಳಿದ ಹೃದಯಕಮಲದ ಮಧ್ಯೆ ಇರುವ ಕರ್ಣಿಕೆ ಯಲ್ಲಿ (ಎಂದರೆ ನಾಳದ ಮೇಲ್ಭಾಗವಾದ ಪೀಠಾಕಾರವಾಗಿರುವ ಅಂಡಾಶಯದಲ್ಲಿ) ಉಪಸ್ಥಿತನಾದ ಬಿಂಬರೂಪಿ ನಾರಾಯಣನನ್ನು 'ಉದ್ಯದ್ಭಾಸ್ವತ್‌ಸಮಾಭಾಸ.....'

ಇತ್ಯಾದಿ ಮೂಲಮಂತ್ರದ ಧ್ಯಾನಶ್ಲೋಕಗಳಿಂದ ಧ್ಯಾನ ಮಾಡಿ, ಕೈಮುಗಿದು, ಕೈಯಲ್ಲಿ ತುಲಸೀದಳಗಳನ್ನೂ ಹೂವನ್ನೂ ಬೊಗಸೆಯಲ್ಲಿ ಹಿಡಿದುಕೊಂಡು ಆ ಪರಮಾತ್ಮನನ್ನು 'ಅತ್ರಾ ದೇವಾನಾಂ' ಎಂಬ ಋಙ್ಮಂತ್ರದಿಂದ ಪಠಿಸಿ ಪ್ರಾರ್ಥಿಸಬೇಕು.

ವಿವರಣೆ: ಹೃದಯಕಮಲವು ಅರಳಿದ ಮೇಲೆ, ದಳಗಳ ಮಧ್ಯದಲ್ಲಿ ಪೀಠಾಕಾರವಾಗಿ ಒಂದು ಗುಪ್ಪೆ ಇರುತ್ತದೆ; ಅದಕ್ಕೇ 'ಕರ್ಣಿಕೆ' ಎಂದು ಹೆಸರು. ಈ ಕರ್ಣಿಕೆಯ ಮೇಲ್ಭಾಗದಲ್ಲಿ ಬಿಂಬರೂಪೀ ಪರಮಾತ್ಮನು ಕುಳಿತಿರುತ್ತಾನೆ. ಯದ್ಯಪಿ ಆ ಬಿಂಬರೂಪೀ ಪರಮಾತ್ಮನ ಸಾಕ್ಷಾತ್ ದರ್ಶನವಾಗುವುದೇ ಸಾಧನೆಯ ಪರಮೋಚ್ಚ ಮಟ್ಟವೆನಿಸುತ್ತದೆಯಾದರೂ ಮೊದಮೊದಲು ಆ ಬಿಂಬರೂಪಿ ಪರಮಾತ್ಮನನ್ನು ಮನಸಾ ಕಲ್ಪಿಸಿಕೊಳ್ಳಬೇಕೆಂದು ತಾತ್ಪರ್ಯ. ಆ ಸ್ವಾಮಿಯನ್ನು 'ಉದ್ಯದ್‌ಭಾಸ್ವತ್' ಎಂಬ ಶ್ಲೋಕಗಳನ್ನು ಹೇಳಿಕೊಂಡು ಮೊದಲು ಧ್ಯಾನಮಾಡಿ ಕೈಮುಗಿಯಬೇಕು. ಅನಂತರ ಆ ಸ್ವಾಮಿಯನ್ನು ಆಹ್ವಾನಿಸುವುದಕ್ಕಾಗಿ ಕೈಯಲ್ಲಿ ತುಳಸಿಯನ್ನೂ ಹೂವನ್ನೂ ಹಿಡಿದುಕೊಂಡು ವಿನಯದಿಂದ 'ಅತ್ರಾ ದೇವಾನಾಂ' ಎಂದು ಋಙ್ಮಂತ್ರವನ್ನು ಪಠಿಸಬೇಕೆಂದು ತಾತ್ಪರ್ಯ.

ಆ) ಅವನನ್ನು ಪೂಜ್ಯ ಮೂರ್ತಿಯಲ್ಲಿ ಆವಾಹಿಸುವುದು

ಮೂಲಮಂತ್ರಂ ತತೋ ಜಪ್ತ್ವಾ ಯದ್ಯಾತ್ಮಾರ್ಥಂ ಪ್ರಪೂಜಯೇತ್ ॥ ೬೨ ॥

(ಶ್ಲೋಕಾರ್ಥ) 'ಅತ್ರಾ ದೇವಾನಾಂ' ಎಂಬ ಋಕ್ಕನ್ನು ಪಠಿಸಿದ ನಂತರ ಮೂಲಮಂತ್ರವನ್ನು (ನಾರಾಯಣಾಷ್ಟಾಕ್ಷರ ಮಂತ್ರವನ್ನು—ಯಥಾಶಕ್ತಿ, ೧೦೮, ೨೮ ಅಥವಾ ೧೨ ಸಾರಿ) ಜಪಿಸಿ, ತನಗೋಸ್ಕರವೇ ಪೂಜೆ ಮಾಡುತ್ತಿದ್ದ ಪಕ್ಷದಲ್ಲಿ (ಕೆಳಗಿನ ಶ್ಲೋಕವನ್ನು ಎರಡಾವರ್ತಿ ಪಠಿಸಬೇಕೆಂದು ಹೇಳುತ್ತಾರೆ)—

" ಏಹ್ಯೇಹಿ ಮಮ ಹೃತ್ಪದ್ಮ—ಸ್ಥಿತ ಶ್ರೀ ಪುರುಷೋತ್ತಮ ।
ಆವಾಹಯಾಮಿ ಪೀಠೇ ತ್ವಾಂ ಪ್ರತಿಮಾಯಾಂ ರಮಾಪತೇ ॥ ೬೩ ॥ "
ದ್ವಿರುಚ್ಚಾರ್ಯೈವಮಾವಾಹ್ಯ ತಮಾವಾಹನಮುದ್ರಯಾ ।
ತತಃ ಪ್ರಾರ್ಥನಾಮುದ್ರಾಂ ಚ ವಿಧಾಯ ಪ್ರಾರ್ಥಯೇದ್ಧರಿಮ್ ॥ ೬೪ ॥

(ಶ್ಲೋಕಾರ್ಥ) (ಏಹಿ-ಬಾ, ಏಹಿ + ಏಹಿ = ಏಹ್ಯೇಹಿ = ಬಾ ಬಾ) "ನನ್ನ ಹೃದಯಕಮಲದಲ್ಲಿರುವ ಹೇ ಬಿಂಬರೂಪಿ ಪರಮಾತ್ಮನೇ! ಬಾ, ಬಾ. ಹೇ ಸ್ವಾಮಿ ಲಕ್ಷ್ಮೀಪತೇ! ನಿನ್ನನ್ನು ಪೀಠದಲ್ಲಿಟ್ಟಿರುವ ಈ ಪ್ರತಿಮೆಯಲ್ಲಿ ಆವಾಹನೆ ಮಾಡುತ್ತೇನೆ." (೬೩) ಎಂದು ಎರಡು ಸಲ ಪ್ರಾರ್ಥನೆ ಮಾಡಿ ಆ ಬಿಂಬರೂಪಿ ಪರಮಾತ್ಮನನ್ನು ಪ್ರತಿಮೆಯಲ್ಲಿ ಆವಾಹನ ಮುದ್ರೆಯನ್ನು ತೋರಿಸುತ್ತಾ ಆವಾಹನೆ ಮಾಡಿ, ಬಳಿಕ ಪ್ರಾರ್ಥನಾಮುದ್ರೆಯನ್ನು ತೋರಿಸಿ ಆ ಸ್ವಾಮಿಯನ್ನು ಈ ರೀತಿ ಪ್ರಾರ್ಥಿಸಬೇಕು. (೬೪)—

೫) ಅವನನ್ನು ಅಲ್ಲೇ ಇದ್ದು ಪೂಜೆ ಸ್ವೀಕರಿಸುವಂತೆ ಪ್ರಾರ್ಥಿಸುವ ಕ್ರಮ

ಯಾಗಾವಸಾನಪರ್ಯಂತ—ಮತ್ರಸ್ಥಿತ್ವಾ ಜನಾರ್ದನ ।
ಭಕ್ತಸ್ಯ ಮಮ ಪೂಜಾಂ (ತ್ವಂ) ಚ ಗೃಹೀತ್ವಾ
ಪಾಹಿ ಮಾಂ ವಿಭೋ ॥ ೬೫ ॥

(ಶ್ಲೋಕಾರ್ಥ) (ಯಾಗ-ಪೂಜಾರೂಪ ಯಜ್ಞ, ಅವಸಾನ-ಸಮಾಪ್ತಿ, ಕೊನೆ, ಪಾಹಿ-ಕಾಪಾಡು) “ ಹೇ ಸ್ವಾಮಿ, ಜನಾರ್ದನ, ಈ ಪೂಜಾರೂಪಯಜ್ಞವು ಮುಗಿಯುವ ವರೆಗೂ ಈ ಪ್ರತಿಮೆಯಲ್ಲಿ ಸನ್ನಿಹಿತನಾಗಿದ್ದುಕೊಂಡು, ಭಕ್ತನಾದ ನನ್ನ ಪೂಜೆಯನ್ನು ಸ್ವೀಕಾರ ಮಾಡಿ ನನ್ನನ್ನು ರಕ್ಷಿಸು, ಉದ್ಧರಮಾಡು ಪ್ರಭುವೇ !

ಸಂಪ್ರಾರ್ಥ್ಯೈವಂ ಸ್ವಬಿಂಬಾಖ್ಯಂ ಮುದ್ರಾ ಆವಾಹನಾದಿಕಾಃ ।
ಷಣ್ಮೂಲಮಂತ್ರಪೂರ್ವಂ ತು ತಂ ತಮರ್ಥ-
ಮುದೀರಯೇತ್ ॥ ೬೬ ॥

(ಶ್ಲೋಕಾರ್ಥ) ಪ್ರತಿಮೆಯಲ್ಲಿ ಸನ್ನಿಹಿತನಾದ ತನ್ನ ಬಿಂಬರೂಪಿ ಪರಮಾತ್ಮನನ್ನು ಈ ಪ್ರಕಾರ ಪ್ರಾರ್ಥನೆ ಮಾಡಿ, ಮೂಲಮಂತ್ರವನ್ನು ಹೇಳಿಕೊಂಡು, ‘ ಆವಾಹಿತೋ ಭವ ’-ಆವಾಹಿತನಾಗಿರು, ‘ ಸಂಸ್ಥಾಪಿತೋ ಭವ ’-ಈ ಪ್ರತಿಮೆಯಲ್ಲಿ ಸ್ಥಿರವಾಗಿ ಸನ್ನಿಹಿತನಾಗಿರು ಎಂದು ಹೇಳಿಕೊಳ್ಳುತ್ತಾ ಆವಾಹನಾದಿ ಆರು ಮುದ್ರೆಗಳನ್ನು ತೋರಿಸ ಬೇಕು. (ತಂ ತಂ ಅರ್ಥಂ=ಆಯಾ ಅರ್ಥವನ್ನು ಎಂದರೆ ಆವಾಹಿತನಾಗಿರು ಸ್ಥಿರವಾಗಿರು ಎಂಬ ಉದ್ದೇಶವನ್ನು, ಉದೀರಯೇತ್-ವಾಕ್ಯರೂಪವಾಗಿಯೂ ಹೇಳಬೇಕು. ಭಾವ ವೇನೆಂದರೆ ಕೇವಲ ಮುದ್ರೆಗಳನ್ನು ತೋರಿಸಿದರೆ ಸಾಲದು ಬಾಯಲ್ಲೂ ಹೇಳಿಕೊಳ್ಳುತ್ತಾ ಅರ್ಥಾನುಸಂಧಾನಪೂರ್ವಕವಾಗಿ—ತ್ರಿಕರಣಪೂರ್ವಕ ಮಾಡಬೇಕೆಂದು ಭಾವ. ಮುದ್ರೆ ತೋರಿಸುವುದು ಕಾಯಿಕ ಕ್ರಿಯೆ. ಬಾಯಲ್ಲಿ ಹೇಳುವುದು ವಾಚಾಕ್ರಿಯೆ. ಅರ್ಥಾನು-ಸಂಧಾನ ಮಾಡಿಕೊಳ್ಳುವುದು ಮಾನಸಿಕ ಕ್ರಿಯೆ.)

ಷಣ್ಮುದ್ರೆಗಳು ಯಾವುವೆಂದರೆ ವಿವರಿಸುತ್ತಾರೆ—

ಆವಾಹನಂ ಸ್ಥಾಪನಂ ಚ ಸಾನ್ನಿಧ್ಯಂ ಸನ್ನಿರೋಧನಮ್ ।
ಸಂಮು(ಸನ್ಮು)ಖೀಕರಣಂ ಚೈವ ಅವಕುಂಠನಮೇವ ಚ ॥ ೬೭ ॥
ಪ್ರದರ್ಶ್ಯೈತಾಶ್ಚ ಷಣ್ಮುದ್ರಾಃ ಸ್ನಾನಾರ್ಥಂ ಪ್ರಾರ್ಥಯೇತ್
ತತಃ ॥ ೬೮ ॥

(ಶ್ಲೋಕಾರ್ಥ) ೧. ಆವಾಹನೆ, ೨. ಸ್ಥಾಪನೆ, ೩. ಸಾನ್ನಿಧ್ಯ, ೪. ಸನ್ನಿರೋಧನ, ೫. ಸಮ್ಮುಖೀಕರಣ, ಮತ್ತು ೬. ಅವಕುಂಠನ—ಇವುಗಳೇ ಆರು ಮುದ್ರೆಗಳು. ಈ ಆರು ಮುದ್ರೆಗಳನ್ನು ತೋರಿಸಿ (ಇದರ—ಆವಾಹನ ಕ್ರಮ ಮುಂದೆ ಬರುತ್ತದೆ. ಆದ್ದರಿಂದ) ಅನಂತರ ಆ ಭಗವಂತನನ್ನು ಸ್ಥಾನಕ್ಕೆ ಬರುವಂತೆ ಪ್ರಾರ್ಥಿಸಬೇಕು.—ಇದು ಮುಂದಿನ ಕಲಾಪವಾಗುತ್ತದೆ.

ಆವಾಹನಕ್ರಮದ ವಿವರಣೆ

ಅ) ಪ್ರಾರಂಭದಲ್ಲಿ ಹೃದಯಕಮಲದ ನಾಳವು ಮೇಲಾಗಿಯೂ ಪದ್ಮವು ಕೆಳಮುಖವೂ ಆಗಿರುತ್ತದೆ. *'ಓಂ ಯಂ ಓಂ' ಎಂಬ ವಾಯುಬೀಜಮಂತ್ರ ಹೇಳಿಕೊಂಡು ಆ ಹೃದಯಕಮಲವು ಮೇಲ್ಮುಖವಾಗುತ್ತದೆ ಎಂದು ಭಾವಿಸಿಕೊಳ್ಳಬೇಕು. ಅನಂತರ 'ಓಂ ಓಂ ಓಂ' ಎಂಬ ಪ್ರಣವಮಂತ್ರ ಹೇಳಿಕೊಂಡು, ಮುಚ್ಚಿಕೊಂಡಿದ್ದ ಆ ಕಮಲ ಅರಳುತ್ತದೆ—ಅರಳಿ ಹಿಗ್ಗುತ್ತದೆ ಎಂದು ಕಲ್ಪಿಸಿಕೊಳ್ಳಬೇಕು. ಅನಂತರ ಅರಳಿದ ಹೃತ್ಕಮಲದ ದಳಗಳ ಮಧ್ಯದಲ್ಲಿ ಗುಪ್ಪೆಯಂತೆ ಪೀಠಾಕಾರವಾಗಿರುವ ಕರ್ಣಿಕೆಯಲ್ಲಿ ಬಿಂಬರೂಪಿ ಪರಮಾತ್ಮನಿದ್ದಾನೆಂದು ಭಾವಿಸಿಕೊಂಡು ಆ ಬಿಂಬರೂಪಿ ಪರಮಾತ್ಮನನ್ನು 'ಉದ್ಯದ್ಭಾಸ್ವತ್ .... ಶಕ್ತಿಮಾನ್' ಎಂಬ ಮೂಲಮಂತ್ರಧ್ಯಾನಶ್ಲೋಕಗಳಿಂದ ಪ್ರಾರ್ಥನೆ ಮಾಡಿ ಕೈ ಮುಗಿಯಬೇಕು.

ಆ) ಅನಂತರ ಮಾನಸಿಕ ಪಂಚೋಪಚಾರಗಳನ್ನು ಸಮರ್ಪಿಸಿ (ಇದರ ವಿವರ ಮುಂದೆ ಕೊಟ್ಟಿದೆ) ಎರಡು ಕೈಗಳ ಬೊಗಸೆಯಲ್ಲಿ ಹೂವು ತುಳಸೀ ಹಿಡಿದುಕೊಂಡು ಆ ಸ್ವಾಮಿಯನ್ನು 'ಆತ್ಮಾ ದೇವಾನಾಂ ' ಎಂಬ ಋಙ್ಮಂತ್ರ ಹೇಳಿ ನಮಸ್ಕರಿಸಿ 'ಏಹ್ಯೇಹಿ ' ಎಂಬ ಶ್ಲೋಕ ಎರಡು ಸಾರಿ ಹೇಳಿ 'ಹೇ ಸ್ವಾಮಿ, ನಾನು ನಿನ್ನನ್ನು ಈ ಪ್ರತಿಮೆಯಲ್ಲಿ ಆವಾಹಿಸಿ ಪೂಜಿಸುತ್ತೇನೆ. ಆದ್ದರಿಂದ ಮೊದಲು ನನ್ನ ಕೈಯಲ್ಲಿರುವ ಈ ಹೂವು ತುಳಸಿಯಲ್ಲಿ ಸನ್ನಿಹಿತನಾಗು' ಎಂದು ಪ್ರಾರ್ಥಿಸುತ್ತಾ ಭಗವಂತನು ಹೃದಯಕಮಲದಿಂದ ಸುಷುಮ್ನಾನಾಡಿಯ ಮಾರ್ಗವಾಗಿ ನೆತ್ತಿಗೆ ಬರುವನೆಂದೂ, ನೆತ್ತಿಯಿಂದ

---

* 'ಸ್ರವತ್ಯನೋಂಕೃತಂ ಬ್ರಹ್ಮ ಪರಸ್ತಾಚ್ಚ ವಿಶೀರ್ಯತೇ' ಎಂದರೆ ಓಂಕಾರವನ್ನು ಮೊದಲು ಸೇರಿಸದಿದ್ದರೆ ಆ ಮಂತ್ರವು ಸೋರಿಹೋಗುವುದೆಂದೂ, ಕೊನೆಯಲ್ಲಿ ಸೇರಿಸದಿದ್ದರೆ ಆವಿಯಾಗಿ ಬತ್ತಿಹೋಗುವುದೆಂದೂ ಪ್ರಮಾಣವಿರುವುದರಿಂದ ವಾಯುಬೀಜಾಕ್ಷರವಾದ 'ಯಂ'ಗೆ ಹಿಂದೆಯೂ ಮುಂದೆಯೂ ಓಂಕಾರ ಸೇರಿಸಿ 'ಓಂ ಯಂ ಓಂ' ಎಂದು ಹೇಳುವುದೇ ಶಿಷ್ಟರ ಪದ್ಧತಿ. ಪ್ರಣವವನ್ನೂ 'ಓಂ ಓಂ ಓಂ' ಎಂದೇ ಹೇಳಬೇಕು. (ಮಾಧ್ವಮಂತ್ರರತ್ನಾಕರಾದಿ ಗ್ರಂಥಗಳಲ್ಲಿ ಹೀಗೆಯೇ ಕೊಟ್ಟಿದೆ.)

ಮೂಗಿನ ತುದಿಗೆ ಬಂದು ಅಲ್ಲಿಂದ ಕೈಯಲ್ಲಿ ಹಿಡಿದಿರುವ ಹೂವು-ತುಳಸಿಗೆ ಬರುವನೆಂದೂ ಭಾವಿಸಿಕೊಂಡು, ಆ ಹೂವು ತುಳಸಿಯನ್ನು ಪೂಜಿಸಬೇಕಾಗಿರುವ ಪ್ರತಿಮೆಯ ಮೇಲೆ 'ಓಂ ನಮೋ ನಾರಾಯಣಾಯ' ಎಂದು ಹೇಳಿಕೊಂಡು ಸಮರ್ಪಿಸಿಬಿಡಬೇಕು. ಹೀಗೆ ಮಾಡಿದ್ದರಿಂದ ಹೂವು ತುಳಸಿಗಳಲ್ಲಿ ಸನ್ನಿಹಿತನಾಗಿದ್ದ ಬಿಂಬರೂಪೀ ಪರಮಾತ್ಮನು ಪ್ರತಿಮೆಯಲ್ಲೇ ಬಂದು ನೆಲೆಸಿದ್ದಾನೆಂದು ಸಂಕಲ್ಪಿಸಿ 'ಬಿಂಬರೂಪಿ ಪರಮಾತ್ಮಾನಾಂ ಅಸ್ಯಾಂ ಪ್ರತಿಮಾಯಾಮಾವಾಹಯಾಮಿ' ಎಂದರೆ ಬಿಂಬರೂಪಿ ಪರಮಾತ್ಮನನ್ನು ಈ ಪ್ರತಿಮೆಯಲ್ಲಿ ಆವಾಹಿಸುತ್ತೇನೆ ಎಂದು ಬಾಯಿಂದಲೂ ಹೇಳಬೇಕು.

ಇ) ಆಮೇಲೆ ಪ್ರಾರ್ಥನಾಮುದ್ರೆಯಿಂದ ಎಂದರೆ ಎರಡು ಕೈಗಳನ್ನೂ ಬೊಗಸೆಯಂತೆ ಜೋಡಿಸಿ ಹಿಡಿದುಕೊಂಡು 'ಯಾಗಾವಸಾನ...' ಎಂಬ ಶ್ಲೋಕವನ್ನು ಪಠಿಸಿ (ಎಂದರೆ 'ಹೇ ಸ್ವಾಮಿ, ಜನಾರ್ದನ, ಈ ಪೂಜೆ ಮುಗಿಯುವವರೆಗೆ ಈ ಪ್ರತಿಮೆಯಲ್ಲಿ ಸನ್ನಿಹಿತನಾಗಿದ್ದು ಭಕ್ತನಾದ ನಾನು ಅರ್ಪಿಸುವ ಪೂಜೆಯನ್ನು ಸ್ವೀಕರಿಸಿ ನನ್ನ ಕಾಪಾಡು' ಎಂದು ಪ್ರಾರ್ಥಿಸಿ) ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸಬೇಕು. ಇಲ್ಲಿಗೆ ಆವಾಹನ-ಕ್ರಮ ಮುಗಿಯಿತು. ಆಮೇಲೆ ದೇವರನ್ನು 'ಸ್ನಾನಕ್ಕೆ ಬಾ' ಎಂದು ಕರೆದು ಸ್ನಾನ ಮಾಡಿಸಬೇಕೆಂಬುದು ಅಭಿಷೇಕ ಕಲಾಪದ ಭಾಗ.

ಆವಾಹನಾದಿ ಷಣ್ಮುದ್ರೆಗಳ ಚಿತ್ರವನ್ನು ಉಡುಪಿಯ ದೇವರಪೂಜಾ ಪುಸ್ತಕದಲ್ಲೂ ಆಹ್ನಿಕಮಂಜರಿಯಲ್ಲೂ ಕೊಟ್ಟಿದ್ದಾರೆ. ಪ್ರತಿಮೆಯ ಮುಂದೆ ಈ ರೀತಿ ಆರು ಮುದ್ರೆಗಳನ್ನು ತೋರಿಸುತ್ತಾ ಬಾಯಲ್ಲೂ ಹೀಗೆ ಹೇಳಬೇಕು— ೧. ಓಂ ನಮೋ ನಾರಾಯಣಾಯ, ಆವಾಹಿತೋ ಭವ (ಈ ಪ್ರತಿಮೆಯಲ್ಲಿ ಆವಾಹಿತನಾಗಿರು), ೨. ಓಂ ನಮೋ ನಾರಾಯಣಾಯ, ಸಂಸ್ಥಾಪಿತೋ ಭವ (ಈ ಪ್ರತಿಮೆಯಲ್ಲಿ ಸರ್ವತ್ರ ವ್ಯಾಪ್ತನಾಗಿ ಆವರಿಸಿಕೊಂಡಿರು), ೩. ಓಂ ನಮೋ ನಾರಾಯಣಾಯ, ಸನ್ನಿಹಿತೋ ಭವ (ಈ ಪ್ರತಿಮೆಯಲ್ಲಿ ನಿನ್ನ ಸನ್ನಿಧಾನ ಚೆನ್ನಾಗಿ ಇರಲಿ), ೪. ಓಂ ನಮೋ ನಾರಾಯಣಾಯ, ಸನ್ನಿರುದ್ಧೋ ಭವ (ವಿಶ್ವವ್ಯಾಪಿಯಾಗಿದ್ದರೂ ಇಷ್ಟು ಸ್ಥಳದಲ್ಲೇ ಅಡಗಿಕೊಂಡಿರು), ೫. ಓಂ ನಮೋ ನಾರಾಯಣಾಯ, ಅಭಿಸಮ್ಮುಖೋ ಭವ (ನನ್ನ ಕಣ್ಣೆದುರಿಗೇ ಕಾಣಿಸುವಂತೆ ಇರು), ೬. ಓಂ ನಮೋ ನಾರಾಯಣಾಯ, ಅವಗುಂಠಿತೋ ಭವ (ಈ ಪ್ರತಿಮೆಯಲ್ಲಿಯೇ ಕಣ್ಮರೆಯಾಗಿ—ಅದೃಶ್ಯನಾಗಿ ಇರು.) ೭. ಓಂ ನಮೋ ನಾರಾಯಣಾಯ, ಸುಪ್ರಸನ್ನೋ ಭವ (ಪ್ರಸನ್ನನಾಗಿ ನಗುನಗುತ್ತಾ ಒಲುಮೆಯಿಂದ ಇರು.)

ಪರಾರ್ಥವಾಗಿ (ಬೇರೆಯವರಿಗಾಗಿ) ಆವಾಹನೆ ಮಾಡುವ ಕ್ರಮ

ಮೇಲೆ ಹೇಳಿದ ಕ್ರಮವೆಲ್ಲ ತಾನು ತನ್ನ ನಿಮಿತ್ತ ಮಾಡಿಕೊಳ್ಳುವ ಪ್ರತಿಮಾಪೂಜೆಯಲ್ಲಿ ಆವಾಹನ ಮಾಡುವ ಕ್ರಮವಾಯಿತು. ಇನ್ನು ಬೇರೆಯವರ ಮನೆಯ ದೇವರಲ್ಲಿ

ಆವಾಹನೆ ಮಾಡಬೇಕಾಗಿ ಬಂದರೆ ಹೇಗೆ ಮಾಡಬೇಕೆಂದರೆ ಹೇಳುತ್ತಾರೆ—

ಪರಾರ್ಥಂ ಯದಿ ಪೂಜಾ ಸ್ಯಾತ್ ಸೂರ್ಯಾಗ್ನ್ಯಂತರ್ಗತಂ ಹರಿಮ್ ।
ಆವಾಹ್ಯ ಪೂರ್ವವತ್ ಕಾರ್ಯಂ ಸರ್ವಮಾವಾಹನಾದಿಕಮ್ ।

(ಶ್ಲೋಕಾರ್ಥ) ಪೂಜೆಯನ್ನು ಇನ್ನೊಬ್ಬರಿಗಾಗಿ ಮಾಡುವುದಾಗಿದ್ದರೆ ಸೂರ್ಯನಲ್ಲಿ ಅಥವಾ ಅಗ್ನಿಯಲ್ಲಿ ಅಂತರ್ಗತನಾದ ಶ್ರೀಹರಿಯನ್ನೇ ಆವಾಹನೆ ಮಾಡಬೇಕು—ವಿಸ ರ್ಜನೆಯೆಲ್ಲವೂ ಹಿಂದಿನಂತೆಯೇ ಮಾಡಬೇಕು.

ವಿವರಣೆ— ಅ) ಬೇರೆಯವರ ಮನೆಯ ದೇವರಲ್ಲಿ ಆವಾಹನೆ ಮಾಡಬೇಕಾಗಿ ಬಂದರೆ (ತನ್ನ ಹೃದಯದಲ್ಲಿರುವ ಬಿಂಬಮೂರ್ತಿಯನ್ನು ಧ್ಯಾನಿಸುವುದಕ್ಕೆ ಬದಲಾಗಿ) ಹಗಲು ಹೊತ್ತಾದರೆ ಸೂರ್ಯಾಂತರ್ಗತ ನಾರಾಯಣನನ್ನೂ ರಾತ್ರಿ ಹೊತ್ತಾದರೆ ಅಗ್ನ್ಯಂತರ್ಗತನಾದ ಪರಶುರಾಮದೇವರನ್ನೂ ಧ್ಯಾನ ಮಾಡಬೇಕು. ಆದಿತ್ಯಾಂತರ್ಗತ ನಾರಾಯಣನನ್ನು ಗಾಯತ್ರೀಜಪದಲ್ಲಿ ಹೇಳಿಕೊಳ್ಳುವ "ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ ... ಧೃತಶಂಖಚಕ್ರಃ" ಎಂಬ ಶ್ಲೋಕದಿಂದಲೂ, ಪರಶುರಾಮನನ್ನು "ಅಂಗಾರವರ್ಣ..." ಎಂಬ ತಂತ್ರಸಾರೋಕ್ತ ಧ್ಯಾನಶ್ಲೋಕದಿಂದಲೂ ಧ್ಯಾನ ಮಾಡ ಬೇಕು. ರಾತ್ರಿ ಹೊತ್ತು ಕೃಷ್ಣಪಕ್ಷವಾಗಿದ್ದರೆ ಅಗ್ನಿಯಲ್ಲಿರುವ ಪರಶುರಾಮನನ್ನು ಧ್ಯಾನಿ ಬೇಕೆಂದೂ ಶುಕ್ಲಪಕ್ಷವಾಗಿದ್ದರೆ ಚಂದ್ರಾಂತರ್ಗತ ಭಗವಂತನನ್ನು ಧ್ಯಾನಿಸಬೇಕೆಂದೂ 'ಪದ್ಯಮಾಲಾ ಟೀಕೆ'ಯಲ್ಲಿ ಕೊಟ್ಟಿದ್ದಾರೆ.

'ವಿಸರ್ಜನೆಯೆಲ್ಲವೂ ಹಿಂದಿನಂತೆಯೇ' ಎಂದು ಹೇಳಿದ್ದರಿಂದ—ಬಿಂಬರೂಪಿಯನ್ನು 'ಉದ್ಯದ್ಭಾಸ್ವತ್...' ಎಂದು ಧ್ಯಾನಿಸುವಂತೆ, ಹಗಲು ಸೂರ್ಯಾಂತರ್ಗತ ನಾರಾ- ಯಣನನ್ನು "ಧ್ಯೇಯಸ್ಸದಾ..." ಎಂದೂ, ರಾತ್ರಿ ಶುಕ್ಲಪಕ್ಷದಲ್ಲಿ ಚಂದ್ರಾಂತರ್ಗತ ಪರಶುರಾಮನನ್ನೂ ಕೃಷ್ಣಪಕ್ಷದಲ್ಲಿ ಅಗ್ನ್ಯಂತರ್ಗತ ಪರಶುರಾಮನನ್ನೂ "ಅಂಗಾರ- ವರ್ಣ..." ಎಂಬ ಧ್ಯಾನಶ್ಲೋಕದಿಂದಲೂ ಧ್ಯಾನ ಮಾಡಿ ಹಾಗೆಯೇ ಮಾನಸಿಕ ಪಂಚೋಪಚಾರವನ್ನು ಸಮರ್ಪಿಸಿ (ಇದರ ವಿವರ ಮುಂದೆ ಕೊಟ್ಟಿದೆ) (ಆ) ಕೈಗಳಲ್ಲಿ ಹೂವು-ತುಳಸಿ ಹಿಡಿದುಕೊಂಡು 'ಅತ್ರಾ ದೇವಾನಾಂ...' ಎಂಬ ಮಂತ್ರದಿಂದ ಪ್ರಾರ್ಥಿಸಿ, ಮೂಲಮಂತ್ರವನ್ನು ೧೩, ೨೪, ೪೭, ೧೦೮ ಯಥಾಶಕ್ತಿ ಜಪಿಸಿ 'ಏಹ್ಯೇಹಿ ಭಗವಾನ್ ಸೂರ್ಯ-ಸ್ಥಿತ ಶ್ರೀ ಪುರುಷೋತ್ತಮ । ಆವಾಹಯಾಮಿ ಪೀಠೇ ತ್ವಾಂ ಪ್ರತಿಮಾಯಾಂ ರಮಾಪತೇ ॥' ಎಂದು ಹಗಲೂ, ರಾತ್ರಿ ಶುಕ್ಲಪಕ್ಷದಲ್ಲಿ 'ಏಹ್ಯೇಹಿ ಭಗವಾನ್ ಚಂದ್ರ ಸ್ಥಿತ ಶ್ರೀ ಪುರುಷೋತ್ತಮ' ಆವಾಹಯಾಮಿ...ರಮಾಪತೇ ॥' ಎಂದೂ, ಕೃಷ್ಣಪಕ್ಷದಲ್ಲಿ ರಾತ್ರಿ ಹೊತ್ತಾದರೆ 'ಏಹ್ಯೇಹಿ ಭಗವನ್ನಗ್ನಿ ಸ್ಥಿತ ಶ್ರೀ ಪುರು- ಷೋತ್ತಮ । ಆವಾಹಯಾಮಿ...ರಮಾಪತೇ ॥' ಎಂದೂ ಎರಡಾವರ್ತಿ ಪ್ರಾರ್ಥಿಸಬೇಕು.

ನಂತರ ಆ ಭಗವಂತ ಸೂರ್ಯಮಂಡಲದಿಂದ (ರಾತ್ರಿಯಾದರೆ ಚಂದ್ರಮಂಡಲ-ದಿಂದ ಅಥವಾ ಅಗ್ನಿಯಿಂದ) ಕೈಯಲ್ಲಿರುವ ತುಲಸೀ-ಪುಷ್ಪಗಳಲ್ಲಿ ಬಂದು ಸನ್ನಿಹಿತನಾದನೆಂದು ಭಾವಿಸಿ ಆ ಹೂವು-ತುಳಸಿಯನ್ನು ಪೂಜಿಸಬೇಕಾಗಿರುವ ಪ್ರತಿಮೆಯ ಮೇಲೆ 'ಓಂ ನಮೋ ನಾರಾಯಣಾಯ' ಎಂದು ಹೇಳುತ್ತಾ ಏರಿಸಿ ಸೂರ್ಯಾಂತರ್ಗತ (ಚಂದ್ರಾಂತರ್ಗತ ಅಥವಾ ಅಗ್ನ್ಯಂತರ್ಗತ) ಭಗವಂತನ ಆ ಪ್ರತಿಮೆಯಲ್ಲಿ ವ್ಯಾಪಿಸಿ-ಕೊಂಡು ಆವಾಹಿತನಾದನೆಂದು ಕಲ್ಪಿಸಿಕೊಂಡು (ಅ) 'ಸೂರ್ಯಾಂತರ್ಗತಂ ನಾರಾ-ಯಣಂ (ಚಂದ್ರಾಂತರ್ಗತಂ/ಅಗ್ನ್ಯಂತರ್ಗತಂ ಪರಶುರಾಮಂ) ಅಸ್ಯಾಂ ಪ್ರತಿಮಾಯಾಂ ಆವಾಹಯಾಮಿ' ಎಂದು ಬಾಯಿಂದಲೂ ಹೇಳಿ ಕೈ ಮುಗಿಯಬೇಕು. (ಆ) ಅನಂತರ ಆ ಸ್ವಾಮಿಯನ್ನು 'ಯಾಗಾವಸಾನಪರ್ಯಂತಂ .....ಪಾಹಿ ಮಾಂ ವಿಭೋ ।' ಎಂದು ಪ್ರಾರ್ಥಿಸಿ ಹಿಂದೆ ಮಾಡಿದಂತೆಯೇ 'ಓಂ ನಮೋ ನಾರಾಯಣಾಯ, ಆವಾಹಿತೋ ಭವ' ಇತ್ಯಾದಿಗಳನ್ನು ಹೇಳಿಕೊಳ್ಳುತ್ತಾ ಆವಾಹನಾದಿ ಮುದ್ರೆಗಳನ್ನು ತೋರಿಸಬೇಕು. ಇಲ್ಲಿಗೆ ಪರಾರ್ಥವಾಗಿ ಆವಾಹನಾ ಕಲಾಪ ಮುಗಿಯುತ್ತದೆ.

ಇಲ್ಲಿಗೆ ಹಿಂದೆ ಈ ಖಂಡದಲ್ಲಿ ಹೇಳಿದ್ದ ಐದು ಹಂತಗಳಲ್ಲಿ ಮೂರು ಹಂತಗಳು ಮುಗಿದಂತಾಯಿತು. ಉಳಿದ ಎರಡು ಹಂತಗಳನ್ನು ಮುಗಿಸಿ ಕೊನೆಗೆ ಆವಾಹನೋಪಯುಕ್ತ ಮಂತ್ರಗಳನ್ನು ಕೊಡಲಾಗುವುದು.

ಈ) ಪ್ರತಿಮೆಯಲ್ಲಿ ತತ್ವನ್ಯಾಸ-ಮಾತೃಕಾನ್ಯಾಸ

ಗೌರೀ ಗಣೇಶ, ಅನಂತಪದ್ಮನಾಭ, ಸತ್ಯನಾರಾಯಣಾದಿ ಕಲ್ಪೋಕ್ತ ಪೂಜಾ-ವಿಧಾನಗಳಲ್ಲಿ ಆವಾಹಿತ ಮೂರ್ತಿಯಲ್ಲಿ 'ತ್ವಕ್-ಚಕ್ಷು ಶ್ರೋತ್ರ-ಘ್ರಾಣ ರಸನಾದಿ' ಇಂದ್ರಿಯಗಳ ಸಿದ್ಧಿಗಾಗಿಯೂ, 'ಪ್ರಾಣಪ್ರತಿಷ್ಠೆ'ಗಾಗಿಯೂ, 'ರಕ್ತಾಂಭೋಧಿಸ್ಥಪೋತ ' ಎಂಬ ಧ್ಯಾನಶ್ಲೋಕ ಹೇಳಿ 'ಅಸುನೀತೇ ' ಎಂಬ ಎರಡು ಮಂತ್ರಗಳನ್ನು ಹೇಳಿ ಇಂದ್ರಿಯಗಳನ್ನೂ ಪ್ರಾಣವನ್ನೂ ಪ್ರತಿಷ್ಠಿಸುವ ಪದ್ಧತಿಯಿದೆ. ಅದಕ್ಕೆ ಪ್ರತಿನಿಧಿಯಾಗಿ ತಂತ್ರಸಾರೋಕ್ತ ಮಾರ್ಗದಲ್ಲಿ ತತ್ವನ್ಯಾಸವನ್ನೂ ಮಾತೃಕಾನ್ಯಾಸವನ್ನೂ ಮಾಡುವರು. ಆದರೆ ಯಾರಿಗೆ ಇವುಗಳ ಉಪದೇಶವಾಗಿದೆಯೋ ಅವರು ಮಾತ್ರ ಇವನ್ನು ಮಾಡಲು ಸಾಧ್ಯ. ಮಿಕ್ಕವರಿಗೆ ಆ ಮಂತ್ರಗಳೇ ತಿಳಿಯದ ಕಾರಣ ಆ ವಿಷಯವನ್ನು ವಿಸ್ತರಿಸುವುದೂ ನಿಷ್ಪ್ರಯೋಜನ. ಆದಕಾರಣ ಇಲ್ಲಿಗೇ ಇದನ್ನು ಮುಗಿಸೋಣ.

ಉ) ಮೂಲಮಂತ್ರದ ವರ್ಣಗಳಿಂದಲೂ ತತ್ತ್ವಮೂರ್ತಿ ಮಂತ್ರಗಳ ವರ್ಣಗಳಿಂದಲೂ ನ್ಯಾಸ

ಹಿಂದೆ ಜ-ಖಂಡದಲ್ಲಿ ಹೇಳಿದಂತೆ ಮೂಲಮಂತ್ರದ ಎಂಟು ಅಕ್ಷರಗಳನ್ನು ಭಗವನ್ಮೂರ್ತಿಯ ಎಂಟು ಅಂಗಗಳಲ್ಲಿ ತುಳಸಿಯಿಂದ ಸ್ಪರ್ಶ ಮಾಡಿಸುತ್ತಾ (ಅಥವಾ ಮನಸ್ಸಿ-

ನಲ್ಲಿಯೇ ಈ ಎಂಟು ಅಂಗಗಳನ್ನು ಚಿಂತಿಸಿ ತುಳಸೀ ಇಟ್ಟಂತೆ ಭಾವಿಸಿದರೂ ಸಾಕು. ಎಲ್ಲ ಮಠಗಳಲ್ಲೂ ಮೂರ್ತಿಗೆ ಈ ರೀತಿ ನ್ಯಾಸ ಮಾಡುವುದೇ ಕ್ರಮಪ್ರಾಪ್ತ ಸಂಪ್ರದಾಯ) ಆ ಅಕ್ಷರಗಳನ್ನು ಉಚ್ಚರಿಸಬೇಕು; ಇದಕ್ಕೇ ನ್ಯಾಸವೆಂದು ಹೆಸರು.

ಈ ನ್ಯಾಸವು ಸೃಷ್ಟಿ, ಸ್ಥಿತಿ, ಲಯ ಎಂದು ಮೂರು ಕ್ರಮವಾಗಿದೆ. ಅದರಲ್ಲಿ ಸೃಷ್ಟಿಕ್ರಮದ ನ್ಯಾಸವು ಹೀಗಿದೆ— ೧. ನೆತ್ತಿಯಲ್ಲಿ—ಓಂ ಓಂ ಓಂ, ೨. ಎರಡು ಕಣ್ಣುಗಳಲ್ಲಿ ಓಂ ನಂ ಓಂ, ೩. ಮೂಗಿನ ಅಡಿಯಲ್ಲಿ—ಓಂ ಮೋಂ ಓಂ, ೪. ವದನದಲ್ಲಿ (ಬಾಯಿಯ ಮುಂದೆ) ಓಂ ನಾಂ ಓಂ, ೫. ಹೃದಯದಲ್ಲಿ—ಓಂ ರಾಂ ಓಂ, ೬. ನಾಭಿಯಲ್ಲಿ—ಓಂ ಯಂ ಓಂ, ೭. ಜಾನು (ಮಂಡಿ)ಗಳಲ್ಲಿ—ಓಂ ಣಾಂ ಓಂ, ೮ ಪಾದಗಳಲ್ಲಿ—ಓಂ ಯಾಂ ಓಂ.

ಸ್ಥಿತಿಕ್ರಮ— (ಮೊದಲ ನಾಲ್ಕೂ ಹಿಂದಿನಂತೆಯೇ) [ಹಿಂದಿನಂತೆಯೇ ಪ್ರತಿಯೊಂದಕ್ಕೂ ಹಿಂದೊಂದು ಓಂ, ಮುಂದೊಂದು ಓಂ ಸೇರಿಸಿಯೇ ಹೇಳಬೇಕು] ೧. ಶಿರಸ್ಸು—ಓಂ, ೨. ಕಣ್ಣು—ನಂ, ೩. ಮೂಗಿನ ಕೆಳಗೆ—ಮೋಂ, ೪. ವದನದಲ್ಲಿ—ನಾಂ, ೫. ಪಾದಗಳಲ್ಲಿ—ರಾಂ, ೬. ಜಾನು—ಯಂ, ೭. ನಾಭಿ—ಣಾಂ, ೮ ಹೃದಯ—ಯಾಂ.

ಲಯಕ್ರಮ— ೧. ಪಾದಗಳಲ್ಲಿ—ಓಂ, ೨. ಜಾನು—ನಂ, ೩. ನಾಭಿ—ಮೋಂ, ೪. ಹೃದಯ—ನಾಂ, ೫. ವದನ (ಬಾಯಿ)—ರಾಂ, ೬. ಮೂಗಿನ ಬುಡ—ಯಂ, ೭. ಕಣ್ಣುಗಳಲ್ಲಿ—ಣಾಂ, ೮. ಶಿರಸ್ಸು—ಯಾಂ.

ಒಂದೊಂದೇ ನ್ಯಾಸ ಮಾಡಿದರೆ ಬ್ರಹ್ಮಚಾರಿಗಳು ಸೃಷ್ಟಿ, ಗೃಹಸ್ಥರು ಸ್ಥಿತಿ, ಸನ್ಯಾಸಿಗಳು ಲಯವನ್ನೇ ಮಾಡಬೇಕು. ಅವಕಾಶವಿದ್ದರೆ (ದೊಡ್ಡ ಹಬ್ಬಗಳಲ್ಲಿ) ನಾಲ್ಕು ನ್ಯಾಸ ಮಾಡುವುದು ಉತ್ತಮ ಪಕ್ಷ. ಆಗ ಬ್ರಹ್ಮಚಾರಿಗಳು - ಸೃಷ್ಟಿ, ಸ್ಥಿತಿ, ಲಯ, ಸೃಷ್ಟಿ ಈ ಕ್ರಮದಲ್ಲೂ, ಗೃಹಸ್ಥರು—ಸ್ಥಿತಿ, ಲಯ, ಸೃಷ್ಟಿ, ಸ್ಥಿತಿ ಈ ಕ್ರಮದಲ್ಲೂ, ಸನ್ಯಾಸಿಗಳು, ಲಯ, ಸ್ಥಿತಿ, ಸೃಷ್ಟಿ, ಲಯ ಈ ಕ್ರಮದಲ್ಲೂ ಮಾಡಬೇಕು.

ಆಯಾ ಮಂತ್ರಗಳಿಂದ ನ್ಯಾಸ

ಪ್ರಾಯಶಃ ಅನೇಕ ಮನೆಗಳಲ್ಲಿ ಹೆಚ್ಚಾಗಿ ಪೂಜಿಸಲ್ಪಡುವ ಮೂರ್ತಿಗಳೆಂದರೆ— ರಾಮ, ಕೃಷ್ಣ, ನರಸಿಂಹ, ಹಯಗ್ರೀವ, ವೆಂಕಟೇಶ, ವಿಠ್ಠಲ ಇವುಗಳೇ. ಅನೇಕರು ಕೃಷ್ಣಷಡಕ್ಷರ ಮಂತ್ರವನ್ನು ಉಪದೇಶ ತೆಗೆದುಕೊಂಡುಜಪಿಸುವುದುಂಟು; ಅವರು (ಗೃಹಸ್ಥರಾದರೆ) ಕೃಷ್ಣಪ್ರತಿಮೆಗಳಲ್ಲಿ ಆ ಮಂತ್ರದ ಆರು ಅಕ್ಷರಗಳನ್ನು (ಸ್ಥಿತಿಕ್ರಮದಲ್ಲಿ) ೧. ಶಿರಸ್ಸು, ೨. ಲಲಾಟ (ಹಣೆ), ೩. ವದನ, ೪. ಪಾದ, ೫. ನಾಭಿ, ೬. ಹೃದಯ— ಈ ಆರು ಅಂಗಗಳಲ್ಲಿ ಚಿಂತಿಸಬಹುದು.

ತಂತ್ರಸಾರದಲ್ಲಿ ಮೂರು ರಾಮಮಂತ್ರಗಳನ್ನು ಹೇಳಿದ್ದಾರೆ—ಷಡಕ್ಷರ, ಅಷ್ಟಾಕ್ಷರ, ಬೀಜಾಕ್ಷರ. ಯಾರಿಗೆ ಯಾವ ಮಂತ್ರ ಉಪದೇಶವಾಗಿದೆಯೋ ಅವರು ಆ ಮಂತ್ರದ ವರ್ಣಗಳನ್ನು ರಾಮಪ್ರತಿಮೆಯಲ್ಲಿ ನ್ಯಾಸ ಮಾಡಬಹುದು. ಉಪದೇಶವಿಲ್ಲದವರು ಮಾಡುವ ಹಾಗೆಯೇ ಇಲ್ಲ. ಹಯಗ್ರೀವಮೂರ್ತಿಯಲ್ಲಿ ಅಷ್ಟಾಕ್ಷರ ಹಯಗ್ರೀವಮಂತ್ರದಿಂದ (ಆ ಮಂತ್ರದ ಉಪದೇಶವಾಗಿದ್ದರೆ) ನ್ಯಾಸ ಮಾಡಬಹುದು.

ತಂತ್ರಸಾರದಲ್ಲಿ ಮೂರು ನರಸಿಂಹಮಂತ್ರಗಳನ್ನು ಹೇಳಿದ್ದಾರೆ—ಒಂದು ಮೂವತ್ತೆರಡು ಅಕ್ಷರಗಳ ಮಂತ್ರ, ಒಂದು ನರಸಿಂಹಗಾಯತ್ರೀ ಮಂತ್ರ (೨೪ ಅಕ್ಷರಗಳು), ಮತ್ತೊಂದು ಇಪ್ಪತ್ತನಾಲ್ಕು ಅಕ್ಷರಗಳ ಮಂತ್ರ. ಕೆಲವರಿಗೆ ಈ ಮಂತ್ರಗಳು ಉಪದೇಶವಾಗಿರುವುದುಂಟು. ಆದರೂ ಬಹಳಮಟ್ಟಿಗೆ, ಈ ಮಂತ್ರಗಳ ವರ್ಣನ್ಯಾಸ ಅನೇಕರಿಗೆ ತಿಳಿದೇ ಇರುವುದಿಲ್ಲ. ಉಪದೇಶವಿದ್ದವರು ತಂತ್ರಸಾರದಿಂದ (ನಾಲ್ಕನೇ ಅಧ್ಯಾಯದ ೩೦-೧೧೭ನೇ ಶ್ಲೋಕಗಳಿಂದ) ಆ ಸ್ಥಾನಗಳನ್ನು ತಿಳಿದುಕೊಂಡು ನ್ಯಾಸವನ್ನು ಮಾಡಬಹುದು. ಏನೇ ಆಗಲಿ, ಇದು ಮುಖ್ಯ ರಾಮ ಕೃಷ್ಣಾದಿ ಮಂತ್ರಗಳ ನ್ಯಾಸಕ್ಕಿಂತ ಹೆಚ್ಚು ತೊಡಕು. ವೆಂಕಟೇಶ ವಿಠಲಾದಿ ಮೂರ್ತಿಗಳಿಗೆ ಮೂಲಮಂತ್ರದಿಂದಲೇ ನ್ಯಾಸ ಮಾಡಬೇಕು. ಇಲ್ಲಿಗೆ ಈ ವಿಚಾರ ಮುಕ್ತಾಯವಾಯಿತು.

ಊ) ಸಾಲಿಗ್ರಾಮಗಳಿಗೆ ಆವಾಹನೆಯಿಲ್ಲ

'ಸಾಲಿಗ್ರಾಮೇ ಸ್ವಯಂವ್ಯಕ್ತೇ ನಾವಾಹನವಿಸರ್ಜನೇ ।'—ಸಾಲಿಗ್ರಾಮವು ಸ್ವಯಂವ್ಯಕ್ತಪ್ರತಿಮೆಯಾದ್ದರಿಂದ ಅದರಲ್ಲಿ ಆವಾಹನೆಯೂ ಇಲ್ಲ, ವಿಸರ್ಜನೆಯೂ ಇಲ್ಲ ಎಂಬುದು ಸಾಮಾನ್ಯ ನಿಯಮ. 'ಶಾಲಗ್ರಾಮಶಿಲಾಯಾಂ ವೈ ಸ್ವಯಂವ್ಯಕ್ತಸ್ತಥೈವ ಚ । ಬಿಂಬಮೂರ್ತ್ಯಾ ಸಹೈಕ್ಯೇನ ತಸಂತಶ್ಚಿಂತಯೇದ್ಧರಿಮ್ ।' ಎಂಬ (ಉಡುಪಿ ಆಹ್ನಿಕಮಂಜರಿಯಲ್ಲೂ, ಕುಂಭಕೋಣ ಪೂಜಾಪದ್ಧತಿಯಲ್ಲೂ ಕೊಟ್ಟಿರುವ ಪ್ರಮಾಣಾನುಸಾರವಾಗಿ ಆವಾಹನೆ ಮಾಡದಿದ್ದರೂ ಸಾಲಿಗ್ರಾಮದಲ್ಲಿ ಸ್ವಯಂವ್ಯಕ್ತವಾಗಿರುವ ಭಗವದ್ರೂಪಕ್ಕೂ ತನ್ನ ಬಿಂಬರೂಪಕ್ಕೂ (ಬೇರೆಯವರ ಪರವಾಗಿ ಪೂಜೆ ಮಾಡುತ್ತಿದ್ದ ಸೂರ್ಯಾಂತರ್ಗತ ಅಥವಾ ಚಂದ್ರಾಂತರ್ಗತ ಅಥವಾ ಅಗ್ನ್ಯಂತರ್ಗತ ಭಗವತ್-ರೂಪಕ್ಕೂ) ಐಕ್ಯವನ್ನು ಚಿಂತನೆ ಮಾಡಬೇಕು. ಎಂದರೆ ನನ್ನ ಬಿಂಬರೂಪಿ ಪರಮಾತ್ಮನೇ (ಅಥವಾ ಸೂರ್ಯಾದ್ಯಂತರ್ಗತ ಭಗವಂತನೇ) ಈ ಸಾಲಿಗ್ರಾಮದಲ್ಲೂ ಇದ್ದಾನೆ—ಈ ಎರಡು ರೂಪಗಳಿಗೂ ಕಿಂಚಿನ್ಮಾತ್ರವೂ ಭೇದವಿಲ್ಲ ಎಂದು ಚಿಂತಿಸಬೇಕು. ಅಷ್ಟೇ ಅಲ್ಲ, ಉಡುಪಿಯ 'ದೇವಪೂಜಾ ಪದ್ಧತಿ'ಯಲ್ಲಿ ಕೊಟ್ಟಿರುವಂತೆ ಸಾಲಿಗ್ರಾಮದಲ್ಲಿ 'ಆವಾಹನೆಯಾಗಲಿ ವಿಸರ್ಜನೆಯಾಗಲಿ, ಆವಾಹನಾದಿ ಷಣ್ಮುದ್ರಾಪ್ರದರ್ಶನವಾಗಲಿ ಅಗತ್ಯವಿಲ್ಲ. ತುಲಸೀದಳಸಹಿತ ಸಾಲಿಗ್ರಾಮವನ್ನು ಸ್ಪರ್ಶಮಾಡಿ ಹನ್ನೆರಡು ಸರ್ತಿ ಅಷ್ಟಾಕ್ಷರ ಜಪ ಮಾಡಿದರೆ ಸಾಕು.'

ಖ) ಸಾಲಿಗ್ರಾಮಶಿಲೆಯಲ್ಲಿ ಮೂರ್ತಿಯನ್ನು ಕೊರೆದಿದ್ದರೆ

ಕೆಲವರ ಮನೆಗಳಲ್ಲಿ ಸಾಲಿಗ್ರಾಮದಲ್ಲೇ ಮೂರ್ತಿಯನ್ನು ಕೆತ್ತಿರುವ ಸಾಲಿಗ್ರಾಮಗಳು ಇರುವುದುಂಟು. ಅಂಥಾ ಸಂದರ್ಭದಲ್ಲಿ "ತತ್ರ ಪ್ರತಿಮಾಯಾಮಾವಾಹನಮಸ್ತ್ಯೇವ' —ಆವಾಹನವೂ ಮುದ್ರಾಪ್ರದರ್ಶನವೂ ಉಂಟೇ ಉಂಟು—ಎಂದು ಪೂಜಾಕಲ್ಪಲತಾ ಎಂಬ ಗ್ರಂಥದಲ್ಲಿ ಹೇಳಿದೆಯೆಂದು ಶ್ರೀ ಪ್ರಭಂಜನರು ತಮ್ಮ ಪದ್ಯಮಾಲಾವಿವರಣೆಯಲ್ಲಿ ತೋರಿಸಿದ್ದಾರೆ. ಅದಕ್ಕೆ ಪ್ರಮಾಣವನ್ನೂ ಪೂಜಾಕಲ್ಪಲತಾದಲ್ಲೇ ತೋರಿಸಿದ್ದಾರೆ— 'ಹಸ್ತಾದಿಯುಕ್ತಪ್ರತಿಮಾ ಸಾಲಿಗ್ರಾಮಕೃತಾ ಚ ಯಾ। ತಸ್ಯಾಮಗ್ನಾವಪಿ ಸ್ಯಾತಾಂ ಆವಾಹನ ವಿಸರ್ಜನೇ।'—ಸಾಲಿಗ್ರಾಮದಲ್ಲೇ ಕೈ ಕಾಲು ಕಣ್ಣು ಮುಖ ಇತ್ಯಾದಿ ಅಂಗಗಳನ್ನು ಕೆತ್ತಿರುವ ಮೂರ್ತಿಯನ್ನು ಕೊರೆದಿದ್ದರೆ, ಅದು ಮೂರ್ತಿಯೇ ಆಗುವುದರಿಂದ ವೈಶ್ವದೇವಾದಿಗಳನ್ನು ಮಾಡುವಾಗ ಅಗ್ನಿಯಲ್ಲಿ ಅಗ್ನಿದೇವನನ್ನು ಆವಾಹಿಸಿ ವಿಸರ್ಜಿಸುವಂತೆ ಸಾಲಿಗ್ರಾಮದಲ್ಲೇ ಕೊರೆದ ಮೂರ್ತಿಗಳಲ್ಲೂ ಆವಾಹನೆ ವಿಸರ್ಜನೆ ಎರಡೂ ಉಂಟು.

ವಿಜಯದಾಸರು ಜಗನ್ನಾಥದಾಸರೇ ಮೊದಲಾದ ಅಪರೋಕ್ಷಜ್ಞಾನಿಗಳು ತಿರುಪತಿ, ಶ್ರೀಮುಷ್ಣ ಮೊದಲಾದ ಕ್ಷೇತ್ರಗಳಿಗೆ ಹೋದಾಗ ಆ ಕ್ಷೇತ್ರದೇವತೆಯಲ್ಲೇ ತಮ್ಮ ಬಿಂಬಮೂರ್ತಿಯ ಐಕ್ಯಚಿಂತನೆ ಮಾಡುತ್ತಿದ್ದರು; ಹಾಗೆಯೇ ಮಾಡಬೇಕೆಂದು (ಬಿಂಬಮೂರ್ತಿಯ ಐಕ್ಯಚಿಂತನೆ ಮಾಡಲೇಬೇಕು, ಹಾಗೆ ಮಾಡಿದರೆ ಮಾತ್ರವೇ ಆ ತೀರ್ಥ-ಕ್ಷೇತ್ರಕ್ಕೆ ಹೋದದ್ದು ಸಫಲ, ಇಲ್ಲದಿದ್ದರೆ ನಿಷ್ಫಲ ಎಂದೂ) ವಿಜಯದಾಸರು ತಿರುಪತಿ ಕ್ಷೇತ್ರಮಹಿಮಾ ಸುಳಾದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಪ್ರಕಾರ ತಿರುಪತಿ ಶ್ರೀನಿವಾಸ, ಶ್ರೀಮುಷ್ಣ ಶ್ರೀವರಾಹ ಇವರಲ್ಲೇ ಐಕ್ಯಚಿಂತನೆ ಮಾಡೆಂದು ಹೇಳಿರುವಾಗ ಸಾಲಿಗ್ರಾಮದಲ್ಲಿ ಐಕ್ಯಚಿಂತನ ಮಾಡಬೇಕೆಂಬುದು ಏನು ಆತಿಶಯ.

ಪ್ರತಿಮೆಗಳಲ್ಲಿ ಬಿಂಬಾವಾಹನೆ

(ತನಗಾಗಿ)

(ಕ) ಹೃದಯದಲ್ಲಿ ಬಿಂಬಮೂರ್ತಿಯ ಧ್ಯಾನ

ಅಧೋಮುಖಂ ಹೃತ್ಕಮಲಂ ವಾಯುಬೀಜೇನ ಉನ್ಮುಖಂ ಕುರ್ಯಾತ್ (ಅಧೋಮುಖವಾಗಿರುವ ಹೃದಯಕಮಲವನ್ನು ವಾಯುಬೀಜಮಂತ್ರದಿಂದ ಮೇಲ್ಮುಖವಾಗಿ ಮಾಡಬೇಕು)

ಓಂ ಯಂ ಓಂ ಇತಿ ವಾಯುಬೀಜಮಂತ್ರಂ ಜಪ್ತ್ವಾ ಹೃತ್ಕಮಲಂ ಉನ್ಮುಖಂ ಭಾವಯೇತ್। (ಕಣ್ಣು ಮುಚ್ಚಿಕೊಂಡು ಹೃದಯದಲ್ಲಿರುವ ಕೆಳಮುಖವಾದ ಕಮಲವನ್ನು ಚಿಂತಿಸಿ ಓಂ ಯಂ ಓಂ ಎಂದು ಜಪಿಸಿ, ಆ ಹೃತ್ಕಮಲವು ಮೇಲ್ಮುಖವಾಯಿತೆಂದು ಭಾವಿಸಬೇಕು.)

ಪ್ರಣವೇನ ತತ್ ವಿಕಾಸಯೇತ್ ("ಓಂ ಓಂ ಓಂ" ಎಂದು ಜಪಿಸಿ ಅದು ಅರಳಿತೆಂದು ಭಾವಿಸಬೇಕು.)

ತತ್ಕರ್ಣಿಕಾಗ್ರೇ ಪರಮಾತ್ಮಾನಂ ಧ್ಯಾಯೇತ್ ।

ಹೃದಯಕಮಲವು ಅರಳಿದಾಗ ಅದರ ಮಧ್ಯದಲ್ಲಿರುವ ಕರ್ಣಿಕೆಯಲ್ಲಿ ಬಿಂಬರೂಪಿ ಪರಮಾತ್ಮನು ಕುಳಿತಿದ್ದಾನೆಂದು ಭಾವಿಸಿ ಆ ಪರಮಾತ್ಮನನ್ನು ಕೆಳಗಿನ ಶ್ಲೋಕಗಳಿಂದ ಧ್ಯಾನಿಸಬೇಕು—ಧ್ಯಾನ ಮಾಡುತ್ತಾ ಈ ಶ್ಲೋಕಗಳಲ್ಲಿ ಹೇಳಿರುವಂತೆ ಇರುವನೆಂದೂ ಚಕ್ರಾದ್ಯಾಯುಧಗಳನ್ನು ಧರಿಸಿದ್ದಾನೆಂದೂ ಊಹಿಸಿಕೊಳ್ಳಬೇಕು. ಹೀಗೆ ಎಷ್ಟೋ ವರ್ಷಗಳು ಚಿಂತಿಸುತ್ತಾ ಹೋದರೆ ಆಮೇಲೆ ಅಂಥಾ ಮೂರ್ತಿಯು ಸಂಸ್ಕಾರಬಲದಿಂದ ಮನಸ್ಸಿನಲ್ಲೇ ಮೂಡುವುದು. ಆ ಮೂರ್ತಿಯು ಮೊದಮೊದಲು ಅಸ್ಪಷ್ಟವಾಗಿದ್ದು ಕ್ರಮೇಣ ಹೆಚ್ಚುಹೆಚ್ಚು ಸ್ಪಷ್ಟವಾಗುತ್ತಾ ಬಂದು ಎಂದೋ ಒಂದು ದಿನ—ಅನೇಕ ವರ್ಷಗಳು ಕಳೆದಮೇಲೆ ನಿಜವಾಗಿಯೂ ಕಾಣುವುದು, ಇದನ್ನೇ ಅಪರೋಕ್ಷ ಅಥವಾ ಪ್ರತ್ಯಕ್ಷ ಎನ್ನುತ್ತಾರೆ. ಆದರೆ ಅದಕ್ಕೆ ಮೊದಮೊದಲು ಊಹಿಸಿ ಕಲ್ಪನೆ ಮಾಡಿಕೊಳ್ಳುತ್ತಾ ಬರಲೇಬೇಕು. ಇದನ್ನೇ ಭಗವದ್ಗೀತೆಯಲ್ಲಿ 'ಅಭ್ಯಾಸಯೋಗ' ಎನ್ನುತ್ತಾನೆ ಶ್ರೀಕೃಷ್ಣ.

ಖ) ಧ್ಯಾನಶ್ಲೋಕಗಳು—ಅದರ ಅರ್ಥ

ಉದ್ಯದ್ ಭಾಸ್ವತ್ ಸಮಾಭಾಸಸ್—ಚಿದಾನಂದೈಕ ದೇಹವಾನ್ ।
ಚಕ್ರಶಂಖಗದಾಪದ್ಮ—ಧರೋ ಧ್ಯೇಯೋಽಹಮೀಶ್ವರಃ ॥೧॥

(ಶಬ್ದಾರ್ಥ— ಉದ್ಯತ್-ಆಗತಾನೇ ಉದಯಿಸುತ್ತಿರುವ, ಭಾಸ್ವತ್-ಸೂರ್ಯನಿಗೆ, ಸಮ-ಸದೃಶವಾದ, ಆಭಾಸಃ-ಕಾಂತಿಯುಳ್ಳವನು, ಚಿತ್ ಆನಂದ-ಜ್ಞಾನವೂ, ಆನಂದವೂ, ಏಕ-ಕೇವಲ, ಅಹಂ-ನಾನು, ಈ ಮಾತನ್ನು ಭಗವಂತ ವಿಷ್ಣು ಬ್ರಹ್ಮನಿಗೆ ಉಪದೇಶ ಮಾಡುವಾಗ ಹೇಳಿದ್ದು. ಆದ್ದರಿಂದ 'ನಾನು' ಎಂದರೆ ಭಗವಂತ ಎಂದೇ ಅರ್ಥ. ಧ್ಯೇಯಃ-ಧ್ಯಾನ ಮಾಡಬೇಕಾದವನು.

ಭಾವಾರ್ಥ— ಸರ್ವಸ್ವಾಮಿಯಾದ ನಾನು (ನಾರಾಯಣನು) ಹೀಗಿದ್ದೇನೆಂದು ಚಿಂತಿಸಬೇಕು. ಆಗತಾನೇ ಉದಯಿಸುತ್ತಿರುವ ಸೂರ್ಯನು ಹೇಗೆ ಹೊನ್ನುಗೆಂಪು ಬಣ್ಣವಾಗಿರುತ್ತಾನೋ ಹಾಗೆಯೇ ನಾನೂ (ವಿಷ್ಣುವೂ) ಇರುತ್ತೇನೆ. ನನ್ನ ದೇಹವು ಕೇವಲ-ಜ್ಞಾನಾನಂದಮಯವಾಗಿರುತ್ತದೆ. ನನಗೆ ನಾಲ್ಕು ಕೈಗಳಿರುತ್ತವೆ. ಮೇಲಿನ ಎರಡು ಕೈಗಳಲ್ಲಿ (ಬಲಗಡೆ) ಚಕ್ರವನ್ನೂ, (ಎಡಗಡೆ) ಶಂಖವನ್ನೂ, ಕೆಳಗಿನ ಎರಡು ಕೈಗಳಲ್ಲಿ (ಎಡಗಡೆ) ಗದೆಯನ್ನೂ, (ಬಲಗಡೆ) ಪದ್ಮವನ್ನೂ ಧರಿಸಿದ್ದೇನೆಂದೂ ಧ್ಯಾನಮಾಡಬೇಕು. (ಆಯುಧಗಳನ್ನು ಯಾವಾಗಲೂ ಸವ್ಯಾಕಾರದಿಂದಲೇ ಹೇಳಿರುತ್ತಾರೆ.)

ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।
ಬ್ರಹ್ಮ ವಾಯು-ಶಿವಾಹೀಶ—ವಿಪ್ರೈಃಶಕ್ರಾದಿಕೈರಪಿ ।
ಸೇವ್ಯಮಾನೋಽಧಿಕಂ ಭಕ್ತ್ಯಾ ನಿತ್ಯನಿಶ್ಶೇಷಶಕ್ತಿಮಾನ್ ॥ ೨ ॥

(ಲಕ್ಷ್ಮೀ-ಶ್ರೀದೇವಿ, ಧರಾ-ಭೂದೇವಿ, ಆಶ್ಲಿಷ್ಟಃ-ಆಲಿಂಗಿತನಾದ, ಸ್ವ-ತನ್ನ, ಮೂರ್ತಿ-ರೂಪಗಳ, ಗಣ-ಗುಂಪಿನ—ಎಂದರೆ ವಿಶ್ವ ತೈಜಸ-ಪ್ರಾಜ್ಞ-ತುರೀಯ, ಆತ್ಮ-ಅಂತರಾತ್ಮ-ಪರಮಾತ್ಮ-ಜ್ಞಾನಾತ್ಮಗಳೆಂಬ ಎಂಟು ಮೂರ್ತಿಗಳ, ಮಧ್ಯಗಃ-ಮಧ್ಯದಲ್ಲಿ ಇರುವ, ಅಹೀಶ-ಸರ್ಪರಾಜನಾದ ಶೇಷ, ವಿಪ್ರೈಃ-ಗರುಡದೇವರು, ಶಕ್ರ ಆದಿಕೈಃ-ದೇವೇಂದ್ರನೇ ಮೊದಲಾದ, ಸೇವ್ಯಮಾನಃ-ಸೇವಿಸಲ್ಪಡುತ್ತಿರುವ.)

ಭಾವಾರ್ಥ— ವಿಷ್ಣು ಶ್ರೀದೇವಿ-ಭೂದೇವಿಯರಿಂದ ಕೂಡಿದ್ದಾನೆಂದೂ, ವಿಶ್ವ-ತೈಜಸಾದಿ ತನ್ನ ಎಂಟು ಮೂರ್ತಿಗಳ ಮಧ್ಯದಲ್ಲಿದ್ದಾನೆಂದೂ ಅಧಿಕ ಭಕ್ತಿಯಿಂದ ಬ್ರಹ್ಮ ವಾಯು ಗರುಡ ಶೇಷ ರುದ್ರ ಇಂದ್ರಾದಿ ಸಕಲ ದೇವತೆಗಳಿಂದಲೂ ಸೇವಿಸಲ್ಪಡುತ್ತಿದ್ದಾನೆಂದೂ, ನಿತ್ಯವಾದ ಅನಂತಶಕ್ತಿಯುಳ್ಳವನೆಂದೂ, ಧ್ಯಾನ ಮಾಡಬೇಕು.

(ಈ ಶ್ಲೋಕಗಳನ್ನು ಸಾಧ್ಯವಾದಷ್ಟು ಅರ್ಥ ಅನುಸಂಧಾನ ಸಹಿತ ಹೇಳುತ್ತಾ ಹೃದಯಕಮಲದಲ್ಲಿರುವ ತನ್ನ ಬಿಂಬರೂಪೀ ಪರಮಾತ್ಮನನ್ನು ಉದಯಿಸುತ್ತಿರುವ ಸೂರ್ಯನಂತೆ ಹೊನ್ನುಗೆಂಪುಬಣ್ಣವುಳ್ಳವನೆಂದೂ, ಜ್ಞಾನಾನಂದಮಯಸ್ವರೂಪನೆಂದೂ ಚಕ್ರಶಂಖಾದ್ಯಾಯುಧಗಳನ್ನು ಧರಿಸಿದ್ದಾನೆಂದೂ, ಎರಡು ಪಾರ್ಶ್ವಗಳಲ್ಲೂ ಶ್ರೀದೇವಿ-ಭೂದೇವೀ ಸಮೇತನಾಗಿದ್ದಾನೆಂದೂ ಬ್ರಹ್ಮಾದಿ ದೇವತೆಗಳು ಅವನನ್ನು ಸೇವಿಸುತ್ತಿದ್ದಾರೆಂದೂ ತಿಳಿದು ಧ್ಯಾನ ಮಾಡಬೇಕೆಂದು ಭಾವ.)

ಗ) ಬಿಂಬಮೂರ್ತಿಯ ಮಾನಸಿಕಪೂಜೆ

ತಂ ಗಂಧಾದಿ ಮಾನಸೋಪಚಾರೈಃ ಪೂಜಯೇತ್ । ಓಂ ಲಂ ಪೃಥಿವ್ಯಾತ್ಮಕಂ ಗಂಧಂ ಸಮರ್ಪಯಾಮಿ । ಓಂ ಹಂ ಆಕಾಶಾತ್ಮಕಂ ಪುಷ್ಪಂ ಸಮರ್ಪಯಾಮಿ । ಓಂ ಯಂ ವಾಯ್ವಾತ್ಮಕಂ ಧೂಪಂ ಸಮರ್ಪಯಾಮಿ । ಓಂ ರಂ ಅಗ್ನ್ಯಾತ್ಮಕಂ ದೀಪಂ ಸಮರ್ಪಯಾಮಿ । ಓಂ ವಂ ಅಮೃತಾತ್ಮಕಂ ನೈವೇದ್ಯಂ ಸಮರ್ಪಯಾಮಿ । ಓಂ ರಂ ಅಗ್ನ್ಯಾತ್ಮಕಂ ನೀರಾಜನಂ ದರ್ಶಯಾಮಿ ।

(ಮೇಲೆ ಹೇಳಿದಂತೆ ಲಂ ಹಂ ಯಂ ಮುಂತಾದ ಬೀಜಮಂತ್ರಗಳಿಂದಲೇ ಗಂಧಾದಿ ಪಂಚೋಪಚಾರಗಳನ್ನು ಮನಸ್ಸಿನಿಂದಲೇ ಸಮರ್ಪಿಸಬೇಕು.)

ಘ) ಬಿಂಬಮೂರ್ತಿಯ ಆಹ್ವಾನ

ಸಪುಷ್ಪತುಲಸೀಕರಃ । ಕೃತಾಂಜಲಿಪುಟೋ ಭೂತ್ವಾ 'ಅತ್ರೇ......'ತ್ಯೇಕಾಂ ಋಚಂ ಪಠೇತ್ ।

(ಅರ್ಥ) ಆಮೇಲೆ ಕೈಯಲ್ಲಿ ಹೂವು ತುಳಸಿಯನ್ನು ಹಿಡಿದುಕೊಂಡು, ಕೈಜೋಡಿಸಿ (ಬೊಗಸೆ ಹಿಡಿದು) ಆ ಸ್ವಾಮಿಯನ್ನು "ಆತ್ಮಾ ದೇವಾನಾಂ..." ಎಂಬ ಋಕ್ಕನ್ನು ಹೇಳಿ ಪ್ರಾರ್ಥಿಸಬೇಕು.

ಓಂ || ಆತ್ಮಾ ದೇವಾನಾಂ ಭುವನಸ್ಯ ಗರ್ಭೋ

ಯಥಾ ವಶಂ ಚರತಿ ದೇವ ಏಷಃ |

ಘೋಷಾ ಇದಸ್ಯ ಶೃಣ್ವಿರೇ ನ ರೂಪಂ

ತಸ್ಮೈ ವಾತಾಯ ಹವಿಷಾ ವಿಧೇಮ ||

ಈ ಮಂತ್ರವು ಋಗ್ವೇದಸಂಹಿತೆಯ ಹತ್ತನೆಯ ಮಂಡಲದ ೧೬೮ನೇ ಸೂಕ್ತದಲ್ಲಿ ನಾಲ್ಕನೇ ಋಕ್ಕಾಗಿ ಪಠಿತವಾಗಿದೆ. ಈ ಮಂತ್ರವನ್ನು ಶ್ರೀಮದಾಚಾರ್ಯರು ನ್ಯಾಯ-ವಿವರಣದಲ್ಲಿ ತೃತೀಯಾಧ್ಯಾಯದ ತೃತೀಯ ಪಾದದ ಇಪ್ಪತ್ತೊಂದನೇ ಅಧಿಕರಣದಲ್ಲಿ ಪ್ರಸಂಗವಶಾತ್ ಉದಹರಿಸಿದ್ದಾರೆ. ಅದಕ್ಕೆ ರಘೂತ್ತಮಸ್ವಾಮಿಗಳು ಭಾವಬೋಧ ವೆಂಬ ಟೀಕೆ ಬರೆದಿದ್ದಾರೆ. ಅವರ ಟೀಕಾ ಪ್ರಕಾರ ಈ ಮಂತ್ರಕ್ಕೆ ಹೀಗೆ ಅರ್ಥವಾಗುತ್ತದೆ.

(ಅನ್ವಯಾರ್ಥ) ದೇವಾನಾಂ ಆತ್ಮಾ-ಎಲ್ಲಾ ದೇವತೆಗಳಿಗೂ ಸ್ವಾಮಿಯಾದ (ಈ ಮುಖ್ಯಪ್ರಾಣನೂ ಮತ್ತು ಅವನಿಗೂ ನಿಯಾಮಕನಾದ ಶ್ರೀಹರಿಯೂ) ಭುವನಸ್ಯ ಗರ್ಭಃ-ಗರ್ಭವು ಹೇಗೆ ದೇಹದಲ್ಲಿ ಒಳಗೆ ಇರುತ್ತದೋ ಹಾಗೆ ಅಂತರ್ಗತನಾಗಿರುತ್ತಾನೆ. ಏಷಃ ದೇವಃ-ಈ ದೇವತೆಯು (ಮುಖ್ಯಪ್ರಾಣನೂ ಶ್ರೀಹರಿಯೂ); ಯಥಾ ವಶಂ ಚರತಿ-ಯಥೇಷ್ಟವಾಗಿ ಸರ್ವತ್ರ ಸಂಚರಿಸುತ್ತಾನೆ. ಅಸ್ಯ-ಇವನ; ಘೋಷಾ ಇತ್-ಕೇವಲ ಘೋಷಗಳೆ ಎಂದರೆ ಅಶರೀರ ವಾಗ್ರೂಪಗಳೇ (ಉದಾಹರಣೆಗೆ ಶ್ವಾಸೋ-ಚ್ಛ್ವಾಸರೂಪ ಶಬ್ದಗಳು ಮಾತ್ರವೇ); ಶೃಣ್ವಿರೇ-ಕೇಳಲ್ಪಡುತ್ತವೆ. ನ ರೂಪಂ-ರೂಪವು ಮಾತ್ರ ಕಾಣಿಸುವುದಿಲ್ಲ, ತಸ್ಮೈ ವಾತಾಯ-ಅಂಥಾ ಮುಖ್ಯಪ್ರಾಣನಿಗೆ (ಮತ್ತು ಶ್ರೀಹರಿಗೆ); ಹವಿಷಾ-ಹವಿಸ್ಸಿನಿಂದ; ವಿಧೇಮ-ಹೋಮಿಸುತ್ತೇವೆ.

(ಭಾವಾರ್ಥ) ಮುಖ್ಯಪ್ರಾಣನು ಜೀವೋತ್ತಮನು, ಆದ್ದರಿಂದ ರುದ್ರೇಂದ್ರಾದಿ ಸಕಲ ದೇವತೆಗಳಿಗಿಂತಲೂ ಶ್ರೇಷ್ಠನು. ಶ್ರೀಹರಿಯು ಆ ಮುಖ್ಯಪ್ರಾಣನಿಗೂ, ಆತ್ಮನು-ಸ್ವಾಮಿಯು. ಅವನು ಸರ್ವೋತ್ತಮನು. ಅವನಿಗಿಂತ ಉತ್ತಮ ವಸ್ತು ಬೇರೆ ಯಾವುದೂ

ಇಲ್ಲ. ಶ್ರೀಹರಿಯು ಸರ್ವತ್ರ ವ್ಯಾಪ್ತನಾಗಿದ್ದರೂ ಅಂತರ್ಯಾಮಿಯಾಗಿದ್ದರೂ ಗರ್ಭದಂತೆ ಒಳಗೇ ಇರುತ್ತಾನೆ. ಯಾರ ಕಣ್ಣಿಗೂ ಬೀಳುವುದಿಲ್ಲ. ಮುಖ್ಯಪ್ರಾಣನೂ ಸಕಲ ಪ್ರಾಣಿಗಳ ಶರೀರದಲ್ಲೂ ಶ್ವಾಸೋಚ್ಛ್ವಾಸರೂಪದಿಂದ ದೇಹದ ಒಳಗೇ ಇರುತ್ತಾನೆ. ಜಾಗ್ರತ್-ಸ್ವಪ್ನ ಸುಷುಪ್ತಿ ಮೂರು ಅವಸ್ಥೆಗಳಲ್ಲೂ ಜೀವನಿಗೆ ಅರಿವಿಲ್ಲದಂತೆಯೇ ಶ್ವಾಸೋಚ್ಛ್ವಾಸರೂಪದಿಂದ ಸಂಚರಿಸುತ್ತಿರುತ್ತಾನೆ. ಉಸಿರಾಟದ ಶಬ್ದವನ್ನು ಮಾತ್ರ ನಾವು ಕೇಳಬಲ್ಲೆವು. ಆದರೆ ಅವನ ರೂಪವನ್ನು ನಾವು ಕಾಣಲಾರೆವು. ಅಂಥಾ ನಮಗೆ ಜೀವನಕ್ಕೇ ಆಧಾರಭೂತನಾದ ಶ್ರೀ ಮುಖ್ಯಪ್ರಾಣನಿಗಾಗಿಯೂ ಅವನ ಒಡೆಯನಾದ ಶ್ರೀಹರಿಗಾಗಿಯೂ ಪೂಜಾದಿರೂಪ ಹವಿಸ್ಸನ್ನು ಸಮರ್ಪಿಸುತ್ತೇವೆ.

ಙ) ಬಿಂಬಮೂರ್ತಿಯನ್ನು ಕೈಯಲ್ಲಿರುವ ತುಲಸೀ-ಪುಷ್ಪಗಳಲ್ಲಿ ಕರೆಯುವುದು

ಈ ಭಾಗವಷ್ಟೂ ಕೇವಲ ಮಾನಸಿಕ ಕ್ರಿಯೆ. ಆದ್ದರಿಂದ ಸಂಸ್ಕೃತ ವಾಕ್ಯಗಳನ್ನು ಕೊಟ್ಟಿಲ್ಲ.

'ಆತ್ಮಾ ದೇವಾನಾಂ' ಎಂಬ ಋಙ್ಮಂತ್ರವನ್ನು ಪಠಿಸಿದ ಮೇಲೆ 'ಓಂ ನಮೋ ನಾರಾಯಣಾಯ' ಎಂದು ಜಪಿಸುತ್ತಾ ಆ ಬಿಂಬರೂಪೀ ಪರಮಾತ್ಮನು ನಮ್ಮ ಹೃದಯಕಮಲದಿಂದ ಹೊರಟು ಸುಷುಮ್ನಾನಾಡಿಯ ಮಾರ್ಗವಾಗಿ ನಮ್ಮ ನೆತ್ತಿಗೆ ಬರುವನೆಂದೂ ನೆತ್ತಿಯಿಂದ ಎಡಮೂಗಿನ ತುದಿಗೆ (ವಾಮನಾಸಾಪುಟಕ್ಕೆ) ಬರುವನೆಂದೂ ಮೂಗಿನ ತುದಿಯಿಂದ ನಮ್ಮ ಕೈಯಲ್ಲಿರುವ ತುಲಸೀ ಪುಷ್ಪಗಳಲ್ಲಿ ಸನ್ನಿಹಿತನಾದನೆಂದೂ ಭಾವಿಸಿಕೊಂಡು ಆ ಪರಮಾತ್ಮನನ್ನು 'ಹೇ ಸ್ವಾಮಿ, ನಿನ್ನನ್ನು ಈ ಪ್ರತಿಮೆಯಲ್ಲಿ ಆವಾಹಿಸಲು ಉದ್ಯುಕ್ತನಾಗಿದ್ದೇನೆ, ಅನುಗ್ರಹ ಮಾಡು' ಎಂದು ಪ್ರಾರ್ಥಿಸಿಕೊಳ್ಳಬೇಕು.

ಸೂಚನೆ— ಸುಷುಮ್ನಾ ನಾಡಿಯ ವಿವರಣೆ. ತಂತ್ರಸಾರದಲ್ಲಿ ನಾಲ್ಕನೇ ಅಧ್ಯಾಯ (೬೨ನೇ ಶ್ಲೋಕ)ದಲ್ಲಿ ಬಂದಿದೆ—

ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾನಮೃಜುಸ್ಥಿತಾ ।
ಮಧ್ಯೇ ಸುಷುಮ್ನಾ ವಿಜ್ಞೇಯಾ...

(ಅರ್ಥ) ಮೂತ್ರವಿಸರ್ಜನಾಂಗದ ತುದಿಯಿಂದ ನೆತ್ತಿಯವರೆಗೆ ನೆಟ್ಟಗೆ ಉದ್ದವಾಗಿ ದೇಹದ ಮಧ್ಯದಲ್ಲಿ ಒಂದು ನಾಡಿ ಹಾದುಹೋಗಿದೆ; ಇದಕ್ಕೇ ಸುಷುಮ್ನಾನಾಡಿ ಎಂದು ಹೆಸರು. ಈ ಮಧ್ಯದ ಸುಷುಮ್ನಾ ನಾಡಿಯಿಂದಲೇ ಮಿಕ್ಕ ನಾಡಿಗಳೆಲ್ಲ ಒಡೆದು (ವಿಭಾಗವಾಗಿ) ಶಾಖೋಪಶಾಖೆಗಳಾಗಿ ಹರಡಿಕೊಂಡಿವೆ.

ಚ) ಆವಾಹನೆ ಮಾಡಿ ಪೂಜಿಸಲು ಅನುಗ್ರಹಿಸುವಂತೆ ಪ್ರಾರ್ಥನೆ

ಮೂಲಮಂತ್ರಂ ತತೋ ಜಪ್ತ್ವಾ ಯದ್ಯಾತ್ಮಾರ್ಥಂ ಪ್ರಪೂಜಯೇತ್। (ಪದ್ಯಮಾಲಾ) "ಏಹ್ಯೇಹಿ .. ..ರಮಾಪತೇ। ದ್ವಿರುಚ್ಚಾರ್ಯೈವಮಾವಾಹ್ಯ"

(ಅರ್ಥ) 'ಆತ್ಮಾ ದೇವಾನಾಂ' ಎಂದು ಪಠಿಸಿದ ಬಳಿಕ ಮೂಲಮಂತ್ರವನ್ನು ಜಪಿಸುತ್ತಾ (ಆ ಸ್ವಾಮಿಯನ್ನು ಕ್ರಮವಾಗಿ ಹೃದಯಕಮಲದಿಂದ ಹಸ್ತಾಂಜಲಿಯಲ್ಲಿರುವ ತುಲಸೀ-ಪುಷ್ಪಗಳಲ್ಲಿ ಸನ್ನಿಹಿತನಾಗಿದ್ದಾನೆಂದು ಭಾವಿಸಿಕೊಂಡು, ತನಗೋಸ್ಕರ ಪೂಜೆ ಮಾಡುತ್ತಿದ್ದರೆ "ಏಹ್ಯೇಹಿ......" ಎಂದು ಎರಡಾವರ್ತಿ ಪ್ರಾರ್ಥಿಸಿ ಬಿಂಬರೂಪಿ ಪರಮಾತ್ಮನನ್ನು ಪ್ರತಿಮೆಯಲ್ಲಿ ಆವಾಹಿಸಬೇಕು. ಹೇಗೆಂದರೆ—

ಪ್ರಾರ್ಥನಾಕ್ರಮ

ಓಂ॥ ಏಹ್ಯೇಹಿ ಮಮ ಹೃತ್ಪದ್ಮ—ಸ್ಥಿತ ಶ್ರೀ ಪುರುಷೋತ್ತಮ।
ಆವಾಹಯಾಮಿ ಪೀಠೇ ತ್ವಾಂ ಪ್ರತಿಮಾಯಾಂ ರಮಾಪತೇ ॥

(ಶಬ್ದಾರ್ಥ: ಏಹಿ + ಏಹಿ = ಏಹ್ಯೇಹಿ — ಆದರಾದ್ ದ್ವಿರುಕ್ತಿಃ। ಏಹಿ = ಆ + ಇಹಿ; ಆ ಎಂಬುದು ಉಪಸರ್ಗ. ಇಣ್ ಗತೌ ಎಂದು ಧಾತುಪಾಠವಿರುವುದರಿಂದ ಇ (ಅದಾದಿ ಪ) = ಹೋಗು ಎಂದರ್ಥ. ಆ ಸೇರಿದಾಗ (ಗಚ್ಛ—ಆಗಚ್ಛ ಎಂಬಂತೆ) ಬಾ ಎಂದರ್ಥವಾಗುತ್ತದೆ. 'ಹಿ' ಎಂಬುದು ಆಜ್ಞಾರ್ಥದಲ್ಲಿ ಮಧ್ಯಮಪುರುಷ ಏಕವಚನ ಪ್ರತ್ಯಯ [ಉದಾ. ದೇಹಿ-ಕೊಡು, ಪಾಹಿ-ಕಾಪಾಡು]. ಅದ್ದರಿಂದ ಇಹಿ ಎಂದರೆ ಹೋಗು ಎಂದರ್ಥ; ಆ ಸೇರಿದರೆ ಆ + ಇಹಿ = ಏಹಿ ಆಗುತ್ತದೆ. ಆದ್ದರಿಂದ ಏಹಿ ಎಂದರೆ ಬಾ ಎಂದು ಅರ್ಥವಾಗುತ್ತದೆ. ಆದರದಿಂದ ದ್ವಿರುಕ್ತಿ ಬಂದಿದೆ. ಮಿಕ್ಕ ಭಾಗ ಸುಲಭವಾಗಿಯೇ ಇದೆ.)

ಭಾವಾರ್ಥ: ನನ್ನ ಹೃದಯಕಮಲದಲ್ಲಿರುವ ಹೇ ಪುರುಷೋತ್ತಮನೇ! ಸ್ವಾಮಿ ಬಾ ಸ್ವಾಮಿ ಬಾ. (ಈ ತುಲಸೀ-ಪುಷ್ಪಗಳಲ್ಲಿ ಸನ್ನಿಹಿತನಾಗು.) ನಿನ್ನನ್ನು ಪೀಠದಲ್ಲಿರುವ ಈ ಪ್ರತಿಮೆಯಲ್ಲಿ ಆವಾಹಿಸುತ್ತೇನೆ. (ಈ ತುಲಸೀ-ಪುಷ್ಪಗಳಿಂದ ಈ ಪ್ರತಿಮೆಯಲ್ಲಿ ಸನ್ನಿಧಾನವಿಟ್ಟು ಅನುಗ್ರಹ ಮಾಡು, ಸ್ವಾಮಿ, ಭಗವಂತ.)
ಎಂದು ಎರಡು ಸಲ ಪ್ರಾರ್ಥಿಸಬೇಕು. ಬನ್ನಿ-ಬನ್ನಿ ಅಥವಾ ಬಾ ಬಾ ಎಂದು ಆದರವನ್ನು ತೋರಿಸುವುದಕ್ಕೋಸ್ಕರ ಎರಡಾವರ್ತಿ ಹೇಳುತ್ತೇವೆಯೋ ಅದೇ ರೀತಿ ಆದರ ಸೂಚಿಸುವುದಕ್ಕಾಗಿಯೇ ಈ ಇಡೀ ಶ್ಲೋಕವನ್ನೇ ಎರಡಾವರ್ತಿ ಪಠಿಸಬೇಕೆಂದು ಶ್ರೀ ಟೀಕಾಕೃತ್ಪಾದರು ನಿರ್ದೇಶ ಮಾಡುತ್ತಾರೆ.

ಅನುಸರಿಸಬೇಕಾದ ಕ್ರಮ: ಈ ರೀತಿ ಎರಡಾವರ್ತಿ ಈ ಪ್ರಾರ್ಥನಾಶ್ಲೋಕವನ್ನು ಪಠಿಸಿ, ಪುನಃ ಓಂ ನಮೋ ನಾರಾಯಣಾಯ ಎಂದು ಹೇಳಿಕೊಂಡು, ಹಸ್ತಾಂಜಲಿ

ಯಲ್ಲಿರುವ ಆ ತುಳಸೀ-ಪುಷ್ಪವನ್ನು ಪೂಜಿಸಬೇಕಾಗಿರುವ ಪ್ರತಿಮೆಯ ಪಾದದ ಮೇಲೆ ಅರ್ಪಿಸಬೇಕು. ಇದರಿಂದ ತುಳಸೀ-ಪುಷ್ಪಗಳಲ್ಲಿದ್ದ ನಮ್ಮ ಬಿಂಬರೂಪಿ ಪರಮಾತ್ಮನೇ ಎದುರಿಗಿರುವ ಲೋಹಮಯ ಪ್ರತಿಮೆಯಲ್ಲಿ ಸನ್ನಿಹಿತನಾದನೆಂದು ಕಲ್ಪಿಸಿಕೊಳ್ಳಬೇಕು.

ಸೂಚನೆ— ಅನೇಕ ಪ್ರತಿಮೆಗಳಿದ್ದಾಗ ಮುಖ್ಯವಾದ ಒಂದು ಪ್ರತಿಮೆಯಲ್ಲಿ ಮಾತ್ರವೇ ಈ ರೀತಿ ಬಿಂಬಾವಾಹನೆ ಮಾಡಬೇಕು. ಆ ಭಗವಂತ ವಿಶ್ವವ್ಯಾಪಿಯಾದ್ದರಿಂದ ಮಿಕ್ಕ ಪ್ರತಿಮೆಗಳಲ್ಲೂ ಅದೇ ವೇಳೆಗೆ ತನ್ನ ಅನಂತಶಕ್ತಿಯ ಮಹಿಮೆಯಿಂದ ವ್ಯಾಪ್ತನಾಗುವನೆಂದು ತಿಳಿದುಕೊಳ್ಳಬೇಕು. ಪ್ರತಿಯೊಂದು ಪ್ರತಿಮೆಯಲ್ಲೂ ಆವಾಹನೆ ಮಾಡುವ ಆವಶ್ಯಕತೆಯಿಲ್ಲ. ಏಕೆಂದರೆ ಪರಮಾತ್ಮನ ಅನಂತರೂಪಗಳಿದ್ದರೂ ಎಲ್ಲವೂ ಪೂರ್ಣವೇ ಎಲ್ಲವೂ ಅಭಿನ್ನ. ಸ್ವಗತಭೇದ ವಿವರ್ಜಿತವೆಂದು ಬ್ರಹ್ಮಸೂತ್ರಗಳಲ್ಲಿ ನಿರ್ಣಯಿಸಲ್ಪಟ್ಟಿದೆ. ಅಲ್ಲದೆ "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ" ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ (೭ ಅ., ೧ ಬ್ರಾ, ೧ ಖಂ.) ಹೇಳಿದ ಪ್ರಕಾರ 'ಮೂಲರೂಪವೂ ಪೂರ್ಣ, ಅವತಾರರೂಪವೂ ಪೂರ್ಣ, ಪೂರ್ಣನಾದ ಮೂಲರೂಪದಿಂದಲೇ ಪೂರ್ಣವಾದ ಅಂಶಾವತಾರರೂಪಗಳು ಹೊರಡುತ್ತವೆ.' ಅನಂತ ಅಂಶರೂಪಗಳು ಹೊರಟರೂ ಮೂಲರೂಪವೂ ಪೂರ್ಣವಾಗಿರುತ್ತದೆ, ಅಂಶರೂಪಗಳೂ ಪೂರ್ಣವಾಗಿರುತ್ತವೆ. ಭಗವಂತನಲ್ಲಿ ಅಂಶಾಂಶಿಗಳ ಅಥವಾ ಅಂಗಾಂಗಿಗಳ ಯಾವ ಭೇದವೂ ಇಲ್ಲ ಎಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಪರಮಾತ್ಮನ ರಾಮಕೃಷ್ಣಾದಿ ರೂಪಗಳಲ್ಲಿ ಈಷದ್ಭೇದವನ್ನೂ ತಿಳಿಯಬಾರದು. ಒಟ್ಟಿನಲ್ಲಿ ಒಂದು ಪ್ರತಿಮೆಯಲ್ಲಿ ಬಿಂಬಾವಾಹನೆ ಮಾಡಿದರೂ ಎಲ್ಲ ಪ್ರತಿಮೆಗಳಲ್ಲೂ ಆದಂತೆಯೇ ಎಂದು ತಿಳಿಯಬೇಕು.

ಈ ಪ್ರಕಾರ ನಮ್ಮ ಬಿಂಬರೂಪೀ ಪರಮಾತ್ಮನನ್ನು ಪೂಜ್ಯವಾದ ಪ್ರತಿಮೆಯಲ್ಲಿ ಆವಾಹನೆ ಮಾಡಿದ ಬಳಿಕ ಆ ಸ್ವಾಮಿಯನ್ನು ಪೂಜೆ ಮುಗಿಯುವವರೆಗೆ ಅಲ್ಲೇ ಸನ್ನಿಹಿತನಾಗಿದ್ದು ನಾವು ಮಾಡುವ ಪೂಜೆಯನ್ನು ಸ್ವೀಕರಿಸೆಂದು ಪ್ರಾರ್ಥಿಸಬೇಕು. ಅದೇ ಮುಂದಿನ ಕರ್ತವ್ಯ.

ಛ) ಬಿಂಬಮೂರ್ತಿಯನ್ನು ಪೂಜೆ ಸ್ವೀಕರಿಸುವಂತೆ ಪ್ರಾರ್ಥಿಸುವುದು

(ಪದ್ಮಮಾಲಾ) ತತಃ ಪ್ರಾರ್ಥನಾಮುದ್ರಾಂ ಚ ವಿಧಾಯ ಪ್ರಾರ್ಥಯೇದ್ಧರಿಮ್ "ಯೋಗಾವಸಾನ ..... ವಿಭೋ।" ಇತಿ.

(ಅರ್ಥ) ತುಲಸೀಪುಷ್ಪಗಳನ್ನು ಮೂರ್ತಿಯ ಪಾದದ ಮೇಲೆ ಸಮರ್ಪಿಸಿದ ನಂತರ ಪ್ರಾರ್ಥನಾಮುದ್ರೆಯನ್ನು ಸಮರ್ಪಿಸಿ (ಎಂದರೆ ಕೈ ಮುಗಿದು ಎಂದರ್ಥ—ಕೈಜೋಡಿಸಿ ದೇವರ ಮುಂದೆ ಹಿಡಿಯುವುದೇ ಪ್ರಾರ್ಥನಾಮುದ್ರೆ) ಭಗವಂತನನ್ನು 'ಯೋಗಾವಸಾನ' ಎಂಬ ಶ್ಲೋಕದಿಂದ ಪ್ರಾರ್ಥಿಸಬೇಕು.

ಪ್ರಾರ್ಥನಾ ಶ್ಲೋಕ

ಯಾಗಾವಸಾನಪರ್ಯಂತ—ಮತ್ರ ಸ್ಥಿತ್ವಾ ಜನಾರ್ದನ ।
ಭಕ್ತಸ್ಯ ಮಮ ಪೂಜಾಂ ಚ ಗೃಹೀತ್ವಾ ಪಾಹಿ ಮಾಂ ವಿಭೋ ॥

(ಶಬ್ದಾರ್ಥ : ಯಾಗ-ಯಜ್ಞ, ಇಲ್ಲಿ ಪೂಜಾರೂಪ ಯಜ್ಞ, ಅವಸಾನ-ಕೊನೆ, ಅಂತ. ಪರ್ಯಂತಂ-ವರೆಗೆ, ಅತ್ರ-ಇಲ್ಲಿ [ಈ ಮೂರ್ತಿಯಲ್ಲಿ], ಸ್ಥಿತ್ವಾ-ಇದ್ದು, ನೆಲೆಸಿ, ಸನ್ನಿಹಿತನಾಗಿದ್ದು, ಗೃಹೀತ್ವಾ-ತೆಗೆದುಕೊಂಡು, ಸ್ವೀಕಾರ ಮಾಡಿ, ಪಾಹಿ-ಕಾಪಾಡು, ಮಾಂ-ನನ್ನನ್ನು)

ಭಾವಾರ್ಥ : ಹೇ ಪ್ರಭುವೇ ಜನಾರ್ದನ ! ಈ ಪೂಜಾರೂಪ ಯಜ್ಞವು ಮುಗಿಯುವವರೆಗೆ ಈ ಪ್ರತಿಮೆಯಲ್ಲೇ ಸನ್ನಿಹಿತನಾಗಿದ್ದು ಭಕ್ತನಾದ ನನ್ನ ಪೂಜೆಯನ್ನು ಸ್ವೀಕಾರ ಮಾಡಿ ನನ್ನನ್ನು ರಕ್ಷಿಸು—ಉದ್ಧಾರ ಮಾಡು ಪ್ರಭುವೇ.

ಈ ಶ್ಲೋಕ ಹೇಳುವುದಕ್ಕೆ ಪೂರ್ವದಲ್ಲಿ ಕೆಳಗಿನ ಕೆಲವು ಶ್ಲೋಕಗಳನ್ನೂ ಹೇಳುವುದು ರೂಢಿಯಲ್ಲಿದೆ. ಈ ಶ್ಲೋಕಗಳನ್ನು ಆಹ್ನಿಕಮಂಜರಿಯಲ್ಲೂ ಕೊಟ್ಟಿದೆ. ಅವಕಾಶ ವಿದ್ದರೆ ಕೆಳಗಿನ ಶ್ಲೋಕಗಳನ್ನು ಹೇಳಿಕೊಂಡು ಕೊನೆಗೆ 'ಯಾಗಾವಸಾನ...' ಎಂಬ ಶ್ಲೋಕ ಹೇಳಬಹುದು. ಅವಕಾಶವಿಲ್ಲದಿದ್ದರೆ 'ಯಾಗಾವಸಾನ......' ಎಂಬ ಒಂದು ಶ್ಲೋಕ ಹೇಳಿದರೇ ಸಾಕು.

ಪ್ರಾರ್ಥನಾ ಶ್ಲೋಕಗಳು

ಸಾನ್ನಿಧ್ಯಂ ಕುರು ಮೇ ದೇವ (ದೇವೇಶ)
ಸರ್ವಸಂಪತ್ಕರೋ ಭವ ।
ವಿಭೋ ಸಕಲ ಲೋಕೇಶ
(ಕೃಷ್ಣ ವಿಷ್ಣೋ) ವಿಷ್ಣೋ ಜಿಷ್ಣೋ ಹರೇ ಪ್ರಭೋ ॥ ೧ ॥

(ಅರ್ಥ) ಹೇ ದೇವೇಶ, ಪ್ರಭುವೇ, ಸಕಲ ಲೋಕಗಳ ಒಡೆಯನೇ, ಕೃಷ್ಣನೇ, ವಿಷ್ಣುವೇ (ಜಯಶೀಲನೇ), ಹರಿಯೇ ಸ್ವಾಮಿ! ನನಗಾಗಿ ಈ ಮೂರ್ತಿಯಲ್ಲಿ ಸನ್ನಿಧಾನ ವನ್ನಿಡು (ಸನ್ನಿಹಿತನಾಗಿರು). ಸಕಲ ಸಂಪತ್ತು ಲಭಿಸುವಂತೆ ಅನುಗ್ರಹಿಸು.

ತ್ವಾಂ ಭಕ್ತ್ಯಾ ಪೂಜಯಾಮ್ಯದ್ಯ ಭೋಗೈರರ್ಘ್ಯಾದಿಭಿಃ ಕ್ರಮಾತ್ ॥ ೨ ॥

(ಅರ್ಧ ಶ್ಲೋಕ) ತ್ವಾಂ-ನಿನ್ನನ್ನು, ಅದ್ಯ-ಈಗ, ಭೋಗೈಃ-ಸಲಕರಣೆಗಳಿಂದ.

(ಅರ್ಥ) ಹೇ ಸ್ವಾಮಿ, ನಿನ್ನನ್ನು ಭಕ್ತಿಯಿಂದ ಈಗ ಕ್ರಮವಾಗಿ ಅರ್ಘ್ಯ-ಪಾದ್ಯಾದಿ ಉಪಚಾರಗಳಿಂದ ಪೂಜಿಸುತ್ತೇನೆ.

ಭೋ ಸ್ವಾಮಿನ್ ಜಗತಾಂ ನಾಥ ಯಾವತ್‌ಪೂಜಾವಸಾನಕಮ್ ।
ತಾವತ್ ಸಂಪ್ರೀತಿಭಾವೇನ ಪ್ರತಿಮಾಯಾಂ ಸ್ಥಿರೋ ಭವ ॥ ೩ ॥
ಯಾಗಾವಸಾನ........ಪಾಹಿ ಮಾಂ ವಿಭೋ ॥ ೪ ॥

(ಶಬ್ದಾರ್ಥ) ಯಾವತ್-ಎಲ್ಲಿಯವರೆಗೆ (ಪೂಜೆ ನಡೆಯುತ್ತಿರುತ್ತದೋ) ತಾವತ್-ಅಲ್ಲಿಯವರೆಗೆ, ಅಷ್ಟು ಹೊತ್ತಿನವರೆಗೂ.

(ಭಾವಾರ್ಥ) ಹೇ ಸ್ವಾಮಿ ಜಗನ್ನಾಥ! ಎಷ್ಟು ಹೊತ್ತು ಈ ಪೂಜೆ ನಡೆಯುತ್ತಿರುವುದೋ ಅದು ಮುಗಿಯುವ ಪರ್ಯಂತ ಬಹಳ ಪ್ರೀತಿಯಿಂದ ಈ ಪ್ರತಿಮೆಯಲ್ಲಿ ಸ್ಥಿರವಾಗಿ ನೆಲೆಸಿರು. ।೪। ಳನೇ ಶ್ಲೋಕದ ಅರ್ಥ ಹಿಂದೆಯೇ ಕೊಟ್ಟಿದೆ.

ಹೀಗೆ ಪ್ರಾರ್ಥನೆ ಮಾಡಿದ ಬಳಿಕ ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸಬೇಕು.

ಜ) ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸುವುದು

ಆವಾಹನಾದಿ ಷಣ್ಮುದ್ರೆಗಳ ಚಿತ್ರವನ್ನು ಉಡುಪಿ ದೇವರಪೂಜೆ ಪುಸ್ತಕದಲ್ಲೂ ಆಹ್ನಿಕಮಂಜರಿಯಲ್ಲೂ ಕೊಟ್ಟಿದೆ. ಕೆಳಗಿನಂತೆ ಮಂತ್ರ ಹೇಳಿಕೊಂಡು ಆ ಆರು ಮುದ್ರೆಗಳನ್ನೂ ಮೂರ್ತಿಯ ಮುಂದೆ ತೋರಿಸಬೇಕು. ಈ ಮಂತ್ರಗಳ ಅರ್ಥವನ್ನು ಮೊದಲೇ ಕೊಟ್ಟಿದೆ.

೧. ಓಂ ನಮೋ ನಾರಾಯಣಾಯ ಆವಾಹಿತೋ ಭವ, ೨) ಓಂ ನ... ನಾ .. ಸಂಸ್ಥಾಪಿತೋ ಭವ, ೩. ಓಂ ನ... ನಾ... ಸನ್ನಿಹಿತೋ ಭವ, ೪. ಓಂ ನ... ನಾ... ಸನ್ನಿರುದ್ಧೋ ಭವ, ೫. ಓಂ ನ... ನಾ... ಅಭಿಸಮ್ಮುಖೋ ಭವ, ೬. ಓಂ ನ .. ನಾ... ಅವಗುಂಠಿತೋ ಭವ ೭. ಓಂ ನ... ನಾ... ಸುಪ್ರಸನ್ನೋ ಭವ.

ಝ) ಮಂತ್ರಗಳಿಂದ ನ್ಯಾಸ

ಷಣ್ಮುದ್ರೆಗಳನ್ನು ತೋರಿಸಿದ ಬಳಿಕ ಕಾಲಾವಕಾಶವಿದ್ದರೆ ಮತ್ತು ಉಪದೇಶವಾಗಿದ್ದರೆ ತತ್ವನ್ಯಾಸವನ್ನೂ ಮಾತೃಕಾನ್ಯಾಸವನ್ನೂ ಮೂಲಮಂತ್ರದಿಂದ ವರ್ಣನ್ಯಾಸವನ್ನೂ ರಾಮಕೃಷ್ಣ ಹಯಗ್ರೀವ ನರಸಿಂಹಾದಿ ಪ್ರತಿಮೆಗಳಲ್ಲಿ ಆಯಾ ಮಂತ್ರಗಳ ವರ್ಣಗಳಿಂದಲೂ ನ್ಯಾಸ ಮಾಡಬಹುದು. ಇಲ್ಲಿಗೆ ತನಗಾಗಿ ಮಾಡಿಕೊಳ್ಳುವ ಆವಾಹನ ವಿಧಿ ಮುಗಿಯಿತು. ಪರಾರ್ಥ ಆವಾಹನವಿಧಿಯನ್ನು ಮೊದಲೇ ತಿಳಿಸಲಾಗಿದೆ.

ಅಭಿಷೇಕ ಕಲಾಪ

ಪೀಠಿಕೆ : ಪ್ರತಿಮಾದಿಗಳಲ್ಲಿ ಆವಾಹನೆ ಮಾಡಿದ ನಂತರ ಅಭಿಷೇಕಕಲಾಪ ಆರಂಭವಾಗುತ್ತದೆ. ಇದರಲ್ಲೇ ನಾಲ್ಕು ಚಿಕ್ಕ ಹಂತಗಳಿವೆ—೧. ಭಗವಂತನನ್ನು ಸ್ನಾನಕ್ಕೆ ದಯಮಾಡಿಸುವಂತೆ ಪ್ರಾರ್ಥಿಸುವುದು; ೨. ಅರ್ಘ್ಯಾದಿಗಳನ್ನು ಸಮರ್ಪಿಸುವುದು; ೩. ಪಂಚಾಮೃತಾಭಿಷೇಕ ಮತ್ತು ೪. ಶುದ್ಧೋದಕಸ್ನಾನ. ಈ ನಾಲ್ಕೂ ಹಂತಗಳ ವಿವರಣೆಯನ್ನು ಶ್ರೀಮಟ್ಟೀಕಾಕೃತ್ಪಾದರು ಪದ್ಯಮಾಲಾದಲ್ಲಿ ಹೀಗೆ ವಿವರಿಸಿದ್ದಾರೆ—

ಪ್ರದರ್ಶ್ಯೈತಾಶ್ಚ ಷಣ್ಮುದ್ರಾಃ ಸ್ನಾನಾರ್ಥಂ ಪ್ರಾರ್ಥಯೇತ್ ತತಃ ।
ಏಹಿ ಶ್ರೀಭಗವನ್ವಿಷ್ಣೋ ಸ್ನಾನಾರ್ಥಂ ಮಜ್ಜನಾಲಯಮ್ ॥೧೯॥
ಸಂಪ್ರಾರ್ಥ್ಯೈವ 'ಮಿದಂವಿಷ್ಣು'—ರಿತ್ಯೃಚಾ ಪಾದುಕಾರ್ಪಣಮ್ ।
ಸ್ನಾನಾಲಯಂ ಸಮಾಯಾತಂ ಧ್ಯಾತ್ವಾ ನಾರಾಯಣಂ
ಪ್ರಭುಮ್ ॥ ೨೦ ॥

(ಅರ್ಥ) ಪ್ರತಿಮಾದಿಗಳಲ್ಲಿ ಬಿಂಬಾವಾಹನೆ ಮಾಡಿ ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸಿದನಂತರ ಭಗವಂತನನ್ನು 'ಸ್ನಾನಕ್ಕೆ ದಯಮಾಡಿಸಬೇಕು ಸ್ವಾಮಿ' ಎಂದು ಮೇಲಿನ ಶ್ಲೋಕ(೧೯)ದಿಂದ ಪ್ರಾರ್ಥಿಸಬೇಕು. 'ಹೇ ಭಗವಂತ ವಿಷ್ಣೋ! ಸ್ನಾನಕ್ಕಾಗಿ ಸ್ನಾನಗೃಹಕ್ಕೆ ದಯಮಾಡಿಸು' ಎಂದು ಪ್ರಾರ್ಥಿಸಿ, 'ಇದಂ ವಿಷ್ಣುಃ' ಎಂಬ ಋಙ್ಮಂತ್ರದಿಂದ ಪಾದುಕೆಯನ್ನು ಸಮರ್ಪಿಸಬೇಕು. ಬಳಿಕ ಆ ಪರಮಾತ್ಮ ಆ ಪಾದುಕೆಗಳನ್ನು ಹಾಕಿಕೊಂಡು ಸ್ನಾನಗೃಹಕ್ಕೆ ದಯಮಾಡಿಸಿದನೆಂದು ಧ್ಯಾನಿಸಿ (೨೦)

ಸ್ಥಾಪಯೇತ್ ಸ್ನಾನಪೀಠೇ ತಂ 'ಭದ್ರಂ ಕರ್ಣೇಭಿ'ರಿತ್ಯೃಚಾ ।
ಪುನಸ್ತತ್ರಾಪಿ ಷಣ್ಮುದ್ರಾಃ ಕುರ್ಯಾದಾವಾಹನಾದಿಕಾಃ ॥ ೨೧ ॥

ಅಭಿಷೇಕ ಮಾಡಬೇಕಾದ ಪ್ರತಿಮೆಗಳನ್ನೂ ಸಾಲಿಗ್ರಾಮಾದಿಗಳನ್ನೂ 'ಭದ್ರಂ ಕರ್ಣೇಭಿಃ' ಎಂಬ ವೇದಮಂತ್ರದಿಂದ ಸ್ನಾನಪಾತ್ರೆಯಲ್ಲಿ (ತಟ್ಟೆಯಲ್ಲಿ) ಇಟ್ಟು ಇನ್ನೊಮ್ಮೆ ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸಬೇಕು (೨೧).

ತತೋಽರ್ಘ್ಯಂ ಮೂಲಮಂತ್ರೇಣ ಪಾದ್ಯಮಾಚಮನೀಯಕಮ್ ।
ಮಧುಪರ್ಕಂ ತತೋ ದದ್ಯಾತ್ ಪುನರಾಚಮನಂ (ಪುನಃ) ತತಃ॥೨೨॥

ಅನಂತರ ಮೂಲಮಂತ್ರದಿಂದ ಅರ್ಘ್ಯವನ್ನೂ ಪಾದ್ಯ-ಆಚಮನ ಮಧುಪರ್ಕಗಳನ್ನೂ ಕೊಟ್ಟು ಇನ್ನೊಮ್ಮೆ ಪುನರಾಚಮನವನ್ನೂ ಕೊಡಬೇಕು.

ಈ ವಿಷಯದಲ್ಲಿ ತಂತ್ರಸಾರ ಛಲಾರಿ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ. ಪಂಚಪಾತ್ರೆಗಳೇ ಬೇರೆ ಇದ್ದ ಪಕ್ಷದಲ್ಲಿ ಆಯಾ ಪಾತ್ರೆಗಳಿಂದಲೇ ನೇರವಾಗಿ ಸಮರ್ಪಿಸ (ಹಾಕ)

ಬಹುದು. ಇದು ಉತ್ತಮ ಪಕ್ಷ. ಪಂಚಪಾತ್ರೆಗಳಿಲ್ಲದಿದ್ದರೆ ಶಂಖಕ್ಕೆ ಹಾಕಿಕೊಂಡು. ಹಾಕಿಕೊಂಡು ಆರು ಸರಿ ಸಮರ್ಪಿಸಬಹುದು. ಇದು ಮಧ್ಯಮ ಪಕ್ಷ. ಅದೂ ಸಾಧ್ಯವಿಲ್ಲದಿದ್ದರೆ ಕಲಶದಿಂದಲೇ ಉದ್ಧರಣೆಯಿಂದ ತುಂಬಿ ತುಂಬಿ ಹಾಕಬಹುದು. ಇದು ಅಧಮಪಕ್ಷ. (ಇದಾದ ಬಳಿಕ ಪಂಚಾಮೃತಾಭಿಷೇಕ ಮಾಡುವುದಿದ್ದರೆ ಮಾಡಬೇಕು. ಅದಕ್ಕೆ ಮಂತ್ರಗಳನ್ನು ಹೇಳುತ್ತಾರೆ.)

ಪಂಚಾಮೃತಾಭಿಷೇಕಕ್ಕೆ ಮಂತ್ರಗಳು ಯಾವುವೆಂದರೆ—

'ಆ ಪ್ಯಾಯಸ್ವ' 'ದಧಿಕ್ರಾವ್ಣೋ' 'ಘೃತಂ ಮಿಮಿಕ್ಷ' ಇತ್ಯೃಚಃ।
'ಮಧುವಾತಾ' ತಥಾ 'ಸ್ವಾದು'—ರಿತಿ ಮಂತ್ರಾನ್
ಸಮೂಲಕಾನ್ ॥ ೭೩ ॥
ಕ್ರಮೇಣೈತಾನ್ ಪಠನ್ ಪಂಚಾ—ಮೃತೇನ ಸ್ನಾಪಯೇದ್ಧರಿಮ್ ।
ಪಯೋದಧಿ ಘೃತಂ ಕ್ಷೌದ್ರಂ ಶರ್ಕರಾ ಪಂಚಮಾಮೃತಮ್॥ ೭೪ ॥

'ಆ ಪ್ಯಾಯಸ್ವ...' ಎಂಬ ಮಂತ್ರದಿಂದ ಹಾಲನ್ನೂ, 'ದಧಿಕ್ರಾವ್ಣೋ ..' ಎಂಬ ಮಂತ್ರದಿಂದ ಮೊಸರನ್ನೂ, 'ಘೃತಂ ಮಿಮಿಕ್ಷೇ .' ಎಂಬ ಮಂತ್ರದಿಂದ ತುಪ್ಪವನ್ನೂ, 'ಮಧುವಾತಾ .' ಎಂಬ ಮಂತ್ರದಿಂದ ಜೇನುತುಪ್ಪ (ಕ್ಷೌದ್ರ)ವನ್ನೂ, 'ಸ್ವಾದುಃ ಪವಸ್ವ ' ಎಂಬ ಮಂತ್ರದಿಂದ ಸಕ್ಕರೆಯನ್ನೂ ಅಭಿಷೇಕ ಮಾಡಬೇಕು. ಈ ಐದೇ ಪಂಚಾಮೃತಗಳು. ಇದರ ಕಡೆಯಲ್ಲಿ 'ಯಾಃ ಫಲಿನೀಃ ' ಎಂಬ ಮಂತ್ರದಿಂದ ಫಲಗಳನ್ನೂ (ಬಾಳೆಹಣ್ಣು ಅಥವಾ ಮಾವಿನಹಣ್ಣು) ಫಲರಸವನ್ನೂ (ತೆಂಗಿನಕಾಯಿಯ ಎಳನೀರು) ಸಿಕ್ಕರೆ ಕಬ್ಬಿನಹಾಲನ್ನೂ ಅಭಿಷೇಕ ಮಾಡುವುದು ಪದ್ಧತಿ. ಚಾತುರ್ಮಾಸ್ಯ ಕಾಲದಲ್ಲಿ ಆಯಾ ತಿಂಗಳಲ್ಲಿ ನಿಷಿದ್ಧವಾದ ಪದಾರ್ಥಗಳನ್ನು ಅಭಿಷೇಕ ಮಾಡಬಾರದು. ಎಂದರೆ ಮೊದಲನೇ ತಿಂಗಳಲ್ಲಿ ಹಣ್ಣುಗಳನ್ನೂ ತೆಂಗಿನಕಾಯನ್ನೂ (ರಾಯರ ಮಠದಲ್ಲಿ ಮಾತ್ರ ಈ ತಿಂಗಳಲ್ಲಿ ಮಾವಿನಹಣ್ಣನ್ನು ಅಭಿಷೇಕಕ್ಕೆ ಉಪಯೋಗಿಸುವುದುಂಟು), ಎರಡನೇ ತಿಂಗಳಲ್ಲಿ ಮೊಸರನ್ನೂ (ಕಡೆದು ಮಜ್ಜಿಗೆ ಮಾಡಿದರೆ ನಿಷೇಧವಿಲ್ಲ), ಮೂರನೇ ತಿಂಗಳಲ್ಲಿ (ವಿಜಯದಶಮೀವರೆಗೆ) ಹಾಲನ್ನೂ ಅಭಿಷೇಕ ಮಾಡಬಾರದು.

ಇನ್ನೊಂದು ವಿಶೇಷವೇನೆಂದರೆ ಅಭಿಷೇಕ ಮಾಡುವಾಗ ಆಗಲೀ, ನೈವೇದ್ಯಾದಿಗಳನ್ನು ಮಾಡುವಾಗಲೇ ಆಗಲಿ ಭಗವಂತನಿಗೆ ಕೇವಲ ಜಡದ್ರವ್ಯಗಳನ್ನು ಅರ್ಪಿಸುತ್ತೇವೆಂದು ತಿಳಿಯದೆ ಆಯಾಯಾ ದ್ರವ್ಯಗಳಲ್ಲಿ ಅಂತರ್ಗತವಾದ ತತ್ತದ್ರೂಪಿ ಪರಮಾತ್ಮನ ಒಂದೊಂದು ರೂಪವಿದೆಯೆಂದೂ ಆ ಪರಮಾತ್ಮ ಈ ಭಗವದ್ರೂಪಾಖ್ಯ 'ಸ್ವಾಖ್ಯ'ರಸವನ್ನು ಮಾತ್ರ ಸೇವಿಸುತ್ತಾನೆಯೇ ಹೊರತು ಕೇವಲ ಜಡಪದಾರ್ಥಗಳನ್ನೇ ಸ್ವೀಕರಿಸುವುದಿಲ್ಲ ಎಂದು ತಿಳಿದು ದಧಿ ಕ್ಷೀರಾದಿಗಳಲ್ಲಿಯೂ, ಅಭಿಷೇಕ ಮಾಡುವ ನೀರಿನಲ್ಲಿಯೂ

ನೈವೇದ್ಯಕ್ಕೆ ಇಡುವ ಪದಾರ್ಥಗಳಲ್ಲಿಯೂ ನಾವು ಆವಾಹನೆ ಮಾಡಿರುವ ಭಗವದ್ರೂಪಕ್ಕೂ ಸಾಲಿಗ್ರಾಮಾದಿಗಳಲ್ಲಿರುವ ಭಗವದ್ರೂಪಕ್ಕೂ ಐಕ್ಯಚಿಂತನೆ ಮಾಡಬೇಕೆಂದು ಶ್ರೀ ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ ಅನೇಕ ಕಡೆ ಒತ್ತಿಒತ್ತಿ ಹೇಳಿದ್ದಾರೆ. ಹೀಗೆ ಭಗವದ್ರೂಪಗಳ ಚಿಂತನೆ ಮಾಡುವುದೇ ನಿಜವಾದ ಅಭಿಷೇಕ—ನೈವೇದ್ಯ-ಪೂಜೆ; ಸುಮ್ಮನೆ ಹಾಲು-ನೀರು ಹೊಯ್ಯುವುದು ಪೂಜೆ ಎನಿಸಿಕೊಳ್ಳುವುದಿಲ್ಲವೆಂದೂ ಅವೆಲ್ಲ ಅತ್ಯಲ್ಪ ಫಲಪ್ರದವೆಂದೂ ತೋರಿಸಿದ್ದಾರೆ.

ಮತ್ತೊಂದು ವಿಶೇಷವೇನೆಂದರೆ—ಕ್ಷೀರಾಭಿಷೇಕ ಮಾಡಿದ ಬಳಿಕ ಕೊನೆಯಲ್ಲಿ ಸ್ವಲ್ಪ ಕ್ಷೀರವನ್ನು ಉಳಿಸಿ ಅದನ್ನೇ ಭಗವಂತನಿಗೆ ನಿವೇದನ ಮಾಡಿ, ಬೇರೆ ಮಂಗಳಾರತಿ ಮಾಡಿ ಅನಂತರ ದಧಿಯ ಅಭಿಷೇಕ ಮಾಡಬೇಕು. ಇದರ ಕಡೆಯಲ್ಲೂ ಸ್ವಲ್ಪ ಮೊಸರು ಉಳಿಸಿ ನೈವೇದ್ಯ ಮಾಡಿ ಮಂಗಳಾರತಿ ಮಾಡಿ ಘೃತಾಭಿಷೇಕ—ಹೀಗೆಯೇ ಆರು ದ್ರವ್ಯಗಳನ್ನೂ ಅಭಿಷೇಕ ಮಾಡಿದಮೇಲೆ ಸ್ವಲ್ಪ ನೈವೇದ್ಯ ಮಾಡಿ ಮಂಗಳಾರತಿ ಮಾಡುವುದು ಶಿಷ್ಟಾಚಾರ ಪದ್ಧತಿ. ಪಂಚಾಮೃತಾಭಿಷೇಕವಾದ ಮೇಲೆ ಸಾಧ್ಯವಿದ್ದರೆ ಬಿಸಿನೀರಿನಿಂದ ಮೂರ್ತ್ಯಾದಿಗಳನ್ನು ಕರೆ-ಕಶ್ಮಲ ಉಳಿಯದಂತೆ ತೊಳೆಯುವುದು ಉತ್ತಮ. ತಣ್ಣೀರಿನಲ್ಲಾದರೂ ಸರಿಯೆ, ಕಶ್ಮಲ ಉಳಿಯದಂತೆ ತೊಳೆಯುವುದು ಅತ್ಯಾವಶ್ಯಕ. ಪಂಚಾಮೃತಾಭಿಷೇಕ ಆದಮೇಲೆ ಮಂಗಳಾರತಿ ಮಾಡಿ ಶುದ್ಧೋದಕ ಸ್ನಾನ ಮಾಡಿಸಬೇಕು.

ಪ್ರತಿನಿತ್ಯ ಎಲ್ಲರಿಗೂ ಪಂಚಾಮೃತಾಭಿಷೇಕ ಮಾಡುವುದು ಸಾಧ್ಯವಿಲ್ಲವಾದ್ದರಿಂದ ಆಯಾ ಮಂತ್ರಗಳನ್ನು ಹೇಳಿಕೊಂಡು ಕೇವಲ ನೀರಿನಿಂದಲೇ ಅನುಸಂಧಾನಪೂರ್ವಕ ಪಂಚಾಮೃತಾಭಿಷೇಕ ಮಾಡಬಹುದು.

ಶುದ್ಧೋದಕಸ್ನಾನಕ್ಕೆ ಮಂತ್ರಗಳನ್ನು ಹೇಳುತ್ತಾರೆ.

ತತಃ ಶುದ್ಧೋದಕಸ್ನಾನಂ ಕಾರಯೇತ್ ಪರಮಾತ್ಮನಃ ।
ಪೌರುಷಂ ವೈಷ್ಣವಂ ಷಾಮಾರ್ಣಂ ಪವಸ್ವೇತಿ ತ್ರಿವರ್ಗಕಮ್ ॥ ೭೫ ॥
'ಯ ಇಂದೋ'ರೇಕವರ್ಗಶ್ಚ 'ಸಮುದ್ರಾದೂರ್ಮಿ'ರೇವ ಚ ।
'ಜಿತಂ ತ' ಇತಿ ಚ ಸ್ತೋತ್ರಂ ಪಠನ್ ಸಂಸ್ನಾಪಯೇದ್ಧರಿಮ್ ॥೭೬॥

ತತೋಂಗ ಮಾರ್ಜನಮ್—

ಪಂಚಾಮೃತಾಭಿಷೇಕ ಮಾಡಿ ಚೆನ್ನಾಗಿ ತೊಳೆದ ಬಳಿಕ ಭಗವಂತನಿಗೆ ಕೆಳಗಿನ ಸೂಕ್ತಗಳನ್ನೂ ಸ್ತೋತ್ರ ಮಂತ್ರಗಳನ್ನೂ ಹೇಳಿಕೊಂಡು "ಶುದ್ಧೋದಕಸ್ನಾನ" ಮಾಡಿಸಬೇಕು—೧. ಪುರುಷಸೂಕ್ತ (ಋಗ್ವೇದ ಪಾಠ ಋ.ಸಂ. ೧೦ನೇ ಮಂಡಲ, ೯೦ನೇ ಸೂಕ್ತದ ಮೂರೂ ವರ್ಗಗಳು; ಯಜುರ್ವೇದ ಪಾಠ ರೀತ್ಯಾ ತೈತ್ತಿರೀಯಾರಣ್ಯಕದ ೩ನೇ ಚಿತ್ತಿ ಪ್ರಶ್ನೆಯ ೧೨ ೧೩ನೇ ಅನುವಾಕಗಳು); ೨. ವಿಷ್ಣುಸೂಕ್ತ—

(ಅ) 'ಅತೋ ದೇವಾ .' ಎಂಬ ಆರು ಮಂತ್ರಗಳು (ಋ. ೧ ಮಂ, ೨೨ ಸೂ. ೧೬-೨೧ ಋಕ್ಕುಗಳು); (ಆ) 'ವಿಷ್ಣೋರ್ನುಕಂ ' ಎಂಬ ೧ನೇ ಮಂಡಲದ ಆರು ಋಕ್ಕುಗಳುಳ್ಳ ೧೫೪ನೇ ಸೂಕ್ತ. ೩. 'ಘರ್ಮಾ ಸಮಂತಾತ್' ಎಂಬ ಹತ್ತು ಋಕ್ಕುಗಳುಳ್ಳ ಎರಡು ವರ್ಗಾತ್ಮಕವಾದ ಋಗ್ವೇದ ಹತ್ತನೇ ಮಂಡಲದ ೧೧೪ನೇ ಸೂಕ್ತ. ೪. 'ಪವಸ್ವ ಸೋಮ ' ಎಂದು ಆರಂಭವಾಗುವ ಹದಿನೇಳು ಋಕ್ಕುಗಳನ್ನೊಳಗೊಂಡ ಋಗ್ವೇದ ಒಂಬತ್ತನೇ ಮಂಡಲದ ೬೭ನೇ ಸೂಕ್ತದಲ್ಲಿ ೧೬-೧೭-೧೮ನೆಯ ಮೂರು ವರ್ಗಗಳು (ಇವು ಪವಮಾನ ಚತುರಧ್ಯಾಯದ ಆರುನೂರ ಹತ್ತು ಮಂತ್ರಗಳಲ್ಲಿ ಕಡೆಯ ಹದಿನೇಳು ಮಂತ್ರಗಳು). ೫ 'ಯ ಇಂದೋಃ .' ಎಂಬ ಒಂದು ವರ್ಗ (ಎಂದರೆ ಒಂಬತ್ತನೇ ಮಂಡಲದಲ್ಲಿ ಕಡೆಯ ನಾಲ್ಕು ಋಕ್ಕುಗಳನ್ನೊಳಗೊಂಡ ೧೧೪ನೇ ಸೂಕ್ತ), ೬. 'ಸಮುದ್ರಾದೂರ್ಮಿಃ ' ಎಂದು ಆರಂಭವಾಗುವ ಹನ್ನೊಂದು ಋಕ್ಕುಗಳುಳ್ಳ ನಾಲ್ಕನೇ ಮಂಡಲದ ೫೮ನೇ ಕಡೆಯ ಸೂಕ್ತ ಮತ್ತು ೭. 'ಜಿತಂ ತೇ ಪುಂಡರೀಕಾಕ್ಷ' ಎಂದು ಆರಂಭವಾಗುವ ಚತುರಧ್ಯಾಯಾತ್ಮಕವಾದ ಪಂಚರಾತ್ರಾಗಮೋಕ್ತವಾದ ಚತುರ್ಮುಖಬ್ರಹ್ಮಕೃತ ಸ್ತೋತ್ರ— ಇಷ್ಟು ಸೂಕ್ತಗಳಿಂದ ಅಭಿಷೇಕ ಮಾಡಬಹುದೆಂದು ಹೇಳಿದ್ದಾರೆ. ಆದರೆ ನಿತ್ಯವಿಧಿಯಲ್ಲಿ ಎಲ್ಲರೂ ಸಾಮಾನ್ಯವಾಗಿ ಪುರುಷಸೂಕ್ತ ಒಂದನ್ನೇ ಹೇಳಿಕೊಳ್ಳುವುದು ರೂಢಿಯಾಗಿದೆ. ಎಲ್ಲಾದರೂ ವಿಷ್ಣುದೇವಾಲಯಗಳಲ್ಲಿ ಹೊಸದಾಗಿ ಪ್ರತಿಷ್ಠೆಯಾದರೆ ಅಥವಾ ವಿಶೇಷವಾದ ಸಹಸ್ರ ಕುಂಭಾಭಿಷೇಕಾದಿ ಮಹಾಭಿಷೇಕಗಳು ನಡೆದಾಗ ಮಾತ್ರ ಮಿಕ್ಕ ಮಂತ್ರಗಳಿಂದ ಅಭಿಷೇಕ ಮಾಡಲು ಸಾಧ್ಯ, ಅನ್ಯಥಾ ಸಾಧ್ಯವಾಗಲಾರದು.

ಇಷ್ಟು ಮಂತ್ರಗಳಿಂದಾಗಲಿ ಅಥವಾ ನಿತ್ಯದಲ್ಲಿ ಪುರುಷಸೂಕ್ತದಿಂದಾಗಲಿ ಅಭಿಷೇಕ ಮಾಡಿದ ಬಳಿಕ ದೇವರಿಗೆ ಸ್ನಾನಾನಂತರದಲ್ಲಿ ಪುನರಾಚಮನ ಕೊಟ್ಟು ಅಭಿಷೇಕ ಮಾಡಿದ ಪ್ರತಿಮೆಗಳನ್ನೂ ಸಾಲಿಗ್ರಾಮಾದಿಗಳನ್ನೂ ಶುದ್ಧ ವಸ್ತ್ರದಿಂದ ಒರೆಸಿ ಸಂಪುಷ್ಟಗಳಲ್ಲೋ ಅಥವಾ ಪೀಠದಲ್ಲೋ ಯಥಾ ಸ್ಥಾನಗಳಲ್ಲಿ ಇಡಬೇಕು. ಇದೇ 'ಅಂಗಮಾರ್ಜನ' ಎಂಬುದು.

೧. ಶುದ್ಧೋದಕ ಸ್ನಾನವನ್ನು ಶಂಖಕ್ಕೆ ನೀರು ಹಾಕಿಕೊಂಡೇ ಗಂಟೆ ಬಾರಿಸುತ್ತಾ ಅಭಿಷೇಕ ಮಾಡಬೇಕು.

೨. ತೀರ್ಥಕ್ಕೆ ಸಾಲಿಗ್ರಾಮ, ಸುದರ್ಶನ, ಚಕ್ರಾಂಕಿತೆ, ವಿಷ್ಣುಪಾದ, ಶ್ರೀಕೃಷ್ಣನ ಚಿಕ್ಕ ಪ್ರತಿಮೆ ಇಷ್ಟು ಅತ್ಯವಶ್ಯಕ ಪೂಜೆಯಲ್ಲಿ ಸಾಲಿಗ್ರಾಮಗಳು ಸಮಸಂಖ್ಯಾಕ ಇರಬೇಕೇ ವಿನಾ (೩, ೫, ೭, ೯ ಹೀಗೆ) ಬೆಸಸಂಖ್ಯೆ ಇರಬಾರದು. ಆದರೆ ಒಂದೇ ಒಂದು ಸಾಲಿಗ್ರಾಮ ಇದ್ದರೂ ನಿಷೇಧವಿಲ್ಲ, ಪೂಜಿಸಬಹುದು. ಸಮದಲ್ಲಿ ಕೇವಲ ಎರಡು ಸಾಲಿಗ್ರಾಮಗಳು ಪೂಜೆಗೆ ನಿಷೇಧವೇ. ಚಕ್ರಾಂಕಿತಾ ಎರಡು ಪೂಜಾ ಮಾಡಬಹುದು. ಆದರೆ ಒಂದೇ ಚಕ್ರಾಂಕಿತಾ ಪೂಜಾ ಮಾಡಬಾರದು.

ಸಾಲಿಗ್ರಾಮಪ್ರತಿನಿಧಿಯಾಗಿ ಎರಡು ಚಕ್ರಾಂಕಿತಗಳನ್ನು ಪೂಜಿಸಬಹುದು. ಅಲ್ಲದೆ ಹಿಂದೆ ತಿಳಿಸಿದಂತೆ ಸಾಲಿಗ್ರಾಮಗಳು ಸ್ವಯಂವ್ಯಕ್ತಮೂರ್ತಿಗಳಾದ್ದರಿಂದ ಸಾಲಿಗ್ರಾಮಗಳಲ್ಲೂ (ವೇಂಕಟಾದ್ರಿ, ಶ್ರೀಮುಷ್ಣಾದಿ ಸ್ವಯಂವ್ಯಕ್ತ ಮೂರ್ತಿಗಳಲ್ಲೂ) ಆವಾಹನೆ ವಿಸರ್ಜನೆಗಳನ್ನು ಮಾಡಬಾರದು. ಆದರೆ ಸಾಲಿಗ್ರಾಮಸ್ಥಿತ ಭಗವಂತನೂ ಸ್ವಬಿಂಬರೂಪಿ ಪರಮಾತ್ಮನೂ ಒಂದೇ ಎಂದು ಐಕ್ಯಚಿಂತನೆ ಮಾತ್ರ ಮಾಡಬೇಕು. ಇದಕ್ಕೆ ಪ್ರಮಾಣ—

ಶಾಲಿಗ್ರಾಮೇ ಸ್ವಯಂವ್ಯಕ್ತೇ ನಾವಾಹನವಿಸರ್ಜನೇ ।
ಸಾಲಿಗ್ರಾಮಾದಿಸಂಸ್ಥಸ್ಯ ಧ್ಯಾಯೇದ್ ಬಿಂಬೇನ ಚೈಕತಾಮ್ ॥ ೧ ॥

ಸಾಲಿಗ್ರಾಮಾಃ ಸಮಾಃ ಪೂಜ್ಯಾಃ ವಿಷಮಾ ನ ಕದಾಚನ ।
ಏಕಸ್ತು ವಿಷಮೋ ಪೂಜ್ಯಃ ಸಮೇಷು ದ್ವಿತಯಂ ನ ತು ॥ ೨ ॥

ಚಕ್ರಾಂಕಂ ವಿಷಮಂ ಪೂಜ್ಯಂ ನೈಕಚಕ್ರಾಂಕಮರ್ಚಯೇತ್ ।
ಚಕ್ರಾಂಕಂ ಮಿಥುನಂ ಪೂಜ್ಯಂ ಸಾಲಿಗ್ರಾಮಂ ಪ್ರತಿಪ್ರತಿ ॥ ೩ ॥

(ತೆಲುಗು ಪುಸ್ತಕದಿಂದ ಸಂಗ್ರಹ)

ಒಂದನೇ ಶ್ಲೋಕದಲ್ಲಿ 'ಶಾಲಿಗ್ರಾಮಾದಿ-ಸಂಸ್ಥಸ್ಯ' ಎಂಬಲ್ಲಿ 'ಆದಿ' ಶಬ್ದ ಹೇಳಿದ್ದರಿಂದ ಶ್ರೀನಿವಾಸ (ವೇಂಕಟಾಚಲ), ಶ್ರೀಮುಷ್ಣ ಮೊದಲಾದ ಸ್ವಯಂವ್ಯಕ್ತ ಮೂರ್ತಿಗಳ ದರ್ಶನ ಮಾಡಿದಾಗಲೂ ಸಹ ಆ ಎದುರಿಗಿರುವ ಮೂರ್ತಿಯಲ್ಲೂ ತನ್ನ ಬಿಂಬರೂಪಿ ಪರಮಾತ್ಮನ ಐಕ್ಯಚಿಂತನೆ ಮಾಡಬೇಕೆಂದು ಸೂಚಿಸಿದ್ದಾರೆ.

'ಪದ್ಯಮಾಲಾ'ದಲ್ಲಿ ಹೇಳಿದ ಅಭಿಷೇಕವಿಧಿಯನ್ನು ಹೇಳಿದ ಬಳಿಕ ಈಗ ಕ್ರಮವಾಗಿ ಆ ಅಭಿಷೇಕಾದಿ ಕ್ರಮವನ್ನು ಹೇಳುವೆವು.

೧. ಅಭಿಷೇಕಕ್ಕೆ ಬರಲು ಪ್ರಾರ್ಥಿಸುವುದು

ಓಂ ॥ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ ।
ಉಪಪ್ರಯಂತು ಮರುತಃ ಸುದಾನವ
ಇಂದ್ರ ಪ್ರಾಶೂರ್ಭವಾ ಸಚಾ ॥

(ಋ. ೧ ಮಂ, ೪೦ ಸೂ, ೧ ಋಕ್)

(ಈ ಋಕ್ಕಿನ ಅರ್ಥ-ತಾತ್ಪರ್ಯಗಳನ್ನು ಹಿಂದೆಯೇ ದೇವರನ್ನು ತೆಗೆದಿಡುವ ಸಂದರ್ಭದಲ್ಲಿ ವಿವರಿಸಿದ್ದೇವೆ. ಪುಟ ೩೬-೩೭ ನೋಡಿ.)

ಏಹಿ ಶ್ರೀ ಭಗವನ್ ವಿಷ್ಣೋ ಸ್ನಾನಾರ್ಥಂ ಮಜ್ಜನಾಲಯಮ್ ॥
ಇತಿ ಪ್ರಾರ್ಥ್ಯ ॥

(ಅರ್ಥ) ಹೇ ಭಗವಂತ ! ಸರ್ವವ್ಯಾಪಿಯಾದ ಶ್ರೀವಿಷ್ಣುವೇ ! ಸ್ನಾನ ಮಾಡುವುದಕ್ಕಾಗಿ ಸ್ನಾನಗೃಹಕ್ಕೆ ದಯಮಾಡಿಸು ಎಂದು ಪ್ರಾರ್ಥಿಸಿ ಕೈಮುಗಿದು,

ಓಂ ॥ ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿದಧೇ ಪದಮ್ ।
ಸಮೂಳ್ಹಮಸ್ಯ ಪಾಂಸುರೇ॥ (ಋ. ೧ ಮಂ, ೨೨ ಸೂ, ೧೭ ಋಕ್)

ಇತಿ ಪಾದುಕೇ ಸಮರ್ಪಯಾಮಿ ॥

(ಈ ಮಂತ್ರದಿಂದ ಭಗವಂತನಿಗೆ ಹಾಕಿಕೊಳ್ಳಲು ಪಾದುಕೆಗಳನ್ನು ಕೊಟ್ಟಿದ್ದೇನೆಂದು ಭಾವಿಸಿ)

ಓಂ ॥ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ॥
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್
ವ್ಯಶೇಮ ದೇವಹಿತಂ ಯದಾಯುಃ ॥

(ಇತಿ ಮಂತ್ರೇಣ ದೇವಂ ಸ್ನಾನಪೀಠೇ ಉಪವೇಶ್ಯ)
(ಋ. ೧/೮೯/೮ ; ತೈ.ಆ. [ಅರುಣ] ೧/೧/೧)

(ಈ ಮಂತ್ರದಿಂದ ದೇವರನ್ನು ಸ್ನಾನಪಾತ್ರೆಯಲ್ಲಿ ಕೂಡಿಸಿ, ಅಥವಾ ಸ್ನಾನಪಾತ್ರೆಯಲ್ಲಿಯೇ ಮೊದಲಿಂದ ಇಟ್ಟಿದ್ದರೂ 'ಭಗವಂತ ಸ್ನಾನಕ್ಕೆ ಬಂದಿದ್ದಾನೆ'ಂದು ಮನಸಾ ಭಾವಿಸಿಕೊಂಡು)

ii) ಅರ್ಘ್ಯಾದ್ಯುಪಚಾರಗಳು

೧) ಅರ್ಘ್ಯಮ್ : ಓಂ ॥ ನಾರಾಯಣಾಯ ವಿದ್ಮಹೇ ವಾಸು-
ದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್ ॥ ಓಂ

ನಮೋ ನಾರಾಯಣಾಯ ॥ ಓಂ ಆಪೋ ಹಿ ಷ್ಠಾ ಮಯೋಭುವಃ.... ಜನಯಥಾ ಚ ನಃ ॥ ಇತಿ ಮಂತ್ರೈಃ ಲಕ್ಷ್ಮೀಹಸ್ತೇನ ಶಂಖೋದಕೇನ ಅರ್ಘ್ಯಂ ಸಮರ್ಪಯಾಮಿ ॥

(ಈ ಮಂತ್ರಗಳನ್ನು ಹೇಳಿಕೊಂಡು ಸಾಕ್ಷಾಲ್ಲಕ್ಷ್ಮೀದೇವಿ ತಾನೇ ಭಗವಂತನಿಗೆ ಅರ್ಘ್ಯ—ಕೈ ತೊಳೆದುಕೊಳ್ಳುವ ನೀರು—ಕೊಡುತ್ತಿದ್ದಾಳೆಂದು ಭಾವಿಸಿ ಶಂಖಕ್ಕೆ ಅರ್ಘ್ಯದ ನೀರಿಗಾಗಿ ಇಟ್ಟಿದ್ದ ಪಾತ್ರೆಯಿಂದ ಬಗ್ಗಿಸಿ, ಶಂಖದಿಂದ ದೇವರಮೇಲೆ ಹಾಕಬೇಕು. ಅಥವಾ ಅರ್ಘ್ಯದ ಪಾತ್ರೆಯನ್ನೇ ಸಾಲಿಗ್ರಾಮಾದಿಗಳ ಮೇಲೆ ಬಗ್ಗಿಸಬಹುದು.) ಮುಂದೆಯೂ ಹೀಗೆಯೇ ತಿಳಿದು ಮಾಡಬೇಕು.

೨) ಪಾದ್ಯಮ್ : ಓಂ ॥ ಅಸ್ಮಿನ್ ರಾಷ್ಟ್ರೇ ಶ್ರಿಯಮಾವೇಶಯಾಮ್ಯತೋ ದೇವೀಃ ಪ್ರತಿಪಶ್ಯಾಮ್ಯಾಪಃ । ದಕ್ಷಿಣಂ ಪಾದಮವನೇನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ದಧಾಮಿ ॥ ಸವ್ಯಂ ಪಾದಮವನೇನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ವರ್ಧಯಾಮಿ ॥ ಪೂರ್ವಮನ್ಯಮಪರಮನ್ಯಂ ಪಾದಾವನೇ ನಿಜೇ ॥ ದೇವಾ ರಾಷ್ಟ್ರಸ್ಯ ಗುಪ್ತ್ಯಾ ಅಭಯಸ್ಯಾವರುದ್ಧ್ಯೈ । ಆಪಃ ಪಾದಾವನೇ ಜನೀರ್ದ್ವಿಷಂತಂ ನಿರ್ದಹಂತು ಮೇ ॥ ಓಂ ನಮೋ ನಾರಾಯಣಾಯ ॥ ಇತಿ ಸರಸ್ವತೀಹಸ್ತೇನ ಪಾದ್ಯಂ ಸಮರ್ಪಯಾಮಿ ॥

(ಸರಸ್ವತಿಯು ಪಾದ್ಯವನ್ನು—ಕಾಲು ತೊಳೆದುಕೊಳ್ಳುವ ನೀರನ್ನು—ಕೊಡುತ್ತಿದ್ದಾಳೆ ಎಂದು ತಿಳಿಯಬೇಕು.)

೩) ಆಚಮನೀಯಮ್ : ಓಂ ॥ ಶನ್ನೋ ದೇವೀರಭೀಷ್ಟಯ ಆಪೋ ಭವಂತು ಪೀತಯೇ । ಶಂ ಯೋರಭಿ ಸ್ರವಂತು ನಃ ॥ ಓಂ ನಮೋ ನಾರಾಯಣಾಯ ॥ (ಋ. ೧೦/೯/೪ ; ತೈ. ಆ. ೪/೪/೨೪)

ಇತಿ ಮಂತ್ರೇಣ ರತಿಹಸ್ತೇನ ಆಚಮನೀಯಂ ಸಮರ್ಪಯಾಮಿ ॥

(ಈ ಮಂತ್ರದಿಂದ ರತೀದೇವಿ ಭಗವಂತನಿಗೆ ಆಚಮನಕ್ಕೆ ನೀರು ಹಾಕುತ್ತಾಳೆಂದು ತಿಳಿಯಬೇಕು.)

೪) ಮಧುಪರ್ಕಃ : ಓಂ ॥ ವಿರೋಜೋ ದೋಹೋಸಿ ವಿರೋಜೋ ದೋಹಮಸಿ ಮೈದೋಹಃ ಪದ್ಯಾಯೈ ವಿರಾಜಃ ॥ ಓಂ

ನಮೋ ನಾರಾಯಣಾಯ || ಇತಿ ಮಂತ್ರೇಣ ಪಿತಾಮಹ-ಹಸ್ತೇನ ಮಧುಪರ್ಕಂ ಸಮರ್ಪಯಾಮಿ ||

(ಈ ಮಂತ್ರ ಹೇಳಿಕೊಂಡು ಚತುರ್ಮುಖ ಬ್ರಹ್ಮದೇವರು ಮಧುಪರ್ಕ ಸಮರ್ಪಿಸುತ್ತಾರೆಂದು ತಿಳಿಯಬೇಕು.)

೫) ಸ್ನಾನೀಯಮ್ : ಓಂ ನಮೋ ನಾರಾಯಣಾಯ || ಇತಿ ಮಂತ್ರೇಣ ವರುಣಹಸ್ತೇನ ಸ್ನಾನೀಯಂ ಸಮರ್ಪಯಾಮಿ ||

(ವರುಣದೇವರು ಭಗವಂತನಿಗೆ ಸ್ನಾನದ ನೀರು ಹಾಕುತ್ತಾನೆಂದು ಭಾವಿಸಿ ಗಂಧೋದಕ ತೆಯಿದ್ದದ್ದನ್ನು ಏಂಸಬೇಕು.)

೬) ಪುನರಾಚಮನೀಯಮ್ : ಓಂ ಶನ್ನೋ ದೇವೀ........... ಸ್ರವಂತು ನಃ|| ಇತಿ ಶಾಂತಿಹಸ್ತೇನ ಪುನರಾಚಮನೀಯಂ ಸಮರ್ಪಯಾಮಿ||

(ಶಾಂತಿದೇವಿಯು—ರಮಾದೇವಿಯ ಒಂದು ರೂಪ—ಪುನರಾಚಮನಕ್ಕೆ ನೀರು ಕೊಡುತ್ತಾಳೆಂದು ತಿಳಿದು ಪುನರಾಚಮನ ಕೊಡಬೇಕು.)

ಮೇಲೆ ಹೇಳಿದ ಅರ್ಘ್ಯಾದಿಗಳಿಗೆ ಪಠಿಸಬೇಕಾದ 'ಆಪೋ ಹಿ ಷ್ಠಾ', 'ಅಸ್ಮಿನ್ ರಾಷ್ಟ್ರೇ' ಇತ್ಯಾದಿ ಮಂತ್ರಗಳ ವಿವರಣೆಯು 'ಸದಾಚಾರದರ್ಪಣ'ವೆಂಬ ಗ್ರಂಥದಲ್ಲಿ ಹೇಳಿದೆಯೆಂದು ಪೂಜಾಕಲ್ಪಲತಾದಲ್ಲಿ ತಿಳಿಸಿದ್ದಾರೆಂದು ಶ್ರೀಮಾನ್ ಪ್ರಭಂಜನರು 'ಪದ್ಯಮಾಲಾ' ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. ಈ ವಿವರಗಳು ನಮಗೆ ಮದರಾಸಿನ ತೆಲುಗುಲಿಪಿಯ 'ಆಹ್ನಿಕಮಂಜರಿ'ಯಲ್ಲಿ ಸಿಕ್ಕವು.

ಸಂಕ್ಷೇಪವಾದ ಪೂಜೆಯಲ್ಲಿ

೧. ಲಕ್ಷ್ಮೀಹಸ್ತೇನ ಅರ್ಘ್ಯಂ ಸಮರ್ಪಯಾಮಿ | ೨. ಸರಸ್ವತೀ ಹಸ್ತೇನ ಪಾದ್ಯಂ ಸಮರ್ಪಯಾಮಿ | ೩. ರತಿಹಸ್ತೇನ ಆಚಮನೀಯಂ ಸಮರ್ಪಯಾಮಿ | ೪. ಪಿತಾಮಹ-ಹಸ್ತೇನ ಮಧುಪರ್ಕಂ ಸಮರ್ಪಯಾಮಿ | ೫. ವರುಣ ಹಸ್ತೇನ ಸ್ನಾನೀಯಂ ಸಮರ್ಪಯಾಮಿ | ೬. ಶಾಂತಿಹಸ್ತೇನ ಪುನರಾಚಮನೀಯಂ ಸಮರ್ಪಯಾಮಿ ||

(ಪ್ರತಿಯೊಂದಕ್ಕೂ 'ಓಂ ನಮೋ ನಾರಾಯಣಾಯ' ಎಂದು ಹೇಳಿಕೊಳ್ಳುತ್ತಾ ಅರ್ಘ್ಯ-ಪಾದ್ಯಾದಿಗಳನ್ನು ಸಮರ್ಪಿಸಬೇಕು.)

iii) ಪಂಚಾಮೃತಾಭಿಷೇಕಃ

ಪಂಚಾಮೃತದ್ರವ್ಯಗಳಲ್ಲಿ ಸನ್ನಿಹಿತವಾಗಿರುವ ಈ ಭಗವದ್ರೂಪಗಳಿಗೂ ಪ್ರತಿಮಾ-ಗಳಲ್ಲೂ ಸಾಲಿಗ್ರಾಮಗಳಲ್ಲೂ ಸನ್ನಿಹಿತವಾಗಿರುವ ಭಗವದ್ರೂಪಗಳಿಗೂ ಐಕ್ಯಚಿಂತನೆ ಮಾಡುತ್ತಾ ಅಭಿಷೇಕ ಮಾಡುವುದೇ ಸರಿಯಾದ ಅಭಿಷೇಕ. ಅದಕಾರಣ ಪಂಚಾಮೃತ-ದ್ರವ್ಯಗಳಲ್ಲಿ ಸನ್ನಿಹಿತವಾದ ಭಗವದ್ರೂಪಗಳನ್ನು ಹಿಂದೆಯೇ ಹೇಳಿದ್ದರೂ ಪುನಃ ಕೆಳಗೆ ಬರೆಯಲಾಗಿದೆ :

ದುಗ್ಧೇ ತು ದೇವಂ ಗೋವಿಂದಂ ದಧ್ನಿ ವಾಮನ ದೈವತಮ್ ।
ಆಜ್ಯೇ ಚ ವಿಷ್ಣು ದೈವತ್ಯಂ ಮಧೌ ಚ ಮಧುಸೂದನಮ್ ।
ಶರ್ಕರಾಯಾಮಚ್ಯುತಂ ವಿಂದ್ಯಾತ್ ತಾಃ ಪಂಚಾಮೃತದೇವತಾಃ ।

(ಕಾಶಿಯ ಟಿ. ಗೋಪಾಲಾಚಾರ್ಯರ ಪೂಜಾವಿಧಿಯಿಂದ ಸಂಗ್ರಹ)

ಹಾಲಿನಲ್ಲಿ ಗೋವಿಂದನನ್ನೂ, ಮೊಸರಿನಲ್ಲಿ ವಾಮನನನ್ನೂ, ತುಪ್ಪದಲ್ಲಿ ವಿಷ್ಣು ವಿಷ್ಣುವನ್ನೂ, ಜೇನುತುಪ್ಪದಲ್ಲಿ ಮಧುಸೂದನನನ್ನೂ, ಸಕ್ಕರೆಯಲ್ಲಿ ಅಚ್ಯುತನನ್ನೂ ಧ್ಯಾನಿಸಬೇಕು. ಅನಂತರ ಧೇನುಮುದ್ರೆಯನ್ನು ತೋರಿಸಿ ಅಭಿಷೇಕ ಆರಂಭಿಸಬೇಕು.

೧. ಹಾಲು

ಓಂ ॥ ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಮ್ ।

ಭವಾ ವಾಜಸ್ಯ ಸಂಗ ಥೇ ॥

(ಋ. ೧/೯೧/೧೬; ೯/೩೧/೪; ತೈ.ಸಂ. ೩/೨/೫/೩)

೨. ಮೊಸರು

ಓಂ ॥ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ ।

ಸುರಭಿ ನೋ ಮುಖಾ ಕರತ್ ಪ್ರ ಣ ಆಯೂಂಷಿ ತಾರಿಷತ್ ॥

(ಋ. ೪/೩೯/೬ ; ತೈ.ಸಂ. ೧/೫/೧೧/೪)

೩. ತುಪ್ಪ

ಓಂ॥ ಘೃತಂ ಮಿಮಿಕ್ಷೇ ಘೃತಮಸ್ಯ ಯೋನಿರ್-

ಘೃತೇ ಶ್ರಿತೋ ಘೃತಮ್ವಸ್ಯ ಧಾಮ।

ಅನುಷ್ವಧಮಾ ವಹ ಮಾದಯಸ್ವ

ಸ್ವಾಹಾಕೃತಂ ವೃಷಭ ವಕ್ಷಿ ಹವ್ಯಮ್ ॥

(ಋ. ೨/೩/೧೧; ತೈ.ಆ. ೧೦/೧೦/೨)

೪. ಜೇನುತುಪ್ಪ

ಓಂ॥ ಮಧುವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ।

ಮಾಧ್ವೀರ್ನಃ ಸಂತ್ವೋಷಧೀಃ ॥೧॥

ಮಧು ನಕ್ತಮುತೋಷಸೋ ಮಧುಮತ್ ಪಾರ್ಥಿವಂ ರಜಃ।

ಮಧು ದ್ಯೌರಸ್ತು ನಃ ಪಿತಾ ॥೨॥

ಮಧುಮಾನ್ ನೋ ವನಸ್ಪತಿರ್ ಮಧುಮಾಁ ಅಸ್ತು ಸೂರ್ಯಃ।

ಮಾಧ್ವೀರ್ಗಾವೋ ಭವಂತು ನಃ ॥೩॥

(ಋ. ೧/೯೦/೬-೮; ತೈ.ಸಂ. ೪/೨/೯/೩; ಮಹಾ ನಾ.ಉ. ೧೦ ಅನು. ೨ಮಂ.)

೫. ಸಕ್ಕರೆ

ಓಂ॥ ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ

ಸ್ವಾದುರಿಂದ್ರಾಯ ಸುಹವೀತು ನಾಮ್ನೇ।

ಸ್ವಾದುರ್ಮಿತ್ರಾಯ ವರುಣಾಯ ವಾಯವೇ

ಬೃಹಸ್ಪತಯೇ ಮಧುಮಾಁ ಅದಾಭ್ಯಃ ॥

(ಋ. ೯/೮೫/೬)

೬. ಫಲ (ಬಾಳೆಹಣ್ಣು ಮತ್ತು ಎಳನೀರು)

ಓಂ ॥ ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ।

ಬೃಹಸ್ಪತಿ ಪ್ರಸೂತಾಸ್ತಾ ನೋ ಮುಂಚಂತ್ವಂಹಸಃ ॥

(ಋ. ೧೦/೯೭/೧೫ ; ತೈ. ಸಂ. ೪/೨/೬/೪)

iv) ಶುದ್ಧೋದಕಸ್ನಾನ

ಪಂಚಾಮೃತಾಭಿಷೇಕ ಮಾಗಿದಮೇಲೆ ಕಡೆಯಲ್ಲಾದರೂ ಒಂದು ಸರಿ ಮಂಗಳಾರತಿ ಮಾಡಬೇಕು. ಅಮೇಲೆ ದೇವರನ್ನು ಬಿಸಿನೀರು ಹಾಕಿ ಅಥವಾ ತಣ್ಣೀರಿನಿಂದಲೇ ಜಿಡ್ಡು, ಅಂಟು ಕರೆ ಯಾವುದೂ ಉಳಿಯದಂತೆ ಚೆನ್ನಾಗಿ ತೊಳೆಯಬೇಕು. ಅನಂತರ ಶಂಖಕ್ಕೆ ನೀರು-ಗಂಧೋದಕ ಹಾಕಿಕೊಂಡು ಗಂಟೆ ಬಾರಿಸುತ್ತಾ ಪುರುಷಸೂಕ್ತ ಪಠಿಸುತ್ತಾ ಶುದ್ಧೋದಕ ಅಭಿಷೇಕ ಮಾಡಬೇಕು. ಹೀಗೆ ಅಭಿಷೇಕ ಮಾಡಿದ ನೀರೇ 'ತೀರ್ಥ' ವಾಗುತ್ತದೆ. ಅಭಿಷೇಕ ಮುಗಿದಮೇಲೆ ದೇವರಿಗೆ ಪುನರಾಚಮನವನ್ನು ಮೂಲಮಂತ್ರ ದಿಂದ ಕೊಟ್ಟು ದೇವರನ್ನೂ, ಸಾಲಿಗ್ರಾಮಾದಿಗಳನ್ನೂ ಶುದ್ಧವಾದ ದೇವರವಸ್ತ್ರದಿಂದ ಒರಸಿ ಸಂಪುಟಗಳಲ್ಲಿ ಅಥವಾ ಪೀಠದಲ್ಲಿ ಇಡಬೇಕು.

ಮೂರ್ತಿಪೂಜೆಗಾಗಿ ಇಟ್ಟಿರುವ ಮೂರ್ತಿಗಳಿಗೆ (ದೊಡ್ಡ ಮೂರ್ತಿಗಳಿಗೆ) ಪ್ರತಿನಿತ್ಯ ಅಭಿಷೇಕ ಮಾಡಬಾರದು. ದೀಪಾವಳಿಪಾಡ್ಯ, ಯುಗಾದಿಪಾಡ್ಯ ಎರಡು ದಿನಗಳಲ್ಲಿ ಮಾತ್ರ ಮೂರ್ತಿಗಳೆಲ್ಲಕ್ಕೂ ಅಭಿಷೇಕ ಮಾಡುವ ರೂಢಿಯಿದೆ. ಗ್ರಹಣ ಹಿಡಿದರೆ ಬಿಟ್ಟ ನಂತರವೂ ಎಲ್ಲ ಮೂರ್ತಿಗಳಿಗೂ ಅಭಿಷೇಕ ಮಾಡಬೇಕು.

ಪುರುಷಸೂಕ್ತದಲ್ಲಿ ಋಗ್ವೇದಪಾಠಕ್ಕೂ ಯಜುರ್ವೇದಪಾಠಕ್ಕೂ ಸ್ವಲ್ಪ ವ್ಯತ್ಯಾಸ ವಿದೆ. ಋಗ್ವೇದಿಗಳು ಋಗ್ವೇದಪಾಠವನ್ನೂ (ಋ. ೧೦/೯೦ ಸೂ.) ಯಜುರ್ವೇದಿಗಳು ಯಜುರ್ವೇದಪಾಠವನ್ನೂ (ತೈತ್ತಿರೀಯ ಅರಣ್ಯ ೩ನೇ ಚಿತ್ತಿಪ್ರಶ್ನೆಯ ೧೨-೧೩ನೇ ಅನು-ವಾಕಗಳು) ಹೇಳಿಕೊಳ್ಳಬೇಕು. ಪುರುಷಸೂಕ್ತಕ್ಕೆ ಶ್ರೀ ರಾಘವೇಂದ್ರಸ್ವಾಮಿಗಳೂ ಸತ್ಯ ಸಂಧರೂ ವ್ಯಾಖ್ಯಾನ ಮಾಡಿದ್ದಾರೆ. ಈ ಎರಡು ವ್ಯಾಖ್ಯಾನಗಳೂ ಒಟ್ಟಿಗೆ ೧೯೧೫ರಲ್ಲಿ

ಮೈಸೂರು ಜಯಾಲಯ ಪ್ರೆಸ್ಸಿನಲ್ಲಿ ಮುದ್ರಿತವಾಗಿದ್ದುವು. ಈಗ ಉಪಲಭ್ಯವಿಲ್ಲ. ಆ ಸಂಸ್ಕೃತ ವ್ಯಾಖ್ಯಾನಗಳನ್ನು ಅನುಸರಿಸಿ ಕನ್ನಡದಲ್ಲಿ ಸ್ವರ್ಗೀಯ ಮಹಾಮಹೋಪಾಧ್ಯಾಯ ವ್ಯಾಕರಣ ಪ್ರಾಧ್ಯಾಪಕ ಶ್ರೀಮುಷ್ಣ ಸೇತುಮಾಧವಾಚಾರ್ಯರು ಅರ್ಥ ಬರೆದಿದ್ದು ಈಗ ಅವೂ ಉಪಲಭ್ಯವಿಲ್ಲ. ವಾದಿರಾಜರು ರಚಿಸಿದ ಪುರುಷಸೂಕ್ತವ್ಯಾಖ್ಯಾನವನ್ನು ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಸಂಪಾದಿಸಿ ಅಖಿಲ ಭಾರತ ಮಾಧ್ವಮಹಾಮಂಡಲ, ಪೂರ್ಣಪ್ರಜ್ಞನಗರ, ಬೆಂಗಳೂರು ದ್ವಾರಾ 1966ರಲ್ಲಿ ಪ್ರಕಟಿಸಿದ್ದಾರೆ. ಇತ್ತೀಚೆಗೆ 1982ರಲ್ಲಿ ಉತ್ತರಾದಿಮಠ, ಬಸವನಗುಡಿ, ಬೆಂಗಳೂರು 560004 ಇವರು ಸತ್ಯಾಭಿನವತೀರ್ಥರ ಸಂಸ್ಕೃತ ವ್ಯಾಖ್ಯಾನವನ್ನೂ ಪ್ರಕಟಿಸಿದ್ದಾರೆ. ಇದು ಮಾತ್ರ ಈಗ ಉಪಲಭ್ಯವಿದೆ.

(ಪುರುಷಸೂಕ್ತವನ್ನು ಶ್ರೀ ರಾಘವೇಂದ್ರತೀರ್ಥರ ಹಾಗೂ ಸತ್ಯಸಂಧತೀರ್ಥರ ವ್ಯಾಖ್ಯಾನಗಳೊಡನೆಯೂ ಅವುಗಳ ಅರ್ಥದೊಡನೆಯೂ ಕೊಡುವುದಲ್ಲದೆ ಮಹಾಮಹೋಪಾಧ್ಯಾಯ ವ್ಯಾಕರಣ ಶ್ರೀಮುಷ್ಣ ಸೇತುಮಾಧವಾಚಾರ್ಯರ ಕನ್ನಡ ವಿವರಣೆಗಳಲ್ಲದೆ ವಾದಿರಾಜರ ಮತ್ತು ಸತ್ಯಾಭಿನವತೀರ್ಥರ ವ್ಯಾಖ್ಯಾನಗಳ ವಿಶೇಷಾಂಶಗಳೊಡನೆ ಪ್ರಕಟಿಸಬೇಕೆಂಬ ಯೋಜನೆ ಬಹಳ ದಿನಗಳಿಂದ ಇವೆ. ಆದರೆ ಕಾರ್ಯರೂಪಕ್ಕೆ ತರಲು ಆಗಿಲ್ಲ.)

ಇಲ್ಲಿಗೆ ಅಭಿಷೇಕಕಲಾಪ ಮುಗಿಯಿತು.

ಶುದ್ಧೋದಕ ಸ್ನಾನದ ಬಗ್ಗೆ ಹೆಚ್ಚಿನ ವಿಚಾರ

ಶುದ್ಧೋದಕ ಸ್ನಾನ ಮಾಡಿಸುವಾಗ ಆ ನೀರಿಗೆ ಅಷ್ಟಗಂಧ ಮಿಶ್ರಣ ಮಾಡಿರಬೇಕು. ಹಾಗಾದರೆ ಮಾತ್ರ ಅಭಿಷೇಕ ಮಹಾಫಲಪ್ರದವಾಗುತ್ತದೆ. ಇದಕ್ಕೆ ಪ್ರಮಾಣ— (ತೆಲುಗು ಆಹ್ನಿಕಮಂಜರಿಯಿಂದ ಸಂಗ್ರಹ)

ಅಷ್ಟಗಂಧೋದಕೈರ್ಯಸ್ತು ಅಭಿಷೇಚಯತೇ ಹರಿಮ್ ।
ಸಹಸ್ರ ವಾರ್ಷಿಕೀ ಪೂಜಾ ದಿವಸೇ ನೈಕೇನ ಲಭ್ಯತೇ ॥ಶ್ಲ

(ಅರ್ಥ) ಅಷ್ಟಗಂಧಯುಕ್ತವಾದ ನೀರಿನಿಂದ ಯಾವನು ಶ್ರೀಹರಿಗೆ ಅಭಿಷೇಕ ಮಾಡುತ್ತಾನೋ ಅವನು ಒಂದು ದಿನದ ಪೂಜೆಯಿಂದಲೇ ಸಾವಿರ ವರ್ಷ ಪೂಜೆ ಮಾಡಿದ ಫಲವನ್ನು ಹೊಂದುತ್ತಾನೆ.

ಇನ್ನು ಅಷ್ಟಗಂಧಗಳು ಯಾವುವೆಂದರೆ—

ತುಲಸೀಕಾಷ್ಠಮಗರು ತಥೈವಾಮಲಕಂ ಶುಭಮ್ ।
ಬಿಲ್ವಗಂಧಂ ದೇವದಾರು ತಥಾ ಶ್ರೀಗಂಧಕುಂಕುಮಮ್ ।
ರೋಚನಂ ಚೇತ್ಯಷ್ಟಗಂಧಂ ಸರ್ವದೈವ ಹರೇಃ ಪ್ರಿಯಮ್ ॥

(ಅರ್ಥ) ೧. ತುಲಸೀಕಾಷ್ಟ, ೨. ಅಗುರು, ೩. ನೆಲ್ಲಿಚೆಕ್ಕೆ, ೪. ಬಿಲ್ವಚೆಕ್ಕೆ, ೫. ದೇವದಾರು, ೬. ಗಂಧದ ಚೆಕ್ಕೆ, ೭. ಕುಂಕುಮಕೇಸರ, ೮. ಗೋರೋಚನ— ಈ ಎಂಟು ಗಂಧಗಳು ಪರಮಾತ್ಮಗೆ ಅತ್ಯಂತ ಪ್ರಿಯವಾದುವು. ಇದಕ್ಕೆ ಅಷ್ಟಗಂಧ ಎಂತ ಹೆಸರು. ಇದು ಅಭಿಷೇಕೋಪಯುಕ್ತವಾದ ಅಷ್ಟಗಂಧ. ಪೂಜೆಗೆ (ಹಚ್ಚಿಕೊಳ್ಳಲು) ಸಮರ್ಪಿಸುವ ಅಷ್ಟಗಂಧ ಬೇರೆ ಇದೆ. ಅದನ್ನು ಗಂಧಸಮರ್ಪಣ ಪ್ರಸಂಗದಲ್ಲಿ ವಿವರಿಸಲಾಗುವುದು.

ಈ ಸಂದರ್ಭದಲ್ಲಿ ಒಂದು ಮಾತು ನೆನಪಿಡುವುದು ಮುಖ್ಯ. ಪೂಜೆ ಮಾಡುವುದಕ್ಕೇ ಸಾಧ್ಯವಾಗದಿರುವ ಈ ಘೋರ ಕಲಿಕಾಲದಲ್ಲಿ ಅಭಿಷೇಕಕ್ಕಾಗಿಯೇ ಈ ಎಂಟು ಚೆಕ್ಕೆಗಳನ್ನು ಸಂಗ್ರಹಿಸಿಕೊಳ್ಳುವುದಲ್ಲದೆ ಅವನ್ನೆಲ್ಲ ತೇದು ಬೆರಸುವುದು ಎಲ್ಲೋ ಲಕ್ಷಕ್ಕೆ ಒಬ್ಬರಾದ ಮಹಾನುಭಾವರಿಗೆ ಸಾಧ್ಯವಾಗಬಹುದು. ನಮ್ಮಂತಹ ಅಲ್ಪರಿಗೆ ಕೇವಲ ಈ ಜ್ಞಾನವೇ ಸಾಕು. ನಮ್ಮ ಬಿಂಬರೂಪೀ ಪರಮಾತ್ಮ ನಮ್ಮಲ್ಲಿ ನಿಂತು ತಾನೇ ಅಭಿಷೇಕ ಮಾಡುತ್ತಾ ನಮ್ಮಿಂದ ಮಾಡಿಸುತ್ತಾನೆ ಎಂಬ ಅನುಸಂಧಾನ ಮಾಡಿಕೊಂಡು ಈ ಅಷ್ಟಗಂಧಗಳ ಸ್ಮರಣೆ ಮಾಡಿದ ಮಾತ್ರದಿಂದಲೇ ಆ ಪರಮಾತ್ಮ ತೃಪ್ತನಾಗಿ ನಮಗೆ ಅನಂತ ಫಲ ಕೊಡುತ್ತಾನೆಂದು ತಿಳಿದುಕೊಳ್ಳಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ-ಪರಮಾತ್ಮ ‘ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್’ ಎಂದು ಹೇಳಿರುವುದನ್ನು ಇಲ್ಲಿ ನೆನಪು ಮಾಡಬಹುದು. ಅದನ್ನೇ ಶ್ರೀಮದಾಚಾರ್ಯರು ‘ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ’- ಪರಮಾತ್ಮನಲ್ಲಿ ಅನುಸಂಧಾನಪೂರ್ವಕ ಸಮರ್ಪಿಸಿದ ಕರ್ಮವು ಅಕ್ಷಯವಾಗುವುದು ಎಂದು ಹೇಳಿದ್ದಾರೆ.

ಮಂತ್ರಗಳ ಅರ್ಥ: ಅಭಿಷೇಕ ಕಲಾಪದಲ್ಲಿ ಬಂದಿರುವ ವೇದಮಂತ್ರಗಳಿಗೆಲ್ಲಾ ಶುದ್ಧವಾದ ಆಚಾರ್ಯಸಮ್ಮತವಾದ ವ್ಯಾಖ್ಯಾನಗಳು ನನಗೆ ಎಲ್ಲೂ ಉಪಲಬ್ಧವಾಗಿಲ್ಲ. ಹಾಗೆಂದು ಅರ್ಥವನ್ನು ಕೊಡದೆಯೇ ಮುಂದುವರೆಯುವುದೂ ನನಗೆ ಇಷ್ಟವಿಲ್ಲ. ಅದ-ಕಾರಣ ಎಲ್ಲ ಮಂತ್ರಗಳಿಗೂ ಸಾಯಣಭಾಷ್ಯರೀತ್ಯಾ ಅರ್ಥ ಕೊಟ್ಟು, ಮಾಧ್ವರೀತ್ಯಾ ಬೇರೆ ಎಲ್ಲಾದರೂ (ಉದಾಹರಣೆಗೆ ಸಂಧ್ಯಾಭಾಷ್ಯದಲ್ಲಿ, ಧೀರೇಂದ್ರತೀರ್ಥಕೃತ ಮಹಾ-ನಾರಾಯಣೋಪನಿಷದ್ವ್ಯಾಖ್ಯಾನದಲ್ಲಿ) ಅರ್ಥ ಸಿಕ್ಕರೆ ಅದನ್ನೂ ಸಹ ತಿಳಿಸುವುದಲ್ಲದೆ ನನ್ನ ಯತ್ಕಿಂಚಿತ್ ಮತಿಗೆ ಭಾಸವಾಗುವ ಕೆಲವು ಅಂಶಗಳನ್ನು ನಿವೇದಿಸಿಕೊಳ್ಳುವೆನು.

ಈಗ ಮೊದಲು ವಿಷ್ಣುವಿಗೆ ಪಾದುಕೆಗಳನ್ನು ಕೊಡಲು ಹೇಳಬೇಕಾದ ‘ಇದಂ ವಿಷ್ಣುಃ...’ ಮಂತ್ರದ ಅರ್ಥಕ್ಕೆ ಹೋಗೋಣ.

ವೇದಮಂತ್ರಗಳ ಅರ್ಥ

ಋಷ್ಯಾದಿಗಳು :— ಮೇಧಾತಿಥಿರ್ಋಷಿಃ । ವಿಷ್ಣುರ್ದೇವತಾ । ಗಾಯತ್ರೀ ಛಂದಃ । ವಿಷ್ಣೋಃ ಪಾದುಕಾರ್ಪಣೇ ವಿನಿಯೋಗಃ ॥

1 ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್ ।

ಸಮೂಳ್ಹಮಸ್ಯ ಪಾಂಸುರೇ ॥

(ಋ. ೧/೨೨/೧೭; ತೈ.ಸಂ. ೧/೨/೧೩/೧)

ಈ ಮಂತ್ರಕ್ಕೆ ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರೇ ಅರ್ಥ ಹೇಳಿರುವುದರಿಂದ ಇದರ ಅರ್ಥವು ಋಗ್ಭಾಷ್ಯ ಟೀಕಾದಲ್ಲೂ ರಾಯರ ಮಂತ್ರಾರ್ಥಮಂಜರಿಯಲ್ಲೂ ಹೇಳಲ್ಪಟ್ಟಿದೆ. ಋಗ್ಭಾಷ್ಯದಲ್ಲಿ 'ಪಾಂಸುರೇ' 'ಸಮೂಳ್ಹಂ' ಎಂಬ ಎರಡೇ ಪದಗಳ ಅರ್ಥ ಹೇಳಿದ್ದಾರೆ—

ರಮಂತಿ ಪಾಂಸವೋ ಯತ್ರ ಪದಮೀರಿತಮ್ ।

ಪಾಂಸುರೇ ಎಂಬಲ್ಲಿ ಪಾಂಸು-ರ ಎಂದು ಎರಡು ಭಾಗ ಇವೆ. ಪಾಂಸು ಎಂದರೆ ಧೂಳು ಎಂದರ್ಥ. ಆ ಧೂಳು ಯಾವುದರಲ್ಲಿ ರ-ರಮಂತಿ-ರಮಿಸುತ್ತವೋ (ಆನಂದಿಸುತ್ತವೋ) ಅದು ಪಾಂಸು-ರ ಎಂದರೆ ಪಾದ ಎಂದರ್ಥ. ಆದಕಾರಣ ಪಾಂಸುರೇ ಎಂದರೆ ಪಾದದಲ್ಲಿ ಎಂದರ್ಥ. ಸಾಯಣರು 'ಧೂಳಿಯುಕ್ತವಾದ ಪಾದಸ್ಥಾನದಲ್ಲಿ' ಎಂದು ಅರ್ಥ ಹೇಳಿದ್ದಾರೆ. ಈಗ 'ಸಮೂಳ್ಹಂ' ಶಬ್ದಾರ್ಥ ಹೇಳುತ್ತಾರೆ—

ಸಮೂಢಂ ತತ್ರ ವಿಶ್ವಂ ಹಿ ಪಾಂಡುವಜ್ಜಗತಃ ಪತೇಃ ।

ಋಗ್ವೇದದಲ್ಲಿ ಪ್ರಾಯಶಃ ದಕಾರಕ್ಕೆ ಳಕಾರವೂ ಢಕಾರಕ್ಕೆ ಳ್ಹವೂ ಆದೇಶವಾಗಿ ಬರುತ್ತವೆ. ಆದ್ದರಿಂದ ಸಮೂಳ್ಹಂ ಎಂದರೆ ಸಮೂಢಂ-ಮಗ್ನವಾಯಿತು ಎಂದರ್ಥ. ಯಾವುದು ಮಗ್ನವಾಯಿತೆಂದರೆ 'ಇದಂ' ಶಬ್ದಾರ್ಥವಾದ ವಿಶ್ವವು ಅಥವಾ ಜಗತ್ತು; ಹೇಗೆ ಮಗ್ನವಾಯಿತೆಂದರೆ—ಕಾಲಿನಲ್ಲಿ ಧೂಳು ಹೇಗೆ ಅಡಗಿರುತ್ತದೋ ಹಾಗೆ ಸಕಲ ಜಗತ್ತೂ ವಿಷ್ಣುವಿನ ಪಾದದಲ್ಲಿ ಅಡಗಿದೆ ಎಂದರ್ಥ. ಇಡೀ ಋಕ್ಕಿಗೆ ಹೀಗೆ ಅರ್ಥ—ವಿಷ್ಣುಃ-ತ್ರಿವಿಕ್ರಮರೂಪವನ್ನು ಧರಿಸಿದ ವಿಷ್ಣುವು; ಇದಂ-ಈ ಹದಿನಾಲ್ಕು ಲೋಕಗಳನ್ನೊಳಗೊಂಡ ವಿಶ್ವವನ್ನು (ಬ್ರಹ್ಮಾಂಡವನ್ನು); ವಿ ಚಕ್ರಮೇ-ಆಕ್ರಮಿಸಿದನು. ಪದಂ-ತನ್ನ ಪಾದವನ್ನು; ತ್ರೇಧಾ-ಮೂರು ಪ್ರಕಾರವಾಗಿ; ನಿದಧೇ-ಇಟ್ಟನು. ಅಸ್ಯ-ಇವನ (ವಿಷ್ಣುವಿನ); ಪಾಂಸುರೇ-ಪಾದದಲ್ಲಿ; (ಇದಂ-ಈ ಇಡೀ ವಿಶ್ವವು); ಸಮೂಳ್ಹಂ (ಸಮೂಢಂ)-ಕಾಲಿನಲ್ಲಿ ಧೂಳು ಹೇಗೆ ಸೇರಿಕೊಂಡಿರುತ್ತದೋ ಹಾಗೆ ಸೇರಿಕೊಂಡಿದೆ.

ತ್ರೇಧಾ=ಮೂರು ಪ್ರಕಾರವಾಗಿ ಎಂಬುದಕ್ಕೆ ಎರಡು ವಿವರಣೆ ಹೇಳಬಹುದೆಂದು ಪ್ರಾಚೀನರು ತೋರಿಸಿದ್ದಾರೆಂದು ನಿರುಕ್ತಕಾರರು ಹೇಳಿದ್ದಾರೆ. i) ಭೂಮಿಯಲ್ಲೂ ಅಂತರಿಕ್ಷದಲ್ಲೂ ಸ್ವರ್ಗಲೋಕದಲ್ಲೂ ಎಂದು ಶಾಕಪೂಣಿ ಹೇಳಿದರೆ, ii) ಸಮಾರೋಹ

ದಲ್ಲೂ ವಿಷ್ಣುಪಾದದಲ್ಲೂ ಗಯಾ ಶಿರಸ್ಸಿನಲ್ಲೂ ಎಂದು ಔರ್ಣನಾಭ ಹೇಳುತ್ತಾರೆ. (ಸಾಯಣರ ಅರ್ಥವೂ ಹೀಗೇ ಇದೆ.)

ತಾತ್ಪರ್ಯ — ಶ್ರೀವಿಷ್ಣು ತ್ರಿವಿಕ್ರಮಾವತಾರ ಮಾಡಿ ತನ್ನ ಮೂರು ಹೆಜ್ಜೆಯಲ್ಲೇ ಇಡೀ ಬ್ರಹ್ಮಾಂಡವನ್ನು ಅಳೆದುಬಿಟ್ಟನು. ಅವನ ಪಾದದಲ್ಲಿ ಇಡೀ ಬ್ರಹ್ಮಾಂಡವು— ಪಾದದಲ್ಲಿ ಧೂಳು ಹೇಗೆ ಅನಾಯಾಸವಾಗಿ ಸೇರಿಕೊಂಡಿರುತ್ತದೋ ಹಾಗೆ ಹಿಡಿದು-ಕೊಂಡು ನಿಂತಿದೆ. (ಇಡೀ ವಿಶ್ವವನ್ನು ಆ ವಿಷ್ಣು ಲೀಲಾಜಾಲವಾಗಿ ಅನಾಯಾಸದಿಂದ ಧರಿಸಿದ್ದಾನೆಂದು ಭಾವ.)

II ಆಪೋ ಹಿ ಷ್ಠಾ ಇತ್ಯಾದಿ ಮೂರು ಮಂತ್ರಗಳು

ಋಷ್ಯಾದಿಗಳು : ಆಪೋ ಹಿ ಷ್ಠೇತಿ ತಿಸೃಣಾಂ ಸಿಂಧುದ್ವೀಪಋಷಿಃ । ಆಪೋ ದೇವತಾಃ । ಗಾಯತ್ರೀ ಛಂದಃ । ಲಕ್ಷ್ಮೀಹಸ್ತೇನ ಅರ್ಘ್ಯ-ಪ್ರದಾನೇ ವಿನಿಯೋಗಃ ॥

ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ ।
ಮಹೇ ರಣಾಯ ಚಕ್ಷಸೇ ॥ ೧ ॥

ಸೂಚನೆ— ಷ್ಠಾ ಎಂಬುದು ಪದಪಾಠದಲ್ಲಿ ಸ್ಥ ಎಂದಾಗುತ್ತದೆ.

ಸಾಯಣಭಾಷ್ಯ— ಹಿ-ಯಾವ ಕಾರಣದಿಂದ, ಆಪಃ-ನೀರುಗಳಾದ ಯಾವ ನೀವು ; ಮಯೋಭುವಸ್ಥ-ಸುಖಕ್ಕೆ ಕಾರಣೀಭೂತರಾಗಿದ್ದೀರೋ ; ತಾಃ-ಅಂಥಾ ನೀವು ; ನಃ-ನಮ್ಮನ್ನು ; ಊರ್ಜೇ-ಅನ್ನಕ್ಕಾಗಿ ; ದಧಾತನ-ಧರಿಸಿರಿ. ಮಹೇ-ಮಹತ್ತರವಾದ ; ರಣಾಯ-ರಮಣೀಯವಾದ ; ಚಕ್ಷಸೇ-ಜ್ಞಾನಕ್ಕಾಗಿಯೂ ; (ದಧಾತನ-ಧರಿಸಿರಿ).

ಭಾವಾರ್ಥ— ಹೇ ನೀರೇ ನೀನು ಸುಖಕ್ಕೆ ಆಧಾರವಾಗಿರುವಿ. ನಮಗೆ ಯಥೇಷ್ಟ ಅನ್ನವೂ ಜ್ಞಾನವೂ ದೊರಕುವಂತೆ ಮಾಡಿರಿ.

ಧೀರೇಂದ್ರತೀರ್ಥೀಯ ಟೀಕಾದಲ್ಲಿ ಹೇಳಿದ ಅರ್ಥ— ಆಪಃ ಎಂದರೆ ನೀರು ಎಂದರ್ಥ. ನೀರು ಜಡವಾದ್ದರಿಂದ ತದಭಿಮಾನಿ ದೇವತೆಗಳನ್ನೇ ಗ್ರಹಣ ಮಾಡಬೇಕು. ಅದಕ್ಕೂ ಮುಖ್ಯವಾಗಿ ಅದರ ಅಂತರ್ಗತನಾದ ಸರ್ವಪ್ರೇರಕನೂ ಸರ್ವಶಬ್ದವಾಚ್ಯನೂ ಆದ ವಿಷ್ಣುವೇ ವಾಚ್ಯನಾಗಿದ್ದಾನೆಂದು ತಿಳಿಯಬೇಕು. 'ಆಪ ಆಪಾಲನಾದ್ವಿಷ್ಣುಃ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಆ-ಚೆನ್ನಾಗಿ; ಪ-(ಪಾ ರಕ್ಷಣೇ ಧಾತು) ಸಂರಕ್ಷಿಸುವನಾದ್ದರಿಂದಲೂ ಆ ಪಿಬತ್ಯಖಿಲಾನ್ ಭೋಗಾನ್; ಆ ಪಿಬತ್ಯಖಿಲಮಿತಿ ವಾ ಆಪೋ

ಹರಿಃ ಎಂದು ಧೀರೇಂದ್ರತೀರ್ಥರು ತೋರಿಸುವಂತೆ ಆ-ಚೆನ್ನಾಗಿ, ಪ (ಪಾ-ಪಿಬ-ಕುಡಿ) ಸಕಲ ಭೋಗಗಳನ್ನೂ ಕುಡಿಯು (ಅನುಭವಿಸು)ವುದರಿಂದಲೂ, ಅಥವಾ ಆ-ಚೆನ್ನಾಗಿ, ಪ-(ಕುಡಿ, ನುಂಗಿಬಿಡು) ಪ್ರಳಯಕಾಲದಲ್ಲಿ ಸಕಲವನ್ನೂ ಕುಡಿದುಬಿಡು (ಸಂಹರಿಸು) ವುದರಿಂದಲೂ ಶ್ರೀಹರಿಯು ಆಪಃ ಎನ್ನಿಸುತ್ತಾನೆ. ಆಪಃ ಎಂಬುದು ಸ್ತ್ರೀಲಿಂಗ ಬಹು ವಚನರೂಪ. ಶ್ರೀಹರಿಯು ಏಕವಚನ-ದ್ವಿವಚನ-ಬಹುವಚನ ಮೂರು ವಚನಗಳಿಂದಲೂ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕಲಿಂಗ ಮೂರು ಲಿಂಗಕ್ಕೆ ಸೇರಿದ ಶಬ್ದಗಳಿಂದಲೂ ವಾಚ್ಯ ನಾಗಿದ್ದಾನೆಂದು ವೇದಾಂತಶಾಸ್ತ್ರದಲ್ಲಿ ಹೇಳಿರುವುದರಿಂದ ಸ್ತ್ರೀಲಿಂಗವೂ ಬಹುವಚನವೂ ಕೂಡುತ್ತದೆ ಶ್ರೀಹರಿಗೆ ಸ್ತ್ರೀರೂಪಗಳೂ ಅನೇಕ ರೂಪಗಳೂ ಇರುವುದರಿಂದಲೂ ಇದು ಉಪ್ಪುತ್ತದೆಯೆಂದು ತಿಳಿಯಬೇಕು.

ಆಪಃ-ನೀರಿಗೆ ಅಭಿಮಾನಿಗಳಾದ ವರುಣಾದಿ ದೇವತೆಗಳೂ ಮತ್ತು ತನ್ನಿಯಾಮಕ ನಾದ ಯಾವ ಶ್ರೀಹರಿಯೂ (ಅಥವಾ ಹರಿಯ ರೂಪಗಳೂ) ಆದ ನೀವುಗಳು; ಮಯೋ ಭುವಃ-ಸುಖಕ್ಕೆ ಆಶ್ರಯೀಭೂತರಾಗಿ; ಸ್ಥ-ಆಗಿದ್ದೀರೆಂದು; ಹಿ-ಪ್ರಸಿದ್ಧವಾಗಿದೆಯೋ; ತಾಃ-ಅಂಥಾ ನೀವು; ನಃ-ನಮ್ಮನ್ನು; ಊರ್ಜೇ-ಅನ್ನಕ್ಕಾಗಿಯೂ ಅಥವಾ ರೂಪದ ಹಿರಿಮೆಗಾಗಿಯೂ; ಮಹೇರಣಾಯ-ಮೋಕ್ಷಾಖ್ಯ ಉತ್ಸವದ ಪ್ರೇರಣೆಗಾಗಿಯೂ; ಚಕ್ಷಸೇ-ಅಪರೋಕ್ಷಜ್ಞಾನಕ್ಕಾಗಿಯೂ; ದಧಾತನ-ಧರಿಸಿರಿ.

ಭಾವಾರ್ಥ— ಹೇ ಅಬಭಿಮಾನಿಗಳಾದ ವರುಣಾದಿ ದೇವತೆಗಳಿರಾ ಮತ್ತು ತನ್ನಿಯಾಮಕನಾದ ಸಕಲ ಪಾಲಕನೂ ಸಕಲ ಭೋಗಭೋಕ್ತನೂ ಸಕಲ ಸಂಹಾರಕನೂ ಆದ್ದರಿಂದ ಆಪಃಶಬ್ದವಾಚ್ಯನಾದ ಹೇ ಶ್ರೀಹರಿಯೇ ! ನೀವು ಸುಖಕ್ಕೆ ಆಶ್ರಯಭೂತ ರಾಗಿದ್ದೀರಿ. ನೀವು ನಮಗೆ ನಿಶ್ಚಿಂತೆಯಿಂದ ಅನ್ನಾದಿಗಳು ದೊರಕುವಂತೆಯೂ ಮೋಕ್ಷ ಸಾಧನೀಭೂತವಾದ ಜ್ಞಾನ ಭಕ್ತಿ ವೈರಾಗ್ಯಾದಿಗಳನ್ನು ಕರುಣಿಸಿ ಅಪರೋಕ್ಷಜ್ಞಾನ ವನ್ನೂ ಅನುಗ್ರಹಿಸಿರಿ ಎಂದು ಭಾವ.

ಎರಡನೆಯ ಮಂತ್ರ

ಯೋ ವಃ ಶಿವತಮೋ ರಸ—ಸ್ತಸ್ಯ ಭಾಜಯತೇ ಹ ನಃ ।
ಉಶತೀರಿವ ಮಾತರಃ ॥ ೨ ॥

ಸೂಚನೆ— ಪದಪಾಠದಲ್ಲಿ 'ಭಾಜಯತ ಇಹ' ಎಂದೂ, 'ಉಶತೀಃ ಇವ' ಎಂದೂ ಪದಚ್ಛೇದ.

ಭಾವವನ್ನೇ ಹೇಳುತ್ತವೆ. (ಭ-ಭಟ್ಟಭಾಸ್ಕರರ ಅರ್ಥ, ನೃ-ನೃಸಿಂಹಪ್ರಯೋಗ ಪಾರಿ-ಜಾತಾರ್ಥ, ಸಾ-ಸಾಯಣಭಾಷ್ಯ.)

ಋಗ್ವೇದಪಾಠ

ಭದ್ರಂ ಕರ್ಣೇಭಿಃ ಶೃಣುಯಾಮ

ದೇವಾ ಭದ್ರಂ ಪಶ್ಯೇ ಮಾಕ್ಷಭಿರ್ಯಜತ್ರಾಃ ।

ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್

ವ್ಯಶೇಮ ದೇವಹಿತಂ ಯದಾಯುಃ ॥

ಕೃಷ್ಣಯಜುರ್ವೇದ ಪಾಠ

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।

ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।

ಸ್ಥಿರೈರಂಗೈಸ್ತುಷ್ಟುವಾಗ್ಂಸಸ್ತನೂಭಿಃ ।

ವ್ಯಶೇಮ ದೇವಹಿತಂ ಯದಾಯುಃ ॥

ಋಷ್ಯಾದಿಗಳು : ಭದ್ರಂ ಕರ್ಣೇಭಿರಿತ್ಯಸ್ಯ ರಾಹುಗಣೋ ಗೋತಮೋ ಋಷಿಃ । ವಿಶ್ವೇದೇವಾ ದೇವತಾಃ । ತ್ರಿಷ್ಟುಪ್ ಛಂದಃ । ಅಭಿಷೇಕಪಾತ್ರ ಸ್ಥಾಪನೇ ವಿನಿಯೋಗಃ ।

ಮಂತ್ರಾರ್ಥ— ದೇವಾಃ-ಎಲೈ ವಿಶ್ವೇದೇವತೆಗಳಿರಾ ! (ಭ. ಮುಂದಿನ ಮಂತ್ರದಲ್ಲಿ ಹೇಳಲ್ಪಡುವ ಇಂದ್ರ, ಪೂಷಾ, ತಾರ್ಕ್ಷ್ಯ, ಗರುಡ, ಬೃಹಸ್ಪತಿಯೆಂಬ ದೇವತೆಗಳೇ!) ಭದ್ರಂ-ಶುಭವಾದುದನ್ನೇ (ಎಂದರೆ ಶ್ರುತಿಸ್ಮೃತಿ ವಾಕ್ಯರೂಪವಾದ ಮಂಗಳಕರವಾದ

ಶಬ್ದಗಳನ್ನೇ—ಸಾ.; ಭದ್ರಂ ಎಂದರೆ 'ಭಜನೀಯಂ' ಅಥವಾ ಸೇವಿಸಲು ಯೋಗ್ಯವಾದ ಷಡಂಗಸಹಿತವಾದ ವೇದವನ್ನೂ ಪುರಾಣೇತಿಹಾಸಾದಿಗಳನ್ನೂ—ಭ.) ಕರ್ಣೇಭಿಃ-ಕಿವಿಗಳಿಂದ (ಗುರುಶಿಷ್ಯರಾದ್ದರಿಂದಲೂ ಋತ್ವಿಜರು ಯಜಮಾನರಾದ್ದರಿಂದಲೂ ಬಹು-ವಚನ ಪ್ರಯೋಗ ಸಾ, ಭ) ಶೃಣುಯಾಮ -ನಾವು (ಗುರುಶಿಷ್ಯರೂ ಮತ್ತು ಋತ್ವಿಜರೂ ಯಜಮಾನರೂ ಆದ ನಾವೆಲ್ಲ) ನಿಮ್ಮ ಅನುಗ್ರಹದಿಂದ ಸರ್ವದಾ ಕೇಳು-ವಂತೆ ಆಗಲಿ (ಸಾ., ಭ) ನಮಗೆ ಸರ್ವದಾ ಕೇಳುವ ಶಕ್ತಿ ಇರಲಿ, ನಾವು ಕಿವುಡಾಗುವುದು ಬೇಡ. (ಸಾ.) ವೇದಾದಿಗಳನ್ನು ಕೇಳಿ) ಯಜತ್ರಾಃ-(ಅಧ್ಯಯನ ಶ್ರವಣಾದಿಗಳಿಂದ—ಭ) ಯಾಗಕ್ಕೆ ಅರ್ಹರಾದ ನಾವು, ಅಕ್ಷಭಿಃ-ಕಣ್ಣುಗಳಿಂದ, ಭದ್ರಂ-ಮಂಗಳಕರವಾದ ಯಜ್ಞಾದಿ ಕರ್ಮಗಳನ್ನೇ, ಪಶ್ಯೇಮ-ನೋಡೋಣ—ಸಾಕ್ಷಾತ್ತಾಗಿ ನೋಡಲು ಸಮರ್ಥರಾಗೋಣ. ನಾವು ಎಂದಿಗೂ ಕುರುಡರಾಗುವುದು ಬೇಡ. (ಸಾ.) ಸ್ಥಿರೈಃ ಅಂಗೈಃ-ದೃಢವಾಗಿರುವ ಕಣ್ಣು ಕಿವಿ ಕೈಕಾಲು ಮೊದಲಾದ ಅವಯವಗಳಿಂದ ಯುಕ್ತವಾದ, ತನೂಭಿಃ-ಶರೀರಗಳಿಂದ ಕೂಡಿದವರಾದ ನಾವು, ತುಷ್ಟುವಾಂಸಃ-ನಿಮ್ಮ ಸ್ತುತಿಯನ್ನು ಮಾಡುವವರಾಗಿ (ನಿಮ್ಮನ್ನು ಸದಾ ಸ್ತುತಿಸುತ್ತ ಎಂದರ್ಥ), ಯತ್ ಆಯುಃ-ಯಾವ ಆಯುಸ್ಸು, ದೇವಹಿತಂ-ದೇವತೆಗಳಿಂದ ನಿಯುಕ್ತವಾಗಿವೆಯೋ ಅಂಥಾ, ಆಯುಃ-ನೂರಹದಿನಾರು, ನೂರಇಪ್ಪತ್ತು ಅಥವಾ ನೂರುವರ್ಷದ ಆಯುಸ್ಸನ್ನು ವ್ಯಶೇಮ-ಹೊಂದೋಣ, ಅನುಭವಿಸೋಣ.

ಭಾವಾರ್ಥ— ಹೇ ಇಂದ್ರಾದಿ ದೇವತೆಗಳಿರಾ, ನಾವು ಸದಾ ವೇದ-ವೇದಾಂಗ-ಪುರಾಣೇತಿಹಾಸಾದಿ ಮಂಗಳಪ್ರದವಾದ ಶಬ್ದವನ್ನೇ ಕೇಳುವಂತೆ ಅನುಗ್ರಹ ಮಾಡಿರಿ. ನಮಗೆ ಕಿವುಡುತನ ಬರದಂತಾಗಲಿ. ಅದೇ ರೀತಿ ವೇದಾಧ್ಯಯನಾದಿಗಳಿಂದ ಯಾಗಾರ್ಹರಾದ ನಾವು ನಮ್ಮ ಕಣ್ಣುಗಳಿಂದಲೂ ಯಜ್ಞಯಾಗಾದಿ ಸತ್ಕರ್ಮಗಳನ್ನೇ ನೋಡುವಂತೆ ಅನುಗ್ರಹ ಮಾಡಿರಿ. ನಮಗೆ ಕುರುಡುತನ ಬರದಂತಾಗಲಿ. ನಾವು ಹೃಷ್ಟ-ಪುಷ್ಟವಾದ ಸಕಲೇಂದ್ರಿಯಗಳಿಂದ ಯುಕ್ತರಾಗಿ ನಿಮ್ಮ ಸ್ತೋತ್ರದಲ್ಲೇ ಆಸಕ್ತರಾಗಿ ವಿಧಿ-ವಿಹಿತವಾದ ಸಂಪೂರ್ಣ ಆಯುಸ್ಸನ್ನು (ನೂರು ವರ್ಷಗಳನ್ನು, ನೂರಹದಿನಾರು ವರ್ಷಗಳನ್ನು ಅಥವಾ ನೂರಿಪ್ಪತ್ತು ವರ್ಷಗಳನ್ನು) ನಿರಾತಂಕವಾಗಿ ಅನುಭವಿಸುವಂತೆ ಅನುಗ್ರಹಿಸಿರಿ

ವಿಶೇಷಾರ್ಥ— ಈ ಮಂತ್ರದಲ್ಲಿ ಕರ್ಣೇಭಿಃ, ಅಕ್ಷಭಿಃ, ಅಂಗೈಃ ಎಂದು ಭಿನ್ನ-ಭಿನ್ನ ಇಂದ್ರಿಯಗಳ ಪ್ರಸಕ್ತಿ ಬಂದಿರುವುದರಿಂದ ದೇವಾಃ-ಎಂದರೆ ಮಾಧ್ವಸಂಪ್ರದಾಯ ರೀತ್ಯಾ ಹೇ ಇಂದ್ರಿಯಾಭಿಮಾನಿ ದೇವತೆಗಳಿರಾ ಎಂದು ಅರ್ಥ ಮಾಡುವುದು ಉಚಿತವಾಗುತ್ತದೆ. ಅಲ್ಲದೆ ಯಜತ್ರಾಃ ಎಂಬುದನ್ನು ಕರ್ತೃಪದಕ್ಕೆ ನಮಗೆ ಅನ್ವಯಿಸುವುದಕ್ಕಿಂತ ದೇವಾಃ ಪದದೊಡನೆಯೇ ಅನ್ವಯಿಸುವುದು ಉತ್ತಮ. ಮಿತ್ರಶಬ್ದಕ್ಕೆ

ಸಾಯಣ ಭಾಷ್ಯಾರ್ಥ— ಉಶತೀಃ ಇವ ಮಾತರಃ - ಸಂತಾನಸಮೃದ್ಧಿಯನ್ನು ಬಯಸುವ ತಾಯಿಯರು ಮಕ್ಕಳನ್ನು ಸ್ತನ್ಯಪಾನಾದಿಗಳಿಂದ ಪೋಷಿಸುವಂತೆ, ವಃ-ನಿಮ್ಮ, ಯಃ ರಸಃ-ಯಾವ ರಸವು, ಶಿವತಮಃ-ಅತ್ಯಂತ ಸುಖಕರವಾಗಿದೆಯೋ, ತಸ್ಯ-ತಂ-ಅದನ್ನು, ಇಹ-ಈ ಲೋಕದಲ್ಲಿ, ನಃ-ನಮ್ಮನ್ನು, ಭಾಜಯತ-ಭಾಗಿಗಳನ್ನಾಗಿ ಮಾಡಿರಿ.

ಭಾವಾರ್ಥ— ನಿಮ್ಮ ಅಪ್ಯಾಯಮಾನವಾದ ಸುಖಪ್ರದವಾದ ಆ ರಸವನ್ನು— ತಾಯಿಯರು ಮಕ್ಕಳಿಗೆ ಸ್ತನ್ಯಪಾನ ಮಾಡಿಸಿ ಸುಖಪಡಿಸುವಂತೆ—ನಾವೂ ಅನುಭವಿಸುವಂತೆ ಅನುಗ್ರಹಿಸಿರಿ.

ಧೀರೇಂದ್ರತೀರ್ಥರ ಟೀಕಾ— ಹೇ ಅಬಭಿಮಾನಿ ದೇವತೆಗಳಿರಾ! ವಃ-ನಿಮ್ಮ, ಶಿವತಮಃ-ಅತ್ಯಂತ ಮಂಗಳಕರವಾದ, ರಸಃ-ಮಧುರರಸವಿದೆಯೋ ಆದರಲ್ಲಿ ಶ್ರೇಷ್ಠನಾದ ಸಾರಭೂತನಾದ ಶ್ರೀಹರಿಯೂ ಇದೆಯೋ, ತಸ್ಯ-ಅದಕ್ಕೆ, ನಃ-ನಮ್ಮನ್ನು, ಇಹ ಭಾಜಯತ-ಈಗ (ಇಲ್ಲಿ) ಭಾಗಿಗಳನ್ನಾಗಿ ಮಾಡಿರಿ ಎಂದರೆ ನಮಗೆ ಅಪರೋಕ್ಷಜ್ಞಾನ ಉಂಟಾಗುವಂತೆ ಅನುಗ್ರಹಿಸಿರಿ ಎಂದು ಭಾವ. ಉಶತೀಃ-ಕರುಗಳಲ್ಲಿ ವಾತ್ಸಲ್ಯವುಳ್ಳ, ಮಾತರಃ ಇವಃ-ಕರು ಹಾಕಿದ ಗೋವುಗಳು ಹಾಲುಕೊಟ್ಟು ಪೋಷಿಸುವಂತೆ ಪೋಷಿಸಿರಿ ಎಂದು ಭಾವ. (ತೈತ್ತಿರೀಯೋಪನಿಷತ್ತಿನಲ್ಲಿ 'ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ' ಎಂದೂ ಭಗವದ್ಗೀತೆಯಲ್ಲಿ 'ರಸೋಽಹಮಪ್ಸು ಕೌಂತೇಯ' ಎಂದೂ ಹೇಳಿದೆ.

ಭಾವಾರ್ಥ— ಹೇ ಅಬಭಿಮಾನಿ ದೇವತೆಗಳಿರಾ ಮತ್ತು ಶ್ರೀಹರಿಯೇ! ನಿಮ್ಮಲ್ಲಿ ಸಾರಭೂತವೂ ಅತ್ಯಂತ ಸುಖಮಯವೂ ಆದ ಯಾವ ಭಗವತ್ ಸ್ವರೂಪವಿದೆಯೋ ಆದರ ಸಾಕ್ಷಾತ್ಕಾರವನ್ನು ಪಡೆದು ನಾವು ಮೋಕ್ಷಕ್ಕೆ ಅಧಿಕಾರಿಗಳಾಗುವಂತೆ ಕರುಣಿಸಿರಿ. ಗೋವು ಕರುವಿನಲ್ಲಿ ನಿರ್ವ್ಯಾಜ ವಾತ್ಸಲ್ಯದಿಂದ ಹೇಗೆ ಹಾಲು ಕೊಟ್ಟು ಪೋಷಿಸುತ್ತದೋ ಹಾಗೆ ನೀವೂ ನಮ್ಮಲ್ಲಿ ಕೇವಲ ವಾತ್ಸಲ್ಯದಿಂದ ಅನುಗ್ರಹ ಮಾಡಬೇಕೆಂದು ಭಾವ.

ಮೂರನೆಯ ಮಂತ್ರ

ತಸ್ಮಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ ।
ಆಪೋ ಜನಯಥಾ ಚ ನಃ ॥

(ಋ. ೧೦ ಮಂ, ೯ ಸೂ. ೧-೩ ಮಂ; ೭ ಅಷ್ಟ, ೬ ಅಧ್ಯಾ, ೫ ವ; ತೈ.ಸಂ. ೪/೧/೫/೧-೩; ತೈ. ಆ. ೪/೪೨/೪ ೬; ಮಹಾನಾ. ಉಪ. ೨ ಅನು, ೫೧-೫೩)

ಸೂಚನೆ— ತಸ್ಮೈ ಅರಂ ಎಂದೂ, ಜನಯಥ ಚ ಎಂದೂ ಪದಚ್ಛೇದ.

ಸಾಯಣಭಾಷ್ಯಾರ್ಥ— ಹೇ ನೀರುಗಳೇ! ನೀವು, ಯಸ್ಯ ಕ್ಷಯಾಯ ಜಿನ್ವಥ-ಯಾವ ಪಾಪದ ನಾಶಕ್ಕಾಗಿ ನಮ್ಮನ್ನು ಪ್ರೋಷಿಸುತ್ತೀರೋ, ತಸ್ಮೈ-ಅದಕ್ಕಾಗಿ, ಅರಂ-ಕ್ಷಿಪ್ರವಾಗಿ, ವಃ-ನಿಮ್ಮನ್ನು ಗಮಾಮ-ಹೊಂದುವೆವು (ಎಂದರೆ ತಲೆಯಮೇಲೆ ಪ್ರೋಕ್ಷಿಸಿಕೊಳ್ಳುವೆವು ಎಂದರ್ಥ.) ಆಪಃ-ಹೇ ನೀರುಗಳೇ, ನಃ-ನಮ್ಮನ್ನು ಜನಯಥ ಚ-ವಂಶಾಭಿವೃದ್ಧಿಯಾಗುವಂತೆ ಅನುಗ್ರಹಿಸಿರಿ.

ಭಾವಾರ್ಥ— ಮಂತ್ರಪೂತವಾದ ನೀರನ್ನು ಪ್ರೋಕ್ಷಿಸಿಕೊಳ್ಳುವುದರಿಂದ ಸಕಲ ಪಾಪಗಳೂ ಕ್ಷಯವಾಗುವುವು. ಅದಕಾರಣ ನಾನು ನಿಮ್ಮನ್ನು ತಲೆಯಮೇಲೆ ಪ್ರೋಕ್ಷಿಸಿ-ಕೊಳ್ಳುತ್ತೇನೆ. ನಮ್ಮ ವಂಶಾಭಿವೃದ್ಧಿಯಾಗುವಂತೆ ಅನುಗ್ರಹಿಸಿರಿ ಎಂದು ಭಾವ.

ಧೀರೇಂದ್ರತೀರ್ಥೀಯ ಟೀಕಾರ್ಥ— ಆಪಃ-ಎಲೈ ಅಬಭಿಮಾನಿ ದೇವತೆಗಳಿರಾ ಮತ್ತು ತದಂತರ್ಗತ ಹೇ ವಿಷ್ಣುವೇ, ಯಸ್ಯ-ಸಂಸಾರದಲ್ಲಿ ಲಬ್ಧವಾದ ಪಾಪದ ಅಥವಾ ಸಂಚಿತ ಪಾಪದ, ಕ್ಷಯಾಯ-ಪರಿಹಾರಕ್ಕಾಗಿ, ವಃ (ರಸಃ)-ನಿಮ್ಮ ಅಂತರ್ಗತನಾದ ಭಗವದ್ವಿಷಯಕ ಜ್ಞಾನವನ್ನು, ನಃ ಜಿನ್ವಥ ನಮಗೆ ಕರುಣಿಸಿರಿ (ಅನುಗ್ರಹಿಸಿರಿ). ಅದರಿಂದ ಭಗವಂತನ ಅತ್ಯರ್ಥಪ್ರಸಾದದ್ವಾರಾ, ಜನಯಥ ಚ-ಮೋಕ್ಷಾಖ್ಯ ಫಲವನ್ನೂ ದೊರಕಿಸಿಕೊಡಿರಿ. ತಸ್ಮೈ-ಅದಕ್ಕಾಗಿ ಎಂದರೆ ಸಂಸಾರಬಂಧನಾದಿಗಳ ನಾಶಕ್ಕಾಗಿ, ವಃ-ನಿಮ್ಮನ್ನು (ಭಗವನ್ಮೂರ್ತಿಗಳನ್ನು), ಅರಂ-ಶೀಘ್ರವಾಗಿ, ಗಮಾಮ-ಸೇವಿಸುವೆವು.

ಭಾವಾರ್ಥ— ಹೇ ಅಬಭಿಮಾನಿ ದೇವತೆಗಳಿರಾ, ನಿಮ್ಮ ನಿಯಾಮಕವಾದ ಭಗವನ್ಮೂರ್ತಿಗಳ ಆರಾಧನೆಯಿಂದ ಭಗವದಪರೋಕ್ಷವಾಗುವುದು. ಅದರಿಂದ ಸಂಚಿತಾ-ಗಾಮಿ ಎರಡೂ ವಿಧ ಪಾಪಗಳೂ ನಾಶವಾಗಿಹೋಗುವುವು. ಅನಂತರ ಸಾಧನೆ ಮಾಡುವುದರಿಂದ ಮೋಕ್ಷಲಾಭವಾಗುವುದರಿಂದ ಅದಕ್ಕೆ ಉಪಯುಕ್ತವಾದ ಸಾಧನೆಯನ್ನು ನಮ್ಮ ದ್ವಾರಾ ಮಾಡಿಸಿರಿ. ಈ ಉದ್ದೇಶ್ಯದಿಂದ ನಾವು ನಿಮ್ಮನ್ನು ಶೀಘ್ರವಾಗಿ ಸೇವಿಸುತ್ತೇವೆ ಎಂಬುದು ಭಾವ.

III ಭದ್ರಂ ಕರ್ಣೇಭಿಃ ಎಂಬ ಮಂತ್ರ

ಈ ಮಂತ್ರವು ಋಕ್‌ಸಂಹಿತೆಯ ೧ನೇ ಮಂಡಲದ ೮೯ನೇ ಸೂಕ್ತದ ೮ನೇ ಮಂತ್ರವಾಗಿ ಪ್ರಥಮಾಷ್ಟಕದ ಆರನೇ ಅಧ್ಯಾಯದಲ್ಲಿ ೧೬ನೇ ವರ್ಗದಲ್ಲಿ ಪಠಿತವಾಗಿದೆ. ತೈತ್ತಿರೀಯಾರಣ್ಯಕದ ಮೊದಲನೇ ಅರುಣಪ್ರಶ್ನೆಯಲ್ಲಿ ಪ್ರಥಮ ಮಂತ್ರವಾಗಿಯೂ ಪುನಃ ೨೧ನೇ ಅನುವಾಕದಲ್ಲಿ ಆರನೇ ಮಂತ್ರವಾಗಿಯೂ ಪಠಿತವಾಗಿದೆ. ಇದಕ್ಕೆ ಸಾಯನ-ಭಾಷ್ಯವೂ ಭಟ್ಟಭಾಸ್ಕರಭಾಷ್ಯವೂ ಇರುವುದಲ್ಲದೆ ಈ ಮಂತ್ರಕ್ಕೆ 'ನೃಸಿಂಹಪ್ರಯೋಗ ಪಾರಿಜಾತ'ದಲ್ಲೂ ಅರ್ಥ ಹೇಳಿದ್ದಾರೆ. ಈ ಮೂರು ಅರ್ಥಗಳೂ ಪ್ರಾಯಶಃ ಒಂದೇ

ವ್ಯಾಖ್ಯಾನ ಮಾಡುವಾಗ ಶ್ರೀಮದಾಚಾರ್ಯರು 'ಮಿತ್ರಾ ತ್ರಾತೀತಿ ಮಿತ್ರೋಽಯಂ' (೧ ಅ, ೨ ಸೂ, ೭ನೇ ಋಕ್) ಎಂದು ವ್ಯಾಖ್ಯಾನ ಮಾಡಿರುವುದನ್ನು ಅನುಸರಿಸಿ ನಾವು ಯಜತ್ರಾಃ ಶಬ್ದಕ್ಕೆ ಯಜ-ಪೂಜಿಸುವ ಅಥವಾ ಆರಾಧಿಸುವ ಭಕ್ತರನ್ನು, ತ್ರ-ರಕ್ಷಿಸುವಂಥಾ ಇಂದ್ರಿಯಾಭಿಮಾನಿ ದೇವತೆಗಳಿರಾ ಎಂದು ಅರ್ಥ ಹೇಳುವುದು ಯುಕ್ತವಾಗುತ್ತದೆ. ಶಾಸ್ತ್ರಗಳಲ್ಲೂ, ಅದನ್ನನುಸರಿಸಿ ಹರಿಕಥಾಮೃತಸಾರದಲ್ಲಿ, ಅನೇಕ ಕಡೆ ಹೀಗೆ ಹೇಳಲ್ಪಟ್ಟಿದೆ—ನಾವು ಮಾಡುವ ಶುಭಾಶುಭ ಸಕಲ ಕರ್ಮಗಳನ್ನೂ ಭಗವಂತನಲ್ಲಿ ಸಮರ್ಪಿಸಬೇಕೆಂದೂ, ಹಾಗೆ ಮಾಡಿದರೆ ಆ ಭಗವಂತ ನಮ್ಮ ಅಶುಭಕರ್ಮಗಳ ಫಲವನ್ನು ದೈತ್ಯರಿಗೆ ಹಂಚಿಕೊಟ್ಟು ನಮಗೆ ಆ ಪಾಪಕರ್ಮದ ದುಷ್ಟಫಲ ಅಂಟದಂತೆ ರಕ್ಷಿಸುತ್ತಾನೆಂದೂ, ಆಗ ನಾವು ಮಾಡುವ ಸಕಲ ಕರ್ಮಗಳೂ ಭಗವತ್ಪ್ರೀತಿಕರವಾಗುವುವೆಂದೂ ಹೇಳಿದೆ.

ಅದರಂತೆ ನಾವು ಬೆಳಗಿನಿಂದ ಸಂಜೆಯವರೆಗೂ, ಸಂಜೆಯಿಂದ ಬೆಳಗಿನವರೆಗೂ ಮಾಡಿದ ಸಕಲ ಕರ್ಮಗಳನ್ನೂ ಭಗವಂತನಲ್ಲಿ ಅರ್ಪಿಸಿ ಆ ಇಂದ್ರಿಯಾಭಿಮಾನಿ ದೇವತೆಗಳನ್ನೂ ತನ್ನಿಯಾಮಕನಾದ ಶ್ರೀಹರಿಯನ್ನೂ ಹೀಗೆ ಪ್ರಾರ್ಥಿಸಬೇಕೆಂದು ವೇದಪುರುಷ ನಮಗೆ ಹೇಳುತ್ತಾನೆ.

ಯಜತ್ರಾಃ-ಭಕ್ತಿಯಿಂದ ಭಜಿಸುವ (ಆರಾಧಿಸುವ) ಭಕ್ತರನ್ನು ಸಕಲ ದೋಷಗಳಿಂದ ಪಾರು ಮಾಡಿ ರಕ್ಷಿಸುವಂಥಾ; ದೇವಾಃ-ಹೇ ಇಂದ್ರಿಯಾಭಿಮಾನಿ ದೇವತೆಗಳಿರಾ ಮತ್ತು ತದಂತರ್ಗತನಾದ ಮುಖ್ಯಪ್ರಾಣನೇ ತನ್ನಿಯಾಮಕನಾಗಿ ಸರ್ವಪ್ರವರ್ತಕನಾದ ಶ್ರೀವಿಷ್ಣುವಿನ ರೂಪಗಳೇ! ಕರ್ಣೇಭಿಃ-ಕಿವಿಗಳಿಂದ, ಯತ್ ಶೃಣುಯಾಮ-ಏನು ಕೇಳುವೆವೋ ಅದೆಲ್ಲವೂ, ಭದ್ರಂ-ಭಗವತ್ಪ್ರೀತಿಕರವಾದುದೇ ಆಗಿ ನಮಗೆ ಸತ್ಫಲವನ್ನು ಕೊಡುವಂತೆ ಆಗಲಿ. ಇದೇ ರೀತಿ, ಅಕ್ಷಭಿಃ-ಕಣ್ಣುಗಳಿಂದ ನಾವು, ಯತ್ ಪಶ್ಯೇಮ-ಯಾವುದನ್ನು ನೋಡುತ್ತೇವೋ, ಅದೆಲ್ಲವೂ ಭದ್ರಂ-ಮಂಗಳರೂಪವೇ ಆಗಿ ಭಗವತ್ಪ್ರಸಾದಕ್ಕೆ ಕಾರಣವಾದುದೇ ಆಗಲಿ. ಸ್ಥಿರೈಃ ಅಂಗೈಃ ತನೂಭಿಃ-ದೃಷ್ಟಪುಷ್ಟವಾದ ಕರಚರಣಾದಿ ಸರ್ವೇಂದ್ರಿಯಗಳಿಂದ ಮಾಡುವ ಸಕಲ ಕರ್ಮಗಳೂ; ತುಷ್ಟುವಾಂಸಃ-ವಿಷ್ಣು-ವಿಷ್ಣುಭಕ್ತರ ಸ್ತೋತ್ರಪರವೇ ಆಗಲಿ. ಯತ್ ಆಯುಃ-ನಮ ಆಯುಸ್ಸು ಎಷ್ಟಿದೆಯೋ ಅಷ್ಟರ ಉದ್ದಕ್ಕೂ; ದೇವಹಿತಂ-ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಹರಿಗೆ ಪ್ರೀತಿಕರವಾದ ಕರ್ಮಗಳನ್ನೇ ಮಾಡುವಂತಾಗಲಿ.

ಮಾಧ್ವರೀತ್ಯಾ ಭಾವಾರ್ಥ— ನಾವು ಬೆಳಗಾಗಿ ಎದ್ದಕೂಡಲೇ ಹೀಗೆ ಹೇಳಿಕೊಳ್ಳಬೇಕೆಂಬುದು ಸದಾಚಾರವಾಗಿ ಬಂದಿದೆ—

ಪ್ರಾತಃಪ್ರಭೃತಿ ಸಾಯಾಂತಂ ಸಾಯಾದಿಪ್ರಾತರಂತತಃ।
ಯತ್ಕರೋಮಿ ಜಗನ್ನಾಥ ತದಸ್ತು ತವಪೂಜನಮ್ ॥ ೧ ॥

(ಅರ್ಥ) ಹೇ ಜಗತ್ತಿಗೆ ಒಡೆಯನಾದ ಶ್ರೀಹರಿಯೇ! ಬೆಳಗ್ಗೆಯಿಂದ ಸಂಜೆಯ ವರೆಗೂ ಪುನಃ ಸಂಜೆಯಿಂದ ಬೆಳಗಿನವರೆಗೂ ಏನು ಕರ್ಮ ಮಾಡುತ್ತೇನೋ ಅದೆಲ್ಲವೂ, ಹೇ ಸ್ವಾಮಿ, ನಿನ್ನ ಪೂಜಾರೂಪವೇ ಆಗಲಿ.

ನಮೋಽಸ್ತು ತಾತ್ವಿಕಾ ದೇವಾಃ ವಿಷ್ಣುಭಕ್ತಿಪರಾಯಣಾಃ |
(ಪಾಠಾಂ. ನಮೋ ವಸ್ತಾತ್ವಿಕಾ ದೇವಾ ....
ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ ॥ ೨ ॥

(ಅರ್ಥ) ಹೇ ತತ್ವಾಭಿಮಾನಿ ದೇವತೆಗಳಿರಾ! ನೀವೆಲ್ಲಾ ವಿಷ್ಣುಭಕ್ತಿಯಲ್ಲೇ ನಿರತರಾಗಿದ್ದೀರಲ್ಲವೆ! ಆದಕಾರಣ ನೀವೆಲ್ಲರೂ ನನ್ನನ್ನು ಕೇವಲ ಧರ್ಮಮಾರ್ಗದಲ್ಲಿಯೇ ಪ್ರೇರಣೆ ಮಾಡಿರಿ. ಹೀಗೆ ಪ್ರಾರ್ಥಿಸುವುದು ರೂಢಿ. ಇದನ್ನೇ ಅನುಸರಿಸಿ ಈ ವೇದ-ಮಂತ್ರ ಆ ಇಂದ್ರಿಯಾಭಿಮಾನಿ ದೇವತೆಗಳನ್ನು ಪ್ರಾರ್ಥಿಸುವ ಕ್ರಮವನ್ನು ತೋರಿಸಿ ಕೊಡುತ್ತದೆ.

(ಮಂತ್ರದ ಭಾವಾರ್ಥ) ಹೇ ಇಂದ್ರಿಯಾಭಿಮಾನಿ ದೇವತೆಗಳಿರಾ ಮತ್ತು ತನ್ನಿ-ಯಾಮಕನಾದ ಶ್ರೀಹರಿಯೇ! ನೀವೆಲ್ಲರೂ ವಿಷ್ಣುಭಕ್ತರನ್ನು ಸಂರಕ್ಷಿಸುವುದರಲ್ಲೇ ನಿರತರಾಗಿದ್ದೀರಿ. ಆದಕಾರಣ ನಾವು ಬೆಳಗಿನಿಂದ ಸಂಜೆಯುವರೆಗೂ ಕಿವಿಗಳಿಂದ ಕೇಳಬಾರದ್ದು ಕೇಳಲು ಯೋಗ್ಯವಾದದ್ದು ಏನೇನು ಶ್ರವಣ ಮಾಡಿದ್ದೇವೋ ಅದರಲ್ಲಿ ಶ್ರವಣ ಮಾಡ-ಬಾರದ ಅಂಶಗಳ ದೋಷವನ್ನು ಪರಿಹರಿಸಿ, ಹೇ ಶ್ರವಣೇಂದ್ರಿಯನಿಯಾಮಕರಾದ ದಿಗ್ದೇವತೆಗಳಿರಾ ಮತ್ತು ತನ್ನಿಯಾಮಕನಾದ ಮುಖ್ಯಪ್ರಾಣನ ಅಂತರ್ಗತನಾದ ಶ್ರೀ ಪರಮಾತ್ಮನೇ, ಶ್ರವಣ ಮಾಡಿದ ಸಕಲವೂ ವಿಷ್ಣುಪ್ರೀತಿಕರವಾಗುವಂತೆ ತತ್ಸೇವಾ ರೂಪವೇ ಆಗಲಿ. ಹೇ ಚಕ್ಷುರಭಿಮಾನಿ ಸೂರ್ಯನೇ, ತದಂತರ್ಗತ ಮುಖ್ಯಪ್ರಾಣನೇ ಮತ್ತು ತನ್ನಿಯಾಮಕನಾದ ಹೃಷೀಕೇಶನೇ, ನಾನು ಕಣ್ಣಿಂದ ನೋಡಬಾರದ ಅಯೋಗ್ಯ ವಿಷಯಗಳ ದೋಷವನ್ನು ಪರಿಹರಿಸಿ ನನ್ನ ಚಕ್ಷುರಿಂದ್ರಿಯವು ಶ್ರೀವಿಷ್ಣುರೂಪದರ್ಶನಾದಿಗಳಲ್ಲೇ ನಿರತವಾಗುವಂತೆ ಅನುಗ್ರಹಿಸಿರಿ. ಹೀಗೆಯೇ ಸಕಲೇಂದ್ರಿಯಗಳಿಂದಲೂ ಮಾಡುವ ಸಕಲ ವಿಷಯಗ್ರಹಣವೂ ಶ್ರೀವಿಷ್ಣುಸೇವಾರೂಪವಾಗಿ ಆಗುವಂತೆ ನಮ್ಮ ಜೀವನಪರ್ಯಂತ ಅನುಗ್ರಹಿಸಿರೆಂದು ಭಾವ

IV ಶಂ ನೋ ದೇವೀ

ಈ ಮಂತ್ರವು ಋಗ್ವೇದ ಹತ್ತನೇ ಮಂಡಲದ ಒಂಬತ್ತನೇ ಸೂಕ್ತದಲ್ಲಿ ನಾಲ್ಕನೇ ಮಂತ್ರವಾಗಿ ಏಳನೇ ಅಷ್ಟಕದ ಆರನೇ ಅಧ್ಯಾಯದ ಐದನೇ ವರ್ಗದಲ್ಲಿ ಪಠಿತವಾಗಿದೆ. ಮತ್ತು ತೈತ್ತಿರೀಯ ಬ್ರಾಹ್ಮಣದಲ್ಲಿ ಪ್ರಥಮಾಷ್ಟಕ ಎರಡನೇ ಪ್ರಶ್ನೆಯ ಒಂದನೇ ಅನು-ವಾಕದಲ್ಲಿ ನಾಲ್ಕನೇ ಮಂತ್ರವಾಗಿಯೂ ಪುನಃ ಎರಡನೇ ಅಷ್ಟಕದ ಐದನೇ ಪ್ರಶ್ನೆಯ

ಎಂಟನೇ ಅನುವಾಕದಲ್ಲಿ ಐದನೇ ಮಂತ್ರವಾಗಿಯೂ ಹಾಗೆಯೇ ತೈತ್ತಿರೀಯಾರಣ್ಯಕದ ನಾಲ್ಕನೇ ಪ್ರಶ್ನೆಯ ೪೨ನೇ ಅನುವಾಕದಲ್ಲಿ ನಾಲ್ಕನೇ ಮಂತ್ರವಾಗಿಯೂ ಪಠಿತವಾಗಿದೆ. ಇದಕ್ಕೆ ಸಾಯಣಭಾಷ್ಯವೂ ಭಟ್ಟಭಾಸ್ಕರಭಾಷ್ಯವೂ ಇರುವುದಲ್ಲದೆ ಋಗ್ವೇದಿ ಸಂಧ್ಯಾಭಾಷ್ಯದಲ್ಲಿ (ಮಾಧ್ವಪರವಾದ) ಅರ್ಥವೂ ಉಪಲಭ್ಯವಾಗಿದೆ.

ಋಗ್ವೇದ ಪಾಠ

ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ।

ಶಂ ಯೋರಭಿ ಸ್ರವಂತು ನಃ ॥

ಯಜುರ್ವೇದಪಾಠವೂ ಹೀಗೆಯೇ ಇದೆ.

ಋಷ್ಯಾದಿಗಳು— ಶಂ ನೋ ದೇವೀರಿತಿ ಮಂತ್ರಸ್ಯ ಸಿಂಧುದ್ವೀಪೋಽಂಬರೀಷೋ ವಾ ಋಷಿಃ। ಆಪೋ ದೇವತಾಃ। ಗಾಯತ್ರೀ ಛಂದಃ। ವಿಷ್ಣೋಃ ರತಿಹಸ್ತೇನ ಆಚಮನದಾನೇ ವಿನಿಯೋಗಃ॥ (ಎರಡನೇ ಸಲ ಪುನರಾಚಮನ ಕೊಡುವಾಗಲೂ ಈ ಮಂತ್ರವನ್ನೇ ಪಠಿಸಬೇಕು. ಆಗ ವಿನಿಯೋಗವನ್ನು ಹೀಗೆ ಹೇಳಬೇಕು— ಶಾಂತಿಹಸ್ತೇನ ವಿಷ್ಣೋಃ ಪುನರಾಚಮನದಾನೇ ವಿನಿಯೋಗಃ।)

ಸಾಯಣ ಮತ್ತು ಭಟ್ಟಭಾಸ್ಕರ ರೀತ್ಯಾ ಅರ್ಥ— ದೇವೀಃ ಆಪಃ-ನೀರಿನ ದೇವತೆಗಳು; ನಃ-ನಮಗೆ; ಶಂ-ಪಾಪ ಪರಿಹಾರ ಮಾಡುವುದರ ಮೂಲಕ ಸುಖಕರವಾಗಿ; ಭವಂತು-ಆಗಲಿ. ಅಭಿಷ್ಟಯೇ-(ಭ.) ಅಭೀಷ್ಟಾರ್ಥಸಿದ್ಧಿಗಾಗಿ, (ಸಾ.) ನಮ್ಮ ಯಜ್ಞಸಾಧನೆಯಾಗಿಯೂ; ಪೀತಯೇ-ಪಾನಕ್ಕಾಗಿಯೂ (ಕುಡಿಯುವುದಕ್ಕೂ); ಭವಂತು-ಆಗಲಿ. ಹಾಗೆಯೇ, ಶಂ-ಉತ್ಪನ್ನವಾದ ರೋಗಗಳಿಗೆ ಶಮನರೂಪವೂ; ಯೋಃ-(ಬರಲಿರುವ ರೋಗಾದ್ಯನಿಷ್ಟಗಳಿಗೆ) ತಡೆಯೂ (ಅಡ್ಡಿಯೂ); ಭವಂತು-ಆಗಲಿ. ಮತ್ತು ನಃ ಅಭಿ-ನಮ್ಮ ಮೇಲೆ; ಸ್ರವಂತು-ಪ್ರೋಕ್ಷಿಸಿರಿ.

ಭಾವಾರ್ಥ— ನಾವು ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುತ್ತೇವೆ. ಇದರಿಂದ ನೀರಿನ ದೇವತೆಗಳು ನಮ್ಮ ಪಾಪವನ್ನು ಪರಿಹಾರ ಮಾಡಿ ಸುಖ ಕೊಟ್ಟು ನಮ್ಮ ಇಷ್ಟಾರ್ಥವನ್ನು ನಡೆಸಿಕೊಡಲಿ. ನೀರು ಕುಡಿಯುವುದಕ್ಕೂ ಉಪಯೋಗವಾಗುತ್ತದೆ. ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುವುದರಿಂದ ಈಗ ನಮಗೆ ಬಂದಿರುವ ರೋಗಾದ್ಯುಪದ್ರವಗಳು ಪರಿಹಾರವಾಗುವಂತೆ ಅನುಗ್ರಹಿಸುವುದಲ್ಲದೆ ಮುಂದೆ ಇಂಥಾ ರೋಗಾದ್ಯುಪದ್ರವಗಳು ಬರದಂತೆ ತಡೆಗಟ್ಟಿರಿ.

ಋಗ್ವೇದ ಸಂಧ್ಯಾಭಾಷ್ಯೋಕ್ತ ಅರ್ಥ— ದೇವೀಃ-ಶ್ರೀಭೂದುರ್ಗಾದಿರೂಪವಿಶಿಷ್ಟವಾದ; ಆಪಃ-ಅಬಭಿಮಾನಿದೇವತೆಗಳೂ ತದಂತರ್ಗತರಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ಸಕಲವನ್ನೂ ಸಂರಕ್ಷಿಸುವುದರಿಂದಲೂ, ಸಕಲವನ್ನೂ ಸಂಹರಿಸುವುದರಿಂದಲೂ ಅಪ್‌ನಾಮಕನಾದ ಶ್ರೀಹರಿಯೂ; ನಃ-ನಮಗೆ; ಅಭಿಷ್ಟಯೇ-ಅಭೀಷ್ಟಸಿದ್ಧಿಗಾಗಿಯೂ; ಪೀತಯೇ-ಪಾನಕ್ಕಾಗಿಯೂ; ಶಂ-ಸುಖವಾಗಿ, ಭವಂತು-ಆಗಲಿ. ಶಂ-ಸುಖವನ್ನೂ; ಯೋಃ-ರೋಗನಾಶವನ್ನೂ; ನಃ-ನಮಗೆ; ಸ್ರವಂತು-ಕೊಡುವ ನಾಗಲಿ.

ತಾತ್ಪರ್ಯ— ಅಬಭಿಮಾನಿದೇವತೆಗಳೂ ತನ್ನಿಯಾಮಕರಾದ ಮುಖ್ಯಪ್ರಾಣದೇವರೂ ತದಂತರ್ಗತನಾದ ಶ್ರೀಮನ್ನಾರಾಯಣನೂ ನಮ್ಮ ಇಷ್ಟಪ್ರದರೂ ನಮ್ಮ ಪ್ರಾರಬ್ಧಕರ್ಮಾದಿಗಳನ್ನು ಭೋಗಿಸಿ ಕಳೆದುಕೊಳ್ಳುವುದಕ್ಕೆ ಅನುಕೂಲರೂ ಆಗಲಿ. ಹಾಗೆಯೇ ನಮಗೆ ರೋಗಾದ್ಯುಪದ್ರವಗಳು ಬರದಂತೆ ತಡೆಗಟ್ಟಿ ನಮಗೆ ಸೌಖ್ಯವುಂಟಾಗುವಂತೆ ಅನುಗ್ರಹ ಮಾಡಲಿ ಎಂದು ತಾತ್ಪರ್ಯ.

ಪಂಚಾಮೃತಾಭಿಷೇಕದ ಮಂತ್ರಗಳ ಅರ್ಥ

V ಆಪ್ಯಾಯಸ್ವ ಎಂಬ ಕ್ಷೀರಾಭಿಷೇಕ ಮಂತ್ರ

ಋಗ್ವೇದಪಾಠ (ಯಜುರ್ವೇದಪಾಠ)

ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಮ್ ।
ಭವಾ ವಾಜಸ್ಯ ಸಂಗಥೇ ॥

ಈ ಮಂತ್ರವು ಋಗ್ವೇದ ಪ್ರಥಮ ಮಂಡಲದ ೯೧ನೇ ಸೂಕ್ತದಲ್ಲಿ ೧೬ನೇ ಮಂತ್ರವಾಗಿ ಪ್ರಥಮಾಷ್ಟಕದ ಆರನೇ ಅಧ್ಯಾಯದಲ್ಲಿ ೨೨ನೇ ವರ್ಗದಲ್ಲೂ, ಪುನಃ ಒಂಬತ್ತನೇ ಮಂಡಲದ ೩೧ನೇ ಸೂಕ್ತದ ನಾಲ್ಕನೇ ಮಂತ್ರವಾಗಿ ಆರನೇ ಅಷ್ಟಕದ ಎಂಟನೇ ಅಧ್ಯಾಯ ೨೧ನೇ ವರ್ಗದಲ್ಲೂ ಪಠಿತವಾಗಿದೆ. ತೈತ್ತಿರೀಯಸಂಹಿತೆಯ ತೃತೀಯಕಾಂಡದ ಎರಡನೇ ಪ್ರಶ್ನೆಯ ಐದನೇ ಅನುವಾಕದಲ್ಲಿ ಮೂರನೇ ಮಂತ್ರವಾಗಿಯೂ ಪುನಃ ನಾಲ್ಕನೇ ಕಾಂಡದ ಎರಡನೇ ಪ್ರಶ್ನೆಯ ಏಳನೇ ಪಾಠದಲ್ಲಿ ನಾಲ್ಕನೇ ಮಂತ್ರವಾಗಿಯೂ ಪಠಿತವಾಗಿದೆ. ಇದಕ್ಕೆ ಸಾಯನ ಭಟ್ಟಭಾಸ್ಕರರ ಭಾಷ್ಯಗಳೂ ಇವೆ. ಇದು ಪವಮಾನ ಸೂಕ್ತಗಳಲ್ಲಿ ಬಂದಿರುವುದರಿಂದ ಇದರ ಭಾವಾರ್ಥವು ಪಾಂಗ್ರಿ ತಾತಾಚಾರ್ಯರ ಪವಮಾನ ಸೂಕ್ತಗಳ ಭಾವಾರ್ಥದಲ್ಲೂ ಉಪಲಭ್ಯವಾಗಿದೆ.

ಋಷ್ಯಾದಿಗಳು :— ಆಪ್ಯಾಯಸ್ವೇತ್ಯಸ್ಯ ಗೋತಮಃ ಸೋಮೋ ಗಾಯತ್ರೀ । ಪಯಃಸ್ನಾನೇ ವಿನಿಯೋಗಃ ॥

ಸಾಯಣಭಾಷ್ಯರೀತ್ಯಾ ಅರ್ಥ— ಸೋಮ-ಎಲೈ ಸೋಮಲತಾಭಿಮಾನಿಯಾದ ಚಂದ್ರನೇ! ನೀನು, ಆ ಪ್ಯಾಯಸ್ವ-(ಸಾ. ವಾಯುವಿನಿಂದಲೂ ನೀರಿನಿಂದಲೂ) ಪ್ರವೃದ್ಧನಾಗು (ವೃದ್ಧಿಹೊಂದು ನ.) ಅಥವಾ ತೇ-ನಿನ್ನನ್ನು, ವಿಶ್ವತಃ-ಎಲ್ಲಾ ಕಡೆಯಿಂದಲೂ—ಎಲ್ಲಾ ರೀತಿಯಿಂದಲೂ, ವೃಷ್ಣ್ಯಂ-ಮಳೆಗರೆಯುವ ಬಲವು, ಸಮೇತು-ಸೇರಲಿ (ಸಾ), ತೇ-ನಿನ್ನ, ವೃಷ್ಣ್ಯಂ-ವೀರ್ಯವು ಅಥವಾ ಸಾಮರ್ಥ್ಯವು, ವಿಶ್ವತಃ-ಎಲ್ಲ ಕಡೆಯಿಂದಲೂ, ಸಮೇತು-ಸೇರಿಕೊಳ್ಳಲಿ. (ಇಂಥಾ ನೀನು) ವಾಜಸ್ಯ-ಅನ್ನದ, ಸಂಗಥೇ-ಪ್ರಾಪ್ತಿಯಲ್ಲಿ; ಭವ-ಆಗು; ಅಥವಾ ಸಂಗಥೇ-ಸಂಗ್ರಾಮದಲ್ಲಿ, ವಾಜಸ್ಯ-ಅನ್ನದ ಪ್ರಾಪಕನು, ಭವ-ಆಗು.

ತಾತ್ಪರ್ಯ— ಹೇ ಸೋಮಲತಾಭಿಮಾನಿಯಾದ ಚಂದ್ರನೇ, ನೀನು ನೀರಿನಿಂದಲೂ ಗಾಳಿಯಿಂದಲೂ ವೃದ್ಧಿ ಹೊಂದುವವನಾಗು. ನಿನ್ನ ಸಾಮರ್ಥ್ಯವು ಎಲ್ಲ ರೀತಿಯಿಂದಲೂ ಹೆಚ್ಚಲಿ. ನೀನು ನಮಗೆ ಅನ್ನಾದಿಗಳು ದೊರಕುವಂತೆ ಅನುಗ್ರಹಿಸು ಎಂದು ಭಾವ.

ವಿಶೇಷಾರ್ಥ— ಶ್ರೀಮದ್ವಾದಿರಾಜರು ಯುಕ್ತಿಮಲ್ಲಿಕಾದ ಫಲಸೌರಭದಲ್ಲಿ ಋಗ್-ವೇದದ ಒಂಬತ್ತನೇ ಇಡೀ ಪವಮಾನ ಮಂಡಲವು ವಾಯುದೇವರ ಮಹಿಮಾಪ್ರತಿಪಾದಕವಾಗಿದೆಯೆಂದು ಹೇಳಿದ್ದಾರಲ್ಲದೆ ಸೋಮಶಬ್ದವು ಮುಖ್ಯತಃ ವಾಯುವಾಚಕವೆಂದು ಅನೇಕ ವ್ಯುತ್ಪತ್ತಿ ರೀತ್ಯಾ ತೋರಿಸಿದ್ದಾರೆ. ಅದರಂತೆ ಈ ಮಂತ್ರದಲ್ಲಿರುವ ಸೋಮ ಶಬ್ದವು ಮುಖ್ಯವಾಗಿ ಮುಖ್ಯಪ್ರಾಣವಾಚಕವಾಗಿರುವುದಲ್ಲದೆ ತದಂತರ್ಗತನಾದ ಶ್ರೀವಿಷ್ಣುವನ್ನೂ ಹೇಳುತ್ತದೆ. ಪಾಂಗ್ರಿ ತಾತಾಚಾರ್ಯರು ಸೋಮ (ಚಂದ್ರ) ಮಂಡಲದಲ್ಲಿ ಭಗವಂತ ವ್ಯಾಸ, ಹಂಸ, ರಾಮ, ವಾಮನ, ಧನ್ವಂತರಿ ಮತ್ತು ಹಯ-ಗ್ರೀವಾಖ್ಯ ಆರು ರೂಪಗಳಿಂದ ಸನ್ನಿಹಿತನಾಗಿದ್ದಾನೆಂದು ಹೇಳುತ್ತಾರೆ. ಆದಕಾರಣ ಸೋಮ ಎಂದರೆ ಚಂದ್ರಮಂಡಲಾಂತರ್ಗತರಾದ ಮುಖ್ಯಪ್ರಾಣದೇವರೇ ಮತ್ತು ನಿಮ್ಮಲ್ಲಿ ಸನ್ನಿಹಿತವಾಗಿರುವ ವ್ಯಾಸಹಯಗ್ರೀವಾದಿ ಭಗವದ್ರೂಪಗಳೇ ಎಂದು ಅರ್ಥ. ಆ ಪ್ಯಾಯಸ್ವ-(ಗೋಕ್ಷೀರದಲ್ಲೂ ಸೋಮಲತಾ ರಸದಲ್ಲೂ ಅಮೃತರಸರೂಪಿಯಾಗಿ ನೀನು) ಈ ಕ್ಷೀರಾರ್ಪಣದಿಂದ ವಿಶೇಷವಾಗಿ ಪರಿತೃಪ್ತನಾಗು, ನಮ್ಮನ್ನೂ ಆಪ್ಯಾಯನಾದಿಗಳಿಂದ ತೃಪ್ತಿಪಡಿಸು. ವಿಶ್ವತಃ ಸರ್ವದೇಶಕಾಲಗಳಲ್ಲೂ ಸರ್ವವಿಧದಿಂದಲೂ, ವೃಷ್ಣ್ಯಂ-ಚತುರ್ವಿಧ ಪುರುಷಾರ್ಥಗಳನ್ನು ವೃಷ್ಟಿ ಮಾಡುವ ನಿನ್ನ ಕಾರುಣ್ಯವು, ಸಮೇತು-ಈಗ ಪುನಃ ಪೂರ್ಣವಾಗಿ ಅಭಿವೃದ್ಧಿ ಹೊಂದಿ ಅಭಿವ್ಯಕ್ತವಾಗಲಿ. ಸಂಗಥೇ-ಜ್ಞಾನಾಜ್ಞಾನ ಅಂತರ್ಬಾಹ್ಯಯುದ್ಧದಲ್ಲಿ, ವಾಜಸ್ಯ-ಶತ್ರುಜಯಬಲಾನ್ನಾದಿ ಭೋಗಪ್ರದನಾಗಿ, ಭವ-ಅಭಿವ್ಯಕ್ತನಾಗು.

ಭಾವಾರ್ಥ— ಸೋಮರಸಕ್ಕೂ ಗೋಕ್ಷೀರಕ್ಕೂ ಅಭಿಮಾನಿಯಾದ ಚಂದ್ರನಲ್ಲಿ ಮುಖ್ಯಪ್ರಾಣದೇವರು ಸೋಮನಾಮಕರಾಗಿ ಸನ್ನಿಹಿತರಾಗಿದ್ದಾರೆ. ಅವರಲ್ಲಿ ಪರಮಾತ್ಮನು ವ್ಯಾಸ-ಹಂಸ-ರಾಮ-ವಾಮನ-ಧನ್ವಂತರಿ ಹಯಗ್ರೀವಾಖ್ಯ ಷಡ್ರೂಪಗಳಿಂದ ಸನ್ನಿಹಿತನಾಗಿದ್ದಾನೆ. ಈ ಭಗವದ್ರೂಪಗಳು ಸದಾ ಆನಂದಮಯವಾಗಿದ್ದರೂ ಈಗ ನಾವು ಮಾಡುತ್ತಿರುವ ಕ್ಷೀರಾಭಿಷೇಕದಿಂದಲೂ ಮಂತ್ರಪಾಠದಿಂದಲೂ ಭಕ್ತಿಶ್ರದ್ಧಾದರಗಳಿಂದಲೂ ವಿಶೇಷವಾಗಿ ಪ್ರಸನ್ನನಾಗಿ ನಮ್ಮ ಕರ್ಮಕ್ಕೆ ಅನಂತ ಪುಣ್ಯಫಲ ಕೊಟ್ಟು ನಮ್ಮನ್ನು ತೃಪ್ತಿಪಡಿಸಲಿ. ಅವನ ಕಾರುಣ್ಯವು ನಿತ್ಯಪರಿಪೂರ್ಣವಾಗಿದ್ದರೂ ಈಗ ನಮಗೆ ಅನುಗ್ರಹೋನ್ಮುಖವಾಗಿ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಡಲಿ. ನಮ್ಮ ಜ್ಞಾನಾಜ್ಞಾನ ಹಾಗೂ ಅಂತರ್ಬಾಹ್ಯ ಯುದ್ಧದಲ್ಲಿ ಅವನ ಕಾರುಣ್ಯವು ನಮಗೆ ಶತ್ರುಜಯ ಬಲಾನ್ನಾದಿ ಭೋಗಭಾಗ್ಯಪ್ರದವಾಗಲಿ ಎಂದರ್ಥ.

ದಧಿಕ್ರಾವ್ಣಃ—ಎಂಬ ದಧ್ಯಭಿಷೇಕಮಂತ್ರಾರ್ಥ. ಈ ಮಂತ್ರವು ಋಕ್‌ಸಂಹಿತೆಯ ನಾಲ್ಕನೇ ಮಂಡಲದಲ್ಲಿ ೩೯ನೇ ಸೂಕ್ತದ ಆರನೇ ಮಂತ್ರವಾಗಿ ತೃತೀಯಾಷ್ಟಕದ ಸಪ್ತಮಾಧ್ಯಾಯದ ೧೩ನೇ ವರ್ಗದಲ್ಲಿ ಪಠಿತವಾಗಿದೆ. ತೈತ್ತಿರೀಯ ಸಂಹಿತೆಯ ಪ್ರಥಮ ಕಾಂಡದಲ್ಲಿ ಐದನೇ ಪ್ರಶ್ನೆಯ ಹನ್ನೊಂದನೇ ಅನುವಾಕದಲ್ಲಿ ನಾಲ್ಕನೇ ಮಂತ್ರವಾಗಿಯೂ ಪುನಃ ಏಳನೇ ಕಾಂಡದಲ್ಲಿ ನಾಲ್ಕನೇ ಪ್ರಶ್ನೆಯ ಹತ್ತೊಂಬತ್ತನೇ ಅನುವಾಕದಲ್ಲಿಯೂ ನಾಲ್ಕನೇ ಮಂತ್ರವಾಗಿ ಪಠಿತವಾಗಿದೆ. ಆದಕಾರಣ ಇದಕ್ಕೆ ಸಾಯಣ ಭಟ್ಟಭಾಸ್ಕರ ಎರಡು ಭಾಷ್ಯಗಳೂ ಇವೆ. ಇನ್ನು ಯಜುರ್ವೇದ ಸಂಧ್ಯಾಭಾಷ್ಯದಲ್ಲಿ ಮಾಧ್ವರೀತ್ಯಾ ಅರ್ಥ ಉಪಲಭ್ಯವಾಗಿದೆ.

ಋಗ್ವೇದಪಾಠ

ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ ।

ಸುರಭಿ ನೋ ಮುಖಾ ಕರತ್ ಪ್ರ ಣ ಆಯೂಂಷಿ ತಾರಿಷತ್ ॥

ಯಜುರ್ವೇದದಲ್ಲಿ 'ಪ್ರಣ ಆಯೂಗ್ಂಷಿ ತಾರಿಷತ್' ಎಂದು ಪಾಠ.

ದಧಿಕ್ರಾವ್ಣಃ ಎಂದು ಪದಚ್ಛೇದವಾಗುತ್ತದೆ. ಇದು ನಕಾರಾಂತ ಕ್ರಾವಾ (ಕ್ರಾವನ್) ಶಬ್ದದ ಷಷ್ಠೀ ಏಕವಚನರೂಪ. ಅನೇಕರು ಸರಿಯಾಗಿ ತಿಳಿದುಕೊಳ್ಳದೆ 'ದಧಿಕಾ ವರುಣೋ' ಎಂದು ಅಶುದ್ಧವಾಗಿ ಹೇಳುವುದೂ ಉಂಟು. ಪ್ರ ಣ ಆಯೂಂಷಿ ಎಂಬಲ್ಲಿ ಪ್ರ ನಃ ಆಯೂಂಷಿ ಎಂದು ಪದಚ್ಛೇದ. ಪ್ರ ಉಪಸರ್ಗವನ್ನು ತಾರಿಷತ್ ಜೊತೆ ಸೇರಿಸಿ ಅರ್ಥ ಹೇಳಬೇಕು.

ಋಷ್ಯಾದಿ ವಿಚಾರ— ದಧಿಕ್ರಾವ್ಣ ಇತ್ಯಸ್ಯ ಮಂತ್ರಸ್ಯ ವಾಮದೇವೋ ದಧ್ಯನುಷ್ಟುಪ್ । ದಧಿಸ್ನಾನೇ ವಿನಿಯೋಗಃ ॥

ಸಾಯಣಭಾಷ್ಯಾರ್ಥ — ದಧಿಕ್ರಾವ್ಣಃ-ಭಗವಂತನ, ಅಕಾರಿಷಂ-ಸ್ತೋತ್ರವನ್ನು ಮಾಡುತ್ತೇನೆ. ಜಿಷ್ಣೋಃ-ಜಯಶೀಲನಾದ, ಅಶ್ವಸ್ಯ-ಸರ್ವವ್ಯಾಪಕನಾದ, ವಾಜಿನಃ-ವೇಗವಾಗಿ ಚಲಿಸುವ ಆ ದೇವನು, ನಃ-ನಮ್ಮ, ಮುಖಾ-ಮುಖಗಳನ್ನು, (ಲಕ್ಷಣಾ-ವೃತ್ತಿಯಿಂದ ಚಕ್ಷುರಾದಿ ಸಕಲೇಂದ್ರಿಯಗಳನ್ನು), ಸುರಭಿ-ಸುಗಂಧಮಯವಾಗುವಂತೆ ಕರತ್-ಮಾಡಲಿ. ಮತ್ತು ನಃ-ನಮ್ಮ, ಆಯೂಂಷಿ-ಆಯುಸ್ಸನ್ನೂ, ಪ್ರ ತಾರಿಷತ್-ಹೆಚ್ಚಿಸಲಿ.

ಭಾವಾರ್ಥ— ನಾನು ಭಗವಂತನನ್ನು ಸ್ತುತಿಸುತ್ತೇನೆ. ಜಯಶೀಲನೂ ಸರ್ವವ್ಯಾಪಕನೂ ಆದ ಆ ಭಗವಂತ ನಮ್ಮ ಚಕ್ಷುಃಶ್ರೋತ್ರೇಂದ್ರಿಯಾದಿಗಳು ಸುಗಂಧ-ಮಯವಾಗುವಂತೆ ಮಾಡಲಿ — ದುರ್ಗಂಧ ಬರದಂತೆ ತಡೆಯಲಿ. ನಮ್ಮ ಆಯುಸ್ಸನ್ನೂ ಹೆಚ್ಚಿಸಲಿ.

ಯಜುರ್ವೇದ ಸಂಧ್ಯಾಭಾಷ್ಯರೀತ್ಯಾ ಅರ್ಥ— ಜಿಷ್ಣೋಃ-ಜಯಶೀಲನಾದ, ಅಶ್ವಸ್ಯ-ಸರ್ವವ್ಯಾಪಿಯಾದ, ವಾಜಿನಃ-ಅತಿ ಶೀಘ್ರವಾಗಿ ಭಕ್ತರನ್ನು ಸಂರಕ್ಷಿಸುವಂಥಾ, ದಧಿಕ್ರಾವ್ಣಃ-ಜಗದ್ಧಾರಕನಾದ ಭಗವಂತನ ಸ್ತೋತ್ರವನು, ಅಕಾರಿಷಂ ನಾನು ಮಾಡುತ್ತೇನೆ. ಆ ಭಗವಂತನು, ನಃ-ನಮ್ಮ, ಮುಖಾ-ಮುಖೋಪಲಕ್ಷಿತ ಚಕ್ಷುರಾದೀಂದ್ರಿಯಗಳನ್ನು, ಸುರಭಿ-ಪರಿಶುದ್ಧವಾಗಿ, ಕರತ್-ಮಾಡಲಿ. ಮತ್ತು ನಃ-ನಮ್ಮ, ಆಯೂಂಷಿ-ಮಾಡಲ್ಪಟ್ಟ ಸಕಲ ಕರ್ಮಗಳನ್ನೂ (ಎದ್ದಾರಭ್ಯ ಮಲಗುವವರೆಗೆ ಮಾಡಿದ ಸಕಲ ಕರ್ಮಗಳನ್ನೂ), ಪ್ರ ತಾರಿಷತ್-ಭಗವತ್ಸೇವಾರೂಪವಾಗಿ ವಿಷ್ಣುಪ್ರೀತಿಕರವಾಗುವಂತೆ ಅನುಗ್ರಹಿಸಲಿ.

ತಾತ್ಪರ್ಯ—ನಮ್ಮ ಬಿಂಬರೂಪಿ ಪರಮಾತ್ಮ ನಮ್ಮಲ್ಲಿ ಇದ್ದು ಬಿಂಬಕ್ರಿಯೆಯಿಂದ ಪ್ರತಿಬಿಂಬಕ್ರಿಯೆಯಂತೆ ನಮ್ಮ ಸಕಲ ಕ್ರಿಯೆಗಳನ್ನೂ ಇಂದ್ರಿಯಾಭಿಮಾನಿಗಳ ದ್ವಾರಾ ನಮ್ಮಿಂದ ಮಾಡಿ—ಮಾಡಿಸುತ್ತಾನೆ ಎಂದು ನಾವು ಶ್ರೀವಿಷ್ಣುವನ್ನು ಸ್ತುತಿಸುತ್ತೇವೆ. ಆ ವಿಷ್ಣು ಸರ್ವತೋತ್ರಸ್ವತಂತ್ರನೂ ವಿಶ್ವವ್ಯಾಪಕನೂ ಆಗಿ ಸಕಲ ಜಗದ್ವ್ಯಾಪಾರವನ್ನೂ ಮಾಡುತ್ತಾನೆ. ಹೀಗೆ ಅವನ ಪ್ರೇರಣೆಯಿಂದಲೇ ನಾವು ಸಕಲ ವ್ಯಾಪಾರಗಳನ್ನೂ ಮಾಡುವುದರಿಂದ ನಮ್ಮ ಸಕಲ ವ್ಯಾಪಾರವೂ ಭಗವತ್ಸೇವಾರೂಪವಾಗಿ ಪರಿಶುದ್ಧವಾಗುವಂತೆ ಆ ಭಗವಂತನೇ ಮಾಡಲಿ. ನಾನು ಪ್ರಾತಃಪ್ರಭೃತಿ ಪುನಃ ಪ್ರಾತಃಪರ್ಯಂತ ಮಾಡಿದ ಸಕಲ ಕಾರ್ಯಗಳನ್ನೂ ಅವನಲ್ಲೇ ನಮ್ಮ ಪ್ರಾಣಧಾರಕರಾದ ಮುಖ್ಯಪ್ರಾಣನ ದ್ವಾರಾ ಸಮರ್ಪಿಸು. ಅವೆಲ್ಲವೂ ಆ ಶ್ರೀಹರಿಯ ಸೇವಾರೂಪವೇ ಆಗುವಂತೆ ಆ ಭಗವಂತನು ಅನುಗ್ರಹ ಮಾಡಲಿ.

VII ಘೃತಂ ಮಿಮಿಕ್ಷೇ ಎಂಬ ಮಂತ್ರಾರ್ಥ. ಈ ಮಂತ್ರವು ಋಕ್ ಸಂಹಿತೆಯ ಎರಡನೇ ಮಂಡಲದ ಮೂರನೇ ಸೂಕ್ತದಲ್ಲಿ ೧೧ನೇ ಮಂತ್ರವಾಗಿ ಎರಡನೇ ಅಷ್ಟಕದ ಐದನೇ ಅಧ್ಯಾಯದ ೨೩ನೇ ವರ್ಗದಲ್ಲಿ ಪಠಿತವಾಗಿದೆ. ಹಾಗೆಯೇ ತೈತ್ತಿರೀಯಾರಣ್ಯಕದಲ್ಲಿ ಹತ್ತನೇ ಪ್ರಶ್ನೆಯಲ್ಲಿ (ಎಂದರೆ ಮಹಾನಾರಾಯಣೋಪನಿಷತ್ತಿನಲ್ಲಿ) ಹನ್ನೆರಡನೇ ಅನುವಾಕದಲ್ಲಿ ಏಳನೇ ಮಂತ್ರವಾಗಿಯೂ ಪಠಿತವಾಗಿದೆ.

ಈ ಮಂತ್ರಕ್ಕೆ ಋಗ್ವೇದಸಾಯಣಭಾಷ್ಯದಲ್ಲೂ ತೈತ್ತಿರೀಯಾರಣ್ಯಕದ ಭಟ್ಟಭಾಸ್ಕರ ಭಾಷ್ಯದಲ್ಲೂ ಧೀರೇಂದ್ರತೀರ್ಥರ ಮತ್ತು ರಾಘವೇಂದ್ರಾಚಾರ್ಯರ ಮಹಾನಾರಾಯಣೋಪನಿಷದ್ವ್ಯಾಖ್ಯಾನಗಳಲ್ಲೂ ಅರ್ಥ ಸಿಗುತ್ತದೆ.

ಋಗ್ವೇದ ಪಾಠ

ಘೃತಂ ಮಿಮಿಕ್ಷೇ ಘೃತಮಸ್ಯ ಯೋನಿರ್-

ಘೃತೇ ಶ್ರಿತೋ ಘೃತಮ್ವಸ್ಯ ಧಾಮ ।

ಅನುಷ್ವಧಮಾ ವಹ ಮಾದಯಸ್ವ

ಸ್ವಾಹಾಕೃತಂ ವೃಷಭ ವಕ್ಷಿ ಹವ್ಯಮ್ ॥

ತೈತ್ತಿರೀಯ ಪಾಠ

ಘೃತಂ ಮಿಮಿಕ್ಷಿರೇ ಘೃತಮಸ್ಯ ಯೋನಿರ್-

ಘೃತೇ ಶ್ರಿತೋ ಘೃತಮುವಸ್ಯ ಧಾಮ ।

ಅನುಷ್ವಧಮಾ ವಹ ಮಾದಯಸ್ವ

ಸ್ವಾಹಾಕೃತಂ ವೃಷಭ ವಕ್ಷಿ ಹವ್ಯಮ್ ॥

ಸೂಚನೆ— ಘೃತಮ್ವಸ್ಯ (ಘೃತಮುವಸ್ಯ) ಎಂಬಲ್ಲಿ ಘೃತಂ, ಉ, ಅಸ್ಯ ಎಂದು ಪದಚ್ಛೇದ.

ಋಷ್ಯಾದಿಗಳು— ಘೃತಮಿತ್ಯಸ್ಯ ಮಂತ್ರಸ್ಯ ಗೃತ್ಸಮದ ಋಷಿಃ। ಅಗ್ನಿರ್ದೇವತಾ। ತ್ರಿಷ್ಟುಪ್ ಛಂದಃ। ಘೃತಾಭಿಷೇಕೇ ವಿನಿಯೋಗಃ॥

ಸಾಯಣಾರ್ಥ—(ಈ ಅಗ್ನಿಗೆ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.) ಘೃತಂ-ತುಪ್ಪವನ್ನು (ಆಜ್ಯವನ್ನು), ಮಿಮಿಕ್ಷೆ(-ಕ್ಷರೇ)-ಸುರಿಯುತ್ತೇನೆ (ಹೋಮದಲ್ಲಿ ಹಾಕುತ್ತೇನೆ). ಅಸ್ಯ-ಇವನಿಗೆ (ಅಗ್ನಿಗೆ), ಘೃತಂ-ತುಪ್ಪವೇ, ಯೋನಿಃ-ಕಾರಣ, ಘೃತೇ-ತುಪ್ಪದಲ್ಲಿಯೇ (ಆ ಅಗ್ನಿಯು), ಶ್ರಿತಃ-ಆಶ್ರಿತನಾಗಿದ್ದಾನೆ. ಅಸ್ಯ-ಇವನಿಗೆ, ಘೃತಂ ಉ-ತುಪ್ಪವೇ, ಧಾಮ-ತೇಜಸ್ಸು (ತುಪ್ಪದಿಂದ ಅಗ್ನಿಯು ಪ್ರಜ್ವಲಿಸುತ್ತದೆಯಲ್ಲವೇ !) (ಅಗ್ನೇ-ಎಲೈ ಅಗ್ನಿಯೇ), ವೃಷಭ-ಕರ್ಮಫಲವನ್ನು ಸುರಿಸುವವನೇ ! ಸ್ವಾಹಾಕೃತಂ ಹವ್ಯಂ-ಯಜ್ಞಯಾಗಾದಿಗಳಲ್ಲಿ ಮಂತ್ರಪುರಸ್ಸರವಾಗಿ ಸ್ವಾಹಾ ಸ್ವಾಹಾ ಎಂದು ಹೇಳುತ್ತಾ ಅರ್ಪಿಸಿದ ಚರು ಪುರೋಡಾಶಾದಿ ಸಕಲ ಹವಿಸ್ಸನ್ನೂ, ಆ ವಹ-ಒಯ್ದು ಆಯಾ ದೇವತೆಗಳಿಗೆ ಮುಟ್ಟಿಸು. ವಕ್ಷಿ-ಒಯ್ದು ಮುಟ್ಟಿಸಿ ಆ ದೇವತೆಗಳನ್ನು, ಮಾದಯಸ್ವ-ತೃಪ್ತಿಗೊಳಿಸು.

ಭಟ್ಟ ಭಾಸ್ಕರಾರ್ಥ— ಈ ಮಂತ್ರವು ಅಗ್ನ್ಯಾತ್ಮನಾದ ಭಗವಂತನ ಸ್ತುತಿರೂಪವಾಗಿದೆ. ಘೃತಂ-ತುಪ್ಪವು, (ಈ ಅಗ್ನಿಯಿಂದ) ಮಿಮಿಕ್ಷೇ-ಸುರಿಯಲ್ಪಡುತ್ತದೆ ಅಥವಾ ಯಾಗರೂಪವಾಗಿ ಉತ್ಪತ್ತಿ ಮಾಡಲ್ಪಡುತ್ತದೆ. ಅಸ್ಯ-ಈ ಅಗ್ನಿಗೆ, ಘೃತಂ-ತುಪ್ಪವೇ, ಯೋನಿಃ-ಕಾರಣವು. ಘೃತೇ-ತುಪ್ಪದಲ್ಲಿ, ಶ್ರಿತಃ-ಅವನಿಗೆ ಪ್ರಿಯವಾದ್ದರಿಂದ ಆಶ್ರಿತನಾಗಿದ್ದಾನೆ. ಘೃತಂ ಉ-ತುಪ್ಪವೇ, ಅಸ್ಯ ಇವನಿಗೆ (ಅಗ್ನಿಗೆ), ಧಾಮ-ಸ್ಥಾನವು ಅಥವಾ ವಿಶ್ರಮಸ್ಥಾನ. (ಅಗ್ನೇ-ಎಲೈ ಅಗ್ನಿಯೇ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.) ಅನುಷ್ವಧಂ-ಮಂತ್ರಪೂತವಾಗಿ ಒಂದೊಂದಾಗಿ ಅರ್ಪಿಸುವ ಆಹುತಿಯನ್ನು, ಆ ವಹ-ಸ್ವೀಕರಿಸಿ ತೆಗೆದುಕೋ. ಮಾದಯಸ್ವ-ಆ ಹವಿಸ್ಸಿನಿಂದ ಸಂತೃಪ್ತನಾಗು. ವೃಷಭ-ಹೇ ಅಗ್ನ್ಯಾತ್ಮನಾದ ದೇವಶ್ರೇಷ್ಠನೇ! ಸ್ವಾಹಾಕೃತಂ-ಸ್ವಾಹಾಕಾರರೂಪವಾಗಿ ಕೊಡಲ್ಪಟ್ಟ ಹವಿಸ್ಸನ್ನು, ವಕ್ಷಿ-ತೆಗೆದುಕೋ (ಸ್ವೀಕಾರಮಾಡು) ಮತ್ತು ತೃಪ್ತಿ ಹೊಂದುವನಾಗು. ನೀನು ತೃಪ್ತನಾದರೆ ಸಕಲರೂ ತೃಪ್ತರಾದಂತೆ.

ಭಾವಾರ್ಥ— ಹೇ ಅಗ್ನಿಯೇ, ನಿನ್ನಲ್ಲಿ ಇಂದ್ರಾದಿ ದೇವತೆಗಳನ್ನು ಉದ್ದೇಶಿಸಿ (ಇಂದ್ರಾಯ ಸ್ವಾಹಾ, ವರುಣಾಯ ಸ್ವಾಹಾ ಎಂದು ಹೇಳುತ್ತಾ) ಆಜ್ಯವನ್ನು ಸಮರ್ಪಿಸುತ್ತಿದ್ದೇನೆ. ಈ ಆಜ್ಯವೇ ಸಕಲ ದೇವತೆಗಳಿಗೆ ತೃಪ್ತಿಗೆ ಕಾರಣವಾಗಿದೆ. ಸಕಲ ದೇವತೆಗಳ ಅನುಗ್ರಹವೂ ಈ ಹೋಮಿಸಲ್ಪಟ್ಟ ಆಜ್ಯವನ್ನೇ ಆಶ್ರಯಿಸಿದೆ. ತುಪ್ಪದಿಂದ ಅಗ್ನಿಯ ತೇಜಸ್ಸು (ಪ್ರಕಾಶವು) ಹೆಚ್ಚುತ್ತದೆ. ಹೇ ಅಗ್ನಿಯೇ ನೀನು ಸಕಲ ದೇವತೆಗಳ ತೃಪ್ತಿಗೆ ಮೂಲವಾಗಿ ಅವರ ಅನುಗ್ರಹವನ್ನು ನಮಗೆ ಕೊಡಿಸುವಿ. ಆದಕಾರಣ ನಾವು

ಸ್ವಾಹಾಕಾರರೂಪವಾಗಿ ಕೊಡುತ್ತಿರುವ ಈ ಹವಿಸ್ಸನ್ನು ನೀನು ಸ್ವೀಕಾರಮಾಡಿ, ಅದನ್ನು ತೆಗೆದುಕೊಂಡುಹೋಗಿ ಆಯಾ ದೇವತೆಗಳಿಗೆ ಒಪ್ಪಿಸಿ ಅವರೆಲ್ಲರೂ ತೃಪ್ತರಾಗುವಂತೆ ಮಾಡು. ಅದರಿಂದ ಸಕಲರೂ ತೃಪ್ತರಾಗುತ್ತಾರೆ.

ಧೀರೇಂದ್ರರ ಟೀಕಾರ್ಥ— ಘೃ ಕ್ಷರಣದೀಪ್ತ್ಯೋಃ ಎಂದು ಧಾತು ಪಾಠವಿರುವುದರಿಂದ ಘೃತಂ ಎಂದರೆ ಕರಗುವ ತುಪ್ಪ ಎಂದೂ ಪ್ರಜ್ವಲಿಸುವ ಘೃತಾಂತರ್ಗತ ಘೃತನಾಮಕ ಪರಮಾತ್ಮನೆಂದೂ ಅರ್ಥವಾಗುತ್ತದೆ. ಹೋಮ ಮಾಡುವ ಯಾಜಮಾನರು (ಅಥವಾ ಬ್ರಹ್ಮಾದಿ ದೇವತೆಗಳು), ಘೃತಂ-ತುಪ್ಪವನ್ನು (ತದಂತರ್ಗತ ಜ್ಯೋತೀರೂಪನಾದ ಪರಬ್ರಹ್ಮನನ್ನು), ಮಿಮಿಕ್ಷಿರೇ-ಹೋಮಮಾಡಲು (ತಿಳಿದುಕೊಳ್ಳಲು) ಅಪೇಕ್ಷಿಸುತ್ತಾರೆ. ಏಕೆಂದರೆ, ಘೃತಂ-ತುಪ್ಪವೇ (ತದಂತರ್ಗತ ಪರಬ್ರಹ್ಮನೇ), ಅಸ್ಯ-ಈ ಯಜ್ಞಾದ್ಯನುಷ್ಠಾನಗಳಿಗೆ, ಯೋನಿಃ-ಕಾರಣೀಭೂತವಾಗಿದೆ. (ತುಪ್ಪ ಹಾಕಿದರೆ ಅಗ್ನಿ ಪ್ರಜ್ವಲಿಸುವುದು ಎಲ್ಲರಿಗೂ ತಿಳಿದ ವಿಷಯ.) ಅಲ್ಲದೆ ಅಗ್ನಿಯು, ಘೃತೇ-ತುಪ್ಪದಲ್ಲಿ, ಶ್ರಿತಃ-ಆಶ್ರಿತನಾಗಿದ್ದಾನೆ. ಘೃತಂ ಉ-ತುಪ್ಪವೇ, ಅಸ್ಯ-ಇವನಿಗೆ (ಅಗ್ನಿಗೆ-ತದಂತರ್ಗತ ಭಗವಂತನಿಗೆ), ಧಾಮ-ನೆಲೆಯಾಗಿದೆ ಮತ್ತು ತೇಜಸ್ಸಿಗೆ ಕಾರಣವಾಗಿದೆ. (ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್-ಚಂದ್ರನಲ್ಲಿರುವ ಪ್ರಕಾಶವೂ ಅಗ್ನಿಯಲ್ಲಿರುವ ತೇಜಸ್ಸೂ ನನ್ನ ತೇಜಸ್ಸೆಂದೇ ತಿಳಿ ಎಂದು ಗೀತೆಯಲ್ಲಿ ಹೇಳಿದ್ದಾನೆ.) ಅನುಷ್ವಧಂ-(ಅನು + ಸ್ವಧಾ + ಅಂ) ಸ್ವಧಾ ಅಥವಾ ಸ್ವಾಹಾಕಾರಪೂರ್ವಕವಾಗಿ ಅರ್ಪಿಸಿದ ಆಹುತಿಗಳನ್ನು ಅನುಸರಿಸಿ, ಆವಹ-ಆಯಾ ಪಿತೃಗಳಿಗೆ ಅಥವಾ ದೇವತೆಗಳಿಗೆ ತೆಗೆದುಕೊಂಡು ಹೋಗಿ ಅರ್ಪಿಸು. ಮತ್ತು ಮಾದಯಸ್ವ (ಮದೀ ಹರ್ಷೇ ಎಂಬ ಧಾತುವಿನ ರೂಪ) ಈ ಆಹುತಿಗಳನ್ನು ಸ್ವೀಕರಿಸಿ ನೀನೂ ಹರ್ಷಿತನಾಗು, ಹಾಗೂ ಉದ್ದಿಷ್ಟರಾದ ಪಿತೃಗಳನ್ನೂ ದೇವತೆಗಳನ್ನೂ ಸಂತೋಷಪಡಿಸು. ವೃಷಭ-ದೇವಶ್ರೇಷ್ಠನಾದ ಹೇ ಅಗ್ನಿಯೇ! ಸ್ವಾಹಾಕೃತಂ ಹವ್ಯಂ-ಸ್ವಾಹಾಕಾರಪೂರ್ವಕವಾಗಿ ದೇವತೆಗಳನ್ನು ಉದ್ದೇಶಿಸಿ ಕೊಟ್ಟ ಹವ್ಯದ್ರವ್ಯಗಳನ್ನೂ (ಉಪಲಕ್ಷಣಯಾ ಪಿತೃಗಳನ್ನುದ್ದೇಶಿಸಿ ಕೊಟ್ಟ ಕವ್ಯದ್ರವ್ಯಗಳನ್ನೂ), ವಕ್ಷಿ-ನೀನು ಸ್ವೀಕರಿಸಿ ಅವನ್ನು ಉದ್ದಿಷ್ಟರಾದ ದೇವತೆಗಳಿಗೂ ಪಿತೃಗಳಿಗೂ ಮುಟ್ಟಿಸುವವನಾಗು (ಮುಟ್ಟಿಸುವಿ).

ಅಧ್ಯಾತ್ಮಪರವಾದ ಅರ್ಥ— (ಶಾತಾರೀ ರಾಘವೇಂದ್ರಾಚಾರ್ಯರ ಟೀಕಾನುಸಾರ) ಘೃತಂ-ಜ್ಯೋತೀಸ್ವರೂಪನಾದ ಪರಬ್ರಹ್ಮನನ್ನು, ಜ್ಞಾನಿಗಳು, ಶಿಷ್ಯರಲ್ಲಿ, ಮಿಮಿಕ್ಷಿರೇ-ತಿಳಿಸಿಕೊಟ್ಟರು—ಉಪದೇಶಿಸಿದರು. ಏನೆಂದು ಉಪದೇಶಿಸಿದರೆಂದರೆ - ಘೃತಂ-ಜ್ಯೋತೀರೂಪವಾದ ಪರಬ್ರಹ್ಮವೇ (ವಿಷ್ಣುವೇ), ಅಸ್ಯ-ಪರಿದೃಶ್ಯಮಾನವಾದ ಈ ಸಕಲ ಜಗತ್ತಿಗೆ, ಯೋನಿಃ-ಸೃಷ್ಟ್ಯಾದಿ ಕಾರ್ಯಗಳಿಗೆ ಕಾರಣೀಭೂತವಾಗಿದೆ. ಘೃತೇ-ಜ್ಯೋತಿಃಸ್ವರೂಪವಾದ ಈ ವಿಷ್ಣುನಾಮಕ ಪರಬ್ರಹ್ಮನಲ್ಲಿಯೇ, ಶ್ರಿತಃ-ಸಕಲವಾದ

ಬ್ರಹ್ಮಾಂಡವೂ ಆಶ್ರಿತವಾಗಿದೆ, ನಿಂತಿದೆ. ಅವನೇ ಅದರ ರಕ್ಷಕನೂ ನಿಯಾಮಕನೂ ಆಗಿದ್ದಾನೆ. ಘೃತಂ ಉ-ಈ ವಿಷ್ಣುವು ಜ್ಯೋತಿಯೇ, ಅಸ್ಯ-ಈ ಸಕಲ ಜಗತ್ತಿಗೆ, ಧಾಮ-ಲಯಸ್ಥಾನವೂ ಆಗಿದೆ. 'ತನ್ವಾದೀನಾಂ' ಎಂಬ ನಿಯಮದಂತೆ ಉಕಾರಕ್ಕೆ ಉವಙ್ ಆದೇಶ ಬಂದಿರುವುದರಿಂದ ಯಜುರ್ವೇದಪಾಠದಲ್ಲಿ 'ಘೃತಮುವಸ್ಯ' ಎಂದು ಪಾಠವಾಗಿದೆ. ಹೇ ದೇವ! ಅನುಷ್ವಧಂ-ನಾನು ಸಮರ್ಪಿಸುವ ಹವ್ಯ ಕವ್ಯಾದಿರೂಪ ಆಹುತಿಗಳನ್ನನುಸರಿಸಿ, ಆವಹ-ಅವನ್ನು ಸ್ವೀಕರಿಸು. ಮಾದಯಸ್ವ-ಅದರಿಂದ ಸಂತೃಪ್ತನಾಗಿ ನನ್ನನ್ನು ಅನುಗ್ರಹಿಸಿ ನನಗೂ ತೃಪ್ತಿಯುಂಟಾಗುವಂತೆ ಮಾಡು. ವೃಷಭ-ಹೇ ದೇವೋತ್ತಮನೇ! ಸ್ವಾಹಾಕೃತಂ ಹವ್ಯಂ-ಸ್ವಾಹಾಕಾರಪೂರ್ವಕ ಸಮರ್ಪಿಸಿದ ಆಹುತಿಗಳನ್ನು, ವಕ್ಷಿ-ಸ್ವೀಕರಿಸು, ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡು ಎಂದರ್ಥ.

ಭಾವಾರ್ಥ (ಧೀರೇಂದ್ರತೀರ್ಥರೀತ್ಯಾ)—ಹೋಮಕ್ಕೆ ತುಪ್ಪವೇ ಮುಖ್ಯವಾದ ಸಾಧನ ಎಂದರೆ ಹೋಮದಲ್ಲೂ ಯಜ್ಞ ಯಾಗಾದ್ಯನುಷ್ಠಾನಗಳಲ್ಲೂ ತುಪ್ಪವನ್ನು ಯಥೇಷ್ಟವಾಗಿ ಉಪಯೋಗಿಸುತ್ತಾರೆ. ತುಪ್ಪದಲ್ಲಿ ವಿಭೂತಿರೂಪದಿಂದ ಸನ್ನಿಹಿತವಾದ ಆ ಭಗವಂತನೇ ಅಗ್ನಿಗೆ ಆ ತೇಜಸ್ಸನ್ನೂ ಶಕ್ತಿಯನ್ನೂ ಕೊಟ್ಟು ಕರ್ಮವನ್ನು ಸಾಂಗವಾಗಿ ನಡೆಸಿ ಆ ಯಜ್ಞದ ಸಕಲ ಭೋಗಗಳನ್ನೂ ತಾನೇ ಸ್ವೀಕರಿಸುವುದರಿಂದ ಯಜ್ಞಭೋಕ್ತನೂ ಯಜ್ಞಫಲಪ್ರದನೂ ಅವನೇ ಆಗಿದ್ದಾನೆ. ಈ ರೀತಿ ಭಗವಂತನೇ ಯಜಮಾನನಲ್ಲೂ ಋತ್ವಿಜರಲ್ಲೂ ನಿಂತು ಹೋಮಿಸುವ ತುಪ್ಪದಲ್ಲೂ ಇದ್ದು ಹೋಮಮಾಡಿಸಿ ಆ ಹೋಮಫಲವನ್ನು ತಾನೇ ಸ್ವೀಕರಿಸಿ ಪ್ರೀತನಾಗುವನೆಂಬ ಪ್ರಮೇಯವನ್ನು ಜ್ಞಾನಿಗಳು ಶಿಷ್ಯರಿಗೆ ಉಪದೇಶಿಸುತ್ತಾರೆ.

ಘೃತಾಂತರ್ಗತನಾಗಿ ಘೃತನಾಮಕನಾಗಿ ಘೃತಾದಿ ಸಕಲ ಹೋಮದ್ರವ್ಯಗಳಿಗೂ ಆ ಶಕ್ತಿಯನ್ನು ಕೊಟ್ಟು ಯಜ್ಞಾದಿ ಕಾರ್ಯಗಳನ್ನು ನಡೆಯಿಸುವ ದೇವೋತ್ತಮನಾದ ಶ್ರೀಹರಿಯೇ, ನಾವು ಸ್ವಾಹಾ-ಸ್ವಧಾಕಾರಗಳನ್ನು ಉಚ್ಚರಿಸುತ್ತಾ ಏನೇನು ಹವನ-ಹೋಮಾದಿ ಸತ್ಕಾರ್ಯಗಳನ್ನು ಮಾಡುವೆವೋ ಅದನ್ನೆಲ್ಲಾ ನೀನೇ ನಡೆಯಿಸಿ ಸುಪ್ರೀತನಾಗು. ನಮ್ಮ ಸೇವೆಯನ್ನು ಸ್ವೀಕರಿಸಿ ನಮ್ಮನ್ನು ಕೃತಾರ್ಥನನ್ನಾಗಿ ಮಾಡು.

ಅಧ್ಯಾತ್ಮ ಭಾವಾರ್ಥ—ಘೃತಾದಿ ಸಕಲ ಯಜ್ಞ ಸಾಧನಸಾಮಗ್ರಿಗಳಲ್ಲೂ ಶ್ರೀಹರಿಯು ಸನ್ನಿಹಿತನಾಗಿದ್ದು ಯಜ್ಞ-ಯಾಗಾದಿಗಳನ್ನು ಅನುಷ್ಠಾನ ಮಾಡುವ ಯಜಮಾನನಲ್ಲೂ ಋತ್ವಿಜರಲ್ಲೂ ನಿಂತು ಸಕಲ ಯಜ್ಞ ಯಾಗಾದಿ ಕಾರ್ಯಗಳನ್ನೂ ನಡೆಸಿ ಅದರ ಸಂಪೂರ್ಣ ಫಲವನ್ನು ತಾನು ಭೋಗಿಸಿ ಆ ಸಕಲರಿಗೂ ತತ್ತದ್ಯೋಗ್ಯ ಫಲಗಳನ್ನು ಕೊಟ್ಟು ಯಜ್ಞ-ಯಾಗಗಳಿಗೆ ನಿಯಾಮಕನಾಗಿದ್ದಾನಲ್ಲದೆ ಘೃತದಲ್ಲಿ ಜ್ಯೋತಿಃಸ್ವರೂಪನಾಗಿದ್ದು ಘೃತಶಬ್ದವಾಚ್ಯನೂ ಆಗಿದ್ದಾನೆ. ಈ ಶ್ರೀಹರಿಯೇ ಸಕಲ ಜಗತ್ತಿನ ಸೃಷ್ಟಿ-

ಸ್ಥಿತ್ಯಾದಿ ಸಕಲಕ್ಕೂ ಕಾರಣನಾಗಿದ್ದಾನಲ್ಲದೆ ಕೊನೆಯಲ್ಲಿ ಅವನಲ್ಲೇ ಲಯ ಹೊಂದುತ್ತದೆ. ಇಂಥಾ ಶ್ರೀಹರಿಯು ನಾವು ಸಮರ್ಪಿಸುವ ಹವ್ಯಕವ್ಯಪದಾರ್ಥಗಳ ಸಾರವನ್ನು ಸ್ವೀಕರಿಸಿ ನಮ್ಮ ಕರ್ಮಗಳೆಲ್ಲವೂ ಪರಿಪೂರ್ಣವಾಗುವಂತೆ ಅನುಗ್ರಹಿಸಲೆಂದು ಭಾವ.

VIII ಮಧು ವಾತಾ ಇತ್ಯಾದಿ ಮಧ್ವಭಿಷೇಕ ಮಂತ್ರಗಳ ಅರ್ಥ

"ಮಧು ವಾತಾಃ" ಇತ್ಯಾದಿ ಮೂರು ಮಂತ್ರಗಳು ಋಕ್ಸಂಹಿತೆಯ ಪ್ರಥಮಾಷ್ಟಕದ ಆರನೇ ಅಧ್ಯಾಯದಲ್ಲಿ ೧೮ನೇ ವರ್ಗದಲ್ಲಿ ಪ್ರಥಮ ಮಂಡಲದ ತೊಂಬತ್ತನೇ ಸೂಕ್ತದ ೬-೮ನೇ ಋಕ್ಕುಗಳಾಗಿಯೂ ತೈತ್ತಿರೀಯ ಸಂಹಿತೆಯ ನಾಲ್ಕನೇ ಕಾಂಡದ ಎರಡನೇ ಪ್ರಶ್ನೆಯ ಒಂಬತ್ತನೇ ಅನುವಾಕದಲ್ಲಿ ೩-೪ನೇ ಮಂತ್ರಗಳಾಗಿಯೂ ಹಾಗೆಯೇ ತೈತ್ತಿರೀಯಾರಣ್ಯಕದ (ಆಂಧ್ರಪಾಠ) ಹತ್ತನೇ ಪ್ರಶ್ನೆಯಲ್ಲಿ (ಅಥವಾ ಮಹಾನಾರಾಯಣೋಪನಿಷತ್ತಿನಲ್ಲಿ) ೪೯ನೇ ಅನುವಾಕದಲ್ಲಿ ೨ ೩-೪ನೇ ಮಂತ್ರಗಳಾಗಿಯೂ ಪಠಿತವಾಗಿದೆ.

ಋಷ್ಯಾದಿಗಳು— ಮಧು ವಾತಾ ಇತಿ ತೃಚಸ್ಯ ಗೋತಮೋ ವಿಶ್ವೇದೇವಾ ಗಾಯತ್ರೀ। ಮಧುಸ್ನಾನೇ ವಿನಿಯೋಗಃ॥

೧ನೇ ಮಂತ್ರ ಋಗ್ವೇದಪಾಠ

ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ।
ಮಾಧ್ವೀರ್ನಃ ಸಂತ್ವೋಷಧೀಃ ॥೧॥

ಯಜುರ್ವೇದ ಪಾಠವೂ ಹೀಗೆಯೇ ಇದೆ.

ಸೂಚನೆ— ಸಂತ್ವೋಷಧೀಃ ಎಂಬಲ್ಲಿ ಸಂತು, ಓಷಧೀಃ ಎಂದು ಪದಚ್ಛೇದ.

ಅನ್ವಯಾರ್ಥ— (ಸಾಯಣ-ಭಟ್ಟಭಾಸ್ಕರ) ಮನನೀಯತ್ವಾತ್ ರಸತ್ವಾತ್ ರಸನೀಯತ್ವಾದ್ವಾ ಮಧು ಬ್ರಹ್ಮ (ಭ.) -ಜ್ಞೇಯ ವಿಷಯವಾದ್ದರಿಂದಲೂ, ರಸಸ್ವರೂಪವಾದ್ದರಿಂದಲೂ, ರಸಾಸ್ವಾದನೆ ಮಾಡಲ್ಪಡತಕ್ಕದ್ದಾದ್ದರಿಂದಲೂ ಪರಬ್ರಹ್ಮನಿಗೇ ಮಧು ಎಂದು ಹೆಸರು. ವಾತಾಃ-ಮಾರುತ (ಗಾಳಿ)ಗಳು, ಮಧು-ಪರಬ್ರಹ್ಮಸ್ವರೂಪವಾಗಿದೆ. (ಭ.) ಋತಾಯತೇ-ಋತ ಎಂದರೆ ಯಜ್ಞಕರ್ಮ. ಅದನ್ನು ಆತ್ಮನೇ ಇಚ್ಛತೇ ಯಜಮಾನಾಯ। ಋತ ಎಂದರೆ ಯಜ್ಞಕರ್ಮ ಎಂದರ್ಥ. ಅದನ್ನು ತನಗೆ ಇಚ್ಛಿಸುವ ಯಜಮಾನನಿಗೆ (ಸಾ.), ವಾತಾಃ-ಗಾಳಿಗಳು, ಮಧು (ಸಾ.)

ಮಾಧುರ್ಯೋಪೇತವಾದ ಕರ್ಮಫಲವನ್ನು, ಕ್ಷರಂತಿ-ಸುರಿಸುತ್ತವೆ (ಕೊಡುತ್ತವೆ). ಅದೇ ರೀತಿ, ಸಿಂಧವಃ-ನದಿಗಳೂ ಸಮುದ್ರಗಳೂ, ಮಧು-ಮಾಧುರ್ಯೋಪೇತವಾದ ತಮ್ಮ ರಸವನ್ನು; (ಕ್ಷರಂತಿ-ಕೊಡುತ್ತವೆ. [ಭ.] ಕೊಡಲಿ ಎಂದರ್ಥ.) ಹೀಗೆಯೇ, ನಃ-ನಮಗೆ, ಓಷಧೀಃ-ಪಕ್ವವಾದ ರಸವುಳ್ಳ ಬೆಳೆಗಳು, ಮಾಧ್ವೀಃ-(ಸಾ.) ಮಾಧುರ್ಯೋಪೇತವಾದ ರಸವುಳ್ಳವುಗಳಾಗಿ (ಭ.) ರಸಭರಿತಗಳಾಗಿ, ಸಂತು ಆಗಲಿ.

ಭಾವಾರ್ಥ— ಯಜ್ಞ ಮಾಡುವಾಗ ಯಜಮಾನನೂ ಋತ್ವಿಜರೂ ಮಧುಪರ್ಕವನ್ನು ಸ್ವೀಕರಿಸುವಾಗ ಈ ಮೂರು ಮಂತ್ರಗಳನ್ನು ಹೇಳಬೇಕೆಂದು ಅಶ್ವಲಾಯನ ಗೃಹ್ಯಸೂತ್ರದಲ್ಲಿ (೧/೨೪/೧೪) ಹೇಳಿದೆ. ಅವರು ಹೀಗೆ ಪ್ರಾರ್ಥಿಸುತ್ತಾರೆ— ಸರ್ವರಿಂದಲೂ ಜ್ಞೇಯ (ಮನನೀಯ)ವಾದ್ದರಿಂದಲೂ, ರಸಸ್ವರೂಪವಾದ್ದರಿಂದಲೂ, ರಸವನ್ನು ಆಸ್ವಾದಿಸುವಂತೆ ಮಾಡುವುದರಿಂದಲೂ ಪರಬ್ರಹ್ಮನಿಗೆ ಮಧು ಎಂದು ಹೆಸರು. ವಾಯು, ನೀರು, ನದಿಗಳು, ಸಮುದ್ರಗಳು, ಓಷಧಿ (ಬೆಳೆ)ಗಳು ಎಲ್ಲವೂ ಆ ಪರಬ್ರಹ್ಮಸ್ವರೂಪವೇ ಆಗಿವೆ. ಯಜ್ಞ ಮಾಡುವ ಯಜಮಾನನಿಗೂ ಋತ್ವಿಜರಿಗೂ ವಾಯುವು ಪುಣ್ಯಫಲವನ್ನು ಕೊಡಿಸಲಿ. ನದಿಗಳೂ ಸಮುದ್ರಗಳೂ ತಮ್ಮಲ್ಲಿರುವ ಮಧುರರಸವನ್ನು ಹಂಚಿಕೊಡಲಿ. ದವಸಧಾನ್ಯಗಳೂ ಮಾಧುರ್ಯೋಪೇತವಾಗಿರಲಿ—ರಸವತ್ತಾಗಿ ಆಗಲಿ.

ಧೀರೇಂದ್ರತೀರ್ಥೀಯ ಟೀಕಾರ್ಥ— (ಋತಾಯತೇ ಎಂಬುದನ್ನು ಇವರು ಋತಾಯ, ತೇ ಎಂದು ಎರಡು ಪದವಾಗಿ ಗ್ರಹಣ ಮಾಡುತ್ತಾರೆ. ಹಿಂದಿನ ಮಂತ್ರದಿಂದ ದೇವ ಎಂಬ ಸಂಬೋಧನೆಯನ್ನು ಅಧ್ಯಾಹಾರ ಮಾಡಿಕೊಂಡು ಅನ್ವಯಿಸುತ್ತಾರೆ.) ದೇವ-ಹೇ ಭಗವಂತ ವಿಷ್ಣುವೇ! ತೇ-ನಿನ್ನ, ಋತಾಯ-(ಋ ಗತೌ ಎಂಬ ಧಾತುವಿನಿಂದ) ಯಥಾರ್ಥಜ್ಞಾನಕ್ಕಾಗಿ, ವಾತಾಃ-ಪ್ರಧಾನವಾಯು ಸಹಿತವಾಗಿ ಪಂಚಾಶನ್-ಮರುತ್ತುಗಳೂ, ಸಿಂಧವಃ-ನದ-ನದಿಗಳೂ ಸಮುದ್ರಗಳೂ ತದಭಿಮಾನಿ ದೇವತೆಗಳೂ, ಮಧು-ಮಧುರರಸೋಪೇತವಾದ, ಮಧು-ವಚನವನ್ನು (ಜ್ಞಾನವನ್ನು), ಕ್ಷರಂತಿ-ಸುರಿಸುತ್ತವೆ, ಉಪದೇಶಿಸುತ್ತವೆ ಎಂದರ್ಥ. ಅದೇ ರೀತಿ ಓಷಧೀಃ-ಹುಲುಸಾಗಿ ಬೆಳೆದ ಪಕ್ವವಾಗಿರುವ ಬತ್ತ ಗೋಧಿ ಮೊದಲಾದ ಬೆಳೆಗಳೂ ತದಭಿಮಾನಿ ದೇವತೆಗಳೂ, ನಃ-ನಮಗೆ, ಮಾಧ್ವೀಃ-ಮಧುರರಸೋಪೇತಗಳಾಗಿ (ಅಥವಾ ಜ್ಞಾನಪ್ರಬೋಧಕ ಮಧುರವಚನಗಳಾಗಿ), ಸಂತು-ಆಗಲಿ.

ಅಧ್ಯಾತ್ಮಪರವಾದ ಅರ್ಥ—(ಸಾತಾರಿ ರಾಘವೇಂದ್ರಾಚಾರ್ಯರ ಟೀಕಾ) (ಇದರ ಹಿಂದಿನ ಮಂತ್ರದಲ್ಲಿ 'ವಿಶ್ವಾನಿ ದೇವ ಸವಿತಃ' ಎಂದು ಬಂದಿದೆ. ಈ ಮಂತ್ರದಲ್ಲಿ ದೇವ ಸವಿತಃ ಎಂಬ ಎರಡು ಸಂಬೋಧನೆಗಳನ್ನು ಆವೃತ್ತಿ ಮಾಡಿಕೊಂಡು ಅರ್ಥ ಹೇಳುತ್ತಾರೆ.) ಸವಿತಃ ದೇವಃ-ಸೃಷ್ಟ್ಯಾದಿಕರ್ತನಾದ ಹೇ ಭಗವಂತ! ತೇ-ನಿನ್ನ ಋತಾಯ-

ತೃಪ್ತಿಗಾಗಿಯೇ, ವಾತಾಃ-ಗಾಳಿಗಳು, ಮಧು-ಮಧುರವಾಗಿ ಬೀಸುತ್ತವೆ ಅಥವಾ ಋತಾಯತೇ (ಋ ಎಂಬ ಸೌತ್ರಧಾತುವಿಗೆ ಹೋಗು, ಚಲಿಸು ಎಂದರ್ಥವಾಗುವುದರಿಂದ) ಚಲಿಸುತ್ತವೆ. ಸಿಂಧವಃ-ನದಿಗಳು, ಮಧು-ನಿನ್ನ ಪ್ರೀತಿಗಾಗಿಯೇ, ಕ್ಷರಂತಿ-ಪ್ರವಹಿಸುತ್ತವೆ. ನಃ-ನಮಗೆ, ಓಷಧೀಃ-ಬತ್ತ ಗೋಧಿ ಮೊದಲಾದ ಪೈರುಗಳು, ಮಾಧ್ವೀಃ-ರಸಯುಕ್ತವಾಗಿ, ಸಂತು-ಆಗಲಿ.

ಸೂಚನೆ— ಗೋಧಿ ಬತ್ತ ರಾಗಿ ಮೊದಲಾದ ಒಂದೇ ಸರಿ ಬೆಳೆದು ಪಕ್ವವಾಗುವ ಪೈರುಗಳಿಗೆ ಓಷಧಿಗಳೆಂದೂ, ತೆಂಗು ಮಾವು ಹಲಸು ಮೊದಲಾದ ಚಿರಸ್ಥಾಯೀ ಸಸ್ಯಗಳಿಗೆ ವನಸ್ಪತಿಗಳೆಂದೂ ಹೆಸರು. (ಮೂರನೇ ಮಂತ್ರದಲ್ಲಿ ವನಸ್ಪತಿ-ಶಬ್ದ ಬರುವುದು.) ಈ ಮಂತ್ರದಲ್ಲಿ ಹೇಳಿದ ಪ್ರಮೇಯಗಳಿಗೆ 'ಭೀಷಾಸ್ಮಾದ್ವಾತಃ ಪವತೇ। ಭೀಷೋದೇತಿ ಸೂರ್ಯಃ। ಭೀಷಾಸ್ಮಾದಗ್ನಿಶ್ಚೇಂದ್ರಶ್ಚ' ಇತ್ಯಾದಿ ತೈತ್ತಿರೀಯೋಪನಿಷತ್ತು ಪ್ರಮಾಣ. ಅದಕ್ಕೆ ಈ ಭಗವಂತನ ಭೀತಿಯಿಂದಲೇ ಗಾಳಿ ಬೀಸುತ್ತದೆ. ಇವನ ಹೆದರಿಕೆಯಿಂದಲೇ ಸೂರ್ಯನು ಉದಯಿಸುತ್ತಾನೆ. ಮತ್ತು ಚಂದ್ರನು ಇವನ ಅಂಜಿಕೆಯಿಂದಲೇ ಪ್ರಕಾಶಿಸುತ್ತಾನಲ್ಲದೆ ಅಗ್ನಿ ಉರಿಯುವುದೂ ಇವನ ಭಯದಿಂದ' ಇತ್ಯಾದಿ ವಾಕ್ಯಗಳು ಪ್ರಮಾಣ

ತಾತ್ಪರ್ಯ— ಹೇ ಭಗವಂತ, ಮುಖ್ಯಪ್ರಾಣಸಮೇತರಾದ ಐವತ್ತು ಜನ ಮರುತ್ತುಗಳೂ ನಿತ್ಯ ಯಥಾರ್ಥಜ್ಞಾನವನ್ನು ಕೊಡಲಿ. ನದೀನದಗಳೂ ಸಮುದ್ರಗಳೂ ಅವುಗಳಲ್ಲಿ ಸ್ನಾನಾದ್ಯನುಷ್ಠಾನಗಳಿಂದ 'ನ ಹ್ಯಮ್ಮಯಾನಿ ತೀರ್ಥಾನಿ' ತೀರ್ಥಗಳು ಕೇವಲ ಜಡವಾದ ನೀರು ಮಾತ್ರವೇ ಅಲ್ಲ ಎಂದು ಭಾಗವತದಲ್ಲಿ ಹೇಳಿದಂತೆ ನಮಗೆ ಸಜ್ಜನ ಸಹವಾಸವನ್ನು ದೊರಕಿಸಿಕೊಟ್ಟು ಮೋಕ್ಷಸಾಧಕವಾದ ಜ್ಞಾನಾರ್ಜನೆಯನ್ನು ಮಾಡಿಸಲಿ. ಇದೇ ರೀತಿ ನಾವು ಭೋಜನ ಮಾಡುವ ಅಕ್ಕಿ ಗೋಧಿ ಮೊದಲಾದುವುಗಳಿಂದ ಸಿದ್ಧವಾದ ಅನ್ನಾದ್ಯಾಹಾರಗಳು ಸಾತ್ತ್ವಿಕಾಹಾರವಾಗಿ ಪರಿಣಮಿಸಿ ಭಗವತ್ಸೇವೆಗೆ ಜ್ಞಾನಾರ್ಜನೆಗೆ ಸಾಧನಸಂಪತ್ತಾಗಲಿ ಎಂದು ಭಾವ. ಸಾತಾರಿ ರಾಘವೇಂದ್ರಾಚಾರ್ಯರ ಟೀಕಾನುಸಾರವಾಗಿ—ಗಾಳಿ ಬೀಸುವುದು, ನದಿಗಳು ಪ್ರವಹಿಸುವುದು ಬತ್ತ ಗೋಧಿ ಮೊದಲಾದ ಪೈರು ಬೆಳೆದು ರಸಭಂತವಾಗುವುದು ಎಲ್ಲವೂ ಭಗವಂತನ ಇಚ್ಛೆಯಿಂದಲೇ. ಹೀಗೆ ಸಕಲವೂ ಭಗವದಧೀನ ಎಂದು ತಾತ್ಪರ್ಯ.

೨ನೇ ಮಂತ್ರ (ಋಗ್ವೇದಪಾಠ)

ಮಧು ನಕ್ತಮುತೋಷಸೋ ಮಧುಮತ್ ಪಾರ್ಥಿವಂ ರಜಃ।

ಮಧು ದ್ಯೌರಸ್ತು ನಃ ಪಿತಾ ॥

ಯಜುರ್ವೇದದಲ್ಲಿ— ಮುತೋಷಸಿ ಎಂದೂ ಪಾರ್ಥಿವಗ್‌ಂ ರಜಃ ಎಂದೂ ಪಾಠ.

ಸಾಯಣಭಾಷ್ಯಾರ್ಥ— ನಕ್ತಂ-ರಾತ್ರಿಯೂ, ಉತ-ಮತ್ತು, ಉಷಸಃ-ಉಷಃ ಕಾಲದಿಂದ ಆರಂಭವಾಗುವ ಹಗಲುಗಳೂ, ಮಧು-ಮಾಧುರ್ಯೋಪೇತವಾದ ಫಲವನ್ನು ಕೊಡತಕ್ಕವುಗಳಾಗಲಿ. ಪಾರ್ಥಿವಂ-ಭೂಮಿಯೆಂಬ, ರಜಃ-ಲೋಕವು (ರಜಃ ಶಬ್ದ ಲೋಕವಾಚಕ), ಮಧುಮತ್-ಮಾಧುರ್ಯದಿಂದ ಕೂಡಿದ ಫಲವುಳ್ಳದ್ದಾಗಲಿ. ಪಿತಾ-ಮಳೆ ಸುರಿಸಿ ನಮ್ಮನ್ನು ರಕ್ಷಿಸುವ (ಪಾತಾ), ದ್ಯೌಃ-ಸ್ವರ್ಗಲೋಕವೂ ಸಹ, ನಃ-ನಮಗೆ, ಮಧು ಅಸ್ತು-ಮಾಧುರ್ಯವುಳ್ಳದ್ದಾಗಿ ಆಗಲಿ.

ತಾತ್ಪರ್ಯ— ರಾತ್ರಿಗಳೂ ಹಗಲುಗಳೂ ನಮಗೆ ಮಾಧುರ್ಯಯುಕ್ತವಾಗಿರಲಿ. ಭೂಲೋಕವೂ ಮಳೆ ಸುರಿಸಿ ನಮ್ಮನ್ನು ತಂದೆಯಂತೆ ರಕ್ಷಿಸುವ ಸ್ವರ್ಗಲೋಕವೂ ನಮಗೆ ಮಾಧುರ್ಯ ಕೊಡತಕ್ಕವುಗಳಾಗಲಿ.

ಧೀರೇಂದ್ರತೀರ್ಥರ ಟೀಕಾರ್ಥ— ನಕ್ತಂ-ರಾತ್ರಿಯಲ್ಲೂ, ಉತ-ಮತ್ತು, ಉಷಸಿ-ಹಗಲಿನಲ್ಲೂ, ಮಧು-ಮಧುರವಚನವು ಆಗುತ್ತಿರಲಿ. ಪಾರ್ಥಿವಂ ರಜಃ-ಭೂಲೋಕದ ಧೂಳೂ ಸಹ, ಮಧುಮತ್-ಮಧುರವಚನವುಳ್ಳದ್ದಾಗಲಿ. ಪಿತಾ-ತಂದೆಯಂತೆ ನಮ್ಮನ್ನು ರಕ್ಷಿಸುವ, ದ್ಯೌಃ-ದ್ಯುಲೋಕಾಭಿಮಾನಿಯೂ ಸಹ, ನಃ-ನಮಗೆ, ಮಧು-ಸುಖಕರವು, ಅಸ್ತು-ಆಗಲಿ. (ಮಧುಶಬ್ದದಿಂದ ಉಪಲಕ್ಷಿತವಾದ ಬ್ರಹ್ಮಜ್ಞಾನಕ್ಕೆ ಸಾಧನವು ಆಗಲೆಂದು ಭಾವ.) (ಸಾತಾರಿ ರಾಘವೇಂದ್ರಾಚಾರ್ಯರ ಅರ್ಥ) ಮಧುಶಬ್ದವು ಸುಖವಾಚಕ. ಆದಕಾರಣ ಈ ಮಂತ್ರಕ್ಕೆ ಹಗಲುಗಳೂ ರಾತ್ರಿಗಳೂ ಭೂಲೋಕವೂ ಸ್ವರ್ಗಲೋಕವೂ ನಮಗೆ ಸುಖಪ್ರದವಾಗಿ (ಸುಖಮಯವಾಗಿ) ಆಗಲಿ ಎಂದರ್ಥ.

ಭಾವಾರ್ಥ ಸ್ಪಷ್ಟವಾಗಿದೆ.

೩ನೇ ಮಂತ್ರ (ಋಗ್ವೇದಪಾಠ)

ಮಧುಮಾನ್ನೋ ವನಸ್ಪತಿರ್ ಮಧುಮಾ ँ ಅಸ್ತು ಸೂರ್ಯಃ ||

ಮಾಧ್ವೀರ್ಗಾವೋ ಭವಂತು ನಃ ||

ಯಜುರ್ವೇದದಲ್ಲಿ ಮಧುಮಾಗ್‌ಂ ಅಸ್ತು ಎಂದು ಪಾಠ.

ಸಾಯಣಭಾಷ್ಯಾರ್ಥ— ನಃ-ನಮಗೆ, ವನಸ್ಪತಿಃ-ವನಪಾಲಕನಾದ ಯೂಪಾಭಿಮಾನಿ ದೇವತೆಯು, ಮಧುಮಾನ್-ಮಾಧುರ್ಯೋಪೇತ ಫಲವುಳ್ಳವನಾಗಲಿ. ಸೂರ್ಯಃ-ಸರ್ವಪ್ರೇರಕನಾದ ಸೂರ್ಯದೇವನೂ ಸಹ, ಮಧುಮಾನ್ ಅಸ್ತು-ಮಾಧುರ್ಯೋಪೇತ ಫಲಪ್ರದನು ಆಗಲಿ. ನಃ-ನಮಗೆ, ಗಾವಃ-ಯಜ್ಞಾದಿ ಕಾರ್ಯಗಳಿಗೆ ಉಪಯುಕ್ತವಾದ ಗೋವುಗಳೂ, ಮಾಧ್ವೀಃ-ಮಧುರ ರಸಯುಕ್ತವಾದ ಹಾಲು ಕೊಡತಕ್ಕವುಗಳಾಗಿ, ಭವಂತು-ಆಗಲಿ.

ಭಾವಾರ್ಥ— ವನಪಾಲಕನಾದ ಯೂಪಾಧಿಪತಿಯೂ ಸೂರ್ಯನೂ ನಮಗ ಮಾಧುರ್ಯೋಪೇತವಾದ ರಸವನ್ನು ಕೊಡತಕ್ಕವರಾಗಲಿ. ಯಜ್ಞಯಾಗಾದಿಗಳಿಗ ಮುಖ್ಯಸಾಧನವಾದ ಗೋವುಗಳು ನಮಗೆ ಮಾಧುರ್ಯೋಪೇತವಾದ ಹಾಲನ್ನು ಕೊಡುವಂತಾಗಲಿ.

ಧೀರೇಂದ್ರತೀರ್ಥೀಯಾರ್ಥ— ವನಸ್ಪತಿಃ-ತೆಂಗು ಮಾವು ಹಲಸು ಮೊದಲಾದ ವೃಕ್ಷಗಳಿಗೆ ಅಭಿಮಾನಿಯಾದ ಚಂದ್ರನು, ನಃ-ನಮಗೆ, ಮಧುಮಾನ್-ಮಧುರವಚನ ಕೊಡುವವನಾಗಲಿ. ಸೂರ್ಯಃ-ಸೂರ್ಯನೂ, ಮಧುಮಾನ್ ಅಸ್ತು-ಬ್ರಹ್ಮಜ್ಞಾನಪ್ರದನಾಗಲಿ. ಗಾವಃ-ವೇದವಾಕ್ಯಗಳು, ನಃ-ನಮಗೆ, ಮಾಧ್ವೀಃ-ಮೋಕ್ಷಮಾರ್ಗವನ್ನು ತೋರಿಸತಕ್ಕವುಗಳು, ಭವಂತು-ಆಗಲಿ.

ಭಾವಾರ್ಥ— ತೆಂಗು ಮಾವು ಹಲಸು ಮೊದಲಾದ ವನಸ್ಪತಿಗಳಿಗೆ ಅಭಿಮಾನಿಯಾದ ಚಂದ್ರನೂ ಸೂರ್ಯನೂ ನಮಗೆ ಬ್ರಹ್ಮಜ್ಞಾನ ಸಂಪಾದನೆ ಮಾಡಲು ಮಾರ್ಗ ತೋರಿಸಲಿ. ವೇದವಾಕ್ಯಗಳು ನಮ್ಮನ್ನು ಮೋಕ್ಷಮಾರ್ಗದಲ್ಲಿಯೇ ಪ್ರವೃತ್ತರಾಗುವಂತೆ ಮಾಡಲಿ ಎಂದು ಭಾವ.

IX ಸ್ವಾದುಃ ಪವಸ್ವ ಎಂಬ ಶರ್ಕರಾ ಸ್ನಾನಮಂತ್ರ

ಈ ಮಂತ್ರವು ಋಕ್ಸಂಹಿತೆಯ ಏಳನೇ ಅಷ್ಟಕದ ಮೂರನೇ ಅಧ್ಯಾಯದ ಹತ್ತನೇ ವರ್ಗದಲ್ಲಿ ಒಂಬತ್ತನೇ ಮಂಡಲದ ೮೫ನೇ ಸೂಕ್ತದ ಆರನೇ ಋಕ್ಕಾಗಿ ಪಠಿತವಾಗಿದೆ. ಇದಕ್ಕೆ ಸಾಯಣರ ಭಾಷ್ಯವೊಂದೇ ಉಪಲಭ್ಯವಾಗಿದೆ.

ಋಷ್ಯಾದಿಗಳು :— ಸ್ವಾದುಃ ಪವಸ್ವೇತಿ ಮಂತ್ರಸ್ಯ ಭಾರ್ಗವೋ ವೇನ ಋಷಿಃ । ಪವಮಾನಃ ಸೋಮನಾಮಕೋ ಮುಖ್ಯಪ್ರಾಣೋ ದೇವತಾ । ಜಗತೀ ಛಂದಃ । ಶರ್ಕರಾಸ್ನಾನೇ ವಿನಿಯೋಗಃ ॥

ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ

ಸ್ವಾದುರಿಂದ್ರಾಯ ಸುಹವೀತುನಾಮ್ನೇ ।

ಸ್ವಾದುರ್ಮಿತ್ರಾಯ ವರುಣಾಯ ವಾಯವೇ

ಬೃಹಸ್ಪತಯೇ ಮಧುಮಾ ँ ಅದಾಭ್ಯಃ ॥

ಸಾಯಣಭಾಷ್ಯಾರ್ಥ : ಸೋಮ-ಎಲೈ ಸೋಮಾಭಿಮಾನಿಯಾದ ಚಂದ್ರನೇ ! ಸ್ವಾದು-ಮಧುರನಾದ ನೀನು, ದಿವ್ಯಾಯ ಜನ್ಮನೇ-ದೇವಗಣಕ್ಕಾಗಿ, ಪವಸ್ವ-ಪ್ರವಹಿಸುವನಾಗು. ಮತ್ತು ಸುಹವೀತು ನಾಮ್ನೇ-ಶೋಭನಾಹ್ವಾನವೆಂಬ ಹೆಸರುಳ್ಳ, ಇಂದ್ರಾಯ-ದೇವೇಂದ್ರನಿಗಾಗಿ, ಸ್ವಾದುಃ-ಮಧುರನಾದ ನೀನು, ಪವಸ್ವ-ಹರಿಯುವವನಾಗು. ಮಧುಮಾನ್-ಮಧುರರಸವುಳ್ಳ, ಅದಾಭ್ಯಃ-ಬೇರೆಯವರಿಂದ ಹಿಂಸಿಸಲ್ಪಡದ ನೀನು, ಮಿತ್ರಾಯ-ಮಿತ್ರನಾಮಕ ಸೂರ್ಯನಿಗಾಗಿಯೂ, ವರುಣಾಯ-ವರುಣನಿಗೂ, ವಾಯವೇ-ವಾಯುದೇವನಿಗೂ, ಬೃಹಸ್ಪತಯೇ-ದೇವಗುರುವಾದ ಬೃಹಸ್ಪತಿಗಾಗಿಯೂ (ಪವಸ್ವ)-ಪ್ರವಹಿಸುವವನಾಗು.

ತಾತ್ಪರ್ಯ : ಹೇ ಸೋಮರಸವೇ ! ನೀನು ಬಹಳ ರುಚಿಕರವಾಗಿದ್ದೀಯೆ. ನಿನ್ನನ್ನು ಬೇರೆ ಯಾರೂ ಹಿಂಸಿಸುವುದಿಲ್ಲ. ನೀನು ದಿವ್ಯವಾದ ದೇವತಾಗಣಕ್ಕಾಗಿ ಸೋಮಲತೆಯಿಂದ ಹರಿದು ಬಾ. ಆ ದೇವಗಣವು ಯಾವುದೆಂದರೆ ಶೋಭನನಾಮಧೇಯವುಳ್ಳ ದೇವೇಂದ್ರ, ಮಿತ್ರನಾಮಕಸೂರ್ಯ, ವರುಣ, ವಾಯು ಮತ್ತು ದೇವಗುರುವಾದ ಬೃಹಸ್ಪತಿ—ಈ ದೇವತೆಗಳಿಗಾಗಿ ನೀನು ಸೋಮಲತೆಯಿಂದ ಬರುವನಾಗು ಎಂದು ಭಾವ.

ಹರಿ-ವಾಯುಪರವಾಗಿ ಅರ್ಥ : ಋಗ್ವೇದದಲ್ಲಿ ಇಡೀ ನವಮ ಮಂಡಲಕ್ಕೆ ಸೇರಿದ ೧೧೪ ಸೂಕ್ತಗಳೂ ಸಂಪೂರ್ಣವಾಗಿ ಪವಮಾನಸೋಮಾಖ್ಯ ಮುಖ್ಯಪ್ರಾಣದೇವರ ಹಾಗೂ ಪರಮಮುಖ್ಯವೃತ್ತಿಯಿಂದ ಶ್ರೀವಿಷ್ಣುಸ್ತುತಿಪರವೂ ಆಗಿದೆಯೆಂದು ಶ್ರೀಮತ್-ವಾದಿರಾಜರು ಯುಕ್ತಿಮಲ್ಲಿಕಾದಲ್ಲಿ ಹೇಳಿದ್ದಾರಲ್ಲದೆ 'ಸೋಮ' ಶಬ್ದವನ್ನು ಭೀಮಸೇನ-ಪರವಾಗಿಯೂ, ಮುಖ್ಯಪ್ರಾಣಪರವಾಗಿಯೂ ಅನ್ವಯ ಮಾಡಿ ತೋರಿಸಿಕೊಟ್ಟಿದ್ದಾರೆ. ಪ್ರಸಕ್ತ ಮಂತ್ರವೂ ಅದೇ ನವಮಮಂಡಲಕ್ಕೆ ಸೇರಿದ್ದಾದ್ದರಿಂದ ಇದಕ್ಕೂ ವಾಯುಪರ

ವಾಗಿಯೇ ಒಂದು ಅರ್ಥವಿದೆ. ಹರಿಪರವಾಗಿ ಎಲ್ಲ ಪದಗಳೂ ಅನ್ವಯಿಸುವುದರಿಂದ ಇಂದ್ರ-ಮಿತ್ರ-ವರುಣಾದಿ ಸಕಲ ಪದಗಳಿಗೂ ಹರಿಪರವಾದ ಅರ್ಥವನ್ನು ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರು ತೋರಿಸಿಕೊಟ್ಟಿದ್ದಾರೆ. ಆದರೆ ಪ್ರಸಕ್ತ ಮಂತ್ರಕ್ಕೆ ಯಾವ ಹರಿ-ವಾಯುಪರ ಅರ್ಥವೂ ನಮಗೆ ಉಪಲಭ್ಯವಾಗಿಲ್ಲ).

X 'ಯಾಃ ಫಲಿನೀಃ' ಎಂಬ ಫಲರಸಾಭಿಷೇಕ ಮಂತ್ರಾರ್ಥ

'ಯಾಃ ಫಲಿನೀಃ' ಎಂಬ ಈ ಮಂತ್ರವು ಋಗ್ವೇದಸಂಹಿತೆಯ ಎಂಟನೇ ಅಷ್ಟಕದ ಐದನೇ ಅಧ್ಯಾಯದ ಹತ್ತನೇ ವರ್ಗದಲ್ಲಿ ದಶಮಮಂಡಲದ ೯೭ನೇ ಸೂಕ್ತದ ೧೫ನೇ ಋಕ್ಕಾಗಿಯೂ, ತೈತ್ತಿರೀಯ ಸಂಹಿತೆಯ ನಾಲ್ಕನೇ ಕಾಂಡದ ಎರಡನೇ ಪ್ರಶ್ನೆಯ ಆರನೇ ಅನುವಾಕದಲ್ಲಿ ನಾಲ್ಕನೇ ಮಂತ್ರವಾಗಿಯೂ ಪಠಿತವಾಗಿದೆ. ಇದಕ್ಕೆ ಸಾಯಣಭಾಷ್ಯವು ಉಪಲಭ್ಯವಾಗಿದೆ.

ಋಷ್ಯಾದಿಗಳು— ಯಾಃ ಫಲಿನೀರಿತ್ಯಸ್ಯ ಮಂತ್ರಸ್ಯ ಅಥರ್ವಣೋ ಭಿಷಙ್ನಾಮಾ ಋಷಿಃ । ಓಷಧಿನಿಯಾಮಕ ಚಂದ್ರಾಂತರ್ಗತ ಶ್ರೀವಿಷ್ಣುರ್-ದೇವತಾ । ಅನುಷ್ಟುಪ್ ಛಂದಃ ಫಲಾಭಿಷೇಕೇ ವಿನಿಯೋಗಃ ॥

ಋಗ್ವೇದಮಂತ್ರಪಾಠ

ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾಯಾಶ್ಚ ಪುಷ್ಪಿಣೀಃ ।
ಬೃಹಸ್ಪತಿಪ್ರಸೂತಾ—ಸ್ತಾ ನೋ ಮುಂಚಂತ್ವಂಹಸಃ ॥

ಸಾಯಣಭಾಷ್ಯಾರ್ಥ : ಯಾಃ-ಯಾವ ಗಿಡಮೂಲಿಕೆಗಳು, ಫಲಿನೀಃ-ಫಲವುಳ್ಳವಾಗಿರುತ್ತವೋ, ಯಾಃ-ಯಾವುವು, ಅಫಲಾಃ-ಫಲರಹಿತವಾಗಿರುವುವೋ, ಯಾಶ್ಚ-ಯಾವುವು, ಅಪುಷ್ಪಾಃ-ಪುಷ್ಪರಹಿತವಾಗಿರುವುವೋ, ಅಥವಾ ಪುಷ್ಪಿಣೀಃ-ಪುಷ್ಪವುಳ್ಳವುಗಳಾಗಿರುತ್ತವೋ, ಬೃಹಸ್ಪತಿಪ್ರಸೂತಾಃ-ಮಂತ್ರಾಭಿಮಾನಿಯಾದ ಬೃಹಸ್ಪತ್ಯಾಚಾರ್ಯರಿಂದ ಅನುಜ್ಞಾತವಾದ, ತಾಃ-ಆ ಸಕಲ ಗಿಡಮೂಲಿಕೆಗಳೂ; ನಃ-ನಮ್ಮನ್ನು, ಅಂಹಸಃ-ಪಾಪಗಳಿಂದ, ಮುಂಚಂತು-ಪಾರುಮಾಡಲಿ.

ಭಾವಾರ್ಥ : ಕೆಲವು ಮೂಲಿಕೆಗಳು ಫಲ ಬಿಡುತ್ತವೆ, ಕೆಲವು ಫಲ ಬಿಡುವುದೇ ಇಲ್ಲ. ಕೆಲವು ಮೂಲಿಕೆಗಳು ಹೂವು ಬಿಡುತ್ತವೆ, ಇನ್ನು ಕೆಲವು ಹೂವೇ ಬಿಡುವುದಿಲ್ಲ. ಈ ಎಲ್ಲ ಮೂಲಿಕೆಗಳೂ ಬೃಹಸ್ಪತ್ಯಾಚಾರ್ಯರ ಆದೇಶದಿಂದ ನಮ್ಮ ಸಕಲ ದೋಷಗಳನ್ನೂ ದೂರ ಮಾಡಲಿ ಎಂದರ್ಥ.

ಮಾಧ್ವಪರವಾಗಿ ಭಾವಾರ್ಥ : ಬೃಹದ್ಭಾಷ್ಯದಲ್ಲಿ ಮುಖ್ಯಪ್ರಾಣದೇವರಲ್ಲಿ ಬೃಹಸ್ಪತಿ ಶಬ್ದವನ್ನು ಅನ್ವಯಿಸಿ ತೋರಿಸಿದ್ದಾರೆ. ಆ ಉಪನಿಷತ್ತು 'ವಾಗ್ವೈ ಬೃಹತೀ ತಸ್ಯಾ ಏಷ ಪತಿಸ್ತಸ್ಮಾದು ಬೃಹಸ್ಪತಿಃ' (೩/೩/) ಎಂದು ಹೇಳುತ್ತದೆ. ಸಕಲ ವೇದಾಭಿಮಾನಿಯಾದ ಭಾರತೀದೇವೇರಿಗೆ 'ಬೃಹತೀ' ಎಂದು ಹೆಸರು. ಈ ಮುಖ್ಯಪ್ರಾಣನು ಆ ಭಾರತೀಗೆ ಪತಿಯಾದ್ದರಿಂದ ಇವರಿಗೆ 'ಬೃಹಸ್ಪತಿ' ಎಂದು ಹೆಸರು—ಎಂದು ಹೇಳುತ್ತದೆ. ಅದರಂತೆ ಮುಖ್ಯಪ್ರಾಣದೇವರು ಬೃಹಸ್ಪತ್ಯಾಚಾರ್ಯರಲ್ಲಿ ನಿಂತು ಸಕಲ ಪೌರೋಹಿತ್ಯಕಾರ್ಯವನ್ನು ನಡೆಸುತ್ತಾರೆ. ಆದಕಾರಣ ನಾವು ಮಾಡಿದ ಸಕಲ ಕರ್ಮಗಳನ್ನೂ ಆ ಮುಖ್ಯಪ್ರಾಣನ ದ್ವಾರಾ ಶ್ರೀಹರಿಯಲ್ಲಿ ಸಮರ್ಪಿಸಿದರೆ ಆ ಕರ್ಮಗಳು ಫಲಪ್ರದವಾಗಿರಲಿ, ಅದಕ್ಕೆ ಅನರ್ಹವಾಗಿರಲಿ, ಶುದ್ಧವಾಗಿರಲಿ ಅಶುದ್ಧವಾಗಿರಲಿ ಸಕಲವನ್ನೂ ಆ ಪ್ರಾಣದೇವರು ಶ್ರೀಹರಿಯಲ್ಲಿ ಸಮರ್ಪಿಸಿ ಕರ್ಮಲೋಪದಿಂದಾಗಲಿ ಕರ್ಮಗಳ ಲೇಪದೋಷದಿಂದಾಗಲಿ ನಮಗೆ ಹಾನಿಯಾಗದಂತೆ ರಕ್ಷಿಸಿ ಆ ಕರ್ಮಗಳು ಹರಿಪ್ರೀತಿಕರವಾಗುವಂತೆ ಅನುಗ್ರಹಿಸುತ್ತಾರೆಂದು ಈ ಮಂತ್ರದ ಭಾವವೆಂದು ತಿಳಿಯಬಹುದು.

ಪುರುಷಸೂಕ್ತ

ಮಿಕ್ಕ ಎಲ್ಲ ಅಭಿಷೇಕಮಂತ್ರಗಳಿಗೆ ಸಾಮಾನ್ಯಾರ್ಥ ಹೇಳಿದಂತೆ ಪುರುಷಸೂಕ್ತದ ಮಂತ್ರಗಳಿಗೂ ಸಂಗ್ರಹಾರ್ಥವನ್ನು ಕೊಡುತ್ತಿದ್ದೇವೆ. ಹೆಚ್ಚಿನ ವಿವರಗಳಿಗೆ ಮಂತ್ರಾಲಯದ ರಾಯರ, ಸತ್ಯಸಂಧತೀರ್ಥಾದಿಗಳ ವ್ಯಾಖ್ಯಾನಗಳನ್ನು ನೋಡಬಹುದು.

ಪೀಠಿಕೆ ಇಡೀ ವೈದಿಕಸಾಹಿತ್ಯದಲ್ಲಿ ಗಾಯತ್ರೀಮಂತ್ರಕ್ಕೆ ಪ್ರಥಮಸ್ಥಾನವಿರುವಂತೆ ಪುರುಷಸೂಕ್ತಕ್ಕೆ ಎರಡನೇ ಸ್ಥಾನ ಮೀಸಲಾಗಿದೆ. ಪುರುಷಸೂಕ್ತವು ಗಾಯತ್ರೀಗೆ ವ್ಯಾಖ್ಯಾನವಾಗಿರುವಂತೆ ಸಕಲ ವೇದಗಳೂ ಪುರುಷಸೂಕ್ತಕ್ಕೆ ವ್ಯಾಖ್ಯಾನವಾಗಿದೆಯೆಂಬ ಪ್ರಮೇಯವನ್ನು " ವೇದಾಃ ಪುರುಷಸೂಕ್ತಗಾಃ " ಎಂಬ ಸ್ಮೃತಿ ಸಾರುತ್ತದೆ. ಹೀಗೆ ಈ ಸೂಕ್ತದಲ್ಲಿ ಸಕಲ ವೇದಗಳ ಸಾರವೇ ಅಡಗಿರುವುದರಿಂದ ಈ ಸೂಕ್ತಪಠನಮಾತ್ರದಿಂದಲೇ ಸಕಲ ವೇದಪಾರಾಯಣಜನ್ಯಪುಣ್ಯವು ಪ್ರಾಪ್ತವಾಗುವುದು. ಆದ್ದರಿಂದಲೇ ತಿಳಿದವರು ಬ್ರಹ್ಮಯಜ್ಞದಲ್ಲೂ ಪೂಜಾಕಾಲದಲ್ಲೂ ಈ ಸೂಕ್ತವನ್ನು ಪಠಿಸುತ್ತಾರೆಂದು ವೈದ್ಯನಾಥೀಯ ಆಹ್ನಿಕಕಾಂಡದಲ್ಲಿ ಉದಹರಿಸಿರುವ ಈ ಪ್ರಮಾಣ ತಿಳಿಸುತ್ತದೆ—

ಬ್ರಹ್ಮಯಜ್ಞೇ ಜಪೇತ್ ಸೂಕ್ತಂ ಪೌರುಷಂ ಚಿಂತಯನ್ ಹರಿಮ್ ।
ಸ ಸರ್ವಾನ್ ಜಪತೇ ವೇದಾನ್ ಸಾಂಗೋಪಾಂಗಾನ್ ವಿಧಾನತಃ ॥

(ಅರ್ಥ) ಬ್ರಹ್ಮಯಜ್ಞದಲ್ಲಾಗಲಿ (ಪೂಜಾಕಾಲದಲ್ಲಾಗಲಿ) ಯಾರು ವಿಷ್ಣುವನ್ನು ಸ್ಮರಿಸುತ್ತಾ ಪುರುಷಸೂಕ್ತವನ್ನು ಪಠಿಸುತ್ತಾನೋ ಆ ಬ್ರಾಹ್ಮಣನು ಷಡಂಗ ಉಪಾಂಗ ಸಹಿತವಾದ ಸಕಲ ವೇದಗಳನ್ನೂ ಪಠಿಸಿದಂತೆಯೇ ಸರಿ.

ಹೀಗೆ ಪುರುಷಸೂಕ್ತಕ್ಕೆ ಅತಿಶಯವಾದ ಪ್ರಾಶಸ್ತ್ಯ ಬಂದಿದೆ.

ಈ ಸೂಕ್ತವು ಋಗ್ವೇದಸಂಹಿತೆಯ ಹತ್ತನೇ ಮಂಡಲದಲ್ಲಿ ತೊಂಬತ್ತನೇ ಸೂಕ್ತವಾಗಿಯೂ ಎಂಟನೇ ಅಷ್ಟಕದ ನಾಲ್ಕನೇ ಅಧ್ಯಾಯದಲ್ಲಿ ೧೭ ೧೮-೧೯ ವರ್ಗತ್ರಯಾತ್ಮಕವಾಗಿಯೂ ಪಠಿತವಾಗುವಂತೆ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಕೃಷ್ಣಯಜುರ್ವೇದದ ತೈತ್ತಿರೀಯಾರಣ್ಯಕದಲ್ಲೂ (೩ನೇ ಚಿತ್ತಿಪ್ರಶ್ನೆಯಲ್ಲಿ ೧೨ ೧೩ನೇ ಅನುವಾಕಗಳು), ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆಯಲ್ಲೂ (೩೧ ಅ. ೧ ೧೬ ಮಂ.) ಅಥರ್ವವೇದದಲ್ಲೂ (೧೯-೬) ಪಠಿತವಾಗಿದೆ. ಇದಲ್ಲದೆ ಈ ಸೂಕ್ತದ ಅನೇಕ ಮಂತ್ರಗಳ ವಿವರಣೆಯು ಶತಃಥ ಬ್ರಾಹ್ಮಣದಲ್ಲೂ, ತೈತ್ತಿರೀಯಬ್ರಾಹ್ಮಣ ಆರಣ್ಯಕಗಳಲ್ಲೂ ನಿರುಕ್ತದಲ್ಲೂ ಛಾಂದೋಗ್ಯ-ಬೃಹದಾರಣ್ಯಕ ಶ್ವೇತಾಶ್ವತರಾದಿ ಉಪನಿಷತ್ತುಗಳಲ್ಲೂ ಬಂದಿವೆ.

'ಪುರುಷ'ನೆಂಬ ಮಹಾವ್ಯಕ್ತಿಯ ಸ್ವರೂಪ-ಶಕ್ತಿ ಸಾಮರ್ಥ್ಯಗಳನ್ನು ವಿವರಿಸುತ್ತಿರುವುದರಿಂದಲೇ ಈ ಸೂಕ್ತಕ್ಕೆ "ಪುರುಷಸೂಕ್ತ"ವೆಂಬ ಹೆಸರು ಬಂದಿದೆಯೆಂಬುದು ಸ್ಪಷ್ಟವಾಗಿದೆಯಾದರೂ ಆ ಪುರುಷನಾರು? ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಸಾಯಣರು ಪರಬ್ರಹ್ಮನೇ ಆ ಪುರುಷ ಎಂದು ಹೇಳಿದರೆ ಶ್ರೀಮದಾಚಾರ್ಯರು ಗುಣ-ಪರಿಪೂರ್ಣನಾದ್ದರಿಂದ (ಭೂಮತಃ-ಅನುವ್ಯಾಖ್ಯಾನ, ೧/೧/೨) ಪುರುಷನಾಮಕನಾದ ಶ್ರೀಮನ್ನಾರಾಯಣನೇ ಈ ಸೂಕ್ತದಿಂದ ಪ್ರತಿಪಾದ್ಯನಾಗಿದ್ದಾನೆಂದು ಅನುವ್ಯಾಖ್ಯಾನದಲ್ಲೂ ಋಗ್ಭಾಷ್ಯದಲ್ಲೂ (೧೮. ಪೀಠಿಕಾಭಾಗ) ಪ್ರತಿಪಾದಿಸಿದ್ದಾರೆ—

ಸ ಪೂರ್ಣತ್ವಾತ್ ಪುಮಾನ್ ನಾಮ ಪೌರುಷೇ ಸೂಕ್ತ ಈರಿತಃ । (ಋಗ್ಭಾಷ್ಯ)

(ಅರ್ಥ) ಪೂರ್ಣನಾದ್ದರಿಂದ ಪುರುಷಶಬ್ದವಾಚ್ಯನಾದ (ಸಃ) ಆ ನಾರಾಯಣನೇ ಪುರುಷಸೂಕ್ತದಲ್ಲಿ ಪ್ರತಿಪಾದಿತನಾಗಿದ್ದಾನೆ. ಪೄ ಧಾತುವಿಗೆ 'ತುಂಬಿರು' 'ಪೂರ್ಣ-ವಾಗಿರು' ಎಂದರ್ಥವಿದೆ; ಇದರ ಮೇಲೆ "ಪೄನಹಿಕಲಿಭ್ಯ ಉಪಚ್" (ಉ. ೪/೭೫) ಎಂಬ ಸೂತ್ರದಂತೆ ಉಷ ಪ್ರತ್ಯಯ ಬಂದು ಪುರುಷ ಎಂದಾಗುವುದರಿಂದ ಪುರುಷ ಶಬ್ದಕ್ಕೆ ಪೂರ್ಣನಾದವನು ಎಂದರ್ಥವಾಗುವುದರಿಂದಲೂ ನಾರಾಯಣಶಬ್ದಕ್ಕೂ ಇದೇ ಅರ್ಥವಾದ್ದರಿಂದ ಪುರುಷಶಬ್ದಕ್ಕೆ ನಾರಾಯಣನೆಂದೇ ಅರ್ಥವೆಂಬುದು ಶ್ರೀಮದಾಚಾರ್ಯರ ಅಭಿಪ್ರಾಯ. ಅವರ ಅಭಿಪ್ರಾಯಕ್ಕೆ ಪುಷ್ಟಿಕೊಡುವಂಥಾ ಅನೇಕ ಶ್ರುತಿಸ್ಮೃತಿವಾಕ್ಯಗಳು ವೇದಗಳಲ್ಲೂ ಅನೇಕ ಪುರಾಣಗಳಲ್ಲೂ ಹೇರಳವಾಗಿ ಉಪಲಭ್ಯವಾಗಿವೆ. ಅಂಥಾ ಅನೇಕ ವಾಕ್ಯಗಳನ್ನು ಮಂತ್ರಾಲಯದ ರಾಯರೂ ಸತ್ಯಸಂಧರೂ ವ್ಯಾಖ್ಯಾನದ ಪೀಠಿಕಾಭಾಗದಲ್ಲಿ ಉಲ್ಲೇಖಿಸಿದ್ದಾರೆ. ಆದಕಾರಣ ಈ ಸೂಕ್ತದಲ್ಲಿ ಹೇಳಿರುವ ಪುರುಷನ ಮಹಿಮೆಗಳೆಲ್ಲಾ ಸಾಕ್ಷಾದ್ವಿಷ್ಣುವಿಗೇ ಸೇರಿದ್ದೆಂದು ಮುಖ್ಯವಾಗಿ ತಿಳಿಯತಕ್ಕದ್ದು.

ಋಷ್ಯಾದಿಗಳು : 'ಸಹಸ್ರಶೀರ್ಷೇ'ತಿ ಷೋಳರ್ಚಸ್ಯ ಸೂಕ್ತಸ್ಯ ನಾರಾಯಣ ಋಷಿಃ । ಅನುಷ್ಟುಪ್ ಛಂದಃ । ಅಂತ್ಯಾ ತ್ರಿಷ್ಟುಪ್ (ಯಜುರ್ವೇದೇ ಅಂತ್ಯಾಸ್ತ್ರಿಸ್ರಸ್ತ್ರಿಷ್ಟುಭಃ) । ಪುರುಷನಾಮಕ ನಾರಾಯಣೋ ದೇವತಾ । ಅಭಿಷೇಕೇ ವಿನಿಯೋಗಃ ॥

ಈಗ ಮೊದಲನೇ ವರ್ಗಕ್ಕೆ ಸೇರಿದ, ಈ ಸೂಕ್ತದ ಪ್ರಾರಂಭದ ನಾಲ್ಕು ಮಂತ್ರಗಳಲ್ಲಿ ಆ ಪುರುಷನಾಮಕ ನಾರಾಯಣನ ಅಪಾರಮಹಿಮೆಯನ್ನು ವೇದಪುರುಷನು ವರ್ಣಿಸುತ್ತಾನೆ.

೧ನೇ ಮಂತ್ರ (ಋಗ್ವೇದ ಪಾಠ)

ಹರಿಃ ಓಂ ॥

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾ ಽತ್ಯತಿಷ್ಠದ್ ದಶಾಂಗುಲಮ್ ೧

ಪದವಿಭಾಗ : ಸುಲಭವಾಗಿದೆ.

ಅನ್ವಯಾರ್ಥ : ಪುರುಷಃ–ಗುಣಪೂರ್ಣನಾದ್ದರಿಂದ ಪುರುಷನಾಮಕನಾದ ಶ್ರೀಮನ್ನಾರಾಯಣನು, ಸಹಸ ಶೀರ್ಷಾ (ಸಹಸ್ರಪದವು ಅನಂತವಾಚಕ)-ಅನಂತ ಶಿರಸ್ಸುಗಳುಳ್ಳವನೂ, ಸಹಸ್ರಾಕ್ಷಃ–ಅನಂತ ಕಣ್ಣುಗಳುಳ್ಳವನೂ, ಸಹಸ್ರಪಾತ್–ಅನಂತ ಪಾದಗಳುಳ್ಳವನೂ ಆಗಿದ್ದಾನೆ. ಉಪಲಕ್ಷಣಯಾ ಅವನ ಒಂದೊಂದು ಅಂಗಾಂಗಗಳೂ ಅನಂತವಾಗಿವೆಯಲ್ಲದೆ ಪರಸ್ಪರ ಭೇದರಹಿತವಾಗಿಯೂ ಇವೆ. ಸಃ-ಅವನು, ಭೂಮಿಂ-ಪ್ರಕೃತಿಯನ್ನು, ಅತಿ–ಅತಿಕ್ರಮಿಸಿ (ಮೀರಿ), ವಿಶ್ವತಃ ವೃತ್ವಾ-ಅದನ್ನು ಒಳಗೆ ಹೊರಗೆ ಎಲ್ಲ ಕಡೆಯೂ ವ್ಯಾಪಿಸಿಕೊಂಡಿರುವುದಲ್ಲದೆ, ದಶಾಂಗುಲಂ ಅತಿ–ಅನೇಕ ಅಂಗುಲ ದೇಶವನ್ನು ಅತಿಕ್ರಮಿಸಿ, ಅತಿಷ್ಠತ್-ಇದ್ದಾನೆ.

ಭಾವಾರ್ಥ : ಆ ಪುರುಷರೂಪಿ ನಾರಾಯಣನಿಗೆ ಶಿರಸ್ಸು, ಕಣ್ಣು, ಕಿವಿ, ಮೊದಲಾದ ಸಕಲಾಂಗಗಳಿದ್ದರೂ ಒಂದೊಂದೂ ಅನಂತವಾಗಿರುವುವಲ್ಲದೆ ಅವು ಪರಸ್ಪರ ಭೇದರಹಿತವೂ ಅನಂತಶಕ್ತಿಯುಳ್ಳವೂ ಆಗಿವೆ. ಆ ಭಗವಂತ ಇಡೀ ಬ್ರಹ್ಮಾಂಡದ ಒಳಗೆಹೊರಗೆಲ್ಲಾ ವ್ಯಾಪಿಸಿಕೊಂಡಿದ್ದಾನಲ್ಲದೆ ಮೂಲಪ್ರಕೃತಿಯನ್ನೂ ಬ್ರಹ್ಮಾಂಡವನ್ನೂ ಮೀರಿ ಅಳತೆಗೆ ಸಿಗದಂತೆ ವ್ಯಾಪ್ತನಾಗಿದ್ದಾನೆ.

ಎರಡನೇ ಮಂತ್ರ

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿ ರೋಹತಿ ೨

ಪದಚ್ಛೇದ : (ಪೂರ್ವಾರ್ಧ ಸುಲಭವಾಗಿದೆ) ಉತ, ಅಮೃತತ್ವಸ್ಯ, ಈಶಾನಃ, ಯತ್, ಅನ್ನೇನ, ಅತಿ, ರೋಹತಿ.

ಅನ್ವಯಾರ್ಥ : ಯತ್ ಇದಂ-ಯಾವ ಈ (ಕಣ್ಣಿಗೆ ಕಾಣುವ) ಜಗತ್ತು ಇದೆಯೋ, ಯತ್ ಭೂತಂ-ಯಾವುದು ಹಿಂದೆ ಇತ್ತೋ, ಯಚ್ಚ ಭವ್ಯಂ-ಯಾವ ಜಗತ್ತು ಮುಂದೆ ಬರುವುದಿದೆಯೋ, (ತತ್) ಸರ್ವಂ-ಅದೆಲ್ಲವೂ, ಪುರುಷಃ ಏವ-ಪುರುಷನಾಮಕನಾದ ಆ ಪರಮಾತ್ಮನ ಅಧೀನವಾಗಿಯೇ ಇದೆ. ಉತ-ಮತ್ತು, ಯತ್-ಯಾವ ಕಾರಣದಿಂದ, ಅನ್ನೇನ-ತಿನ್ನಲು ಯೋಗ್ಯವಾದ ಮರಣಶೀಲವಾದ ಜೀವರನ್ನು, ಮಿತಿಮೀರಿದ್ದಾನೆಯೋ, (ಆದ್ದರಿಂದ) ಅಮೃತತ್ವಸ್ಯ-ಮರಣರಹಿತರಾದ ಮುಕ್ತ-ವರ್ಗಕ್ಕೂ, ಈಶಾನಃ-ಸ್ವಾಮಿಯಾಗಿದ್ದಾನೆ.

ಭಾವಾರ್ಥ : ಈಗಿರುವ, ಹಿಂದಿದ್ದ ಮತ್ತು ಮುಂದೆ ಬರಲಿರುವ ಸಕಲ ಜಗತ್ತುಗಳಿಗೂ ಆ ನಾರಾಯಣನೇ ಸ್ವಾಮಿಯು, ಎಲ್ಲವೂ ಅಧೀನವಾಗಿದೆ. ಈಗಿರುವ ಸಕಲ ಜಗತ್ತಿಗೂ ಅವನೇ ಲಯಕರ್ತ (ಅನ್ನ)ನಾಗಿದ್ದಾನಲ್ಲದೆ ಮೋಕ್ಷಕ್ಕೂ ಮುಕ್ತಜೀವರಿಗೂ ಆ ಭಗವಂತನೇ ರಕ್ಷಕನೂ ನಿಯಾಮಕನೂ ಆಗಿದ್ದಾನೆ.

ಮೂರನೇ ಮಂತ್ರ

ಏತಾವಾನಸ್ಯ ಮಹಿಮಾ ಽತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ೩

ಪದಚ್ಛೇದ : ಏತಾವಾನ್, ಅಸ್ಯ, ಮಹಿಮಾ, ಅತಃ, ಜ್ಯಾಯಾನ್, ಚ, ಪೂರುಷಃ, ಪಾದಃ, ಅಸ್ಯ, ವಿಶ್ವಾ, ಭೂತಾನಿ, ತ್ರಿಪಾತ್, ಅಸ್ಯ, ಅಮೃತಂ, ದಿವಿ ।

ಅನ್ವಯಾರ್ಥ : ಅಸ್ಯ ಮಹಿಮಾ-ಈ ಭಗವಂತನ ಮಹಿಮೆಯು, ಏತಾವಾನ್-ಇಷ್ಟೇನೇ ಎಂದು ತಿಳಿದಿರಾ? ಅಲ್ಲ. ಪೂರುಷಃ-ಅಗಮ್ಯವಾದ ಮಹಿಮೆಯುಳ್ಳ (ಎಂದು ತೋರಿಸುವುದಕ್ಕಾಗಿ ಪೂರುಷಃ ಎಂದು ದೀರ್ಘಸ್ವರ ಬಂದಿದೆ.) ಆ ಪರಮಾತ್ಮನು, ಅತಃ

ಜ್ಯಾಯಾಂಶ್ಚ-ಇದಕ್ಕಿಂತಲೂ ಮೀರಿದ ಮಹಿಮೆಯುಳ್ಳವನು. (ಅದನ್ನೇ ಉತ್ತರಾರ್ಧ ದಲ್ಲಿ ತೋರಿಸುತ್ತಾನೆ.) ವಿಶ್ವಾ ಭೂತಾನಿ-ಚೇತನಾಚೇತನಾತ್ಮಕವಾದ ಸಕಲ ಜಗತ್ತೂ, ಅಸ್ಯ-ಇವನ, ಪಾದಃ-ಇವನ ಸಾಮರ್ಥ್ಯದ ಒಂದು ಅಂಶಮಾತ್ರಕ್ಕೆ ಸಮಾನವಾಗಿದೆ. ಅಸ್ಯ-ಇವನ, ಅಮೃತಂ-ನಾಶರಹಿತವಾದ, ತ್ರಿಪಾತ್-ನಾರಾಯಣ ವಾಸುದೇವ ವೈಕುಂಠ ವೆಂಬ ಸ್ವರೂಪಭೂತ ರೂಪತ್ರಯವು, ದಿವಿ-ಶ್ವೇತದ್ವೀಪಾನಂತಾಸನವೈಕುಂಠಾಖ್ಯ ಮೂರು ಸ್ಥಾನಗಳಲ್ಲಿ, ಇರುವಂಥಾದ್ದಾಗಿದೆ (ಎಂದು ಕ್ರಿಯಾಪದವನ್ನು ಅಧ್ಯಾಹಾರ ಮಾಡಿ ಸೇರಿಸಿಕೊಳ್ಳಬೇಕು.)

ಭಾವಾರ್ಥ : ಆ ಭಗವಂತನ ಮಹಿಮೆಯು ಇಷ್ಟು ಮಾತ್ರವೇ ಎಂದು ತಿಳಿದಿರಾ? ಛೇ, ಎಂದಿಗೂ ಅಲ್ಲ (ಎಂದು ವೇದಪುರುಷನು ಹೇಳುತ್ತಾನೆ). ಅವನ ಮಹಿಮೆಯು ಅಗಮ್ಯವೂ ಅಪಾರವೂ ಆಗಿದ್ದು ಕಲ್ಪನೆಗೂ ಮೀರಿದಂಥಾದ್ದಾಗಿದೆ. ಏಕೆಂದರೆ ಚೇತನಾ-ಚೇತನಾತ್ಮಕವಾದ ಸಕಲ ಜಗತ್ತೂ ಅವನ ಅಚಿಂತ್ಯ ಮಹಿಮೆಯ ಎಲ್ಲೋ ಕಿಂಚಿತ್-ಭಾಗದಷ್ಟನ್ನು ಹೋಲುತ್ತಾ ಅವನಿಂದ ಅತ್ಯಂತ ಭಿನ್ನವಾಗಿದೆ. ಅವನ ಸ್ವರೂಪಭೂತ ವಾದ ನಾರಾಯಣ ವಾಸುದೇವ ವೈಕುಂಠಾಖ್ಯ ಮೂರು ರೂಪಗಳು ಬ್ರಹ್ಮಾಂಡದ ಆಚೆ ಇರತಕ್ಕ ಶ್ವೇತದ್ವೀಪ ಅನಂತಾಸನ ವೈಕುಂಠಗಳೆಂಬ ಮೂರು ಸ್ಥಾನಗಳಲ್ಲಿ ಅಜರಾಮರ ವಾಗಿ ಅನಾದ್ಯನಂತ ಕಾಲದಲ್ಲಿ ಶಶ್ವದೇಕಪ್ರಕಾರವಾಗಿ ನೆಲೆಸಿವೆ.

ನಾಲ್ಕನೇ ಮಂತ್ರ

ತ್ರಿಪಾದೂರ್ಧ್ವ ಉದೈತ್ ಪುರುಷಃ
ಪಾದೋಽಸ್ಯೇಹಾಭವತ್ ಪುನಃ ।
ತತೋ ವಿಷ್ವಙ್ ವ್ಯಕ್ರಾಮತ್ ಸಾಶನಾನಶನೇ ಅಭಿ ॥೪

ಪದವಿಭಾಗ : ತ್ರಿಪಾತ್, ಊರ್ಧ್ವೇ ಅಥವಾ ಊರ್ಧ್ವಃ, ಉತ್, ಐತ್, ಪುರುಷಃ, ಪಾದಃ, ಅಸ್ಯ, ಇಹ, ಅಭವತ್, ಪುನಃ, ತತಃ, ವಿಷ್ವಙ್, ವಿ, ಅಕ್ರಾಮತ್, ಸಾಶನಾನಶನೇ, ಅಭಿ ।

ಅನ್ವಯಾರ್ಥ : ಪುರುಷಃ-ಆ ಭಗವಂತನು, ಊರ್ಧ್ವೇ-ಹಿಂದೆ ಹೇಳಿದ ಮೇಲಿನ ಲೋಕಗಳಾದ ಶ್ವೇತದ್ವೀಪಾನಂತಾಸನವೈಕುಂಠಗಳೆಂಬ ಸ್ಥಾನತ್ರಯದಲ್ಲಿ, ತ್ರಿಪಾತ್-ನಾರಾಯಣ ವಾಸುದೇವ ವೈಕುಂಠಗಳೆಂಬ ರೂಪತ್ರಯದಿಂದ, ಉದೈತ್-ಸದಾ ಇರು

ತ್ತಾನೆ. ಅಥವಾ ತ್ರಿಪಾತ್ ಪುರುಷಃ-ನಾರಾಯಣಾದಿ ರೂಪತ್ರಯವುಳ್ಳ ಭಗವಂತನು, ಊರ್ಧ್ವಃ-ಶ್ವೇತದ್ವೀಪಾದಿ ಮೂರು ಮೇಲಿನ ಲೋಕಗಳಲ್ಲಿ, ಉದೈತ್-ಸದಾ ಇರುತ್ತಾನೆ. ಅಥವಾ ತ್ರಿಪಾತ್ ಪುರುಷಃ-ನಾರಾಯಣಾದಿ ರೂಪತ್ರಯವುಳ್ಳ ಭಗವಂತನು, ಊರ್ಧ್ವಃ-ನಿತ್ಯವೂ ಉತ್ಕೃಷ್ಟನಾಗಿ (ಸರ್ವೋತ್ತಮನಾಗಿ) ಅಥವಾ ಉತ್ಕೃಷ್ಟವಾದ ಅನಂತ ಗುಣವುಳ್ಳವನಾಗಿ ಅಥವಾ ಸ್ವಷ್ಟ್ಯಾದ್ಯಷ್ಟಕರೂಪ ಉದ್ಯಮವುಳ್ಳವನಾಗಿ, ಉದೈತ್-ಸದಾ ಇದ್ದಾನೆ. ಅಥವಾ ಸದಾ ಪ್ರಕಾಶಮಾನನಾಗಿಯೂ ಇದ್ದಾನೆ.

1. 'ಪುನಃ' ಶಬ್ದಕ್ಕೆ ಇಲ್ಲಿ 'ಭಿನ್ನವಾದ' ಎಂದು ಅರ್ಥ ಹೇಳಬೇಕು. 'ಪುನರಪ್ರಥಮೇ ಭೇದೇ' ಎಂದು ಕೋಶ. 2. ವಿಷಙ್ ಶಬ್ದ ಅಂಚೂ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವಿಗೆ ಹೋಗು, ಪೂಜಿಸು ಎಂದು ಎರಡು ಅರ್ಥವಿರುವುದರಿಂದ ವಿಶ್ವಙ್ ಎಂದರೆ ಸರ್ವತ್ರ ಗತಿಯುಳ್ಳ (ಸರ್ವತ್ರ ಇರುವ) ಎಂದೂ ಸರ್ವತ್ರ ಪೂಜ್ಯ ಎಂದೂ ಎರಡರ್ಥ ಆಗುತ್ತವೆ. 3. ಸಾಶನಾನಶನೇ ಎಂಬಲ್ಲಿ ಸಾಶನ, ಅನಶನ ಎಂದು ಎರಡು ಪದಗಳಿವೆ. ಅಶನ ಎಂದರೆ ಆಹಾರ, ಅನ್ನ. ಅದರಿಂದ ಕೂಡಿದ್ದು ಅಥವಾ ಸಹಿತವಾದದ್ದು ಸಾಶನ. ಇದಕ್ಕೆ ಸಾಯಣರು 'ಭೋಜನಾದಿ ವ್ಯವಹಾರೋಪೇತಂ ಚೇತನಂ ಪ್ರಾಣಿಜಾತಂ'—ಆಹಾರದಿಂದ ಬದುಕುವ ಪ್ರಾಣಿಗಳು—ಚೇತನಸಮೂಹ ಎಂದು ಅರ್ಥ ಮಾಡಿದ್ದಾರೆ. ತದ್ವಿರುದ್ಧವಾದುದು ಅನಶನ. ಅದಕ್ಕೆ 'ಅಚೇತನಂ ಗಿರಿನದ್ಯಾದಿಕಂ' - ಅಚೇತನವಾದ ಬೆಟ್ಟ, ನದೀ ಮೊದಲಾದುವು ಎನ್ನುತ್ತಾರೆ. ಭಾಗವತ ತಾತ್ಪರ್ಯದಲ್ಲಿ ಉದಾಹರಿಸಿದ 'ನಿರನ್ನೇಷು ಚ ವಿದ್ವತ್ಸು ತ್ರಿದಶೇಷ್ವಿತರೇಷು ಚ' (೨ ಸ್ಕಂ. ೬ ಅಧ್ಯಾ. ೨೦ ಶ್ಲೋ.) ಎಂಬ ಪ್ರಮಾಣರೀತ್ಯಾ ಸಾಶನ ಎಂದರೆ ಅನ್ನಗತಪ್ರಾಣರಾದ ಮನುಷ್ಯರೆಂದೂ, ಅದಕ್ಕೆ ವಿರುದ್ಧರಾದ ದೇವತೆಗಳು ಮತ್ತು ಮುಕ್ತ್ಯಾದಿಗಳು ಎಂದರ್ಥ. ಭಾಗವತತಾತ್ಪರ್ಯ, ಛಾಂದೋಗ್ಯಭಾಷ್ಯ, ಬೃಹದ್ಭಾಷ್ಯಗಳಲ್ಲಿ ಉದಹರಿಸಿದ ಪ್ರಮಾಣಗಳಂತೆ ಈ ಋಕ್ಕಿಗೆ ಅನೇಕ ರೀತಿ ಅರ್ಥವಾಗುತ್ತದೆ.

ಎರಡನೇ ಪಾದದ ಅರ್ಥ: ಅಸ್ಯ-ಇವನ, ಎಂದರೆ ಪುರುಷನಾಮಕ ಭಗವಂತನ, ಪುನಃ-ಪ್ರಪಂಚದಿಂದ ಭಿನ್ನವಾದ, ಪಾದಃ-ನಿಯಾಮಕರೂಪವು, ಇಹ-ಇಲ್ಲಿ (ನಿಯಮ್ಯವಾದ ಪ್ರಪಂಚದಲ್ಲಿ), ಅಭವತ್-ಸದಾ ಇರುತ್ತದೆ. (2ನೇ ಅರ್ಥ) ಅಸ್ಯ-ಈ ಭಗವಂತನ, ಪುನಃ-ಜಗದ್ವಿಲಕ್ಷಣವಾದ, ಪಾದಃ-ಯಜ್ಞಪುರುಷನಾಮಕ (ಮತ್ತೊಂದು) ರೂಪವು, ಇಹ-ಇಲ್ಲಿ ಎಂದರೆ ೧) ಮೇರುಪರ್ವತದಲ್ಲೂ, ೨) ಸೂರ್ಯಮಂಡಲದಲ್ಲೂ ೩) ಇಂದ್ರಲೋಕಕ್ಕೆ ಸಮೀಪದಲ್ಲಿರುವ ಅಗ್ನಿಲೋಕದಲ್ಲೂ, ೪) ಧ್ರುವಲೋಕದಲ್ಲೂ (ಹೀಗೆ ನಾಲ್ಕು ಸ್ಥಾನಗಳಲ್ಲಿ), ಅಭವತ್-ಇರುತ್ತದೆ. ಈ ನಾಲ್ಕು ಲೋಕಗಳಲ್ಲಿರುವ ಯಜ್ಞನಾಮಕ ವಿಷ್ಣುವನ್ನು ಕ್ರಮವಾಗಿ ವಾನಪ್ರಸ್ಥ, ಬ್ರಹ್ಮಚಾರಿ, ಗೃಹಸ್ಥ ಮತ್ತು ಯತಿಗಳಾದ ಜ್ಞಾನಿಗಳು ಪೂಜಿಸಿ ಧ್ಯಾನಿಸುತ್ತಾರೆ.

ಉತ್ತರಾರ್ಧದ ಅರ್ಥ : ತತಃ-ಅದ್ದರಿಂದ (ನಾಲ್ಕು ಸ್ಥಾನಗಳಲ್ಲಿದ್ದು ಚತುರಾಶ್ರಮದ ಜ್ಞಾನಿಗಳಿಂದ ಪೂಜ್ಯನಾಗಿಯೂ ಅವರಿಗೆ ನಿಯಾಮಕನಾಗಿಯೂ ಇರುವುದರಿಂದ), ವಿಶ್ವಙ್-ಸರ್ವತ್ರ ವ್ಯಾಪಿಸಿಕೊಂಡು ಇರುವುದಲ್ಲದೆ ಪೂಜ್ಯನೂ ಆಗಿರುವ, ತ್ರಿಪಾತ್-ನಾರಾಯಣ ವಾಸುದೇವ ವೈಕುಂಠಾಖ್ಯ ರೂಪತ್ರಯವುಳ್ಳ ಪರಮಾತ್ಮನು, ಸಾಶನ-ಆಹಾರದ ಬಲದಿಂದಲೇ ಬದುಕುವ ಮನುಷ್ಯರ ಮತ್ತು ಮನುಷ್ಯಾದಿಗಳ ಸಮುದಾಯವನ್ನೂ, ಅನಶನೇ-ಅನ್ನಾಧೀನ ಸ್ಥಿತಿಯಿಲ್ಲದ ದೇವತಾಸಮೂಹವನ್ನೂ, ಅಭಿ-ಉದ್ದೇಶಿಸಿ (ಎಂದರೆ ಚರಾಚರಾತ್ಮಕ ಜಗತ್ತಿನ ಹಾಗೆ ದೇವರ್ಷಿ ಮನುಷ್ಯಾದಿ ಸಮಸ್ತ ಚೇತನವರ್ಗದ ಕ್ಷೇಮಕ್ಕಾಗಿ ಎಂದರ್ಥ), ವ್ಯಕ್ರಾಮತ್-ಸರ್ವತ್ರ ಆಕ್ರಮಿಸಿಕೊಂಡು ಇದ್ದಾನೆಂದು ಅರ್ಥ.

ಭಾವಾರ್ಥ : (ಪ್ರಥಮ ಪಾದ) ಹೀಗೆ ನಾರಾಯಣ ವಾಸುದೇವ ವೈಕುಂಠ ಎಂಬ ರೂಪತ್ರಯವುಳ್ಳ ಆ ಪುರುಷನು ಬ್ರಹ್ಮಾಂಡದ ಆಚೆ ಇರತಕ್ಕ ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಸದಾ ಇದ್ದಾನೆ. ಅದ್ದರಿಂದ ಅವನು ಎಲ್ಲರಿಗೂ ಮೀರಿದ ಮಹಿಮೆಯುಳ್ಳವನು. ಅತ ಏವ ಸರ್ವೋತ್ತಮನೂ, ಸರ್ವಸ್ಮಾದ್ಭಿನ್ನನೂ ಆಗಿದ್ದಾನೆ.

(ದ್ವಿತೀಯ ಪಾದ) ಹಾಗೆಯೇ ಆ ಭಗವಂತನೇ ಯಜ್ಞನಾಮಕನಾಗಿ ಮೇರು-ಪರ್ವತದಲ್ಲಿದ್ದು ವಾನಪ್ರಸ್ಥರಿಂದ ಪೂಜ್ಯನೂ ಪ್ರಾಪ್ಯನೂ ಆಗಿದ್ದಾನೆ. ಸೂರ್ಯಮಂಡಲದಲ್ಲಿದ್ದುಕೊಂಡು ಬ್ರಹ್ಮಚಾರಿಗಳಿಂದ ಪೂಜ್ಯನಾಗಿ ಪ್ರಾಪ್ಯನಾಗಿದ್ದಾನೆ. ಗೃಹಸ್ಥರಾದ ಜ್ಞಾನಿಗಳು ಅಗ್ನಿಲೋಕದಲ್ಲಿರುವ ಯಜ್ಞನಾಮಕ ಭಗವಂತನನ್ನು ಅರ್ಚಿಸಿದರೆ ಯತೀಶ್ವರರು (ಸಂನ್ಯಾಸಿಗಳು) ಧ್ರುವಲೋಕದಲ್ಲಿರುವ ಭಗವದ್ರೂಪವನ್ನು ಅರ್ಚಿಸಿ ಸದ್ಗತಿ ಪಡೆಯುತ್ತಾರೆ. (ಈ ವಿಚಾರಗಳೆಲ್ಲ ಭಾಗವತ ತಾತ್ಪರ್ಯದಲ್ಲಿ ಉದಹರಿಸಿರುವ ಬ್ರಹ್ಮಾಂಡ ಪುರಾಣದಲ್ಲಿ ಹೇಳಿರುವ ವಿಚಾರವಿಶೇಷಗಳು.)

(ಉತ್ತರಾರ್ಧ) ಈ ಪ್ರಕಾರ ಅನಂತವೂ ಅಪಾರವೂ ಆದ ಮಹಿಮೆಯುಳ್ಳವನಾದ್ದರಿಂದ ಅತ್ಯಂತ ಭಿನ್ನನೂ ಸರ್ವೋತ್ತಮನೂ ಆದ ಆ ಪರಮಾತ್ಮನು ಅನೇಕ ಲೋಕಗಳಲ್ಲಿ ವ್ಯಾಪ್ತನಾಗಿದ್ದು ಭಿನ್ನಭಿನ್ನ ಅಧಿಕಾರಿಗಳಿಂದ ಪೂಜೆಯನ್ನು ಸ್ವೀಕರಿಸುತ್ತಾ ಚರಾಚರಾತ್ಮಕವಾದ ಜಗತ್ತನ್ನೂ ದೇವರ್ಷಿ ಮಾನವಾದಿ ಅನೇಕ ಬಗೆಯಾಗಿರುವ ಸಕಲ ಜೀವರಿಗೆ ಸೃಷ್ಟಿಸ್ಥಿತ್ಯಾದಿ ಪ್ರವೃತ್ತಿಯನ್ನು ಕೊಡುವುದಕ್ಕಾಗಿ ಅನಂತರೂಪಗಳಿಂದ ಬ್ರಹ್ಮಾಂಡವನ್ನು ವ್ಯಾಪಿಸಿ ಗತಿಪ್ರದನಾಗಿದ್ದಾನೆಂದು ತಾತ್ಪರ್ಯ.

ಐದನೇ ಮಂತ್ರ

ಈ ಐದನೇ ಮಂತ್ರದಲ್ಲಿ ಬ್ರಹ್ಮಾಂಡವೂ ಬ್ರಹ್ಮನೂ ಸೃಷ್ಟಿಯಾದ ವಿಚಾರವು ಹೇಳಲ್ಪಟ್ಟಿದೆ.

ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ।

ಸ ಜಾತೋ ಅತ್ಯರಿಚ್ಯತ ಪಶ್ಚಾದ್ ಭೂಮಿಮಥೋ ಪುರಃ ॥೫॥

ಪದವಿಭಾಗ: ತಸ್ಮಾತ್, ವಿರಾಟ್, ಅಜಾಯತ, ವಿರಾಜಃ, ಅಧಿ, ಪೂರುಷಃ, ಸಃ, ಜಾತಃ, ಅತ್ಯರಿಚ್ಯತ, ಪಶ್ಚಾತ್, ಭೂಮಿಂ, ಅಥೋ, ಪುರಃ ।

ಅನ್ವಯಾರ್ಥ: ತಸ್ಮಾತ್-ಅವನಿಂದ (ಪುರುಷನಾಮಕ ನಾರಾಯಣನಿಂದ), ವಿರಾಟ್-ಸ್ವರ್ಣಮಯವಾದ ಬ್ರಹ್ಮಾಂಡವು, ಅಜಾಯತ-ಹುಟ್ಟಿತು. ವಿರಾಜಃ-(ಪಂಚಮೀ ವಿಭಕ್ತಿ) ಆ ಬ್ರಹ್ಮಾಂಡದಿಂದ, ಪೂರುಷಃ ಶೇಷಶಾಯಿಯಾದ ಪರಮಾತ್ಮನು, ಅಜಾಯತ-ಅಭಿವ್ಯಕ್ತನಾದನು. ವಿರಾಜಃ-ಬ್ರಹ್ಮಾಂಡದಿಂದ, ಪೂರುಷಃ-ವಿರಾಟ್‌ನಾಮಕ ಚತುರ್ಮುಖ ಬ್ರಹ್ಮನು, ಅಧಿ-ಅದಕ್ಕೆ ಅಧಿಪತಿಯಾಗಿ, ಅಜಾಯತ-ಹುಟ್ಟಿದನು. ತಸ್ಮಾತ್ (ಎಂದು ಪುನಃ ಆವೃತ್ತಿ ಮಾಡಿಕೊಳ್ಳಬೇಕು) ಶೇಷಶಾಯಿಯಾದ ಆ ಪರಮಾತ್ಮನ ನಾಭಿಪದ್ಮದಿಂದ, ವಿರಾಟ್ ಪೂರುಷಃ-ಜೀವಾದಿ ನಿಯಾಮಕನಾದ ವಿರಾಟ್‌ನಾಮಕ ಚತುರ್ಮುಖನು (ಎರಡನೇ ರೂಪದಿಂದ), ಅಜಾಯತ-ಹುಟ್ಟಿದನು. ತಸ್ಮಾತ್-ಅದಕಾರಣ (ಪರಮಾತ್ಮನಿಂದ ಬ್ರಹ್ಮ ಹುಟ್ಟಿದ ಕಾರಣ), ವಿರಾಜಃ-ವಿರಾಟ್ ನಾಮಕ ಬ್ರಹ್ಮನಿಗಿಂತ, ಪೂರುಷಃ-ಭಗವಂತನು, ಅಧಿ-ಉತ್ತಮನು. (ಉತ್ತರಾರ್ಧ) ಜಾತಃ ಸಃ-ಬ್ರಹ್ಮಾಂಡದಿಂದಲೂ ಭಗವಂತನ ನಾಭಿಕಮಲದಿಂದಲೂ (ಬೇರೆಬೇರೆಯಾಗಿ) ಹುಟ್ಟಿದ ಆ ಬ್ರಹ್ಮನು, ಪಶ್ಚಾತ್ ತನ್ನ ಸೃಷ್ಟಿಯಾದ ಬಳಿಕ ಹುಟ್ಟಿದ, ಭೂಮಿಂ-ಭೂಮ್ಯಾದಿ ಸಕಲ ಪ್ರಪಂಚವನ್ನೂ, ಅಥೋ-ಮತ್ತು, ಪುರಃ-ತನಗಿಂತ ಮೊದಲು ಹುಟ್ಟಿದ ಬ್ರಹ್ಮಾಂಡವನ್ನೂ, ಅತ್ಯರಿಚ್ಯತ-ಮೀರಿ (ಶ್ರೇಷ್ಠನಾಗಿ) ಇದ್ದನು. (ಸೂಚನೆ— ಈ ಮಂತ್ರದಲ್ಲೂ ತಸ್ಮಾತ್ ಮೊದಲಾದ ಕೆಲವು ಪದಗಳನ್ನು ಅನೇಕ ಸಾರಿ ಆವೃತ್ತಿ ಮಾಡಿಕೊಂಡು ಹೇಳಿರುವುದನ್ನು ಗಮನಿಸಿರಿ.)

ಭಾವಾರ್ಥ: ಪುರುಷನಾಮಕ ಪರಮಾತ್ಮನಿಂದ ಸ್ವರ್ಣಮಯವಾದ ವಿರಾಡ್-ನಾಮಕ ಬ್ರಹ್ಮಾಂಡವು ಹುಟ್ಟಿತು. ಅದರಲ್ಲಿ ಶ್ರೀವಿಷ್ಣುವು ಶೇಷಶಾಯಿಯಾಗಿ ಪವಡಿಸಿದನು. ಭಗವಂತನ ನಾಭಿಕಮಲದಿಂದಲೂ ಬ್ರಹ್ಮಾಂಡದಿಂದಲೂ ಬೇರೆಬೇರೆ ಎರಡು ರೂಪಗಳಿಂದ ಬ್ರಹ್ಮನು ಹುಟ್ಟಿದನು. ನಾಭಿಪದ್ಮದಿಂದ ಹುಟ್ಟಿದ ಬ್ರಹ್ಮನಿಂದ ಭೂಮ್ಯಾದಿಗಳ ಸೃಷ್ಟಿಯಾಯಿತು. ಭಗವಂತನ ನಾಭಿಯಿಂದ ಬ್ರಹ್ಮ ಹುಟ್ಟಿದ್ದರಿಂದ ಬ್ರಹ್ಮನಿಗಿಂತಲೂ ಶ್ರೀಹರಿಯೇ ಶ್ರೇಷ್ಠನು. ಆದರೆ ಬ್ರಹ್ಮನು ತನಗೆ ಪೂರ್ವದಲ್ಲಿ ಸೃಷ್ಟವಾದ ಬ್ರಹ್ಮಾಂಡಕ್ಕಿಂತಲೂ ತಾನು ಸೃಷ್ಟಿ ಮಾಡಿದ ಭೂಮ್ಯಾದಿ (ರುದ್ರಾದಿ ದೇವತೆ) ಗಳಿಗಿಂತಲೂ ಶ್ರೇಷ್ಠನಾಗಿದ್ದಾನೆ. ಶ್ರೀಹರಿಗೆ ಹೋಲಿಸಿದರೆ ಅಧಮನು.

ಆರನೇ ಮಂತ್ರ

ಈ ಮಂತ್ರದಲ್ಲಿ ದೇವತೆಗಳು ಸಾಧನಸಲಕರಣೆಗಳು ಸಿದ್ಧವಾಗಿರಲಿಲ್ಲವಾದ್ದರಿಂದ ಮಾನಸಿಕ ಯಜ್ಞವನ್ನೇ ಮಾಡಿದ ವಿವರಣೆಯನ್ನು ಹೇಳುತ್ತಾನೆ—

ಯತ್ ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ ೬ ॥

ಪದವಿಭಾಗ ಸುಲಭವಾಗಿದೆ.

ಅನ್ವಯಾರ್ಥ : ಯತ್-ಯಾವಾಗ, ದೇವಾಃ- ಬ್ರಹ್ಮನಿಂದ ಸೃಷ್ಟರಾದ ರುದ್ರಾದಿ ದೇವತೆಗಳು, ಪುರುಷೇಣ ಹವಿಷಾ-ಪುರುಷನಾಮಕ ಚತುರ್ಮುಖ ಬ್ರಹ್ಮನನ್ನೇ ಮನಸ್ಸಿನಿಂದ ಹವಿಸ್ಸೆಂದು ಸಂಕಲ್ಪಿಸಿ ಆ ಹವಿಸ್ಸಿನಿಂದ, ಯಜ್ಞಂ-ಯಜ್ಞನಾಮಕ ವಿಷ್ಣುವನ್ನು, ಯಜ್ಞಂ (ಎಂದು ಆವೃತ್ತಿ ಮಾಡಿಕೊಳ್ಳಬೇಕು) ಯಜ್ಞದಿಂದ, ಅತನ್ವತ-ಮಾಡಿದರೋ ಆಗ, ಅಸ್ಯ-ಈ ಯಜ್ಞಕ್ಕೆ, ವಸಂತಃ-(ಹಸುಗಳು ಸಮೃದ್ಧವಾಗಿ ಹಾಲು ಕರೆಯುವ ಕಾಲವಾದ) ವಸಂತಋತುವಿನ ಅಭಿಮಾನಿದೇವತೆಯು, ಆಜ್ಯಂ-ತುಪ್ಪವಾಗಿಯೂ, ಗ್ರೀಷ್ಮಃ-(ಕಟ್ಟಿಗೆಗಳು ಚೆನ್ನಾಗಿ ಒಣಗುವ) ಬೇಸಿಗೆಯು ಅಭಿಮಾನಿಯು, ಇಧ್ಮಃ-ಸಮಿತ್ತುಗಳಾಗಿಯೂ, ಶರತ್- ಪುರೋಡಾಶಕ್ಕೆ ಅನುಕೂಲವಾಗುವಂತೆ ದವಸ ಧಾನ್ಯಗಳು ಪಕ್ವವಾಗುವ) ಶರದೃತುವಿನ ಅಭಿಮಾನಿಯು, ಹವಿಃ-ಪುರೋಡಾಶಾದಿ ರೂಪ ಹವಿಸ್ಸಾಗಿಯೂ, ಆಸೀತ್-ಆಯಿತು. ವಸಂತಋತುವಿನ ಅಭಿಮಾನಿದೇವತೆಯನ್ನೇ ಆಜ್ಯವಾಗಿಯೂ ಗ್ರೀಷ್ಮಾಭಿಮಾನಿಯನ್ನೇ ಸಮಿತ್ತುಗಳಾಗಿಯೂ ಶರತ್ಕಾಲಾಭಿಮಾನಿ ದೇವತೆಯನ್ನೇ ಹವಿಸ್ಸೆಂದೂ ಕಲ್ಪಿಸಿಕೊಂಡು ಮಾನಸಿಕ ಯಜ್ಞ ಮಾಡಿಕೊಂಡರೆಂದು ಭಾವ.

ಭಾವಾರ್ಥ : ಬ್ರಹ್ಮದೇವರು ಭಗವಂತನಿಂದ ಲೋಕಸೃಷ್ಟಿಗಾಗಿ ಪ್ರೇರಿತರಾಗಿ ಚರಾಚರಾತ್ಮಕ ಜಗತ್ತನ್ನೂ ಅದಕ್ಕೆ ಅಭಿಮಾನಿಗಳಾದ ರುದ್ರೇಂದ್ರಾದಿ ದೇವತೆಗಳನ್ನೂ ಸೃಷ್ಟಿಮಾಡಿದರು. ಆ ದೇವತೆಗಳು ಸಕಲ ಜಗನ್ನಿಯಾಮಕನಾದ ಯಜ್ಞನಾಮಕ ವಿಷ್ಣುವನ್ನು ಯಜ್ಞದಿಂದ ಆರಾಧಿಸಲು ಇಚ್ಛಿಸಿದರು. ಆದರೆ ಯಜ್ಞಕ್ಕೆ ಬೇಕಾದ ಸಲಕರಣೆಗಳೆಲ್ಲಾ ಇನ್ನೂ ಸ್ಪಷ್ಟವಾಗಿ ಸಿದ್ಧವಾಗಿರಲಿಲ್ಲ. ಆದಕಾರಣ ರುದ್ರಾದಿ ದೇವತೆಗಳು ಬ್ರಹ್ಮನನ್ನೇ ಯಜ್ಞಪಶುವೆಂದೂ ವಸಂತದೇವತೆಯನ್ನೇ ಆಜ್ಯವೆಂದೂ ಗ್ರೀಷ್ಮಾಭಿಮಾನಿಯನ್ನೇ ಸಮಿತ್ತುಗಳೆಂದೂ ಶರದೃತುದೇವತೆಯನ್ನೇ ಪುರೋಡಾಶಾದಿ ಹವಿಸ್ಸೆಂದೂ ಮನಸಾ ಸಂಕಲ್ಪ ಮಾಡಿ ಮಾನಸಿಕಯಜ್ಞದಿಂದ ಆ ಭಗವಂತನನ್ನು ಆರಾಧಿಸಿದರು.

(ಅದೇ ರೀತಿ ನಾವೆಲ್ಲರೂ ಸಹ ಗಂಧಪುಷ್ಪನೈವೇದ್ಯಾದಿ ಸಕಲ ಸಾಧನಗಳು ಇಲ್ಲದಿದ್ದರೂ ಮನಸ್ಸಿನಿಂದಲೇ ಅವನ್ನೆಲ್ಲ ಸಂಕಲ್ಪಿಸಿಕೊಂಡಾದರೂ ಭಗವಂತನನ್ನು ಪೂಜಿಸಬೇಕು. ಧೂಪವಿಲ್ಲದಿದ್ದರೂ ನೀರಿನಿಂದಲೇ ಧೂಪಾರತಿ ಮಾಡಬಹುದು. ಗಂಧವಿಲ್ಲದಿದ್ದರೂ ಗಂಧಂ ಸಮಯಾಮಿ ಎಂದು ಹೇಳಿ ಕೈಮುಗಿಯಬೇಕು. ಪೂಜೆಯನ್ನು ಬಿಡಬಾರದು. ಭಗವಂತ ಅಷ್ಟರಿಂದಲೆ ತೃಪ್ತನಾಗುತ್ತಾನೆ ಎಂಬುದು ಈ ಮಂತ್ರದ ಗೂಢಾಭಿಪ್ರಾಯ.)

ಏಳನೇ ಮಂತ್ರ

'ಯತ್ಪುರುಷೇಣ' ಎಂಬ ಆರನೇ ಮಂತ್ರವಾದ ಬಳಿಕ ತೈತ್ತಿರೀಯ (ಕೃಷ್ಣ-ಯಜುರ್ವೇದ) ಪಾಠದಲ್ಲಿ 'ಸಪ್ತಾಸ್ಯಾಸನ್' ಎಂಬ ಮಂತ್ರವನ್ನು ಏಳನೇ ಮಂತ್ರವಾಗಿ ಪಠಿಸಲಾಗಿದೆ. ಋಗ್ವೇದಪಾಠರೀತ್ಯಾ 'ಸಪ್ತಾಸ್ಯಾಸನ್' ಎಂಬುದು ಹದಿನೈದನೇ ಮಂತ್ರ. ಆದರೆ ಶ್ರೀ ರಾಘವೇಂದ್ರಸ್ವಾಮಿಗಳು ಏಳನೇ ಮಂತ್ರಕ್ಕೆ ಅರ್ಥ ಹೇಳುವಾಗ 'ಸಪ್ತಾಸ್ಯಾಸನ್' ಎಂಬ ಮಂತ್ರಕ್ಕೇ ಅರ್ಥ ಹೇಳಿ ಅನಂತರ ಋಗ್ವೇದಪಾಠರೀತ್ಯಾ 'ತಂ ಯಜ್ಞಂ' ಎಂಬ ಏಳನೇ ಮಂತ್ರಕ್ಕೆ ವ್ಯಾಖ್ಯಾನ ಮಾಡಿರುವುದರಿಂದ ಅವರ ಮಾರ್ಗವನ್ನನುಸರಿಸಿ ನಾವೂ ಇಲ್ಲಿ ಮೊದಲು 'ಸಪ್ತಾಸ್ಯಾಸನ್' ಎಂಬ ಮಂತ್ರಕ್ಕೆ ಅರ್ಥ ಬರೆದು, ಅನಂತರ ಋಗ್ವೇದಿಪಾಠರೀತ್ಯಾ 'ತಂ ಯಜ್ಞಂ' ಮಂತ್ರಾರ್ಥ ಬರೆಯುತ್ತೇವೆ.

ಸಪ್ತಾಸ್ಯಾಸನ್ ಪರಿಧಯು—ಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್॥

ಪದವಿಭಾಗ : ಸಪ್ತ, ಅಸ್ಯ, ಆಸನ್, ಪರಿಧಯಃ, ತ್ರಿಃ......ದೇವಾಃ, ಯತ್, ಯಜ್ಞಂ, ತನ್ವಾನಾಃ......

ಅನ್ವಯಾರ್ಥ : (ದೇವತೆಗಳು ಮಾಡಿದ ಆ ಮಾನಸಿಕ ಯಜ್ಞವನ್ನೇ ಈ ಮಂತ್ರದಲ್ಲೂ ಮುಂದುವರೆಸಿ ಹೇಳುತ್ತಾರೆ.) (ಉತ್ತರಾರ್ಧವನ್ನು ಮೊದಲು ಅನ್ವಯಿಸಿಕೊಂಡು ಅನಂತರ ಪೂರ್ವಾರ್ಧಕ್ಕೆ ಅರ್ಥ ಹೇಳಿದರೆ ಅನ್ವಯ ಚೆನ್ನಾಗಿ ಹೊಂದುತ್ತದೆ.)

ಯತ್-ಯಾವಾಗ, ದೇವಾಃ-ರುದ್ರಾದಿ ದೇವತೆಗಳು, ಯಜ್ಞಂ-ಯಜ್ಞನಾಮಕ ವಿಷ್ಣುವನ್ನುದ್ದೇಶಿಸಿ, ಯಜ್ಞಂ (ಆವೃತ್ತಿ ಮಾಡಿಕೊಳ್ಳಬೇಕು)-ಮಾನಸಿಕ ಯಜ್ಞವನ್ನು ತನ್ವಾನಾಃ-ಮಾಡುವವರಾಗಿ (ಮಾಡಲು ಆರಂಭಿಸಿ ಎಂದರ್ಥ), ಪುರುಷಂ-ಪುರುಷ ನಾಮಕ ಚತುರ್ಮುಖನನ್ನೇ, ಪಶುಂ-ಯಜ್ಞಪಶುವೆಂದು ಭಾವಿಸಿ, ಅಬಧ್ನನ್-ಯೂಪಕ್ಕೆ (ಯಜ್ಞದ ಕಂಬಕ್ಕೆ) ಕಟ್ಟಿದರೋ ಆಗ, ಅಸ್ಯ-ಈ ಮಾನಸಿಕ ಯಜ್ಞಕ್ಕೆ,

ಸಪ್ತ-ಗಾಯತ್ರ್ಯಾದಿ ಸಪ್ತ ಛಂದಸ್ಸುಗಳು, ಪರಿಧಯಃ-ಸುತ್ತುಗಟ್ಟುಗಳಾಗಿ, ಆಸನ್-ಆದುವು. ತ್ರಿಃ ಸಪ್ತ-(3 × 7 = 21) ಇಪ್ಪತ್ತೊಂದು, ವಸ್ತುಗಳು (ಹನ್ನೆರಡು ಮಾಸಗಳು, ಐದು ಋತುಗಳು-ಹೇಮಂತ, ಶಿಶಿರ ಎರಡೂ ಸೇರಿ ಒಂದು ಋತುವಾದುವು, ಭೂಲೋಕ, ಸ್ವರ್ಗಲೋಕ ಮತ್ತು ಅಂತರಿಕ್ಷ ಎಂಬ ಮೂರು ಲೋಕಗಳು, ಮತ್ತು ಸೂರ್ಯ—೧೨ + ೫ + ೩ + ೧ = ೨೧ ಹೀಗೆ ಇಪ್ಪತ್ತೊಂದು ದೇವತೆಗಳು), ಸಮಿಧಃ ಕೃತಾಃ-ಸಮಿತ್ತುಗಳಾಗಿ ಕಲ್ಪಿಸಲ್ಪಟ್ಟುವು. ಹೀಗೆ ಆ ಮಾನಸಿಕ ಯಜ್ಞವು ಸಂಪೂರ್ಣವಾಯಿತು.

ಭಾವಾರ್ಥ : ಆರನೇ ಮಂತ್ರದಲ್ಲಿ ಹೇಳಿದಂತೆ ರುದ್ರಾದಿ ದೇವತೆಗಳು ಆರಂಭಿಸಿದ ಮಾನಸಿಕ ಯಜ್ಞದಲ್ಲಿ ಬ್ರಹ್ಮದೇವರನ್ನೇ ಯಜ್ಞಪಶುವೆಂದು ಸಂಕಲ್ಪಿಸಿ ಆವನನ್ನು ಯೂಪಕ್ಕೆ ಕಟ್ಟಿಹಾಕಲು ಗಾಯತ್ರ್ಯಾದಿ ಸಪ್ತ ಛಂದಸ್ಸುಗಳೇ ಏಳು ಪರಿಧಿ (ಸುತ್ತು-ಗಟ್ಟು)ಗಳಾದುವು. ದ್ವಾದಶಮಾಸಾಭಿಮಾನಿಗಳೂ, ಐದು ಋತುಗಳ ದೇವತೆಗಳೂ ತ್ರಿಲೋಕಾಭಿಮಾನಿದೇವತೆಗಳೂ ಸೂರ್ಯನೂ ಸೇರಿ ಇಪ್ಪತ್ತೊಂದು ಸಮಿತ್ತುಗಳಾದುವು. ಹೀಗೆ ಮಾನಸಿಕ ಸಲಕರಣೆಗಳಿಂದಲೇ ಆ ದೇವತೆಗಳು ಆ ಮಾನಸಿಕ ಯಜ್ಞವನ್ನು ಸಂಪೂರ್ಣಗೊಳಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾದರು. (ಅದರಂತೆ ಸಕಲ ಮುಮುಕ್ಷುಗಳೂ ಮಾನಸಿಕ ಸಲಕರಣೆಗಳಿಂದಲಾದರೂ ಭಗವಂತನನ್ನು ಅರ್ಚಿಸಬೇಕು. ಅರ್ಚನೆಯನ್ನು ಯಾವ ಕಾರಣದಿಂದಲೂ ತಪ್ಪಿಸಬಾರದೆಂದು ಅಭಿಪ್ರಾಯವೆಂದು ಸತ್ಯಾಭಿನವತೀರ್ಥರ ವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಿದ್ದಾರೆ.)

ಋಗ್ವೇದಪಾಠದಂತೆ ಏಳನೇ ಮಂತ್ರ

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ ೭ ॥

ಪದವಿಭಾಗ ಸುಲಭವಾಗಿದೆ.

ಅನ್ವಯಾರ್ಥ: ಯಜ್ಞಂ-ಯಜ್ಞಪಶುವಾಗಿ ಸಂಕಲ್ಪಿತನಾದ (ಹಾಗೂ), ಅಗ್ರತಃ-ಎಲ್ಲರಿಗಿಂತ ಮೊಟ್ಟಮೊದಲು, ಜಾತಂ-ವಿಷ್ಣುವಿನಿಂದ ಹುಟ್ಟಿದ, ತಂ-ಆ (ಪಶುತ್ವೇನ ಸಂಕಲ್ಪಿತನಾದ), ಪುರುಷಂ-ಪುರುಷನಾಮಕ ಚತುರ್ಮುಖ ಬ್ರಹ್ಮನನ್ನು, (ಆ ದೇವತೆ-ಗಳು), ಬರ್ಹಿಷಿ-ದರ್ಭಸಂಸ್ತರದಲ್ಲಿ ಅಥವಾ ತಾವು ಮಾಡುತ್ತಿದ್ದ ಯಜ್ಞದಲ್ಲಿ, ಪ್ರೌಕ್ಷನ್-ಪ್ರೋಕ್ಷಿಸಿ ಸ್ನಾನ ಮಾಡಿಸಿದರು. ಇದು ಒಂದು ಅರ್ಥ. ಗೀತಾಭಾಷ್ಯದಲ್ಲಿ

೪ ಅಧ್ಯಾ, ೨೫ ಶ್ಲೋ.) ‘ಪಿತಾಮಹನು-ಬ್ರಹ್ಮನು ತನ್ನ ಜ್ಯೇಷ್ಠಪುತ್ರನಾದ ರುದ್ರನನ್ನೇ ಪಶುವನ್ನಾಗಿ ಕಲ್ಪಿಸಿ ತನ್ನ ತಂದೆಯಾದ ವಿಷ್ಣುವನ್ನು ಮಾನಸಯಜ್ಞದಲ್ಲಿ ಸಮರ್ಪಿಸಿ ಯಜ್ಞ ಮಾಡಿದನು’ ಎಂದು ಉದಹರಿಸಿದ ಪ್ರಮಾಣಾನುಸಾರ ಪೂರ್ವಾರ್ಧದಲ್ಲಿರುವ ಪುರುಷ ಶಬ್ದಕ್ಕೆ ರುದ್ರನೆಂದೂ ಅರ್ಥ ಹೇಳಬಹುದು, ಇದು ಎರಡನೇ ಅರ್ಥ. ಯಜಮಾನನಾದ ಬ್ರಹ್ಮದೇವರು (ಎಂದು ಕರ್ತೃಪದವನ್ನು ಗೀತಾಭಾಷ್ಯೋದಾಹೃತ ಪ್ರಮಾಣಾನುಸಾರ ಅಧ್ಯಾಹಾರ ಮಾಡಿಕೊಳ್ಳಬೇಕು), ಅಗ್ರತಃ ಜಾತಂ-ಬ್ರಹ್ಮದೇವರ ಜ್ಯೇಷ್ಠಪುತ್ರನಾದ, ತಂ ಯಜ್ಞಂ ಪುರುಷಂ-ಯಜ್ಞದಲ್ಲಿ ಪಶುವಾಗಿ ಕಲ್ಪಿಸಿದ ರುದ್ರನನ್ನು, ಬರ್ಹಿಷಿ-ದರ್ಭಪ್ರಸ್ತರದಲ್ಲಿ ಅಥವಾ ಮಾನಸಿಕ ಯಜ್ಞದಲ್ಲಿ, ಪ್ರೌಕ್ಷನ್-ಸೇಚನ ಮಾಡಿದರು. (ಉತ್ತರಾರ್ಧ) ತೇನ-ಆ ಪುರುಷರೂಪ ಪಶುವಿನಿಂದ (ಬ್ರಹ್ಮನಿಂದ ಅಥವಾ ರುದ್ರನಿಂದ), ಯೇ-ಯಾವ, ದೇವಾಃ-ದೇವತೆಗಳೂ, ಸಾಧ್ಯಾಃ-ಸಾಧ್ಯರೂ, ಋಷಯಶ್ಚ-ಋಷಿಗಳೂ ಇದ್ದಾರೋ ಅವರೆಲ್ಲರೂ, ಯಜ್ಞಂ (ಪೂರ್ವಾರ್ಧದಿಂದ ಅವೃತ್ತಿ ಮಾಡಿಕೊಳ್ಳಬೇಕು)-ಯಜ್ಞನಾಮಕ ವಿಷ್ಣುವನ್ನು, ಅಯಜಂತ-ಆರಾಧಿಸಿದರು. (ಬ್ರಹ್ಮದೇವರು ಮಾಡಿದ ಯಜ್ಞದಲ್ಲಿ ಅವರೇ ಯಜಮಾನರು, ರುದ್ರನನ್ನು ಬಿಟ್ಟು ಮಿಕ್ಕ ದೇವತೆಗಳು ಋತ್ವಿಜರಾಗಿದ್ದರು.)

ತಾತ್ಪರ್ಯ: ರುದ್ರಾದಿ ದೇವತೆಗಳೂ ಸಾಧ್ಯರೂ ಋಷಿಗಳೂ ಎಲ್ಲರು ನಾರಾಯಣನಿಂದ ಮೊದಲು ಹುಟ್ಟಿದ್ದರಿಂದ ಸರ್ವಶ್ರೇಷ್ಠರಾದ ಬ್ರಹ್ಮದೇವರನ್ನೇ ಪಶುವಾಗಿ ಕಲ್ಪಿಸಿ ಯೂಪಕ್ಕೆ ಕಟ್ಟಿ ದರ್ಭಪ್ರಸ್ತರದಲ್ಲಿ ನಿಲ್ಲಿಸಿ ಅವನಿಗೆ ಅಭಿಷೇಕಮಾಡಿ ಅವನನ್ನೇ ಪಶುವನ್ನಾಗಿ ಸಮರ್ಪಿಸಿ ಮಾನಸಿಕಯಜ್ಞ ಮಾಡಿ ಭಗವಂತನನ್ನು ಆರಾಧಿಸಿದರು. ಹಾಗೆಯೇ ಬ್ರಹ್ಮದೇವರೂ ಸಹ ತನ್ನ ಜ್ಯೇಷ್ಠಪುತ್ರನಾದ ರುದ್ರನನ್ನೇ ಪಶುವನ್ನಾಗಿ ಕಲ್ಪಿಸಿ ಮಿಕ್ಕ ದೇವಷ್ಯಾದಿಗಳನ್ನು ಋತ್ವಿಜರನ್ನಾಗಿ ಮಾಡಿಕೊಂಡು ದರ್ಭಸ್ತರದಲ್ಲಿ ಸಂಪ್ರೋಕ್ಷಿಸಿ ಆ ರುದ್ರನನ್ನೇ ಭಗವಂತನಿಗೆ ಪಶುವನ್ನಾಗಿ ಸಮರ್ಪಿಸಿ ಮಾನಸಿಕ ಯಜ್ಞ ಮಾಡಿ ತನ್ನ ತಂದೆಯಾದ ನಾರಾಯಣನನ್ನು ಆರಾಧಿಸಿದರು. (ತದ್ವತ್ ಸಕಲ ಹರಿಭಕ್ತರೂ ತಮ್ಮತಮ್ಮ ಶಕ್ತ್ಯನುಸಾರ ಭಗವಂತನನ್ನು ಮಾನಸೋಪಚಾರಗಳಿಂದ ಅವಶ್ಯವಾಗಿ ಆರಾಧಿಸಬೇಕೆಂದು ಭಾವ.)

ಎಂಟನೇ ಮಂತ್ರಾರ್ಥ (ಯಜುರ್ವೇದ ೯ನೇ ಮಂತ್ರ)

ತಸ್ಮಾದ್ ಯಜ್ಞಾದ್ ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂನ್ ತಾಂಶ್ಚಕ್ರೇ ವಾಯವ್ಯಾ-ನಾರಣ್ಯಾನ್ ಗ್ರಾಮ್ಯಾಂಶ್ಚಯೇ ॥

ಪದವಿಭಾಗ ಸುಲಭವಾಗಿದೆ.

ಅವತಾರಿಕೆ: ಇಲ್ಲಿಂದ ಮುಂದೆ ಏಳು ಮಂತ್ರಗಳಲ್ಲಿ ಸೃಷ್ಟಿವಿಧಾನವು ವರ್ಣಿಸಲ್ಪಟ್ಟಿದೆ. ಪ್ರಸ್ತುತ ಈ ಎಂಟನೇ ಮಂತ್ರದಲ್ಲಿ ಯಜ್ಞಕ್ಕೆ ಬೇಕಾದ ಬಾಹ್ಯಸಾಧನೆಗಳ ಸೃಷ್ಟಿಯನ್ನು ಹೇಳುತ್ತಾನೆ.

ಅನ್ವಯಾರ್ಥ: ಸರ್ವಹುತಃ (ಪಂಚಮೀ ವಿಭಕ್ತಿ)-ಸರ್ವರಿಂದ ಹವಿರಾದಿಗಳಿಂದ ಆಹ್ವಾನಿಸಲ್ಪಡುವವನೂ ಸರ್ವರಿಗೂ ಉಪಜೀವ್ಯನೂ (ಜೀವನಾಧಾರನೂ) ಆಗಿರುವ, ತಸ್ಮಾತ್-ಆ (ಆ ರೀತಿ ಆರಾಧಿಸಲ್ಪಟ್ಟ), ಯಜ್ಞಾತ್-ಯಜ್ಞನಾಮಕ ಪರಮಾತ್ಮನ ದೆಸೆಯಿಂದ, ಸರ್ವಹುತಃ ತಸ್ಮಾತ್ ಯಜ್ಞಾತ್ (ಎಂದು ಆವೃತ್ತಿ) ಸರ್ವರಿಂದಲೂ ಆರಾಧಿಸಲ್ಪಡಲು ಸಾಧನೀಭೂತವಾದ ಆ ಮಾನಸಿಕ ಯಜ್ಞದ ನಿಮಿತ್ತದಿಂದ; ಪೃಷದಾಜ್ಯಂ-ದಧಿಮಿಶ್ರವಾದ ಆಜ್ಯವು (ಹಾಲು ಮೊಸರು ತುಪ್ಪ ಮೊದಲಾದುವು), ಸಂಭೃತಂ-ಸಂಪಾದಿಸಲ್ಪಟ್ಟಿತು (ಉತ್ಪನ್ನವಾಯಿತೆಂದು ಅರ್ಥ). (ಉತ್ತರಾರ್ಧ) ವಾಯವ್ಯಾನ್-ವಾಯುದೇವತಾಕವಾದ ಬಿಳಿಯ ಪ್ರಾಣಿಗಳನ್ನೂ, ಆರಣ್ಯಾನ್-ಕಾಡಿನಲ್ಲಿ ವಾಸಿಸುವ ಜಿಂಕೆ ಮೊದಲಾದ ಪ್ರಾಣಿಗಳನ್ನೂ, ಯೇ ಚ ಗ್ರಾಮ್ಯಾಃ-ಊರುಗಳಲ್ಲಿ ವಾಸಿಸುವ ಆಡು, ಕುರಿ, ದನ, ಕರು ಮೊದಲಾದ ಪ್ರಾಣಿಗಳನ್ನೂ, ತಾಂಶ್ಚ ಪಶೂನ್-ಇವೇ ಮೊದಲಾದ ಪ್ರಾಣಿಗಳನ್ನೂ, ಚಕ್ರೇ-ಭಗವಂತನು ಸೃಷ್ಟಿಮಾಡಿದನು.

ಭಾವಾರ್ಥ: ಈ ಪ್ರಕಾರ ಮಾನಸಿಕ ಯಜ್ಞ ಮಾಡಿ ಆ ಪರಮಾತ್ಮನನ್ನು ದೇವ-ಷ್ಯಾದಿಗಳು ಆರಾಧಿಸಿದ್ದರಿಂದ ಆ ಮಾನಸಿಕ ಯಜ್ಞದಿಂದಲೇ ಸುಪ್ರೀತನಾದ ಶ್ರೀಮ-ನ್ನಾರಾಯಣನು ಯಜ್ಞ ಮಾಡಿದ್ದಕ್ಕೆ ಪ್ರತಿಫಲವಾಗಿ ಯಜ್ಞಕ್ಕೆ ಬೇಕಾದ ಹಾಲು ಮೊಸರು ತುಪ್ಪ ಮೊದಲಾದ ಸಾಧನಗಳನ್ನು ಸೃಷ್ಟಿ ಮಾಡಿದನಲ್ಲದೆ ಬಿಳಿಬಣ್ಣದ ಅಶ್ವಾದಿ ವೇಗವಾಗಿ ಓಡುವ ಪ್ರಾಣಿಗಳನ್ನೂ ಗ್ರಾಮ್ಯ ಪಶುಗಳೆಂಬ ದನಕರು ಕುರಿ ಆಡು ಮೊದಲಾದುವನ್ನೂ ಸೃಷ್ಟಿ ಮಾಡಿದನು. (ಯಜುರ್ವೇದರೀತ್ಯಾ ಇದು ಒಂಬತ್ತನೇ ಮಂತ್ರ.

ಒಂಬತ್ತನೇ ಮಂತ್ರ (ಯಜುರ್ವೇದ ೧೦ನೇ ಮಂತ್ರ)

ತಸ್ಮಾದ್ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।

ಛಂದಾಂಸಿ ಜಜ್ಞಿರೇ ತಸ್ಮಾದ್ ಯಜುಸ್ತಸ್ಮಾದಜಾಯತ ॥ ೯ ॥

ಈ ಮಂತ್ರದಲ್ಲಿ ಋಗಾದಿ ಮಂತ್ರಗಳು ಪ್ರಕಟವಾದದ್ದನ್ನು ವರ್ಣಿಸಲಾಗಿದೆ.

ಅನ್ವಯಾರ್ಥ: ಸರ್ವಹುತ ತಸ್ಮಾದ್ ಯಜ್ಞಾತ್ (ಎರಡು ಸರಿ ಅನ್ವಯ—ಹಿಂದಿನಂತೆಯೇ ಅರ್ಥ) ಋಚಃ-ಋಗ್ವೇದಮಂತ್ರಗಳೂ, ಸಾಮಾನಿ-ಸಾಮವೇದ

ಮಂತ್ರಗಳೂ, ಜಜ್ಞಿರೇ-ಪ್ರಕಾಶಕ್ಕೆ ಬಂದುವು. ಭಗವಂತ ಹಯಗ್ರೀವರೂಪದಿಂದ ಬ್ರಹ್ಮಾದಿಗಳಿಗೆ ವೇದವನ್ನು ಉಪದೇಶ ಮಾಡಿ ರೂಢಿಗೆ ತಂದನೆಂದು ಭಾವ. (ಉತ್ತರಾರ್ಧ) ತಸ್ಮಾತ್-ಆ ಪರಮಾತ್ಮನ ದೆಸೆಯಿಂದ, ಛಂದಾಂಸಿ-ಗಾಯತ್ರ್ಯಾದಿ ಛಂದಸ್ಸುಗಳೂ, ಜಜ್ಞಿರೇ-ಅಭಿವ್ಯಕ್ತವಾದುವು. ತಸ್ಮಾತ್-ಆ ಭಗವಂತನಿಂದಲೇ, ಯಜುಃ-ಯಜುರ್ವೇದವೂ, ಅಜಾಯತ-ಅಭಿವ್ಯಕ್ತವಾಯಿತು. ಇಲ್ಲಿ ಋಚಃ ಇತ್ಯಾದಿ ಪದಗಳಿಂದ ಯಾಗೋಪಯೋಗಿ ಮಂತ್ರಗಳೂ, ತತ್ತನ್ಮಂತ್ರಪ್ರತಿಪಾದ್ಯ ದೇವತೆಗಳೂ ಆ ಮಂತ್ರದ್ರಷ್ಟೃ ಋಷಿಗಳೂ ಛಂದೋಽಭಿಮಾನಿ ದೇವತೆಗಳೂ ವಿವಕ್ಷಿತರಾಗಿದ್ದಾರೆ. ಮಂತ್ರಗಳು ಅಭಿವ್ಯಕ್ತವಾದುವೆಂದೂ ತದಧಿಮಾನ್ಯಾದಿ ದೇವತೆಗಳು ಸೃಷ್ಟರಾದರೆಂದೂ ತಿಳಿಯಬೇಕು.

ತಾತ್ಪರ್ಯ: ಯಜ್ಞದ ಬಾಹ್ಯಸಾಧನಗಳು ಸೃಷ್ಟವಾದ ಬಳಿಕ ಆ ಪರಮಾತ್ಮನ ಅನುಗ್ರಹದಿಂದಲೇ ಯಜ್ಞೋಪಯುಕ್ತವಾದ ಚತುರ್ವೇದಮಂತ್ರಗಳೂ ಅಭಿವ್ಯಕ್ತವಾದುವು. ಎಂದರೆ ಆ ಭಗವಂತನೇ ಬ್ರಹ್ಮನಿಗೆ ಆ ಸಕಲ ಮಂತ್ರಗಳನ್ನೂ ಉಪದೇಶಿಸಿ ಅವುಗಳ ಅನುಷ್ಠಾನಕ್ರಮವನ್ನೂ ತೋರಿಸಿಕೊಟ್ಟು ಯಜ್ಞಾದ್ಯನುಷ್ಠಾನ ಸಂಪ್ರದಾಯವನ್ನು ಮುಂದುವರಿಸಿದನು. ಹಾಗೆಯೇ ಆಯಾ ಮಂತ್ರಪ್ರತಿಪಾದ್ಯ ರುದ್ರೇಂದ್ರಾದಿ ದೇವತೆಗಳನ್ನೂ ಮಂತ್ರದ್ರಷ್ಟೃ ಋಷಿಗಳನ್ನೂ ಛಂದೋಽಭಿಮಾನಿಗಳನ್ನೂ ಸೃಷ್ಟಿ ಮಾಡಿದನೆಂದು ಭಾವ.

ಹತ್ತನೇ ಮಂತ್ರ (ಯಜುರ್ವೇದ ೧೧ನೇದು)

ಈ ಮಂತ್ರದಲ್ಲಿ ಯಾಗಸಾಧನ ಪಶುಗಳ ಸೃಷ್ಟಿಯನ್ನು ಹೇಳಿ ಎಂಟನೇ ಮಂತ್ರದಲ್ಲಿ ಹೇಳಿದ ಪ್ರಾಣಿಸೃಷ್ಟಿಯನ್ನು ವಿಸ್ತರಿಸಲಾಗಿದೆ.

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।

ಗಾವೋ ಹ ಜಜ್ಞಿರೇ ತಸ್ಮಾತ್ ತಸ್ಮಾಜ್ಜಾತಾ ಅಜಾವಯಃ॥೧೦॥

ಪದವಿಭಾಗ: ತಸ್ಮಾತ್, ಅಶ್ವಾಃ .. ಚ ಉಭಯಾದತಃ, ಗಾವಃ..........ಜಾತಾಃ, ಅಜ+ಅವಯಃ (ಅಜ-ಆಡು, ಮೇಕೆ, ಅವಿ-ಕುರಿ)

ಅನ್ವಯಾರ್ಥ: ತಸ್ಮಾತ್-ಆ ಪುರುಷನಾಮಕ ಭಗವಂತನಿಂದಲೇ, ಅಶ್ವಾಃ ಕುದುರೆಗಳು, ಅಜಾಯಂತ-ಹುಟ್ಟಿದುವು. ಯೇ ಕೇ ಚ-ಯಾವುಯಾವುವು, ಉಭಯಾದತಃ-ಮೇಲೆ ಕೆಳಗೆ ಎರಡು ದವಡೆಗಳಲ್ಲೂ ಹಲ್ಲುಗಳು ಇರುತ್ತವೋ ಅಂಥಾ ಕತ್ತೆ ಹೇಸರಗತ್ತೆ ಮುಂತಾದ ಪ್ರಾಣಿಗಳೂ, ಅಜಾಯಂತ-ಹುಟ್ಟಿದುವು. ಅದೇ ರೀತಿ,

ಗಾವಃ ಹ-ಆಕಳುಗಳೂ ಕೂಡ (ಗೋವೃಗಳೂ ಕೂಡ), ತಸ್ಮಾತ್-ಆ ನಾರಾಯಣ ನಿಂದಲೇ, ಜಜ್ಞಿರೇ_ಹುಟ್ಟಿದುವು. ಅಜಾವಯಃ-ಆಡು ಕುರಿ ಮೊದಲಾದ ಪ್ರಾಣಿಗಳೂ, ತಸ್ಮಾತ್-ಆ ಪರಮಾತ್ಮನಿಂದಲೇ, ಜಾತಾಃ-ಹುಟ್ಟಿದುವು.

ತಾತ್ಪರ್ಯ ಸ್ಪಷ್ಟವಾಗಿದೆ. ಎರಡನೇ ವರ್ಗ ಮುಗಿಯಿತು.

ಹನ್ನೊಂದನೇ (ಯಜುರ್ವೇದ ೧೨ನೇ) ಮಂತ್ರ

ಭಗವಂತನ ಅಂಗಗಳಿಂದ ಆದ ಸೃಷ್ಟಿಯನ್ನು ಹೇಳುವುದಕ್ಕೆ ಪೀಠಿಕಾರೂಪವಾಗಿ ಪ್ರಶ್ನೆ ಮಾಡುತ್ತಾರೆ.

ಯತ್ ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।

ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥

ಪದವಿಭಾಗ : ಕೌ, ಊರೂ, ಪಾದೌ.

ಅನ್ವಯಾರ್ಥ : ಯತ್-ಯಾವಾಗ (ಅಥವಾ ಯಾವ), ಪುರುಷಂ-ಭಗವಂತನನ್ನು ವ್ಯದಧುಃ-ಮಾನಸಯಜ್ಞದಲ್ಲಿ ಮನಸಾ ಧ್ಯಾನಿಸಿದರೋ ಆಗ, ಕತಿಧಾ ವ್ಯಕಲ್ಪಯನ್-ಯಾವ ರೀತಿಯಾಗಿ ಕಲ್ಪಿಸಿಕೊಂಡರು ? ಅಸ್ಯ-ಇವನ (ಈ ಪುರುಷನ), ಮುಖಂ-ಮುಖವನ್ನು, ಕಿಂ-ಏನೆಂದು ಕಲ್ಪಿಸಿಕೊಂಡರು ? ಬಾಹೂ-ಎರಡು ತೋಳುಗಳನ್ನು, ಕೌ-ಯಾವ ರೀತಿ ಧ್ಯಾನಿಸಿದರು ? ಊರೂ-ಎರಡು ತೊಡೆಗಳನ್ನು, ಕೌ-ಯಾವ ರೀತಿ ಊಹಿಸಿದರು. ಪಾದೌ-ಎರಡು ಕಾಲುಗಳು, ಕೌ-ಏನೆಂಬುದಾಗಿ, ಉಚ್ಯೇತೇ-ಹೇಳಲ್ಪಡುತ್ತವೆ ?

ತಾತ್ಪರ್ಯ : ಭಗವಂತನ ಸ್ವರೂಪವನ್ನು ಮಾನಸಿಕ ಯಜ್ಞದಲ್ಲಿ ಚಿಂತಿಸುವಾಗ ಯಾವ ರೀತಿ ಚಿಂತಿಸಿದರು ? ಅವನ ಮುಖವನ್ನೂ ತೋಳುಗಳನ್ನೂ ತೊಡೆಗಳನ್ನೂ ಪಾದಗಳನ್ನೂ ಯಾವ ರೀತಿ ಧ್ಯಾನ ಮಾಡಿದರು ?

ಹನ್ನೆರಡನೇ (ಯಜುರ್ವೇದ ೧೩ನೇ) ಮಂತ್ರ

ಈ ಮಂತ್ರದಲ್ಲಿ ಚಾತುರ್ವರ್ಣ್ಯಸೃಷ್ಟಿಯನ್ನು ನಿರೂಪಿಸಿದೆ.

ಬ್ರಾಹ್ಮಣೋಽಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ ।

ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥

ಅನ್ವಯಾರ್ಥ : ಅಸ್ಯ-ಈ ಪುರುಷನಾಮಕ ಭಗವಂತನ, ಮುಖಂ-ಮುಖದಿಂದ, ಬ್ರಾಹ್ಮಣಃ ಆಸೀತ್-ಬ್ರಾಹ್ಮಣನು ಹುಟ್ಟಿದನು; ಇವನ ಮುಖದಿಂದ ಬ್ರಾಹ್ಮಣಜಾತಿ ಆಕ್ರಾಂತವಾಗಿದೆ ಅಥವಾ ಬ್ರಾಹ್ಮಣಜಾತಿಗೆ ಒಡೆಯನಾದ ಬ್ರಹ್ಮನು ಇವನ ಮುಖದಿಂದ ಜನಿಸಿ ಇದನ್ನೇ ಆಶ್ರಯಿಸಿಕೊಂಡಿದ್ದಾನೆ. (ಹೀಗೆಯೇ ಉದ್ಧಕ್ಕೂ ತಿಳಿಯಬೇಕು.) ಬಾಹೂ-ಎರಡು ತೋಳುಗಳಿಂದ, ರಾಜನ್ಯಃ ಕೃತಃ-ಕ್ಷತ್ರಿಯಜಾತಿಯು ಹುಟ್ಟಿತು. ಕ್ಷತ್ರಿಯಜಾತಿಗೆ ಒಡೆಯನಾದ ವಾಯುವು ಇವನ ತೋಳುಗಳಿಂದ ಜನಿಸಿ ಅವನ್ನೇ ಆಶ್ರಯಿಸಿರುತ್ತಾನೆ. ವೈಶ್ಯಃ (ಇತಿ) ಯತ್, ತತ್-ವೈಶ್ಯಜಾತಿ ಎಂಬುದೇನಿದೆಯೋ ಅದು, ಊರೂ ತೊಡೆಗಳಿಂದ ಹುಟ್ಟಿತು. ವೈಶ್ಯಜಾತಿಗೆ ಸೇರಿದ ನಾಸಿಕ್ಯವಾಯುವು ಅವನ ತೊಡೆಗಳಿಂದ ಉತ್ಪನ್ನನಾಗಿ ಅವನ್ನೇ ಆಶ್ರಯಿಸಿಕೊಂಡಿರುತ್ತಾನೆ. ಪದ್ಭ್ಯಾಂ-ಎರಡು ಪಾದಗಳಿಂದ, ಶೂದ್ರಃ-ಶೂದ್ರನು, ಅಜಾಯತ-ಹುಟ್ಟಿದನು. ಅಶ್ವಿನೀದೇವತೆಗಳು ಪೃಥಿವಿ ಮೊದಲಾದ ದೇವಶೂದ್ರರು ಭಗವಂತನ ಪಾದವನ್ನು ಆಶ್ರಯಿಸಿಕೊಂಡಿರುತ್ತಾರೆಂದು ತಿಳಿಯತಕ್ಕದ್ದು.

ಈ ಮಂತ್ರದ ವಿಶೇಷಾರ್ಥವನ್ನು ವ್ಯಾಖ್ಯಾನಗಳಿಂದಲೂ ಸೇತುಮಾಧವಾಚಾರ್ಯರ ಕನ್ನಡಾರ್ಥ ವಿವರಣೆಯಿಂದಲೂ ತಿಳಿಯತಕ್ಕದ್ದು.

ಹದಿಮೂರನೇ (ಯಜುರ್ವೇದ ೧೨ನೇ) ಮಂತ್ರ

ಈ ಮಂತ್ರದಿಂದ ದೇವತಾಸೃಷ್ಟಿಯನ್ನು ತಿಳಿಸುತ್ತಾನೆ.

ಚಂದ್ರಮಾ ಮನಸೋ ಜಾತ—ಶ್ಚಕ್ಷೋಃ ಸೂರ್ಯೋ ಅಜಾಯತ ।

ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ ವಾಯುರಜಾಯತ ॥

ಅನ್ವಯಾರ್ಥ: ಮನಸಃ-ಈ ಪರಮಾತ್ಮನ ಮನಸ್ಸಿನಿಂದ, ಚಂದ್ರಮಾಃ-ಚಂದ್ರನು, ಜಾತಃ-ಹುಟ್ಟಿದನು. ಚಕ್ಷೋಃ-ಕಣ್ಣುಗಳಿಂದ, ಸೂರ್ಯಃ-ಸೂರ್ಯನು, ಅಜಾಯತ-ಹುಟ್ಟಿದನು. ಮುಖಾತ್-ಮುಖದಿಂದ, ಇಂದ್ರಶ್ಚ ಅಗ್ನಿಶ್ಚ-ದೇವೇಂದ್ರನೂ ಅಗ್ನಿಯೂ ಹುಟ್ಟಿದರು. ಪ್ರಾಣಾತ್-ಪ್ರಾಣದಿಂದ, ವಾಯುಃ-ಮುಖ್ಯಪ್ರಾಣನೂ, ಅಜಾಯತ-ಹುಟ್ಟಿದನು.

ತಾತ್ಪರ್ಯ: ಆ ಭಗವಂತನ ಮನಸ್ಸಿನಿಂದ ಚಂದ್ರನು ಹುಟ್ಟಿ ಅಲ್ಲೇ ಆಶ್ರಿತನಾಗಿದ್ದಾನಲ್ಲದೆ ಅಲ್ಲೇ ಮುಕ್ತಿಯನ್ನೂ ಹೊಂದುತ್ತಾನೆ. ಅಲ್ಲದೆ ನಾವು ಭಗವಂತನ ಮನಸ್ಸು ಚಂದ್ರನಿಗೆ ಜನ್ಮಸ್ಥಾನವಾಗಿದ್ದು ಅವನಿಗೆ ಆಶ್ರಯಭೂತವಾಗಿದೆಯೆಂದೂ ಧ್ಯಾನಿಸಬೇಕು. (ಮಿಕ್ಕ ವಿಚಾರವನ್ನೂ ಹೀಗೆಯೇ ತಿಳಿಯಬೇಕು.) ಸೂರ್ಯನು ಕಣ್ಣಿನಿಂದಲೂ, ಇಂದ್ರಾಗ್ನಿಗಳು ಮುಖದಿಂದಲೂ, ವಾಯುವು ಪ್ರಾಣದಿಂದಲೂ ಹುಟ್ಟಿ

ಆಯಾ ಅಂಗಗಳನ್ನೇ ಆಶ್ರಯಿಸಿಕೊಂಡಿದ್ದಾರೆಂದೂ ಈ ಅಂಗಗಳು ಈ ದೇವತೆಗಳ ಉತ್ಪತ್ತಿಸ್ಥಾನವೂ ಆಶ್ರಯವೂ ಆಗಿದೆಯೆಂದೂ ತಿಳಿಯತಕ್ಕದ್ದು.

ಹದಿನಾಲ್ಕನೇ (ಯಜುರ್ವೇದ ೧೩ನೇ) ಮಂತ್ರ

ಹಿಂದಿನ ಮಂತ್ರದಲ್ಲಿ ಇಂದ್ರಾದಿ ದೇವತೆಗಳ ಸೃಷ್ಟಿಯು ಉಕ್ತವಾಯಿತು. ಈ ಮಂತ್ರದಲ್ಲಿ ಲೋಕಸೃಷ್ಟಿಯ ವಿಚಾರವಿದೆ.

ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।

ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್

ತಥಾ ಲೋಕಾꣳ ಅಕಲ್ಪಯನ್ ॥

ಪದವಿಭಾಗ: ನಾಭ್ಯಾಃ, ಆಸೀತ್, ಅಂತರಿಕ್ಷಂ, ಶೀರ್ಷ್ಣಃ

ಅನ್ವಯಾರ್ಥ: ಇಲ್ಲಿ ಅಂತರಿಕ್ಷಾದಿ ಶಬ್ದಗಳಿಂದ ಆಯಾ ಲೋಕಗಳ ಅಭಿಮಾನಿ-ದೇವತೆಗಳನ್ನೂ ಆಯಾ ಲೋಕಗಳನ್ನೂ ಸಹ ಗ್ರಹಣ ಮಾಡಬೇಕು. ನಾಭ್ಯಾಃ-ಭಗವಂತನ ನಾಭಿಯ ದೆಸೆಯಿಂದ, ಅಂತರಿಕ್ಷಃ-ಅಂತರಿಕ್ಷಲೋಕವೂ ತದಭಿಮಾನಿಯಾದ ವಿಘ್ನೇಶ್ವರನೂ, ಆಸೀತ್-ಹುಟ್ಟಿತು. ಮತ್ತು ಆ ನಾಭಿಯನ್ನೇ ಆಶ್ರಯಿಸಿಕೊಂಡು ಇದ್ದಾರೆಂತಲೂ ನಾಭಿಯು ಅಂತರಿಕ್ಷಲೋಕಕ್ಕೂ ಮಹಾಗಣಪತಿಗೂ ಜನ್ಮಸ್ಥಾನವೂ ಆಶ್ರಯವೂ ಆಗಿದೆಯೆಂದು ತಿಳಿಯಬೇಕು. ಶೀರ್ಷ್ಣಃ-ಶಿರಸ್ಸಿನಿಂದ, ದ್ಯೌಃ-ಸ್ವರ್ಗಲೋಕವೂ ತದಭಿಮಾನಿದೇವತೆಯೂ, ಸಮವರ್ತತ-ಹುಟ್ಟಿತು. ಹೀಗೆಯೇ ಪದ್ಭ್ಯಾಃ-ಎರಡು ಪಾದಗಳ ದೆಸೆಯಿಂದ, ಭೂಮಿಃ-ಭೂಲೋಕವೂ ತದಭಿಮಾನಿಗಳಾದ ಶನೈಶ್ಚರ-ಧರಾದೇವಿಯರೂ ಹುಟ್ಟಿದರು. ಶ್ರೋತ್ರಾತ್-ಕಿವಿಯಿಂದ, ದಿಶಃ-ದಿಕ್ಕುಗಳೂ ತದಭಿಮಾನಿಗಳಾದ ಇಂದ್ರಾದಿ ದಿಗ್ದೇವತೆಗಳೂ ಹುಟ್ಟಿದರು. ತಥಾ-ಹಾಗೆಯೇ (ಎಂದರೆ ನಾಭಿಯಿಂದ ಅಂತರಿಕ್ಷವನ್ನೂ ಪಾದಗಳಿಂದ ಭೂಮಿಯನ್ನೂ ಹೇಗೆ ಸೃಷ್ಟಿ ಮಾಡಿದನೋ ಅದೇ ರೀತಿ ಎಂದರ್ಥ), ಲೋಕಾನ್-ಪಾತಾಳಾದಿ ಅಧೋಲೋಕಗಳನ್ನೂ ಮಹರಾದಿ ಊರ್ಧ್ವಲೋಕಗಳನ್ನೂ (ಮಿಕ್ಕ ಹನ್ನೊಂದು ಲೋಕಗಳನ್ನೂ) ಸೃಷ್ಟಿ ಮಾಡಿದನೆಂದು, ಅಕಲ್ಪಯನ್-ದೇವಷ್ಯಾದಿ ಜ್ಞಾನಿಗಳು ಧ್ಯಾನಮಾಡಿದರು. ಮತ್ತು ಭಗವಂತನ ಅಂಗಾಂಗಗಳಲ್ಲಿ ಈ ಹದಿನಾಲ್ಕು ಲೋಕಗಳೂ ಹೇಗೆ ಅಡಕವಾಗಿವೆಯೆಂದೂ ಆ ಶ್ರೀಹರಿಯ ಅಂಗಗಳು ಈ ಲೋಕಗಳನ್ನು ಧರಿಸಿವೆಯೆಂದೂ ವಿರಾಡ್ರೂಪದಲ್ಲಿ ಚಿಂತನೆ ಮಾಡಿದರೆಂದು ಭಾವ. ಅಥವಾ ತಥಾ ಶಬ್ದದ ಬಳದ ಮೇಲೆ ಯಥಾ ಶಬ್ದವನ್ನು

ಅಧ್ಯಾಹಾರ ಮಾಡಿಕೊಂಡು, ಯಥಾ-ಹೇಗೆ ಮನಸ್ಸು ಚಕ್ಷುರಾದಿ ಅಂಗಗಳಿಂದ ಚಂದ್ರ-ಸೂರ್ಯಾದಿ ದೇವತೆಗಳನ್ನು ಸೃಷ್ಟಿಮಾಡಿ ಆಯಾ ಅಂಗಗಳಲ್ಲಿ ಧರಿಸಿದ್ದಾನೋ, ತಥಾ-ಅದೇ ರೀತಿ, ಲೋಕಾನ್-ಮಿಕ್ಕ ಹನ್ನೊಂದು ಲೋಕಗಳನ್ನೂ ಬೇರೆಬೇರೆ ಅಂಗಗಳಿಂದ (ಭಾಗವತ ದ್ವಿತೀಯ ಸ್ಕಂಧದ ಐದನೇ ಅಧ್ಯಾಯದಲ್ಲಿ ವಿವರಿಸಿರುವಂತೆ) ಸೃಷ್ಟಿಮಾಡಿ ಅಲ್ಲಲ್ಲೇ ಧರಿಸಿದ್ದಾನೆಂದೂ, ಅಕಲ್ಪಯನ್-ಜ್ಞಾನಿಗಳು ವಿರಾಡ್ರೂಪ ಚಿಂತನೆ ಮಾಡುತ್ತಾರೆಂದು ಅರ್ಥ.

ಭಾವಾರ್ಥ: ಮನಸ್ಸು ಚಕ್ಷುರಾದಿ ಅಂಗಗಳಿಂದ ಚಂದ್ರಸೂರ್ಯಾದಿಗಳನ್ನು ಸೃಷ್ಟಿಮಾಡಿ ಅವರನ್ನು ಅಲ್ಲಲ್ಲೇ ಧರಿಸಿರುವಂತೆ ಪುರುಷನಾಮಕ ಶ್ರೀಮನ್ನಾರಾಯಣನು ತನ್ನ ನಾಭಿಯ ದೆಸೆಯಿಂದ ಅಂತರಿಕ್ಷವನ್ನೂ ಅಂತರಿಕ್ಷಾಭಿಮಾನಿಯನ್ನೂ ಸೃಷ್ಟಿಸಿ ಅವೆರಡನ್ನೂ ತನ್ನ ನಾಭಿಯಲ್ಲೇ ಧರಿಸಿದ್ದಾನೆ. ಹೀಗೆಯೇ ಶಿರಸ್ಸಿನಿಂದ ಸ್ವರ್ಗಲೋಕವನ್ನೂ ಪಾದಗಳಿಂದ ಭೂಮಿಯನ್ನೂ ಇತರ ಅಂಗಗಳಿಂದ ಮಿಕ್ಕ ಹನ್ನೊಂದು ಲೋಕಗಳನ್ನೂ ಸೃಷ್ಟಿಸಿ ಅವೆಲ್ಲವನ್ನೂ ಆಯಾ ಅಂಗಗಳಲ್ಲೇ ಧರಿಸಿದ್ದಾನೆ. ಈ ಪ್ರತಿಯೊಂದು ಅಂಗವೂ ಈ ಲೋಕಗಳಿಗೆ ಆಧಾರವಾಗಿದೆ (ನೆಲೆಯಾಗಿದೆ)ಯೆಂದೂ ತಿಳಿದು ಬ್ರಹ್ಮಾದಿ ಜ್ಞಾನಿಗಳು ಉಪಾಸನೆ ಮಾಡುತ್ತಾರೆಂದು ಭಾವ.

೧೫ನೇ ಮಂತ್ರದ ಅರ್ಥ

ಸಪ್ತಾಸ್ಯಾಸನ್—ಎಂಬ ಈ ಮಂತ್ರದ ಅರ್ಥವನ್ನು 'ತಂ ಯಜ್ಞಂ' ಎಂಬ ಏಳನೆ ಮಂತ್ರಕ್ಕೆ ಅರ್ಥ ಬರೆಯುವುದಕ್ಕೆ ಮೊದಲೇ (ಪುಟ ೧೮೩, ೮೪ರಲ್ಲಿ) ಬರೆದಿದೆ.

ಸೂಚನೆ: ಋಗ್ವೇದಪಾಠರೀತ್ಯಾ 'ಸಪ್ತಾಸ್ಯಾಸನ್' ಎಂಬ ಹದಿನೈದನೇ ಮಂತ್ರವಾದ ಬಳಿಕ 'ಯಜ್ಞೇನ ಯಜ್ಞಮಯಜಂತ' ಎಂಬ ೧೬ನೇ ಮಂತ್ರದೊಡನೆ ಪುರುಷ-ಸೂಕ್ತವು ಮುಗಿಯುತ್ತದೆ. ಆದರೆ ಕೃಷ್ಣಯಜುರ್ವೇದ (ತೈತ್ತಿರೀಯಾರಣ್ಯಕದ) ಪಾಠರೀತ್ಯಾ 'ಯಜ್ಞೇನ...' ಎಂಬ ಕಡೆಯ ಮಂತ್ರಕ್ಕೆ ಮೊದಲೇ 'ವೇದಾಹಮೇತಂ...', 'ಧಾತಾ ಪುರಸ್ತಾತ್' ಎಂಬ ಎರಡು ಮಂತ್ರಗಳು ಪಠಿತವಾಗಿವೆ. ಈ ಎರಡು ಮಂತ್ರಗಳೂ ವೇದಾಂತಶಾಸ್ತ್ರದಲ್ಲಿ ಅನೇಕ ಕಡೆ ಪ್ರಮಾಣವಾಗಿ ಉದಹರಿಸಲ್ಪಟ್ಟಿರುವುದರಿಂದ ಮಂತ್ರಾಲಯದ ರಾಯರು ತಮ್ಮ ಪುರುಷಸೂಕ್ತ ವ್ಯಾಖ್ಯಾನದಲ್ಲಿ ಈ ಎರಡು ಮಂತ್ರಗಳಿಗೂ ಅರ್ಥ ಬರೆದಿದ್ದಾರಾದಕಾರಣ ನಾವೂ ತೈತ್ತಿರೀಯಪಾಠದ ಈ ಎರಡು ಮಂತ್ರಗಳಿಗೂ ಅರ್ಥ ಬರೆದು ಅನಂತರ 'ಯಜ್ಞೇನ' ಎಂಬ ಮಂತ್ರಕ್ಕೆ ಅರ್ಥ ಬರೆಯುವೆವು.

ತೈತ್ತಿರೀಯಪಾಠರೀತ್ಯಾ ೧೬ನೇ ಮಂತ್ರಾರ್ಥ

ಈ ಮಂತ್ರದಲ್ಲಿ ವೇದಪುರುಷ ತಾನೇ ಪುರುಷನಾಮಕ ಭಗವಂತನ ಮಹಿಮೆಯನ್ನು ಸ್ತುತಿಸುತ್ತಾನೆ.

ವೇದಾಹಮೇತಂ ಪುರುಷಂ ಮಹಾಂತಂ ।
ಆದಿತ್ಯವರ್ಣಂ ತಮಸಸ್ತು ಪಾರೇ ॥
ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ ।
ನಾಮಾನಿ ಕೃತ್ವಾಽಭಿವದನ್ ಯದಾಸ್ತೇ ॥ ೧೬ ॥

ಪದವಿಭಾಗ: ವೇದ, ಅಹಂ, ಏತಂ..... ಯತ್, ಆಸ್ತೇ ।

ಅನ್ವಯಾರ್ಥ: (ಉತ್ತರಾರ್ಧ) ಯತ್-ಯಾವ, ಧೀರಃ-ಸಮರ್ಥನಾದ ಭಗವಂತನು, ಸರ್ವಾಣಿ ರೂಪಾಣಿ-ಸಕಲ ರೂಪಗಳನ್ನೂ (ಆಕಾರಗಳನ್ನೂ), ವಿಚಿತ್ಯ-ಸೃಷ್ಟಿಮಾಡಿ, ನಾಮಾನಿ ಕೃತ್ವಾ-ಅದಕ್ಕೆಲ್ಲಾ ಹೆಸರುಗಳನ್ನೂ ಕೊಟ್ಟು, ಅಭಿವದನ್-ವ್ಯವಹಾರ ನಡೆಸುತ್ತಾ, ಆಸ್ತೇ-ಇದ್ದಾನೆಯೋ, (ಪೂರ್ವಾರ್ಧ) ಏತಂ-ಅಂಥಾ, ಮಹಾಂತಂ-ಅಪಾರ ಮಹಿಮೆಯುಳ್ಳ (ಹಿಂದೆ ಹೇಳಿದಂತೆ ಸಹಸ್ರಶೀರ್ಷೇತ್ಯಾದಿ ಗುಣಗಳೂ ಜಗತ್ಸೃಷ್ಟ್ಯಾದಿ ಗುಣಗಳೂ ಉಳ್ಳಂಥಾ), ತಮಸಃ ಪಾರೇತು-ಪ್ರಕೃತಿಯಿಂದಲೂ, ಅಜ್ಞಾನ-ದೋಷಾದಿಗಳಿಂದ ಆಚೆಗೆ (ಸ್ಪರ್ಶವೇ ಇಲ್ಲದಂತೆ) ಇದ್ದಾನೆಯೋ ಮತ್ತು, ಆದಿತ್ಯವರ್ಣಂ-ಸೂರ್ಯಕೋಟಿಗೂ ಮಿಗಿಲಾದ ಪ್ರಕಾಶವುಳ್ಳ, ಪುರುಷಂ-ಗುಣಪೂರ್ಣನಾದ್ದರಿಂದ ಪುರುಷನಾಮಕನಾದ ನಾರಾಯಣನೆಂದು, ಅಹಂ ವೇದ-ನಾನು ತಿಳಿದಿದ್ದೇನೆ.

ಭಾವಾರ್ಥ: ಪರಿಪೂರ್ಣನಾದ್ದರಿಂದ ಪುರುಷನಾಮಕನಾದ ಶ್ರೀಮನ್ನಾರಾಯಣನು ಹಿಂದೆ ನಿರೂಪಣೆ ಮಾಡಿದಂತೆ ಅಪಾರ ಮಹಿಮೆಯುಳ್ಳವನಾಗಿದ್ದಾನೆ. ಅವನು ಕೋಟಿಸೂರ್ಯರಿಗೂ ಮಿಗಿಲಾದ ಪ್ರಕಾಶವುಳ್ಳವನಾಗಿರುವುದಲ್ಲದೆ ಅಜ್ಞಾನ ದುಃಖಾದಿ ಯಾವ ದೋಷದ ಗಂಧವೂ ಇಲ್ಲದವನಾಗಿದ್ದಾನೆ. ಅವನು ನಾನಾ ರೂಪಗಳುಳ್ಳ ಅನಂತ ವಸ್ತುಗಳನ್ನೂ ಪ್ರಾಣಿಗಳನ್ನೂ ಸೃಷ್ಟಿ ಮಾಡಿದನಲ್ಲದೆ ಅವಕ್ಕೆಲ್ಲಾ ಒಂದೊಂದು ಹೆಸರು ಕೊಟ್ಟು ಅವುಗಳೆಲ್ಲಾ ಚಲಿಸುವಂತೆ ಮಾಡಿ ಅವನೇ ಸಕಲ ಲೋಕವ್ಯವಹಾರವನ್ನೂ ನಡೆಸುತ್ತಾನೆಂಬುದನ್ನು ನಾನು ಬಲ್ಲೆನೆಂದು ವೇದಪುರುಷ ಪ್ರಾಮಾಣಿಕವಾಗಿ ಹೇಳುತ್ತಾನೆ.

ತೈತ್ತಿರೀಯಪಾಠರೀತ್ಯಾ ೧೭ನೇ ಮಂತ್ರಾರ್ಥ

ಆ ಭಗವಂತನ ಈ ಮಹಿಮೆಯನ್ನು ತಿಳಿದುಕೊಂಡು ಅದರಂತೆ ಉಪಾಸನೆ ಮಾಡಿದರೆ ದೊರಕುವ ಫಲ(ಲಾಭ)ವನ್ನು ಈ ಮಂತ್ರದಿಂದ ನಿರೂಪಿಸುತ್ತಾನೆ.

ಧಾತಾ ಪುರಸ್ತಾದ್ ಯಮುದಾ ಜಹಾರ ।

ಶಕ್ರಃ ಪ್ರವಿದ್ವಾನ್ ಪ್ರದಿಶಶ್ಚತಸ್ರಃ ॥

ತಮೇವಂ ವಿದ್ವಾನಮೃತ ಇಹ ಭವತಿ ।

ನಾನ್ಯಃ ಪಂಥಾ ಅಯನಾಯ ವಿದ್ಯತೇ ॥ ೧೭ ॥

ಅನ್ವಯಾರ್ಥ : (ಪೂರ್ವಾರ್ಧ) ಧಾತಾ-ಬ್ರಹ್ಮದೇವರು, ಪುರಸ್ತಾತ್-ಮೊಟ್ಟ ಮೊದಲು, ಯಂ-ಯಾವ ಪುರುಷನನ್ನು (ಅವನ ಹಿಂದೆ ವರ್ಣಿಸಿದ ಮಹಿಮೆಯನ್ನು ಎಂದರ್ಥ) (ಶಕ್ರಾಯ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು)-ರುದ್ರಾದಿ ದೇವತೆಗಳಿಗೆ ಉದಾಜಹಾರ-ಉಪದೇಶಿಸಿದನೋ (ತಂ ಎಂದು 'ಯಂ' ಬಲದಿಂದ ಅಧ್ಯಾಹಾರ ಮಾಡಿಕೊಳ್ಳಬೇಕು. ತಂ-ಆ ಪುರುಷನ ಮಹಿಮೆಯನ್ನು ಅದೇ ರೀತಿ), ಪ್ರವಿದ್ವಾನ್-ಅರಿತುಕೊಂಡಂಥಾ, ಶಕ್ರಃ-ರುದ್ರೇಂದ್ರಾದಿ ದೇವತೆಗಳು, ಚತಸ್ರಃ ಪ್ರದಿಶಃ-ನಾಲ್ಕು ದಿಕ್ಕುಗಳಲ್ಲೂ ವಾಸ ಮಾಡುವ ಸಕಲ ಜನಗಳಿಗೂ, ಉದಾಜಹಾರ ವಿವರಿಸಿದನು.

ಉತ್ತರಾರ್ಧ : ತಂ-ಆ ಪುರುಷನಾಮಕ ನಾರಾಯಣನ ಮಹಿಮೆಯನ್ನು, ಏವಂ-ಈ ಪ್ರಕಾರ ಎಂದರೆ ಅನಂತಶೀರ್ಷಾದಿಗಳುಳ್ಳವನು, ಸಮಸ್ತವನ್ನೂ ಮೀರಿ ಭಿನ್ನನಾದವನು, ಸರ್ವತ್ರ ವ್ಯಾಪ್ತನಾಗಿದ್ದಾನೆ. ಅವನೇ ಜಗತ್ತನ್ನು ಸೃಷ್ಟಿಸಿದವನು, ಬ್ರಹ್ಮಾದಿ ಸಕಲರೂ ಅವನ ಅಧೀನರಾಗಿರುವುದಲ್ಲದೆ ಅವನನ್ನೇ ಯಜ್ಞಾದ್ಯನುಷ್ಠಾನಗಳಿಂದ ಆರಾಧಿಸುತ್ತಾರೆ ಎಂಬುದಾಗಿ, ವಿದ್ವಾನ್-ತಿಳಿದವನೇ (ತಿಳಿದ ಜ್ಞಾನಿಯೇ), ಇಹ-ಈ ಸಂಸಾರದಲ್ಲಿ, ಅಮೃತಃ ಭವತಿ-(ಜನನಮರಣಾದಿ ದುಃಖಗಳಿಂದ ಪಾರಾಗಿ) ಮೋಕ್ಷಪದವಿಯನ್ನು ಹೊಂದುತ್ತಾನೆ. ಅಯನಾಯ-ಮೋಕ್ಷವನ್ನು ಹೊಂದುವುದಕ್ಕೆ, ಅನ್ಯಃ ಪಂಥಾಃ-ಬೇರೆ ಯಾವ ಮಾರ್ಗವೂ, ನ ವಿದ್ಯತೇ-ಇಲ್ಲವೇ ಇಲ್ಲ.

ಭಾವಾರ್ಥ : ಚತುರ್ಮುಖಬ್ರಹ್ಮನು ತಾನು ತಿಳಿದ ಈ ಪುರುಷನ (ಭಗವಂತನ) ಮಹಿಮೆಯನ್ನು ತನ್ನ ಮಕ್ಕಳೂ ಶಿಷ್ಯರೂ ಆದ ರುದ್ರೇಂದ್ರಾದಿಗಳಿಗೆ ಉಪದೇಶಿಸಿದರು. ಅವರೂ ಅದನ್ನು ಹಾಗೆಯೇ ಅರಿತುಕೊಂಡು ಆ ಜ್ಞಾನವನ್ನು ಸಕಲ ಲೋಕಗಳಲ್ಲೂ ಶಿಷ್ಯ-ಪ್ರಶಿಷ್ಯರ ದ್ವಾರಾ ಪ್ರಚಾರ ಮಾಡಿದರು. ಯಾವ ಅಧಿಕಾರಿಯು ಪುರುಷಾಖ್ಯ ಶ್ರೀಮನ್ನಾರಾಯಣನ ಮಹಿಮೆಯನ್ನು ಈ ರೀತಿ (ಅನ್ವಯಾರ್ಥದಲ್ಲಿ ಕೊಟ್ಟಿರುವ ವಿವರಣೆ ನೋಡಿರಿ) ತಿಳಿದುಕೊಂಡು ಉಪಾಸನೆ ಮಾಡುತ್ತಾರೋ ಅವರು ಈ ಸಂಸಾರದ

ಬಂಧನದಿಂದಲೂ ಸಕಲ ದುಃಖಗಳಿಂದಲೂ ಬಿಡುಗಡೆ ಹೊಂದಿ ಶಾಶ್ವತವಾದ ಮೋಕ್ಷ-ಸುಖವನ್ನು ಪಡೆಯುತ್ತಾರೆ. ಮೋಕ್ಷವನ್ನು ಪಡೆಯುವುದಕ್ಕೆ ಈ ಒಂದು ಮಾರ್ಗವನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ (ಉಪಾಯವೂ) ಇಲ್ಲವೆಂದು ವೇದಪುರುಷನು ಕಡಾ-ಖಂಡಿತವಾಗಿ ಹೇಳುತ್ತಾನೆಂದು ಭಾವ.

ಋಗ್ವೇದರೀತ್ಯಾ ೧೬ನೇ (ಕಡೆಯ) ಮಂತ್ರದ ಅರ್ಥ
(ತೈತ್ತಿರೀಯಪಾಠರೀತ್ಯಾ ೧೮ನೇ ಮಂತ್ರ)

ಯಜ್ಞೇನ ಯಜ್ಞಮಯಜಂತ ದೇವಾ-
ಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ
ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥ ೧೬ ॥

ಈ ಮಂತ್ರಕ್ಕೆ ಬೇರೆಬೇರೆ ಬ್ರಹ್ಮಸೂತ್ರಗಳನ್ನು ಅನುಸರಿಸಿ ಮೂರು-ನಾಲ್ಕು ರೀತಿ ಅರ್ಥ ಹೇಳಬಹುದು. ಹೆಚ್ಚಿನ ವಿವರಣೆಗೆ ಮಂತ್ರಾಲಯದ ರಾಯರ ವ್ಯಾಖ್ಯಾನವನ್ನು ನೋಡಬೇಕು. ಇಲ್ಲಿ ಸುಲಭವಾಗಿ ಗ್ರಾಹ್ಯವಾಗುವ ಒಂದು ಅರ್ಥವನ್ನು ಮಾತ್ರ—ವಾದಿರಾಜಸ್ವಾಮಿಗಳ ವ್ಯಾಖ್ಯಾನವನ್ನು ಅನುಸರಿಸಿ ಬರೆದಿದ್ದೇನೆ.

ಅನ್ವಯಾರ್ಥ : (ಪ್ರಥಮ ಪಾದ) ದೇವಾಃ-ಬ್ರಹ್ಮಾದಿ ದೇವತೆಗಳೂ ಋಷ್ಯಾದಿಗಳೂ, ಯಜ್ಞಂ-ಯಜ್ಞನಾಮಕ ವಿಷ್ಣುವನ್ನು, ಯಜ್ಞೇನ-ಮಾನಸಿಕ ಯಜ್ಞದಿಂದ ವೇದಾಧ್ಯಯನಾದಿರೂಪ ಯಜ್ಞದಿಂದಲೂ ಅಶ್ವಮೇಧಾದಿ ಯಜ್ಞಗಳಿಂದಲೂ, ಅಯಜಂತ-ಆರಾಧಿಸಿದರು. (ಎರಡನೇ ಪಾದ) ತಾನಿ ಧರ್ಮಾಣಿ—ಅವರು ಅನುಷ್ಠಾನ ಮಾಡಿದ ಆ ವೈಷ್ಣವಧರ್ಮಗಳೇ, ಪ್ರಥಮಾನಿ ಆಸನ್-ಸರ್ವಶ್ರೇಷ್ಠವಾಗಿ (ಸರ್ವಪ್ರಥಮ ಆಚರಣೆಗಳಾಗಿ) ಆದುವು. (ಮೂರನೇ ಪಾದ) (ಹಾಗೆ ಅನುಷ್ಠಾನ ಮಾಡಿದ್ದಕ್ಕೆ ಉಂಟಾದ ಫಲವನ್ನು ಹೇಳುತ್ತಾನೆ.) ತೇ-ಹಾಗೆ ವೈಷ್ಣವಧರ್ಮಾನುಷ್ಠಾನ ಮಾಡಿದ (ಆದ್ದರಿಂದಲೇ), ಮಹಿಮಾನಃ-ಮಹಾತ್ಮರಾದ ದೇವಷ್ಯಾ೯ದಿಗಳೆಲ್ಲರೂ, ನಾಕಂ—(ಅಕಂ ಎಂದರೆ ದುಃಖ. ಅದರ ಗಂಧವೇ ಇಲ್ಲದ, ಕೇವಲ ಪೂರ್ಣಸುಖಾನುಭವರೂಪವಾದ) ಮೋಕ್ಷವನ್ನು, ಸಚಂತ—ಹೊಂದಿದರು. ಹ-ಪ್ರಸಿದ್ಧವಾಗಿದೆ. (ನಾಲ್ಕನೇ ಪಾದ)

ಯತ್ರ-ಯಾವ ಮೋಕ್ಷದಲ್ಲಿ, ಪೂರ್ವೇ-ಹಿಂದಿನ ಕಲ್ಪಗಳಲ್ಲಿ ಮೋಕ್ಷವನ್ನು ಪಡೆದ— ಹಿಂದಿನ ಕಲ್ಪಗಳ, ಸಾಧ್ಯಾಃ-ಸಾಧನೆ ಮಾಡಿಕೊಂಡ, ದೇವಾಃ-ದೇವಷ್ಯಾದಿ ಮುಕ್ತ ಜೀವರು, ಸಂತಿ-ಇರುತ್ತಾರೋ, ಅಂಥಾ ಮೋಕ್ಷವನ್ನು ಪಡೆದರೆಂದು ಅನ್ವಯ.

ಭಾವಾರ್ಥ : ಪರಿಪೂರ್ಣನಾದ್ದರಿಂದ ಪುರುಷನಾಮಕ ಶ್ರೀವಿಷ್ಣುವಿನ ಮಹಿಮೆಯನ್ನು ತಿಳಿದಂಥಾ ಬ್ರಹ್ಮಾದಿ ದೇವತೆಗಳೂ ನಾರದವಸಿಷ್ಠಾದಿ ಮಹರ್ಷಿಗಳೇ ಮೊದಲಾದವರೆಲ್ಲ ತಮ್ಮತಮ್ಮ ಯೋಗ್ಯತಾನುಸಾರ ಅರಿತುಕೊಂಡು ಯಜ್ಞನಾಮಕನಾದ ಆ ಭಗವಂತನನ್ನು ಮಾನಸಯಜ್ಞದಿಂದಲೂ ವೇದಾಧ್ಯಯನ ಶಾಸ್ತ್ರಪ್ರವಚನಾದಿರೂಪ ಅಧ್ಯಯನಯಜ್ಞದಿಂದಲೂ, ಸಾಕ್ಷಾದ್ಯಜ್ಞಾನುಷ್ಠಾನದಿಂದಲೂ ಧ್ಯಾನೋಪಾಸನಾದಿರೂಪ ತಪಸ್ಸಿನಿಂದಲೂ ಆರಾಧಿಸಿದರು. ಅವರ ಅನುಷ್ಠಾನವೇ ಸರ್ವಶ್ರೇಷ್ಠವಾದ ವೈಷ್ಣವ ಧರ್ಮ ಎನಿಸಿಕೊಂಡಿತು. ಈ ರೀತಿ ವೈಷ್ಣವಧರ್ಮಾನುಷ್ಠಾನನಿರತರಾದವರೆಲ್ಲರೂ ಸಕಲ ದುಃಖಗಳನ್ನು ನೀಗಿಕೊಂಡವರಾಗಿ ಭಗವದಪರೋಕ್ಷದಿಂದ ಪರಿಶುದ್ಧರಾಗಿ, ಜನನ-ಮರಣಾದಿ ಬಂಧನದಿಂದ ಮುಕ್ತರಾಗಿ ಶಾಶ್ವತವಾಗಿ ಪೂರ್ಣಸುಖವನ್ನು ತಮ್ಮತಮ್ಮ ಯೋಗ್ಯತಾನುಸಾರ ಅನುಭವಿಸುವ ಪುನರಾವೃತ್ತಿರಹಿತವಾದ ಮೋಕ್ಷಪದವಿಯನ್ನು ಹೊಂದಿದರು. ಆ ಮೋಕ್ಷದಲ್ಲಿ ಅವರಿಗಿಂತಲೂ ಮೊದಲೇ ಮುಕ್ತಿಯನ್ನು ಹೊಂದಿ ಸುಖಾನುಭವ ಮಾಡುತ್ತಿದ್ದ ಹಿಂದಿನ ಮುಕ್ತರು ಇದ್ದರು. ಅವರೆಲ್ಲರೂ ಇವರನ್ನು ಸ್ವಾಗತಿಸಿದರೆಂಬುದೇ ಈ ಮಂತ್ರದ ಭಾವಾರ್ಥ.

ಇಲ್ಲಿಗೆ ಮೂರನೆಯ ವರ್ಗ ಮುಗಿಯಿತು.

ಇದಕ್ಕೂ ಹೆಚ್ಚಿನ ವಿವರಣೆಗಳು ಶ್ರೀಮದ್ರಾಘವೇಂದ್ರಸ್ವಾಮಿಗಳ, ಸತ್ಯಸಂಧರ, ಸತ್ಯಾಭಿನವತೀರ್ಥರ ಮತ್ತು ವಾದಿರಾಜಸ್ವಾಮಿಗಳ ವ್ಯಾಖ್ಯಾನಗಳಲ್ಲಿ ಸಿಗುತ್ತವೆ. ಅವುಗಳನ್ನೆಲ್ಲಾ ಒಂದು ಕಡೆ ಸಂಗ್ರಹಿಸಿ ಪುರುಷಸೂಕ್ತಾರ್ಥವನ್ನು ವಿಶದವಾಗಿ ಬರೆದು ಮುದ್ರಿಸಬೇಕೆಂಬ ನಮ್ಮ ಯೋಜನೆಯಿದೆ. ಅದು ಶ್ರೀಹರಿವಾಯುಗಳ ಕೃಪೆಯಿಂದ ಕಾರ್ಯಗತವಾಗಲೆಂದು ನಾವು ಪ್ರಾರ್ಥಿಸುತ್ತೇವೆ. ಸದ್ಯಕ್ಕೆ ಇಷ್ಟು ಅರ್ಥ ತಿಳಿದು-ಕೊಂಡು ಸಕಲರೂ ಶ್ರೀಹರಿವಾಯುಗಳ ಅನುಗ್ರಹಕ್ಕೆ ಪಾತ್ರರಾಗಲೆಂದು ಹಾರೈಸುತ್ತೇವೆ.

ಪುರುಷಸೂಕ್ತಾದಿ ಮಂತ್ರಾರ್ಥಾ ಮಾಧ್ವಶಾಸ್ತ್ರಾರ್ಥಸಂಮತಾಃ ।
ಸಾದರಂ ವಿಷ್ಣುತೀರ್ಥೇನ ಯಥಾಮತಿ ನಿರೂಪಿತಾಃ ॥

ಅಲಂಕಾರ—ಪೂಜಾಕಲಾಪ

ಪೂಜಾಕ್ರಮ—ತಂತ್ರಸಾರೋಕ್ತಿ— ತಂತ್ರಸಾರ (ಪ್ರಥಮಾಧ್ಯಾಯ)ದಲ್ಲಿ ಅಷ್ಟ-ಮಹಾಮಂತ್ರಗಳನ್ನು ಹೇಳಿದ ಬಳಿಕ ಶ್ರೀಮದಾಚಾರ್ಯರು "ಪೂಜ್ಯಶ್ಚ ಭಗವಾನ್ ನಿತ್ಯಂ" (ಶ್ಲೋಕ ೪೯)—ಪ್ರತಿನಿತ್ಯ ಭಗವಂತನನ್ನು ಮಹಾಮಂತ್ರಗಳಿಂದ ಕೇವಲ ಧ್ಯಾನ ಮಾಡಿದರೆ ಮಾತ್ರವೇ ಸಾಲದು, ಆ ಭಗವಂತನ ಪೂಜೆಯನ್ನು ಪ್ರತಿನಿತ್ಯವೂ ಮಾಡಬೇಕು ಎಂದು ಕಡ್ಡಾಯವಾಗಿ ಹೇಳಿದ್ದಾರೆ. ಅನಂತರ ಆ ಪೂಜಾಕ್ರಮವನ್ನೇ ಸಂಗ್ರಹವಾಗಿ ಆರಂಭಿಸಿ ಮೊದಲು ಪೀಠಪೂಜಾಕ್ರಮವನ್ನು ವಿಸ್ತರಿಸಿ,

> ತತ್ರಾವಾಹ್ಯ ಹರಿಂ ಚಾರ್ಘ್ಯಂ ಪಾದ್ಯಮಾಚಮನೀಯಕಮ್ ॥ ೫೯ ॥
> ಮಧುಪರ್ಕಂ ಪುನಶ್ಚಾಚಾಮಂ ಸ್ನಾನಂ ವಾಸೋ ವಿಭೂಷಣಮ್ ।
> ಉಪವೀತಾಸನೇ ದತ್ವಾ ಗಂಧಪುಷ್ಪೇ ತಥೈವ ಚ ॥ ೬೦ ॥
> ಧೂಪದೀಪೌ ತತೋ ದತ್ವಾ ನೈವೇದ್ಯಂ ಮೂಲಮಂತ್ರತಃ ॥ ೬೧ ॥
> ವಿಸರ್ಜಯಿತ್ವಾ ನೈವೇದ್ಯಂ ಮೂಲೇನ ತ್ರಿಃ ಸಮರ್ಚ್ಯ ಚ ।
> ಧೂಪದೀಪೌ ಪುನರ್ದತ್ವಾ .... ॥ ೬೮ ॥
> ಅರ್ಚಯಿತ್ವಾ ಹರಿಂ ...... ಸರ್ವ ದೇವದೇವೇಶ್ವರಂ ಪ್ರಭುಂ ॥ ೬೯ ॥

ಎಂಬುದಾಗಿ ಷೋಡಶೋಪಚಾರ ಪೂಜಾಕ್ರಮವನ್ನು ಸೂಕ್ತಪ್ರಾಯವಾಗಿ ಹೇಳಿ-ಬಿಟ್ಟರು. ಈ ವಾಕ್ಯಗಳಿಗೆ ಹೀಗೆ ಸ್ಥೂಲಾರ್ಥವಾಗುತ್ತದೆ—

ಆ ಪೀಠದಲ್ಲಿ ಭಗವತ್ಪ್ರತಿಮೆಗಳನ್ನಿಟ್ಟು ಅವುಗಳಲ್ಲಿ ಬಿಂಬಮೂರ್ತಿಯ (ಅಥವಾ ಪರಾರ್ಥವಾದರೆ ಸೂರ್ಯಾದಿಸ್ಥ ಪರಮಾತ್ಮನ)ನ್ನು ಆವಾಹನೆ ಮಾಡಿ, ಕ್ರಮವಾಗಿ ಅರ್ಘ್ಯವನ್ನೂ ಪಾದ್ಯವನ್ನೂ ಆಚಮನವನ್ನೂ (ಶ್ಲೋ. ೫೯) ಮಧುಪರ್ಕವನ್ನೂ ಪುನ-ರಾಚಮನವನ್ನೂ ಕೊಟ್ಟು ಸ್ನಾನ ಮಾಡಿಸಬೇಕು. ಆ ಬಳಿಕ ವಸ್ತ್ರವನ್ನೂ (ವಾಸಃ) ಆಭರಣಗಳನ್ನೂ ಯಜ್ಞೋಪವೀತವನ್ನೂ ಆಸನವನ್ನೂ ಕೊಟ್ಟು ಗಂಧವನ್ನೂ ಪುಷ್ಪವನ್ನೂ ಅರ್ಪಿಸಿ (೬೦ ಶ್ಲೋ.) ಆವರಣಪೂಜೆ ಮಾಡಬೇಕೆಂದು ವಿವರಿಸುತ್ತಾರೆ. ಧೂಪವನ್ನೂ ದೀಪವನ್ನೂ ಸಮರ್ಪಿಸಿದ ಬಳಿಕ ನೈವೇದ್ಯವನ್ನು ಸಮರ್ಪಿಸಬೇಕು. ಆಮೇಲೆ ನೈವೇದ್ಯದ ಪದಾರ್ಥಗಳನ್ನು ವಿಸರ್ಜನೆ ಮಾಡಿ ಪುನಃ ಧೂಪ ದೀಪಗಳನ್ನು ಅರ್ಪಿಸಿ ಮಂಗಳಾರತಿ ಮಾಡಿ ಪೂಜೆ ಸಮಾಪ್ತಿ ಮಾಡಬೇಕೆಂಬುದು ಶ್ರೀಮದಾಚಾರ್ಯರ ಹೃದ್ಗತ. ಇಲ್ಲಿ ಶ್ರೀಮದಾಚಾರ್ಯರು ಷೋಡಶೋಪಚಾರಗಳನ್ನು ಸೂತ್ರಪ್ರಾಯವಾಗಿ ಹೇಳಿದ್ದರಿಂದಲೇ ಶ್ರೀ ಟೀಕಾಕೃತ್ಪಾದರು ಅದನ್ನು ಪದ್ಯಮಾಲಾದಲ್ಲಿ ವಿವರಿಸಿದ್ದಾರೆ. ಈಗ ಮೊದಲು ಷೋಡಶೋಪಚಾರಗಳು ಯಾವುವು ಎಂಬ ವಿಚಾರಕ್ಕೆ ಹೋಗೋಣ. ಈ ಹದಿನಾರು ಉಪಚಾರಗಳನ್ನು ಹೆಸರಿಸುವ ಶ್ಲೋಕವನ್ನು ಶ್ರೀ ಪ್ರಭಂಜನಾಚಾರ್ಯರು ಪದ್ಯಮಾಲಾ ಟಿಪ್ಪಣಿಯಲ್ಲಿ (ಪುಟ ೬೬, ಎರಡನೆ ಸಂಸ್ಕರಣ, 1988) ಉದಹರಿಸಿದ್ದಾರೆ.

ಷೋಡಶೋಪಚಾರಗಳು ಯಾವುವೆಂದರೆ—

ಅರ್ಘ್ಯಂ ಪಾದ್ಯಂ ಚಾಚಮನಂ ಮಧುಪರ್ಕಂ ತಥೈವ ಚ ।
ಪುನರಾಚಮನಂ ಸ್ನಾನಂ ವಸನಂ ಭೂಷಣಂ ತಥಾ ।
ಉಪವೀತಾಸನೇ ಗಂಧ—ಪುಷ್ಪೇ ವೈ ಧೂಪದೀಪಕೇ ।
ನೈವೇದ್ಯಂ ನಮನಂ ಚೇತಿ ಉಪಚಾರಾಸ್ತು ಷೋಡಶ । (ಸ್ಮೃತಿ)

೧. ಆಸನ, ೨. ಅರ್ಘ್ಯ, ೩. ಪಾದ್ಯ, ೪. ಆಚಮನ, ೫. ಮಧುಪರ್ಕ, ೬. ಪುನರಾಚಮನ, ೭. ಸ್ನಾನ, ೮. ವಸ್ತ್ರ, ೯. ಆಭರಣ, ೧೦. ಯಜ್ಞೋಪವೀತ, ೧೧. ಗಂಧ, ೧೨. ಪುಷ್ಪ, ೧೩. ಧೂಪ, ೧೪. ದೀಪ, ೧೫. ನೈವೇದ್ಯ, ೧೬. ನಮಸ್ಕಾರ—ಇವುಗಳೇ ಷೋಡಶೋಪಚಾರಗಳು. (ಶ್ಲೋಕದಲ್ಲಿ 'ಉಪವೀತಾಸನೇ' ಎಂದು ಆಸನವನ್ನು ಯಜ್ಞೋಪವೀತದ ಜೊತೆ ಸೇರಿಸಿದ್ದರೂ ಆವಾಹನೆ ಮಾಡಿದ ಬಳಿಕ ದೇವರನ್ನು ಆಸನದಲ್ಲಿ ಕೂಡಿಸುವುದು ಅತ್ಯಾವಶ್ಯಕವಾದ್ದರಿಂದ ಅದನ್ನು ನಾವು ಮೊದಲೇ ತೋರಿಸಿದ್ದೇವೆ.)

ಧ್ಯಾನ-ಆವಾಹನೆಗಳೆರಡೂ ಆಸನದಲ್ಲೇ ಸೇರಿಕೊಳ್ಳುತ್ತದೆ. ಆಭರಣದಿಂದ ಚಕ್ರಾದಿ ಆಯುಧಗಳೂ, ಗಂಧದಿಂದ ಅಕ್ಷತೆಯೂ, ಪುಷ್ಪದಿಂದ ತುಲಸಿಯೂ ಪತ್ರಗಳೂ, ನೈವೇದ್ಯದೊಡನೆ ಪುನರ್ದೀಪಧೂಪಗಳೂ ಮಹಾಮಂಗಳಾರತಿಯೂ ಸೇರಿಕೊಳ್ಳುತ್ತವೆ ಎಂದು ಪೂಜಾಕಲ್ಪಲತಾದಲ್ಲಿ ಹೇಳಿದೆ.

ಈ ಷೋಡಶೋಪಚಾರಗಳ ಪೈಕಿ ಸ್ನಾನದವರೆಗಿನ ಏಳು ಉಪಚಾರಗಳ ಕ್ರಮವನ್ನು ಈ ಮೊದಲೇ ವಿವರಿಸಿರುವುದರಿಂದ ಈಗ ವಸ್ತ್ರಾದ್ಯುಪಚಾರಗಳನ್ನು ಸಮರ್ಪಿಸುವ ಕ್ರಮಕ್ಕೆ ಬರೋಣ. ಇದನ್ನು ಪದ್ಯಮಾಲಾದಲ್ಲಿ ಹೀಗೆ ಹೇಳಿದ್ದಾರೆ—

ವಸ್ತ್ರಾಭರಣಾದಿ ಉಪಚಾರಗಳು

ತತೋಽಂಗಮಾರ್ಜನಂ ವಸ್ತ್ರಂ ಪೀತಂ ಚ ಪರಿಧಾನಕವತ್ ।
ತತಃ ಸರ್ವಾಂಗಭೂಷಾಶ್ಚ ನೂಪುರಾದ್ಯಾಃ ಕಿರೀಟಕವತ್ ॥ ೭೭ ॥
ಧ್ಯಾತ್ವೈವ ಭೂಷಣಂ ಕಿಂಚಿ—ನ್ನಮಸ್ಕೃರ್ಪಯೇತ್ ಸುಧೀಃ ।
ಯಜ್ಞೋಪವೀತಂ ದತ್ವಾ ತ—ಮಾಸನೇ ಚೋಪವೇಶಯೇತ್ ॥ ೭೮ ॥
ಅರ್ಪಯೇದ್ ಗಂಧಪುಷ್ಪಾಣಿ ಮೂಲೇನ ತುಲಸೀಂ ತಥಾ ॥ ೮೦ ॥
ತತಶ್ಚಕ್ರಾಯುಧಾದೀನಿ ಪೂ—ಜಯೇತ್ ಕ್ರಮಶೋದಶ ।

(ಅರ್ಥ) ದೇವರಿಗೆ ಶುದ್ಧೋದಕಸ್ನಾನ ಮಾಡಿಸಿ ವಸ್ತ್ರದಿಂದ ಒರೆಸಿ ಇಟ್ಟ ನಂತರ (ಅಂಗಮಾರ್ಜನ ಮಾಡಿದ ಬಳಿಕ) ಶುಭ್ರವಾದ ಬಿಳಿಯ ಉಡುವ ವಸ್ತ್ರವನ್ನೂ (ಪೀತಾಂಬರವನ್ನೂ) ಹೊದೆದುಕೊಳ್ಳುವ ಉತ್ತರೀಯ ವಸ್ತ್ರವನ್ನೂ ಸಮರ್ಪಿಸಬೇಕು (ಸಮರ್ಪಿಸಿದ್ದೇವೆಂದು ಭಾವಿಸಿಕೊಳ್ಳಬೇಕು). ಅನಂತರ ಕಾಲಂದಿಗೆ (ನೂಪುರ)

ಕಿರೀಟಾದಿ ಆಭರಣಗಳನ್ನು ಸಮರ್ಪಿಸಬೇಕು. (ಶ್ಲೋಕ ೭೭) ಹಾಗೆಯೇ ಒಂದು ನೂತನ ಭೂಷಣವನ್ನು ಸಮರ್ಪಿಸಲಾಗಿದೆಯೆಂದು ಭಾವಿಸಿ ಆ ಮೂರ್ತಿಯನ್ನು ಪೀಠದಲ್ಲಿ (ಆಸನದಲ್ಲಿ) ಕೂಡಿಸಬೇಕು (೭೮). .. ಅನಂತರ ಗಂಧವನ್ನೂ ಅಕ್ಷತೆಯನ್ನೂ ಪುಷ್ಪಗಳನ್ನೂ ಮೂಲಮಂತ್ರದಿಂದ ತುಲಸೀದಳಗಳನ್ನೂ ಅರ್ಪಿಸಿದ ಬಳಿಕ ಚಕ್ರಾದಿ ಹತ್ತು ಆಯುಧಗಳನ್ನು ಅರ್ಪಿಸಬೇಕು (೮೦-೮೯). ಹೀಗೆ ಪದ್ಮಮಾಲಾದಲ್ಲಿ ಹೇಳಿದೆ. ಈಗ ಆ ಕ್ರಮವನ್ನೇ ಉಪಯುಕ್ತ ಮಂತ್ರಸಹಿತ ವಿವರಿಸಲಾಗುವುದು.

೮. ವಸ್ತ್ರಸಮರ್ಪಣೆ

ದೇವಾಲಯಗಳಲ್ಲಿರುವ ದೊಡ್ಡದೊಡ್ಡ ವಿಗ್ರಹಗಳಿಗೆ ಉಡುವ ಮತ್ತು ಹೊದಿಯುವ ವಸ್ತ್ರಗಳನ್ನು ಧರಿಸುವ ಆವಶ್ಯಕತೆಯಿದ್ದರೂ ಪ್ರತಿನಿತ್ಯದ ಪೂಜೆಯಲ್ಲಿ ನಿಜವಾದ ವಸ್ತ್ರಗಳನ್ನೇ ಉಡಿಸುವ ಆವಶ್ಯಕತೆ ಬರುವುದಿಲ್ಲ. ಆದಕಾರಣ ಈ ವಸ್ತ್ರಧಾರಣವನ್ನು ಮಾನಸಿಕವಾಗಿ ಮಾಡಬೇಕು. ಹಬ್ಬದ ದಿನಗಳಲ್ಲೂ ಅನಂತಪದ್ಮನಾಭಾದಿ ವ್ರತಗಳಲ್ಲೂ ವಸ್ತ್ರಕ್ಕೆ ಪ್ರತಿನಿಧಿಯಾಗಿ ಹತ್ತಿಯಿಂದ ಮಾಡಿದ 'ಗೆಜ್ಜೆವಸ್ತ್ರ'ಗಳನ್ನು ಅರ್ಪಿಸುವುದು ರೂಢಿ. ಅದನ್ನು ಈ ಸಂದರ್ಭದಲ್ಲೇ ಮಾಡಬೇಕು. ಪ್ರತಿನಿತ್ಯದ ಪೂಜೆಯಲ್ಲಿ 'ವಸ್ತ್ರಾರ್ಥೇ ತುಲಸೀದಳಂ ಸಮರ್ಪಯಾಮಿ' ಎಂದು ಮಂತ್ರ ಹೇಳಿದ ಬಳಿಕ ತುಳಸೀ ಸಮರ್ಪಿಸಬಹುದು.

'ಪಂಚಸಂಸ್ಕಾರಸಂಗ್ರಹ' ಎಂಬ ಗ್ರಂಥದಲ್ಲಿ 'ದದ್ಯಾತ್ತು ವಿಷ್ಣುಗಾಯತ್ರ್ಯಾ ವಸ್ತ್ರೇ ದ್ವೇ ಧೌತನಿರ್ಮಲೇ' ಎಂದರೆ ವಿಷ್ಣುಗಾಯತ್ರೀ (ನಾರಾಯಣಾಯ ವಿದ್ಮಹೇ...) ಹೇಳಿ ಒಗೆದು ಪರಿಶುದ್ಧವಾದ ಎರಡು ವಸ್ತ್ರಗಳನ್ನು—ಉಡುವುದಕ್ಕೊಂದು, ಹೊದಿಯುವುದಕ್ಕೊಂದು—ಭಗವಂತನಿಗೆ ಸಮರ್ಪಿಸಬೇಕೆಂದು ಹೇಳಿದೆಯೆಂದು ಶ್ರೀ ಪ್ರಭಂಜನರ ಪದ್ಮಮಾಲಾ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ವಸ್ತ್ರವನ್ನು ಏರಿಸುವಾಗ 'ಯುವಂ ವಸ್ತ್ರಾಣಿ' (ಋ ೧/೧೫೨/೧ ತೈ.ಬ್ರಾ. ೨/೮/೭/೮) ಎಂಬ ಋಙ್ಮಂತ್ರವನ್ನಾಗಲೀ, 'ಯುವಾ ಸುವಾಸಾಃ' (ಋ. ೩/೮/೪ ತೈ.ಬ್ರಾ. ೩/೬/೧/೩), 'ಅಭಿವಸ್ತ್ರಾ' (ಋಗ್ವೇದ ೯/೯೭/೫೦) ಎಂಬುದನ್ನಾಗಲೀ ಪಠನ ಮಾಡಬೇಕು. ಆ ಮಂತ್ರಗಳನ್ನು ಕೆಳಗೆ ಕೊಡಲಾಗಿದೆ.

ಯುವಂ ವಸ್ತ್ರಾಣಿ ಪೀವಸಾ ವಸಾಥೇ
ಯುವೋರಚ್ಛಿದ್ರಾ ಮಂತವೋ ಹ ಸರ್ಗಾಃ |

ಅವಾತಿರತಮನೃತಾನಿ ವಿಶ್ವ

ಋತೇನ ಮಿತ್ರಾ ವರುಣಾ ಸಚೇಥೇ ॥

(ಋ. ೧/೧೫೨/೧ ತೈ.ಬ್ರಾ. ೨/೮/೬/೮)

ಅಥವಾ

ಯುವಾ ಸುವಾಸಾಃ ಪರಿವೀತ ಆಗಾತ್

ಸ ಉ ಶ್ರೇಯಾನ್ ಭವತಿ ಜಾಯಮಾನಃ ।

ತಂ ಧೀರಾಸಃ ಕವಯ ಉನ್ನಯಂತಿ

ಸ್ವಾಧ್ಯೋ೩ ಮನಸಾ ದೇವಯಂತಃ ॥

(ಋ. ೩/೮/೪)

ಅಥವಾ

ಅಭಿ ವಸ್ತ್ರಾ ಸುವಸನಾನ್ಯರ್ಷಾ-

ಽಭಿ ಧೇನೂಃ ಸುದುಘಾಃ ಪೂಯಮಾನಃ ।

ಅಭಿ ಚಂದ್ರಾ ಭರ್ತವೇ ನೋ ಹಿರಣ್ಯಾ-

ಽಭ್ಯಶ್ವಾನ್ ರಥಿನೋ ದೇವ ಸೋಮ ॥

(ಋ. ೯/೯೭/೫೦)

ವಸ್ತ್ರೋಪವಸ್ತ್ರಾರ್ಥೇ ತುಲಸೀದಲಂ ಸಮರ್ಪಯಾಮಿ—ಎಂದು ತುಲಸೀದಲವನ್ನಾಗಲಿ ಹೂವನ್ನಾಗಲಿ ವಸ್ತ್ರಕ್ಕೆ ಪ್ರತಿನಿಧಿಯಾಗಿ ಏರಿಸಬಹುದು (ಅಥವಾ ಗೆಜ್ಜೆವಸ್ತ್ರವನ್ನಾದರೂ ಏರಿಸಬಹುದು),

೯. ಆಭರಣಸಮರ್ಪಣ

ವಸ್ತ್ರಗಳನ್ನು ಸಮರ್ಪಿಸಿದ ಮೇಲೆ ನೂಪುರ ಕಿರೀಟಾದ್ಯಾಭರಣಗಳನ್ನು ಸಮರ್ಪಿಸ ಬೇಕು ಮತ್ತು ಕೊನೆಯಲ್ಲಿ ಯಾವುದಾದರೊಂದು ನೂತನ ಆಭರಣವನ್ನೂ ಅರ್ಪಿಸ ಬೇಕೆಂದೂ ಪದ್ಮಮಾಲಾದಲ್ಲಿ ಹೇಳಿದೆ. ಹಾಗೆ ಅರ್ಪಿಸಬೇಕಾದ ಆಭರಣಗಳು ಯಾವು ವೆಂದರೆ (ಶ್ರೀ ಪ್ರಭಂಜನರ ಪದ್ಮಮಾಲಾ ಟಿಪ್ಪಣಿಯಿಂದ ಪುಟ ೪೭)

ಕಿರೀಟಂ ಮುಕುಟಂ ಹಾರಂ ಮಕರೇ ಕುಂಡಲೇ ತಥಾ ।
ಕಟಕಾಂಗುಲೀಯವಲಯ—ಮೇಖಲಾನೂಪುರಾದಿಕಮ್ ॥

೧. ಕಿರೀಟಂ–ದೊಡ್ಡ ಕಿರೀಟ (ಚಕ್ರವರ್ತಿ ಲಕ್ಷಣ), ಮುಕುಟ–ಸಣ್ಣ ಕಿರೀಟ, ೩. ಹಾರಂ-ಮುತ್ತಿನ ಹಾರ, ೪. ಮಕರೇ ಕುಂಡಲೇ–ಮೊಸಳೆಯ (ಮಕರ) ಆಕಾರದ ಎರಡು ಕುಂಡಲಗಳು (ಕಿವಿಯ ಆಭರಣಗಳು), ೫. ಕಟಕ–ಕೈಗೆ ಹಾಕಿಕೊಳ್ಳುವ ಕಡಗ ಗಳು (ಬಂಗಾರದ ಬಳೆಗಳು), ೬. ಅಂಗುಲೀಯ-ಉಂಗುರಗಳು, ೭. ವಲಯ- ಸೊಂಟದ ಪಟ್ಟಿ, ೮. ಮೇಖಲಾ-ಡಾಬು, ೯. ನೂಪುರ–ಕಾಲಂದಿಗೆಗಳು ಅಥವಾ ಕಾಲ್ಗಡಗಗಳು, ಆದಿಕಂ–ಮೊದಲಾದ ಆಭರಣಗಳನ್ನು ಧ್ಯಾನಿಸಬೇಕು. ಇವುಗಳಲ್ಲದೆ ವೈಜಯಂತೀಹಾರವನ್ನೂ ಕೌಸ್ತುಭರತ್ನವನ್ನೂ ಅರ್ಪಿಸಬಹುದು.

ಈ ಆಭರಣಗಳನ್ನು ಭಗವಂತನಿಗೆ ಯಾವ ಯಾವ ದೇವತೆಗಳು ಸಮರ್ಪಿಸುತ್ತಾರೆ ಎಂಬ ವಿವರಣೆ ತೆಲುಗು ಆಹ್ನಿಕಮಂಜರಿಯಲ್ಲಿ ಹೇಳಿದೆ (ಕೆಲವು ಅಂಶಗಳು ಕುಂಭ- ಕೋಣದ ದೇವತಾರ್ಚನವಿಧಿಯಲ್ಲೂ ಬಂದಿವೆ).

ಭಗವಂತನಿಗೆ ಆಭರಣಸೇವೆ ಮಾಡುವ ದೇವತೆಗಳು

ಶುಶ್ರೂಷಾಂ ಶ್ರೀಹರೇರ್ಲಕ್ಷ್ಮೀಃ ಸ್ನಾನಂ ಕಾರಯತಿ ಪ್ರಭೋಃ ।
ಪೀತಾಂಬರಂ ಚ ಗರುಡಃ ಆಸನಂ ಶೇಷ ಏವ ಚ ॥ ೧ ॥

ರುದ್ರಸ್ತು ಕಲಶಂ ಗೋಪೀ—ಚಂದನಂ ಮನ್ಮಥಸ್ತಥಾ ।
ಇಂದ್ರಸ್ತು ಶಂಖಚಕ್ರಾದಿ—ಧಾರಣಾಯ ಜಗತ್ಪತೇಃ ॥ ೨ ॥

ಆದರ್ಶಂ ತು ತತೋ ದತ್ತಾಂ ಸೂರ್ಯಾಚಂದ್ರೌ ರಮಾಪತೇಃ ।
ಭೂದೇವೀ ವನಮಾಲಾಂ ಚ ವೈಜಯಂತೀಂ ತಥಾ ಶಿವಃ ॥ ೩ ॥

(ಅರ್ಥ) ಶ್ರೀವಿಷ್ಣುವಿನ ಶುಶ್ರೂಷೆಯನ್ನು ರಮಾಬ್ರಹ್ಮಾದಿ ದೇವತೆಗಳೇ ಹಂಚಿ- ಕೊಂಡು ಮಾಡುತ್ತಾರೆ. ಹೇಗೆಂದರೆ— ಲಕ್ಷ್ಮೀದೇವಿ ಸ್ನಾನ ಮಾಡಿಸುತ್ತಾಳೆ. ಗರುಡ ಪೀತಾಂಬರವನ್ನು ಉಡಿಸುತ್ತಾನೆ. ಶೇಷದೇವರು ಕೂಡಲು ಆಸನ ಕೊಡುತ್ತಾರೆ (೧).

ರುದ್ರದೇವರು ಕಲಶವನ್ನು ಧರಿಸುತ್ತಾರೆ (ಹಿಡಿದುಕೊಂಡು ತರುತ್ತಾರೆ). ಮನ್ಮಥನು ಗೋಪೀಚಂದನ ಹಚ್ಚುತ್ತಾನೆ. ದೇವೇಂದ್ರ ಶಂಖಚಕ್ರಾದಿ ಮುದ್ರೆಗಳನ್ನು ಹಾಕುತ್ತಾನೆ (೨). ಸೂರ್ಯಚಂದ್ರರು ಕನ್ನಡಿಯನ್ನು (ದರ್ಪಣವನ್ನು) ಹಿಡಿಯುತ್ತಾರೆ. ಭೂದೇವಿ ವನಮಾಲೆಯನ್ನು ಹಾಕಿದರೆ ಶಿವನು ವೈಜಯಂತೀಮಾಲೆಯನ್ನು ಹಾಕುತ್ತಾನೆ. (೩).

ಪಾದುಕೇ ವೀಂದ್ರ ಉದ್ದಿಷ್ಟಃ ಕೌಸ್ತುಭೇಚ ವಿಧಿಃ ಸ್ಮೃತಃ ।
ಚೂಡಾರತ್ನೇ ಮರುದ್ದೇವೋ ಕುಂಡಲೇ ಶೇಷ ಏವ ಚ ॥ ॥

ಪೂಜಾಕಾಲೇ ತು ದೇವಸ್ಯ ಇತೀದಂ ದೇಯಮಂಜಸಾ ।
ಅನೇಕರತ್ನಸಂಭೂತಾ ತುಲಸೀದಳಮಿಶ್ರಿತಾ ॥ ೫ ॥

ವಿಷ್ಣುವಕ್ಷಃಸ್ಥಿತಾ ಮಾಲಾ ವೈಜಯಂತೀತ್ಯುದಾಹೃತಾ ।
ದೇದೀಪ್ಯಮಾನಶ್ಚಂದ್ರಾರ್ಕ—ಕೋಟಿಸೂರ್ಯಸಮಪ್ರಭಃ ॥ ೬ ॥

ವಿಷ್ಣುವಕ್ಷಃಸ್ಥಲೇ ಭ್ರಾಜೀ ಕೌಸ್ತುಭಃ ಸಮುದಾಹೃತಃ ॥ ೭ ॥

(ಅರ್ಥ) ಶ್ರೀಹರಿಯ ಪಾದುಕೆಗಳಲ್ಲಿ ಗರುಡ(ವೀಂದ್ರ)ನೂ, ಕೌಸ್ತುಭಮಣಿಯಲ್ಲಿ ಬ್ರಹ್ಮದೇವರೂ, ಚೂಡಾರತ್ನದಲ್ಲಿ ವಾಯುದೇವರೂ, ಕುಂಡಲಗಳಲ್ಲಿ ಶೇಷದೇವರೂ, ಇದ್ದು ಭಗವಂತನಿಗೆ ಪೂಜಾಕಾಲದಲ್ಲಿ ಅರ್ಪಿಸುತ್ತಾರೆ. (೪). ಭಗವಂತನ ಈ ಆಭರಣಗಳನ್ನು ತುಳಸೀಸಮೇತವಾಗಿ ಅರ್ಪಿಸಬೇಕಲ್ಲದೆ ಎಲ್ಲವೂ ನಾನಾರತ್ನ (ನವರತ್ನ)ಗಳಿಂದ ಜಟಿತವಾದುದೆಂದು ತಿಳಿಯಬೇಕು (೫). ವಿಷ್ಣುವಿನ ಎದೆಯ ಮೇಲೆ ವಿರಾಜಿಸುವ ಮಾಲೆಗೇ ವೈಜಯಂತೀಹಾರವೆಂದು ಹೆಸರು. ಅದು ಕೋಟಿಚಂದ್ರ ಸೂರ್ಯರಂತೆ ಝಗಝಗಿಸುತ್ತದೆ (೬). ವಿಷ್ಣುವಿನ ವಕ್ಷಸ್ಥಳದಲ್ಲಿ ಥಳಥಳಿಸುತ್ತಿರುವ ದಿವ್ಯವಾದ ಮಣಿಗೇ ಕೌಸ್ತುಭವೆಂದು ಹೆಸರು (೭)

ಈ ಶ್ಲೋಕಗಳನ್ನು ಹೇಳಿಕೊಂಡು ಆಯಾ ದೇವತೆಗಳನ್ನು ಧ್ಯಾನಮಾಡಿ ಕೊನೆಗೆ 'ಹಿರಣ್ಯರೂಪಃ....' ಎಂಬ ಕೆಳಗಿನ ಋಙ್ಮಂತ್ರ ಪಠಿಸಿ ಆಭರಣಗಳಿಗೆ ಪ್ರತಿನಿಧಿಯಾಗಿ ಹೂವು-ತುಳಸಿಗಳನ್ನು ಸಮರ್ಪಿಸಬೇಕು. ಇದೇ ಆಭರಣಸಮರ್ಪಣೆಯ ಕ್ರಮ.

ಓಂ ಹಿರಣ್ಯರೂಪಃ ಸ ಹಿರಣ್ಯಸಂದೃ-

ಗಪಾಂ ನಪಾತ್ ಸೇದು ಹಿರಣ್ಯವರ್ಣಃ ।

ಹಿರಣ್ಯಯಾತ್ ಪರಿ ಯೋನೇರ್ನಿಷದ್ಯಾ

ಹಿರಣ್ಯದಾ ದದತ್ಯನ್ನಮಸ್ಮೈ ||

(ಋ. ೨/೩೫/೧೦)

ಓಂ ನಮೋ ನಾರಾಯಣಾಯ । ಕಿರೀಟಕುಂಡಲಾದಿ ಸರ್ವಾಭರಣಾನಿ ನೂತನಾಭರಣಂ ಚ ಸಮರ್ಪಯಾಮಿ ||

(ಇತಿ ತುಲಸೀಪುಷ್ಪೇ ಸಮರ್ಪಯೇತ್)

ಶ್ರೀ ಪ್ರಭಂಜನರ ಪದ್ಮಮಾಲಾ ಪುಸ್ತಕದಿಂದ ಸಂಗ್ರಹ—ಬಂಗಾರದ ಆಭರಣಗಳಿಗೆ ನಿರ್ಮಾಲ್ಯವಿಲ್ಲವೆಂದು ಪೂಜಾಕಲ್ಪಲತಾದಲ್ಲಿ ಹೇಳಿದೆ (ಪು. ೪೮).

ಯಾವಚ್ಚಂದ್ರಶ್ಚ ಸೂರ್ಯಶ್ಚ ಯಾವತ್ ತಿಷ್ಠಂತಿ ದೇವತಾಃ ।
ನ ನಿರ್ಮಾಲ್ಯಂ ಭವೇತ್ ತಾವತ್ ಸ್ವರ್ಣವಸ್ತ್ರವಿಭೂಷಣಮ್ ||

(ಎಲ್ಲಿಯವರೆಗೆ ಸೂರ್ಯಚಂದ್ರರು ಇರುವರೋ ಮತ್ತು ಎಲ್ಲಿಯವರೆಗೆ ದೇವತೆಗಳಿರುವರೋ ಅಲ್ಲಿಯವರೆಗೂ ಬಂಗಾರದ ಆಭರಣಗಳಿಗೂ ವಸ್ತ್ರಗಳಿಗೂ ನಿರ್ಮಾಲ್ಯದ ದೋಷ ಇಲ್ಲ.

ವೈಜಯಂತೀ ಹಾರವನ್ನು ಈ ಮಂತ್ರ ಹೇಳಿ ಸಮರ್ಪಿಸಬಹುದೆಂದು ಪೂಜಾಕಲ್ಪಲತಾದಲ್ಲಿ ಹೇಳಿದೆ (ಪುಟ ೪೮)—

ಅನೇಕರತ್ನಸಂಯುಕ್ತಾ ತುಲಸೀದಲಮಿಶ್ರಿತಾ ।
ವಿಷ್ಣುವಕ್ಷಃಸ್ಥಲೇ ಮಾಲಾ ವೈಜಯಂತೀತ್ಯುದಾಹೃತಾ ||
ವೈಜಯಂತೀಮಾಲಾಂ ಸಮರ್ಪಯಾಮಿ ||

(ಅರ್ಥ) ವಿಷ್ಣುವಕ್ಷಸ್ಥಲದಲ್ಲಿ ಪರಿಶೋಭಿಸುವ ವೈಜಯಂತೀಮಾಲೆಯು ಅನೇಕ ರತ್ನಗಳಿಂದ ಖಚಿತವಾಗಿರುವುದಲ್ಲದೆ ತುಲಸೀದಳಗಳಿಂದಲೂ ಮಿಶ್ರಿತವಾಗಿದೆ.

ಕೌಸ್ತುಭಮಣಿಯನ್ನು ಈ ಮಂತ್ರ ಹೇಳಿ ಅರ್ಪಿಸಬೇಕೆಂದು ಪೂಜಾಕಲ್ಪಲತಾದಲ್ಲಿ ಹೇಳಿದೆ—

ದೇದೀಪ್ಯಮಾನಚಂದ್ರಾರ್ಕ—ಕೋಟಿಕಾಂತಿಸಮಪ್ರಭಃ ।
ವಿಷ್ಣೋರ್ವಕ್ಷಃಸ್ಥಲೇ ಭಾಸ್ವತ್ ಕೌಸ್ತುಭಃ ಸಮುದಾಹೃತಃ ||
ಕೌಸ್ತುಭರತ್ನಂ ಸಮರ್ಪಯಾಮಿ ||

(ಅರ್ಥ) ಉಜ್ವಲ ಕಾಂತಿಯುಳ್ಳ ಕೋಟಿ ಸೂರ್ಯ-ಚಂದ್ರರ ಪ್ರಕಾಶಕ್ಕೆ ಸಮಾನವಾದ ಕಾಂತಿಯುಳ್ಳ ಕೌಸ್ತುಭಮಣಿಯು ವಿಷ್ಣುವಕ್ಷಸ್ಥಲದಲ್ಲಿ ರಾರಾಜಿಸುತ್ತದೆ.

೧೦. ಯಜ್ಞೋಪವೀತ ಸಮರ್ಪಣೆ

ಯಜ್ಞೋಪವೀತವನ್ನು ಸಮರ್ಪಿಸಲು ತೆಲುಗು ಅಹ್ನೀಕಮಂಜರಿಯಲ್ಲಿ ಈ ಶ್ಲೋಕ ಕೊಟ್ಟಿದ್ದಾರೆ—

ಸುವರ್ಣತಂತೂದ್ಭವ ಯಜ್ಞಸೂತ್ರಂ
ಮುಕ್ತಾಫಲೈರ್ಯುಕ್ತಮನೇಕವರ್ಣಮ್ ।
ಗೃಹಾಣ ತದ್ವತ್-ಕೃತಮುತ್ತರೀಯಂ
ಸ್ವಕರ್ಮಸೂತ್ರಾಂತಕೃತೇ ನಮಸ್ತೇ ॥

(ಅರ್ಥ) ಬಂಗಾರದ ತಂತಿಯಿಂದ ಮಾಡಿದ ಮೂರು ಸೂತ್ರಗಳುಳ್ಳ, ಜೊತೆಗೆ ಮುತ್ತುಗಳಿಂದಲೂ ಕೂಡಿರುವ, ಅನೇಕ ವರ್ಣವುಳ್ಳ ಒಂದು ಯಜ್ಞೋಪವೀತವನ್ನೂ ಉತ್ತರೀಯಕ್ಕೆ ಪ್ರತಿನಿಧಿಯಾದ ಮತ್ತೊಂದು ಯಜ್ಞೋಪವೀತವನ್ನೂ, ಹೇ ಸ್ವಾಮಿ, ನನ್ನ ಕರ್ಮಗಳ ಜಂಜಾಟವನ್ನು ತಪ್ಪಿಸುವ ನಿಮಿತ್ತವಾಗಿ ಸ್ವೀಕಾರ ಮಾಡು, ನಿನಗೆ ನಮಸ್ಕಾರ.

ವೈದಿಕ ಖಿಲಮಂತ್ರ

ಯಜ್ಞೋಪವೀತಂ ಪರಮಂ ಪವಿತ್ರಂ
ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ
ಯಜ್ಞೋಪವೀತಂ ಬಲಮಸ್ತು ತೇಜಃ ॥

ಓಂ ನಮೋ ನಾರಾಯಣಾಯ । ಯಜ್ಞೋಪವೀತಾರ್ಥೇ ತುಲಸೀ-ದಲಂ ಸಮರ್ಪಯಾಮಿ ॥

ಎಂದು ತುಲಸೀದಳ ಏರಿಸಬೇಕು.

೧೧. ಗಂಧಸಮರ್ಪಣೆ

ಗಂಧ ಎಂದರೇನು ಎಂಬುದನ್ನು ತಿಳಿದುಕೊಳ್ಳುವುದೇ ಮುಖ್ಯವಾಗಿದೆ. ಸಾಮಾನ್ಯವಾಗಿ ಗಂಧದ ಕೊರಡನ್ನು ತೇಯ್ದು ಬರುವ ಗಂಧವನ್ನೇ ನಾವು ಗಂಧವೆಂದು ತಿಳಿದಿದ್ದೇವೆ. ಆದರೆ ಸ್ಮೃತಿಯಲ್ಲಿ 'ಅಷ್ಟಗಂಧ' ಎಂಬ ವ್ಯವಹಾರವಿದೆ. ಇದರ ವಿವರಣೆ (ಶ್ರೀ ಪ್ರಭಂಜನರ ಪದ್ಯಮಾಲಾದಲ್ಲಿ) ಹೀಗಿದೆ—

ಚಂದನಂ ಕುಂಕುಮಂ ಕೋಷ್ಟಂ ಕರ್ಪೂರಂ ಗ್ರಂಥಿರೋಚನಮ್ ।
ಸುರಾಗರುಸಮಾಯುಕ್ತಂ ಗಂಧಾಷ್ಟಕಮುದಾಹೃತಮ್ ॥

(ವಿವರಣೆ) ಪ್ರಸಿದ್ಧವಾದ ಗಂಧದ ಚಕ್ಕೆಯಿಂದ ಬರುವ ಗಂಧಕ್ಕೆ ಶ್ರೀಗಂಧ ಎಂದು ಹೆಸರಿದೆ. ಅದರ ಜೊತೆಗೆ (೨) ಕೇಸರಿಯನ್ನೂ (೩) ಪಚ್ಚಕರ್ಪೂರವನ್ನೂ, (೪) ಚಂದನ (ಕೆಂಪು ಬಣ್ಣದ್ದು)ವನ್ನೂ, (೫) ಗೋರೋಚನವನ್ನೂ, (೬) ಕಸ್ತೂರಿಯನ್ನೂ, (೭) ಅಗುರನ್ನೂ, (೮) ದೇವದಾರುವನ್ನೂ ಸ್ವಲ್ಪಸ್ವಲ್ಪ ಸೇರಿಸಿ ತೇದು ಗಟ್ಟಿ ಮಾಡಬೇಕು. ಗಂಧವನ್ನು ಸಣ್ಣಸಣ್ಣ ಉಂಡೆ ಮಾಡಿಯೂ ಸಮರ್ಪಿಸಬಹುದು. ಶುದ್ಧ ಪ್ರತಿಮೆಗಳಾದರೆ ದ್ವಾದಶನಾಮಗಳನ್ನೂ ತಿದ್ದಬಹುದು. ಗಂಧವನ್ನು ನೀರುಮಾಡಿ ಭಗವಂತನ ಅಂಗಕ್ಕೆ ಲೇಪನವನ್ನು ಮಾಡುವುದೂ ಶ್ರೇಷ್ಠ. ಇದಕ್ಕೆ ಪ್ರಮಾಣ (ಶ್ರೀ ಪ್ರಭಂಜನರ ಪದ್ಯಮಾಲಾದಿಂದ)—

ವಿಲೇಪಯತಿ ಗೋವಿಂದಂ ಶಂಖೇ ಕೃತ್ವಾ ತು ಚಂದನಮ್ ।
ಪರಮಾತ್ಮಾ ಪರಾಂ ಪ್ರೀತಿಂ ಕರೋತಿ ಶತವಾರ್ಷಿಕೀಮ್ ॥

—(ವರಾಹಪುರಾಣ)

(ಅರ್ಥ) ಗಂಧವನ್ನು ಸ್ವಲ್ಪ ನೀರಾಗಿ ಕಲೆಸಿ ಶಂಖಕ್ಕೆ ಹಾಕಿಕೊಂಡು ಭಗವಂತನ ಅಂಗಕ್ಕೆ ವಿಲೇಪನ ಮಾಡಿದರೆ ಭಗವಂತ ಅತ್ಯಂತ ಪ್ರೀತನಾಗುತ್ತಾನೆ. ಅಕ್ಷಯ್ಯ ತದಿಗೆ (ವೈಶಾಖ ಶುದ್ಧ ತದಿಗೆ) ದಿನ ಗಂಧಲೇಪನಕ್ಕೆ ಅತ್ಯಂತ ಶ್ರೇಷ್ಠವೆಂದು ರೂಢಿಯಲ್ಲಿದೆ. (ಮಂತ್ರಾಲಯದಲ್ಲಿ ರಾಯರ ವೃಂದಾವನಕ್ಕೇ ಈ ದಿನ ಗಂಧಲೇಪನ ಮಾಡುತ್ತಾರೆ.) ಗಂಧವನ್ನು ಚಿಕ್ಕ ಉಂಡೆಗಳಾಗಿ ಮಾಡಿ ಏರಿಸುವಾಗ ತುಳಸೀದಳಗಳೊಡನೆ ಸಮರ್ಪಿಸಬೇಕು—

ಘನೀಭೂತಂ ಚಂದನಂ ಚ ಕಸ್ತೂರೀ ಕುಂಕುಮಾದಿಕಮ್ ।
ತುಲಸೀಮಿಶ್ರಿತಂ ಸರ್ವಂ ವಿಷ್ಣವೇ ತು ಸಮರ್ಪಯೇತ್ ॥

(ಅರ್ಥ) ಶ್ರೀಗಂಧವನ್ನು ಚಂದನ ಕಸ್ತೂರಿ ಕೇಸರಿ ಮೊದಲಾದುವನ್ನು ಹಾಕಿ ಗಟ್ಟಿಯಾಗಿ ತೇಯ್ದು (ಚಿಕ್ಕಚಿಕ್ಕ ಉಂಡೆಗಳಾಗಿ ಮಾಡಿ) ಅದನ್ನು ತುಲಸಿಯ ಜೊತೆ ವಿಷ್ಣುವಿಗೆ ಸಮರ್ಪಿಸಬೇಕು. ಇನ್ನೊಂದು ಸ್ಮೃತಿವಾಕ್ಯದಲ್ಲಿ

ತತೋ ದರ್ಶಂ ಸುಗಂಧಂ ತು ತುಲಸೀದಲಮಿಶ್ರಿತಮ್ ।
'ಇದಂ ವಿಷ್ಣು'ರಿತಿ ಮಂತ್ರೇಣ ಹ್ಯಾರ್ಚಯೇನ್ಮಾರ್ಜಯೇತ್ಪರಮ್ ॥
ಎಂದು ಹೇಳಿದ್ದಾರೆ.

(ಅರ್ಥ) ಸುಗಂಧವನ್ನು 'ಇದಂ ವಿಷ್ಣುಃ...' (ಋ. ೧/೨೨/೧೭) ಎಂಬ ಮಂತ್ರ ಪಠಿಸುತ್ತಾ ತುಳಸೀ ಸಹಿತ ಏರಿಸಿ ಕೈತೊಳೆದುಕೊಳ್ಳಬೇಕು. (ಇಲ್ಲದಿದ್ದರೆ ಗಂಧವು ನಿರ್ಮಾಲ್ಯವಾಗುತ್ತದೆ ಎಂದು ಪೂಜಾಕಲ್ಪಲತಾದಲ್ಲಿ ಹೇಳಿದೆ.) ಕೆಲವರು ಗಂಧವನ್ನು 'ಗಂಧದ್ವಾರಾಂ ' ಎಂಬ ಲಕ್ಷ್ಮೀಮಂತ್ರದಿಂದ ಏರಿಸುತ್ತಾರೆ. ಆದರೆ ಗಂಧ ಏರಿಸುವಾಗ ಈ ಮಂತ್ರ ಹೇಳಿಕೊಳ್ಳುವುದು ಹೆಚ್ಚು ಪ್ರಚಾರದಲ್ಲಿದೆ—

ಶ್ರೀಖಂಡಂ ಚಂದನಂ ದಿವ್ಯಂ ನಾನಾಗಂಧ[1]ಮನೋಹರಮ್ ।
ವಿಲೇಪನಂ ಸುರಶ್ರೇಷ್ಠ ಪ್ರೀತ್ಯರ್ಥಂ[2] ಪ್ರತಿಗೃಹ್ಯತಾಮ್ ॥

ಪಾಠಾಂತರ 1 ಗಂಧಾಢ್ಯಂ ಸು 2 ಗಂಧೋಽಯಂ

ಭೂದೇವೀಹಸ್ತೇನ ದಿವ್ಯ ಗಂಧಾನ್ ಸಮರ್ಪಯಾಮಿ ॥

(ಅರ್ಥ) ಘಮಘಮಿಸುತ್ತಿರುವ ದಿವ್ಯವಾದ ಚಂದನಸಮೇತವಾದ ಈ ಶ್ರೀಗಂಧವನ್ನು, ಹೇ ಭಗವಂತ! ವಿಲೇಪನಕ್ಕಾಗಿ ಸ್ವೀಕರಿಸುವನಾಗು.

ವೇದಮಂತ್ರಗಳು

ಓಂ॥ ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್ ।
ಸಮೂಳ್ಹಮಸ್ಯ ಪಾಂಸುರೇ ॥

(ಋ. ೧/೨೨/೧೭; ತೈ.ಸಂ. ೧/೨/ ೪/೧)

ಲಕ್ಷ್ಮೀಮಂತ್ರ

ಓಂ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪ ಹ್ವಯೇ ಶ್ರಿಯಮ್ ॥

ದಿವ್ಯ ಗಂಧಾನ್ ಸಮರ್ಪಯಾಮಿ ॥

ಮಾಧ್ವರಲ್ಲಿ ಕೇವಲ ಗಂಧ ಹಚ್ಚಿಕೊಳ್ಳುವುದು ನಿಷೇಧ. ಗಂಧ ಹಚ್ಚಿಕೊಂಡ ಬಳಿಕ ಅಂಗಾರವನ್ನೂ ಅಕ್ಷತೆಯನ್ನೂ ಹಚ್ಚಿಕೊಳ್ಳಬೇಕು. ಅದರಂತೆ ಭಗವಂತನಿಗೂ ಗಂಧ ಏರಿಸಿದಮೇಲೆ ಅಂಗಾರವನ್ನೂ ಅಕ್ಷತೆಯನ್ನೂ (ತಿಲಕವನ್ನು) ಸಮರ್ಪಿಸಬೇಕೆಂದು ಪೂಜಾಕಲ್ಪಲತಾದಲ್ಲಿ ಹೇಳಿದೆ—'ಏವಂ ಗಂಧಂ ಸಮರ್ಪ್ಯ ದುರ್ಗಾಭಿಮನ್ಯಮಾನಮಂಗಾರಮ್, ಲಕ್ಷ್ಮ್ಯಭಿಮನ್ಯಮಾನಾಮಕ್ಷತಾಂ ಚ ಸಮರ್ಪ್ಯ'—ಗಂಧವನ್ನು ಸಮರ್ಪಿಸಿದ ಬಳಿಕ ದುರ್ಗಾದೇವ್ಯಭಿಮನ್ಯವಾದ ಅಂಗಾರವನ್ನೂ, ಲಕ್ಷ್ಮೀದೇವ್ಯಭಿಮನ್ಯವಾದ ಅಕ್ಷತೆಯನ್ನೂ ಏರಿಸಬೇಕು.

ಅಕ್ಷತೆ ಸಮರ್ಪಿಸುವ ಮಂತ್ರ

ಕಸ್ತೂರೀಕಲ್ಕಜಂ ಭಾಲೇ ತಿಲಕಂ ತು ಮಯಾ ಕೃತಮ್ ।
ಸಂಗೃಹಾಣ ಸುರಶ್ರೇಷ್ಠ ಶ್ರೀಶ ಭಕ್ತಾರ್ತಿನಾಶನ ॥
ಶ್ರೀಮಹಾಲಕ್ಷ್ಮೀಹಸ್ತೇನ ಅಕ್ಷತಾಂ ಸಮರ್ಪಯಾಮಿ ॥

(ಅರ್ಥ) ಹೇ ದೇವೋತ್ತಮನಾದ, ಭಕ್ತರ ದುಃಖ(ಆರ್ತಿ)ಗಳನ್ನು ಪರಿಹರಿಸುವ ಹೇ ಲಕ್ಷ್ಮೀಪತೇ, ನಿನ್ನ ಹಣೆಯಲ್ಲಿ (ಭಾಲೇ) ನಾನು ಹಚ್ಚುತ್ತಿರುವ ಕಸ್ತೂರೀತಿಲಕವನ್ನು ಸ್ವೀಕರಿಸುವನಾಗು. ಗಂಧದ ಜೊತೆಯಲ್ಲೇ ಅಕ್ಷತೆಯೂ ಸೇರಿಕೊಳ್ಳುವುದರಿಂದ 'ಷೋಡಶೋಪಚಾರ'ಕ್ಕೆ ಭಂಗ ಬರುವುದಿಲ್ಲ. ಇದೇ ರೀತಿ ಪುಷ್ಪಗಳ ಜೊತೆಯಲ್ಲೇ ತುಳಸಿಯೂ ದವನ-ಮರುಗಾದಿ ಪತ್ರಗಳೂ ಸೇರಿಕೊಳ್ಳುತ್ತವೆ. ಏಕೆಂದರೆ ಕೇವಲ ಹೂವುಗಳನ್ನು ತುಳಸಿಯಿಲ್ಲದೆ ಸಮರ್ಪಿಸುವುದು ನಿಷೇಧಿಸಲ್ಪಟ್ಟಿದೆ. ಆದಕಾರಣ ಪುಷ್ಪ ಎಂದರೆ ಉಪಲಕ್ಷಣಯಾ ಹೂವು ತುಳಸೀ-ಪತ್ರೆ ಎಲ್ಲವೂ ಬರುತ್ತವೆ.

೧೨. ಪುಷ್ಪಾದಿಗಳ ಸಮರ್ಪಣೆ

ನಿಷಿದ್ಧ ಪುಷ್ಪಗಳು: ಹೂವು ಎಂಬಮಾತ್ರದಿಂದ ಲೋಕದಲ್ಲಿ ದೊರೆಯುವ ಎಲ್ಲಾ ಹೂವುಗಳೂ ಪೂಜೆಗೆ ಬರುತ್ತವೆ ಎಂದು ಭಾವಿಸಬಾರದು. ಶ್ರೀ ಟೀಕಾರಾಯರು ಪದ್ಯಮಾಲೆಯ ಪ್ರಾರಂಭದಲ್ಲೇ 'ಅಕ್ರೀತಾನ್ಯಪ್ರದತ್ತಾನಿ ಚೌರ್ಯಾಲ್ಲಬ್ಧಾನಿ ಯಾನಿ ಚ। ಶೂದ್ರಾಹೃತಾನಿ ವಾ ಭೂಮೌ ಪತಿತಾನಿ ತಥೈವ ಚ। ಏರಂಡಾರ್ಕಜಪತ್ರೇಷು ಚಾಹೃತಾನಿ ಕರೇ ತಥಾ। ಪಟಾಹೃತಾನಿ ಯಾನಿ ಸ್ಯುರ್ ವರ್ಜಯೇತ್ ತಾನಿ ಯತ್ನತಃ।' ಎಂದು ಹೇಳಿದ್ದನ್ನು ನಾವು ಹಿಂದೆಯೇ (ಪುಟ ೬ರಲ್ಲಿ) ಸೂಚಿಸಿದ್ದೇವೆ.

ಅಷ್ಟೇ ಅಲ್ಲದೆ ಅರ್ಧಾರ್ಧ ಅರಳಿರುವ, ಬಣ್ಣ ಮಾಸಿಹೋದ, ಬಟ್ಟೆಯಲ್ಲಿ ಕಟ್ಟಿದ್ದ, ದುರ್ಜನರು ಮುಟ್ಟಿದ್ದ, ಮೂಸಿನೋಡಿದ್ದಾದ ಕಾಲಿಗೆ ತಗುಲಿದ, ನಿರ್ಗಂಧವಾದ, ಅತಿ ಪಕ್ವವಾದ ಅಥವಾ ತೀರಾ ಎಳಸಾದ, ಸ್ತ್ರೀಯರೂ ಶೂದ್ರರೂ ಬಿಡಿಸಿ ತಂದಂಥಾ

ಹೂವುಗಳೂ ನಿಷಿದ್ಧ. ಅದೇ ರೀತಿ ದೇವಸ್ಥಾನದ ತೋಟಗಳಲ್ಲಿ ಬೆಳೆದ ಹೂವುಗಳನ್ನೂ ತಂದು ಮನೆಯ ದೇವರಿಗೆ ಏರಿಸಬಾರದು, ಹಾಗೆ ಏರಿಸಿದರೆ ಹಿಂದೆ ಮಾಡಿದ ಪುಣ್ಯವೆಲ್ಲ ನಾಶವಾಗಿ ಹೋಗುವುದೆಂದೂ ಶ್ರೀ ಪ್ರಭಂಜನರ ಪದ್ಯಮಾಲಾ ಟಿಪ್ಪಣಿಯಲ್ಲಿ ಕೊಟ್ಟ ಪ್ರಮಾಣಗಳಿಂದ ತಿಳಿದುಬರುತ್ತದೆ. (ಪುಟ ೧೧೦ರಿಂದ ೧೧೩, ದ್ವಿತೀಯ ಸಂಸ್ಕರಣ, 19೪8)

ಪೂಜಾರ್ಹ ಪುಷ್ಪಗಳು: ಜಾಜೀ, ಕೇದಿಗೆ, ಕನ್ನೈದಿಲೆ, ಕಮಲ, ಮಾಲತಿ, ಮಲ್ಲಿಗೆ, ಕರವೀರ [ಕಣಗಲೆ] ಸೊಂಪಿಗೆ ಮೊದಲಾದ ಸುಗಂಧಮಯ ಪುಷ್ಪಗಳು ಪೂಜೆಗೆ ಗ್ರಾಹ್ಯ [ವಿಷ್ಣುಧರ್ಮೀಯ]. ಬಿಳೀಬಣ್ಣದ ಹೂವುಗಳು ಸಾತ್ವಿಕವೆಂದೂ, ಕೆಂಪು ಹೂವುಗಳು ರಾಜಸವೆಂದೂ, ಕಪ್ಪು ಹೂವುಗಳು ತಾಮಸವೆಂದೂ, ತಾಮಸಗಳನ್ನು ವರ್ಜಿಸಬೇಕೆಂದೂ ಭಾರತದಲ್ಲಿ ಹೇಳಿದೆ. ಹೂವುಗಳನ್ನೂ ಸ್ನಾನಕ್ಕೆ ಮುಂಚೆಯೇ ಬಿಡಿಸಿಟ್ಟುಕೊಳ್ಳಬೇಕೆಂದು ಹಾರೀತಸ್ಮೃತಿ ಹೇಳುತ್ತದೆ. ಆದರೆ ತುಳಸಿಯನ್ನು ಮಾತ್ರ ಸ್ನಾನ ಮಾಡಿಯೇ ತರಬೇಕೆಂದೂ ಸ್ನಾನ ಮಾಡದೇ ತಂದದ್ದು ಪೂಜೆ ಮಾಡಿದರೂ ನಿಷ್ಫಲವಾಗುವುದೆಂದೂ [ತತ್ಸರ್ವಂ ನಿಷ್ಫಲಂ ಯಾತಿ] ಎಂದು ಹೇಳಿದ್ದರೂ ಪಂಚಗವ್ಯದಿಂದ ಅದೂ ಶುದ್ಧವಾಗುತ್ತದೆ [ಪಂಚಗವ್ಯೇನ ಶುದ್ಧ್ಯತಿ] ಎಂದೂ ಹೇಳಲ್ಪಟ್ಟಿದೆ.

ಗ್ರಾಹ್ಯ ಪತ್ರಗಳು: ಗರಿಕೆ [ದೂರ್ವಾಂಕುರ], ಬಿಲ್ವಪತ್ರ, ಗಂಧದ ಗಿಡದ ಪತ್ರ, ನೆಲ್ಲಿಗಿಡದ್ದು, ಅಶ್ವತ್ಥಗಿಡದ್ದು, ಮರುಗ, ದವನ, ಖದಿರ [ತೆರೆ ಕಟ್ಟಿಗೆಯ] ಪತ್ರ, ಶಮೀ, ಮಾವು, ಮೊದಲಾದ ಪತ್ರಗಳು ಗ್ರಾಹ್ಯವೆಂದು ಕಪಿಂಜಲಸಂಹಿತೆಯಲ್ಲಿ ಹೇಳಿದೆ. ಶ್ರೀಮದಾಚಾರ್ಯರು ಕೃಷ್ಣಾಮೃತಮಹಾರ್ಣವದಲ್ಲಿ [ಶ್ಲೋಕ ೪]

ಭಕ್ತ್ಯಾ ದೂರ್ವಾಂಕುರೈಃ ಪುಂಭಿಃ ಪೂಜಿತಃ ಪುರುಷೋತ್ತಮಃ।
ಹರಿರ್ದದಾತಿ ಹಿ ಫಲಂ ಸರ್ವ ಯಜ್ಞೈಶ್ಚ ದುರ್ಲಭಮ್

ಎಂದರೆ ಭಕ್ತಿಯಿಂದ "ಗರಿಕೆ ಹುಲ್ಲುಗಳಿಂದ" ಮನುಷ್ಯರು ಶ್ರೀವಿಷ್ಣುವನ್ನು ಪೂಜಿಸಿದರೂ ಅವನು ಅಷ್ಟಕ್ಕೇ ಪ್ರೀತನಾಗಿ ಸರ್ವಯಜ್ಞಗಳಿಂದಲೂ ದುರ್ಲಭವಾದ ಮಹಾಫಲವನ್ನು ಕೊಡುತ್ತಾನೆ ಎಂಬುದಾಗಿಯೂ

ಸಕೃದಭ್ಯರ್ಚ್ಯ ಗೋವಿಂದಂ ಬಿಲ್ವಪತ್ರೇಣ ಮಾನವಃ।
ಮುಕ್ತಿಭಾಗೀ ನಿರಾತಂಕೀ ವಿಷ್ಣುಲೋಕೇ ಚಿರಂ ವಸೇತ್ ॥

[ಶ್ಲೋ. ೧೮]

ಎಂದರೆ ಗೋವಿಂದನನ್ನು ಮಾನವನು ಬಿಲ್ವಪತ್ರದಿಂದ ಒಂದೇ ಒಂದು ಸಲ ಅರ್ಚಿಸಿದರೂ ಕೂಡ ನಿರಾತಂಕನಾಗಿ ಮುಕ್ತಿಭಾಗಿಯಾಗಿ ವಿಷ್ಣುಲೋಕದಲ್ಲಿ ಚಿರಕಾಲ ವಾಸಿಸುತ್ತಾನೆ.

(ಅದರೆ ವಿಷ್ಣು ಸರ್ವೋತ್ತಮತ್ವಜ್ಞಾನವಿಲ್ಲದೆ ರುದ್ರದೇವರಿಗೆ ಕೋಟಿ ಬಿಲ್ವಾರ್ಚನೆಯನ್ನು ಮಾಡಿದರೂ ಅವನಿಗೆ ವಿಷ್ಣುಲೋಕ ದೊರಕಲಾರದು.) ಎಂದೂ ಹೇಳಿರುವುದರಿಂದ ಭಕ್ತಿಯಿಂದ ಬಿಲ್ವದಿಂದಲೂ ಗರಿಕೆಹುಲ್ಲಿನಿಂದಲೂ ಶ್ರೀಹರಿಯನ್ನು ಪೂಜಿಸಿದರೂ ಮಹತ್ತಾದ ಫಲವುಂಟೆಂದು ಸ್ಪಷ್ಟವಾಗುತ್ತದೆ.

ಪುಷ್ಪ ಪತ್ರಾದಿಗಳನ್ನು ತುಲಸೀಸಹಿತವಾಗಿಯೇ ಸಮರ್ಪಿಸಬೇಕು— ಪುಷ್ಪವನ್ನಾಗಲೀ ಪತ್ರವನ್ನಾಗಲೀ ಪೂಜೆಗೆ ಉಪಯೋಗಿಸುವುದಕ್ಕೆ ಮುಂಚೆ ಅವುಗಳ ಮೇಲೆ ಶಂಖೋದಕವನ್ನು (ಶಂಖಪೂಜೆಯ ಕೊನೆಯಲ್ಲಿ) ಪ್ರೋಕ್ಷಿಸಿಯೇ ಪೂಜಿಸಬೇಕು. ಅಥವಾ ಗಾಯತ್ರಿಯಿಂದಲೂ ಮೂಲಮಂತ್ರದಿಂದಲೂ ನೀರನ್ನು ಪ್ರೋಕ್ಷಿಸಿಯೇ ಸಮರ್ಪಿಸಬೇಕು, ತಂದದ್ದನ್ನು ಹಾಗೆಯೇ ಅರ್ಪಿಸಬಾರದು. ಅಲ್ಲದೆ ಹೂವುಗಳನ್ನೂ ಪತ್ರಗಳನ್ನೂ ತುಳಸಿಯ ಜೊತೆಯೇ ಅರ್ಚಿಸಬೇಕು; ತುಳಸೀ ಇಲ್ಲದಿದ್ದರೆ (ಒಂದು ದಳವಾದರೂ ಅರ್ಚಿಸಲೇಬೇಕು, ಇಲ್ಲದಿದ್ದರೆ) ಕೇವಲ ಹೂವನ್ನು ವಿಷ್ಣುವು ಸ್ವೀಕರಿಸುವುದಿಲ್ಲ—

ತ್ವತ್ಪತ್ರರಹಿತಂ ಯತ್ತು ಪತ್ರಂ ವಾ ಪುಷ್ಪಮೇವ ವಾ।
ಮಮ ಪಾದಾಬ್ಜಪೂಜಾಯಾಂ ಅನರ್ಹಂ ಭವತಿ ಧ್ರುವಮ್॥

(ಅರ್ಥ) ನಿನ್ನ (ತುಲಸಿಯ) ಪತ್ರ ಒಂದಾದರೂ ಇಲ್ಲದಿದ್ದರೆ ಯಾವ ಪತ್ರವೇ ಆಗಲಿ ಯಾವ ಹೂವೇ ಆಗಲಿ ನನ್ನ (ವಿಷ್ಣುವಿನ) ಪಾದಕಮಲದ ಪೂಜೆಯಲ್ಲಿ ಸರ್ವಥಾ ಅನರ್ಹವಾಗುತ್ತದೆ. (ಅಕಸ್ಮಾತ್ ಹೆಚ್ಚು ತುಲಸೀ ಸಿಗದಿದ್ದರೆ ತುಲಸೀಕಾಷ್ಠವನ್ನಾಗಲೀ ಅಥವಾ ತುಲಸೀಸ್ಮರಣೆಯನ್ನಾಗಲೀ ಮಾಡಿಯಾದರೂ ಹೂವುಗಳನ್ನು ಏರಿಸಬೇಕು.)

ವಿಷ್ಣುಪೂಜೆಗೆ ತುಲಸೀ ಅತ್ಯಂತ ಅವಶ್ಯಕ— ತುಲಸಿಯಿಲ್ಲದ ಪೂಜೆಯನ್ನು ಶ್ರೀಹರಿ ಸ್ವೀಕರಿಸುವುದೇ ಇಲ್ಲವೆಂದು ಶ್ರೀ ಪುರಂದರದಾಸರು ಸ್ಪಷ್ಟವಾಗಿ ಹಾಡಿದ್ದಾರೆ. ತುಳಸೀಮಂಜರಿ (ತೆನೆಗಳು) ಅತ್ಯುತ್ತಮ, ಅದಿಲ್ಲದಿದ್ದರೆ ಚಿಗರು ಶ್ರೇಷ್ಠ, ಅದೂ ಅಭಾವವಾಗಿದ್ದರೆ ತುಳಸೀ ಪತ್ರ(ಎಲೆ)ಗಳನ್ನು ಉಪಯೋಗಿಸಬಹುದು, ಅದೂ ಇಲ್ಲದಿದ್ದಾಗ ತುಲಸೀಕಾಷ್ಠವನ್ನೇ ಅರ್ಪಿಸಬಹುದು. ಕಾಷ್ಠವೂ ಇಲ್ಲದಿದ್ದರೆ ತುಳಸೀಬೇರು ಪೂಜೆಗೆ ಬರುತ್ತದೆ. ಅದೂ ಅಭಾವವಾಗಿದ್ದರೆ ತುಲಸೀಮೃತ್ತಿಕೆಯನ್ನಾದರೂ ಸಮರ್ಪಿಸಬಹುದು. ಅದಕ್ಕೂ ಅಭಾವವಾದರೆ 'ತುಲಸೀ' ಎಂದು ಸ್ಮರಣ ಮಾಡಿದರೂ ಸಾಕು— ತುಲಸೀ ಅರ್ಪಿಸಿದಂತೆಯೇ ಆಗುತ್ತದೆ

ಮೃತ್ತಿಕಾಯಾ ಅಭಾವೇ ತು 'ತುಲಸೀ' ಶಬ್ದ ಉಚ್ಯತೇ।

ಎಂದು ಪುರಾಣವಚನ. ಇದನ್ನೇ ವಿಜಯದಾಸರು ಕನ್ನಡದಲ್ಲಿ ಹೀಗೆ ಹೇಳಿದ್ದಾರೆ—

ದಳವಿದ್ದರೇ ಒಳಿತು ಇಲ್ಲದಿದ್ದರೆ ಕಾಷ್ಠ
ಎಲೆ ಮೃತ್ತಿಕೆಗಳಿಂದ ಪೂಜೆ ಮಾಡಲಿಬಹುದು
ತುಲಸಿ ನಿರ್ಮಾಲ್ಯವಾದರೂ ತ್ರಿವಾರದಲಿ ತೊಳೆ-
ತೊಳೆದು ಏರಿಸಲಿ ಬಹುದು
ತುಲಸಿ ಒಣಗಿದ್ದರೂ ಲೇಶ ದೋಷಗಳಿಲ್ಲ
ತುಲಸಿ ವಿರಹಿತವಾದ ಪೂಜೆಯದು ಸಲ್ಲದು
ತುಲಸಿ ತುಲಸಿ ಎಂದು ಸ್ಮರಣೆಯಾದರು
  ಮಾಡಿ ಜಲಜಾಕ್ಷನರ್ಚಿಸಿರೈಯಾ

(ವ್ಯಾ. ಪ್ರಭಂಜನರ ಪದ್ಯಮಾಲಾ, ಪುಟ ೧೦೮-)

ತುಲಸೀ ಹೇಗಿದ್ದರೂ ಶ್ರೇಷ್ಠ—ಪೂಜಾರ್ಹ: ವಿಜಯದಾಸರು ತುಳಸಿ 'ಒಣ-ಗಿದ್ದರೂ' 'ನಿರ್ಮಾಲ್ಯವಾಗಿದ್ದರೂ' ಲೇಶ ದೋಷಗಳಿಲ್ಲ ಎಂದು ಹೇಳಿದ್ದಕ್ಕೆ ಸ್ಮೃತಿ ಪ್ರಮಾಣ (ಪು. ೧೦೯)—

ಶುಷ್ಕಂ ಪರ್ಯುಷಿತಂ ವಾಪಿ ನ ನಿರ್ಮಾಲ್ಯಂ ತ್ರಿವಾಸರೈಃ ।
ಪ್ರಕ್ಷಾಲಯಿತ್ವಾ ತುಲಸೀಂ ಪೂಜಯೇಚ್ಚ ಸದಾ ಹರಿಮ್ ॥ ೧ ॥
ನಿರ್ಮಾಲ್ಯಮಪಿ ವೈ ಗ್ರಾಹ್ಯಂ ತುಲಸೀ ಹೇಮಪುಷ್ಪಕಮ್ ।
ಶುದ್ಧೋದಕೇನ ಸಂಪ್ರೋಕ್ಷ್ಯ ವಿಷ್ಣವೇ ಚ ಸಮರ್ಪಯೇತ್ ॥ ೨ ॥

(ಸ್ಮೃತಿ—ಪ್ರಭಂಜನ)

(ಅರ್ಥ) ತುಲಸಿಯು ಒಣಗಿದ್ದರೂ ಮೂರು ದಿನ ಹಳೆಯದಾದರೂ ನಿರ್ಮಾಲ್ಯ ವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಅಂಥಾ ತುಳಸಿಯನ್ನು ನೀರಲ್ಲಿ ತೊಳೆದು ಪೂಜಿಸ ಬೇಕು (೨.) ತುಳಸಿಯೂ ಬಂಗಾರದಿಂದ ಮಾಡಿದ ಹೂವೂ ನಿರ್ಮಾಲ್ಯವಾದರೂ ಪುನಃ ಪೂಜೆ ಮಾಡಲು ಉಪಯೋಗಿಸಬಹುದು, ಅಡ್ಡಿಯಿಲ್ಲ. ನಿರ್ಮಾಲ್ಯವಾಗಿದ್ದರೆ ಶುದ್ಧೋದಕದಿಂದ ಸಂಪ್ರೋಕ್ಷಿಸಿ ಅದನ್ನೇ ಪುನಃ ವಿಷ್ಣುವಿಗೆ ಸಮರ್ಪಿಸಬಹುದು.

ಸೂಚನೆ—ಶುದ್ಧವಾದ ತುಳಸಿಯನ್ನು ತಂದು ಒಣಗಿಸಿ ಅದನ್ನು ಆರು ತಿಂಗಳ ವರೆಗೂ ಉಪಯೋಗಿಸಬಹುದೆಂದು ಹಿರಿಯರು ಹೇಳುತ್ತಾರೆ. ಅಲ್ಲದೆ ತುಳಸೀ ನಿರ್ಮಾಲ್ಯವಾಗಿದ್ದರೆ ಮಾತ್ರ ತೊಳೆಯಬೇಕೇ ವಿನಾ ಶುದ್ಧವಾಗಿದ್ದರೆ ತೊಳೆಯ-ಬಾರದು—ಅದು ನಿಷಿದ್ಧ.

ಶುದ್ಧ ತುಳಸಿಯನ್ನು ತೊಳೆಯಬಾರದು—

ಮಮ ಪ್ರಿಯಾಂ ತು ತುಳಸೀಂ ಪ್ರಕ್ಷಾಲ್ಯ ತು ಕರೋತಿ ಯಃ ।
ಸ ಪಾಪೀ ಬ್ರಹ್ಮಘಾತೀ ಸ್ಯಾ—ನ್ನಿರಯಂ ಸೋಽಧಿಗಚ್ಛತಿ ॥

(ಅರ್ಥ) ನನಗೆ (ಶ್ರೀ ವಿಷ್ಣುವಿಗೆ) ಪ್ರಿಯವಾದ ತುಳಸಿಯನ್ನು ಯಾರು ತೊಳೆದು ಅರ್ಚನೆ ಮಾಡುತ್ತಾನೋ ಅವನು ಪಾಪಿಯೂ ಬ್ರಹ್ಮಹತ್ಯಾ ಮಾಡಿದ ದೋಷಿಯೂ ಆಗುವನಲ್ಲದೆ ನರಕಕ್ಕೆ ಹೋಗುತ್ತಾನೆ.

ಪುಷ್ಪಗಳ ಬಗ್ಗೆ ಕೆಲವು ವಿಚಾರಗಳು

(ಶ್ರೀ ಪ್ರಭಂಜನರ 'ಪದ್ಯಮಾಲಾ' ದ್ವಿತೀಯ ಸಂಸ್ಕರಣದಿಂದ)

ವಿಷ್ಣುತೀರ್ಥೀಯದಲ್ಲಿ—

ತುಲಸ್ಯುತ್ಪಲಜಾತಿಶ್ಚ ಕೇತಕೀ ಕರವೀರಕಃ ।
ಮಾಲತೀ ಮಾಧವೀ ಚೈವ ಮಲ್ಲಿಕಾ ಚಾಂಬುಜಾನಿ ಚ ॥
ತಥಾ ಪುಷ್ಪಾಣಿ ಯೋಗ್ಯಾನಿ ವಿಷ್ಣೋರಾರಾಧನಾದಿಕೇ ।

ಎಂದು ಹೇಳಿದ್ದಾರೆ. ಅಂದರೆ ತುಲಸೀ, ಕನ್ನೈದಿಲೆ, ಕ್ಯಾದಿಗೆ, ಕಣಗಿಲೆ, ಮಾಲತೀ (ಜಾಜಿ), ಮಾಧವೀ (ಕಾಡು ಇರುವಂತಿಗೆ), ಮಲ್ಲಿಗೆ ಮೊದಲಾದ ಹೂವುಗಳು ವಿಷ್ಣುವಿನ ಪೂಜಾದಿಗಳಿಗೆ ಯೋಗ್ಯವಾದುವು.

ಸಾತ್ವಿಕಂ ಶುಕ್ಲಪುಷ್ಪಾಣಿ ರಾಜಸಂ ರಕ್ತಪುಷ್ಪಕಮ್ ।
ತಾಮಸಂ ಕೃಷ್ಣಪುಷ್ಪಾಣಿ ವರ್ಜನೀಯಂ ವಿದೋ ವಿದುಃ ॥

(ಭಾರತೇ)

(ಅರ್ಥ) ಬಿಳಿಯ ಹೂವುಗಳು ಸಾತ್ವಿಕ, ಕೆಂಪುಹೂವುಗಳು ರಾಜಸ, ಕರೀ ಹೂವುಗಳು ತಾಮಸವಾದ್ದರಿಂದ ಅವನ್ನು ವರ್ಜನೆ ಮಾಡಬೇಕೆಂದು ತಿಳಿದವರು ಹೇಳುತ್ತಾರೆ ಎಂದು ಭಾರತದಲ್ಲಿ ಹೇಳಿದೆ. ಹೀಗೆಯೇ—

ಅನ್ಯೈಸ್ತು ಶುಕ್ಲಪತ್ರೈಸ್ತು ಗಂಧವದ್ಭಿರ್ನರಾಧಿಪ ।
ಅವರ್ಜ್ಯೈರ್ಸ್ತೈರ್ಯಥಾಲಾಭಂ ಮದ್ಭಕ್ತೋ ಮಾಂ
ಸಮರ್ಚಯೇತ್ ॥

(ಭಾರತೇ)

ಮಲ್ಲಿಗೆ ಮೊದಲಾದ ಇತರ ವರ್ಜ್ಯವಲ್ಲದ ಬೇರೆ ಸುಗಂಧಯುಕ್ತ ಪತ್ರಗಳಾಗಲೀ ಹೂವುಗಳಾಗಲೀ ದೊರಕಿದರೆ ಅವುಗಳಿಂದಲೂ ನನ್ನನ್ನು (ಶ್ರೀಹರಿಯನ್ನು) ಪೂಜಿಸ

ಬಹುದೆಂದೂ ಮಹಾಭಾರತದಲ್ಲಿ ಹೇಳಿದೆ. ಹೀಗೆಯೇ ಗರಿಕೆ (ದೂರ್ವಾ) ಗಳಿಂದಲೂ ಬಿಲ್ವಾದಿ ಪತ್ರಗಳಿಂದಲೂ ಶ್ರೀವಿಷ್ಣುವನ್ನು ಪೂಜಿಸಬಹುದು.

ಶ್ರೀಮಟ್ಟೀಕಾಕೃತ್ಪಾದರು ತತ್ವಪ್ರಕಾಶಿಕಾ ಟೀಕೆಯ ಕಡೆಯಲ್ಲಿ —

ನ ಹೀಂದಿರಾರಾಧ್ಯಪದೋ ಮುಕುಂದೋ
ದೂರ್ವಾಂಕುರೈರ್ಮಂದಧನೈರಪೂಜ್ಯಃ ॥

(ಅರ್ಥ) ಶ್ರೀರಮಾದೇವಿಯರಿಂದ ಸಕಲ ವೈಭವದಿಂದ ಪೂಜಿಸಲ್ಪಡುವ ಪಾದಪದ್ಮವುಳ್ಳ ಮುಕುಂದನನ್ನು ಮಂದಭಾಗ್ಯರು ಗರಿಕೆಯಿಂದಲೇ ಪೂಜಿಸಬಾರದೆಂದು ಇಲ್ಲವಷ್ಟೆ! ಎಂದರೆ ದೂರ್ವಾಂಕುರಗಳಿಂದಲೂ ಸಹ ಭಕ್ತಿಯಿಂದ ಅವಶ್ಯ ಪೂಜಿಸಬಹುದೆಂದು ಅಪ್ಪಣೆ ಕೊಡಿಸಿದ್ದಾರೆ ಇದರಿಂದ ದೂರ್ವಾಂಕುರಗಳಿಂದ ವಿಷ್ಣುವನ್ನು ಪೂಜಿಸಬಹುದೆಂದು ಸಿದ್ಧವಾಯಿತು.

ಪುಷ್ಪಗಳನ್ನು ತುಳಸಿಯ ಜೊತೆಯೇ ಅರ್ಚಿಸಬೇಕು—

ತ್ವತ್ಪತ್ರರಹಿತಂ ಯತ್ತು ಪತ್ರಂ ವಾ ಪುಷ್ಪಮೇವ ವಾ ।
ಸುವರ್ಣೇನ ಕೃತಂ ಪುಷ್ಪಂ ರಜತಂ ರತ್ನಮೇವ ವಾ ।
ಮಮ ಪಾದಾಬ್ಜ ಪೂಜಾಯಾ - ಮನರ್ಹಂ ಭವತಿ ಧ್ರುವಮ್॥

(ಅರ್ಥ) ತುಲಸೀಪತ್ರವಿಲ್ಲದಿದ್ದರೆ ಯಾವ ಪತ್ರವೇ ಆಗಲಿ ಹೂವೇ ಆಗಲಿ ಬಂಗಾರದಿಂದ ಅಥವಾ ಬೆಳ್ಳಿಯಿಂದ ಅಥವಾ ರತ್ನಗಳಿಂದ ಮಾಡಿದ ಹೂವೇ ಆಗಲಿ ಶ್ರೀಹರಿಯ ಪಾದಪೂಜೆಗೆ ಅನರ್ಹವಾಗುತ್ತದೆ.

ತುಲಸೀ ತರುವ ಬಗ್ಗೆ ಕೆಲವು ವಿಶೇಷ ನಿಯಮಗಳು—

(ಪ್ರಭಂಜನರ ಪದ್ಮಮಾಲಾ ಟಿಪ್ಪಣಿಗಳಿಂದ ಸಂಗ್ರಹ)

ಭಾನುವಾರೇ ಭೃಗೌ ಭೌಮೇ ವ್ಯತೀಪಾತೇ ಯುಗಾದಿಷು ।
ನಾಹರೇತ್ ತುಲಸೀಪತ್ರಂ ಮಧ್ಯಾಹ್ನೋಪರಿ ವೈಧೃತೌ ॥
ಸಂಕ್ರಾಂತೌ ಪಕ್ಷಯೋರಂತೇ ದ್ವಾದಶ್ಯಾಂ ನಿಶಿ ಸಂಧ್ಯಯೋಃ ।
ತುಲಸೀಂ ಯೇ ವಿಚಿನ್ವಂತಿ ತೇ ವೈ ಬ್ರಹ್ಮಹಣಃ ಸ್ಮೃತಃ ॥

ಎಂಬ ಪ್ರಮಾಣದಂತೆ ತುಲಸಿಯನ್ನು ಸಾಮಾನ್ಯವಾಗಿ ಭಾನುವಾರ ಶುಕ್ರವಾರ ಮಂಗಳವಾರಗಳಲ್ಲೂ, ವ್ಯತೀಪಾತ ವೈಧೃತಿ ಯೋಗದಲ್ಲೂ, ಯುಗಾದಿಗಳಲ್ಲೂ, ಮಧ್ಯಾಹ್ನ ಕಳೆದ ಬಳಿಕವೂ ಸಂಕ್ರಾಂತಿ ದಿನವೂ ಹುಣ್ಣಿಮೆ ಅಮಾವಾಸ್ಯೆಗಳಲ್ಲೂ ದ್ವಾದಶೀದಿನವೂ ಸಂಜೆಯೂ ರಾತ್ರಿ ಹೊತ್ತೂ ತುಲಸಿಯನ್ನು ಬಿಡಿಸಿ ತರಬಾರದು, ಹಾಗೆ ಬಿಡಿಸಿದರೆ ಬ್ರಹ್ಮಹತ್ಯಾದೋಷವು ಬರುತ್ತದೆ.

ಹೀಗೆ ಸಾಮಾನ್ಯ ನಿಯಮವು ಇದ್ದರೂ ಆಯಾ ದಿನವೇ ಪೂಜಿಸುವುದಾದರೆ ತುಲಸಿಯನ್ನು ದ್ವಾದಶೀ ದಿನ ಬಿಟ್ಟು ಮಿಕ್ಕ ದಿನಗಳಲ್ಲಿ ಹರಿಯಬಹುದೆಂದು ವಿಷ್ಣುರಹಸ್ಯದಲ್ಲೂ ಗರುಡಪುರಾಣದಲ್ಲೂ ಹೇಳಿದೆ—

ನಿಷಿದ್ಧ ತಿಥಿವಾರೇಷು ತುಲಸ್ಯಾಹರಣಂ ಮುನೇ ।
ವೈಷ್ಣವಾನಾಂ ನ ದೋಷಾಯ ವಿಷ್ಣೋಃ ಪ್ರೀತಿಕರತ್ವತಃ ॥

(ಅರ್ಥ) ನಿಷಿದ್ಧ ತಿಥಿಗಳಲ್ಲೂ ನಿಷಿದ್ಧ ವಾರಾದಿಗಳಲ್ಲೂ ತುಲಸಿಯನ್ನು ಹರಿಯುವುದು ವಿಷ್ಣುಭಕ್ತರಿಗೆ ದೋಷವಲ್ಲ, ಏಕೆಂದರೆ ತುಲಸೀಪೂಜೆಯಿಂದ ವಿಷ್ಣುಪ್ರೀತಿಯಾಗುವುದರಿಂದ ದೋಷಪರಿಹಾರವಾಗುವುದೆಂದು ವಿಷ್ಣುರಹಸ್ಯದಲ್ಲಿ ಹೇಳಿದೆ.

ಸಂಕ್ರಾಂತ್ಯಾದಿ ನಿಷೇಧಸ್ತು ಪರೇಷಾಂ ಪರಿಕೀರ್ತಿತಃ ।
ಕ್ವಚಿನ್ನ ತುಲಸೀಂ ಛಿಂದ್ಯಾತ್ ದ್ವಾದಶ್ಯಾಮೇವ ವೈಷ್ಣವಃ ।

(ಅರ್ಥ) ಸಂಕ್ರಾಂತಿ ಮೊದಲಾದ ದಿನಗಳಲ್ಲಿ ತುಲಸಿಯನ್ನು ಬಿಡಿಸಬಾರದೆಂಬುದು ವಿಷ್ಣುಭಕ್ತರಲ್ಲದವರಿಗೆ ಮಾತ್ರ. ವಿಷ್ಣುಭಕ್ತರೂ ಕೂಡ ದ್ವಾದಶೀತಿಥಿಯಲ್ಲಿ ಮಾತ್ರ ಎಂದಿಗೂ ತುಲಸೀ ಬಿಡಿಸಬಾರದು. ಮಿಕ್ಕ ದಿನಗಳಲ್ಲಿ ಬಿಡಿಸಿ ಆಯಾ ದಿನವೇ ಅರ್ಚಿಸಬಹುದೆಂದು ಗರುಡಪುರಾಣದಲ್ಲಿ ಹೇಳಿದೆ.

ತುಲಸಿಯನ್ನು ಸ್ನಾನಮಾಡಿ ಬಿಡಿಸಬೇಕು

ಅಸ್ನಾತ್ವಾ ತುಲಸೀಂ ಛಿತ್ವಾ ದೇವಾರ್ಚಾಪಿತೃಕರ್ಮಣಿ ।
ತತ್ಸರ್ವಂ ನಿಷ್ಫಲಂ ಯಾತಿ ಪಂಚಗವ್ಯೇನ ಶುದ್ಧ್ಯತಿ ॥

(ಅರ್ಥ) ತುಲಸಿಯನ್ನು ಸ್ನಾನ ಮಾಡಿಯೇ ಬಿಡಿಸಬೇಕು. ಸ್ನಾನಮಾಡದೆ ಬಿಡಿಸಿ ತಂದು ದೇವತಾರ್ಚನೆಯಲ್ಲೂ ಶ್ರಾದ್ಧಾದಿ ಕರ್ಮಗಳಲ್ಲೂ ಉಪಯೋಗಿಸಿದರೆ ಅದು ನಿಷ್ಫಲವಾಗುತ್ತದೆ. ಆದರೆ ಪಂಚಗವ್ಯದಿಂದ ಪ್ರೋಕ್ಷಿಸಿದರೆ ಶುದ್ಧವಾಗುತ್ತದೆ. ಆದರೆ ಪೂಜಾಕಲ್ಪಲತಾದಲ್ಲಿ ತನಗೆ ಸ್ನಾನ ಮಾಡಿ ತರಲು ಸಾಧ್ಯವಿಲ್ಲದಿದ್ದರೆ (ಏಕೆಂದರೆ ತುಲಸೀ ಪೂಜಿಸುವುದಕ್ಕಂತೂ ಸ್ನಾನ ಮಾಡಿರಲೇಬೇಕು ಹೀಗೆ ಎರಡೆರಡು ಸರಿ ಸ್ನಾನ ಮಾಡುವುದು ಶಕ್ಯವಲ್ಲವೆಂದು ಭಾವ) ಸ್ನಾನ ಮಾಡಿದ ಮಕ್ಕಳು ಮೊದಲಾದವರಿಂದ ತರಿಸಿ ಕೊಳ್ಳಬೇಕು ಎನ್ನುತ್ತಾರೆ—

"ಸ್ವಸ್ಯ ಅಶಕ್ತ್ಯಾದಿನಾ ಪ್ರಾತಃಸ್ನಾನಾಘಟನೇ ಪ್ರಾತರೇವ ಸ್ನಾತಸ್ಯ ಪುತ್ರಾದೇರ್ದ್ವಾರಾ ತುಲಸ್ಯಾಹರಣಾದಿಕಂ ಕಾರ್ಯಮ್ ॥"

(ಪೂಜಾಕಲ್ಪಲತಾ)

ಅಥವಾ ತಾನೇ ಸ್ನಾನ ಮಾಡಿ ಪೂಜಾದಿಗಳು ಮುಗಿಸಿದ ಬಳಿಕ ತುಳಸೀ ತಂದು ಮರುದಿನ ಪೂಜಿಸಬೇಕು.

ಸ್ನಾನ ಮಾಡದೇ ತುಲಸೀ ಅರ್ಚನೆ ಮಾಡಬಾರದು

ತುಲಸೀ ಬಿಡಿಸುವುದಕ್ಕೆ ಮುಂಚೆ ಹೇಗೆ ಸ್ನಾನ ಮಾಡಬೇಕೆಂದು ಇದೆಯೋ ಹಾಗೆ ತುಲಸೀಯನ್ನು ದೇವರಿಗೆ ಏರಿಸುವಾಗಲೂ ಸ್ನಾನಮಾಡಿಯೇ ಇರಬೇಕು — ಸ್ನಾನ ಮಾಡದೆ ತುಲಸಿಯಿಂದ ಅರ್ಚಿಸುವುದು ಸರ್ವಥಾ ನಿಷಿದ್ಧ ನರಸಿಂಹಪುರಾಣದಲ್ಲಿ

ಇತ್ಯಾಹೃತ್ಯ ತತಃ ಸ್ನಾತ್ವಾ ಪೂಜಯೇತ್ ಪುರುಷೋತ್ತಮಮ್।
ಅಸ್ನಾತ್ವಾ ಪೂಜಯೇದ್ ಯಸ್ತು ತಸ್ಯ ಪೂಜಾ ವೃಥಾ ಭವೇತ್॥

(ಅರ್ಥ) ಹೀಗೆ ಸ್ನಾನ ಮಾಡಿಯೇ ತುಲಸಿಯನ್ನು ತರಬೇಕಲ್ಲದೆ ತುಲಸೀ ತಂದ ಮೇಲೂ ಸಹ ಪುನಃ ಸ್ನಾನ ಮಾಡಿಯೇ ಭಗವಂತನನ್ನು ತುಲಸಿಯಿಂದ ಅರ್ಚಿಸಬೇಕು. ಸ್ನಾನಮಾಡದೆಯೇ (ಮೈಲಿಗೆಯಲ್ಲಿ) ತುಲಸಿಯಿಂದ ಪೂಜಿಸಿದರೆ ಅದೆಲ್ಲವೂ ವ್ಯರ್ಥವೇ.

ಹೀಗೆ ಎರಡೆರಡು ಸಾರಿ ಸ್ನಾನ ಮಾಡುವುದು ಎಲ್ಲರಿಗೂ ದುಶ್ಶಕ್ಯವಾದುದರಿಂದ ತುಲಸೀ ಹರಿಯುವುದಕ್ಕೆ ಮುಂಚೆ ಮಂತ್ರಸ್ನಾನವನ್ನಾಗಲೀ ತುಲಸೀಮೃತ್ತಿಕೆಯನ್ನು ತಲೆಗೆ ಹಚ್ಚಿಕೊಂಡು ಮೃತ್ತಿಕಾಸ್ನಾನವನ್ನಾಗಲೀ ಮಾಡಿ ಅನಂತರ ತುಲಸಿಯನ್ನು ಹರಿಯುವುದಕ್ಕೆ ಅಡ್ಡಿಯಿಲ್ಲ. ತುಲಸಿಯನ್ನು ಹರಿಯುವಾಗ ಈ ಮಂತ್ರ ಹೇಳಬೇಕು—

ತುಲಸ್ಯಾಹರಣ ಮಂತ್ರ

ತುಲಸ್ಯಮೃತಜನ್ಮಾಽಸಿ ಸದಾ ತ್ವಂ ಕೇಶವಪ್ರಿಯೇ।
ಕೇಶವಾರ್ಥಂ ಚಿನೋಮಿ ತ್ವಾಂ ಕ್ಷಮಸ್ವ ಹರಿವಲ್ಲಭೇ॥

(ಅರ್ಥ) ಹೇ ತುಲಸೀದೇವಿ! ನೀನು ಮರಣರಹಿತಳು. ಸದಾ ಶ್ರೀಹರಿಗೆ ಪ್ರಿಯಳಾದವಳಾಗಿದ್ದೀಯೆ. ಶ್ರೀಕೇಶವನ ಪ್ರೀತ್ಯರ್ಥವಾಗಿ ಪೂಜೆಗೋಸ್ಕರ ನಿನ್ನನ್ನು ಹರಿಯುತ್ತಿದ್ದೇನೆ. ಹೇ ಹರಿಪ್ರಿಯಳೇ ನನ್ನ ಅಪರಾಧವನ್ನು ಕ್ಷಮಿಸು ಎಂದು ಪ್ರಾರ್ಥಿಸಿ ತುಲಸೀ ಹರಿಯಬೇಕೆಂದು ಸ್ಕಾಂದಪುರಾಣದಲ್ಲಿ ಹೇಳಿದೆ. ಅಷ್ಟೇ ಅಲ್ಲ, ತುಳಸೀ ಬಿಡಿಸುವಾಗ ತುಳಸೀಗಾಗಲಿ ಗಿಡಕ್ಕಾಗಲಿ ಉಗುರುತಾಕದಂತೆ ಎಚ್ಚರಿಕೆಯಿಂದ ಬಿಡಿಸಬೇಕು—

ನಖಸ್ಪರ್ಶೇನ ರಹಿತಂ ಚಿನುಯಾತ್ ಶುಚಿನಾ ಸ್ವಯಮ್॥

(ಅರ್ಥ) ಉಗುರು ತಗಲದಂತೆ ಶುಚಿಯಾಗಿ ತುಲಸಿಯನ್ನು ಹರಿಯಬೇಕು.

ತುಲಸೀ ತರುವ ವಿಧಾನ (ವಿಜಯದಾಸರ ಹೇಳಿಕೆ)

ಚಿತ್ತಶುದ್ಧನು ಆಗಿ ಮುಂಜಾನೆಯೊಳು ತುಳಸಿ-
ಸ್ತೋತ್ರವನೆ ಮಾಡುತ್ತ ದಿವ್ಯವಾಗಿಹ ತ್ರಿದಳ
ಪ್ರತ್ಯೇಕ ಪಾತ್ರೆಯಲ್ಲಿ ತೆಗೆದು ಶೋಧಿಸಿ ತುಂಬಿ ವಿತ್ತಾದಿಯಲಿ ತಾರದೆ ।
ಮತ್ತೆ ವಸ್ತ್ರದಿ ಹಸ್ತ ಶಿಲೆಯರ್ಕ ಏರಂಡ
ಪತ್ರದಲಿ ತಾರದಲೆ ಭೂಮಿಯೊಳಗಿಡದೆ ಪೂ-
ರ್ವೋತ್ತರಭಿಮುಖವಾಗಿ ಭಕ್ತಿಯಿಂ ತರಬೇಕು
ಹೊತ್ತು ಮೀರಿಸಲಾಗದೋ ॥

(ಕಠಿನ ಶಬ್ದಾರ್ಥ) ತ್ರಿದಳ–ಮೂರು ದಳಗಳುಳ್ಳ ಮಂಜರಿಯು (ಶ್ರೇಷ್ಠ). ವಿತ್ತಾದಿಯಲಿ ತಾರದೆ–ದುಡ್ಡು ಕೊಟ್ಟು ಕೊಂಡು ತರಬಾರದು (ಅದು ನಿಷಿದ್ಧ; 'ಅಕ್ರೀತಾನಿ' ಪದ್ಯವಾಗಿದೆ). ವಸ್ತ್ರದಿ–ತುಳಸಿಯನ್ನು ಬಟ್ಟೆಯಲ್ಲಿ ಹಾಕಿಕೊಂಡು ತರಬಾರದು. ಹಸ್ತ–ಬರಿಗೈಯಲ್ಲೂ ತರಬಾರದು. ಅರ್ಕ ಏರಂಡಪತ್ರದಲಿ–ಎಕ್ಕದ ಎಲೆಯಲ್ಲಾಗಲಿ ಹರಳೆಲೆಯಲ್ಲಾಗಲಿ ತರಬಾರದು. ಭೂಮಿಯೊಳಗಿಡದೆ–ನೆಲದ ಮೇಲೆ ಬಿದ್ದದ್ದನ್ನು ತರಬಾರದು. ಹೊತ್ತು ಮೀರಲಾಗದೋ–ಮಧ್ಯಾಹ್ನ ಹನ್ನೆರಡು ಗಂಟೆ ಆದಮೇಲೂ ತರಬಾರದು.

ತಾತ್ಪರ್ಯ— ಚಿತ್ತಶುದ್ಧನಾಗಿ (ಎಂದರೆ ಸ್ನಾನ ಮಾಡಿ ಅಥವಾ ಮಂತ್ರಸ್ನಾನವಾಗಲಿ ತುಲಸೀಮೃತ್ತಿಕಾಸ್ನಾನವಾಗಲಿ ಮಾಡಿಕೊಂಡು ಪರಿಶುದ್ಧನಾಗಿ, ಕೈಕಾಲು ತೊಳೆದುಕೊಂಡು) ಬೆಳಗಿನ ಹೊತ್ತು, ಹತ್ತು ಹನ್ನೊಂದು ಗಂಟೆಗೆ ಮುಂಚಿತವಾಗಿ— ತುಳಸೀಸ್ತೋತ್ರವನ್ನು ಹೇಳಿಕೊಂಡು ಪ್ರಾರ್ಥಿಸುತ್ತಾ ದಿವ್ಯವಾದ ಮೂರು ಎಲೆ ಇರುವ ದಳಗಳನ್ನು (ಉತ್ತಮಪಕ್ಷ ಇಲ್ಲದಿದ್ದರೆ ಎಲೆಗಳನ್ನೋ ಅಥವಾ ಕಾಷ್ಠವನ್ನೋ ಅದೂ ಇಲ್ಲದಿದ್ದರೆ ಮೃತ್ತಿಕೆಯನ್ನೋ) ಬೇರೆ ಪಾತ್ರೆಯಲ್ಲಿ ತಂದು ಶೋಧಿಸಿ ಇಟ್ಟುಕೊಂಡು ಪೂಜೆಗೆ ಉಪಯೋಗಿಸಬೇಕು. ಕ್ರಯಕ್ಕೆ ತಂದ ತುಳಸಿಯಾಗಲಿ ನೆಲದ ಮೇಲೆ ಬಿದ್ದ ತುಳಸಿಯಾಗಲಿ ನಿಷಿದ್ಧ. ತುಳಸಿಯನ್ನು ಬರೀ ಕೈಯಲ್ಲಾಗಲಿ, ಎಕ್ಕದ ಎಲೆಯಲ್ಲಾಗಲಿ ಹರಳೆಲೆಯಲ್ಲಾಗಲಿ ಬಟ್ಟೆಯಲ್ಲಾಗಲಿ ತರಬಾರದು—ತಂದರೆ ಪೂಜೆಗೆ ಅನರ್ಹ. ತುಳಸಿಯನ್ನು ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ನಿಂತು ಹರಿಯಬೇಕು. ಹಾಗೂ ಮಧ್ಯಾಹ್ನವಾದಮೇಲೂ ತುಳಸೀ ಬಿಡಿಸಬಾರದು.

ತುಲಸೀ ಅರ್ಚನೆಯ ಫಲ

ಗುಹ್ಯಾನಿ ಯಾನಿ ಪಾಪಾನಿ ಹ್ಯನಾಖ್ಯೇಯಾನಿ ಮಾನವೈಃ ।
ನಾಶಯೇತ್ ತುಲಸೀ ಭಕ್ತ್ಯಾ ದತ್ತಾ ಕೇಶವಮೂರ್ಧನಿ ॥

(ಅರ್ಥ) ಮಾನವರು ಯಾವಯಾವ ಪಾಪಗಳನ್ನು (ದೋಷಗಳನ್ನು) ಗೊತ್ತಿಲ್ಲದೆಯೂ ತಿಳಿದು ಲೆಕ್ಕವಿಲ್ಲದಷ್ಟು ಏನು ಮಾಡುತ್ತಾರೋ ಭಕ್ತಿಯಿಂದ ವಿಷ್ಣುವಿನ ತಲೆಯ ಮೇಲೆ ತುಲಸಿಯನ್ನು ಏರಿಸಿದರೆ ಅರ್ಚಿಸಿದರೆ) ಆ ತುಲಸಿ ಅವೆಲ್ಲವನ್ನೂ ನಾಶ ಮಾಡುತ್ತದೆಯೆಂದು "ಪದ್ಮಪುರಾಣ"ದಲ್ಲಿ ಹೇಳಿದೆ. ಶತಾನಂದರೆಂಬ ಮಹರ್ಷಿಗಳು ತುಲಸೀ ಅರ್ಚನೆಯ ಮಹಿಮೆಯನ್ನು ಹೀಗೆ ವರ್ಣಿಸಿದ್ದಾರೆ—

ಪುಷ್ಪೈರ್ದ್ವಾದಶಲಕ್ಷಂ ತು ಸುವರ್ಣೈಃ ಕೋಟಿರುಚ್ಯತೇ ।
ತತ್ಫಲಂ ಸಮವಾಪ್ನೋತಿ ತುಲಸ್ಯಾಸ್ತು ದಲೇನ ವಾ ॥

(ಅರ್ಥ) ಹನ್ನೆರಡು ದಶಲಕ್ಷ ಹೂವು ಏರಿಸಿದರೆ ಏನು ಫಲವೋ ಒಂದು ಕೋಟಿ ಸುವರ್ಣಪುಷ್ಪ ಏರಿಸಿದರೆ ಏನು ಫಲ ದೊರಕುವುದೋ ಆ ಫಲ ಒಂದು ದಳ ತುಲಸಿ ಪೂಜಿಸಿದರೇ ಬರುತ್ತದೆ. ಹೀಗೆ ತುಲಸೀ ಅರ್ಚನೆ ವಿಷ್ಣುವಿಗೆ ಅತ್ಯಂತ ಪ್ರೀತಿಕರವು.

ಹೂವುಗಳನ್ನೂ ತುಲಸಿಯನ್ನೂ ಪೂಜಿಸುವ ಮಂತ್ರಗಳು

ಹೂವುಗಳನ್ನೂ ತುಲಸಿಯನ್ನೂ ಕೇಶವಾದಿ ಇಪ್ಪತ್ತನಾಲ್ಕು ನಾಮಗಳನ್ನೂ ದಶಾವತಾರ ನಾಮಗಳನ್ನೂ ಬ್ರಹ್ಮಸೂತ್ರಗಳನ್ನೂ ಹೇಳಿಕೊಂಡು ಅರ್ಚನೆ ಮಾಡುತ್ತಾರೆ. ಹೆಚ್ಚು ಅವಕಾಶವಿದ್ದರೆ ಅಷ್ಟೋತ್ತರಶತನಾಮಾವಳಿಗಳನ್ನೂ ವಿಷ್ಣುಸಹಸ್ರನಾಮಾವಳಿಯನ್ನೂ ಹೇಳಿಕೊಂಡು ಅರ್ಚಿಸಬಹುದು.

ಪುಷ್ಪಸಮರ್ಪಣೆಯ ಮಂತ್ರಗಳು

ಮಾಲ್ಯಾದೀನಿ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ ।
ಮಯಾಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಮ್ ॥

(ಅರ್ಥ) ಹೇ ಸ್ವಾಮಿ! ಭಗವಂತ, ಪ್ರಭುವೇ! ನಿನ್ನ ಪೂಜೆಗಾಗಿ ನಾನು ತಂದಿರುವಂಥಾ ಸುಗಂಧಮಯವಾದ ಹೂವಿನ ಹಾರಗಳನೂ ಮಾಲತಿಯೇ ಮೊದಲಾದ ಹೂವುಗಳನ್ನೂ ಸ್ವೀಕರಿಸುವನಾಗು.

ಕರವೀರೈರ್ಜಾಜಿಕುಸುಮೈ—ಶ್ಚಂಪಕೈರ್ಬಕುಳೈಃ ಶುಭೈಃ ।
ಶತಪತ್ರೈಶ್ಚ ಕಲ್ಹಾರೈ— ರರ್ಚಯೇತ್ ಪುರುಷೋತ್ತಮಮ್ ॥

(ಅರ್ಥ) ಪುರುಷೋತ್ತಮನಾದ ಶ್ರೀಪರಮಾತ್ಮನನ್ನು ಕಣಗಿಲೆ (ಕರವೀರ) ಹೂವುಗಳಿಂದಲೂ, ಜಾಜಿ ಹೂಗಳಿಂದಲೂ, ಸಂಪಿಗೆ ಹೂವುಗಳಿಂದಲೂ, ಬಕುಳಪುಷ್ಪಗಳಿಂದಲೂ, ಕಮಲ (ಶತಪತ್ರ)ಗಳಿಂದಲೂ ಕಲ್ಹಾರಪುಷ್ಪಗಳಿಂದಲೂ ಪೂಜಿಸಬೇಕು.

ಪಾರಿಜಾತಸ್ಯ ಪುಷ್ಪೇಷು ಆಂಜನೇಯಸ್ತ್ವದಾಜ್ಞಯಾ ।
ಸೌಗಂಧಿಕೇ ಭೀಮಸೇನಃ ಶ್ವೇತಪುಷ್ಪೇಷು ಶಂಕರಃ ॥ ೩ ॥

ಪುನ್ನಾಗಪುಷ್ಪೇ ಗರುಡೋ ದೂರ್ವಾಯಾಂ ವರುಣೋ ಮಹಾನ್ ।
ತುಲಸ್ಯಾಂ ತು ರಮಾದೇವೀ ಸಾ ವಿಷ್ಣೋರ್ನಿತ್ಯದಾ ಪ್ರಿಯಾ ॥ ೪ ॥

(ಅರ್ಥ) ಪಾರಿಜಾತಪುಷ್ಪಗಳಲ್ಲಿ ಭಗವಂತನ ಅಜ್ಞೆಯಿಂದ ಆಂಜನೇಯನೂ, ಸೌಗಂಧಿಕಾಪುಷ್ಪಗಳಲ್ಲಿ ಭೀಮಸೇನನೂ, ಬಿಳಿ ಹೂವುಗಳಲ್ಲಿ ರುದ್ರದೇವರೂ ನಾಗ-ಸಂಪಿಗೆಗಳಲ್ಲಿ ಗರುಡನೂ, ಗರಿಕೆಯಲ್ಲಿ ವರುಣನೂ, ತುಲಸಿಯಲ್ಲಿ ಸಾಕ್ಷಾಲ್ಲಕ್ಷ್ಮೀದೇವಿಯೂ ಅಭಿಮಾನಿಗಳಾಗಿದ್ದು ಭಗವಂತನ ಪೂಜೆಗೆ ಸಹಾಯಕರಾಗಿದ್ದಾರೆ. ತುಲಸಿಯು ಭಗವಂತನಿಗೆ ಅತ್ಯಂತ ಪ್ರಿಯಕರವಾದುದು.

ಎಂಟು ಮಹತ್ತರ ಪುಷ್ಪಗಳು

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾ ಪುಷ್ಪಂ ಸತ್ಯಪುಷ್ಪಂ ವಿಶೇಷತಃ ॥ ೧ ॥

ಜ್ಞಾನಪುಷ್ಪಂ ತಪಃಪುಷ್ಪಂ ಕ್ರಿಯಾಪುಷ್ಪಂ ತಥೈವ ಚ ।
ಧ್ಯಾನಂ ಚೈವಾಷ್ಟಮಂ ಪುಷ್ಪಂ ವಿಭಿಸ್ತುಷ್ಯತಿ ಕೇಶವಃ ॥ ೨ ॥

ಇವು ಅಗ್ನಿಪುರಾಣದಲ್ಲಿ ಹೇಳಿರುವ ಎಂಟು ಮಹತ್ತರ ಪುಷ್ಪಗಳು. ಅವು ಯಾವುವೆಂದರೆ—೧. ಅಹಿಂಸೆ, ೨ ಇಂದ್ರಿಯನಿಗ್ರಹ, ೩. ಸರ್ವಭೂತಗಳಲ್ಲಿ ದಯೆ, ೪. ಸತ್ಯವೆಂಬ ಪುಷ್ಪ, ೫. ಜ್ಞಾನ, ೬ ತಪಸ್ಸು, ೭. ಸತ್ಕರ್ಮಾನುಷ್ಠಾನ, ಮತ್ತು ೮. ಧ್ಯಾನ ಎಂಬ ಈ ಎಂಟು ಪುಷ್ಪಗಳಿಂದ ನಾರಾಯಣನು ಹೆಚ್ಚು ತೃಪ್ತನಾಗುತ್ತಾನೆ.

ಪುಷ್ಪ ಪೂಜಿಸಲು ಋಙ್ಮಂತ್ರ

ಹರಿಃ ಓಂ ।

ಅಯನೇ ತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥

ಓಂ ನಮೋ ನಾರಾಯಣಾಯ । ನಾನಾವಿಧ ಪರಿಮಳಪುಷ್ಪಾಣಿ ಸಮರ್ಪಯಾಮಿ ॥

ಪುಷ್ಪಗಳನ್ನೂ ತುಳಸಿಯನ್ನೂ ಅರ್ಚಿಸಲು ನಾಮಾವಳಿಗಳು

೧. ಕೇಶವಾದಿ ಚತುರ್ವಿಂಶತಿ ನಾಮಾವಳಿಃ : ಓಂ ಕೇಶವಾಯ ನಮಃ, ಓಂ ನಾರಾಯಣಾಯ ನಮಃ.......ಇತ್ಯಾದಿ ಓಂ ಹರಯೇ ನಮಃ, ಓಂ ಶ್ರೀಕೃಷ್ಣಾಯ ನಮಃ ॥

೨. ದಶಾವತಾರ ನಾಮಾವಳಿ : ೧. ಓಂ ಮತ್ಸ್ಯಾಯ ನಮಃ, ೨. ಓಂ ಕೂರ್ಮಾಯ ನಮಃ, ೩. ಓಂ ವರಾಹಾಯ ನಮಃ, ೪. ಓಂ ನಾರಸಿಂಹಾಯ ನಮಃ, ೫. ಓಂ ವಾಮನಾಯ ನಮಃ, ೬. ಓಂ ಭಾರ್ಗವಾಯ (ಪರಶುರಾಮಾಯ), ೭. ಓಂ ರಾಮಚಂದ್ರಾಯ ನಮಃ, ೮. ಓಂ ಶ್ರೀಕೃಷ್ಣಾಯ ನಮಃ, ೯. ಓಂ ಬುದ್ಧಾಯ ನಮಃ, ೧೦. ಓಂ ಕಲ್ಕಿನೇ ನಮಃ, ೧೧. ಓಂ ವೇದವ್ಯಾಸಾಯ ನಮಃ, ೧೨. ಓಂ ಕಪಿಲಾಯ ನಮಃ, ೧೩. ಓಂ ದತ್ತಾತ್ರೇಯಾಯ ನಮಃ, ೧೪. ಓಂ ಮಹಿದಾಸಾಯ ನಮಃ, ೧೫. ಓಂ ಶಿಂಶುಮಾರಾಯ ನಮಃ ಓಂ ॥

(ಅವಕಾಶವಿದ್ದರೆ ಕೃಷ್ಣಾಷ್ಟೋತ್ತರ, ರಾಮಾಷ್ಟೋತ್ತರಾದಿ ನಾಮಾವಳಿಗಳನ್ನೂ ವಿಷ್ಣುಸಹಸ್ರನಾಮಾವಳಿಯನ್ನೂ ಪಠಿಸಬಹುದು.)

ಬ್ರಹ್ಮಸೂತ್ರ ನಾಮಾವಳಿ

ಟೀಕಾರಾಯರು ಪದ್ಯಮಾಲಾದಲ್ಲಿ—

ಅರ್ಚಯೇದ್ ಗಂಧಪುಷ್ಪಾಣಿ ಮೂಲೇನ ತುಲಸೀಂ ತಥಾ ।

ಎಂದು ಹೇಳಿದ್ದಾರೆ. ಇಲ್ಲಿ 'ಮೂಲೇನ' ಎಂಬುದಕ್ಕೆ 'ವೇದಾಂತಶಾಸ್ತ್ರಮೂಲೇನ ಬ್ರಹ್ಮಸೂತ್ರಸಂದರ್ಭೇಣ' ಎಂದು ಪದ್ಯಮಾಲಾ ಟೀಕಾದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅದರಂತೆ ಬ್ರಹ್ಮಸೂತ್ರಗಳನ್ನು ಹೇಳಿಕೊಂಡು ತುಳಸಿಯನ್ನು ಸಮರ್ಪಿಸುವುದು ಶ್ರೇಷ್ಠ. ಆದಕಾರಣ ಬ್ರಹ್ಮಸೂತ್ರಗಳ ಪ್ರಥಮಾಧ್ಯಾಯದ ಪ್ರಥಮಪಾದದ ಮೊದಲ ಹನ್ನೆರಡು ಸೂತ್ರಗಳನ್ನು ಕೆಳಗೆ ಕೊಟ್ಟಿದೆ. ಹೆಚ್ಚು ಅವಕಾಶವಿದ್ದರೆ ಮಿಕ್ಕ ಸೂತ್ರಗಳನ್ನೂ ಪಠಿಸಬಹುದಾದರೂ ಹೆಚ್ಚು ಅವಕಾಶವಿಲ್ಲದಿದ್ದಾಗ ಈ ಮೊದಲ ಹನ್ನೆರಡು ಸೂತ್ರಗಳನ್ನಾದರೂ ಹೇಳಿಕೊಳ್ಳುವುದು ಶ್ರೇಷ್ಠ.

ಬ್ರಹ್ಮಸೂತ್ರಪಾಠಃ, ಪ್ರಥಮಾಧ್ಯಾಯೇ ಪ್ರಥಮ ಪಾದಃ

೧. ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ । ೨. ಓಂ ಜನ್ಮಾದ್ಯಸ್ಯ ಯತಃ ಓಂ । ೩. ಓಂ ಶಾಸ್ತ್ರಯೋನಿತ್ವಾತ್ ಓಂ । ೪. ಓಂ ತತ್ತು ಸಮ-

ನ್ವಯಾತ್ ಓಂ। ೫. ಓಂ ಈಕ್ಷತೇರ್ನಾಶಬ್ದಂ ಓಂ। ೬. ಓಂ ಗೌಣ-ಶ್ಚೇನ್ನಾತ್ಮಶಬ್ದಾತ್ ಓಂ। ೭. ಓಂ ತನಿಷ್ಠಸ್ಯ ಮೋಕ್ಷೋಪದೇಶಾತ್ ಓಂ। ೮. ಓಂ ಹೇಯತ್ವಾವಚನಾಚ್ಚ ಓಂ। ೯. ಓಂ ಸ್ವಾಪ್ಯಯಾತ್ ಓಂ। ೧೦. ಓಂ ಗತಿಸಾಮಾನ್ಯಾತ್ ಓಂ। ೧೧. ಓಂ ಶ್ರುತತ್ವಾಚ್ಚ ಓಂ। ೧೨. ಓಂ ಆನಂದಮಯೋಽಭ್ಯಾಸಾತ್ ಓಂ। ಇತ್ಯಾದಿ.

೧೨-ಅ. ವಿಷ್ಣ್ವಾಯುಧಪೂಜಾ

ಪದ್ಮಮಾಲಾಪಲ್ಲಿ ಹೂವು-ತುಳಸಿಗಳನ್ನು ಪೂಜಿಸಿದ ಬಳಿಕ

ತತಶ್ಚಕ್ರಾಯುಧಾದೀನಿ ಪೂಜಯೇತ್ ಕ್ರಮಶೋ ದಶ।

ಎಂದರೆ— ಆಮೇಲೆ ವಿಷ್ಣುವಿನ ಹತ್ತು ಆಯುಧಗಳನ್ನೂ ಪೂಜಿಸಬೇಕು ಎಂದು ಹೇಳಿ ಆ ಪೂಜಾಕ್ರಮವನ್ನೂ ಹೇಳಿದ್ದಾರೆ. ಹೇಗೆಂದರೆ—

ದುರ್ಗಾ ಚಕ್ರಾಧಿದೇವೀ ಸ್ಯಾತ್ ಶ್ರೀಶ್ಚ ಶಂಖಾಧಿದೇವತಾ ॥೮೧॥
ವಾಯುರ್ಗದಾಧಿದೇವಃ ಸ್ಯಾದ್ ಭೂಮಿಃ ಪದ್ಮಾಭಿಮಾನಿನೀ।
ದುರ್ಗೈವ ಖಡ್ಗದೇವೀ ಸ್ಯಾ—ಚ್ಛಾರ್ಙ್ಗಂ ಚೈವ ಸರಸ್ವತೀ ॥೮೨॥
ಪಂಚಪ್ರಾಣಾಃ ಪಂಚ ಬಾಣಾಃ ವಿರಿಂಚಃ ಕೌಸ್ತುಭಾತ್ಮಕಃ।
ಶ್ರೀರೇವ ವನಮಾಲಾಯಾಂ ಲಕ್ಷ್ಮೀಃ ಶ್ರೀವತ್ಸಸಂಸ್ಥಿತಾ ॥೮೩॥

(ಅರ್ಥ) ವಿಷ್ಣುವು ಬಲಭಾಗದ ಮೇಲ್ಗೈಯಲ್ಲಿ ಚಕ್ರವನ್ನೂ ಎಡಮೇಲ್ಗೈಯಲ್ಲಿ ಶಂಖವನ್ನೂ ಎಡಕೆಳಗೈಯಲ್ಲಿ ಗದೆಯನ್ನೂ ಬಲಗಡೆ ಕೆಳಗೈಯಲ್ಲಿ ಪದ್ಮವನ್ನೂ ಹಿಡಿದಿದ್ದಾನೆಂದು ಪ್ರದಕ್ಷಿಣಾಕಾರವಾಗಿ ಈ ನಾಲ್ಕು ಆಯುಧಗಳನ್ನು ಚಿಂತಿಸಬೇಕು. ಅವುಗಳಲ್ಲಿ ಚಕ್ರಕ್ಕೆ ದುರ್ಗಾದೇವಿಯೂ ಶಂಖಕ್ಕೆ ಶ್ರೀದೇವಿಯೂ, ಗದೆಗೆ ಮುಖ್ಯಪ್ರಾಣನೂ (ವಾಯುದೇವರೂ), ಪದ್ಮಕ್ಕೆ ಭೂದೇವಿಯೂ ಅಭಿಮಾನಿಗಳೆಂದು ತಿಳಿಯಬೇಕು. ವಿಷ್ಣುವಿಗೆ ಅನಂತಹಸ್ತಗಳಿರುವುದರಿಂದ ಬೇರೆಬೇರೆ ಕೈಗಳಲ್ಲಿ ಖಡ್ಗಾದ್ಯಾಯುಧಗಳನ್ನು ಧರಿಸಿದ್ದಾನೆಂದು ತಿಳಿದು ಅವುಗಳ ಅಭಿಮಾನಿದೇವತೆಗಳನ್ನೂ ತಿಳಿದು ಅರ್ಚಿಸಬೇಕು— ೫. ನಂದಕವೆಂಬ ಖಡ್ಗಕ್ಕೆ ಪುನಃ ದುರ್ಗಾದೇವಿ, ೬. ಶಾರ್ಙ್ಗವೆಂಬ ಧನುಸ್ಸಿಗೆ ಸರಸ್ವತೀದೇವಿಯೂ, ೭. ಐದು ಬಾಣಗಳಿಗೆ ಪಂಚಪ್ರಾಣಾದಿ ಪಂಚವಾಯುಗಳೂ, ೮. ಕೌಸ್ತುಭಮಣಿಗೆ ಬ್ರಹ್ಮದೇವರೂ, ೯. ವೈಜಯಂತೀವನಮಾಲೆಗೆ ಪುನಃ ಶ್ರೀದೇವಿಯೂ, ೧೦. ಶ್ರೀವತ್ಸವೆಂಬ ಚಿಹ್ನೆಗೆ (ಮಚ್ಚೆಗೆ) ಲಕ್ಷ್ಮೀದೇವಿಯೂ ಅಭಿಮಾನಿದೇವತೆಗಳೆಂದು ತಿಳಿದು ಈ ಹತ್ತು ಆಯುಧಗಳ ಅಭಿಮಾನಿದೇವತೆಗಳನ್ನೂ ಪೂಜಿಸಬೇಕು.

ಆಯುಧಪೂಜಾಕ್ರಮ

೧. ಓಂ ಚಕ್ರಾಧಿದೇವ್ಯೈ ದುರ್ಗಾಯೈ ನಮಃ । ೨. ಓಂ ಶಂಖಾಭಿಮಾನಿನ್ಯೈ ಶ್ರಿಯೈ ನಮಃ । ೩. ಓಂ ಗದಾಭಿಮಾನಿನೇ ವಾಯುವೇ ನಮಃ । ೪. ಓಂ ಪದ್ಮಾಭಿಮಾನಿನೇ ಭೂಮ್ಯೈ ನಮಃ । ೫. ಓಂ ನಂದಕಾಖ್ಯ ಖಡ್ಗಾಭಿಮಾನಿನ್ಯೈ ದುರ್ಗಾಯೈ ನಮಃ । ೬. ಓಂ ಶಾರ್ಙ್ಗಾಖ್ಯಚಾಪಾಭಿಮಾನಿನ್ಯೈ ಸರಸ್ವತ್ಯೈ ನಮಃ । ೭. ಓಂ ಪಂಚಬಾಣಾನಾಮಧಿದೇವತಾಭ್ಯಃ ಪ್ರಾಣಾದಿ ಪಂಚಪ್ರಾಣೇಭ್ಯೋ ನಮಃ । ೮. ಓಂ ಕೌಸ್ತುಭಾಭಿಮಾನಿನೇ ವಿರಿಂಚಾಯ ನಮಃ । ೯. ಓಂ ವೈಜಯಂತ್ಯಾಖ್ಯ ವನಮಾಲಾಧಿದೇವತಾಯೈ ಶ್ರಿಯೈ ನಮಃ । ೧೦. ಓಂ ಶ್ರೀವತ್ಸಾಖ್ಯ ವಿಷ್ಣುಲಾಂಛನಾಧಿದೇವತಾಯೈ ಲಕ್ಷ್ಮ್ಯೈ ನಮಃ—ಎಂದು ಹೇಳಿಕೊಂಡು ಹೂವಿಂದ ಅರ್ಚಿಸಬೇಕು.

ಆಭರಣಗಳನ್ನು ಸಮರ್ಪಿಸುವಾಗ ಆ ಆಯುಧಗಳನ್ನು ಶ್ರೀಹರಿಗೆ ಕೊಡುತ್ತಿದ್ದೇವೆ ಅಥವಾ ಸಮರ್ಪಿಸುತ್ತಿದ್ದೇವೆ ಎಂದು ಅನುಸಂಧಾನ ಮಾಡಿಕೊಳ್ಳಬೇಕು. ಈಗ ಆಯಾ ಆಯುಧಗಳ ಅಭಿಮಾನಿದೇವತೆಗಳನ್ನು ಪೂಜಿಸುತ್ತಿದ್ದೇವೆ ಎಂದು ತಿಳಿಯಬೇಕು.

ಆಯುಧಗಳ ಪೂಜೆ ಮುಗಿದ ಬಳಿಕ ತಂತ್ರಸಾರದಲ್ಲೂ ಪದ್ಮಮಾಲಾದಲ್ಲೂ ಆವರಣ ಪೂಜೆ ಮಾಡಬೇಕೆಂದು ವರ್ಣಿಸಿದೆ. ಯದ್ಯಪಿ ಈ ಆವರಣಪೂಜೆ ಮಾಡುವುದು ಎಲ್ಲರಿಗೂ—ತತ್ರಾಪಿ ನಿತ್ಯದಲ್ಲೂ—ಮಾಡುವುದು ಅಸಾಧ್ಯವೇ ಆಗಿದೆಯಾದರೂ ಆ ಕ್ರಮವನ್ನಾದರೂ ತಿಳಿದುಕೊಂಡಿರಬೇಕು. ಜೀವನದಲ್ಲಿ ಒಂದುಸಲ ಮಾಡುವುದಕ್ಕೆ ಅವಕಾಶ ಸಿಕ್ಕರೂ ನಮ್ಮನ್ನು ಧನ್ಯರೆಂದು ತಿಳಿದುಕೊಳ್ಳಬಹುದು. ಪ್ರಸ್ತುತ ಆ ಆವರಣಪೂಜೆಗೆ ಹೋಗುವ ಮೊದಲು ವಸ್ತ್ರಾದಿಗಳನ್ನು ಸಮರ್ಪಿಸುವಾಗ ನಾವು ಹೇಳಿಕೊಂಡಿರುವ ಋಙ್ಮಂತ್ರಗಳಿಗೆ ಮಾಧ್ವಶಾಸ್ತ್ರಸಮ್ಮತವಾದ ಅರ್ಥ ಉಪಲಭ್ಯವಾಗಿಲ್ಲದ ಕಾರಣ ಸಾಯಣಭಾಷ್ಯಾರ್ಥವನ್ನೇ ಹೇಳುವೆವು.

ಋಙ್ಮಂತ್ರಗಳಿಗೆ ಸಾಯಣಭಾಷ್ಯಾರ್ಥ

i) ಯುವಂ ವಸ್ತ್ರಾಣಿ ಎಂಬ ಋಕ್ಕಿನ ಅರ್ಥ—(ಋ.ಮಂ. ೧/ಸೂ. ೧೫೨, ೧ನೇ ಋಕ್; ತೈ.ಬ್ರಾ. ೨/೮/೬/೮)

'ಯುವಂ ವಸ್ತ್ರಾಣೀ'ತಿ ಮಂತ್ರಸ್ಯ ಔಚಥ್ಯೋ ದೀರ್ಘತಮಾ ಋಷಿಃ । ತ್ರಿಷ್ಟುಪ್ ಛಂದಃ । ಮಿತ್ರಾವರುಣೌ ದೇವತೇ । ವಸ್ತ್ರಧಾರಣೇ (ವಸ್ತ್ರಸಮರ್ಪಣೇ) ವಿನಿಯೋಗಃ ॥

ಯುವಂ ವಸ್ತ್ರಾಣಿ ಪೀವಸಾ ವಸಾಥೇ

ಯುವೋರಚ್ಛಿದ್ರಾ ಮಂತವೋ ಹ ಸರ್ಗಾಃ ।

ಅವಾತಿರತಮನೃತಾನಿ ವಿಶ್ವ

ಋತೇನ ಮಿತ್ರಾ ವರುಣಾ ಸಚೇಥೇ ॥

ಪದಚ್ಛೇದ— ಯುವಂ, ವಸ್ತ್ರಾಣಿ, ಪೀವಸಾ, ವಸಾಥೇ, ಯುವೋಃ, ಅಚ್ಛಿದ್ರಾಃ, ಮಂತವಃ, ಹ, ಸರ್ಗಾಃ । ಅವ, ಅತಿರತಂ, ಅನೃತಾನಿ, ವಿಶ್ವಾ, ಋತೇನ, ಮಿತ್ರಾ-ವರುಣಾ, ಸಚೇಥೇ ।

ಅರ್ಥ— ಮಿತ್ರಾವರುಣಾ-ಎಲೈ ಮಿತ್ರಾವರುಣರೇ ! ಪೀವಸಾ-ದೃಢಕಾಯರಾದ, ಯುವಂ-ನೀವಿಬ್ಬರೂ, ವಸ್ತ್ರಾಣಿ-ವಸ್ತ್ರಗಳನ್ನು, ವಸಾಥೇ-ಧರಿಸಿದ್ದೀರಿ. ಅಥವಾ ಯುವಂ-ನೀವಿಬ್ಬರೂ, ಪೀವಸಾ-ಹರಿಯದೆ ಶುದ್ಧವಾಗಿದ್ದು ಹೊದೆಯಲು ಯೋಗ್ಯವಾದ, ವಸ್ತ್ರಾಣಿ-ವಸ್ತ್ರಗಳನ್ನು, ವಸಾಥೇ-ಧರಿಸಿದ್ದೀರಿ. ಅಥವಾ ಯುವಂ-ನೀವಿಬ್ಬರೂ, ಪೀವಸಾ-ಅತ್ಯಧಿಕವಾಗಿ ತೇಜಸ್ಸಿನಿಂದ (ತೇಜೋರೂಪವಾದ) ವಸ್ತ್ರಾಣೀ ವಸಾಥೇ । ಯುವೋಃ-ನಿಮ್ಮಿಬ್ಬರ, ಸರ್ಗಾಃ-ಸೃಷ್ಟಿಗಳು, ಅಚ್ಛಿದ್ರಾಃ-ದೋಷರಹಿತವಾಗಿಯೂ, ಮಂತವಃ ಹ-ಮನೋಹರವಾಗಿಯೂ ಇನೆಯಲ್ಲದೆ, ವಿಶ್ವಾ-ಸಮಸ್ತವಾದ, ಅನೃತಾನಿ-ಅನೃತಗಳನ್ನು ಅಥವಾ ಅಕ್ರಿಯವಾದ ಪಾಪಗಳನ್ನು, ಅವ ಅತಿರತಂ-ನಾಶಮಾಡುತ್ತೀರಿ. ಋತೇನ-ಯಜ್ಞದೊಡನೆ ಅಥವಾ ಫಲದೊಡನೆ, ಸಚೇಥೇ-(ನಮ್ಮನ್ನು) ಸೇರಿಸುತ್ತೀರಿ.

ಭಾವಾರ್ಥ— ಎಲೈ ಮಿತ್ರಾವರುಣರೇ! ದೃಢಕಾಯರಾದ ನೀವಿಬ್ಬರೂ ತೇಜೋರೂಪವಾದ ವಸ್ತ್ರಗಳನ್ನು ಧರಿಸಿದ್ದೀರಿ. ನಿಮ್ಮ ಸ್ವರೂಪಗಳು ದೋಷರಹಿತವಾಗಿಯೂ ಮನೋಹರವಾಗಿಯೂ ಇವೆ. ನೀವಿಬ್ಬರೂ ಸಹ ಸಕಲವಾದ ಪಾಪಗಳನ್ನೂ ನಾಶಮಾಡುತ್ತೀರಿ. ಈ ಯಜ್ಞದ ಫಲವನ್ನು ನಾವು ಅನುಭವಿಸುವಂತೆ ಮಾಡುತ್ತೀರಿ.

ವಿಶೇಷಾರ್ಥ— ಮಿತ್ರಾವರುಣಾ-ಮಿತ್ರಾವರುಣೌ । ಮಿತ್ರಶ್ಚ ವರುಣಶ್ಚ ಮಿತ್ರಾ-ವರುಣೌ ಎಂದು ದ್ವಂದ್ವಸಮಾಸ. ಸಮಾಸದಲ್ಲಿ 'ದೇವತಾ ದ್ವಂದ್ವೇ ಚ' (ಪಾ. ೬/೩/೨೬) ಎಂಬ ಸೂತ್ರದಂತೆ ದೇವತೆಗಳ ಜೋಡಿಯನ್ನು ಹೇಳುವಾಗ ಪೂರ್ವಪದಕ್ಕೆ ಆನಙ್ (ಆಕಾರ) ಆಗಮವಾಗಿ ಬರುವುದರಿಂದ ಮಿತ್ರ ಶಬ್ದವು ಮಿತ್ರಾ ಎಂದು ದೀರ್ಘವಾಗುತ್ತದೆ.

ಇನ್ನು 'ಮಿತ್ರ' ಎಂಬುದು ದ್ವಾದಶಾದಿತ್ಯರ ಪೈಕಿ ಒಬ್ಬ ಸೂರ್ಯನ ಹೆಸರು. ಇವನನ್ನೇ ನಾವೆಲ್ಲ ಪ್ರಾತಃಸಂಧ್ಯಾವಂದನೆಯಲ್ಲಿ 'ಮಿತ್ರಸ್ಯ ಚರ್ಷಣೀ ಧೃತಃ' ಎಂಬ ಮಂತ್ರದಿಂದ ಪ್ರತಿನಿತ್ಯ ಧ್ಯಾನಿಸುತ್ತೇವೆ. ವರುಣನು ಸಮುದ್ರಗಳ ರಾಜನಲ್ಲದೆ ನೀರಿಗೂ ಮುಖ್ಯಾಭಿಮಾನಿ. ಇವನನ್ನು ನಾವು ಪ್ರತಿನಿತ್ಯ ಸಾಯಂಸಂಧ್ಯೆಯಲ್ಲಿ 'ಇಮಂ ಮೇ ವರುಣ ಶ್ರುಧೀ ಹವಮ್' ಎಂದು ಸ್ತುತಿಸಿ ಧ್ಯಾನಿಸುತ್ತೇವೆ.

'ಯೋ ದೇವಾನಾಂ ನಾಮಧಾ ಏಕ ಏವ' (೧೦/೮೨/೩) 'ಯಾವ ವಿಷ್ಣು ಒಬ್ಬನೇ ಸಕಲ ದೇವತೆಗಳ ಹೆಸರುಗಳನ್ನೂ ಧರಿಸಿದ್ದಾನೋ' ಎಂಬ ಶ್ರುತಿಯಂತೆ ಮಿತ್ರ, ವರುಣ ಎರಡು ಹೆಸರುಗಳೂ ಆ ದೇವತೆಗಳ ಅಂತರ್ಗತರಾದ ವಾಯುದೇವರಿಗೂ ಪರಮ ಮುಖ್ಯ ವೃತ್ತಿಯಿಂದ ವಿಷ್ಣುವಿಗೂ ಅನ್ವಯಿಸುತ್ತವೆ. ಈ ಶಬ್ದಗಳ ನಿಷ್ಪತ್ತಿಯನ್ನು ಆಚಾರ್ಯರು ಋಗ್ಭಾಷ್ಯದಲ್ಲಿ (೧ ಮಂ, ೨ ಸೂ, ೭ ಋಕ್) ಹೀಗೆ ತೋರಿಸಿದ್ದಾರೆ—

ಮಿತ್ವಾತ್ರಾತೀತಿ ಮಿತ್ರೋಽಯಂ ಮಿತಮಹ್ನಾ ಕರೋತಿ ವಾ ।
ಮಿತಂ ರಾತೀತಿ ವಾ ನಿತ್ಯಂ ಮಿತಂ ರಮಯತೀತಿ ವಾ ॥

i) ಮಿ–ಮಾತಿ–ರಕ್ಷಿಸಲು ಯೋಗ್ಯನೆಂದು ತಿಳಿದು, ತ್ರಾತಿ (ತ್ರ) ರಕ್ಷಿಸುವನಾದ್ದರಿಂದಲೂ, ii) ಅಹ್ನಾ ಮಿತಂ-ಜ್ಞಾತಂ, ರಾತಿ–ಕರೋತೀತಿ ವಾ ಹಗಲು ಬೆಳಕಿನಿಂದ ಸಕಲವೂ ಮಿತ-ತಿಳಿಯುವಂತೆ, ರ–ಮಾಡುವವನಾದ್ದರಿಂದಲೂ (ಹಗಲುಬೆಳಕಿನಲ್ಲಿ ಎಲ್ಲವೂ ಕಣ್ಣಿಗೆ ಬೀಳುವುದರಿಂದ ಅರಿವಾಗುತ್ತದೆ, ಇದಕ್ಕೆ ಸೂರ್ಯನ ಬೆಳಕೇ ಕಾರಣವಲ್ಲವೆ), iii) ಮಿತಂ ರಾತಿ ದದಾತೀತಿ ವಾ ಮಿತವಾಗಿ ಎಂದರೆ ಅವರವರ ಯೋಗ್ಯತೆ ತಿಳಿದು ಅದಕ್ಕೆ ತಕ್ಕಂತೆ, ಸುಖ, ಐಶ್ವರ್ಯ, ಜ್ಞಾನಾದಿಗಳನ್ನು, ರ-ಕೊಡುವವನಾದ್ದರಿಂದಲೂ, iv) ಮಿತಂ ರಮಯತೀತಿ ವಾ ಜೀವರ ಯೋಗ್ಯತೆಗೆ ತಕ್ಕಂತೆ (ಮಿತವಾಗಿ) ರ–ಸುಖವನ್ನು ಕೊಟ್ಟು ಸಂತೋಷಪಡಿಸುವುದರಿಂದಲೂ, ವಾಯುದೇವರಿಗೂ, ವಿಷ್ಣುವಿಗೂ ಮಿತ್ರ ಎಂಬ ಹೆಸರು ಅನ್ವರ್ಥವಾಗಿದೆ.

ಆವೃಣೋತೀತಿ ವರುಣ—ಸ್ತಮಸಾಜ್ಞಾನತೋಽಪಿ ವಾ ।
ವರಮುನ್ನಯತೀತ್ಯಸ್ಮಾದ್ ವರಾನಂದತ್ವತೋಽಪಿ ವಾ ॥

i) ತಮಸ್ಸಿನಿಂದಲೂ (ಕಗ್ಗತ್ತಲೆಯಿಂದಲೂ) ಅಜ್ಞಾನದಿಂದಲೂ ಜಗತ್ತನ್ನು ಆವರಿಸುವುದರಿಂದಲೂ, ii) ವರ ಉತ್-ನ, ವರಗಳನ್ನು ಎತ್ತಿಕೊಡುವುದರಿಂದಲೂ, iii) ವರ ನ, ವರ-ಶ್ರೇಷ್ಠವಾದ, ನ–ಆನಂದವುಳ್ಳವನಾದ್ದರಿಂದಲೂ ಪರಮ ಮುಖ್ಯ ವೃತ್ತಿಯಿಂದ ಮುಖ್ಯಪ್ರಾಣನೂ 'ವರುಣ' ಶಬ್ದವಾಚ್ಯರಾಗಿದ್ದಾರೆ.

ಇಂಥಾ ಹರಿವಾಯುಗಳು ಧರಿಸುವ ವಸ್ತ್ರವು ಬಲಜ್ಞಾನಾನಂದಮಯವಾಗಿರುತ್ತದೆ. ಆದ್ದರಿಂದಲೇ ನಿಷ್ಕಲ್ಮಷವಾಗಿ ಪರಿಶುದ್ಧವಾಗಿರುತ್ತದೆ. ಅವರ ಸ್ಮರಣೆಯಿಂದ ನಾವು

ಧರಿಸುವ ವಸ್ತ್ರಗಳೂ ಪರಿಶುದ್ಧವಾಗುತ್ತವೆ. ಅಷ್ಟೇ ಅಲ್ಲದೆ ಅವರಿಬ್ಬರ ಸ್ಪೃಷ್ಟ್ಯಾದಿ ಸಕಲ ಕಾರ್ಯಗಳೂ ನಿರ್ದುಷ್ಟವಾಗಿರುತ್ತವೆ. ಅವರ ಸ್ಮರಣೆಯಿಂದ ನಮ್ಮ ಸಕಲ ಪಾಪಗಳೂ (ಅನೃತಾನಿ) ದೋಷಗಳೂ ಪರಿಶುದ್ಧವಾಗುತ್ತವೆ. ಆದರಿಂದ ಅವರಿಗೆ ಸಮರ್ಪಿಸಿದ ಸಕಲ ಪೂಜಾದಿ ಕರ್ಮಗಳೂ ಮಹಾಫಲಪ್ರದವಾಗುತ್ತವೆ ಎಂಬುದು ಈ ಮಂತ್ರದ ಮುಖ್ಯ ಭಾವಾರ್ಥ ಎಂದು ತಿಳಿಯಬೇಕು.

ii) 'ಯುವಾ ಸುವಾಸಾ' (ಋ. ಮಂ. ೩, ಸೂ. ೮, ಋ. ೪; ಅಷ್ಟ. ೩, ಅ. ೧, ವರ್ಗ ೩; ತೈ.ಬ್ರಾ. ೩/೬/೧/೩) ಎಂಬ ಮಂತ್ರಾರ್ಥ.

ಯುವಾ ಸುವಾಸಾ ಇತಿ ಮಂತ್ರಸ್ಯ ವಿಶ್ವಾಮಿತ್ರ ಋಷಿಃ। ತ್ರಿಷ್ಟುಪ್ ಛಂದಃ। ಯೂಪಸ್ಥೋ ವಿಷ್ಣುರ್ದೇವತಾ ವಸ್ತ್ರಸಮರ್ಪಣೇ ವಿನಿಯೋಗಃ ।

ಯುವಾ ಸುವಾಸಾಃ ಪರಿವೀತ ಆಗಾತ್
ಸ ಉ ಶ್ರೇಯಾನ್ ಭವತಿ ಜಾಯಮಾನಃ ।
ತಂ ಧೀರಾಸಃ ಕವಯ ಉನ್ನಯಂತಿ
ಸ್ವಾಧ್ಯೋ೩ ಮನಸಾ ದೇವಯಂತಃ ॥

ಪದಚ್ಛೇದ— ಯುವಾ, ಸುವಾಸಾಃ, ಪರಿವೀತಃ, ಆ ಅಗಾತ್, ಸಃ, ಊ, ಶ್ರೇಯಾನ್, ಭವತಿ, ಜಾಯಮಾನಃ, ತಂ, ಧೀರಾಸಃ, ಕವಯ, ಉತ್, ನಯಂತಿ, ಸ್ವಾಧ್ಯಃ, ಮನಸಾ, ದೇವಯಂತಃ ।

ಅನ್ವಯಾರ್ಥ—ಸಾಯಣರು ಈ ಮಂತ್ರವನ್ನು ಕಟ್ಟಿಗೆಯಿಂದ ಮಾಡಿದ ಯೂಪಕ್ಕೆ (ಯಜ್ಞದ ಕಂಭಕ್ಕೆ) ಅನ್ವಯಿಸಿ ಅರ್ಥ ಹೇಳಿದ್ದಾರೆ. ಅಂಥಾ ಯೂಪಕ್ಕಾಗಿ ಕಾಡಿನಿಂದ ತರುವ ಮರದ ತುಂಡನ್ನು ಎಂಟು ಮೂಲೆಗಳು ಬರುವಂತೆ ಕೆತ್ತಿ ನೆಡುವರು. ಅಲ್ಲದೆ ಅದನ್ನು ಹುಳ ಕೊರೆಯದಂತೆ ಇರಲು ಗಟ್ಟಿಯಾದ ಮರವನ್ನೇ ಆರಿಸುತ್ತಾರೆ. ಇದನ್ನೇ ಋಕ್ಕಿನಲ್ಲಿರುವ 'ಯುವಾ' ಶಬ್ದ ಸೂಚಿಸುತ್ತದೆ ಎಂದು ಸಾಯಣರು ಅರ್ಥಮಾಡುತ್ತಾರೆ.

ಯುವಾ-ಬಲವಾದ್ದು, ಎಂಟು ಮೂಲೆಗಳುಳ್ಳದ್ದು ಮೊದಲಾದ ಲಕ್ಷಣಗಳಿಂದ ಕೂಡಿದ, ಸುವಾಸಾಃ-ಒಳ್ಳೆಯ ಬಟ್ಟೆ ಅಥವಾ ಹಗ್ಗದಿಂದ ಕೂಡಿದ್ದು, ಪರಿವೀತಃ- ಆ ಹಗ್ಗದಿಂದ ಸುತ್ತಲ್ಪಟ್ಟದ್ದು ಆದ ಯೂಪವು, ಆಗಾತ್-ಬರುತ್ತದೆ. ಸಃ ಉ-ಅದೇ

(ಆ ಯೂಪವೇ), ಶ್ರೇಯಾನ್ ಜಾಯಮಾನಃ ಭವತಿ-(ಸಮಸ್ತ ಇತರ ಮರದ ತುಂಡು ಗಳಿಗಿಂತ) ಶ್ರೇಷ್ಠವಾಗಿರುತ್ತದೆ. ತಂ- ಆ ಯೂಪವನ್ನು, ಧೀರಾಸಃ-ಪ್ರಾಜ್ಞರು, ಮನಸಾ-ಮನಸ್ಸಿನಿಂದ, ಸ್ವಾಧ್ಯಃ-ಚೆನ್ನಾಗಿ ಧ್ಯಾನಿಸುವವರೂ ಆದ, ದೇವಯಂತಃ-ದೇವತೆಗಳನ್ನು ಇಚ್ಛಿಸುವವರೂ, ಕವಯಃ-ಪಂಡಿತರಾದ ಋತ್ವಿಜರು, ಉನ್ನಯಂತಿ-ಮೇಲಕ್ಕೆ ಎತ್ತುತ್ತಾರೆ.

ಭಾವಾರ್ಥ— ದೃಢವಾದ ಯೂಪವು ಎಂಟು ಮೂಲೆಗಳುಳ್ಳದ್ದಾಗಿ ಸುಲಕ್ಷಣೋಪೇತವಾಗಿರುತ್ತದೆ. ಅದನ್ನು ಸುತ್ತಲೂ ಬಟ್ಟೆಯಿಂದ ಬಿಗಿದು ಕಟ್ಟಿರುತ್ತಾರೆ. ಹೀಗೆ ಯಃಕಶ್ಚಿತ್ ಮರದ ತುಂಡೇ ಆದರೂ ಯಜ್ಞಕ್ಕೆ ಸಾಧನವಾದ್ದರಿಂದ ಬಹಳ ಶ್ರೇಷ್ಠತ್ವವನ್ನು ಪಡೆದಿದೆ. ಇಂತಹ ಯೂಪವನ್ನೇ ದೇವತೆಗಳನ್ನು ಯಾಗಕ್ಕೆ ಕರೆಯುವ ಋತ್ವಿಜರೂ ಧ್ಯಾನಾಸಕ್ತರೂ ಮೇಲಕ್ಕೆ ಎತ್ತುತ್ತಾರೆ.

ವಿಶೇಷಾರ್ಥ— ವಿಷ್ಣುಸಹಸ್ರನಾಮದಲ್ಲಿ 'ಯಜ್ಞಾಂಗೋ ಯಜ್ಞವಾಹನಃ' ಎಂದೂ 'ಯಜ್ಞಭುಗ್ ಯಜ್ಞಸಾಧನಃ' ಎಂದೂ ಹೇಳಿದಂತೆ ಯಜ್ಞಸಾಧನಗಳಲ್ಲೆಲ್ಲಾ ಸನ್ನಿಹಿತನಾಗಿದ್ದು ಆ ಶ್ರೀಹರಿಯೇ ಅವಕ್ಕೆ ಶ್ರೇಷ್ಠತ್ವವನ್ನು ತಂದುಕೊಡುತ್ತಾನೆ. ಅದರಂತೆ ಪೂಜಾಸಾಧನಗಳಾದ ವಸ್ತ್ರ, ಯಜ್ಞೋಪವೀತ, ಗಂಧಪುಷ್ಪಾದಿಗಳಲ್ಲೂ ಸನ್ನಿಹಿತನಾಗಿದ್ದು ಅವಕ್ಕೆ ಶ್ರೇಷ್ಠತ್ವವನ್ನು ತಂದುಕೊಡುತ್ತಾನೆ. ಅಷ್ಟೇ ಅಲ್ಲದೆ ಭಗವಂತನು ಜಡವಸ್ತುಗಳನ್ನು ಸ್ವೀಕರಿಸುವುದಿಲ್ಲ; ಅವುಗಳಲ್ಲಿರುವ ಭಗವತ್ಸ್ವರೂಪಗಳನ್ನು ತಿಳಿದು ಅವುಗಳನ್ನು ಸಮರ್ಪಿಸುವುದೇ ನಿಜವಾದ ಪೂಜೆ. ಈ ಪ್ರಮೇಯ ವಸ್ತ್ರಕ್ಕೂ ಅನ್ವಯಿಸುತ್ತದೆ, ಗಂಧಪುಷ್ಪಾದಿಗಳಿಗೂ ಅನ್ವಯಿಸುತ್ತದೆ. ಈ ಋಕ್ಕು ಈ ಪ್ರಮೇಯವನ್ನು ಬೋಧಿಸುತ್ತಲಿದೆಯೆಂದು ತಿಳಿಯಬೇಕು.

ii) 'ಅಭಿವಸ್ತ್ರಾ....' ಎಂಬ ಮಂತ್ರಾರ್ಥ. (ಋ. ೯ ಮಂ, ೯೭ ಸೂ, ೫೦ ಋಕ್; ಅಷ್ಟ ೭, ಅಧ್ಯಾ ೪, ೨೦ ವರ್ಗ)

ಅಭಿವಸ್ತ್ರೇತಿ ಮಂತ್ರಸ್ಯ ಕುತ್ಸ ಋಷಿಃ । ತ್ರಿಷ್ಟುಪ್ ಛಂದಃ । ಪವಮಾನ ಸೋಮಾಖ್ಯ ಮುಖ್ಯಪ್ರಾಣಾಂತರ್ಗತೋ ವಿಷ್ಣುರ್ದೇವತಾ। ವಸ್ತ್ರಸಮರ್ಪಣೇ ವಿನಿಯೋಗಃ ।

ಅಭಿ ವಸ್ತ್ರಾ ಸುವಸನಾನ್ಯರ್ಷಾಭಿ

ಧೇನೂಃ ಸುದುಘಾಃ ಪೂಯಮಾನಃ ।

ಅಭಿ ಚಂದ್ರಾ ಭರ್ತವೇ ನೋ ಹಿರಣ್ಯಾ-

ಭ್ಯಶ್ವಾನ್ ರಥಿನೋ ದೇವ ಸೋಮ ॥

ಪದವಿಭಾಗ— ಅಭಿ, ವಸ್ತ್ರಾ, ಸುವಸನಾನಿ, ಅರ್ಷ, ಅಭಿ, ಧೇನೂಃ, ಸುದುಘಾಃ, ಪೂಯಮಾನಃ, ಅಭಿ, ಚಂದ್ರಾ, ಭರ್ತವೇ, ನಃ, ಹಿರಣ್ಯಾ, ಅಭಿ, ಅಶ್ವಾನ್, ರಥಿನಃ, ದೇವ, ಸೋಮ ।

ಅನ್ವಯಾರ್ಥ — ಸೋಮ-ಎಲೈ ಸೋಮದೇವನೇ! ಸುವಸನಾನಿ–ಹೊದ್ದು ಕೊಳ್ಳಲು ತಕ್ಕಂಥಾ, ವಸ್ತ್ರಾ–ವಸ್ತ್ರಗಳನ್ನು, ಅಭ್ಯರ್ಷ–ಒದಗಿಸು. ಪೂಯಮಾನ–ಪರಿಶುದ್ಧಿ ಮಾಡುವ ನೀನು, ಸುದುಘಾಃ-ಚೆನ್ನಾಗಿ ಹಾಲು ಕರೆಯುವ, ಧೇನೂಃ–ಗೋವುಗಳನ್ನು, ಅಭಿ–ಒದಗಿಸು. ಭರ್ತವೇ-ನಮ್ಮ ಪೋಷಣೆಗಾಗಿ, ಚಂದ್ರಾ-ಆಹ್ಲಾದಕರವಾದ, ಹಿರಣ್ಯಾ-ಸುವರ್ಣಗಳನ್ನು, ನಃ-ನಮಗೆ, ಅಭಿ–ಒದಗಿಸು. ದೇವ-ಹೇ ಸ್ವಾಮಿ! ರಥಿನಃ–ರಥಯುಕ್ತವಾದ, ಅಶ್ವಾನ್–ಅಶ್ವಗಳನ್ನು, ಅಭಿ-ನಮಗೆ ಒದಗಿಸು.

ಭಾವಾರ್ಥ— ಎಲೈ ಸೋಮರಸಾಭಿಮಾನಿಯಾದ ಸೋಮದೇವನೇ! ನಮಗೆ ಧರಿಸಲು ಯೋಗ್ಯವಾದ ಉತ್ತಮ ವಸ್ತ್ರಗಳನ್ನು ಅನುಗ್ರಹಿಸು. ಪರಿಶುದ್ಧನಾದ ನೀನು ಯಥೇಷ್ಟವಾಗಿ ಹಾಲು ಕರೆಯುವ ಗೋವುಗಳನ್ನು ಒದಗಿಸು. ನಮ್ಮ ಪೋಷಣೆಗೆ ಬೇಕಾದ ಬಂಗಾರ ಬೆಳ್ಳಿ ಮೊದಲಾದ ಸಂಪತ್ತನ್ನು ಕರುಣಿಸು. ಹೇ ಸೋಮ, ನಮಗೆ ಓಡಾಡಲು ರಥಗಳನ್ನೂ ಕುದುರೆಗಳನ್ನೂ ಕರುಣಿಸು.

ವಿಶೇಷಾರ್ಥ— ಇಲ್ಲಿ ಕೇಳಿರುವುದೆಲ್ಲವೂ ಕೇವಲ ಕ್ಷಣಿಕವಾದ ಸಂಪತ್ತು. ಅದಕ್ಕಾಗಿ ದೀನತೆಯಿಂದ ಬೇಡಬೇಕಾದ ಅವಶ್ಯಕತೆಯೇನಿಲ್ಲ. ಆದ್ದರಿಂದ ಇವಕ್ಕೆ ಪ್ರತಿಯಾಗಿ ಜ್ಞಾನ-ಭಕ್ತಿ-ವೈರಾಗ್ಯ ವೇದವಿದ್ಯೆ ಇತ್ಯಾದಿ ಸಂಪತ್ತುಗಳನ್ನು ಕೊಡುವಂತೆ ಅರ್ಥ ಮಾಡಿಕೊಳ್ಳಬೇಕು. ಶ್ರೀಮದ್ವಾದಿರಾಜರು ಯುಕ್ತಿಮಲ್ಲಿಕಾದ ಫಲಸೌರಭದಲ್ಲಿ ಇಡೀ ನವಮ ಮಂಡಲವು ಮುಖ್ಯಪ್ರಾಣನ ಸ್ತೋತ್ರರೂಪವಾಗಿದೆಯೆಂದು ಹೇಳಿದ್ದಾರೆ. ಆ ಪ್ರಕಾರ ಇಲ್ಲಿ ಸೋಮ ಎರೆದರೆ ಮುಖ್ಯಪ್ರಾಣ ಎಂದೇ ಅರ್ಥ. ಅವರು ಒಲಿದರೆ ಮೋಕ್ಷವೇ ಸಿಗುವಾಗ ಬಟ್ಟೆ-ಬರೆ, ಗೋವು, ಮನೆ, ಇತ್ಯಾದಿ ಐಹಿಕಸಂಪತ್ತು ದೊರೆಯುವುದೇನಾಶ್ಚರ್ಯ! ನಮಗೆ ಪ್ರಾಪ್ತಿಯಿದ್ದಷ್ಟು ಸಿಕ್ಕೇ ಸಿಗುತ್ತದೆ. ಆದಕಾರಣ ಸಂಪತ್ತಿಗಾಗಿಯೇ ಮುಖ್ಯಪ್ರಾಣನನ್ನು ಪ್ರಾರ್ಥಿಸಬೇಕು.

iv) ಹಿರಣ್ಯರೂಪ ಎಂಬ ಮಂತ್ರಾರ್ಥ. (ಋ. ೨ ಮಂ, ೩೫ ಸೂ, ೧೦ ಋಕ್, ೨ ಅ, ೭ ಅಧ್ಯಾ, ೨೪ ವರ್ಗ)

ಹಿರಣ್ಯರೂಪ ಇತಿ ಮಂತ್ರಸ್ಯ ಗೃತ್ಸಮದ ಋಷಿಃ। ತ್ರಿಷ್ಟುಪ್ ಛಂದಃ। ಅಪಾಂ-ನಪಾತ್ ದೇವತಾ। ಆಭರಣಸಮರ್ಪಣೇ ವಿನಿಯೋಗಃ॥

ಹಿರಣ್ಯರೂಪಃ ಸ ಹಿರಣ್ಯಸಂದೃ-

ಗಪಾಂ ನಪಾತ್ ಸೇದು ಹಿರಣ್ಯವರ್ಣಃ।

ಹಿರಣ್ಯಯಾತ್ ಪರಿ ಯೋನೇರ್ನಿಷದ್ಯಾ

ಹಿರಣ್ಯದಾ ದದತ್ಯನ್ನಮಸ್ಮೈ॥

ಪದಗಳು— ಹಿರಣ್ಯರೂಪಃ, ಸಃ, ಹಿರಣ್ಯಸಂದೃಕ್, ಅಪಾಂ, ನಪಾತ್, ಸಃ, ಇತ್, ಊ, ಹಿರಣ್ಯವರ್ಣಃ, ಹಿರಣ್ಯಯಾತ್, ಪರಿ, ಯೋನೇಃ, ನಿಷದ್ಯ, ಹಿರಣ್ಯದಾಃ, ದದತಿ, ಅನ್ನಂ, ಅಸ್ಮೈ।

ಅನ್ವಯಾರ್ಥ— ಸಃ ಅಪಾಂನಪಾತ್-ಆ ಅಪಾಂನಪಾತ್ ಎಂಬ ದೇವತೆಯು, ಹಿರಣ್ಯರೂಪಃ-ಬಂಗಾರಮಯವಾದ ಶರೀರವುಳ್ಳವನು. (ರೂಪ್ಯತ ಇತಿ ರೂಪಂ-ಶರೀರಂ) ಅಥವಾ ಸರ್ವರಿಗೂ ಸುಖಕರವೂ ಸುಂದರವೂ ಆದ ಶರೀರವನ್ನು ಧರಿಸಿದವನು. ಹಿರಣ್ಯಸಂದೃಕ್-ಆಕರ್ಷಕವಾದ ಇಂದ್ರಿಯಗಳುಳ್ಳವನು (ಸಮ್ಯಕ್ ಪಶ್ಯಂತೀತಿ ಸಂದೃಶಃ ಇಂದ್ರಿಯಾಣಿ) ಅಥವಾ ಸುವರ್ಣಮಯವಾದ ಇಂದ್ರಿಯಗಳುಳ್ಳವನು. ಸೇದು-ಅವನೇ, ಹಿರಣ್ಯವರ್ಣಃ-ಬಂಗಾರದಂತೆ ಹೊಳೆಯುವ ಬಣ್ಣವುಳ್ಳವನೂ ಆಗಿ, ಹಿರಣ್ಯಯಾತ್ ಯೋನೇಃ ಪರಿ-ಸುವರ್ಣ (ಬಂಗಾರ)ಮಯವಾದ ಸ್ಥಾನದ ಮೇಲೆ, ನಿಷದ್ಯ-ಕುಳಿತು (ಪ್ರಕಾಶಿಸುತ್ತಾನೆ.) ಅಸ್ಮೈ-ಈತನಿಗೆ, ಹಿರಣ್ಯದಾಃ-ಬಂಗಾರವನ್ನು ಕೊಡುವ ಯಜಮಾನರು, ಅನ್ನಂ ಹವೀರೂಪವಾದ ಅನ್ನವನ್ನು, ದದತಿ-ಅರ್ಪಿಸುತ್ತಾರೆ.

ಭಾವಾರ್ಥ— ಅಪಾಂನಪಾತ್ ಎಂಬ ದೇವತೆಯು ಚಿನ್ನದ ಕಾಂತಿಯುಳ್ಳ ಶರೀರವುಳ್ಳವನೂ, ಆಕರ್ಷಕವಾದ ಇಂದ್ರಿಯಗಳುಳ್ಳವನೂ ಬಂಗಾರದ ಹೊಂಬಣ್ಣವುಳ್ಳವನೂ ಆಗಿರುವುದಲ್ಲದೆ ಸುವರ್ಣಮಯ ಸಿಂಹಾಸನದಲ್ಲಿ ಕುಳಿತು ಶೋಭಿಸುತ್ತಾನೆ. ಈ ದೇವತೆಯನ್ನುದ್ದೇಶಿಸಿ ಸುವರ್ಣದಕ್ಷಿಣೆಯನ್ನು ಕೊಡುವ ಯಾಗಾನುಷ್ಠಾತೃಗಳು (ಯಜಮಾನರು) ಹವಿಸ್ಸೆಂಬ ಅನ್ನವನ್ನು ಇವನಿಗೆ ಅರ್ಪಿಸುತ್ತಾರೆ.

ವಿಶೇಷಾರ್ಥ— "ಅಪಾಂನಪಾತ್" ಎಂಬುದು ಆ ಹೆಸರೇ ಸೂಚಿಸುವಂತೆ (ಅಪಾಂ-ನೀರಿನ) ನೀರಿನಲ್ಲಿ ಹುಟ್ಟಿದ ಒಂದು ಜಾತಿಯ ಅಗ್ನಿ. ಇದಕ್ಕೆ ಸಾಮಾನ್ಯವಾಗಿ

ಬಡಬಾಗ್ನಿ ಅಥವಾ ಬಡಬಾನಲ ಎಂದು ಲೌಕಿಕ ಸಾಹಿತ್ಯದಲ್ಲಿ ಪ್ರಸಿದ್ಧಿಯಿದೆ. ಅಪಾಂ-ನಪಾತ್ ಎಂಬುದು ವೈದಿಕಪ್ರಯೋಗ. ಈ ದೇವತೆ ಅಗ್ನಿಯೇ ಆದ್ದರಿಂದ ಅವನ ದೇಹವು ಸುವರ್ಣವುಳ್ಳದ್ದೆಂದು ಹೇಳಿರುವುದು ಯುಕ್ತವೇ ಆಗಿದೆ. ಅವನ ರೂಪದಂತೆ ಅವನ ಇಂದ್ರಿಯಗಳೂ ಬಂಗಾರದಂತೆ ಹೊಳೆಯುತ್ತಿರುತ್ತವೆ ಎಂದು ಸಾಯಣರು ವ್ಯಾಖ್ಯಾನ ಮಾಡಿದ್ದು ಉಚಿತವೇ ಆಗಿದೆ. ಈ ಬಡಬಾಗ್ನಿಯು ಸಮುದ್ರದಲ್ಲಿ ಹುಟ್ಟಿ ಆ ನೀರನ್ನೆಲ್ಲಾ ಸುಡುವುದೆಂದೂ ಜಲಚರಗಳನ್ನು ನಾಶಮಾಡುವುದೆಂದೂ ವರ್ಣನೆ ಸಾಹಿತ್ಯದಲ್ಲಿ ಬರುತ್ತದೆ.

'ಯೋ ದೇವಾನಾಂ ನಾಮಧಾ' ಎಂಬ ಶ್ರುತಿಯಂತೆ "ಅಪಾಂನಪಾತ್" ಎಂಬ ಹೆಸರೂ ಶ್ರೀಹರಿಗೂ ವಾಯುದೇವರಿಗೂ ಅಂತರ್ಯಾಮಿದೃಷ್ಟ್ಯಾ ಅನ್ವಯಿಸುತ್ತದೆ. ವಾಯುದೇವರು ಬಂಗಾರದ್ದೂ ಸ್ವರ್ಣಮಯ ಆಭರಣಗಳಿಗೂ ಮುಖ್ಯನಿಯಾಮಕ ರೆಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ ಅದರಂತೆ ಅವರೂ ಹಿರಣ್ಯರೂಪ ರಾಗಿದ್ದಾರೆಂದೂ ಅವರ ಅಂಗಾಂಗಗಳೆಲ್ಲ ಸುವರ್ಣದಂತೆ ಪರಿಶುದ್ಧವೂ ನಿಷ್ಕಲ್ಮಷವೂ ತೇಜೋಮಯವೂ ಆಗಿರುತ್ತದೆ. ಚತುರ್ಮುಖಬ್ರಹ್ಮನಿಗೆ 'ಹಿರಣ್ಯಗರ್ಭ' ಎಂಬ ಹೆಸರಿರುವಂತೆ ಇವರಿಗೂ ಆ ಹೆಸರಿದೆ. ವಾಯುದೇವರಿಗೇ ಹೀಗಿರುವಾಗ ಪರಮಾತ್ಮನ ವಿಷಯ ಹೇಳುವುದೇನಿದೆ? ಆದಕಾರಣ ಅಪಾಂನಪಾತ್‌ನಾಮಕ ಜಲಜಾತಾಗ್ನಿಯಲ್ಲಿ ಅಂತರ್ಗತರಾದ ಶ್ರೀಹರಿವಾಯುಗಳಿಗೂ ಈ ವಿಶೇಷಣಗಳು ಮುಖ್ಯವೃತ್ತಿಯಿಂದ ಅನ್ವಯಿಸುತ್ತವೆಯೆಂದು ತಿಳಿದುಕೊಂಡರೆ ಸಾಕು.

v) ಯಜ್ಞೋಪವೀತ ಎಂಬ ಮಂತ್ರಾರ್ಥ

ಈ ಮಂತ್ರವು ಬ್ರಹ್ಮೋಪನಿಷತ್ತಿನಲ್ಲಿ ಪಠಿತವಾಗಿದೆಯೆಂದು 'ನೃಸಿಂಹಪಾರಿಜಾತ' ಎಂಬ ಪ್ರಯೋಗಪುಸ್ತಕದಲ್ಲಿ ಹೇಳಿದೆ. ಅದರ ಅರ್ಥವನ್ನೂ ಅಲ್ಲೇ ಹೇಳಿದ್ದಾರೆ.

ಯಜ್ಞೋಪವೀತಮಿತ್ಯಸ್ಯ ಮಂತ್ರಸ್ಯ ಪರಬ್ರಹ್ಮ ಋಷಿಃ । ಪರಮಾತ್ಮಾ ದೇವತಾ। ತ್ರಿಷ್ಟುಪ್ ಛಂದಃ। ಯಜ್ಞೋಪವೀತಸಮರ್ಪಣೇ ವಿನಿಯೋಗಃ ।

ಯಜ್ಞೋಪವೀತಂ ಪರಮಂ ಪವಿತ್ರಂ
ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ
ಯಜ್ಞೋಪವೀತಂ ಬಲಮಸ್ತು ತೇಜಃ ॥

ಪದವಿಭಾಗ ಸುಲಭವಾಗಿದೆ.

ಅನ್ವಯಾರ್ಥ— ಯಜ್ಞೋಪವೀತಂ— ಯಜ್ಞ-ಯಜ್ಞನಾಮಕನಾದ ಶ್ರೀವಿಷ್ಣುವಿನ, ಉಪ-ಸಮೀಪಕ್ಕೆ, ವೀತಂ-ಒಯ್ಯುವಂಥಾ ದಾರದ ಎಳೆಯು, ಪರಮಂ ಪವಿತ್ರಂ-ಅತ್ಯಂತ ಪವಿತ್ರವಾದುದು, ಸರ್ವರನ್ನೂ ಪಾವನ ಮಾಡುವಂಥಾದ್ದು. ಪ್ರಜಾಪತೇಃ-ಚತುರ್ಮುಖಬ್ರಹ್ಮನಿಗೆ, ಯತ್-ಯಾವುದು, ಸಹಜಂ-ಸ್ವಾಭಾವಿಕವಾಗಿದೆಯೋ, (ಜನನಾರಭ್ಯವೇ ಇರುವುದೋ). ಪುರಸ್ತಾತ್-ಅನಾದಿಕಾಲದಿಂದ ಬಂದದ್ದೂ, ಆಯುಷ್ಯಂ-ಆಯುಸ್ಸನ್ನು ಹೆಚ್ಚಿಸುವಂಥಾದ್ದೂ, ಅಗ್ರ್ಯಂ-ಶ್ರೇಷ್ಠವಾದುದೂ, ಶುಭ್ರಂ-ಪರಿಶುದ್ಧವಾದುದೂ ಆಗಿದೆ ಇಂಥಾ ಹೇ ಯಜ್ಞೋಪವೀತವೇ ! ನೀನು, ಪ್ರತಿಮುಂಚ-ಪಾಪ, ಅವಿದ್ಯಾ, ಅಜ್ಞಾನಾದಿ ದೋಷಗಳನ್ನು ಪರಿಹಾರ ಮಾಡು. ಇಂಥಾ, ಯಜ್ಞೋಪವೀತಂ-ಜನಿವಾರವು, ಬಲಂ-ಬಲಪ್ರದವೂ (ಶ್ರೌತಸ್ಮಾರ್ತಕರ್ಮಾನುಷ್ಠಾನದಲ್ಲಿ ಅರ್ಹತೆಯನ್ನು ಕೊಡತಕ್ಕದ್ದೂ), ತೇಜಃ-ಬ್ರಹ್ಮವರ್ಚಸ್ಸನ್ನು ಕೊಡುವಂಥಾದ್ದೂ, ಅಸ್ತು ಆಗಲಿ.

ಭಾವಾರ್ಥ— ಯಜ್ಞೋಪವೀತವೆಂಬ ಮೂರು ಎಳೆಯ ಸೂತ್ರವು ನಮ್ಮನ್ನು ಯಜ್ಞನಾಮಕನಾದ ವಿಷ್ಣುವಿನ ಬಳಿಗೆ ಒಯ್ಯುತ್ತದೆ. ಈ ಯಜ್ಞೋಪವೀತವನ್ನು ಚತುರ್ಮುಖಬ್ರಹ್ಮನು ಅನಾದಿಪರಂಪರಾಪ್ರಾಪ್ತವಾದ ಸಂಪ್ರದಾಯದಂತೆ ಸೃಷ್ಟಿಯಾದಾಗಿನಿಂದಲೂ ಸ್ವಾಭಾವಿಕವಾಗಿ ಧರಿಸಿದ್ದಾನೆ. ಅದೇ ಅವನಿಗೆ ಶ್ರೇಷ್ಠತ್ವವನ್ನೂ, ಸಕಲ ವಿದ್ಯೆಗಳನ್ನು ಗ್ರಹಿಸಲು ಅಧಿಕಾರವನ್ನೂ ಕೊಟ್ಟಿತು. ಇಂಥಾ ಶ್ರೌತಸ್ಮಾರ್ತ ಸಕಲ ಕರ್ಮಗಳಿಗೂ ಅರ್ಹತೆಯನ್ನು ತಂದುಕೊಡುವ ಜನಿವಾರವನ್ನು ನಾನು ಧರಿಸುತ್ತೇನೆ. ಇದು ನನಗೆ ಸಕಲ ಕರ್ಮಗಳಿಗೆ ಅರ್ಹತೆಯನ್ನೂ ಕೊಡುವುದಲ್ಲದೆ ಬ್ರಹ್ಮವರ್ಚಸ್ಸನ್ನೂ ಕೊಡಲಿ ಎಂದು ಭಾವ.

vi) ಗಂಧದ್ವಾರಾಂ ... ಎಂಬ ಮಂತ್ರಾರ್ಥ

ಇದು ಶ್ರೀಸೂಕ್ತದಲ್ಲಿ ಒಂಬತ್ತನೇ ಮಂತ್ರ. ಶ್ರೀಸೂಕ್ತವು ವಸ್ತುತಃ ಅಥರ್ವಣ-ಸಂಹಿತೆಯಲ್ಲಿ ಪಠಿತವಾಗಿದ್ದರೂ, ಋಗ್ವೇದಸಂಹಿತೆಯಲ್ಲಿ ಪಂಚಮ ಮಂಡಲದ ಕಡೆಯಲ್ಲಿ (೪ನೇ ಅಷ್ಟಕದ ೪ನೇ ಅಧ್ಯಾಯದ ೩೪ನೇ ವರ್ಗವಾದ ಬಳಿಕ) 'ಪರಿಶಿಷ್ಟ'ರೂಪವಾಗಿ ಪಠಿತವಾಗಿದೆ.

ಋಷ್ಯಾದಿಗಳು— ಗಂಧದ್ವಾರಾಮಿತ್ಯಸ್ಯ ಮಂತ್ರಸ್ಯ ಆನಂದ ಕರ್ದಮ-ಶ್ರೀದ-ಚಿಕ್ಲೀತಾಃ ಶ್ರೀಪುತ್ರಾ ಋಷಯಃ । ಅನುಷ್ಟುಪ್ ಛಂದಃ । ಶ್ರೀರ್ದೇವತಾ । ಗಂಧ-ಸಮರ್ಪಣೇ ವಿನಿಯೋಗಃ ।

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್॥

ಪದವಿಭಾಗ - ಸುಲಭವಾಗಿದೆ.

ಅರ್ಥ - ಶ್ರೀಸೂಕ್ತಕ್ಕೆ ಸಾಯಣಭಾಷ್ಯವಂತೂ ಇದ್ದೇ ಇವೆ. ಶ್ರೀಮಧ್ವಾದಿರಾಜ ಸ್ವಾಮಿಗಳು ತಾವು ರಚಿಸಿರುವ 'ಶ್ರೀಶಗುಣದರ್ಪಣ'ವೆಂಬ ಲಕ್ಷ್ಮೀನಾರಾಯಣ ಸ್ತೋತ್ರದ ಪ್ರಾರಂಭದ ಎರಡು ಶ್ಲೋಕಗಳಲ್ಲಿ 'ಗಂಧದ್ವಾರಾಂ' ಎಂಬ ಮಂತ್ರದ ಅರ್ಥವನ್ನೇ ಅಳವಡಿಸಿದ್ದಾರೆ –

ಯಾ ಸುಗಂಧಾಸ್ಯನಾಸಾದಿ ನವದ್ವಾರಾಖಿಲೇನ ಯಾ ।
ದುರಾಧರ್ಷಾ ಸರ್ವಸಸ್ಯೋ—ದಯಾರ್ಥಂ ಯಾ ಕರೀಷಿಣೀ ॥ ೧ ॥
ಯಾ ನಿತ್ಯಪುಷ್ಟಾ ಸರ್ವಾಂಗೈಃ ಸೌಂದರ್ಯಾದಿಗುಣೈರಪಿ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಂ ॥ ೨ ॥

ವಿವರಣೆ : 'ಗಂಧದ್ವಾರಾಂ' ಎಂಬುದಕ್ಕೆ 'ಸುಗಂಧಾಸ್ಯನಾಸಾದಿ ನವದ್ವಾರಾ'– ಬಾಯಿ ಮೂಗು ಮೊದಲಾದ ನವದ್ವಾರಗಳೂ ಸುಗಂಧಮಯವಾಗಿರುತ್ತವೋ ಎಂದರ್ಥ. ದುರಾಧರ್ಷಾಂ ಎಂಬುದರ ವಿವರಣೆ 'ಅಖಿಲೇನ ಯಾ ದುರಾಧರ್ಷಾ' ಎಂದು. ಧೃಷ್ ಎಂಬ ಧಾತುವಿಗೆ ಹೆದರಿಸು, ಹಿಂಸಿಸು, ಮೈಮೇಲೆ ಬೀಳು ಅಥವಾ ಯುದ್ಧಕ್ಕೆ ನಿಲ್ಲು ಎಂದರ್ಥ. ಆದರಿಂದ ಧೃಷ್ಯ ಎಂದರೆ ಸೋಲುವಂಥಾ, ಹಿಂಸಿಸುವಂಥಾ, ಹೆದರಿಸಬಹುದಾದಂಥ ಎಂದರ್ಥ. ಆದಕಾರಣ ದುರಾಧರ್ಷಾಂ ಎಂದರೆ (ಯಾರಿಂದಲೂ) ಹೆದರಿಸಲು ಅಥವಾ ಸೋಲಿಸಲು, ಅಷ್ಟೇಕೆ ಮೈಮೇಲೆ ಬೀಳುವುದಕ್ಕೇ ಸಾಧ್ಯವಿಲ್ಲವೋ ಅಂಥಾವಳು ಎಂದರ್ಥ. ನಾರಾಯಣನನ್ನು ಬಿಟ್ಟು ಅವಳನ್ನು ಎದುರಿಸಲು ಬ್ರಹ್ಮರುದ್ರಾದಿ ಯಾವ ದೇವತೆಗಳಿಗಾಗಲಿ ಯಾವ ದೈತ್ಯದಾನವರಿಗಾಗಲಿ ಸಾಧ್ಯವಿಲ್ಲ. ಅಂಥಾ ಶಕ್ತಿಯುಳ್ಳವಳು ಎಂದರ್ಥ. ನಿತ್ಯಪುಷ್ಟಾಂ ಎಂಬುದರ ಭಾವವನ್ನು 'ಯಾ ನಿತ್ಯಪುಷ್ಟಾ ಸರ್ವಾಂಗೈಃ ಸೌಂದರ್ಯಾದಿ ಗುಣೈರಪಿ' ಎಂಬ ಅರ್ಧ ಶ್ಲೋಕ ವಿವರಿಸುತ್ತದೆ. ಆ ರಮಾದೇವಿಯ ಸರ್ವಾಂಗಗಳೂ ಅನಾದಿನಿತ್ಯಕಾಲದಲ್ಲಿ (ನಿತ್ಯವೂ) ಹೃಷ್ಟಪುಷ್ಟವಾಗಿ ರೋಗರುಜಿನಾದಿ ಯಾವ ಉಪದ್ರವವೂ ಇಲ್ಲದೆ ಸೌಂದರ್ಯಾದಿ ಗುಣಗಳಿಂದ ಕೂಡಿ ನಿತ್ಯತಾರುಣ್ಯೋಪೇತವಾಗಿರುತ್ತವೆ ಎಂದರ್ಥ. ಕರೀ(ಷಃ)ಷಂ ಎಂದರೆ ಕುರುಳು ಅಥವಾ ಬೆರಣಿ, ಒಣಗಿದ ಆಕಳ ಸೆಗಣಿ ಎಂದರ್ಥ. ಅದು ಉಳ್ಳವಳು ಕರೀಷಿಣೀ–ಗೋವುಗಳ ಒಣಗಿದ ಸೆಗಣಿ ಅಥವಾ ಕುರುಳು (ಬೆರಣಿ) ಉಳ್ಳವಳೆಂದು ಸಾಮಾನ್ಯಾರ್ಥ. ಇದರ

ವಿವರಣೆಯನ್ನು 'ಸರ್ವ ಸಸ್ಯೋದಯಾರ್ಥಂ ಯಾ ಕರೀಷಿಣೀ' ಎಂಬ ವಾಕ್ಯ ಮಾಡು-ತ್ತದೆ. ಸಸ್ಯಗಳು ಸೆಗಣಿಯ ಗೊಬ್ಬರದಿಂದ ಸಮೃದ್ಧವಾಗಿ ಬೆಳೆಯುತ್ತವಷ್ಟೆ. ಅದ-ಕಾರಣ ಸಸ್ಯಸಮೃದ್ಧಿಗಾಗಿ ಹೆಚ್ಚು ಗೋಮಯ (ಗೊಬ್ಬರ) ದೊರಕುವಂತೆ ದನಕರುಗಳು ಯಥೇಷ್ಟವಾಗಿರುವಂತೆ ಮಾಡಿ ಗೋಸಮೃದ್ಧಿಯನ್ನೂ ತನ್ಮೂಲಕ ಧನಧಾನ್ಯಗಳ ಸಮೃದ್ಧಿಯನ್ನೂ ಅನುಗ್ರಹಿಸುವಂಥಾವಳು ಎಂದು ಭಾವ. 'ಸರ್ವಭೂತಾನಾಂ ಈಶ್ವರೀಂ' ಎಂಬುದರ ಅರ್ಥ ಸ್ಪಷ್ಟವಾಗಿಯೇ ಇದೆ. ಭೂತಗಳು ಎಂದರೆ ಸಕಲ ಪ್ರಾಣಿಗಳು ಎಂದೂ ಪೃಥಿವಿ ಅಪ್ ತೇಜ ಆದಿ ಪಂಚಭೂತಗಳೆಂದೂ ಎರಡರ್ಥ. ಲಕ್ಷ್ಮೀದೇವಿ ಸಕಲ ಪ್ರಾಣಿಗಳಿಗೂ ಒಡೆಯಳಾಗಿರುವುದಲ್ಲದೆ ಪಂಚಭೂತಗಳಿಗೂ ನಿಯಾ-ಮಕಳು ಎಂದು ಅರ್ಥ. ತಾಂ ಶ್ರಿಯಂ–ಅಂಥಾ ಲಕ್ಷ್ಮೀದೇವಿಯನ್ನು, ಇಹ–ಇಲ್ಲಿ, (ಈ ಪೂಜಾಕಾಲದಲ್ಲಿ ಅಥವಾ ಈ ಪೂಜೆಯಲ್ಲಿ), ಉಪಹ್ವಯೇ–ಆಹ್ವಾನಿಸುತ್ತೇನೆ ಎಂದು ಈ ಮಂತ್ರಕ್ಕೆ ಅನ್ವಯಾರ್ಥ.

ಭಾವಾರ್ಥ— ಶ್ರೀಮಹಾಲಕ್ಷ್ಮೀದೇವಿಯ ಬಾಯಿ ಮೂಗು ಮೊದಲಾದ ನವ-ದ್ವಾರಗಳೂ ಸುಗಂಧಮಯವಾಗಿರುತ್ತವೆ. ಆಕೆ ಮಹಾಪರಾಕ್ರಮಶಾಲಿಯಾದ್ದರಿಂದ ಆಕೆಯನ್ನು ಎದುರಿಸಲು ಅಥವಾ ಸೋಲಿಸಲು ಯಾವ ದೈತ್ಯದಾನವರಿಗೂ ಶಕ್ಯವಿಲ್ಲ. (ಬ್ರಹ್ಮಾದಿಗಳಿಂದಲೂ ಅಂಥಾ ಹಮ್ಮಾಸಕ್ಕೇ ಹೋಗುವುದಿಲ್ಲ.) ಆಕೆ ನಿತ್ಯಯೌವನದಿಂದ ಕೂಡಿ ಸೌಂದರ್ಯ ಲಾವಣ್ಯಪೂರ್ಣಳಾಗಿ ದೃಢಕಾಯಳಾಗಿದ್ದರೂ ಲತೆಯಂತೆ ಕೋಮ-ಲಾಂಗಿಯಾಗಿರುತ್ತಾಳೆ. ಅವಳ ಅನುಗ್ರಹದಿಂದ ಗೋಧನವೂ ಧನಧಾನ್ಯಸಮೃದ್ಧಿಯೂ ಉಂಟಾಗುತ್ತದೆ. ಆಕೆಯು ಚರಾಚರಾತ್ಮಕವಾದ ಸಕಲ ಜಗತ್ತಿಗೂ (ನಾರಾಯಣನ ಅಧೀನಳಾಗಿ) ಒಡತಿಯಾಗಿದ್ದಾಳೆ. ಈ ಸಕಲ ಸಂಪತ್ತೂ ಅವಳಿಗೆ ಶ್ರೀಹರಿಯ ಕೃಪಾ-ಕಟಾಕ್ಷದಿಂದ (ಶ್ರಯತೇ ಹರಿಮಿತಿ ಶ್ರೀಃ ಎಂಬ ವ್ಯುತ್ಪತ್ತಿಯಿಂದ ಈ ಅರ್ಥ ಸಿದ್ಧ-ವಾಯಿತು) ಪ್ರಾಪ್ತವಾಯಿತು. ಇಂಥಾ ಶ್ರೀದೇವಿಯನ್ನು ನಾನು ಆಹ್ವಾನಿಸುತ್ತೇನೆ— ಎಂದು ತಾತ್ಪರ್ಯ.

vii) ಆಯನೇತೇ... ಎಂಬ ಋಗರ್ಥ.

(ಋ. ೧೦ ಮಂ, ೧೪೨ ಸೂ, ೮ ಋಕ್. ೮ ಅಷ್ಟ, ೭ ಅಧ್ಯಾ, ೩೦ ವ)

ಆಯನೇ ತೆ ಇತ್ಯಸ್ಯ ಸ್ತಂಬಮಿತ್ರ ಋಷಿಃ । ಅನುಷ್ಟುಪ್ ಛಂದಃ । ಅಗ್ನಿರ್-ದೇವತಾ । ಪುಷ್ಪಸಮರ್ಪಣೇ ವಿನಿಯೋಗಃ ।

ಆಯನೇ ತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥

ಈ ಸೂಕ್ತವು 'ಅಯಮಗ್ನೇ ಜರಿತಾ' ಎಂದು ಪ್ರಾರಂಭವಾಗುತ್ತದೆ. ಆ ಮಂತ್ರದಿಂದ 'ಅಗ್ನೇ' ಎಂಬ ಸಂಬೋಧನೆಯನ್ನು ಅನುವೃತ್ತಿ ಮಾಡಿಕೊಳ್ಳಬೇಕು.

ಅನ್ವಯಾರ್ಥ— ಅಗ್ನೇ-ಎಲೈ ಅಗ್ನಿಯೇ! ತೇ-ನಿನ್ನ, ಆಯನೇ-ಆಗಮನದಲ್ಲೂ (ಬರುವಿಕೆಯಲ್ಲೂ),, ಪರಾಯಣೇ-ಹಿಂದಿರುಗುವಿಕೆಯಲ್ಲೂ (ಹೊರಡುವುದರಲ್ಲೂ), ದೂರ್ವಾಃ-ಗರಿಕೆ ಮೊದಲಾದ ಸಸ್ಯಗಳು, ಪುಷ್ಪಿಣೀಃ-ಹೂವುಗಳುಳ್ಳವಾಗಿ, (ಸೊಂಪಾಗಿ), ರೋಹಂತು-ಬೆಳೆಯಲಿ. ಹಾಗೆಯೇ, ಹ್ರದಾಶ್ಚ-ಜಲಾಶಯಗಳೂ, ನೀರಿನಿಂದ ತುಂಬಿರಲಿ. ಪುಂಡರೀಕಾಣಿ-ಕಮಲಗಳು ಬೆಳೆಯಲಿ. ಇಮೇ ಗೃಹಾಃ-ಈ ನಮ್ಮ ಮನೆಗಳು, ಸಮುದ್ರಸ್ಯ-ಸಮುದ್ರದಂತೆ ಯಾವಾಗಲೂ ತುಂಬಿರಲಿ. (ಸಾಯಣರು 'ನ ದಕ್ಷ್ಯತಾಂ' ದಹಿಸಲ್ಪಡದಿರಲಿ ಎಂದು ಅರ್ಥ ಮಾಡಿದ್ದಾರೆ; ಅದಕ್ಕಿಂತ 'ತುಂಬಿರಲಿ, ತುಂಬಿ ತುಳುಕಾಡುತ್ತಿರಲಿ' ಎಂಬ ಅರ್ಥವು ಹೆಚ್ಚು ಅರ್ಥವತ್ತಾಗಿದೆ.)

ಭಾವಾರ್ಥ— ಹೇ ಅಗ್ನಿಯೇ! ನೀನು ಬಂದರಾಗಲಿ ಹೊರಟುಹೋದರಾಗಲಿ ನಮ್ಮ ಮನೆಗೆ ಯಾವ ಅನಿಷ್ಟವೂ ಆಗದಿರಲಿ. ತೃಣಾದಿ ಸಸ್ಯಗಳು ಸಮೃದ್ಧವಾಗಿ ಬೆಳೆದು ಆನಂದದಾಯಕವಾಗಿರಲಿ. ಕೆರೆ ಕೊಳ ಭಾವಿ ಎಲ್ಲವೂ ಸದಾ ನೀರಿನಿಂದ ತುಂಬಿ ಸಮುದ್ರದಂತೆ ತುಂಬಿ ತುಳುಕಾಡುತ್ತಿರಲಿ ಎಂದು ಸಾಮಾನ್ಯಾರ್ಥ.

ವಿಶೇಷಾರ್ಥ— ಶ್ರೀಮದಾಚಾರ್ಯರು ಪ್ರತಿಯೊಂದು ವೇದವಾಕ್ಯಕ್ಕೂ ಮೂರು ಅರ್ಥಗಳಿವೆಯೆಂದು ಹೇಳಿ ಅದನ್ನು ನಲವತ್ತು ಸೂಕ್ತಗಳಿಗೆ ಅನ್ವಯಿಸಿ ತೋರಿಸಿಕೊಟ್ಟಿದ್ದಾರೆ. ಅದರಂತೆ ಒಂದು ಅರ್ಥವು ಅಗ್ನ್ಯಾದಿ ಆಯಾ ದೇವತಾಪರವಾಗಿರುತ್ತದೆ. ಎರಡನೇದು ತತ್ತದ್ದೇವತಾಂತರ್ಗತ ತತ್ತನ್ನಾಮಕನಾದ ಶ್ರೀಹರಿಗೆ ಅನ್ವಯಿಸುತ್ತದೆ. ಮೂರನೆಯದು ಅಧ್ಯಾತ್ಮಾರ್ಥ. ಅದರಂತೆ ಪ್ರಸಕ್ತ ಮಂತ್ರಕ್ಕೆ ಅಗ್ನಿಪರವಾದ ಒಂದು ಅರ್ಥವಾದರೆ ಅಗ್ನಿನಾಮಕ ಶ್ರೀ ವಿಷ್ಣುಪರವಾಗಿಯೂ ಒಂದರ್ಥವಿದೆ. ಅದರಂತೆ ಅಗ್ನಿಯ ಅಂತರ್ಗತನಾದ ಅಗ್ನಿನಾಮಕ ವಿಷ್ಣುವಿಗೆ ಅನ್ವಯಿಸುತ್ತದೆ. ಆ ಪರಮಾತ್ಮನ ಆವಾಹನೆಯಿಂದಲೂ (ಆಯನೇ), ವಿಸರ್ಜನೆ (ಪರಾಯಣೇ)ಯಿಂದಲೂ ಅನುಗ್ರಹವೇ ಆಗುತ್ತದೆ. ಆದರಿಂದ ಸಕಲ ಸಮೃದ್ಧಿಯೂ ಆಗುತ್ತದೆಯೆಂದು ತಿಳಿಯಬೇಕು. ಅಧ್ಯಾತ್ಮರೀತಿ ಅರ್ಥದಲ್ಲಿ ಅವನ ಪ್ರಸಾದದಿಂದ ಸ್ವರೂಪಾನಂದಾವಿರ್ಭಾವವೆಂಬ ಮೋಕ್ಷಸುಖವೇ ದೊರಕುತ್ತದೆ ಎಂದು ತಿಳಿದುಕೊಳ್ಳಬಹುದು.

ಇಲ್ಲಿಗೆ ಪೂಜಾಕಲಾಪದಲ್ಲಿ ಪ್ರಸಕ್ತವಾದ ಋಙ್ಮಂತ್ರಗಳ ಅರ್ಥ ಮುಗಿಯಿತು.

ದೇವರ ಮೂರ್ತಿಗಳಲ್ಲಿ ತತ್ತ್ವನ್ಯಾಸ ಮಾತೃಕಾನ್ಯಾಸಗಳು

ನಮ್ಮ ದೇಹದಲ್ಲಿ ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ಹೇಗಿರುವುವೋ ಹಾಗೆಯೇ ನಾವು ಪೂಜಿಸುವ ರಾಮ-ಕೃಷ್ಣಾದಿ ಪ್ರತಿಮೆಗಳಿಗೂ ಕಣ್ಣು ಕಿವಿ ಮೊದಲಾದ ಇಂದ್ರಿಯಗಳಿರುವುವಷ್ಟೆ. ನಮ್ಮ ಕಣ್ಣು ಕಿವಿ ಮೊದಲಾದ ಸಕಲೇಂದ್ರಿಯಗಳೂ ಆಯಾ ಅಂಗಗಳ ತತ್ತ್ವಾಭಿಮಾನಿಗಳ ಪ್ರೇರಣೆಯಿಂದಲೇ ಕೆಲಸ ಮಾಡುವುವೆಂಬುದು ಶಾಸ್ತ್ರಸಿದ್ಧ ವಿಚಾರ. ಇದರಂತೆ ಮೂರ್ತಿ(ಪ್ರತಿಮೆ)ಗಳ ಕಣ್ಣು ಕಿವಿ ಮೊದಲಾದ ಅಂಗಗಳಿದ್ದರೂ ಅವುಗಳಲ್ಲಿ ಭಗವತ್ಸಾನ್ನಿಧ್ಯವುಂಟಾಗುವುದಕ್ಕಾಗಿ ನಮ್ಮ ದೇಹದಲ್ಲಿ ಜಪ ಮಾಡಿಕೊಳ್ಳುವಾಗ ಹೇಗೆ ತತ್ತ್ವನ್ಯಾಸ ಮಾತೃಕಾನ್ಯಾಸ ಮಾಡಿಕೊಳ್ಳುವೆವೋ ಹಾಗೆ ಪ್ರತಿಮೆಗಳಲ್ಲೂ ಮಾತೃಕಾನ್ಯಾಸ-ತತ್ತ್ವನ್ಯಾಸಗಳನ್ನು ಮಾಡಿದರೆ ಆ ಪ್ರತಿಮೆಯು ಸಕಲೇಂದ್ರಿಯಗಳಲ್ಲೂ ಭಗವತ್ಸಾನ್ನಿಧ್ಯವುಂಟಾಗುತ್ತವೆ. ಅನೇಕ ಪ್ರತಿಮೆಗಳು ಇದ್ದ ಪಕ್ಷದಲ್ಲಿ ಒಂದು ಪ್ರತಿಮೆಗೆ ನ್ಯಾಸ ಮಾಡಿದರೇ ಸಾಕು, ಎಲ್ಲ ಪ್ರತಿಮೆಗಳಿಗೂ ಮಾಡಬೇಕಾಗಿಲ್ಲವೆಂದು ಪೂಜಾಕಲ್ಪಲತಾ ಗ್ರಂಥದಲ್ಲಿ ಹೇಳಿದೆ. (ಶ್ರೀ ಪ್ರಭಂಜನರ 'ಪದ್ಯಮಾಲಾ', ದ್ವಿ.ಸಂ. 1988, ಪಾದಟಿಪ್ಪಣಿ, ಪುಟ ೪೯ ೫೦)

ಅಲ್ಲದೆ ಪ್ರತಿಮೆಗಳಲ್ಲಿ ಮೊದಲು ಮಾತೃಕಾನ್ಯಾಸ ಮಾಡಿ ಅನಂತರ ತತ್ತ್ವನ್ಯಾಸ ಮಾಡಬೇಕು. ಪೂಜೆ ಮುಗಿದ ಬಳಿಕ ಇದಕ್ಕೆ ವಿರುದ್ಧವಾಗಿ ಮೊದಲು ತತ್ತ್ವನ್ಯಾಸ ಮಾಡಿ ಅನಂತರ ಮಾತೃಕಾನ್ಯಾಸ ಮಾಡಬೇಕು. (ಅದೇ ಗ್ರಂಥದಲ್ಲಿ ೪೯ ನೇ ಪುಟದ 86 ಟಿಪ್ಪಣಿ ನೋಡಿ.)

ಸೂಚನೆ— ಯದ್ಯಪಿ ಹೀಗೆ ವಿಧಿಯಿದ್ದರೂ ಎಲ್ಲರಿಗೂ ಪ್ರತಿನಿತ್ಯ ಪ್ರತಿಮೆಗಳಲ್ಲಿ ತತ್ತ್ವನ್ಯಾಸ-ಮಾತೃಕಾನ್ಯಾಸಗಳನ್ನು, ತಥಾಪಿ ಈಗಿನ ವಾತಾವರಣದಲ್ಲಿ, ಮಾಡುವುದು ಅಸಾಧ್ಯಪ್ರಸಂಗವೇ ಎನಿಸುತ್ತದೆ. ಕಡೆಯ ಪಕ್ಷ ಯುಗಾದಿ ಪಾಡ್ಯ, ವಿಜಯದಶಮಿ, ಬಲಿಪಾಡ್ಯಮಿ ಇಂಥಾ ದಿನಗಳಲ್ಲಾದರೂ ಮಾಡುವುದು ಉತ್ತಮ, ಅದೂ ಸಾಧ್ಯವಿಲ್ಲದಿದ್ದರೆ ಪ್ರತಿಮೆಗಳನ್ನು ಹೊಸದಾಗಿ ತಂದಾಗ ಅವಕ್ಕೆ ಪಂಚಗವ್ಯಾದಿಗಳಿಂದ ಶುದ್ಧಿ ಮಾಡಿ 'ಅಗ್ನ್ಯುತ್ತಾರಣಾದಿ' ಸಂಸ್ಕಾರಗಳನ್ನು ಮಾಡುವ ಸಂದರ್ಭದಲ್ಲಾದರೂ ಈ ನ್ಯಾಸಗಳನ್ನು ಅವಶ್ಯ ಮಾಡಲೇಬೇಕು. ಆಗಲೂ ಮಾಡದಿದ್ದರೆ ಆ ಪ್ರತಿಮೆಗಳು ಆಟದ ಬೊಂಬೆಗಳಿಗೆ ಸಮಾನವೇ ಆಗುತ್ತವೆ. ಅವುಗಳಲ್ಲಿ ಭಗವತ್ಸಾನ್ನಿಧ್ಯವೇ ಇರುವುದಿಲ್ಲ.

ಪ್ರತಿಮೆಗಳಲ್ಲಿ ಮೂಲಮಂತ್ರದ ನ್ಯಾಸ— ತಂತ್ರಸಾರದಲ್ಲಿ (೨ ಅ, ೧೧ ಶ್ಲೋ.) "ಮೂಲಮಂತ್ರಸ್ಯ ಚಾಂಗಾನಾಂ ನ್ಯಾಸಃ ಸ್ನಾನಾದನಂತರಮ್ । ಪ್ರತಿಮಾಯಾಂ ಸನ್ನಿಧಿಕೃತ್...." ಎಂದು ಹೇಳಿದ್ದಾರೆ. ಇದಕ್ಕೆ ಸ್ನಾನ ಮಾಡಿಸಿದ (ಅಭಿಷೇಕ ಮಾಡಿದ) ಬಳಿಕ ಪ್ರತಿಮೆಯಲ್ಲಿ ಮೂಲಮಂತ್ರದ, ಎಂದರೆ ನಾರಾಯಣಾಷ್ಟಾಕ್ಷರದ ವರ್ಣಗಳಿಂದ ನ್ಯಾಸ ಮಾಡಿದರೆ ಆ ಪ್ರತಿಮೆಯಲ್ಲಿ ಭಗವತ್ಸಾನ್ನಿಧ್ಯವುಂಟಾಗುತ್ತದೆ ಎಂದು ಹೇಳಿದೆ.

ಈ ನ್ಯಾಸವನ್ನು ಎಲ್ಲ ಪ್ರತಿಮೆಗಳಿಗೂ ಮಾಡಬಹುದಲ್ಲದೆ ಅದು ಸುಲಭವೂ ಆಗಿರುವುದರಿಂದ ಅದನ್ನು ಮುಂದೆ ತೋರಿಸಿಕೊಡುವೆವು. ಅದಕ್ಕೆ ಮುಂಚೆಯೇ ಹೇಳಬೇಕಾದ ಕೆಲವು ವಿಷಯಗಳಿರುವುದರಿಂದ ಅವನ್ನು ಮೊದಲೇ ತಿಳಿಸುವೆನು.

ನ್ಯಾಸವು ಮೂರು ವಿಧವಾಗಿದೆ— ತಂತ್ರಸಾರದಲ್ಲಿ ಈ ನ್ಯಾಸವು ಸೃಷ್ಟಿ, ಸ್ಥಿತಿ, ಲಯ ವಿಧಾನಗಳೆಂದು ಮೂರು ವಿಧವಾಗಿದೆಯೆಂದು (೪ ಅ. ೧೩೧ ಶ್ಲೋ.) ಹೇಳಿದೆ. ಮೊದಲನೆಯ ವರ್ಣದಿಂದ ಆರಂಭ ಮಾಡಿ ಕಡೆಯ ವರ್ಣದ ವರೆಗೆ ಕ್ರಮವಾಗಿ ಮಾಡುತ್ತಾ ಹೋಗುವುದಕ್ಕೆ "ಸೃಷ್ಟಿವಿಧಾನ" ಎಂದು ಹೆಸರು. ನ್ಯಾಸ ಮಾಡಬೇಕಾದ ಅಂಗಗಳಲ್ಲಿಯೇ ಕಡೆಯ ಭಾಗದಿಂದ ಆರಂಭಿಸಿ ಮೊದಲಿನವರೆಗೆ ಮಂತ್ರವರ್ಣಗಳನ್ನು ನ್ಯಾಸ ಮಾಡಿಕೊಳ್ಳುತ್ತಾ ಹೋದರೆ ಅದಕ್ಕೆ "ಲಯವಿಧಾನ" ಎಂದು ಹೆಸರು. ಇವೆರಡಕ್ಕೂ ವಿರುದ್ಧವಾಗಿ ಮೊದಲನೆಯ ನಾಲ್ಕು ಅಕ್ಷರಗಳನ್ನು ಸೃಷ್ಟಿವಿಧಾನದಂತೆ ಕ್ರಮವಾಗಿ ಮಾಡಿ ಕಡೆಯ ನಾಲ್ಕು ವರ್ಣಗಳನ್ನು ಲಯದಲ್ಲಿ ಮಾಡಿದಂತೆ ವ್ಯುತ್ಕ್ರಮದಿಂದ (ತಲೆಕೆಳಗಾಗಿ) ಮಾಡಿದರೆ—ಎಂದರೆ ಅರ್ಧವನ್ನು ಕ್ರಮವಾಗಿಯೂ ಉಳಿದರ್ಧವನ್ನು ವ್ಯುತ್ಕ್ರಮವಾಗಿಯೂ ಮಾಡುವುದಕ್ಕೆ "ಸ್ಥಿತಿವಿಧಾನ" ಎಂದು ಹೆಸರು.

ನ್ಯಾಸ ಮಾಡಬೇಕಾದ ಅಂಗಗಳು— ನಾರಾಯಣಾಷ್ಟಾಕ್ಷರದ ಎಂಟು ವರ್ಣಗಳನ್ನು ಈ ಎಂಟು ಸ್ಥಾನಗಳಲ್ಲಿ ನ್ಯಾಸ ಮಾಡಿಕೊಳ್ಳಬೇಕೆಂದು ತಂತ್ರಸಾರದಲ್ಲಿ (೧ ಅಧ್ಯಾಯ ೩೬-೭ ಶ್ಲೋ.) ಅಪ್ಪಣೆ ಕೊಡಿಸಿದ್ದಾರೆ.

ಪಜ್ಜಾನುನಾಭಿಹೃದಯ—ವಾಙ್ನಾಸಾನೇತ್ರಕೇಷು ಚ ।
ಅಷ್ಟಾಕ್ಷರಾಣಾಂ ನ್ಯಾಸಃ ಸ್ಯಾತ್ ....

(ಅರ್ಥ) ಅಷ್ಟಾಕ್ಷರಾಣಾಂ—ಮೂಲಮಂತ್ರದ ಎಂಟು ಅಕ್ಷರಗಳನ್ನು; ೧ ಪತ್-ಪಾದ, ೨. ಜಾನು-ಮಂಡಿ, ೩. ನಾಭಿ-ಹೊಕ್ಕಳು, ೪. ಹೃದಯ, ೫. ವಾಕ್ (ಬಾಯಿ, ವದನ), ೬. ನಾಸಾ (ಮೂಗು), ೭. ನೇತ್ರ (ಕಣ್ಣು), ೮. ಕೇಷು ಚ-ತಲೆ (ನೆತ್ತಿ)ಯಲ್ಲಿ —ಹೀಗೆ ಎಂಟು ಅಂಗಗಳಲ್ಲಿ; ನ್ಯಾಸಃ ಸ್ಯಾತ್—ನ್ಯಾಸ ಮಾಡಿಕೊಳ್ಳಬೇಕು.

ಸೃಷ್ಟ್ಯಾದಿ ಕ್ರಮಗಳು— ಈ ಎಂಟು ಸ್ಥಾನಗಳನ್ನು ತಂತ್ರಸಾರದಲ್ಲಿ ನಿರ್ದೇಶಿಸುವಾಗ ಆರೋಹಣ (ಕೆಳಗಿನಿಂದ ಮೇಲಿನ) ಕ್ರಮದಲ್ಲೇ ಹೇಳಿರುವುದರಿಂದ ಇಲ್ಲಿ ಹೇಳಿದಂತೆಯೇ ಮಾಡಿದರೆ ಅದು "ಲಯಕ್ರಮ"ವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಶ್ಲೋಕದಲ್ಲಿ ಹೇಳಿದ ಕ್ರಮಕ್ಕೆ ತಲೆಕೆಳಗಾಗಿ (ವ್ಯುತ್ಕ್ರಮದಿಂದ) ಮಾಡಿದರೆ ಅದು "ಸೃಷ್ಟಿಕ್ರಮ"ವಾಗುತ್ತದೆ. ಹೇಗೆಂದರೆ ೧. ತಲೆ, ೨. ಕಣ್ಣು, ೩. ಮೂಗು, ೪. ಬಾಯಿ (ವದನ), ೫. ಹೃದಯ, ೬. ನಾಭಿ, ೭. ಜಾನು (ಮಂಡಿ), ೮. ಪಾದಗಳು—ಹೀಗೆ ಮಾಡಿಕೊಂಡರೆ ಸೃಷ್ಟಿನ್ಯಾಸವಾಗುತ್ತದೆ. ಇನ್ನು ಮೊದಲ ನಾಲ್ಕನ್ನು ಸೃಷ್ಟಿಕ್ರಮದಂತೆ ಮಾಡಿ, ಕಡೆಯ ನಾಲ್ಕನ್ನು ವ್ಯುತ್ಕ್ರಮ (ಲಯಕ್ರಮ) ದಿಂದ ಮಾಡಿದರೆ ಅದು "ಸ್ಥಿತಿ-

ಕ್ರಮ"ವಾಗುತ್ತದೆ. ಹೇಗೆಂದರೆ ೧. ತಲೆ, ೨. ಕಣ್ಣು, ೩. ಮೂಗು, ೪. ಬಾಯಿ (ಇವು ನಾಲ್ಕು ಸೃಷ್ಟಿಕ್ರಮ); ೫. ಪಾದ, ೬. ಜಾನು, ೭. ನಾಭಿ, ೮. ಹೃದಯ (ಈ ನಾಲ್ಕು ವ್ಯುತ್ಕ್ರಮ). ಹೀಗೆ ಮಾಡಿದರೆ "ಲಯಕ್ರಮ."

ಯಾರು ಯಾರು ಯಾವ ಯಾವ ಕ್ರಮ ಮಾಡಬೇಕು— ನ್ಯಾಸದಲ್ಲಿರುವ ಮೂರು ಕ್ರಮಗಳನ್ನು ತಿಳಿಸಿದ ಬಳಿಕ ಶ್ರೀಮದಾಚಾರ್ಯರು ಯಾರು ಯಾರು ಯಾವ ಕ್ರಮವನ್ನು ಮಾಡಬೇಕೆಂಬುದನ್ನೂ ಅಲ್ಲೇ (೪ ಅ. ೧೩೨ ಶ್ಲೋ.) ಹೀಗೆ ಹೇಳಿದ್ದಾರೆ—

ಸ್ಥಿತ್ಯಂತಾ ಏವ ವರ್ಣಾನಾಂ ಶ್ರೇಷ್ಠಾ ಏವಂ ಚತುರ್ದಶ ।
ಸಂಹೃತ್ಯಂತಾ ಮೋಕ್ಷಿಣಾಂ ಚ ಏಕವಿಂಶತಿರೇವ ವಾ ।

ಈ ವಾಕ್ಯದ ಅರ್ಥವು ಸ್ವಲ್ಪ ಕ್ಲಿಷ್ಟವಾದ್ದರಿಂದ ಛಲಾರಿ ಟೀಕೆಯಲ್ಲಿ ಸ್ಪಷ್ಟವಾಗಿ ಅರ್ಥವಾಗುವ ಈ ಪ್ರಮಾಣಾಂತರ ಶ್ಲೋಕವನ್ನು ಉದಹರಿಸಿದ್ದಾರೆ—

ಸ್ಥಿತಿನ್ಯಾಸೋ ಗೃಹಸ್ಥಾನಾಂ ಉತ್ಪತ್ತಿರ್ಬ್ರಹ್ಮಚಾರಿಣಾಮ್ ।
ಯತೀನಾಂ ಸಂಹೃತಿನ್ಯಾಸೋ ವನಸ್ಥಾನಾಂ ತಥೈವ ಚ ।

(ಅರ್ಥ) ಗೃಹಸ್ಥರಿಗೆ ಸ್ಥಿತಿನ್ಯಾಸವೇ ಶ್ರೇಷ್ಠ. ಬ್ರಹ್ಮಚಾರಿಗಳಿಗೆ ಸೃಷ್ಟಿನ್ಯಾಸವೂ, ಯತಿಗಳಿಗೂ ವಾನಪ್ರಸ್ಥರಿಗೂ ಲಯನ್ಯಾಸವೂ ಶ್ರೇಷ್ಠ. ಇದು ಒಂದೊಂದು ಸಲಕ್ಕೆ (ಒಂದೊಂದಾವರ್ತಿ) ನ್ಯಾಸ ಮಾಡಿಕೊಳ್ಳುವುದಕ್ಕೆ ಅನ್ವಯಿಸುತ್ತದೆ.

ತಂತ್ರಸಾರದಲ್ಲಿ ಗೃಹಸ್ಥರು ಈ ನ್ಯಾಸವನ್ನು ಚತುರ್ದಶ (ಹದಿನಾಲ್ಕು) ಸರಿಯವರೆಗೂ ಮಾಡಿಕೊಳ್ಳಬಹುದು; ಹದಿನಾಲ್ಕು ಆವರ್ತಿ ಮಾಡಿಕೊಂಡರೆ 'ಶ್ರೇಷ್ಠ' ಎನ್ನುತ್ತಾರೆ. ಗೃಹಸ್ಥರೂ ಸೃಷ್ಟಿ, ಸ್ಥಿತಿ, ಲಯ ಮೂರು ನ್ಯಾಸಗಳನ್ನೂ ಪುನಃಪುನಃ ಮಾಡಿಕೊಳ್ಳುತ್ತಾ ಹದಿನಾಲ್ಕನೇ ಆವೃತ್ತಿ ಸ್ಥಿತಿಯೇ ಬರುವಂತೆ ಮಾಡಿಕೊಳ್ಳಬೇಕೆಂಬುದು ತಂತ್ರಸಾರದ ಅಭಿಪ್ರಾಯ.

ಹದಿನಾಲ್ಕು ಸಾರಿ ನ್ಯಾಸ ಮಾಡಿಕೊಳ್ಳುವುದು ದುಸ್ಸಾಧ್ಯವಾದ್ದರಿಂದ ನಾಲ್ಕು ನ್ಯಾಸಗಳನ್ನು ಮಾಡಿಕೊಂಡು ಸ್ಥಿತಿಯಲ್ಲೇ ನಿಲ್ಲಿಸಬಹುದು. ಹೇಗೆಂದರೆ ಸ್ಥಿತಿ, ಲಯ, ಸೃಷ್ಟಿ (ಮಾಡಿದರೆ ಮೂರು ಬಂದುವು, ಕೊನೆಗೆ) ಸ್ಥಿತಿಕ್ರಮ ಮಾಡಿಕೊಂಡು ಮುಗಿಸಬಹುದು. ಹೀಗೆಯೇ ಬ್ರಹ್ಮಚಾರಿಗಳು ಸೃಷ್ಟಿಯಿಂದ ಆರಂಭಿಸಿ ಸ್ಥಿತಿ-ಲಯಗಳನ್ನು ಮಾಡಿ ಪುನಃ ಸೃಷ್ಟಿನ್ಯಾಸ ಮಾಡಿದರೆ ಸೃಷ್ಟಿಯೇ ನಾಲ್ಕನೆಯದಾಗುತ್ತದೆ.

ಆದರೆ ಸಂನ್ಯಾಸಿಗಳು, ತಂತ್ರಸಾರದಂತೆ ಇಪ್ಪತ್ತೊಂದು ನ್ಯಾಸ ಮಾಡಿಕೊಂಡು ಕೊನೆಯದು ಲಯವೇ ಆಗುವಂತೆ ಮೂರು ನ್ಯಾಸಗಳನ್ನು ಏಳಾವರ್ತಿ ಮಾಡಿಕೊಳ್ಳಬೇಕೆಂದು ಹೇಳಿದೆ. (ಇದಕ್ಕೂ ಹೆಚ್ಚು ವಿಚಾರ ನಮಗೆ ಇಲ್ಲಿ ಅಪ್ರಸಕ್ತವಾದ್ದರಿಂದ ಹೇಳಿಲ್ಲ.)

ವರ್ಣಗಳ ನ್ಯಾಸ ಹೇಗೆ— ನಾರಾಯಣಾಷ್ಟಾಕ್ಷರ ಮಂತ್ರದಲ್ಲಿ ಎಂಟು ಅಕ್ಷರಗಳಿವೆಯಷ್ಟೆ. ಈ ಎಂಟು ಅಕ್ಷರಗಳಿಗೆ ವಿಶ್ವಾದಿ ಎಂಟು ಭಗವದ್ರೂಪಗಳು ವಾಚ್ಯವಾಗಿವೆ. ಆದಕಾರಣ ಪ್ರತಿಯೊಂದು ವರ್ಣದ ಜೊತೆಯೂ ತದ್ವಾಚ್ಯ ಭಗವದ್ರೂಪವನ್ನೂ ಸೇರಿಸಿ ಹೇಳಬೇಕು. ಮತ್ತು ಎಂಟು ವರ್ಣಗಳಿಗೂ ಹಿಂದೆ ಪ್ರಣವವನ್ನೂ ಮುಂದೆ ಬಿಂದುವನ್ನೂ ಸೇರಿಸಬೇಕಲ್ಲದೆ ನಮಃ ಶಬ್ದಾಂತವಾಗಿ ಹೇಳಬೇಕು. ಆದಕಾರಣ ಭಗವನ್ಮೂರ್ತಿಗಳ ಹೆಸರು ಚತುರ್ಥ್ಯಂತವಾಗುತ್ತದೆ. ಅಂತೂ ಒಟ್ಟಿನಲ್ಲಿ ಎಂಟು ವರ್ಣಗಳು—

೧. ಓಂ ಓಂ ವಿಶ್ವಾಯ ನಮಃ — ೨. ಓಂ ನಂ ತೈಜಸಾಯ ನಮಃ

೩. ಓಂ ಮೋಂ ಪ್ರಾಜ್ಞಾಯ ನಮಃ — ೪. ಓಂ ನಾಂ ತುರ್ಯಾಯ ನಮಃ

೫. ಓಂ ರಾಂ ಆತ್ಮನೇ ನಮಃ — ೬. ಓಂ ಯಂ ಅಂತರಾತ್ಮನೇ ನಮಃ

೭. ಓಂ ಣಾಂ ಪರಮಾತ್ಮನೇ ನಮಃ — ೮. ಓಂ ಯಂ ಜ್ಞಾನಾತ್ಮನೇ ನಮಃ

ಎಂದಾಗುತ್ತವೆ.

ನ್ಯಾಸ ಮಾಡುವಾಗ ಬೆಟ್ಟುಗಳ ಉಪಯೋಗ— ನೆತ್ತಿಯಲ್ಲಿ ಬಲಗೈ ನಡು ಬೆಟ್ಟಿನಿಂದಲೂ, ಕಣ್ಣುಗಳಲ್ಲಿ ತರ್ಜನೀ ನಡುಬೆಟ್ಟುಗಳಿಂದಲೂ, ಮೂಗಿನಲ್ಲಿ ಅನಾಮಿಕ-ಹೆಬ್ಬೆಟ್ಟುಗಳಿಂದಲೂ, ಬಾಯಲ್ಲಿ ತರ್ಜನೀ ಹೆಬ್ಬೆಟ್ಟುಗಳನ್ನು ಜೋಡಿಸಿಕೊಂಡೂ, ಹೃದಯದಲ್ಲಿ ಕಿರಿಬೆರಳು ಹೆಬ್ಬೆಟ್ಟುಗಳನ್ನು ಜೋಡಿಸಿಕೊಂಡೂ ನ್ಯಾಸ ಮಾಡಬೇಕು. ನಾಭಿಯಲ್ಲಿ ನ್ಯಾಸ ಮಾಡುವಾಗ ನಾಲ್ಕೂ ಬೆಟ್ಟುಗಳ ಬುಡದಲ್ಲಿ ಹೆಬ್ಬೆಟ್ಟನ್ನು ಇಟ್ಟುಕೊಂಡು (ಎಂದರೆ ಪೀಠಮುದ್ರೆಯಿಂದ) ಮಾಡಬೇಕು. ಜಾನು (ಮಂಡಿ)ಗಳಲ್ಲೂ ಪಾದಗಳಲ್ಲೂ ಐದೂ ಬೆಟ್ಟುಗಳನ್ನು ಜೋಡಿಸಿಕೊಂಡು ನ್ಯಾಸ ಮಾಡಬೇಕು. (ನ್ಯಾಸ ಮಾಡುತ್ತಾ ಮಾಡುತ್ತಾ ಹೋದರೆ ಈ ಬೆಟ್ಟುಗಳು ತಮಗೆ ತಾವೇ ಜೋಡಿಸಿಕೊಂಡು ಅನುವಾಗುತ್ತವೆ. ಪ್ರಾರಂಭದಲ್ಲಿ ಕೆಲವು ತಿಂಗಳು ಮಾತ್ರ ಕಷ್ಟವಾಗಿ ತೋರುವುದು ಸಹಜವಾಗಿಯೇ ಇದೆ.)

ಸೂಚನೆ— ನ್ಯಾಸಕ್ರಮದ ಜೊತೆ ನ್ಯಾಸಸ್ಥಾನಗಳೂ, ವರ್ಣಾಕ್ಷರ-ತದ್ವಾಚ್ಯ ಭಗವನ್ಮೂರ್ತಿಗಳೂ ಅಲ್ಲದೆ ನ್ಯಾಸ ಮಾಡಬೇಕಾದ ಬೆಟ್ಟುಗಳೂ ಒಟ್ಟಿಗೆ ನೆನಪಾಗಬೇಕು. ಅದಕಾರಣ ನ್ಯಾಸಕ್ರಮವು ಚೆನ್ನಾಗಿ ಅಭ್ಯಾಸವಾಗುವವರೆಗೆ ಸೃಷ್ಟಿ (ಬ್ರಹ್ಮಚಾರಿಗಳು), ಅಥವಾ ಸ್ಥಿತಿ (ಗೃಹಸ್ಥರು) ಒಂದು ನ್ಯಾಸವನ್ನೇ ಮಾಡುವುದು ಉತ್ತಮ. ಒಂದು ನ್ಯಾಸಕ್ರಮ ಅಭ್ಯಾಸವಾದಮೇಲೆ ಮಿಕ್ಕ ಎರಡು ಸುಲಭವಾಗಿಯೇ ತಿಳಿದುಹೋಗುತ್ತವೆ.

ಮೂರ್ತಿಗಳಲ್ಲಿ ಮೂಲಮಂತ್ರದ ವರ್ಣಗಳ ನ್ಯಾಸ— ನಮ್ಮ ದೇಹದಲ್ಲಿ ನ್ಯಾಸ ಮಾಡಿಕೊಳ್ಳುವಾಗ ನಮ್ಮ ಬಲಗೈಯಿನ ಬೆಟ್ಟುಗಳನ್ನು ಉಪಯೋಗಿಸುತ್ತೇವೆ. ಆದರೆ ಭಗವನ್ಮೂರ್ತಿಗಳ (ಅಥವಾ ಬೇರೆ ಯಾವ ದೇವತಾಮೂರ್ತಿಯ) ಅಂಗಗಳಲ್ಲಿ (ನ್ಯಾಸ-ಸ್ಥಾನಗಳಲ್ಲಿ) ವರ್ಣಗಳನ್ನು ನ್ಯಾಸ ಮಾಡುವಾಗ ತುಲಸೀದಳದಿಂದ ಅಥವಾ ಹೂವಿನಿಂದ

ಅದೂ ಇಲ್ಲದಿದ್ದರೆ ತುಲಸೀಕಾಷ್ಠದಿಂದ ಮಾಡಬೇಕು; ನಮ್ಮ ಬೆಟ್ಟುಗಳನ್ನು ಉಪಯೋಗಿಸಿ ಮಾಡಬಾರದು.

ಕೆಳಗೆ ಮೂರೂ ವಿಧ ನ್ಯಾಸಕ್ರಮಗಳನ್ನು ಬೇರೆಬೇರೆಯಾಗಿ ತೋರಿಸಿದೆ. ಮೊದಲು ಕೆಲವು ತಿಂಗಳು ಒಂದೊಂದು ಕ್ರಮವನ್ನೇ ಮಾಡುತ್ತಾ ಮಾಡುತ್ತಾ ಪರಿಚಯ ಮಾಡಿಕೊಳ್ಳಬೇಕು ಒಂದೊಂದು ಕ್ರಮ ರೂಢಿಸಿದ ಬಳಿಕ ಇನ್ನೊಂದು ಕ್ರಮಕ್ಕೆ ಹೋಗಬೇಕು. ಮೂರೂ ಚೆನ್ನಾಗಿ ಅಭ್ಯಾಸವಾದಮೇಲೆ ತಮ್ಮ ತಮ್ಮ ಆಶ್ರಮಕ್ಕೆ ತಕ್ಕಂತೆ ಸೃಷ್ಟ್ಯಂತವಾಗಿ ಅಥವಾ ಸ್ಥಿತ್ಯಂತವಾಗಿ ನಾಲ್ಕು ನ್ಯಾಸಗಳನ್ನು ಮಾಡುವ ಅಭ್ಯಾಸ ಇಟ್ಟುಕೊಳ್ಳಬಹುದು.

ಸೃಷ್ಟಿನ್ಯಾಸ

ಕ್ರಮ	ನ್ಯಾಸಸ್ಥಾನ	ಬೆಟ್ಟು	ಮಂತ್ರ
1	ತಲೆ	3*	ಓಂ ಓಂ ವಿಶ್ವಾಯ ನಮಃ
2	ಕಣ್ಣುಗಳು	2 + 3	ಓಂ ನಂ ತೈಜಸಾಯ ನಮಃ
3	ಮೂಗಿನ ಪಾರ್ಶ್ವಗಳು	1 + 4	ಓಂ ಮೋಂ ಪ್ರಾಜ್ಞಾಯ ನಮಃ
4	ಬಾಯಿ	2 + 1	ಓಂ ನಾಂ ತುರ್ಯಾಯ ನಮಃ
5	ಹೃದಯ	1 + 5	ಓಂ ರಾಂ ಆತ್ಮನೇ ನಮಃ
6	ನಾಭಿ	$\frac{2-5}{1}$	ಓಂ ಯಂ ಅಂತರಾತ್ಮನೇ ನಮಃ
7	ಜಾನುಗಳು	1 – 5	ಓಂ ಣಾಂ ಪರಮಾತ್ಮನೇ ನಮಃ
8	ಪಾದಗಳು	1 – 5	ಓಂ ಯಂ ಜ್ಞಾನಾತ್ಮನೇ ನಮಃ

ಸೂಚನೆ— ನಮ್ಮ ದೇಹದಲ್ಲಿ ನ್ಯಾಸ ಮಾಡುವಾಗ ಮಾತ್ರ ಬೆಟ್ಟುಗಳನ್ನು ಉಪಯೋಗಿಸಬೇಕು. ಪ್ರತಿಮೆಗಳಲ್ಲಿ ಮಾಡುವಾಗ ತುಲಸಿಯಿಂದಲೋ ಹೂವಿಂದಲೋ ತುಲಸೀಕಾಷ್ಠದಿಂದಲೋ ಮಾಡಬೇಕು.

* ಈ ಸಂಖ್ಯೆಗಳು ಬಲಗೈಯಲ್ಲಿನ ಹೆಬ್ಬೆಟ್ಟುಗಳಿಂದ ಆರಂಭಿಸಿ ಕ್ರಮವನ್ನು ತೋರಿಸುತ್ತವೆ. 1. ಹೆಬ್ಬೆಟ್ಟು, 2. ತರ್ಜನಿ, 3. ನಡುಬೆಟ್ಟು, ಇತ್ಯಾದಿ. $\frac{2-5}{1}$ ಎಂದರೆ ತರ್ಜನ್ಯಾದಿ ನಾಲ್ಕು ಬೆಟ್ಟುಗಳ ಕೆಳಗೆ ಹೆಬ್ಬೆಟ್ಟು ಇಟ್ಟುಕೊಳ್ಳಬೇಕು ಎಂದರ್ಥ. 1–5 ಎಂದರೆ ಐದೂ ಬೆರಳುಗಳನ್ನು ಸೇರಿಸಿ ನ್ಯಾಸಮಾಡಬೇಕೆಂದರ್ಥ.

ಸ್ಥಿತಿನ್ಯಾಸ

ಕ್ರಮ	ನ್ಯಾಸಸ್ಥಾನ	ಬೆಟ್ಟು	ಮಂತ್ರ
1	ನೆತ್ತಿ	3	ಓಂ ಓಂ ವಿಶ್ವಾಯ ನಮಃ
2	ಕಣ್ಣುಗಳು	2 + 3	ಓಂ ನಂ ತೈಜಸಾಯ ನಮಃ
3	ಮೂಗಿನ ಪಕ್ಕಗಳು	4 + 1	ಓಂ ಮೋಂ ಪ್ರಾಜ್ಞಾಯ ನಮಃ
4	ಬಾಯಿ	1 + 2	ಓಂ ನಾಂ ತುರ್ಯಾಯ ನಮಃ
5	ಪಾದಗಳು	1 — 5	ಓಂ ರಾಂ ಆತ್ಮನೇ ನಮಃ
6	ಜಾನುಗಳು	1 — 5	ಓಂ ಯಂ ಅಂತರಾತ್ಮನೇ ನಮಃ
7	ನಾಭಿ	$\frac{2 - 5}{1}$	ಓಂ ಣಾಂ ಪರಮಾತ್ಮನೇ ನಮಃ
8	ಹೃದಯ	1 + 5	ಓಂ ಯಂ ಜ್ಞಾನಾತ್ಮನೇ ನಮಃ

ಲಯನ್ಯಾಸ

1	ಪಾದಗಳು	1 — 5	ಓಂ ಓಂ ವಿಶ್ವಾಯ ನಮಃ
2	ಜಾನುಗಳು	1 — 5	ಓಂ ನಂ ತೈಜಸಾಯ ನಮಃ
3	ನಾಭಿ	$\frac{2 - 5}{1}$	ಓಂ ಮೋಂ ಪ್ರಾಜ್ಞಾಯ ನಮಃ
4	ಹೃದಯ	1 + 5	ಓಂ ನಾಂ ತುರ್ಯಾಯ ನಮಃ
5	ಬಾಯಿ	1 + 2	ಓಂ ರಾಂ ಆತ್ಮನೇ ನಮಃ
6	ಮೂಗಿನ ಪಕ್ಕಗಳು	1 + 4	ಓಂ ಯಂ ಅಂತರಾತ್ಮನೇ ನಮಃ
7	ಕಣ್ಣುಗಳು	2 + 3	ಓಂ ಣಾಂ ಪರಮಾತ್ಮನೇ ನಮಃ
8	ನೆತ್ತಿ	3	ಓಂ ಯಂ ಜ್ಞಾನಾತ್ಮನೇ ನಮಃ

ಸೂಚನೆ— ಮೇಲಿನ ಮೂರೂ ನ್ಯಾಸಕ್ರಮವನ್ನು ಗಮನಿಸಿದರೆ ಕೇವಲ ನ್ಯಾಸಸ್ಥಾನಗಳು ಬೇರೆಬೇರೆಯಾಗುವುವೇ ಹೊರತು ಮಂತ್ರವರ್ಣಗಳ ಕ್ರಮವಾಗಲಿ ಬೆಟ್ಟುಗಳಾಗಲಿ ಬೇರೆಯಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈ ಮೂಲಮಂತ್ರದ ವರ್ಣನ್ಯಾಸವನ್ನು ಕೇವಲ ವಿಷ್ಣುಮೂರ್ತಿಗಳಿಗೆ ಮಾತ್ರವಲ್ಲದೇ ಇತರ ದೇವತೆಗಳ ಪ್ರತಿಮೆಗಳಲ್ಲೂ ಮಾಡಬಹುದು; ಆ ನಾರಾಯಣ ಸರ್ವರಲ್ಲೂ ಅಂತರ್ಯಾಮಿಯಾಗಿ ಇದ್ದೇ ಇರುವವನಲ್ಲವೆ. ಈ ನ್ಯಾಸದಿಂದ ಭಗವತ್ಸಾನ್ನಿಧ್ಯವುಂಟಾಗುತ್ತದೆಯೆಂಬುದು 'ಪ್ರತಿಮಾಯಾಮಾತ್ಮನಿ ಚ ನ್ಯಾಸೋಽಯಂ ಸನ್ನಿಧಾನ-

ಕೃತ್'— ಈ ನ್ಯಾಸವು ತನ್ನ ದೇಹದಲ್ಲೂ ಪ್ರತಿಮೆಯಲ್ಲೂ ಭಗವತ್ಸಾನ್ನಿಧ್ಯಕಾರಕವಾಗಿದೆ ಎಂಬ ತಂತ್ರಸಾರವಾಕ್ಯದಿಂದ (೪ ಅ. ೧೪೭ ಶ್ಲೋ.) ಸಿದ್ಧವಾಗುತ್ತದೆ.

ಪೂಜೆ ಮುಗಿದ ಮೇಲೆ ನ್ಯಾಸಕ್ರಮ

ಪೂಜೆ ಆರಂಭಿಸುವಾಗ ಹೇಗೆ ಮಾತೃಕಾನ್ಯಾಸ-ತತ್ವನ್ಯಾಸಗಳನ್ನೂ ಮೂಲಮಂತ್ರದ ವರ್ಣನ್ಯಾಸವನ್ನೂ ಮಾಡುವೆವೋ ಅದೇ ರೀತಿ (ಆದರೆ ಪ್ರಾರಂಭದಲ್ಲಿ ಮಾಡಿದ್ದಕ್ಕೆ ವ್ಯುತ್ಕ್ರಮವಾಗಿ ಅಥವಾ ತಲೆಕೆಳಕಾಗಿ) ಪೂಜೆ ಮುಗಿದ ಮೇಲೂ ನ್ಯಾಸವನ್ನು ಮಾಡಬೇಕು. ಕೇವಲ ಸೃಷ್ಟಿಕ್ರಮ ಮಾಡಿದವರು ಕೊನೆಯಲ್ಲಿ ಲಯಕ್ರಮ ಮಾಡಿ ಉಪಸಂಹಾರ ಮಾಡಬೇಕು. ಕೇವಲ ಸ್ಥಿತಿಕ್ರಮ ಮಾಡಿ ಆರಂಭ ಮಾಡಿದವರು ಮುಗಿಸುವಾಗ ಪಾದದಿಂದ ಆರಂಭಿಸಿ ಹೃದಯಕ್ಕೆ ಬಂದು ಅನಂತರ ಶಿರಸ್ಸಿನಿಂದಾರಂಭಿಸಿ ಮುಖದಲ್ಲಿ (ಬಾಯಲ್ಲಿ) ನಿಲ್ಲಿಸಿ ಮುಗಿಸಬೇಕು. ಹೀಗೆಯೇ ಮೂರ್ತಿಗಳಲ್ಲಿ ಮಾತೃಕಾನ್ಯಾಸ-ತತ್ವನ್ಯಾಸಗಳನ್ನು ಮೊದಲುಮೊದಲು ಮಾಡಿದ್ದರೆ ಮುಗಿಸುವಾಗ ಮೊದಲು ತತ್ವನ್ಯಾಸ ಮಾಡಿ ಆಮೇಲೆ ಮಾತೃಕಾನ್ಯಾಸ ಮಾಡಿ ಸಮಾಪ್ತಿ ಮಾಡಬೇಕು. (ಜಪದ ಅನುಷ್ಠಾನಕಾಲದಲ್ಲಿ ಪ್ರಾರಂಭದಲ್ಲಿ ಮೊದಲು ತತ್ವನ್ಯಾಸ ಮಾಡಿ ಅನಂತರ ಮಾತೃಕಾನ್ಯಾಸ ಮಾಡಬೇಕು. ಇದಕ್ಕೆ ಪ್ರತಿಯಾಗಿ ಸಮಾಪ್ತಿ ಮಾಡುವಾಗ ಮೊದಲು ಮಾತೃಕಾನ್ಯಾಸ ಮಾಡಿ ಕೊನೆಗೆ ತತ್ವನ್ಯಾಸ ಮಾಡಿ 'ಯಸ್ಯ ಸ್ಮೃತ್ಯಾ ಚ .. ....' ಮಾಡಬೇಕು. ವೃದ್ಧಸಂಪ್ರದಾಯ ಹೀಗೆಯೇ ಬಂದಿರುವುದರಿಂದ ನಾವು ಹಾಗೆಯೇ ಮಾಡಬೇಕು. ಆಗಲೇ ಅದು ಧರ್ಮ ಎನಿಸಿಕೊಂಡು ಭಗವತ್ಪ್ರೀತಿಗೆ ಕಾರಣವಾಗುತ್ತದೆ. ನಮಗೆ ತಿಳಿದಂತೆ ಮಾಡಿದರೆ ಅಹಿತವೇ ಆಗುತ್ತದೆ ಎಂದು ಹೇಳಿ ಈ ವಿಚಾರವನ್ನು ಇಲ್ಲಿಗೆ ಮುಗಿಸುವೆವು.)

ದೇವಪೂಜೆಯ ಅಂಗವಾಗಿ

ವಿಷ್ಣುವಿನ ಆಯುಧಗಳ ಮತ್ತು ಆಭರಣಗಳ ಪೂಜೆ

ಇದಕ್ಕೆ ಆಧಾರ— ಭಗವಂತನಿಗೆ ಗಂಧಾಕ್ಷತೆಗಳನ್ನು ಸಮರ್ಪಿಸಿ ತುಳಸೀ ಪುಷ್ಪಗಳಿಂದ ಅರ್ಚನೆ ಮಾಡಿದ ಬಳಿಕ ಭಗವಂತನ ಚಕ್ರಾದ್ಯಾಯುಧಗಳನ್ನೂ ಕೌಸ್ತುಭಾದಿ ಆಭರಣಗಳನ್ನೂ ಭಗವಂತನಂತೆಯೇ ಪೂಜಿಸಬೇಕೆಂದು ಟೀಕಾರಾಯರು ಪದ್ಯಮಾಲಾದಲ್ಲಿ ಹೇಳಿದ್ದಾರೆ ಭಗವಂತನನ್ನು ಪೂಜಿಸುವುದೇನೋ ಯುಕ್ತವಾದದ್ದು, ಆದರೆ ಅವನ ಆಯುಧಗಳನ್ನು ಪೂಜಿಸುವುದರಲ್ಲೇನು ಅರ್ಥವಿದೆ? ಎಂಬ ಸಂದೇಹ ಬಂದರೆ ಅದರ ಪರಿಹಾರಕ್ಕಾಗಿಯೇ ಟೀಕಾರಾಯರು ಆ ಆಯುಧಗಳ ಮತ್ತು ಆಭರಣಗಳ ಸ್ವರೂಪವನ್ನೂ ತಿಳಿಸಿಕೊಡುತ್ತಾರೆ. ಭಗವಂತನಂತೆ ಅವನ ಆಯುಧಾದಿಗಳೂ ಅಪ್ರಾಕೃತವಾದು-

ವಲ್ಲದೆ ಅವಕ್ಕೆಲ್ಲ ರಮಾ-ಬ್ರಹ್ಮಾದಿಗಳೇ ಅಭಿಮಾನಿಗಳಾದ್ದರಿಂದ ಭಗವಂತನನ್ನು ಪೂಜಿಸುವಂತೆ ಅವನ ಆಯುಧಗಳನ್ನೂ ಆಭರಣಗಳನ್ನು ಪೂಜಿಸುವುದು ಯುಕ್ತವಾಗಿಯೇ ಇದೆ ಎಂದು ತಿಳಿಯಬೇಕು.

ಟೀಕಾರಾಯರ ಹೇಳಿಕೆ— 'ತತಶ್ಚಕ್ರಾಯುಧಾದೀನಿ ಪೂಜಯೇತ್ ಕ್ರಮಶೋ ದಶ ।' (ಅರ್ಥ) ತತಃ-ಅಮೇಲೆ (ಎಂದರೆ ಗಂಧ ಪುಷ್ಪ ತುಳಸ್ಯಾದಿಗಳನ್ನು ಅರ್ಚಿಸಿದ ಬಳಿಕ), ಚಕ್ರಾಯುಧಾದೀನಿ-ಚಕ್ರಾಯುಧವೇ ಮೊದಲಾದ, ದಶ-ಹತ್ತನ್ನು (ಹತ್ತು ಆಯುಧಗಳನ್ನು), ಕ್ರಮಶಃ-ಕ್ರಮವಾಗಿ, ಅರ್ಚಯೇತ್-ಪೂಜಿಸಬೇಕು. (ತಾತ್ಪರ್ಯ) ಭಗವಂತನನ್ನು ಗಂಧಪುಷ್ಪಾದಿಗಳಿಂದ ಪೂಜೆ ಮಾಡಿದ ಬಳಿಕ ಆವನ ಚಕ್ರಾದಿ ಹತ್ತು ಅಯುಧಗಳಿಗೂ ಪೂಜೆ ಮಾಡಬೇಕೆಂದು ಭಾವ.

ಹತ್ತು ಆಯುಧಗಳೂ ಅವುಗಳ ಅಭಿಮಾನಿದೇವತೆಗಳೂ — ಪೂಜಿಸಬೇಕಾದ ಹತ್ತು ಭಗವಂತನ ಆಯುಧಗಳು ಯಾವುವೆಂದರೆ ಹೇಳುತ್ತಾ ಅವುಗಳ ಅಭಿಮಾನಿ-ದೇವತೆಗಳನ್ನೂ ನಿರ್ದೇಶ ಮಾಡುತ್ತಾರೆ —

ದುರ್ಗಾ ಚಕ್ರಾಧಿದೇವೀ ಸ್ಯಾತ್ ಶ್ರೀಶ್ಚ ಶಂಖಾಧಿದೇವತಾ ॥ ೮೨ ॥

೧) ಚಕ್ರವು ನೀಲಿಬಣ್ಣದ್ದಾಗಿರುವುದರಿಂದ ತಮೋಭಿಮಾನಿಯಾದ ದುರ್ಗಾ-ದೇವಿಯೇ ಅದಕ್ಕೆ ದೇವತೆ. ೨) ಶಂಖವು ಬೆಳ್ಳಗಿರುವುದರಿಂದ ಅದಕ್ಕೆ ಸತ್ವಾಭಿಮಾನಿಯಾದ ಶ್ರೀದೇವಿಯೇ ದೇವತೆ)

ವಾಯುರ್ಗದಾಧಿದೇವಃ ಸ್ಯಾದ್ ಭೂಮಿ ಪದ್ಮಾಭಿಮಾನಿನೀ ।
ದುರ್ಗೈವ ಖಡ್ಗದೇವೀ ಸ್ಯಾ—ಚ್ಛಾರ್ಙ್ಗಂ ಚೈವ ಸರಸ್ವತೀ ॥ ೮೩ ॥

೩) ವಿಷ್ಣುವಿನ ಗದೆಗೆ ಕೌಮೋದಕೀ ಎಂದು ಹೆಸರು. ಅದಕ್ಕೆ ಬಲಾಭಿಮಾನಿಯಾದ ವಾಯುದೇವರೇ ದೇವತೆ. ೪) ಪದ್ಮದ ಬಣ್ಣ ಕೆಂಪಾಗಿರುವುದರಿಂದ ರಜೋಭಿ-ಮಾನಿಯಾದ ಭೂದೇವಿಯೇ ಅದಕ್ಕೆ ದೇವತೆ. ೫) ಖಡ್ಗವೂ ನೀಲಿಬಣ್ಣವಾಗಿರುವುದರಿಂದ ಅದಕ್ಕೂ ತಮೋಭಿಮಾನಿಯಾದ ದುರ್ಗಾದೇವಿಯೇ ದೇವತೆ. ೬) ಶಾರ್ಙ್ಗ ಎಂಬುದು ವಿಷ್ಣುವಿನ ಧನುಸ್ಸಿನ ಹೆಸರು. ಅದಕ್ಕೆ ಸರಸ್ವತಿಯೇ ದೇವತೆ.

ಪಂಚಪ್ರಾಣಾಃ ಪಂಚಬಾಣಾ ವಿರಿಂಚಿಃ ಕೌಸ್ತುಭಾತ್ಮಕಃ ।
ಶ್ರೀರೇವ ವನಮಾಲಾಯಾಂ ಲಕ್ಷ್ಮೀಃ ಶ್ರೀವತ್ಸಸಂಸ್ಥಿತಾ ॥ ೮೪ ॥

೭) ಪ್ರಾಣಾಪಾನಾದಿ ಪಂಚರೂಪಿಯಾದ ವಾಯುದೇವರೇ ಪಂಚಬಾಣಗಳು. ೮) ಕೌಸ್ತುಭಮಣಿಯಲ್ಲಿ ಬ್ರಹ್ಮದೇವರು ಸನ್ನಿಹಿತರಾಗಿದ್ದಾರೆ. ೯) ವಿಷ್ಣು ಧರಿಸಿರುವ ದಿವ್ಯವಾದ ವನಮಾಲೆಗೆ ವೈಜಯಂತೀ ಎಂದು ಹೆಸರು. ಆ ವನಮಾಲೆಗೂ ವಿಷ್ಣುವಿಗೆ

ಹಾಕುವ ಬಿಳೀ ಹೂವಿನ ಹಾರಗಳಿಗೂ ಸತ್ತ್ವಾಭಿಮಾನಿಯಾದ ಶ್ರೀದೇವಿಯೇ ಅಭಿಮಾನಿ ದೇವತೆ. ೧೦) ಶ್ರೀವತ್ಸವೆಂಬ ವಿಷ್ಣುವಿನ ವಕ್ಷಃಸ್ಥಳದಲ್ಲಿರುವ ಚಿಹ್ನೆಗೆ (ಮಚ್ಚೆಗೆ) ಲಕ್ಷ್ಮೀದೇವಿಯೇ ದೇವತೆ.

ಇವುಗಳಲ್ಲಿ ಚಕ್ರದಿಂದ ಹಿಡಿದು ಪಂಚಬಾಣಗಳವರೆಗಿನ ಏಳು ಆಯುಧಗಳು. ಕೌಸ್ತುಭಾದಿಗಳು ಆಭರಣಗಳೆಂದು ತಿಳಿಯಬೇಕು. ಭಾಗವತ ಏಕಾದಶಸ್ಕಂಧ (27 ಅ. 27 ಶ್ಲೋ.)ದಲ್ಲಿ ಭಗವಂತನ ಈ ಆಯುಧಾದಿಗಳನ್ನೂ ಪೂಜಿಸಬೇಕೆಂದು ಹೇಳಿರುವುದನ್ನು ನೋಡಿ ಶ್ರೀಮಟ್ಟೀಕಾಕೃತ್ಪಾದರು ಹೀಗೆ ಹೇಳಿದ್ದಾರೆಂದು ತಿಳಿಯಬೇಕು. ಈ ಶ್ಲೋಕವನ್ನು ಶ್ರೀ ಪ್ರಭಂಜನರ ಪದ್ಯಮಾಲಾ (ದ್ವಿ.ಸಂ. ಪು. ೫೩) ದಲ್ಲಿ ಕೊಟ್ಟಿದ್ದಾರೆ.

ಸುದರ್ಶನಂ ಪಾಂಚಜನ್ಯಂ ಗದಾಸೀಷುಧನುರ್ಹಲಾನ್ ।
ಮುಸಲಂ ಕೌಸ್ತುಭಂ ಮಾಲಾಂ ಶ್ರೀವತ್ಸಂ ಚಾನುಪೂಜಯೇತ್ ॥

(ಅರ್ಥ) ಸುದರ್ಶನ ಎಂಬುದು ವಿಷ್ಣುವಿನ ಚಕ್ರದ ಹೆಸರು. ಪಾಂಚಜನ್ಯವು ಅವನ ಶಂಖ. ಅವನ ಗದೆಗೆ ಕೌಮೋದಕೀ ಎಂದು ಹೆಸರು. (ಗದಾ + ಅಸಿ + ಇಷು + ಧನುಸ್ + ಹಲಾನ್ ಎಂದು ಪದವಿಭಾಗ. ಅಸಿ–ಕತ್ತಿ ಅಥವಾ ಖಡ್ಗ. ಇಷು–ಬಾಣ. ಧನುಸ್–ಬಿಲ್ಲು. ಹಲ–ನೇಗಿಲು) ವಿಷ್ಣುವಿನ ಖಡ್ಗಕ್ಕೆ ನಂದಕ ಎಂದು ಹೆಸರು. ಇಷು–ಬಾಣ. ವಿಷ್ಣುವಿನ ಪಂಚಬಾಣಗಳಿಗೆ ಪ್ರಾಣಾಪಾನಾದಿ ವಾಯುದೇವರ ಪಂಚರೂಪಗಳು ಅಭಿಮಾನಿಗಳೆಂದು ಪದ್ಯಮಾಲಾದಲ್ಲಿ ಹೇಳಿದೆ. ವಿಷ್ಣುವಿನ ಧನುಸ್ಸಿಗೆ ಶಾರ್ಙ್ಗ ಎಂದು ಹೆಸರು. ಸಂಕರ್ಷಣಮೂರ್ತಿಯು ನೇಗಿಲನ್ನೂ ಒನಕೆಯನ್ನೂ (ಮುಸಲವನ್ನೂ) ಧರಿಸಿದ್ದಾನೆ. ಕೌಸ್ತುಭವೆಂಬುದು ಭಗವಂತ ಧರಿಸಿರುವ ಒಂದು ರತ್ನ (ಮಣಿ). ವಿಷ್ಣುವು ಧರಿಸಿದ ಮಾಲೆಗೆ ವೈಜಯಂತೀ ಎಂದು ಹೆಸರೆಂದು ಹಿಂದೆಯೇ ಹೇಳಿದೆ. ವಿಷ್ಣುವಿನ ಮೇಲಿನ ಬಲಗೈಯಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ ಈ ಆಯುಧಗಳನ್ನು ಪೂಜಿಸಬೇಕೆಂದು ಗುರ್ವರ್ಥದೀಧಿತಿ ಎಂಬ ಪುಸ್ತಕದಲ್ಲೂ ಪೂಜಾಕಲ್ಪಲತೆಯಲ್ಲೂ ಹೇಳಿದೆಯೆಂದು ಶ್ರೀ ಪ್ರಭಂಜನರು (ಅಲ್ಲೇ, ಪುಟ ೫೪, ಪಾದಟಿಪ್ಪಣಿ 4) ಸೂಚಿಸುತ್ತಾರೆ.

ಆಯುಧಾದಿಗಳನ್ನು ಪೂಜಿಸುವುದು— ಪೂಜಾಕಲ್ಪಲತಾ ಗ್ರಂಥದಲ್ಲಿ ಆಯುಧಗಳನ್ನು ಈ ರೀತಿ ಮಂತ್ರ ಹೇಳುತ್ತಾ ಪೂಜಿಸಬೇಕೆಂದು ತೋರಿಸಿದ್ದಾರೆ. (ಪ್ರಭಂಜನರ ಪದ್ಯಮಾಲಾ, ದ್ವಿ.ಸಂ. ಪು. ೫೫, ಟಿಪ್ಪಣಿ 18)—

೧. ಓಂ ಚಕ್ರಾಧಿದೇವ್ಯೈ ಶ್ರೀದುರ್ಗಾಯೈ ನಮಃ । ೨. ಓಂ ಶಂಖಾಧಿದೇವ್ಯೈ ಶ್ರಿಯೈ ನಮಃ । ೩. ಓಂ ಗದಾಧಿದೇವಾಯ ಶ್ರೀವಾಯವೇ ನಮಃ । ೪. ಓಂ ಪದ್ಮಾಭಿಮಾನಿನ್ಯೈ ಶ್ರೀ ಭೂಮ್ಯೈ ನಮಃ । ೫. ಓಂ ಖಡ್ಗಾಭಿಮಾನಿನ್ಯೈ ಶ್ರೀದುರ್ಗಾಯೈ ನಮಃ । ೬. ಓಂ ಶಾರ್ಙ್ಗಾಭಿಮಾನಿನ್ಯೈ ಶ್ರೀ ಸರಸ್ವತ್ಯೈ ನಮಃ । ಓಂ ಪಂಚಬಾಣಾಧಿ

ದೇವತಾಭ್ಯಃ ಪ್ರಾಣಾಪಾನಾದಿ ಪಂಚಪ್ರಾಣೇಭ್ಯೋ ನಮಃ । ೮. ಓಂ ಕೌಸ್ತುಭಾಭಿಮಾನಿನೇ ಶ್ರೀ ವಿರಿಂಚಾಯ ನಮಃ । ೯. ಓಂ ವನಮಾಲಾಧಿದೇವತಾಯೈ ಶ್ರಿಯೈ ನಮಃ । ೧೦. ಓಂ ಶ್ರೀವತ್ಸಾಧಿದೇವತಾಯೈ ಶ್ರೀ ಲಕ್ಷ್ಮ್ಯೈ ನಮಃ ।

ಹೀಗೆ ಆಯುಧಗಳನ್ನೂ ಆಭರಣಗಳನ್ನೂ ಪೂಜಿಸಿದ ಬಳಿಕ 'ಆವರಣ ಪೂಜೆ' ಯನ್ನು ಮಾಡಬೇಕೆಂದು ತಂತ್ರಸಾರದಲ್ಲೂ (೧ ಅ., ೬೪-೬೫ ಶ್ಲೋ.) ಪದ್ಮಮಾಲಾದಲ್ಲೂ (೮೫-೯೧ ಶ್ಲೋ.) ಹೇಳಿದೆ. ಆದಕಾರಣ ಈಗ ಆ ಆವರಣಪೂಜೆಯ ವಿವರಕ್ಕೇ ಹೋಗೋಣ.

ಆವರಣಪೂಜೆ

ಆವರಣಪೂಜೆ ಎಂದರೇನು?

'ಆವರಣ' ಎಂದರೆ ಪ್ರಾಕಾರ ಅಥವಾ ಸುತ್ತ ಗೋಡೆ ಎಂದರ್ಥ. ಭಗವಂತನ ಸುತ್ತಮುತ್ತ ಇರುವ ಭಿನ್ನಭಿನ್ನ ಪ್ರಾಕಾರಗಳಲ್ಲಿ ಇರುವ ದೇವತೆಗಳನ್ನು ಪೂಜಿಸುವುದಕ್ಕೇ 'ಆವರಣಪೂಜೆ'ಯೆಂದು ಹೆಸರು. ಪ್ರಕೃತ ಪೂಜೆಯಲ್ಲಿ ಏಳು* ಆವರಣಗಳಲ್ಲಿ ಭಿನ್ನ-ಭಿನ್ನ ದೇವತೆಗಳು ಸನ್ನಿಹಿತರಾಗಿದ್ದಾರೆಂದು ಧ್ಯಾನಿಸಿ ಅವರನ್ನು ಪೂಜಿಸುವ ವಿಧಾನ ಹೇಳಿದೆ.

ಆದರೆ ಆ ಎಂಟು ಆವರಣಗಳು ಯಾವುವು? ಅಲ್ಲಿ ಯಾವ ಯಾವ ದೇವತೆಗಳು ಇದ್ದಾರೆ? ಎಂಬ ವಿಷಯದಲ್ಲೇ ಎರಡು-ಮೂರು ಭಿನ್ನಾಭಿಪ್ರಾಯಗಳಿವೆಯೆಂಬುದನ್ನು ಶ್ರೀ ಪ್ರಭಂಜನರು ತಮ್ಮ ಪದ್ಮಮಾಲಾದಲ್ಲಿ ತೋರಿಸಿದ್ದಾರೆ. ನಮಗೆ ಪದ್ಮಮಾಲಾ ಮತ್ತು ತಂತ್ರಸಾರಗಳಲ್ಲಿ ಹೇಳಿದ ಕ್ರಮವೇ ಗ್ರಾಹ್ಯವಾದ್ದರಿಂದ ಕೆಳಗೆ ಅದರಂತೆಯೇ ವಿವರಣೆ ಕೊಡಲಾಗಿದೆ.

ಸಾಧ್ಯತೆಯ ವಿಚಾರ—

ತಂತ್ರಸಾರದಲ್ಲೂ ಪದ್ಮಮಾಲಾದಲ್ಲೂ ಆಯುಧಗಳ ಪೂಜೆಯೂ ಆವರಣ-ಪೂಜೆಯೂ ನಿತ್ಯವೂ ಅನುಷ್ಠಾನ ಮಾಡಬೇಕಾದ ಪೂಜೆಗಳೇ ಎಂದು ಹೇಳಿದ್ದರೂ ಕೂಡ ವರ್ತಮಾನ ಪರಿಸ್ಥಿತಿಯಲ್ಲಿ ನಿತ್ಯ ದೇವರಪೂಜೆ ನಡೆಯುವುದೇ ದುಸ್ತರವಾಗಿರುವಾಗ ನಿತ್ಯವೂ ಆಯುಧಪೂಜೆ ಆವರಣಪೂಜೆಗಳನ್ನೆಲ್ಲಾ ಮಾಡಬೇಕೆಂಬುದು ದುಸ್ತರವಾದ ಸಂಗತಿಯೆಂದು ಹೇಳಬೇಕಾಗಿಲ್ಲ. ನಿತ್ಯವೂ ಪೂಜೆ ಮಾಡಲಿ ಬಿಡಲಿ ಪೂಜಾಕ್ರಮ ಹೇಗೆಂಬುದನ್ನು ತಿಳಿದುಕೊಳ್ಳುವುದರಲ್ಲಿ ತಪ್ಪೇನಿದೆ? ಈ ದೃಷ್ಟಿಯಿಂದಲೇ ಈ ಆವರಣ-ಪೂಜಾ ವಿಧಾನವನ್ನು ವಿವರಿಸುತ್ತಿದ್ದೇವೆ.

---

* ಆವರಣಗಳ ಕ್ರಮದಲ್ಲಿ ಅನೇಕ ಮತಭೇದಗಳಿವೆ.

ತಂತ್ರಸಾರದ ಶ್ಲೋಕಗಳು—

ತಂತ್ರಸಾರದ ಹೇಳಿಕೆಗಳು ಬಹಳ ಚಿಕ್ಕವಾಗಿದ್ದು, ಟೀಕಾಚಾರ್ಯರು ಹೇಳುವಂತೆ 'ಸೂತ್ರಪ್ರಾಯ'ವಾಗಿವೆ. ಆದರೆ ನೆನಪಿಟ್ಟುಕೊಳ್ಳುವುದಕ್ಕೆ ಅದೇ ಸುಲಭವಾದ್ದರಿಂದ ತಂತ್ರಸಾರದ ಶ್ಲೋಕಗಳನ್ನು ಮೊದಲು ದಪ್ಪಕ್ಷರದಲ್ಲಿ ಕೊಟ್ಟು ಅದರ ಅರ್ಥವನ್ನು ವಿವರಿಸಿ ಆಮೇಲೆ ಪದ್ಯಮಾಲಾ ಶ್ಲೋಕಗಳನ್ನೂ ಕೊಟ್ಟು ಅವಕ್ಕೂ ಅರ್ಥ ಬರೆದಿವೆ.

ಇಲ್ಲಿ ಎಂಟು ಆವರಣಗಳ ಪೂಜೆ ಹೇಳಲಾಗಿದೆ. ಇದರ ವಿವರಣೆ ನೋಡಿದರೆ ಮೊಟ್ಟ ಮೊದಲನೆಯದೇ ಎಲ್ಲದಕ್ಕೂ ಒಳಗಿನ ಆವರಣವೆಂದೂ ಮುಂಸುಮುಂದಿನ ಅದಕ್ಕೆ ಹೊರಗೆಹೊರಗೆ ಇರುವ ದೊಡ್ಡದೊಡ್ಡ ಆವರಣಗಳೆಂದು ತಿಳಿದುಬರುತ್ತದೆ. ಸಾಧ್ಯವಾದರೆ ಈ ಆವರಣಗಳ ಸ್ಥೂಲಚಿತ್ರಗಳನ್ನು ಬರೆದು ಅದರಲ್ಲಿರುವ ದೇವತೆಗಳನ್ನು ಬರೆದುಕೊಂಡು ಪುನಃ ಪುನಃ ಅವಲೋಕನ ಮಾಡಿ ರೂಢಿಸಿಕೊಳ್ಳುವುದು ಅತ್ಯುತ್ತಮ ಪಕ್ಷ.

ಹೋಮ ಹವನಾದಿ ವಿಧಾನಗಳಲ್ಲಿ ಹೆಸರು ಪಡೆದಿದ್ದ ಸ್ವರ್ಗೀಯ ಚತುರ್ವೇದೀ ರಾಮಚಂದ್ರಾಚಾರ್ಯರೆಂಬ ಮಹನೀಯರು (ವಿದ್ವಾಂಸರು) ಪವಮಾನಹೋಮಗಳಲ್ಲೂ ಬೃಹತೀಸಹಸ್ರ ಹೋಮಗಳಲ್ಲೂ ಪ್ರಾರಂಭದಲ್ಲಿ ಪೀಠದೇವತೆಗಳಿಗೂ ಆವರಣದೇವತೆಗಳಿಗೂ ಹೆಸರು ಹೇಳಿ ಹೇಳಿ ಆಹುತಿ ಕೊಡಬೇಕೆಂದೂ (ಹೋಮ ಮಾಡಬೇಕೆಂದೂ) ಅದರಿಂದ ಆ ಹೋಮವು ಸಾಂಗೋಪಾಂಗವಾಗಿ ಪರಿಪೂರ್ಣವಾಗುವುವೆಂದು ಹೇಳುತ್ತಲಿದ್ದರು. ಇದರಿಂದ ಆವರಣದೇವತೆಗಳ ಜ್ಞಾನದ ಮಹತ್ತ್ವ ತಿಳಿಯುತ್ತದೆ.

ಈಗ ಒಂದೊಂದಾಗಿ ಆವರಣಗಳ ಮತ್ತು ಅಲ್ಲಿರುವ ದೇವತೆಗಳನ್ನು ತಿಳಿಸುತ್ತಾ ಹೋಗುವೆವು.

ಒಂದನೆಯ ಆವರಣ

ತಂತ್ರಸಾರದ ವಾಕ್ಯ—

ಲಕ್ಷ್ಮೀಧರೇ ಯಜೇತ್ ತತ್ರ ಪಾರ್ಶ್ವಯೋರ್ಹರೇಃ ।

(ಅರ್ಥ) ತತ್ರ–ಅಲ್ಲಿ ಎಂದರೆ ಯೋಗಪೀಠದಲ್ಲಿ, ಹರೇಃ–ಶ್ರೀಹರಿಯ, ಉಭಯೋಃ ಪಾರ್ಶ್ವಯೋಃ–ಎಡ ಬಲ ಎರಡು ಪಕ್ಕಗಳಲ್ಲೂ, ಲಕ್ಷ್ಮೀ-ಧರೇ–ಲಕ್ಷ್ಮೀದೇವಿಯನ್ನೂ (ಎಡಭಾಗದಲ್ಲೂ) (ಬಲಭಾಗದಲ್ಲಿ) ಭೂದೇವಿಯನ್ನೂ, ಯಜೇತ್–ಪೂಜಿಸಬೇಕು.

(ತಾತ್ಪರ್ಯ) ಯೋಗಪೀಠದಲ್ಲಿ ಮಧ್ಯದಲ್ಲಿ ಶ್ರೀವಿಷ್ಣು ಕುಳಿತಿದ್ದಾನೆಂದೂ (ಅಥವಾ ನಿಂತಿದ್ದಾನೆಂದೂ) ಅವನ ಎಡಭಾಗದಲ್ಲಿ ಸತ್ವಾಭಿಮಾನಿಯಾದ ಶ್ರೀ(ಲಕ್ಷ್ಮೀ) ದೇವಿ ಇದ್ದಾಳೆಂದೂ ಬಲಭಾಗದಲ್ಲಿ ರಜೋಭಿಮಾನಿಯಾದ ಭೂದೇವಿ ಇದ್ದಾಳೆಂದೂ

ತಿಳಿದು ಪೂಜಿಸಬೇಕು. ಶ್ರೀದೇವಿಯು ಕರ್ಪೂರದಂತೆ ಬೆಳಗಿದ್ದಾಳೆಂದೂ ಭೂದೇವಿ ಕಮಲದಂತೆ ಕೆಂಪಗಿದ್ದಾಳೆಂದೂ ತಿಳಿಯಬೇಕೆಂದು ಒಂದು ಕಡೆ ವಾದಿರಾಜರು ಹೇಳಿದ್ದಾರೆ. ಭಗವಂತನ ಪಕ್ಕದಲ್ಲಿರುವ 'ಭೂದೇವಿ' ಸಾಕ್ಷಾಲ್ಲಕ್ಷ್ಮೀದೇವಿಯ ಅಪರರೂಪ. ಭೂಮಿಗೆ ಅಭಿಮಾನಿಯಾದ 'ಭೂದೇವಿ'ಗೆ 'ಧರಾದೇವಿ' ಎಂದು ಹೆಸರು. ಆಕೆ ತಾರ-ತಮ್ಯದಲ್ಲಿ ಲಕ್ಷ್ಮೀದೇವಿಗಿಂತ ಬಹಳ ಕೆಳಗಿನವಳು. ಆದ್ದರಿಂದ ಅವಳಿಗೆ ಶ್ರೀದೇವಿ-ಯೊಡನೆ ಸ್ಥಾನವೂ ಇಲ್ಲ, ಪೂಜೆಯೂ ಇಲ್ಲ.

ತಂತ್ರಸಾರದಲ್ಲಿ 'ಲಕ್ಷ್ಮೀಧರೇ ಯಜೇತ್ ತತ್ರ'—ಅಲ್ಲಿ (ಪೀಠದಲ್ಲಿ) ಶ್ರೀದೇವಿ-ಭೂದೇವಿಯರನ್ನು ಅರ್ಚಿಸಬೇಕು ಎಂದು ಹೇಳಿದ್ದರಿಂದ ಒಂದು ವಿಶೇಷ ಸೂಚನೆ ತಿಳಿಸಿದಂತಾಯಿತು ಎಂದು ಛಲಾರಿ ಟಿಪ್ಪಣಿಯಲ್ಲಿ ಹೇಳುತ್ತಾರೆ—'ಏತೇನ ಏತಯೋರೇವ ಪೀಠೇ ಪೂಜಾ, ಅನ್ಯೇಷಾಂತು ಬಹಿರಿತಿ ಸೂಚಿತಂ ಭವತಿ'—'ಶ್ರೀದೇವಿ ಭೂದೇವಿ ಇಬ್ಬರನ್ನೂ, ತತ್ರ-ಪೀಠದಲ್ಲಿ, ಪೂಜಿಸಬೇಕೆಂದು ಹೇಳಿದ್ದರಿಂದ ಶ್ರೀದೇವಿ ಮತ್ತು ಭೂದೇವಿ ಇಬ್ಬರಿಗೆ ಮಾತ್ರವೇ ಶ್ರೀಹರಿಯ ಜೊತೆ ಪೀಠದಲ್ಲಿ ಪೂಜೆ ಮಾಡಬೇಕು; ಮಿಕ್ಕವರಿಗೆಲ್ಲ ಪೀಠದ ಹೊರಭಾಗದಲ್ಲಿ ಪೂಜೆ ಮಾಡಬೇಕು' ಎಂದು ಸೂಚಿಸಿದಂತಾಯಿತು ಎನ್ನುತ್ತಾರೆ.

ತಂತ್ರಸಾರದ ವಾಕ್ಯವನ್ನೇ ವಿಸ್ತರಿಸಿ ಟೀಕಾರಾಯರು ಪದ್ಯಮಾಲಾದಲ್ಲಿ ಹೀಗೆ ಹೇಳುತ್ತಾರೆ—

> ಅಥಾವರಣಪೂಜಾಯಾಂ ಲಕ್ಷ್ಮೀಂ ವಾಮೇ ಹರೇರ್ಯಜೇತ್ ।
> ಧರಾಂ ಚ ದಕ್ಷಿಣೇ ಪಾರ್ಶ್ವೇ......

(ಅರ್ಥ) ಅಥ—ಆಯುಧಗಳ ಮತ್ತು ಆಭರಣಗಳ ಪೂಜೆ ಮಾಡಿದ ಬಳಿಕ, ಆವರಣ ಪೂಜಾಯಾಂ—ಆವರಣಪೂಜೆಯನ್ನು ಆರಂಭಿಸಿ ಅದರಲ್ಲಿ ಪ್ರಥಮಾವರಣದಲ್ಲಿ; ಹರೇಃ—ಶ್ರೀಹರಿಯ, ವಾಮೇ—ಎಡಭಾಗದಲ್ಲಿ, ಲಕ್ಷ್ಮೀಂ—ಲಕ್ಷ್ಮೀದೇವಿಯನ್ನೂ, ದಕ್ಷಿಣೇ ಪಾರ್ಶ್ವೇ—ಬಲಭಾಗದಲ್ಲಿ, ಧರಾಂ ಚ—ಭೂದೇವಿಯನ್ನೂ, ಯಜೇತ್—ಅರ್ಚಿಸಬೇಕು.

ಪೂಜೆ ಮಾಡುವ ಮಂತ್ರ—

ಪದ್ಯಮಾಲಾದಲ್ಲಿ ಪ್ರಾರಂಭದಲ್ಲಿ ಪ್ರತಿಯೊಬ್ಬ ದೇವತೆಯ ಹೆಸರನ್ನೂ ಚತುರ್ಥ್ಯಂತ ವಾಗಿ ಹೇಳಿ ಅದರ ಜೊತೆ ನಮಃ ಸೇರಿಸಬೇಕು ಎಂದು ಹೇಳಿದ್ದಾರೆ. ಅದರಂತೆ ಪ್ರಕೃತ ಪ್ರಥಮಾವರಣದಲ್ಲಿ ಈ ರೀತಿ ಪೂಜೆ ಮಾಡಬೇಕು.

> ಮಧ್ಯೇ ಓಂ ಪರಮಪುರುಷಾಯ ಶ್ರೀಹರಯೇ ನಮಃ। ವಾಮೇ ಓಂ ಲಕ್ಷ್ಮ್ಯೈ ನಮಃ। ದಕ್ಷಿಣಪಾರ್ಶ್ವೇ ಓಂ ಧರಾಯೈ ನಮಃ ॥

(ಇದನ್ನು ಉಡುಪಿಯ 'ಆಹ್ನಿಕಮಂಜರಿ'ಯಿಂದ ಸಂಗ್ರಹಿಸಿದೆ.)

ದ್ವಿತೀಯಾವರಣಪೂಜೆ

ತಂತ್ರಸಾರದ ವಾಕ್ಯ—

ಹೃದಯಾದೀಂಸ್ತಥೇಂದ್ರಾದಿ ದಿಕ್ಷ್ವಸ್ತ್ರಂ ಕೋಣಕೇಷು ಚ ||೬೧||

ಪದವಿಭಾಗ— ಹೃದಯಾದೀನ್, ತಥಾ, ಇಂದ್ರ + ಆದಿ + ದಿಕ್ಷು, ಅಸ್ತ್ರಂ........

(ಅರ್ಥ) ಇಂದ್ರ-ಆದಿ-ದಿಕ್ಷು-ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ (ಪ್ರಧಾನ ದಿಕ್ಕುಗಳಲ್ಲಿ), ಹೃದಯಾದೀನ್-(ನಾರಾಯಣಮಂತ್ರದಲ್ಲಿ ಹೃದಯಾದಿ ನ್ಯಾಸ ಮಾಡಿಕೊಳ್ಳುವಾಗ ಹೇಳಿಕೊಳ್ಳುವ) ಕ್ರುದ್ಧೋಲ್ಕ, ಮಹೋಲ್ಕ, ವೀರೋಲ್ಕ ಮತ್ತು ದ್ಯುಲ್ಕ ಎಂಬ ನಾಲ್ಕು ಭಗವನ್ಮೂರ್ತಿಗಳನ್ನೂ, ತಥಾ-ಹಾಗೆಯೇ, ಕೋಣಕೇಷು ಚ-ಆಗ್ನೇಯಾದಿ ನಾಲ್ಕು ಮೂಲೆ (ದಿಕ್ಕು)ಗಳಲ್ಲಿಯೂ, ಅಸ್ತ್ರಂ-(ನಾರಾಯಣಮಂತ್ರದಲ್ಲಿ ಅಸ್ತ್ರಾಯಫಟ್ ಎಂಬುದಕ್ಕೆ ಹೇಳುವ) ಸಹಸ್ರೋಲ್ಕ ಎಂಬ ಭಗವನ್ಮೂರ್ತಿಯನ್ನೂ, ಯಜೇತ್ (ಎಂದು ಹಿಂದಿನ ಅರ್ಥದಿಂದ ಅನ್ವಯಿಸಿಕೊಳ್ಳಬೇಕು)-ಪೂಜಿಸಬೇಕು. ಇದೇ ರೀತಿ 'ಪೀಠಾದ್ಬಹಿಃ'-ಪೀಠದ ಹೊರಭಾಗದಲ್ಲಿ ಎಂಬುದನ್ನೂ ಸೇರಿಸಿಕೊಳ್ಳಬೇಕು.

(ಭಾವಾರ್ಥ) ಪೀಠದ ಹೊರಭಾಗದಲ್ಲಿ ಪೂರ್ವದಿಕ್ಕಿನಲ್ಲಿ ಕ್ರುದ್ಧೋಲ್ಕ ಎಂಬ ಭಗವದ್ರೂಪವನ್ನೂ, ದಕ್ಷಿಣ ದಿಕ್ಕಿನಲ್ಲಿ ಮಹೋಲ್ಕನೆಂಬ ರೂಪವನ್ನೂ ಪಶ್ಚಿಮದಲ್ಲಿ ವೀರೋಲ್ಕ ಎಂಬ ರೂಪವನ್ನೂ ಉತ್ತರದಲ್ಲಿ ದ್ಯುಲ್ಕ ಎಂಬ ರೂಪವನ್ನೂ ಆಗ್ನೇಯಾದಿ ನಾಲ್ಕು ಮೂಲೆಗಳಲ್ಲೂ ಸಹಸ್ರೋಲ್ಕ ಎಂಬ ರೂಪವನ್ನೂ ಪೂಜಿಸಬೇಕು.

ಸೂಚನೆ—ಪೂಜೆಯ ಸಮಯದಲ್ಲಿ ಪೂರ್ವಾದಿ ದಿಕ್ಕುಗಳು ಎರಡು ವಿವಕ್ಷೆಯಿಂದ ಬೇರೆಬೇರೆಯಾಗುತ್ತದೆ. ದೇವರಿಗೂ ಅರ್ಚಕನಿಗೂ ಮಧ್ಯೆ ಇರುವ ಭಾಗಕ್ಕೆ 'ದೇವ-ಪ್ರಾಚೀ' ಎಂದು ಹೆಸರು. ಸೂರ್ಯ ಉದಯಿಸುವ ದಿಕ್ಕಿಗೆ 'ದಿಕ್‌ಪ್ರಾಚೀ' ಎಂದು ಹೆಸರು. ಪ್ರಕೃತ ಪೂರ್ವ ಎಂದರೆ ದೇವಪ್ರಾಚೀ ದಿಕ್ಕನ್ನಾದರೂ ಗ್ರಹಣ ಮಾಡಬಹುದು, ದಿಕ್‌ಪ್ರಾಚೀ ದಿಕ್ಕನ್ನಾದರೂ ಅನುಕೂಲಕ್ಕೆ ತಕ್ಕಂತೆ ಗ್ರಹಣ ಮಾಡಬಹುದೆಂದು ಸ್ಮೃತಿ-ಮುಕ್ತಾವಲಿಯೆಂಬ ಗ್ರಂಥದಲ್ಲಿ ಹೇಳಿದೆಯೆಂದು ಪದ್ಮಮಾಲಾ ಪಾದಟಿಪ್ಪಣಿ 1೬ಯಲ್ಲಿ (ಪುಟ ೫೬) ಸೂಚಿಸಿದ್ದಾರೆ.

ಪದ್ಮಮಾಲೆಯ ಹೇಳಿಕೆ—

[ಧರಾಂ ಚ ದಕ್ಷಿಣೇ ಪಾರ್ಶ್ವೇ] ತತಃ ಪೂರ್ವಾದಿ ದಿಕ್ಷು ಚ || ೮೫ ||
ಕ್ರುದ್ಧೋಲ್ಕಾಯ ಮಹೋಲ್ಕಾಯ ವೀರೋಲ್ಕಾಯ ನಮಸ್ತತಃ |
ದ್ಯುಲ್ಕಾಯ ಚ ನಮಸ್ಕುರ್ಯಾ—ದುದೀಚ್ಯಾಂ ದಿಶಿ ಚ ಕ್ರಮಾತ್ ||
ಸಹಸ್ರೋಲ್ಕಾಯೇತಿ ಚತು—ರಾಗ್ನೇಯಾದಿವಿದಿಕ್ಷು ಚ |

(ಅರ್ಥ) ಆಮೇಲೆ ಪೂರ್ವದಿಕ್ಕಿನಲ್ಲಿ ಕ್ರುದ್ಧೋಲ್ಕಾಯ ನಮಃ ಎಂದೂ ದಕ್ಷಿಣ-ದಿಕ್ಕಿನಲ್ಲಿ ಮಹೋಲ್ಕಾಯ ನಮಃ ಎಂದೂ ಪಶ್ಚಿಮ ದಿಕ್ಕಿನಲ್ಲಿ ವೀರೋಲ್ಕಾಯ ನಮಃ ಎಂದೂ ಉತ್ತರದಿಕ್ಕಿನಲ್ಲಿ ದ್ಯುಲ್ಕಾಯ ನಮಃ ಎಂದು ಬಿಡಿಬಿಡಿಯಾಗಿ ಪೂಜಿಸಿ ಆಗ್ನೇ-ಯಾದಿ ಚತುರ್ವಿದಿಕ್ಕು ಸಹಸ್ರೋಲ್ಕಾಯ ನಮಃ ಎಂದೂ ಪೂಜಿಸಬೇಕು. (ಕೆಲವರ ಮತದಲ್ಲಿ ಇದೇ ಪ್ರಥಮಾವರಣಪೂಜೆ.)

ಅದರ ಹೊರಗಿನ ಆವರಣದಲ್ಲಿ "ವಾಸುದೇವಾದಿಕಾನ್ ದಿಕ್ಷು"-ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಗಳೆಂಬ ನಾಲ್ಕು ಭಗವದ್ರೂಪಗಳನ್ನೂ (ಇದು ಉಪಲಕ್ಷಣವಾದ್ದರಿಂದ) ಆಗ್ನೇಯಾದಿ ನಾಲ್ಕು ಮೂಲೆಗಳಲ್ಲಿ ಆ ಭಗವದ್ರೂಪಗಳ ಪತ್ನಿಯರಾದ ಮಾಯಾ, ಜಯಾ, ಕೃತಿ ಹಾಗೂ ಶಾಂತಿಯರನ್ನೂ ಪೂಜಿಸಬೇಕು ಎಂದು ತಂತ್ರಸಾರದಲ್ಲಿ ಹೇಳಿದ್ದನ್ನು ಪದ್ಮಮಾಲಾದಲ್ಲಿ ಹೀಗೆ ಸ್ಪಷ್ಟಪಡಿಸಿ ಹೇಳುತ್ತಾರೆ—

ಪುನಃ ಪೂರ್ವಾದಿಕಾಷ್ಠಾಸು ವಾಸುದೇವಾದಿಕಾನ್ ಯಜೇತ್ ॥೮೭॥
ಮಾಯಾಂ ಜಯಾಂ ಕೃತಿಂ ಶಾಂತಿಂ ಯಜೇತ್ಕೋಣೇಷು ಚ ಕ್ರಮಾತ್॥

(ಅರ್ಥ) ಕೃದ್ಧೋಲ್ಕಾದಿ ಮೂರ್ತಿಗಳನ್ನು ಪೂಜಿಸಿದ (ದ್ವಿತೀಯ) ಆವರಣಕ್ಕೆ ಹೊರಗಡೆಯ ಆವರಣದಲ್ಲಿ ಪೂರ್ವಾದಿ ದಿಕ್ಕುಗಳಲ್ಲಿ ವಾಸುದೇವಾದಿ ಚತುರ್ಮೂರ್ತಿ ಗಳನ್ನೂ ಆಗ್ನೇಯಾದಿ ಮೂಲೆಗಳಲ್ಲಿ ಮಾಯಾದಿ ನಾಲ್ಕು ರಮಾರೂಪಗಳನ್ನೂ ಹೀಗೆ ಎಂಟು ದಿಕ್ಕುಗಳಲ್ಲೂ ಪೂಜಿಸಬೇಕು. (ಕೆಲವರ ಮತದಲ್ಲಿ ಇದೇ ದ್ವಿತೀಯಾವರಣ.) ಹೇಗೆಂದರೆ—

ತದ್ಬಹಿಃ (ದ್ವಿತೀಯಾವರಣೇ)

ಪೂರ್ವಭಾಗೇ	ವಾಸುದೇವಾಯ ನಮಃ ।
ಆಗ್ನೇಯಕೋಣೇ	ಮಾಯಾಯೈ ನಮಃ ।
ದಕ್ಷಿಣಪಾರ್ಶ್ವೇ	ಸಂಕರ್ಷಣಾಯ ನಮಃ ।
ನೈಋರ್ತ್ಯಕೋಣೇ	ಜಯಾಯೈ ನಮಃ ।
ಪಶ್ಚಿಮಭಾಗೇ	ಪ್ರದ್ಯುಮ್ನಾಯ ನಮಃ ।
ವಾಯವ್ಯಕೋಣೇ	ಕೃತ್ಯೈ ನಮಃ ।
ಉತ್ತರಭಾಗೇ	ಅನಿರುದ್ಧಾಯ ನಮಃ ।
ಐಶಾನ್ಯಕೋಣೇ	ಶಾಂತ್ಯೈ ನಮಃ ।

(ಉಡುಪಿಯ ಕನ್ನಡ 'ದೇವಪೂಜಾ ಪದ್ಧತಿ'ಯಲ್ಲಿ [1945ರ ಸಂಸ್ಕರಣದಲ್ಲಿ] ವಾಸುದೇವಾದಿ ಚತುರ್ಮೂರ್ತಿಗಳೊಡನೆ ವಿಶ್ವಾದಿ ನಾಲ್ಕು ಮೂರ್ತಿಗಳನ್ನೂ ಪೂಜಿಸ-ಬೇಕೆಂದು ತೋರಿಸಿದೆ. ಆದರೆ ಪ್ರಮಾಣವಿಲ್ಲವಾದ್ದರಿಂದ ಅದು ಉಪೇಕ್ಷಣೀಯ.)

ತೃತೀಯಾವರಣ ಪೂಜೆ

ವಾಸುದೇವಾದಿ ಮೂರ್ತಿಗಳನ್ನು ಪೂಜಿಸಿದ ದ್ವಿತೀಯಾವರಣದ ಹೊರಭಾಗದಲ್ಲಿ *"ಕೇಶವಾದೀಂಸ್ತತಃ ಪರಮ್ (ಯಜೇತ್)-ಕೇಶವಾದಿ ದ್ವಾದಶಮೂರ್ತಿಗಳನ್ನು ಪೂಜಿಸಬೇಕು ಎಂದು ತಂತ್ರಸಾರದಲ್ಲಿ ಹೇಳಿದೆ. ಹನ್ನೆರಡು ಮೂರ್ತಿಗಳನ್ನು ಎಂಟು ದಿಕ್ಕುಗಳಿಗೆ ಹಂಚಿಕೊಳ್ಳುವ ಕ್ರಮ ಹೇಗೆ? ಎಂಬುದು ಸಂದಿಗ್ಧವಾದ್ದರಿಂದ ಟೀಕಾರಾಯರು ಪದ್ಯಮಾಲಾದಲ್ಲಿ ಅದನ್ನು ಸ್ಪಷ್ಟವಾಗಿ ವಿಶದಪಡಿಸಿ ಹೀಗೆ ಹೇಳುತ್ತಾರೆ—

ಕೇಶವಾದ್ಯಾಸ್ತತೋ ಮೂರ್ತೀ—ರ್ದ್ವಾದಶಕ್ರಮತೋ ಯಜೇತ್ ॥೮೮॥
ದಿಶಿ ದ್ವೇ ದ್ವೇ ಕೋಣ ಏಕೇ ಐಶೇ ದಾಮೋದರೋ ಭವೇತ್ ।**

(ಅರ್ಥ) ತೃತೀಯಾವರಣದಲ್ಲಿ ಕೇಶವಾದಿ ದ್ವಾದಶಮೂರ್ತಿಗಳನ್ನು ಪೂಜಿಸಬೇಕು. ಕೇಶವಾದಿರೂಪಗಳನ್ನು ವಿಂಗಡಿಸಿಕೊಳ್ಳುವ ಕ್ರಮ ಹೇಗೆಂದರೆ—ಪ್ರಧಾನ ದಿಕ್ಕುಗಳಲ್ಲಿ ಒಂದೊಂದರಲ್ಲಿ ಎರಡೆರಡು ಮೂರ್ತಿಗಳನ್ನೂ, ಕೋನಗಳಲ್ಲಿ ಒಂದೊಂದು ಮೂರ್ತಿಯನ್ನೂ ಅರ್ಚಿಸಬೇಕು ಎಂದು ಹೇಳಿದಂತಾಯಿತು.

ದಿಕ್ಕುಗಳಲ್ಲಿ ಎರಡು ಮೂರ್ತಿಗಳನ್ನೂ ಕೋನೆಗಳಲ್ಲಿ ಒಂದು ಮೂರ್ತಿಯನ್ನೂ ಅರ್ಚಿಸಬೇಕೆಂದು ಟೀಕಾರಾಯರು ಹೇಳಿದ್ದಕ್ಕೆ ಆಧಾರಭೂತವಾದ ಪ್ರಮಾಣವನ್ನು ಶ್ರೀ ಪ್ರಭಂಜನರು ತಮ್ಮ ಪದ್ಯಮಾಲಾ ಪುಸ್ತಕದಲ್ಲಿ (ಪುಟ ೫೯ರ ಟಿಪ್ಪಣಿಯಲ್ಲಿ) ಹೀಗೆ ತೋರಿಸಿದ್ದಾರೆ—

ದ್ವಂದ್ವಶೋ ದಿಕ್ಷು ಸಂಪೂಜ್ಯ—ಮೇಕೈಕಂ ಕೋಣಕೇಷು ಚ ।

—ಇತಿ ಪಂಚರಾತ್ರೇ

ಪಂಚರಾತ್ರದಲ್ಲಿ ಕೇಶವಾದಿ ದ್ವಾದಶಮೂರ್ತಿಗಳನ್ನು ಪೂಜಿಸುವಾಗ ಪ್ರಧಾನ (ಪೂರ್ವಾದಿ ನಾಲ್ಕು) ದಿಕ್ಕುಗಳಲ್ಲಿ ಎರಡೆರಡು ಮೂರ್ತಿಗಳಂತೆಯೂ ಮೂಲೆಗಳಲ್ಲಿ ಒಂದೊಂದು ಮೂರ್ತಿಯಂತೆಯೂ ಕ್ರಮವಾಗಿ ಪೂಜಿಸಬೇಕೆಂದು ಹೇಳಿದೆಯಾದ್ದರಿಂದ ಅದಕ್ಕೆ ಅನುಗುಣವಾಗಿ ಟೀಕಾರಾಯರು ಹೇಳಿದರೆಂದು ತಿಳಿಯಬೇಕು.

ಅದರಂತೆ ಪೂರ್ವದಲ್ಲಿ ಕೇಶವ ನಾರಾಯಣರನ್ನೂ, ಆಗ್ನೇಯದಲ್ಲಿ ಮಾಧವನನ್ನೂ, ದಕ್ಷಿಣದಲ್ಲಿ ಗೋವಿಂದ ವಿಷ್ಣುಮೂರ್ತಿಗಳನ್ನೂ, ನೈರುತ್ಯದಲ್ಲಿ ಮಧುಸೂದನನನ್ನೂ,

---

* ಕೇಶವಾದೀಂಶ್ಚ ರಾಶಿಷು ಎಂಬುದು ಇದಕ್ಕೆ ಉಡುಪಿಯ ಪಾಠಾಂತರ. (ಪ್ರಭಂಜನರೂ ಈ ಪಾಠಾಂತರವನ್ನೇ ಗ್ರಹಣ ಮಾಡಿದ್ದಾರೆ.)

** ದಿಶಿ ದ್ವೇ ಕೋಣಗಾ ಚೈಕಾ—ಎಂದು ಪಾಠಾಂತರ.

ಪಶ್ಚಿಮದಲ್ಲಿ ತ್ರಿವಿಕ್ರಮ-ವಾಮನರನ್ನೂ, ವಾಯುವ್ಯದಲ್ಲಿ ಶ್ರೀಧರನನ್ನೂ, ಉತ್ತರದಲ್ಲಿ ಹೃಷೀಕೇಶ-ಪದ್ಮನಾಭರನ್ನೂ, ಐಶಾನ್ಯದಲ್ಲಿ ದಾಮೋದರನನ್ನೂ ಪೂಜಿಸಬೇಕು. ನಮ್ಮ ಕ್ರಮ ಸರಿಯೋ ತಪ್ಪೋ ನೋಡಿಕೊಳ್ಳಲು ಅನುಕೂಲವಾಗುವಂತೆ "ಐಶೇ ದಾಮೋದರೋ ಭವೇತ್"— ಈಶಾನ್ಯದಿಕ್ಕಿನಲ್ಲಿ ದಾಮೋದರ ಬರಬೇಕು ಎಂದೂ ತೋರಿಸಿಕೊಟ್ಟರು.

ಪೂಜಾ ಮಾಡುವ ಮಂತ್ರಗಳ ಕೊಡುವುದಕ್ಕೆ ಮೊದಲು ಇನ್ನೊಂದು ವಿಷಯ ತಿಳಿಸಬೇಕಾಗಿದೆಯಾದ್ದರಿಂದ ಅದಕ್ಕೇ ಹೋಗೋಣ.

ಕೇಶವಾದಿ ಮೂರ್ತಿಗಳನ್ನು ಪೂಜಿಸುವಾಗ ತತ್ತತ್ಪತ್ನಿಯರನ್ನೂ ಸ್ಮರಿಸುವುದು ಉತ್ತಮ. ಕೇಶವಾದಿ ರೂಪಗಳ ಪತ್ನಿಯರ (ಶಕ್ತಿಗಳ) ಹೆಸರುಗಳನ್ನು ಹಾರೀತಸ್ಮೃತಿಯಲ್ಲಿ ಹೇಳಿದೆಯೆಂದು ಪ್ರಭಂಜನರು (ಪುಟ ೫೯, ೭ ಟಿಪ್ಪಣಿ) ತೋರಿಸಿದ್ದಾರೆ—

ಶ್ರೀರ್ಲಕ್ಷ್ಮೀಃ ಕಮಲಾ ಪದ್ಮಾ ಪದ್ಮಿನೀ ಕಮಲಾಲಯಾ ।
ರಮಾ ವೃಷಾಕಪೀ ಧನ್ಯಾ ವೃದ್ಧಿರ್ಯಜ್ಞಾ ತಥೇಂದಿರಾ ॥
ಶಕ್ತಯಃ ಕೇಶವಾದೀನಾಂ ಸಂಪ್ರೋಕ್ತಾಃ ಪರಮೇ ಪದೇ ॥

ರಮಾರೂಪಸಹಿತ ಕೇಶವಾದಿ ದಾಮೋದರಾಂತ ದ್ವಾದಶಮೂರ್ತಿಗಳನ್ನು ಪೂಜೆ ಮಾಡುವ ಕ್ರಮ ಹೇಗೆಂದರೆ—

"ಅಥ ತೃತೀಯಾವರಣಾದ್ಬಹಿಶ್ಚತುರ್ಥಾವರಣೇ" ಪ್ರಾಚ್ಯಾಂ ದಿಶಿ ೧. ಓಂ ಶ್ರೀದೇವೀಸಮೇತಾಯ ಕೇಶವಾಯ ನಮಃ। ೨. ಓಂ ಲಕ್ಷ್ಮೀಸಮೇತಾಯ ಓಂ ನಾರಾಯಣಾಯ ಚ ನಮಃ। ೩. ಆಗ್ನೇಯ ಕೋಣೇ ಕಮಲಾಸಹಿತಾಯ ಓಂ ಮಾಧವಾಯ ನಮಃ। ೪. ದಕ್ಷಿಣಾಸ್ಯಾಂ ದಿಶಿ ಓಂ ಪದ್ಮಾಸಹಿತ ಶ್ರೀಗೋವಿಂದಾಯ ನಮಃ। ೫. ಓಂ ಪದ್ಮಿನೀಸಹಿತಾಯ ವಿಷ್ಣವೇ ಚ ನಮಃ। ೬. ನೈಋತ್ಯಕೋಣೇ ಓಂ ಕಮಲಾಲಯಾ ಸಮೇತಾಯ ಮಧುಸೂದನಾಯ ನಮಃ। ೭. ಪ್ರತೀಚ್ಯಾಂದಿಶಿ ಓಂ ರಮಾಪತಯೇ ತ್ರಿವಿಕ್ರಮಾಯ ನಮಃ। ೮. ಓಂ ವೃಷಾಕಪೀನಾಥಾಯ ವಾಮನಾಯ ನಮಃ। ೯. ವಾಯುವ್ಯಕೋಣೇ ಓಂ ಧನ್ಯಾಸಮೇತಾಯ ಶ್ರೀಧರಾಯ ನಮಃ। ೧೦. ಉದೀಚ್ಯಾಂದಿಶಿ ಓಂ ವೃದ್ಧಿರೂಪರಮಾಯುಜೇ ಹೃಷೀಕೇಶಾಯ ನಮಃ। ತಥಾ ೧೧. ಓಂ ಯಜ್ಞಾಸಮೇತಾಯ ಶ್ರೀಪದ್ಮನಾಭಾಯ ನಮಃ। ೧೨. ಐಶಾನ್ಯಕೋಣೇ ಓಂ ಇಂದಿರಾಪತಯೇ ಶ್ರೀದಾಮೋದರಾಯ ನಮಃ। ಇತಿ ಚತುರ್ಥಾವರಣಪೂಜಾ।

ಪಂಚಮಾವರಣ ಪೂಜೆ

ಪದ್ಮಮಾಲಾ ವಚನ

ಸಂಕರ್ಷಣಾದಿ ಕೃಷ್ಣಾಂತಾ ಮೂರ್ತಯೋ ದ್ವಾದಶ ಕ್ರಮಾತ್ ||೪೯||

ಕೆಲವರು ಈ ಶ್ಲೋಕವನ್ನು ಪ್ರಕ್ಷಿಪ್ತವೆಂದು ಹೇಳುತ್ತಾರೆ. ಮತ್ತೆ ಕೆಲವರು ಶುಕ್ಲ ಪಕ್ಷದಲ್ಲಿ ಚತುರ್ಥಾವರಣದಲ್ಲಿ ಕೇಶವಾದಿ ದ್ವಾದಶಮೂರ್ತಿಗಳನ್ನು ಪೂಜಿಸಿದಂತೆಯೇ ಕೃಷ್ಣಪಕ್ಷದಲ್ಲಿ ಸಂಕರ್ಷಣಾದಿ ದ್ವಾದಶಮೂರ್ತಿಗಳನ್ನು ಪೂಜಿಸಬೇಕು ಎನ್ನುತ್ತಾರೆ. ಕೆಲವರು ಸಂಕರ್ಷಣಾದಿ ದ್ವಾದಶಮೂರ್ತಿಗಳನ್ನು ಪ್ರತ್ಯೇಕ ಆವರಣವಾಗಿ ಗ್ರಹಿಸುವುದೇ ಇಲ್ಲ. ಪದ್ಮಮಾಲಾ (ಪ್ರಕ್ಷಿಪ್ತ) ಶ್ಲೋಕದಂತೆ ಕೇಶವಾದಿ ಮೂರ್ತಿಗಳನ್ನು ಪೂಜಿಸಿದಂತೆಯೇ ಸಂಕರ್ಷಣಾದಿ ರೂಪಗಳನ್ನೂ ಪೂಜಿಸಬೇಕೆಂದು ಅರ್ಥವಾಗುತ್ತದೆ.

ಸಂಕರ್ಷಣಾದಿ ದ್ವಾದಶಮೂರ್ತಿಗಳ ರಮಾರೂಪಗಳನ್ನೂ ವೃದ್ಧಹಾರೀತಸ್ಮೃತಿಯಲ್ಲಿ ಕೊಟ್ಟಿದೆ. (ಪ್ರಥಂ. ಪದ್ಮಮಾಲಾ, ದ್ವಿ.ಸಂ., ಪುಟ ೩೯, ೪ ಟಿಪ್ಪಣಿ)—

ಹಿರಣ್ಯಾ ಹರಿಣೀ ಸತ್ಯಾ ನಿತ್ಯಾಽಽನಂದಾ ತ್ರಯೀ ಸುಖಾ।
ಸುಗಂಧಾ ಸುಂದರೀ ವಿದ್ಯಾ ಸುಶೀಲಾ ಚ ಸುಲಕ್ಷಣಾ ।
ಸಂಕರ್ಷಣಾದಿ ಮೂರ್ತೀನಾಂ ಶಕ್ತಯಃ ಸಂಪ್ರಕೀರ್ತಿತಾಃ ॥

ಈಗ ಪಂಚಮಾವರಣದಲ್ಲಿ (ಒಂದು ಪಕ್ಷ ರೀತ್ಯಾ) ಸಂಕರ್ಷಣಾದಿ ಕೃಷ್ಣಾಂತ ದ್ವಾದಶಮೂರ್ತಿಗಳನ್ನು ಪೂಜಿಸುವ ಕ್ರಮವು ಹೀಗಿದೆ—

೧. ಪ್ರಾಚ್ಯಾಂ ದಿಶಿ ಓಂ ಹಿರಣ್ಯಾಸಹಿತಾಯ ಸಂಕರ್ಷಣಾಯ ನಮಃ । ೨. ಓಂ ಹರಿಣೀ ಸಮೇತಾಯ ವಾಸುದೇವಾಯ ಚ ನಮಃ । ೩. ಆಗ್ನೇಯಕೋಣೇ ಓಂ ಸತ್ಯಾಪತಯೇ ಪ್ರದ್ಯುಮ್ನಾಯ ನಮಃ । ೪. ದಕ್ಷಿಣಸ್ಯಾಂ ದಿಶಿ ಓಂ ನಿತ್ಯಾಪತಯೇ ಅನಿರುದ್ಧಾಯ ನಮಃ । ೫ ಓಂ ಆನಂದವಲ್ಲಭಾಯ ಪುರುಷೋತ್ತಮಾಯ ನಮಃ । ೬. ನೈರ್ಋತ್ಯಕೋಣೇ ಓಂ ತ್ರಯೀನಾಥಾಯ ಅಧೋಕ್ಷಜಾಯ ನಮಃ । ೭. ಪ್ರತೀಚ್ಯಾಂ ದಿಶಿ ಓಂ ಸುಖಾರೂಪರಮಾಯುಜೇ ನರಸಿಂಹಾಯ ನಮಃ । ೮. ಓಂ ಸುಗಂಧಾಭರ್ತ್ರೇ ಅಚ್ಯುತಾಯ ಚ ನಮಃ । ೯. ವಾಯವ್ಯಕೋಣೇ ಓಂ ಸುಂದರೀಪತಯೇ ಜನಾರ್ದನಾಯ ನಮಃ । ೧೦. ಉದೀಚ್ಯಾಂ ದಿಶಿ ಓಂ ವಿದ್ಯಾನಾಥಾಯ ಉಪೇಂದ್ರಾಯ ನಮಃ । ೧೧. ಓಂ ಸುಶೀಲಾವಲ್ಲಭಾಯ ಶ್ರೀಹರಯೇ ಚ ನಮಃ। ೧೨. ಐಶಾನ್ಯಕೋಣೇ ಸುಲಕ್ಷಣಾಸಮೇತಾಯ ಶ್ರೀಕೃಷ್ಣಾಯ ನಮಃ । ಇತಿ ಪಂಚಮಾವರಣಪೂಜಾ ।

ಗುರ್ವರ್ಥದೀಪಿಕೆಯಲ್ಲಿ (ಪ್ರಥಮ. ಪದ್ಯ., ಪುಟ ೬೪, ಟಿಪ್ಪಣಿ 5) "ಕೇಚಿತ್ತು 'ಕೇಶವಾದೀನಿ'ತ್ಯತ್ರ ಚತುರ್ವಿಂಶತಿಮೂರ್ತೀರಪಿ ಗೃಹೀತ್ವಾ ದಿಕ್ಷು ಕೋಣೇಷು ಚ ತಿಸ್ರಸ್ತಿಸ್ರ ಇತಿ ವದಂತಿ। ಅತ್ರ ಮೂಲಂ ಮೃಗ್ಯಮ್ " ಎಂದು ಹೇಳಿದ್ದಾರೆ. (ಅರ್ಥ) ಕೆಲವರು 'ಕೇಶವಾದೀನಿ' ಎಂಬಲ್ಲೇ ಕೇಶವಾದಿ ಇಪ್ಪತ್ತನಾಲ್ಕು ರೂಪಗಳನ್ನೂ ಗ್ರಹಣ ಮಾಡಿ ನಾಲ್ಕು ದಿಕ್ಕುಗಳು ನಾಲ್ಕು ಮೂಲೆಗಳು ಹೀಗೆ ಎಂಟು ದಿಕ್ಕುಗಳಲ್ಲೂ ಮೂರು ಮೂರು ಮೂರ್ತಿಗಳಂತೆ ಇಪ್ಪತ್ತನಾಲ್ಕು ಮೂರ್ತಿಗಳನ್ನೂ ಪೂಜಿಸಬೇಕೆಂದು ಹೇಳುತ್ತಾರೆ. ಆದರೆ ಇದಕ್ಕೆ ಏನು ಆಧಾರ ಇದೆ? ಎಂದು ವಿಚಾರಿಸಬೇಕಾದ ವಿಷಯ— ಎಂದು ಹೇಳಿದೆ.

ಪಕ್ಷಾಂತರೇ ಪಂಚಮಾವರಣಮ್

ತಂತ್ರಸಾರದ ವಾಕ್ಯ

ಮತ್ಸ್ಯಂ ಕೂರ್ಮಂ ವರಾಹಂ ಚ ನಾರಸಿಂಹಂ ಚ ವಾಮನಮ್।'೬೨॥
ಭಾರ್ಗವಂ ರಾಘವಂ ಕೃಷ್ಣಂ ಬುದ್ಧಂ ಕಲ್ಕಿನಮೇವ ಚ।
ಅನಂತಂ ವಿಶ್ವರೂಪಂ ಚ ತದ್ಬಹಿಃ ಪೂಜಯೇತ್ ಕ್ರಮಾತ್ ॥ ೬೩ ॥

(ಅರ್ಥ ಸ್ಪಷ್ಟವಾಗಿದೆ) ತದ್ಬಹಿಃ—ಆದರ (ನಾಲ್ಕನೆಯ ಆವರಣದ) ಹೊರಗಡೆ, ಕ್ರಮಾತ್-ಕ್ರಮವಾಗಿ, ಮತ್ಸ್ಯಾದಿ ದಶಾವತಾರಗಳನ್ನೂ, ಜೊತೆಗೆ ಅನಂತ-ವಿಶ್ವರೂಪಗಳೆಂಬ ಎರಡನ್ನು ಸೇರಿಸಿ ಹನ್ನೆರಡು ಮೂರ್ತಿಗಳನ್ನು; ಪೂಜಯೇತ್—ಪೂಜಿಸಬೇಕು. ಹಿಂದೆ ಹೇಳಿದಂತೆ ಪ್ರಧಾನ ದಿಕ್ಕುಗಳಲ್ಲಿ ಎರಡೆರಡು ರೂಪಗಳು ಮತ್ತು ಕೋಣಗಳಲ್ಲಿ ಒಂದೊಂದು ಎಂಬ ಕ್ರಮದಲ್ಲಿ (ಕ್ರಮಾತ್) ಪೂಜಿಸಬೇಕೆಂದು ಭಾವ.

ಪದ್ಯಮಾಲಾ ಹೇಳಿಕೆ

ಮತ್ಸ್ಯಾದಿಮೂರ್ತಯೋಽನಂತೋ ದ್ವಾದಶಾಂತಂ ಕ್ರಮಾದ್ಯಜೇತ್।
ಐಶಾನ್ಯಾಂ ವಿಶ್ವರೂಪಃ ಸ್ಯಾತ್ ಕ್ರಮೇಣಾನೇನ ಪೂಜಯೇತ್ ॥೯೦॥

(ಅರ್ಥ) ಮತ್ಸ್ಯಾದಿ ಮೂರ್ತಯಃ—ಮತ್ಸ್ಯಕೂರ್ಮಾದಿ ಹತ್ತು ರೂಪಗಳು, ಅನಂತಃ-ಹನ್ನೊಂದನೆಯದಾಗಿ ಅನಂತ, ಮತ್ತು ಹನ್ನೆರಡನೆಯದಾಗಿ ವಿಶ್ವರೂಪ— ಹೀಗೆ, ದ್ವಾದಶಾಂತಂ—ಹನ್ನೆರಡು ರೂಪಗಳನ್ನು, ಕ್ರಮಾತ್—ದಿಕ್ಕುಗಳಲ್ಲಿ ಎರಡೆರಡು, ಕೋಣಗಳಲ್ಲಿ ಒಂದೊಂದು ಎಂದು ಹಿಂದೆ ಹೇಳಿದ ಕ್ರಮದಂತೆ, ಯಜೇತ್—ಪೂಜಿಸಬೇಕು. ಐಶಾನ್ಯಾಂ—ಐಶಾನ್ಯಕೋಣೆಯಲ್ಲಿ, ವಿಶ್ವರೂಪಃ ಸ್ಯಾತ್—ವಿಶ್ವರೂಪನು ಬರುವಂತೆ, ಅನೇನ ಕ್ರಮೇಣ—ಈ ಕ್ರಮದಲ್ಲಿ, ಪೂಜಯೇತ್—ಪೂಜಿಸಬೇಕು.

ಮತ್ಸ್ಯಾದಿ ದಶಾವತಾರಗಳಲ್ಲಿ ರಮಾರೂಪಗಳನ್ನೂ ವೃದ್ಧಹಾರೀತಸ್ಮೃತಿಯಲ್ಲಿ ಹೀಗೆ ಹೇಳಿದೆ (ಪ್ರಥಂ. ಪರ್ವ., ದ್ವಿ.ಸಂ., ಪುಟ ೬೦, ಟಿಪ್ಪಣಿ ೯)—

ವೇದಾ ವೇದವತೀ ಧಾತ್ರೀ ಮಹಾಲಕ್ಷ್ಮೀಃ ಸುಖಾಲಯಾ ।
ಹರಿಣೀ ಚೈವ ಸೀತಾ ಚ ರುಕ್ಮಿಣೀ ರೇವತೀ ಪ್ರಭಾ ।
ಮತ್ಸ್ಯಕೂರ್ಮಾದಿಮೂರ್ತೀನಾಂ ಶಕ್ತಯಃ ಸಂಪ್ರಕೀರ್ತಿತಾಃ ॥

(ವಿವರಣೆ) ಮತ್ಸ್ಯನಿಗೆ ವೇದಾ; ಕೂರ್ಮನಿಗೆ ವೇದವತೀ; ವರಾಹನಿಗೆ ಧಾತ್ರೀ (ಭೂದೇವಿ ಅಥವಾ ಧರಾದೇವಿ), ನರಸಿಂಹನಿಗೆ ಮಹಾಲಕ್ಷ್ಮೀ; ವಾಮನನಿಗೆ ಸುಖಾಲಯಾ; ಪರಶುರಾಮನಿಗೆ ಹರಿಣೀ; ರಾಮನಿಗೆ ಸೀತೆ; ಕೃಷ್ಣನಿಗೆ ರುಕ್ಮಿಣೀ; ಬುದ್ಧನಿಗೆ ರೇವತೀ; ಕಲ್ಕಿಗೆ ಪ್ರಭಾದೇವೀ.

ಪಂಚಮಾವರಣದಲ್ಲಿ ಪೂಜಾಕ್ರಮ

೧. ಪ್ರಾಚ್ಯಾಂ ದಿಶಿ ಓಂ ವೇದಾಸಹಿತ ಮತ್ಸ್ಯಾಯ ನಮಃ । ಓಂ ವೇದವತೀ ಸಹಿತಾಯ ಕೂರ್ಮಾಯ ನಮಃ । ೨. ಆಗ್ನೇಯಕೋಣೇ ಓಂ ಧಾತ್ರೀಪತಯೇ ವರಾಹಾಯ ನಮಃ । ೩. ಯಾಮ್ಯಾಂ ದಿಶಿ ಮಹಾಲಕ್ಷ್ಮೀಸಮೇತಾಯ ಶ್ರೀನರಸಿಂಹಾಯ ನಮಃ । ಓಂ ಸುಖಾಲಯಾಪತಯೇ ವಾಮನಾಯ ಚ ನಮಃ । ೪. ನೈಋತ್ಯಕೋಣೇ ಓಂ ಹರಿಣೀಪತಯೇ ಪರಶುರಾಮಾಯ ನಮಃ । ೫. ಪ್ರತೀಚ್ಯಾಂ ದಿಶಿ ಓಂ ಸೀತಾಪತಯೇ ಶ್ರೀರಾಮಾಯ ನಮಃ । ತಥಾ ಓಂ ಶ್ರೀರುಕ್ಮಿಣೀನಾಥಾಯ ಶ್ರೀಕೃಷ್ಣಾಯ ನಮಃ । ೬. ವಾಯವ್ಯಕೋಣೇ ಓಂ ರೇವತೀವಲ್ಲಭಾಯ ಬುದ್ಧಾಯನಮಃ । ೭. ಉದೀಚ್ಯಾಂ ದಿಶಿ ಓಂ ಪ್ರಭಾಪತಯೇ ಕಲ್ಕಯೇ ನಮಃ । ಓಂ ಅನಂತಾಯ ಚ ನಮಃ । ೮. ಐಶಾನ್ಯಕೋಣೇ ಓಂ ವಿಶ್ವರೂಪಾಯ ನಮಃ । ಇತಿ (ಪಕ್ಷಾಂತರೇ) ಪಂಚಮಾವರಣಪೂಜಾ ।

ಷಷ್ಠಾವರಣ ಪೂಜಾ

ತಂತ್ರಸಾರದ ವಚನ

ಅನಂತಬ್ರಹ್ಮವಾಯ್ವೀಶಾನ್ ವೀಶಂ ಚಾಗ್ರೇ ಪ್ರಪೂಜಯೇತ್ ।
ವಾರುಣೀಂ ಚೈವ ಗಾಯತ್ರೀಂ ಭಾರತೀಂ ಗಿರಿಜಾಮಪಿ ॥ ೬೪ ॥
ಕೋಣೇಷು ವೀಂದ್ರವಾಮೇ ಚ ಸೌಪರ್ಣೀಂ ಪೂಜಯೇದಪಿ ।

(ಅರ್ಥ) ಪಂಚಮಾವರಣದ ಹೊರಭಾಗದಲ್ಲಿ (ಆರನೇ ಆವರಣದಲ್ಲಿ ಪೂರ್ವಾದಿ ದಿಕ್ಕುಗಳಲ್ಲಿ), ಅನಂತ–ಶೇಷದೇವರನ್ನೂ, ಬ್ರಹ್ಮ-ಚತುರ್ಮುಖ ಬ್ರಹ್ಮನನ್ನೂ,

ವಾಯುಂ-ಮುಖ್ಯಪ್ರಾಣನನ್ನೂ, ಈಶಾನ್-ರುದ್ರದೇವರನ್ನೂ, ಪ್ರಪೂಜಯೇತ್-ಪೂಜಿಸಬೇಕು. ಅಗ್ರೇ-ದೇವರ ಮುಂಭಾಗದಲ್ಲಿ, ವೀಶಂ ಚ-ಗರುಡನನ್ನೂ, ಪ್ರಪೂಜಯೇತ್-ಪೂಜಿಸಬೇಕು. ಕೋಣೇಷು-ಆಗ್ನೇಯಾದಿ ಮೂಲೆಗಳಲ್ಲಿ, ವಾರುಣೀಂ ಚೈವ-ಶೇಷಪತ್ನಿಯಾದ ವಾರುಣಿಯನ್ನೂ, ಗಾಯತ್ರೀಂ-ಬ್ರಹ್ಮಪತ್ನಿಯಾದ ಗಾಯತ್ರೀನಾಮಕ ಸರಸ್ವತಿಯನ್ನೂ, ಭಾರತೀಂ-ವಾಯುಪತ್ನಿಯಾದ ಭಾರತೀದೇವಿಯನ್ನೂ, ಗಿರಿಜಾಂ ಅಪಿ-ರುದ್ರಪತ್ನಿಯಾದ ಪಾರ್ವತಿಯನ್ನೂ ಕ್ರಮವಾಗಿ, ಪೂಜಯೇತ್-ಪೂಜಿಸಬೇಕು. ವೀಂದ್ರವಾಮೇ ಚ-ಗರುಡನ ಎಡಪಕ್ಕದಲ್ಲಿ, ಸೌಪರ್ಣೀಂ-ಗರುಡಪತ್ನಿಯಾದ ಸೌಪರ್ಣೀದೇವಿಯನ್ನೂ, ಪೂಜಯೇತ್ ಅಪಿ-ಪೂಜಿಸಬೇಕು.

ಪದ್ಮಮಾಲಾ ವಚನ

ಸರ್ವದಿಕ್ಷು ಪುನಶ್ಚಾಪಿ ಹ್ಯನಂತಾದೀನ್ ಸಭಾರ್ಯಕಾನ್ ।

(ಅರ್ಥ) ಐದನೇ ಆವರಣದಲ್ಲಿ ಮಾಡಿದಂತೆಯೇ ಪುನಃ ಪೂರ್ವಾದಿ ಎಂಟು ದಿಕ್ಕುಗಳಲ್ಲೂ ಅನಂತಾದಿ (ತಂತ್ರಸಾರೋಕ್ತ) ನಾಲ್ಕು ದೇವತೆಗಳನ್ನೂ ಅವರ ಪತ್ನಿಯರನ್ನೂ ಪೂಜಿಸಬೇಕು.

ಆರನೇ ಆವರಣದ ಪೂಜಾಕ್ರಮ

ತದ್ಬಹಿಃ ಷಷ್ಠಾವರಣೇ ೧. ಪ್ರಾಚ್ಯಾಂ ದಿಶಿ ಓಂ ಅನಂತಾಯ ನಮಃ। ೨. ಆಗ್ನೇಯಕೋಣೇ ಓಂ ವಾರುಣ್ಯೈ ನಮಃ ೩. ಯಾಮ್ಯಾಂ ದಿಶಿ ಓಂ ಬ್ರಹ್ಮಣೇ ನಮಃ। ೪. ನೈಋತ್ಯಕೋಣೇ ಓಂ ಗಾಯತ್ರ್ಯೈ ನಮಃ। ೫. ಪ್ರತೀಚ್ಯಾಂ ದಿಶಿ ಓಂ ಪ್ರಧಾನ ವಾಯವೇ ನಮಃ। ೬. ವಾಯವ್ಯಕೋಣೇ ಓಂ ಭಾರತ್ಯೈ ನಮಃ। ೭. ಉದೀಚ್ಯಾಂ ದಿಶಿ ಓಂ ಈಶಾಯ (ರುದ್ರಾಯ) ನಮಃ। ೮. ಐಶಾನ್ಯಕೋಣೇ ಓಂ ಗಿರಿಜಾಯೈ ನಮಃ। ೯. ದೇವಸ್ಯಾಗ್ರೇ ಓಂ ಗರುಡಾಯ ನಮಃ। ತದ್ವಾಮಪಾರ್ಶ್ವೇ ಸೌಪರ್ಣ್ಯೈ ನಮಃ।

ಆದರೆ 'ಯೋಗದೀಪಿಕಾ'ದಲ್ಲಿ ಅನಂತನನ್ನು ಪಶ್ಚಿಮದಲ್ಲೂ ಬ್ರಹ್ಮನನ್ನು ಉತ್ತರದಲ್ಲೂ ವಾಯುವನ್ನು ಪೂರ್ವದಲ್ಲೂ ರುದ್ರನನ್ನು ದಕ್ಷಿಣದಲ್ಲೂ ಪೂಜಿಸಬೇಕೆಂದು ಹೇಳಿದೆಯೆಂದು ಶ್ರೀ ಪ್ರಭಂಜನರ ಪದ್ಮಮಾಲಾ (ದ್ವಿ.ಸಂ. ಪುಟ ೬೦, ಟಿಪ್ಪಣಿ 7) ಸೂಚಿಸುತ್ತಾರೆ—

ತದ್ಬಹಿಃ ಪೃಷ್ಠತೋಽನಂತಂ ಬ್ರಹ್ಮಾಣಂ ಸವ್ಯತೋ ಯಜೇತ್।
ಪುರೋ ವಾಯುಂ ಚ ಗರುಡಂ ರುದ್ರಂ ದಕ್ಷಿಣತೋ ಯಜೇತ್।

ಈ ಪಕ್ಷಕ್ಕೂ ಆಧಾರಗಳಿರುವುದರಿಂದ ಎರಡು ಪಕ್ಷಗಳೂ ಪ್ರಾಮಾಣಿಕವೆಂದು ತಿಳಿಯಬೇಕು. ಇಲ್ಲಿಗೆ ಷಷ್ಠಾವರಣಪೂಜಾಕ್ರಮ ಮುಗಿಯಿತು.

ಸಪ್ತಮಾವರಣ ಪೂಜೆ

ತಂತ್ರಸಾರದ ವಾಕ್ಯ

ಇಂದ್ರಾದೀನ್ ಶೇಷ-ವಿಧ್ಯಂತಾನ್
ಸಭಾರ್ಯಾನ್ ಸಪರಿಗ್ರಹಾನ್ ॥ ೬೫ ॥

(ಅರ್ಥ) ಸಪ್ತಾವರಣದ ಹೊರಗಡೆ, ಸಭಾರ್ಯಾನ್-ಪತ್ನೀಸಮೇತರಾದ, ಸಪರಿಗ್ರಹಾನ್-ಆಯುಧಾದಿಸಮೇತರಾದ, ಇಂದ್ರಾದೀನ್-ಇಂದ್ರಾದಿ ಅಷ್ಟದಿಕ್ಪಾಲಕರನ್ನು ಎಂಟು ದಿಕ್ಕುಗಳಲ್ಲೂ ಕೆಳದಿಕ್ಕಿನಲ್ಲೂ ಊರ್ಧ್ವದಿಕ್ಕಿನಲ್ಲೂ, ಶೇಷ ವಿಧಿ ಅಂತಾನ್-ಆದಿಶೇಷ ಮತ್ತು ಬ್ರಹ್ಮದೇವರು ಸಹಿತವಾಗಿ, ಪ್ರಪೂಜಯೇತ್-ಪೂಜಿಸಬೇಕು.

ವಿಷ್ಣುತೀರ್ಥೀಯದಲ್ಲಿ (III-16)

ಅನಂತಂ ವರುಣಸ್ಯಾಪಿ ನಿರ್ಋತೇರ್ಮಧ್ಯತೋ ಯಜೇತ್ ।
ಇಂದ್ರೇಶಾನಯೋರ್ಮಧ್ಯೇ ಬ್ರಹ್ಮಾಣಂ ವೈ ಪ್ರಪೂಜಯೇತ್ ।

—ಎಂದರೆ, ಶೇಷನನ್ನು ಪಶ್ಚಿಮದಿಕ್ಕಿನಲ್ಲಿ ವರುಣನಿಗೂ ನಿರ್ಋತಿಗೂ ಮಧ್ಯದಲ್ಲೂ ಬ್ರಹ್ಮನನ್ನು ಪೂರ್ವದಲ್ಲಿ ಇಂದ್ರನಿಗೂ ಈಶಾನನಿಗೂ ಮಧ್ಯದಲ್ಲಿ ಪೂಜಿಸಬೇಕೆಂದು ಹೇಳಿದೆ. ಆದರೆ ಯೋಗದೀಪಿಕಾದಲ್ಲಿ 'ಅಧಊರ್ಧ್ವಮಹಿರ್ವಿಧಿಃ' ಎಂದರೆ ಅಹಿಃ-ಶೇಷನನ್ನು, ಅಧಃ-ಕೆಳಭಾಗದಲ್ಲೂ, ವಿಧಿಃ-ಬ್ರಹ್ಮನನ್ನು, ಊರ್ಧ್ವಂ-ಮೇಲುಭಾಗದಲ್ಲೂ ಪೂಜಿಸಬೇಕೆಂದು ಹೇಳಿದೆಯೆಂದೂ ಎರಡು ಪಕ್ಷಗಳನ್ನು ತಂತ್ರಸಾರ ಟೀಕೆಯಲ್ಲಿ ತೋರಿಸಿದ್ದಾರೆ.

ಅಲ್ಲದೆ ಇಂದ್ರಾದಿ ಅಷ್ಟದಿಕ್ಪಾಲಕರನ್ನು ಯಾವಯಾವ ಬೀಜಾಕ್ಷರಗಳಿಂದ ಅರ್ಚಿಸಬೇಕೆಂಬುದನ್ನು ಶಾರದಾತಿಲಕಾದಿಗ್ರಂಥಗಳಲ್ಲಿ ಹೇಳಿದ್ದನ್ನೂ ಛಲಾರೀ ಟೀಕೆಯಲ್ಲಿ ತೋರಿಸಿದ್ದಾರೆ—

ಓಂ ಲಾಂ ಇಂದ್ರಾಯ । ಓಂ ರಾಂ ಅಗ್ನಯೇ । ಓಂ ಯಾಂ ಯಮಾಯ । ಓಂ ಕ್ಷಾಂ ನಿರ್ಋತಯೇ । ಓಂ ವಾಂ ವರುಣಾಯ । ಓಂ ಯಾಂ ವಾಯವೇ । ಓಂ ಸಾಂ ಸೋಮಾಯ । ಓಂ ಹಾಂ ರುದ್ರಾಯ । ಓಂ ಅಂ ಶೇಷಾಯ । ಓಂ ಹ್ರೀಂ ಬ್ರಹ್ಮಣೇ ।

'ಶಾರದಾತಿಲಕ'ವೆಂಬ ಗ್ರಂಥದಲ್ಲಿ ಇಂದ್ರಾದಿಗಳ ಆಯುಧಾದಿಗಳ ವಿವರಣೆ ಕೊಟ್ಟಿದೆ (ತಂತ್ರಸಾರ ಟೀಕಾ, ೧ ಅ, ೧೬ ಶ್ಲೋ, ಪುಟ ೨೭)—

ಅಂತೇ ಯಜೇಲ್ಲೋಕಪಾಲಾನ್ ಮೂಲಪಾರಿಷದಾನ್ವಿತಾನ್ ।

(ಅರ್ಥ) ಕೊನೆಯ (ಆವರಣದ)ಲ್ಲಿ ಪರಿವಾರಸಮೇತರಾದ ಲೋಕಪಾಲಕರನ್ನು ಅರ್ಚಿಸಬೇಕು. 'ಮೂಲಬೀಜಾನ್ವಿತಾನ್' ಎಂದರೆ ಹಿಂದೆ ತೋರಿಸಿದ ಬೀಜಾಕ್ಷರಗಳ (ಲಾಂ, ರಾಂ ಇತ್ಯಾದಿ) ಸಹಿತ ಎಂದರ್ಥ (ಭಲಾರೀ). ಆ ಕ್ರಮವನ್ನೇ ಹೇಳುತ್ತಾರೆ—

ಇಂದ್ರಂ ಸುರಾಧಿಪಂ ಪೀತಂ ವಜ್ರಹಸ್ತಂ ಸನಾತನಮ್ ।
ಅಗ್ನಿಂ ತೇಜೋಽಧಿಪಂ ರಕ್ತಂ ಶಕ್ತಿಹಸ್ತಂ ಸುಭೂಷಣಮ್ ॥
ಯಮಂ ಪ್ರೇತಾಧಿಪಂ ಕೃಷ್ಣಂ ದಂಡಹಸ್ತಂ ಸಮರ್ಚಯೇತ್ ।
ರಕ್ಷೋಽಧಿಪಂ ಚ ನೈರ್ಋತಿಂ ಖಡ್ಗಹಸ್ತಂ ಸುಧೂಮ್ರಕಮ್ ॥
ಪಾಶಹಸ್ತಂ ಸುಶುಭ್ರಾಂಗಂ ವರುಣಂ ಚಾಂಬಸಾಂ ಪತಿಮ್ ।
ವಾಯುಂ ಪ್ರಾಣಾಧಿಪಂ ಧೂಮ್ರ—ಮಂಕುಶಾಢ್ಯಕರಂ ಯಜೇತ್ ॥
ನಕ್ಷತ್ರಾಣಾಂ ಪತಿಂ ಸೋಮಂ ಶುಕ್ಲವರ್ಣಂ ಗದಾಧರಮ್ ॥
ವಿದ್ಯಾಧಿಪಂ ತಥೇಶಾನಂ ಸ್ವಚ್ಛಂ ಶೂಲಕರಂ ಯಜೇತ್ ॥
ನಾಗಾಧಿಪಂ ತಥಾಽನಂತಂ ಗೌರಂ ಚಕ್ರಕರಂ ಯಜೇತ್ ।
ಲೋಕಾಧಿಪಂ ವಿಧಾತಾರಂ ರಕ್ತಂ ಪದ್ಮಕರಂ ಯಜೇತ್ ॥

ಅಷ್ಟದಿಕ್ಪಾಲಕರ ಬೀಜಾಕ್ಷರಗಳು ಲ, ರ, ಯ, ಕ್ಷ, ವ, ಯ, ಸ, ಹ, ಅ ಮತ್ತು ಹ್ರೀ. ಏತೇ ದೀರ್ಘ ಬಿಂದುಯುಕ್ತಾಃ ಬೀಜಾಕ್ಷರಾಣಿ ಭವಂತಿ ।'—ಇವನ್ನು ದೀರ್ಘ ಮಾಡಿ ಬಿಂದು ಸೇರಿಸಿದರೆ ಬೀಜಾಕ್ಷರಗಳಾಗುತ್ತವೆ. ಯಮನಿಗೂ ವಾಯುವಿಗೂ ಯಾಂ ಎಂಬುದೇ ಬೀಜಾಕ್ಷರ.

ಅಷ್ಟದಿಕ್ಪಾಲಕರ ಆಯುಧಗಳನ್ನು ಭಲಾರಿ ಟೀಕೆಯಲ್ಲಿ ಹೀಗೆ ಕೊಟ್ಟಿದ್ದಾರೆ—

ಐರಾವತಸ್ತಥಾ ಮೇಷೋ ಮಹಿಷಃ ಪ್ರೇತಸಂಜ್ಞಕಃ ।
ಮಕರೋಽಥ ಮೃಗಃ ಪಶ್ಚಾತ್ ತುರಗೋ ವೃಷಭಸ್ತಥಾ ॥
ಕೂರ್ಮೋ ಹಂಸಃ ಕ್ರಮಾದೇಷಾಂ ವಾಹನಾನಿ ವಿದುರ್ಬುಧಾಃ ।

(ಅರ್ಥ) ಇಂದ್ರನ ವಾಹನ ಐರಾವತ, ಅಗ್ನಿಯದು ಮೇಷ (ಟಗರು), ಯಮನ ವಾಹನ ಮಹಿಷ (ಕೋಣ), ನಿರ್ಋತಿಯದು ಪ್ರೇತ, ವರುಣನದು ಮಕರ (ಮೊಸಳೆ), ವಾಯುವಿನದು ಮೃಗ (ಜಿಂಕೆ), ಸೋಮನದು ತುರಗ, ರುದ್ರನದು ವೃಷಭ (ಬಸವ), ಶೇಷನ ವಾಹನ ಕೂರ್ಮವಾದರೆ, ಬ್ರಹ್ಮನು ಹಂಸವಾಹನ.

ಶ್ರೀ ಪ್ರಭಂಜನರು ಗನ್ಧರ್ವಧರ್ಮದೀಧಿತಿಯಲ್ಲಿ ಉದ್ಧರಿಸಿದ ನಾರದೋಕ್ತ ಅಷ್ಟಾಕ್ಷರ ಧೀಪಿಕಾದಿಂದ (ಪದ್ಯಮಾಲಾ, ದ್ವಿ. ಸಂ. ಪುಟ ೬೨, ಟಿಪ್ಪಣಿ 10) ಇಂದ್ರಾದಿದೇವತೆಗಳ ಆಯುಧಾದಿಗಳ ವಿವರಣೆಯನ್ನು ಹೀಗೆ ಕೊಟ್ಟಿದ್ದಾರೆ—

೧. ಇಂದ್ರನ ಸ್ತುತಿ

ಪೀತಃ ಸಹಸ್ರನಯನೋ ಮತ್ತೈರಾವತವಾಹನಃ ।
ಚಿತ್ರಾಲಂಕಾರಮಾಲಾಢ್ಯೋ ವಜ್ರೀ ಧ್ಯೇಯಃ ಸುರೇಶ್ವರಃ ॥

ಇಂದ್ರನು ಪೀತವರ್ಣವುಳ್ಳವನು, ಸಹಸ್ರಾಕ್ಷ (ಸಾವಿರ ಕಣ್ಣುಳ್ಳವನು). ಅವನ ವಾಹನ ಐರಾವತ. ನಾನಾಲಂಕಾರಭೂಷಿತನಾಗಿದ್ದಾನೆ. ಅವನ ಆಯುಧ ವಜ್ರ. ಅವನು ಸುರಾಧಿಪ. ಇಂಥಾ ಇಂದ್ರನಿಗೆ ನಮಸ್ಕಾರ.

೨. ಅಗ್ನಿಯ ಸ್ತುತಿ

ಪ್ರೋತ್ತಪ್ತಕನಕಪ್ರಖ್ಯೋ ಮೇಷಪೃಷ್ಠಂ ಸಮಾಶ್ರಿತಃ ।
ತ್ರಿನೇತ್ರಃ ಶಕ್ತಿಭೃದ್ವಹ್ನಿಃ ಸ್ಮರ್ತವ್ಯೋ ಜ್ವಲದಾನನಃ ॥

(ಅರ್ಥ) ಕಾಯಿಸಿದ ಬಂಗಾರದಂತಿರುವನು. ಮೇಷವಾಹನನು. ಮೂರು ಕಣ್ಣುಗಳುಳ್ಳವನು. ಶಕ್ತ್ಯಾಯುಧವನ್ನು ಧರಿಸಿದ್ದಾನೆ. ಪ್ರಜ್ವಲಿಸುತ್ತಿರುವ ಮುಖವುಳ್ಳ ಅಗ್ನಿಯನ್ನು ಧ್ಯಾನಿಸತಕ್ಕದ್ದು.

೩. ಯಮನ ಸ್ತುತಿ

ತೀಕ್ಷ್ಣಶೃಂಗಮಹಿಷೋತ್ತಮಸ್ಥಿತಃ ಕಾಲಮೇಘಚಯಕಾಲವಿಗ್ರಹಃ ।
ದಂಡಪಾಣಿರಪಿ ಭೂಷಣೋಜ್ಜ್ವಲ—ಶ್ಚಿಂತ್ಯತಾಂ ಪಿತೃಪತಿಸ್ತ್ರಿಲೋಚನಃ ॥

(ಅರ್ಥ) ಚೂಪಾದ ಕೊಂಬಿರುವ ಕೋಣದ ಮೇಲಿರುವ ಕಾರ್ಮೋಡಗಳ ಗುಂಪಿನಂತೆ ಕಪ್ಪಾದ ಮೈಯುಳ್ಳ ದಂಡಧರನಾದ ಅನೇಕ ಆಭರಣಭೂಷಿತನಾದ ಪಿತೃದೇವತೆಗಳಿಗೆ ಒಡೆಯನಾದ ಮುಕ್ಕಣ್ಣನಾದ ಯಮನನ್ನು ಧ್ಯಾನಿಸತಕ್ಕದ್ದು.

೪. ನಿರ್ಋತಿಯ ಸ್ತುತಿ

ಧೂಮ್ರಮೂರ್ತಿರತಿಭೀಷಣಾಕೃತಿರ್ ಹಸ್ತಿಸಂಸ್ಥಿತಮಹಾಸಿಶೋಭಿತಃ ।
ತ್ರ್ಯಕ್ಷಣೋಜ್ಜ್ವಲದಮೋಚಕಾಂಬರಃ ಸ್ಮರ್ಯತಾಂ ನರಗತೋ ನಿಶಾಚರಃ॥

(ಅರ್ಥ) ಕಂದುಬಣ್ಣದ ದೇಹವುಳ್ಳವನು, ಭಯಂಕರವಾದ ಆಕಾರವುಳ್ಳವನು. ಆನೆಯ ಮೇಲೆ ಕೂತಿದ್ದಾನೆ. ದೊಡ್ಡ ಖಡ್ಗವನ್ನು ಧರಿಸಿದ್ದಾನೆ. ಮೂರು ಕಣ್ಣುಳ್ಳವನು.

ಮೇಘದಂತೆ ನೀಲಬಣ್ಣದ ಪೀತಾಂಬರವನ್ನು ಉಟ್ಟಿದ್ದಾನೆ. ನರವಾಹನನಾದ ನಿರ್ಋತಿಯನ್ನು ಸ್ಮರಣೆ ಮಾಡಿರಿ.

೫. ವರುಣಸ್ತುತಿ

ಇಂದುಕುಂದಧವಲೋ ಮಹಾಮಣಿ-
ಪ್ರೋಜ್ಜ್ವಲಾಭರಣಮಾಲಮಂಡಿತಃ ।
ಪಾಶಶೋಭಿತಕರೋ ಜಲೇಶ್ವರಃ
ಶ್ಲಕ್ಷ್ಣೋ ಮಕರವಾಹನೋತ್ತಮಃ ॥

(ಅರ್ಥ) ಚಂದ್ರನಂತೆ ಬೆಳ್ಳಗಿರುವ ಮೈಬಣ್ಣವುಳ್ಳವನು. ಮಹಾಮಣಿಗಳಿಂದ ಪ್ರಜ್ವಲಿಸುತ್ತಿರುವ ಆಭರಣಗಳಿಂದಲೂ ರತ್ನಹಾರಗಳಿಂದಲೂ ಶೋಭಿಸುತ್ತಿದ್ದಾನೆ. ಕೈಯಲ್ಲಿ ಪಾಶವನ್ನು ಧರಿಸಿದ್ದಾನೆ. ಮಕರ (ಮೊಸಳೆ) ವಾಹನನು. ಬಹಳ ಸುಂದರನಾಗಿರುವ ವರುಣನನ್ನು ಧ್ಯಾನಿಸತಕ್ಕದ್ದು.

೬. ವಾಯುದೇವನ ಸ್ತುತಿ

ಧೂಮಧೂಮ್ರವಪುಷಂ ತ್ರಿಲೋಚನಂ
ಪಾಣಿಪಲ್ಲವಗದಾಂಕುಶಾಂಕಿತಮ್ ।
ವಾಯುಮಾಯುರಧಿಪಂ ಶರೀರಿಣಾಂ
ಅಂಬರೀಷಹರಿಣಸ್ಥಿತಂ ಸ್ಮರೇತ್ ॥

(ಅರ್ಥ) ಹೊಗೆಯಂತೆ ಮಾಸಲುಗಪ್ಪುಬಣ್ಣದ ದೇಹವುಳ್ಳವನು. ಮುಕ್ಕಣ್ಣ. ಚಿಗುರಿನಂತೆ ಕೋಮಲವಾದ ಕೈಗಳಲ್ಲಿ ಗದೆಯನ್ನೂ ಅಂಕುಶವನ್ನೂ ಧರಿಸಿದ್ದಾನೆ. ಜನರ ಉಸಿರಾಟಕ್ಕೆ ಬೇಕಾದ ಗಾಳಿಯ ರೂಪದಲ್ಲಿದ್ದಾನೆ. ಆಕಾಶದಲ್ಲಿ ಸಂಚರಿಸುತ್ತಿರುತ್ತಾನೆ ಜಿಂಕೆಯೇ ವಾಹನವಾಗಿರುವವನು. ಇಂಥಾ ವಾಯುವನ್ನು ಸ್ಮರಿಸತಕ್ಕದ್ದು.

೭. ಚಂದ್ರನ (ಸೋಮನ) ಸ್ತುತಿ

ಚಿಂತಯಾಮಲವಿಲೋಚನದ್ವಯಂ
ರಾಜತಾದ್ರಿರುಚಿರಂ ನಿಶಾಕರಮ್ ।
ತುಂಗವಲ್ಲಿತತುರಂಗಮಾಸ್ಥಿತಂ
ಸರ್ವತಾರಕಪತಿಂ ನಭಃಸ್ಥಿತಮ್ ॥

(ಕಠಿನ ಶಬ್ದಾರ್ಥ) ಚಿಂತಯ-ಧ್ಯಾನಿಸು, ವಿಲೋಚನ-ಕಣ್ಣು, ದ್ವಯ-ಎರಡು, ರಾಜತಾದ್ರಿ-ಬೆಳ್ಳಿ ಬೆಟ್ಟ, ಮೇರುಪರ್ವತ, ರುಚಿರ-ಸುಂದರವಾದ, ತುಂಗ-ಎತ್ತರವಾದ,

ವಲ್ಗಿತ–ವೇಗವುಳ್ಳ, ತುರಂಗಮ–ಕುದುರೆ, ತಾರಕ–ನಕ್ಷತ್ರಗಳು, ನಭಃಸ್ಥಿತ–ಆಕಾಶದಲ್ಲಿರುವ.

(ಅರ್ಥ) ಚಂದ್ರನು ಆಕಾಶದಲ್ಲಿ ಶೋಭಿಸುತ್ತಿದ್ದಾನೆ. ಅವನಿಗೆ ಶುಭ್ರವಾದ ಎರಡು ಕಣ್ಣುಗಳಿವೆ. ಮೇರುಪರ್ವತದಂತೆ ಬೆಳ್ಳಗೆ ಹೊಳೆಯುತ್ತಿದ್ದಾನೆ. ಎತ್ತರವಾದ, ವೇಗವಾಗಿ ಓಡುವ ಕುದುರೆಯ ಮೇಲೆ ಕುಳಿತಿದ್ದಾನೆ. ಸಕಲ ನಕ್ಷತ್ರಗಳಿಗೂ ಒಡೆಯನಾಗಿದ್ದಾನೆ. ಇಂಥಾ ಚಂದ್ರನನ್ನು ಚಿಂತನೆ ಮಾಡು.

೮. ಈಶ್ವರನ ಸ್ತುತಿ

ಶಾತಶೂಲವಿಲಸತ್ಕರಾಂಬುಜಂ ಶಂಕರಂ
ಶಶಕರಂ ಶಶಭೃತಾ ವಿಭೂಷಿತಮ್ ।
ರಾಜತಾದ್ರಿನಿಭಮಂಕಸಂಸ್ಥಯಾ
ಕಾಂತಯಾ ಸಹಿತಮೀಶ್ವರಂ ಸ್ಮರೇತ್ ॥

(ಕಠಿನ ಶಬ್ದಾರ್ಥ ಶಾತ–ನಿಶಿತವಾದ, ಚೂಪಾದ, ಹರಿತವಾದ, ಶೂಲ–ತ್ರಿಶೂಲ, ವಿಲಸತ್–ಪರಿಶೋಭಿಸುವ, ಕರಾಂಬುಜ–ಕರಕಮಲ, ಶಶಕರಂ–ಮೊಲದಂತೆ ಬಿಳಿಯ ಬಣ್ಣವುಳ್ಳ, ಶಶಭೃತಾ–ಚಂದ್ರನಿಂದ, ರಾಜತಾದ್ರಿ–ಕೈಲಾಸ, ಮೇರುಪರ್ವತ, ನಿಭ–ಸಮಾನ, ಸದೃಶ, ಅಂಕ–ತೊಡೆಯ ಮೇಲೆ, ಸಂಸ್ಥಯಾ–ಇರುವ.

(ತಾತ್ಪರ್ಯ) ಈಶ್ವರನು ಕರಕಮಲದಲ್ಲಿ ನಿಶಿತವಾದ ತ್ರಿಶೂಲವನ್ನು ಧರಿಸಿದ್ದಾನೆ ಮೊಲದಂತೆ ಸ್ವಚ್ಛವಾದ ಬಿಳಿವರ್ಣವುಳ್ಳವನು. ಚಂದ್ರನನ್ನು ನೆತ್ತಿಯಲ್ಲಿ ಧರಿಸಿದ್ದಾನೆ ಕೈಲಾಸಪರ್ವತದಂತೆ ಇದ್ದಾನೆ. ತೊಡೆಯ ಮೇಲೆ ಪತ್ನಿಯಾದ ಪಾರ್ವತೀದೇವಿಯನ್ನು ಕೂಡಿಸಿಕೊಂಡಿರುವ ಶಂಕರನನ್ನು ಸ್ಮರಿಸತಕ್ಕದ್ದು.

೯. ಆದಿಶೇಷನ ಸ್ತುತಿ

ಕ್ಷೀರಸಾಗರನಿಭಂ ಫಣಾಮಣಿ
ಜ್ಯೋತಿರಾತತವಿಯದ್ವಿತಾನಕಮ್ ।
ನಾಗವಾಹನಮಶೇಷವಂದಿತಂ
ಶೇಷಮುದ್ಧೃತರಥಾಂಗಮರ್ಚಯೇತ್ ॥

(ಕಠಿನ ಶಬ್ದಾರ್ಥ) ನಿಭ–ಸದೃಶ, ಸಮಾನ, ಫಣಾ–ಹೆಡೆ, ಫಣಾಮಣಿ–ಹೆಡೆಯಲ್ಲಿ ಇರುವ ನಾಗಮಣಿಗಳು, ಆತತ–ವಿಸ್ತಾರವಾದ, ಹರಡಿದ, ವಿಯತ್–ಆಕಾಶ, ವಿತಾನಕಂ ಹೆಡೆಗಳ ಪಂಕ್ತಿಯುಳ್ಳ, ಅಶೇಷ–ಸಕಲರಿಂದಲೂ, ಉದ್ಧೃತ–ಎತ್ತಿಹಿಡಿದಿರುವ (ಧರಿಸಿರುವ), ರಥಾಂಗ–ಚಕ್ರ.

(ತಾತ್ಪರ್ಯ) ಆದಿಶೇಷನು ಕ್ಷೀರಸಮುದ್ರದಂತೆ ಬಿಳಿಯ ಮೈಬಣ್ಣವುಳ್ಳವನು. ಹೆಡೆಗಳಲ್ಲಿರುವ ನಾಗಮಣಿಗಳ ಜ್ಯೋತಿಯಿಂದ ಥಳಥಳಿಸುತ್ತಿದ್ದಾನೆ. ಆವನ ಸಾವಿರ ಹೆಡೆಗಳ ಸಾಲು ಆಕಾಶದಲ್ಲಿ ಸಾಲಾಗಿ ಹರಡಿಕೊಂಡಿವೆ. ನಾಗವಾಹನನು ಸಕಲರಿಂದಲೂ ವಂದಿತನಾಗಿದ್ದಾನೆ. ಚಕ್ರಾಯುಧವನ್ನು ಎತ್ತಿ ಹಿಡಿದಿದ್ದಾನೆ. ಇಂಥಾ ಆದಿಶೇಷನನ್ನು ಅರ್ಚಿಸತಕ್ಕದ್ದು.

೧೦. ಬ್ರಹ್ಮದೇವರ ಸ್ತುತಿ

ಹಂಸವಾಹಮರವಿಂದಧಾರಿಣಂ
ಹೇಮವರ್ಣಮಜಮಾದಿಪುರುಷಮ್ ।
ಚಿಂತಯೇದಪಿ ಸರೋಜಸಂಭವಂ
ಸೃಷ್ಟಿಹೇತುಮಮಲದ್ಯುತಿಮೀಡ್ಯಮ್ ॥

(ಕಠಿನ ಶಬ್ದಾರ್ಥ) ಅರವಿಂದ-ಕಮಲಪುಷ್ಪ, ಹೇಮವರ್ಣಂ-ಬಂಗಾರದಂತೆ ನಸುಗೆಂಪು ಬಣ್ಣವುಳ್ಳ, ಅಜಂ-ಬ್ರಹ್ಮದೇವರನ್ನು, ಸರೋಜ-ಸಂಭವಂ-ಕಮಲೋದ್ಭವನಾದ (ಪದ್ಮದಲ್ಲಿ ಹುಟ್ಟಿದ), ಸೃಷ್ಟಿ ಹೇತುಂ-ಸೃಷ್ಟಿಗೆ ಕಾರಣನಾದ, ಸೃಷ್ಟಿಕರ್ತನಾದ, ಅಮಲ-ನಿರ್ಮಲವಾದ, ದ್ಯುತಿಂ-ಕಾಂತಿಯುಳ್ಳ, ಈಡ್ಯಂ-ಸರ್ವಸ್ತುತ್ಯನಾದ.

(ಭಾವಾರ್ಥ) ಬ್ರಹ್ಮದೇವರು ಹಂಸವಾಹನರಾಗಿದ್ದಾರೆ. ಕೈಯಲ್ಲಿ ಕಮಲವನ್ನು ಹಿಡಿದಿದ್ದಾರೆ. ಬಂಗಾರದಂತೆ ಹೊಂಗೆಂಪುಬಣ್ಣವುಳ್ಳವರಾಗಿದ್ದಾರೆ. ಜಗತ್ಸೃಷ್ಟಿಕರ್ತರಾಗಿದ್ದಾರೆ. ಪರಿಶುಭ್ರವಾದ ಕಾಂತಿಯುಳ್ಳವರಾಗಿದ್ದಾರೆ. ರುದ್ರೇಂದ್ರಾದಿ ಸಕಲ ದೇವತೆಗಳಿಂದಲೂ ಸ್ತುತ್ಯರಾಗಿದ್ದಾರೆ. ಇಂಥಾ ಬ್ರಹ್ಮದೇವರನ್ನು ಊರ್ಧ್ವಭಾಗದಲ್ಲಿ ಧ್ಯಾನ ಮಾಡತಕ್ಕದ್ದು.

ದಶದಿಕ್ಪಾಲಕರ ಮಂತ್ರೋದ್ಧಾರ

ತಂತ್ರಸಾರ ಛಲಾರೀ ಟೀಕೆಯಲ್ಲೂ, ಶ್ರೀ ಪ್ರಭಂಜನರ ಪದ್ಯಮಾಲಾ ಟಿಪ್ಪಣಿಯಲ್ಲೂ (ಪುಟ ೬೧, ಟಿ. ೯), ಈ ಮಂತ್ರಗಳ ಉದ್ಧಾರಕ್ರಮವನ್ನು ಯೋಗದೀಪಿಕೆಯಲ್ಲಿ (III, 31-34) ಕೊಟ್ಟದೆಯೆಂದು ಆ ಶ್ಲೋಕಗಳನ್ನೇ ಉದಹರಿಸಿದ್ದಾರೆ—

ತದ್ಬಹಿರ್ದಶದಿಕ್ಪಚರ್ಯಾಃ ಇಂದ್ರಾಗ್ನೀ ಯಮನೈರ್ಋತೀ ।
ವರುಣೋ ವಾಯುಸೋಮೇಶಾ—ನಾನಂತಬ್ರಹ್ಮನಾಮಕಾಃ ॥
ತಾರಾದ್ಯಾಃ ಸ್ವಯಮುದ್ದೇಶ್ಯಾ
ಮಂತ್ರಾ (ಸ್ವಾಂಸ್ವಾಂನಾದೀ) ಸ್ತದುಪರೀರಯೇತ್ ।
ಸುರತೇಜಃಪ್ರೇತರಕ್ಷೋ—ಜಲಪ್ರಾಣಪದಾನಿ ಚ (ತು) ॥

ನಕ್ಷತ್ರವಿದ್ಯಾನಾಗಾಖ್ಯಾ ಲೋಕೇತ್ಯೇಕೈಕಮೇವ ತು (ಚ) ।
ಉಕ್ತ್ವಾಧಿಪತಿಮುದ್ದಿಶ್ಯ ತಥೋಕ್ತ್ವಾ ವಿಷ್ಣುಪಾರ್ಷದಮ್ ।
ನಮೋಽನ್ತಾ ಇತಿ ತನ್ಮಂತ್ರಾಃ....॥

(ಅರ್ಥ) ತದ್ಬಹಿಃ–ಆರನೆಯ ಆವರಣದ ಹೊರಗೆ, ದಶದಿಕ್ಷು–ಹತ್ತು ದಿಕ್ಕುಗಳಲ್ಲಿ, ಇಂದ್ರಾಗ್ನೀ.........ನಾಮಕಾಃ–(ಕ್ರಮವಾಗಿ) ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, (ಪ್ರವಹ) ವಾಯು, ಸೋಮ, ಈಶ್ವರ, ಅನಂತ (ಶೇಷ), ಬ್ರಹ್ಮ ಎಂಬ ಹತ್ತು ದೇವತೆಗಳನ್ನು, ಅರ್ಚ್ಯಾಃ–ಅರ್ಚಿಸಬೇಕು. ಮಂತ್ರಾಃ–ಅವರ ಮಂತ್ರಕ್ರಮ ಹೇಗೆಂದರೆ— ತಾರಾದ್ಯಾಃ (ಓಂಕಾರಪೂರ್ವಕಾಃ — ಭಲಾರಿ)–ಓಂಕಾರಸಹಿತವಾಗಿ, ಸ್ವಯಂ–ಆಯಾ ದೇವತೆಗಳ ಹೆಸರುಗಳು, ಉದ್ದೇಶ್ಯಾಃ (ಚತುರ್ಥ್ಯಂತಾಃ — ಭಲಾರಿ) –ಚತುರ್ಥೀವಿಭಕ್ತ್ಯಂತವಾಗಿ, ನಮೋಂತಾಃ–ಕಡೆಯಲ್ಲಿ 'ನಮಃ' ಎಂದು ಸೇರಿಸಿದರೆ, ತನ್ಮಂತ್ರಾಃ–ಅವರವರ ಮಂತ್ರಗಳಾಗುತ್ತವೆ. (ಅದರ ಜೊತೆಗೆ ಇವನ್ನೂ ಸೇರಿಸಬೇಕು ಎನ್ನುತ್ತಾರೆ—ಅದೇನೆಂದರೆ) ತದುಪರಿ–ಅದರ ಮುಂದೆ (ಚತುರ್ಥ್ಯಂತ ಹೆಸರಿನ ಮುಂದೆ) ಸುರತೇಜಃ.......ಲೋಕೇತಿ— ಸುರ, ತೇಜಃ...ಲೋಕ ಎಂದು, ಏಕೈಕಂ ಏವ (ತು) ಚ–ಒಂದೊಂದೇ ಪದವನ್ನು ಉಕ್ತ್ವಾ–ಹೇಳಿ, ಅಧಿಪತಿಂ ಉದ್ದಿಶ್ಯ–ಅಧಿಪತಿ ಶಬ್ದ ಸೇರಿಸಿ ಅದಕ್ಕೆ ಚತುರ್ಥೀ ವಿಭಕ್ತಿ ಸೇರಿಸಿ (ಸುರ + ಅಧಿಪತಿ, ತೇಜಃ + ಅಧಿಪತಿ ಇತ್ಯಾದಿ ಹೇಳಿ, ಅದಕ್ಕೆ ಚತುರ್ಥ್ಯಂತ ಹೇಳಿದರೆ — ಸುರಾಧಿಪತಯೇ, ತೇಜೋಧಿಪತಯೇ, ಪ್ರೇತಾಧಿಪತಯೇ...ಲೋಕಾಧಿಪತಯೇ — ಎಂದಾಗುತ್ತದೆ. ಇದರ ಜೊತೆಗೆ), ತಥಾ–ಹಾಗೆಯೇ (ಎಂದರೆ ಚತುರ್ಥ್ಯಂತವಾಗಿ), ವಿಷ್ಣುಪಾರ್ಷದಂ ಉಕ್ತ್ವಾ–ವಿಷ್ಣುಪಾರ್ಷದಾಯ ಎಂಬುದನ್ನೂ ಹೇಳಿ, ನಮೋಂತಾಃ–ನಮಃ ಶಬ್ದವನ್ನು ಕಡೆಯಲ್ಲಿ ಸೇರಿಸಿ, ತತ್ತನ್ಮಂತ್ರಾನ್–ಆಯಾ ಮಂತ್ರಗಳನ್ನು, ಈರಯೇತ್–ಹೇಳಬೇಕು.

ತಾತ್ಪರ್ಯವೇನೆಂದರೆ— ಪೂರ್ವಾದಿ ದಶದಿಕ್ಕುಗಳಲ್ಲಿ ಇಂದ್ರಾದಿ ದಶದಿಕ್ಪಾಲಕರ ಹೆಸರು ಹೇಳಿ ಅವರೆಲ್ಲರನ್ನೂ ಅವರವರ ಮಂತ್ರಗಳಿಂದ ಅರ್ಚಿಸಬೇಕು. ಆ ಮಂತ್ರಕ್ರಮ ಹೇಗೆಂದರೆ— ೧) ಅವರವರ ಹೆಸರಿಗೆ ಚತುರ್ಥೀ ವಿಭಕ್ತಿ ಸೇರಿಸಬೇಕು. ೨) ಹಿಂದೆ ಓಂಕಾರ (ಪ್ರಣವ) ಸೇರಿಸಬೇಕು. ೩) ಹೆಸರು ಹೇಳಿದ ಬಳಿಕ ಅವರನ್ನು ಕ್ರಮವಾಗಿ ಸುರಾಧಿಪತಯೇ, ತೇಜೋಧಿಪತಯೇ ಎಂದು ಇಂಥಿಂಥಾದ್ದಕ್ಕೆ 'ಒಡೆಯರಾದ' ಎಂಬ ಬಿರುದೂ ಸೇರಿಸಬೇಕು. ೪) ಅನಂತರ 'ವಿಷ್ಣುಪಾರ್ಷದಾಯ' ಎಂದು ಸೇರಿಸಬೇಕು. ೫) ಅಷ್ಟೇ ಅಲ್ಲದೆ ಹಿಂದೆ ತೋರಿಸಿದಂತೆ ಅವರವರ ಬೀಜಾಕ್ಷರಗಳನ್ನು ಬಿಂದುಸಹಿತ ದೀರ್ಘದ ಜೊತೆ ಸೇರಿಸಿ ಲಾಂ ರಾಂ ಎಂದೂ ಸೇರಿಸಬೇಕು. ೬) ಸವಾಹನಾಯ, ಸಶಕ್ತಿಕಾಯ ಸಪರಿವಾರಾಯ ಎಂದೂ ಸೇರಿಸಬೇಕು. ೭) ಕೊನೆಗೆ ನಮಃ ಸೇರಿಸಿದರೆ

ಆಯಾಯಾ ಮಂತ್ರಗಳಾಗುತ್ತವೆ. ಈ ಮಂತ್ರಗಳಿಂದ ಈ ದಶದಿಕ್ಪಾಲಕರನ್ನೂ ಅರ್ಚಿಸಬೇಕೆಂದು ಭಾವ.

ಅರ್ಚಿಸುವ ಕ್ರಮವನ್ನು 'ವಿಷ್ಣುತೀರ್ಥೀಯ'ದಲ್ಲಿ (III—106) ಹೀಗೆ ಹೇಳಿದೆಯೆಂದು ಛಲಾರೀ ಟೀಕೆಯಲ್ಲೂ, ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲೂ (ಪುಟ ೬೩, ಟ. 11) ಹೇಳಿದೆ—

ಸರ್ವಾನಭಿಮುಖಾನ್ ವಿಷ್ಣೋಃ ಕೃತಾಂಜಲಿಪುಟಾನ್ ಯಜೇತ್ ।
ಪಾದ್ಯಾದಿಕತ್ರಯಂ ದತ್ವಾ ಧೂಪದೀಪಂ ಚ ದಾಪಯೇತ್ ॥

(ಅರ್ಥ) ದಶದಿಕ್ಪಾಲಕರೂ ವಿಷ್ಣುವಿಗೆ ಅಭಿಮುಖವಾಗಿ (ವಿಷ್ಣುವಿಗೆ ಎದುರು-ಮುಖವುಳ್ಳವರಾಗಿ) ದ್ದಾರೆಂದೂ, ಕೈಮುಗಿದುಕೊಂಡಿದ್ದಾರೆಂದೂ ತಿಳಿಯಬೇಕು. ಮತ್ತು ಅವರಿಗೆಲ್ಲ ಅರ್ಘ್ಯ-ಪಾದ್ಯ ಆಚಮನಗಳನ್ನೂ ಧೂಪದೀಪಗಳನ್ನೂ ಅರ್ಪಿಸಿ ಪೂಜಿಸಬೇಕೆಂದು ತಾತ್ಪರ್ಯ.

ಇಂದ್ರಾದಿ ದಿಕ್ಪಾಲಕರ ಪತ್ನಿಯರು

ತಂತ್ರಸಾರಟೀಕೋಕ್ತ ದಶದಿಕ್ಪಾಲಕ ಮಂತ್ರಗಳ ಧ್ಯಾನಶ್ಲೋಕಗಳಿಂದ ಇಂದ್ರಾದಿಗಳ ಪತ್ನಿಯರ ಹೆಸರು ಗೊತ್ತಾಗುತ್ತದೆ. 'ಸಹಸ್ರಾಕ್ಷಃ ಶಚೀಪತಿಃ' ಎಂದು ಇಂದ್ರನ ಧ್ಯಾನಶ್ಲೋಕವಿರುವುದರಿಂದ ಇಂದ್ರನ ಪತ್ನಿಯು ಶಚೀ ಎಂದೂ, 'ಸ್ವಾಹಾ-ಸಖೋ ಮೇಷವಾಹ' ಎಂಬ ಅಗ್ನಿಧ್ಯಾನದಿಂದ ಅಗ್ನಿಯ ಪತ್ನಿ 'ಸ್ವಾಹಾ' ಎಂದೂ, 'ಇಲಾಪ್ರಿಯೋ ದಂಡಧರಃ' ಎಂಬ ಯಮಧ್ಯಾನಶ್ಲೋಕದಿಂದ ಯಮನ ಪತ್ನಿ 'ಇಳಾ-ದೇವಿ' ಎಂದೂ, 'ಕರಾಲಃ ಕಾಲಿಕಾಪ್ರಿಯಃ' ಎಂಬ ನಿರ್ಋತಿಧ್ಯಾನಶ್ಲೋಕದಿಂದ ನಿರ್ಋತಿಯ ಪತ್ನಿಯು 'ಕಾಲಿಕಾ' ಎಂದೂ, 'ಪದ್ಮಿನೀಪತಿಃ' ಎಂಬುದರಿಂದ ವರುಣನ ಪತ್ನಿ 'ಪದ್ಮಿನೀ' ಎಂದೂ, 'ವರ್ಣತೋ ಮೋಹಿನೀಪ್ರಿಯಃ' ಎಂಬುದರಿಂದ ಪ್ರವಹ ವಾಯುವಿನ ಪತ್ನಿ 'ಮೋಹಿನೀ' ಎಂದೂ, ಸೋಮನ ಪತ್ನಿ 'ರೋಹಿಣೀ' ಎಂದೂ, ಶೇಷನ ಪತ್ನಿ 'ವಾರುಣೀ' ಎಂದೂ, ಬ್ರಹ್ಮನ ಪತ್ನಿ 'ಸಾವಿತ್ರಿ' ಎಂದೂ ಗೊತ್ತಾಗುತ್ತದೆ.

ಈಗ ಎಲ್ಲವನ್ನೂ ಸೇರಿಸಿ ಆ ದಶದಿಕ್ಪಾಲಕರ ಮಂತ್ರಗಳನ್ನು ಕೆಳಗೆ ಸಂಪೂರ್ಣವಾಗಿ ಕೊಟ್ಟಿದೆ.

ದಶದಿಕ್ಪಾಲಕರ ಮಂತ್ರಗಳ ಪೂರ್ಣಸ್ವರೂಪ

೧. ಪ್ರಾಚ್ಯಾಂ ದಿಶಿ ಓಂ ಲಾಂ ಇಂದ್ರಾಯ ಸುರಾಧಿಪತಯೇ ಪೀತವರ್ಣಾಯ ವಜ್ರಾಭಯಹಸ್ತಾಯ ಕಿರೀಟಾದಿ ವಿಭೂಷಿತಾಯ

ಶಚೀಸಹಿತಾಯ ಐರಾವತವಾಹನಾಯ ಸಪರಿವಾರಾಯ ಶ್ರೀವಿಷ್ಣು-ಪಾರ್ಷದಾಯ ನಮಃ ।

೨. ಆಗ್ನೇಯಕೋಣೇ ಓಂ ರಾಂ ಅಗ್ನಯೇ ತೇಜೋಧಿಪತಯೇ ರಕ್ತವರ್ಣಾಯ ಶಕ್ತಿಹಸ್ತಾಯ ಮೇಷವಾಹನಾಯ ಸ್ವಾಹಾಸಹಿತಾಯ ಸಪರಿವಾರಾಯ ತ್ರಿನೇತ್ರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೩. ಅವಾಚ್ಯಾಂ (ದಕ್ಷಿಣಸ್ಯಾಂ) ದಿಶಿ ಓಂ ಯಾಂ ಯಮಾಯ ಪ್ರೇತಾಧಿಪತಯೇ ಕಾಲಮೇಘಚಯಕಾಲವಿಗ್ರಹಾಯ ದಂಡಹಸ್ತಾಯ ಮಹಿಷವಾಹನಾಯ ಇಳಾ (ಶ್ಯಾಮಲಾ) ಸಹಿತಾಯ ಭೂಷಣೋ-ಜ್ವಲಾಯ ತ್ರಿಲೋಚನಾಯ ಸಪರಿವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೪. ನೈಋರ್ತ್ಯಕೋಣೇ ಓಂ ಕ್ಷಾಂ ನಿಋರ್ತಯೇ ರಕ್ಷೋಧಿ-ಪತಯೇ ಧೂಮ್ರವರ್ಣಾಯ ಅತಿಭೀಷಣಾಕೃತಯೇ ಹಸ್ತಿಸಂಸ್ಥಿತಾಯ ಖಡ್ಗಾಯುಧಾಯ ಮೇಘಮೇಚಕಾಂಬರಾಯ ನರವಾಹನಾಯ ಕಾಲಿಕಾಸಹಿತಾಯ ಸಪರಿವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೫. ಪ್ರತೀಚ್ಯಾಂ ದಿಶಿ ಓಂ ವಾಂ ವರುಣಾಯ ಜಲಾಧಿಪತಯೇ (ಅಥವಾ ಅಂಭಸಾಂಪತಯೇ) ಇಂದುಕುಂದಧವಲವರ್ಣಾಯ ಪಾಶ-ಹಸ್ತಾಯ ಮಹಾಮಣಿಪ್ರೋಜ್ಜ್ವಲಾಭರಣ ಮಾಲಾಭೂಷಿತಾಯ ಪದ್ಮಿನೀಸಹಿತಾಯ ಮಕರವಾಹನಾಯ ಸಪರಿವಾರಾಯ ಶ್ರೀವಿಷ್ಣು-ಪಾರ್ಷದಾಯ ನಮಃ ।

೬. ವಾಯವ್ಯಕೋಣೇ ಓಂ ವಾಂ ಪ್ರವಹವಾಯವೇ ಪ್ರಾಣಾಧಿ-ಪತಯೇ ಧೂಮಧೂಮ್ರವರ್ಣಾಯ ಗದಾಂಕುಶಾಯುಧಾಯ ತ್ರಿ-ಲೋಚನಾಯ ಹರಿಣವಾಹನಾಯ ಮೋಹಿನೀಸಹಿತಾಯ ಸಪರಿ-ವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೭. ಉದೀಚ್ಯಾಂ ದಿಶಿ ಓಂ ಸಾಂ ಸೋಮಾಯ ತಾರಕಾಧಿ-ಪತಯೇ ರಾಜತಾದ್ರಿರುಚಿರವರ್ಣಾಯ ತುಂಗವಲ್ಗಿತತುರಂಗಮ-ವಾಹನಾಯ ಸಾಯುಧಾಯ (ಶರಗದಾಯುಧಾಯ) ರೋಹಿಣೀ-

ಸಹಿತಾಯ ಅಮಲವಿಲೋಚನದ್ವಯಾಯ ಸಪರಿವಾರಾಯ ಶ್ರೀವಿಷ್ಣು-ಪಾರ್ಷದಾಯ ನಮಃ ।

೮. ಐಶಾನ್ಯಕೋಣೇ ಓಂ ಹಾಂ ರುದ್ರಾಯ ಭೂತಾಧಿಪತಯೇ ರಾಜತಾದ್ರಿನಿಭಾಯ ಶ್ವೇತವರ್ಣಾಯ ಚಂದ್ರಶೇಖರಾಯ ತ್ರಿಶೂಲ-ಧರಾಯ ವೃಷಭವಾಹನಾಯ ಪಾರ್ವತೀಪ್ರಿಯಾಯ ತ್ರಿಲೋಚನಾಯ ಸಪರಿವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೯. (ಅಧೋದೇಶೇ) ನಿರ್ಋತಿವರುಣಯೋರ್ಮಧ್ಯೇ ಓಂ ಅಂ ಅನಂತಾಖ್ಯ ಶೇಷಾಯ ನಾಗಾಧಿಪತಯೇ ಕ್ಷೀರಸಾಗರನಿಭಾಯ ಶುಭ-ವರ್ಣಾಯ ಫಣಾಮಣಿಜ್ಯೋತಿರ್ಭೂಷಿತಾಯ ನಾಗವಾಹನಾಯ ರಥಾಂಗಾಯುಧಾಯ ನಾಗಿನೀ (ವಾರುಣೀ) ಸಹಿತಾಯ ಸಹಸ್ರ-ಫಣಾಯ ಸಪರಿವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ ।

೧೦. (ಊರ್ಧ್ವದೇಶೇ ಅಥವಾ) ಇಂದ್ರೇಶಾನಯೋರ್ಮಧ್ಯೇ ಓಂ ಹ್ರೀಂ ಬ್ರಹ್ಮಣೇ ಸತ್ಯಲೋಕಾಧಿಪತಯೇ ಹೇಮವರ್ಣಾಯ ಹಂಸವಾಹನಾಯ ಅರವಿಂದಧಾರಿಣೇ ಸೃಷ್ಟಿಹೇತವೇ ಚತುರ್ಮುಖಾಯ ಗಾಯತ್ರೀಸಹಿತಾಯ ಸಪರಿವಾರಾಯ ಶ್ರೀವಿಷ್ಣುಪಾರ್ಷದಾಯ ನಮಃ।

(ಪೂಜಾಕ್ರಮಃ) ಇಂದ್ರಾದಿ ವಿಷ್ಣುಪಾರ್ಷದೇಭ್ಯಃ ಸರ್ವೇಭ್ಯೋ ವಿಷ್ಣೋರಭಿಮುಖೇಭ್ಯಃ ಕೃತಾಂಜಲಿಪುಟೇಭ್ಯೋ ನಮೋ ನಮಃ । ಹಸ್ತಯೋರರ್ಘ್ಯಮರ್ಘ್ಯಂ ಸಮರ್ಪಯಾಮಿ । ಪಾದಯೋಃ ಪಾದ್ಯಂ ಪಾದ್ಯಂ ಸಮರ್ಪಯಾಮಿ । ಮುಖೇ ಆಚಮನೀಯಂ ಆಚ-ಮನೀಯಂ ಸಮರ್ಪಯಾಮಿ । ಧೂಪಾರ್ಥೇ ಧೂಪಂ ಸಮರ್ಪ-ಯಾಮಿ । (ನೀರಿನಿಂದಲೇ ಧೂಪವನ್ನು ಸಮರ್ಪಿಸಬಹುದು.) ದೀಪಂ ಸಮರ್ಪಯಾಮಿ । ಸಮಸ್ತ ದೇವೋಪಚಾರಪೂಜಾಃ ಸಮರ್ಪಯಾಮಿ। ಅನೇನಾರ್ಚನೇನ ಇಂದ್ರಾದಿ ಸರ್ವೇ ವಿಷ್ಣುಪಾರ್ಷದಾಃ ಪ್ರಸನ್ನಾ ವರದಾ ಭವಂತು ॥ ಶ್ರೀಕೃಷ್ಣಾರ್ಪಣಮಸ್ತು ॥

॥ ಇತ್ಯಾವರಣಪೂಜಾ ಸಮಾಪ್ತಾ ॥

ದ್ವಾರಪಾಲಕ ಪೂಜಾ

ಆವರಣಪೂಜೆ ಮಾಡಿದ ಬಳಿಕ ವಜ್ರನಾಭಾದಿ ದ್ವಾದಶ (ಹನ್ನೆರಡು ಮಂದಿ) ದ್ವಾರಪಾಲಕರನ್ನೂ 'ನಮಃ' ಶಬ್ದೋಚ್ಚಾರಣಮಾತ್ರದಿಂದ ಅರ್ಚಿಸಬೇಕೆಂದು 'ಪದ್ಮಮಾಲಾ'ದಲ್ಲಿ ಹೇಳಿ ಅವರ ಹೆಸರುಗಳನ್ನೂ ಹೇಳಿದ್ದಾರೆ—

ಪೂಜಯಿತ್ವಾ ತತಃ ಪೂಜ್ಯಾ ದ್ವಾದಶದ್ವಾರಪಾಲಕಾಃ ।
ಪ್ರಥಮೋ ವಜ್ರನಾಭಶ್ಚ ಹರೀಶಶ್ಚ ತತಃ ಪರಮ್ ॥ ೯೩ ॥
ತೃತೀಯೋ ಗಾಂಗತನಯ—ಸ್ತತಃ ಶಂಖನಿಧೀಶ್ವರಃ ।
ಜಯಶ್ಚ ವಿಜಯಃ ಪಶ್ಚಾತ್ ಧಾತಾ ಸಪ್ತಮಕೋ ಮತಃ ॥ ೯೪ ॥
ವಿಧಾತಾ ಚ ತತೋ ಭದ್ರಃ ಸುಭದ್ರೋಽಥಾಮರೇಶ್ವರಃ ।
ವಿರೂಪಾಕ್ಷೋಽಂತಿಮಶ್ಚೈವ ನಮಶ್ಶಬ್ದೇನ ಪೂಜಯೇತ್ ॥ ೯೫ ॥

'ನಮಶ್ಶಬ್ದೇನ ಪೂಜಯೇತ್' ಎಂದರೆ ನಮಃ ಎಂದು ಹೇಳಿಯೇ ಅರ್ಚಿಸಬೇಕು, ಬೇರೆ ಪೂಜೆಗಳಿಲ್ಲವೆಂದು ಅರ್ಥ. ಇದನ್ನೇ 'ವಿಷ್ಣುತೀರ್ಥೀಯ' (III-131)ದಲ್ಲಿ ಸ್ಪಷ್ಟವಾಗಿ (ಕಂಠೋಕ್ತವಾಗಿ) ಹೀಗೆ ಹೇಳಿದ್ದಾರೆ (ಪ್ರಥಂ., ಪದ್ಯ., ದ್ವಿ.ಸಂ., ಪು. ೬೬, ಟಿ. 8)—

" ನೈವೇದ್ಯಂ ನಾಸ್ತಿ ಚೋದ್ಧೂಪ—ದೀಪೌ ನೈವ ಪ್ರದೀಯತಾಂ॥"

(ಅರ್ಥ) ವಜ್ರನಾಭಾದಿ ದ್ವಾದಶ ದ್ವಾರಪಾಲಕರಿಗೆ ಧೂಪವನ್ನಾಗಲೀ ದೀಪವನ್ನಾಗಲೀ ನೈವೇದ್ಯವನ್ನಾಗಲೀ ಅರ್ಪಿಸಬೇಕಾಗಿಲ್ಲ. ಕೇವಲ ನಮಃ ಶಬ್ದದಿಂದಲೇ ಅರ್ಚಿಸಬೇಕೆಂದು ತಾತ್ಪರ್ಯ.

ಅರ್ಚನಾಕ್ರಮ :— ಕೆಳಗಿನಂತೆ ಹನ್ನೆರಡು ಮಂತ್ರಗಳನ್ನು ಹೇಳಿ ಕೈಮುಗಿಯಬೇಕೆಂದು ತಾತ್ಪರ್ಯ.

೧. ಓಂ ವಜ್ರನಾಭಾಯ ನಮಃ । ೨. ಓಂ ಹರೀಶ್ವರಾಯ ನಮಃ । ೩. ಓಂ ಗಾಂಗತನಯಾಯ ನಮಃ । ೪. ಓಂ ಶಂಖನಿಧೀಶ್ವರಾಯ ನಮಃ । ೫. ಓಂ ಜಯಾಯ ನಮಃ । ೬. ಓಂ ವಿಜಯಾಯ ನಮಃ । ೭. ಓಂ ಧಾತ್ರೇ ನಮಃ । ೮. ಓಂ ವಿಧಾತ್ರೇ ನಮಃ । ೯. ಓಂ ಭದ್ರಾಯ ನಮಃ। ೧೦. ಓಂ ಸುಭದ್ರಾಯ ನಮಃ। ೧೧. ಓಂ ಅಮರೇಶ್ವರಾಯ ನಮಃ । ೧೨. ಓಂ ವಿರೂಪಾಕ್ಷಾಯ ನಮಃ । ವಜ್ರನಾಭಾದಿ ದ್ವಾದಶ ದ್ವಾರಪಾಲಕೇಭ್ಯೋ ನಮಃ ॥

। ಇತಿ ದ್ವಾರಪಾಲಕಪೂಜಾ ಸಮಾಪ್ತಾ ।

ಧೂಪ-ದೀಪಗಳು

ತಂತ್ರಸಾರದಲ್ಲಿ (೧ ಅ., ೬೬ ಶ್ಲೋ.)

'ಧೂಪ-ದೀಪೌ ತತೋ ದತ್ವಾ ನೈವೇದ್ಯಂ ಮೂಲಮಂತ್ರತಃ ।'

ಎಂದು ಪೂಜಾವಿಧಾನವನ್ನು ಸಂಕ್ಷೇಪವಾಗಿ ಸೂಚಿಸಿದ್ದಾರೆ.

(ಅರ್ಥ) ತತಃ-(ಆವರಣಪೂಜೆ ಆದ) ಬಳಿಕ, ಧೂಪ-ದೀಪೌ-ಧೂಪ ಮತ್ತು ದೀಪಗಳನ್ನು, ದತ್ವಾ-ಕೊಟ್ಟು, ಮೂಲಮಂತ್ರತಃ-ನಾರಾಯಣಾಷ್ಟಾಕ್ಷರಮಂತ್ರದಿಂದ, ನೈವೇದ್ಯಂ (ಸಮರ್ಪಯೇತ್ ಇತಿ ಶೇಷಃ)-ನೈವೇದ್ಯವನ್ನು ಸಮರ್ಪಿಸಬೇಕು ಎಂದು ಹೇಳಿದರು. ಧೂಪ-ದೀಪಾದಿಗಳನ್ನು ಯಾವ ಯಾವ ಮಂತ್ರದಿಂದ ಕೊಡಬೇಕೆಂಬುದನ್ನು ಟೀಕಾರಾಯರು ಪದ್ಮಮಾಲಾದಲ್ಲಿ ವಿಸ್ತರಿಸುತ್ತಾರೆ ಮತ್ತು ನೈವೇದ್ಯಪ್ರಕರಣವೇ ಬಹಳ ಮುಖ್ಯವೂ ಮಹತ್ತರವೂ ಆದ್ದರಿಂದ ಅದನ್ನೇ ಮುಂದೆ ಬಹಳ ವಿಸ್ತಾರವಾಗಿ ವರ್ಣಿಸುವರು. ಅದನ್ನು ಅನುಸರಿಸಿ ನಾವೂ ಸಹ 'ನೈವೇದ್ಯಪ್ರಕರಣ'ವನ್ನೇ ಬೇರೆಯಾಗಿ ವಿಸ್ತಾರವಾಗಿಯೇ ವರ್ಣಿಸಲಿದ್ದೇವೆ. ಪ್ರಕೃತ ಧೂಪ-ದೀಪಗಳ ಬಗ್ಗೆ 'ಪದ್ಮಮಾಲಾ'ದಲ್ಲಿ ಏನು ಹೇಳಿದ್ದಾರೆ, ನೋಡೋಣ—

'ವನಸ್ಪತ್ಯುದ್ಭವೇ'ತ್ಯಾದಿ—ಮಂತ್ರೈರ್ಮೂಲಪುರಸ್ಸರೈಃ ।
ಧೂಪಂ ದತ್ವಾ ತತೋ ದೀಪಂ ದದ್ಯಾನ್ಮೂಲಮುದೀರಯನ್ ॥೯೬॥

(ಅರ್ಥ) 'ವನಸ್ಪತ್ಯುದ್ಭವ...' ಮೊದಲಾದ ಮಂತ್ರಗಳಿಂದ ನಾರಾಯಣಾಷ್ಟಾಕ್ಷರ ಮಂತ್ರಪುರಸ್ಸರವಾಗಿ ಧೂಪವನ್ನು ಕೊಟ್ಟು ಅನಂತರ ದೀಪವನ್ನು ಹಚ್ಚಬೇಕು. ಮತ್ತು ಮೂಲಮಂತ್ರವನ್ನು ಉಚ್ಚರಿಸಬೇಕು. ಟೀಕಾರಾಯರು ಪ್ರತಿಯೊಂದಕ್ಕೂ 'ಮೂಲಮಂತ್ರ'ವನ್ನು ಉಚ್ಚರಿಸಬೇಕೆಂದು ಹೇಳಿದ್ದರಿಂದ ತಂತ್ರಸಾರದಲ್ಲಿ (೧/೬೬) 'ಮೂಲಮಂತ್ರತಃ' ಎಂದು ಹೇಳಿರುವುದನ್ನು ಆವೃತ್ತಿ ಮಾಡಿಕೊಂಡು ಪ್ರತಿಯೊಂದಕ್ಕೂ ಅನ್ವಯಿಸಿಕೊಳ್ಳಬೇಕೆಂದು ಹೇಳಿದಂತಾಯಿತು.

ಧೂಪ ಹಾಕುವ ಮಂತ್ರ—

ಪದ್ಮಮಾಲಾದಲ್ಲಿ ಸೂಚಿಸಿದ 'ವನಸ್ಪತ್ಯುದ್ಭವ ' ಮಂತ್ರ ಹೀಗಿದೆ—

ವನಸ್ಪತ್ಯುದ್ಭವೋ ದಿವ್ಯೋ ಗಂಧಾಢ್ಯೋ ಗಂಧ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಂ ॥

(ಅರ್ಥ) ವನಸ್ಪತಿ + ಉದ್ಭವಃ ಒಂದು ವೃಕ್ಷದ ರಸದಿಂದ ಉತ್ಪನ್ನವಾದ, ದಿವ್ಯಃ-ಶ್ರೇಷ್ಠವಾದ (ಅಥವಾ ದೇವಯೋಗ್ಯವಾದ), ಗಂಧ ಆಢ್ಯಃ – ಸುವಾಸನೆಯಿಂದ

(ಪರಿಮಳದಿಂದ) ಯುಕ್ತವಾದ, ಸರ್ವ-ದೇವಾನಾಂ ಆಘ್ರೇಯಃ - ಸಮಸ್ತ ದೇವತೆ-ಗಳಿಗೂ ಆಘ್ರಾಣಿಸುವುದಕ್ಕೆ (ಮೂಸಿ ನೋಡಲು, ವಾಸನೆ ಗ್ರಹಿಸಲು) ಯೋಗ್ಯವಾದ, ಉತ್ತಮಃ ಗಂಧಃ-ಉತ್ತಮವಾದ ಸುಗಂಧವುಳ್ಳ (ಘಮಘಮಿಸುವ), ಅಯಂ ಧೂಪಃ-ಈ ಧೂಪವು, ಪ್ರತಿಗೃಹ್ಯತಾವ್-ಸ್ವೀಕರಿಸಲ್ಪಡಲಿ.

(ತಾತ್ಪರ್ಯ) ಈ ಧೂಪವನ್ನು ಪರಿಮಳ ವಾಸನೆಯುಕ್ತವಾದ ಒಂದು ವೃಕ್ಷದಿಂದ ತಯಾರಿಸಿದೆ. ಈ ಧೂಪವು ಘಮಘಮ ಸುವಾಸನೆಯಿಂದ ಕೂಡಿದೆ. ಇದರ ಸುವಾಸನೆ ಸಕಲ ದೇವತೆಗಳಿಗೂ ಸ್ವೀಕರಿಸಲು ಯೋಗ್ಯವಾಗಿದೆ. ಇಂಥಾ ಸುಗಂಧಯುಕ್ತವಾದ ಉತ್ತಮವಾದ ಈ ದಿವ್ಯವಾದ ಧೂಪವನ್ನು, ಹೇ ಪ್ರಭುವೇ, ಸ್ವೀಕರಿಸಿ ಪ್ರಸನ್ನನಾಗು.

ಈ ಮಂತ್ರದಿಂದ 'ಧೂಪ'ವನ್ನು ಸಮರ್ಪಿಸಬೇಕು.

ಧೂಪದ ಬಗ್ಗೆ ಕೆಲವು ವಿಚಾರಗಳು—

ಮಾಧ್ವರಾದ ನಾವು 'ಧೂಪ' ಏರಿಸಿದ ಕೆಂಡವನ್ನೇ ಆರಿಸಿದ ಬಳಿಕ 'ಅಂಗಾರ' ವಾಗಿ ಹಣೆಯಲ್ಲಿ ಧರಿಸುತ್ತೇವೆಯಾದಕಾರಣ ಬೆಂಕಿಯ ಕೆಂಡದಿಂದ ಆದ ಧೂಪವೇ 'ಧೂಪ' ಎನಿಸುತ್ತದೆ. ಆ ಕೆಂಡಕ್ಕೆ ದಶಾಂಗ ಎಂಬ ಗಂಧದ ಪುಡಿಯನ್ನು ಹಾಕಿ ಹೊಗೆಯಾಡುತ್ತಿರುವಾಗಲೇ ಆ ಧೂಪವನ್ನು ಅರ್ಪಿಸಿ ಅನಂತರ ಅದನ್ನು ನೀರಿಗೆ ಹಾಕಿ ಆರಿಸಿಬಿಡಬೇಕು. ಊದಿನಕಡ್ಡಿಯಿಂದ ಧೂಪ ಹಾಕುವ ಪದ್ಧತಿ ನಮ್ಮಲ್ಲಿ ಬಂದಿಲ್ಲ. ಅಷ್ಟೇಕೆ, ಶಿಷ್ಟಾಚಾರವಂತರು ಊದಿನಕಡ್ಡಿಯನ್ನು ಮಡಿಯಲ್ಲಿದ್ದಾಗ ಮುಟ್ಟುವುದೂ ಸಹ ಇಲ್ಲ—ಅದು ಮೈಲಿಗೆ; ಇನ್ನು ಸಮರ್ಪಿಸುವುದಂತೂ ದೂರತೋಪಾಸ್ತ.

ಧೂಪ ಹಾಕುವಾಗಲೂ ಏಕಾರ್ತಿಕ್ಯದೀಪ ಮಾಡುವಾಗಲೂ ಗಂಟೆ ಬಾರಿಸಬೇಕು. ಗಂಧದ ಪುಡಿಯಿಲ್ಲದೆ ಬರೀ ತುಪ್ಪ ಹಾಕಿ ಧೂಪಾರತಿ ಮಾಡುವುದೂ ನಿಷಿದ್ಧವೆಂದು ದ್ವಾತ್ರಿಂಶದಪರಾಧಸ್ತೋತ್ರದಲ್ಲಿ ಹೇಳಿದೆ—ಕೇವಲೇನ ಘೃತೇನೈವ ಧೂಪಯೋನ್ಮಾಂ ವಿಮೂಢಧೀಃ। (ಅರ್ಥ) ಕೇವಲ ತುಪ್ಪ ಹಾಕಿ ನನಗೆ ಧೂಪ ಹಾಕುವವನು ಶುದ್ಧ ಮೂರ್ಖ. ಗಂಧದ ಪುಡಿಯ ಜೊತೆ ಸ್ವಲ್ಪ ತುಪ್ಪವನ್ನೂ ಸ್ಪರ್ಶ ಮಾಡಿಯೇ ಧೂಪಾರತಿ ಮಾಡಬೇಕು. 'ಅಘೃತಂ ಗುಗ್ಗುಲಂ ಮತ್ತೋರ್ಕೇ ಮತ್ಪುರೋ ವಿದಹೇಚ್ಚಯಃ।' (ಅರ್ಥ) ಯಾರು ನನ್ನ ಎದುರಿಗೆ ತುಪ್ಪವಿಲ್ಲದೆ ಬರೀ ಸಾಂಬ್ರಾಣಿಯ ಧೂಪ ಹಾಕುವನೋ ಅವನೂ ಮೂರ್ಖನೇ ಸರಿ.

ಹೀಗೆಯೇ ಮಣ್ಣಿನ ಪಾತ್ರೆಯಲ್ಲಿ ಧೂಪ ಹಾಕುವುದೂ ಮಣ್ಣಿನ ಪಾತ್ರೆಯಿಂದ ಏಕಾರ್ತಿಕ್ಯ ದೀಪ ಮಾಡುವುದೂ ನಿಷಿದ್ಧ.

'ಮೃನ್ಮಯೇ ಧೂಪದಾನಂ ಚ ದೀಪಂ ಚ ಕುರುತೇ ಜನಃ।'

ಇದೇ ರೀತಿ ಕೆಂಡವು (ಬೆಂಕಿಯು) ಮಬ್ಬಾಗಿದ್ದರೆ ಅದನ್ನು ಬಾಯಿಯಿಂದ ಊದಿಯಾಗಲೀ, ಕೈಯಿಂದ ಅಥವಾ ವಸ್ತ್ರದಿಂದಾಗಲಿ ಬೀಸಿ ಪ್ರಜ್ವಲ ಮಾಡಬಾರದು ; ಅವೆಲ್ಲ ನಿಷಿದ್ಧ. ಬೀಸಣಿಗೆಯಿಂದ ಬೀಸಿಯೇ ಪ್ರಜ್ವಲಗೊಳಿಸಬೇಕು—

ವಸ್ತ್ರಾಸ್ಯ ಪಾಣಿವಾತೇನ ಧೂಪಂ ಚ ವಿನಿವೇದಯೇತ್ ।

(ಅರ್ಥ) ವಸ್ತ್ರ-ಬಟ್ಟೆ, ಅಸ್ಯ-ಮುಖ (ಬಾಯಿ), ಪಾಣಿ-ಕೈ—ಇವುಗಳನ್ನು ಬೀಸಿ, ವಾತೇನ-ಬಂದ ಗಾಳಿಯಿಂದ, ವಿಮೂಢಧೀಃ-ಬುದ್ಧಿಯಿಲ್ಲದವನು, ವಿನಿವೇದಯೇತ್-ಸಮರ್ಪಿಸುವನು.

ಶ್ರೀ ಪ್ರಭಂಜನರು 'ಪದ್ಯಮಾಲಾ'ದಲ್ಲಿ (ಪುಟ ೬೮, ಟಿಪ್ಪಣಿ II) ಈ ಸ್ಮೃತಿ-ವಾಕ್ಯವನ್ನೂ ಉದಹರಿಸಿದ್ದಾರೆ—

ಧೂಪಯೇತ್ ವ್ಯಜನೇನೈವ ಧೂಪಂ ನಾಂಗೈರ್ವಿಧೂಪಯೇತ್ ॥

(ಅರ್ಥ) ಧೂಪವನ್ನು ಬೀಸಣಿಗೆಯಿಂದಲೇ ಬೀಸಬೇಕು, ಕೈ ಮೊದಲಾದ ಅಂಗಗಳಿಂದ ಮಾಡಬಾರದು.

ಹಸ್ತವಾತಾಹತಂ ಧೂಪಂ ವಸ್ತ್ರವಾತಾಹತಂ ತಥಾ ।
ಮುಖೇನ ಧಮಿತಂ ಧೂಪಂ ನ ದೇವಾಯ ಸಮರ್ಪಯೇತ್ ॥

(ಅರ್ಥ) ಕೈಯಿಂದ ಬೀಸಿದ ಗಾಳಿಯಿಂದಲೂ ಬಟ್ಟೆ ಬೀಸಿ ಬಂದ ಗಾಳಿಯಿಂದಲೂ ಬಾಯಿಂದ ಊದಿ ಬಂದ ಗಾಳಿಯಿಂದಲೂ ಪ್ರಜ್ವಲಿತವಾದ ಧೂಪವನ್ನು ದೇವರಿಗೆ ಸಮರ್ಪಿಸಬಾರದು.

ಧೂಪ-ದೀಪಗಳಿಂದ ಏನು ಲಾಭ ?

ಧೂಪ ಹಾಕುವುದರಿಂದಲೂ ದೀಪ ಹಚ್ಚುವುದರಿಂದಲೂ ಏನು ಲಾಭ ಎಂಬುದನ್ನು ಶ್ರೀ ಪ್ರಭಂಜನರ 'ಪದ್ಯಮಾಲಾ ಟಿಪ್ಪಣಿ'ಯಲ್ಲಿ (ಪು. ೬೬, ಟಿ. ೩*) ಉದಹರಿಸಿದ ಪುರುಷಸಂಹಿತಾವಾಕ್ಯವು ವಿವರಿಸುತ್ತದೆ—

ಧೂಪಹೀನೇ ಶ್ರಿಯಂ ಹಂತಿ ದೀಪಹೀನೇ ಮತಿಭ್ರಮಃ ॥

(ಅರ್ಥ) ಧೂಪ ಹಾಕದಿದ್ದರೆ ಐಶ್ವರ್ಯ ಕಾಂತಿ ಮೊದಲಾದ ಸಕಲ ಸೌಭಾಗ್ಯವೂ ಹಾಳಾಗುತ್ತದೆ. ದೀಪವಿಲ್ಲದಿದ್ದರೆ ಬುದ್ಧಿಭ್ರಮಣೆಯಾಗುತ್ತದೆ.

ಧೂಪಕ್ಕೆ ಹಾಕುವ ದಶಾಂಗದ ವಿವರಣೆ—

ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲಿ ಕೊಟ್ಟ (ಪು. ೬೮, ವಿಶೇಷಾಂಶ I) ಪಂಚರಾತ್ರಾಗಮ ಪ್ರಮಾಣದಲ್ಲಿ ದಶಾಂಗಕ್ಕೆ ಸೇರಬೇಕಾದ (ದಶ-ಹತ್ತು, ಅಂಗ-ಅವಯವ ಪದಾರ್ಥಗಳುಳ್ಳದ್ದು) ಹತ್ತು ಪದಾರ್ಥಗಳನ್ನು ಹೆಸರಿಸುತ್ತದೆ—

ಚಂದನಾಗರು ಕರ್ಪೂರ—ದೇವಬ್ರಹ್ಮದಾರೂಣಿ ಗುಗ್ಗುಲವ್ ।
ಜಾತೀಫಲಂ ಶ್ರೀಫಲಂ ಚ ಉಶೀರಂ ಕೋಷ್ಠಮೇವ ಚ ॥
ತಥೈವ ಸಾಲನಿರ್ಯಾಸೋ ದಶಾಂಗೋ ಧೂಪ ಉಚ್ಯತೇ ।
ಗವಾಜ್ಯೇನಯುತಂ ದದ್ಯಾದ್ ಧೂಪಂ ವಿಷ್ಣೋರ್ಮನೋರಮಂ ॥

ಕಠಿನ ಶಬ್ದಾರ್ಥ— ೧. ಚಂದನ-ಶ್ರೀಗಂಧ, ೪. ದೇವದಾರು-ಬ್ರಹ್ಮದಾರು, ೫. ಗುಗ್ಗುಲ-ಸಾಂಬ್ರಾಣಿ, ೬. ಜಾತೀಫಲಂ, ೭. ಶ್ರೀಫಲಂ, ೮. ಉಶೀರ, ೯. ಕೋಷ್ಠಂ, ೧೦. ಸಾಲನಿರ್ಯಾಸ.

(ಅರ್ಥ) ಈ ಹತ್ತು ದ್ರವ್ಯಗಳನ್ನು ಬೆರೆಸಿ ಪುಡಿ ಮಾಡಿಟ್ಟುಕೊಳ್ಳಬೇಕು; ಇದೇ 'ದಶಾಂಗ.' ಕೆಂಡದ ಮೇಲೆ ದಶಾಂಗ ಹಾಕುವಾಗ ಆಕಳ ತುಪ್ಪವನ್ನು ಸೋಕಿಸಿ ಹಾಕಿ ಹೊಗೆಯಾಡುತ್ತಿರುವಾಗ ಧೂಪಾರತಿ ಮಾಡಬೇಕು. ಈ ಸುವಾಸನೆಯು ವಿಷ್ಣುವಿಗೆ ಪ್ರಿಯವಾದುದು (ಮನೋರಮಂ).

ಇನ್ನೊಂದು 'ಸ್ಮೃತಿ'ವಾಕ್ಯದಲ್ಲಿ (ಅಲ್ಲೇ ಉದಾಹೃತ) ಪಕ್ಷಾಂತರ ಹೇಳಲಾಗಿದೆ—

ಚಂದನಂ ದಶಭಾಗಂ ತು ನವಭಾಗಸ್ತು ಗುಗ್ಗುಲಃ ।
ಜಾತೀಫಲಂ ಶ್ರೀಫಲಂ ಚ ದೇವದಾರು ತಥೈವ ಚ ।
ಉಶೀರಂ ಚಾಷ್ಟಭಾಗಂ ಸ್ಯಾತ್ ಕೃಷ್ಣಾಗರು ತಥೈವ ಚ ॥

(ಅರ್ಥ) ಹತ್ತು ಭಾಗ (ಗ್ರಾಂ ಎನ್ನೋಣ) ಶ್ರೀಗಂಧದ ಪುಡಿ, ೨. ಒಂಬತ್ತು ಭಾಗ (ಗ್ರಾಂ) ಸಾಂಬ್ರಾಣಿ, ೩-೪-೫. ಜಾತೀಫಲ, ಶ್ರೀಫಲ, ದೇವದಾರು ಈ ಮೂರೂ ಒಂದೊಂದು ಭಾಗ (ಗ್ರಾಂ), ೬. ಉಶೀರ ಎಂಟು ಭಾಗ, ೭. ಕೃಷ್ಣಾಗರು ಎಂಟು ಭಾಗ (ಗ್ರಾಂ) ಸೇರಿಸಿ ದಶಾಂಗ ಮಾಡಬೇಕೆಂದು ಅರ್ಥ ತೋರುತ್ತದೆ.

ಕೆಂಡವೇ ಇಲ್ಲದಿರುವಾಗ ದಶಾಂಗದ ಪ್ರಶ್ನೆಯೇ ಬರುವುದಿಲ್ಲ. ಅಂಥಾ ಸಂದರ್ಭದಲ್ಲಿ ಬರೀ ನೀರಿನಿಂದಲೇ ಧೂಪಾರತಿ ಮಾಡಬಹುದು. 'ಕರ್ಮ ಜ್ಯಾಯೋ ಹ್ಯಕರ್ಮಣಃ' ಎಂಬ ಗೀತೋಕ್ತಿಯಂತೆ ಬಿಡುವುದಕ್ಕಿಂತ ನೀರಿನಿಂದ ಮಾಡುವುದೇ ಲೇಸು.

ದೀಪದ ಬಗ್ಗೆ ವಿಶೇಷ ವಿಚಾರ

ತಂತ್ರಸಾರದಲ್ಲಿ 'ಧೂಪದೀಪೌ ತತೋ ದತ್ವಾ' ಎಂದು ಸಾಮಾನ್ಯವಾಗಿ ಹೇಳಿದೆಯಾದರೂ ದೀಪ ಎಂಬುದಕ್ಕೇ ಎರಡು ಅರ್ಥವುಂಟು. 'ಸಾಜ್ಯಂ ತ್ರಿವರ್ತಿಸಂಯುಕ್ತಂ' ಎಂಬ ದೀಪಾರತಿಯ ಮಂತ್ರದಲ್ಲೇ 'ಸಾಜ್ಯಂ—ಸ+ಆಜ್ಯಂ—ತುಪ್ಪಸಹಿತವಾದ ಎಂದರೆ

ಆಕಳ ತುಪ್ಪದಲ್ಲಿ ನೆನೆಸಿದ ಎಂದರ್ಥ. ತ್ರಿ-ವರ್ತಿ-ಸಂಯುಕ್ತಂ—ಮೂರು ಬತ್ತಿಗಳಿಂದ ಕೂಡಿದ ಎಂದು ಹೇಳಿರುವುದರಿಂದ ಮೂರು ಬತ್ತಿಯಿಂದ ಕೂಡಿದ 'ಒಂದು ಮಂಗಳಾರತಿ' ಎಂದು ಅರ್ಥವಾಗುತ್ತದೆ. ಈ ಆರತಿಗೆ ಸಾಮಾನ್ಯವಾಗಿ 'ಏಕಾರ್ತಿಕ್ಯ ದೀಪ' ಎನ್ನುತ್ತಾರೆ. ನೀಲಾಂಜನಾದಿಗಳಲ್ಲಿ ಹೂಬತ್ತಿ, ತುಪ್ಪ ಅಥವಾ ಎಣ್ಣೆ ಹಾಕಿ ಹಚ್ಚಿಡುವ 'ದೀಪ' ಎಂದೂ ಅರ್ಥವಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಎರಡು ಅರ್ಥಗಳನ್ನೂ ಗ್ರಹಣ ಮಾಡಿ ಎರಡೂ ವಿಧ ದೀಪವನ್ನೂ ಸಮರ್ಪಿಸಬೇಕು. ಇದೇ ಸಂಪ್ರದಾಯವೂ ಇಗಿದೆ 'ಏಕಾರ್ತಿಕ್ಯದೀಪ'ವನ್ನು ಯಾವ ಮಂತ್ರದಿಂದ ಸಮರ್ಪಿಸಬೇಕೆಂಬುದನ್ನು 'ಪದ್ಯಮಾಲಾ'ದಲ್ಲೇ ಸ್ಪಷ್ಟವಾಗಿ ಹೇಳಿದ್ದಾರೆ—

ಧೂಪಂ ದತ್ವಾ ತತೋ ದೀಪಂ ದದ್ಯಾನ್ಮೂಲಮುದೀರಯನ್ ॥ ೯೬ ॥

'ಸಾಜ್ಯಂ ತ್ರಿವರ್ತಿ....' ಮಂತ್ರೇಣ

(ಪಾಠಾಂತರ) 'ಸಾಜ್ಯಮಿತ್ಯಾದಿ' ಮಂತ್ರೇಣ

(ಅರ್ಥ) 'ಸಾಜ್ಯಂ ತ್ರಿವರ್ತಿ' ಎಂಬ ಮಂತ್ರದಿಂದ ನಾರಾಯಣಾಷ್ಟಾಕ್ಷರ ಮಂತ್ರೋಚ್ಚಾರಪೂರ್ವಕವಾಗಿ ದೀಪವನ್ನು (ಏಕಾರ್ತಿಕ್ಯದೀಪವನ್ನೂ; 'ಭಕ್ತ್ಯಾ ದೀಪಂ' ಎಂಬ ಮಂತ್ರದಿಂದ ಹೂಬತ್ತಿ ನೀಲಾಂಜನಗಳ ದೀಪವನ್ನೂ) ಸಮರ್ಪಿಸಿ ಕೊನೆಗೆ ನೈವೇದ್ಯ ಸಮರ್ಪಿಸಬೇಕು.

ಏಕಾರ್ತಿಕ್ಯದೀಪದ ಮಂತ್ರ

ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।
ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯತಿಮಿರಾಪಹ ॥

(ಕಠಿನ ಶಬ್ದಾರ್ಥ) ಸ + ಆಜ್ಯಂ = ಸಾಜ್ಯಂ-ತುಪ್ಪದಿಂದ ಸಹಿತವಾದ ಎಂದರೆ ಆಕಳ ತುಪ್ಪದಲ್ಲಿ ನೆನೆಸಿದ (ತೋಯಿಸಿದ), ತ್ರಿ-ವರ್ತಿ ಸಂಯುಕ್ತಂ-ಮೂರು ಬತ್ತಿಗಳುಳ್ಳ, ವಹ್ನಿನಾ-ಬೆಂಕಿಯಿಂದ, ವಹ್ನಿನಾ ಯೋಜಿತಂ-ಬೆಂಕಿಯಿಂದ ಉರಿಯುತ್ತಿರುವ ಪ್ರಜ್ವಲಿತವಾದ ಎಂದರ್ಥ. ಮಯಾ-ನನ್ನಿಂದ, ಗೃಹಾಣ-ಸ್ವೀಕಾರ ಮಾಡು, ಸ್ವೀಕರಿಸು. ತಿಮಿರ-ಅಂಧಕಾರ, ಅಪ ಹ (ಹನ್ ಧಾತು, ಸಂಹರಿಸು, ನಾಶಮಾಡು)-ನಾಶಮಾಡುವಂಥಾ, ತ್ರೈಲೋಕ್ಯ ತಿಮಿರ-ಅಪಹ—ಮೂರು ಲೋಕಗಳ ಅಂಧಕಾರ (ಕಗ್ಗತ್ತಲು) ವನ್ನು ನಾಶಮಾಡುವ ಹೇ ಭಗವಂತನೇ (ಎಂದು ಸಂಬೋಧನೆ).

ತಾತ್ಪರ್ಯ) ಮೂರು ಲೋಕಗಳ ಕಗ್ಗತ್ತಲನ್ನೇ ನಾಶಮಾಡುವ ಹೇ ಸ್ವಾಮಿಯೇ! ಆಕಳ ತುಪ್ಪದಲ್ಲಿ ನೆನೆಸಿದ (ತೋಯಿಸಿದ) ಮೂರು ಬತ್ತಿಗಳುಳ್ಳ ಈ ದೀಪಕ್ಕೆ ಉರಿಯೋಳುವಂತೆ ಬೆಂಕಿ ತಗುಲಿಸಿ ಈ ಏಕಾರ್ತಿಕ್ಯದೀಪವನ್ನು ನಾನು ಮಾಡು-

ತ್ತಿದ್ದೇನೆ. ಹೇ ಸ್ವಾಮಿ, ನೀನು ಇದನ್ನು ಸ್ವೀಕಾರ ಮಾಡಿ ನನ್ನ ಹೃದಯಾಂಧಕಾರವನ್ನು ದೂರಮಾಡೆಂದು ಭಾವ.

ಏಕಾರ್ತಿಕ್ಯದೀಪ ಮಾಡುವ ವಿಧಾನ—

'ಪದ್ಯಮಾಲಾ' ಟೀಕೆಯಲ್ಲಿರುವ 'ಪೂಜಾಕಲ್ಪಲತಾ'ದಲ್ಲಿ (ಪ್ರಭಂಜನರ ಪದ್ಯ, ದ್ವಿ.ಸಂ., ಪುಟ ೬೮, ಟಿ 6) ಏಕಾರ್ತಿಕ್ಯದೀಪವನ್ನು ಸಮರ್ಪಿಸುವ ವಿಧಾನವನ್ನು ಸ್ಪಷ್ಟಪಡಿಸಿ ಹೀಗೆ ಹೇಳಿದ್ದಾರೆ— 'ತಂ ಆಪಾದಮೌಲಿಪರ್ಯಂತಂ ಪ್ರಾದಕ್ಷಿಣ್ಯೇನ ಸಾರ್ಧತ್ರಿವಾರಂ ಭ್ರಾಮಿತಂ ಕೃತ್ವಾ ಪ್ರದರ್ಶ್ಯ ಶಾಂತಂ ಕುರ್ಯಾತ್'— ಆ ಮೂರು ಬತ್ತಿಯ ಹಚ್ಚಿದ ದೀಪಾರತಿಯನ್ನು ದೇವರ ಪಾದದಿಂದ ಹಿಡಿದು ನೆತ್ತಿಯವರೆಗೆ ಪ್ರದಕ್ಷಿಣಾಕಾರವಾಗಿ ಪೂರ್ತಿ ಮೂರು ಸಾರಿ ಸುತ್ತಿಸಿ ನಾಲ್ಕನೇ ಸರಿ ಅರ್ಧಮಾತ್ರ ಎಂದರೆ ನಾಭಿಯವರೆಗೆ ಮಾತ್ರ ಮಂಗಳಾರತಿ ಮಾಡಿ ಅದನ್ನು ಕೆಳಗೆ ಹಾಕಿ ಆರಿಸಿಬಿಡಬೇಕು. ದೀಪದ ಮೇಲೆ ಹಲಗಾರತಿಯನ್ನೇ ದಬ್ಬಿಹಾಕಿ ಬೋರಲು ಹಾಕಿ) ಆರಿಸಿಬಿಡಬೇಕೆಂದು ಭಾವ. ಹೀಗೇಕೆ ಮಾಡಬೇಕೆಂದರೆ ಕಾರಣ ಹೇಳುತ್ತಾರೆ—

ಸ್ವಯಮೇವ ನಾಶೇ ಮಹಾನರ್ಥಶ್ರವಣಾತ್

(ಅರ್ಥ) ದೀಪಾರತಿಯು ತನಗೆ ತಾನೇ ಆರಿಹೋದರೆ ಮಹಾ ಅನರ್ಥವಾಗುವುದೆಂದು ಹೇಳಿದೆಯಾದ್ದರಿಂದ ನಾವೇ ಅದನ್ನು ಆರಿಸಿಬಿಡಬೇಕೆಂದು ಭಾವ. ಏನು ಅನರ್ಥ ಎಂದರೆ ಅದನ್ನೇ ಪ್ರಮಾಣೋದಾಹರಣಪೂರ್ವಕ ವಿವರಿಸುತ್ತಾರೆ—

ಆಪಾದಮೌಲಿಪರ್ಯಂತಂ ಪ್ರಾದಕ್ಷಿಣ್ಯಾತ್ ತ್ರಿರರ್ಧಕಮ್ ।
ಭ್ರಾಮ್ಯ ಪ್ರದರ್ಶ್ಯ ದೇವಾಯ ದೀಪಂ ನಿರ್ವಾಪಯೇತ್ ತತಃ ॥
ಸ್ವಯಮೇವ ವಿನಷ್ಟಂ ತು ದೀಪಂ ಗೃಹ್ಣಂತಿ ರಾಕ್ಷಸಾಃ ।
ತಸ್ಮಾನ್ನಿರ್ವಾಪಯೇದ್ದೀಪಂ ವೃತ್ತ್ಯೈ ರಕ್ಷಃಕ್ಷಯಾಯ ಚ
ಅನ್ಯಥಾ ನರಕಂ ಯಾತಿ ಯಾವದಾಭೂತಸಂಪ್ಲವಮ್ ॥

— ಇತಿ ನಾರದೀಯ ವಚನಾತ್

(ಅರ್ಥ) ನಾರದೀಯಪುರಾಣದಲ್ಲಿ ಹೀಗೆ ಹೇಳಿದೆ— ಏಕಾರ್ತಿಕ್ಯದೀಪವನ್ನು ಭಗವಂತನ ಪಾದದಿಂದ ಆರಂಭಿಸಿ ನೆತ್ತಿಯವರೆಗೆ ಪ್ರದಕ್ಷಿಣಾಕಾರವಾಗಿ ಮೂರೂವರೆ ಸಾರಿ (ಮೂರು ಸಾರಿ ಪೂರ್ತಿಯಾಗಿ ಕಡೆಯ ಸಾರಿ ಅರ್ಧ ಮಾತ್ರ) ಸುತ್ತಿಸಿ ದೇವರಿಗೆ ಆರತಿ ಮಾಡಿ ಆ ದೀಪವನ್ನು ಆರಿಸಿಬಿಡಬೇಕು. ಆ ದೀಪವು ತಾನೇ ಆರಿಹೋದರೆ ಅದನ್ನು ರಾಕ್ಷಸರು ಸ್ವೀಕರಿಸುವರು. ಆದಕಾರಣ ದೀಪದ ಫಲ ಉಳಿಯುವುದಕ್ಕಾಗಿಯೂ ರಾಕ್ಷಸರ ನಾಶಕ್ಕಾಗಿಯೂ ದೀಪವನ್ನು ತಾನೇ ಆರಿಸಿಬಿಡಬೇಕು. ಹಾಗೆ ಮಾಡದಿದ್ದರೆ ಪ್ರಲಯಕಾಲದ ಕಡೆಯವರೆಗೂ ನರಕದಲ್ಲಿ ಬೀಳುತ್ತಾನೆ— ಎಂದು ಹೇಳಿದೆ.

ಏಕಾರ್ತಿಕ್ಯದೀಪವನ್ನು ಏಕೆ ಆರಿಸಬೇಕು ಎಂಬುವುದಕ್ಕೆ ಇನ್ನೊಂದು ಪ್ರಮಾಣ ವನ್ನೂ ಹೇಳುತ್ತಾರೆ—

ತ್ರಿವರ್ತಿದೀಪನಾಶೇ ತು ಬುದ್ಧಿಪೂರ್ವಂ ಕೃತೇ ಸತಿ ।
ದೇವಾ ಗೃಹ್ಣಂತಿ ತಂ ದೀಪಂ ರಾಕ್ಷಸಾದ್ಯಾಸ್ತದನ್ಯಥಾ ॥
—ಇತಿ ಸ್ಕಾಂದವಚನಾಚ್ಚ

(ಅರ್ಥ) ಮೂರು ಬತ್ತಿಯಿರುವ ಏಕಾರ್ತಿಕ್ಯದೀಪವನ್ನು ಬುದ್ಧಿಪೂರ್ವಕವಾಗಿ ತಾನೇ ಆರಿಸಿದರೆ ಅದನ್ನು ದೇವತೆಗಳನ್ನು ಸ್ವೀಕರಿಸುತ್ತಾರೆ. ಇಲ್ಲದೇ ಹೋದರೆ ಅದನ್ನು ರಾಕ್ಷಸರು ಅಪಹರಿಸುತ್ತಾರೆ ಎಂದು ಸ್ಕಾಂದಪುರಾಣವಚನ ಇರುವುದರಿಂದಲೂ ಆ ಏಕಾರ್ತಿಕ್ಯದೀಪವನ್ನು ತಾನೇ ಆರಿಸಬೇಕು.

ಏಕಾರ್ತಿಕ್ಯದೀಪದ ಲಕ್ಷಣ—

ಏಕಾರ್ತಿಕ್ಯದೀಪದ ಲಕ್ಷಣವನ್ನು ಹಾರೀತಸ್ಮೃತಿವಾಕ್ಯ (ಪ್ರಭಂಜನರ ಪದ್ಯಮಾಲಾ, ಪುಟ ೬೯, ಟಿ. iv) ತಿಳಿಸುತ್ತದೆ.

ಗವಾಜ್ಯಂ ತಿಲತೈಲಂ ಚ ಕುಸುಮೈಶ್ಚ ಸುವಾಸಿತಮ್ ।
ಸಂಯೋಜ್ಯ ವರ್ತಿನಾ ದೀಪಂ ಭಕ್ತ್ಯಾ ವಿಷ್ಣೋರ್ನಿವೇದಯೇತ್ ॥

(ಅರ್ಥ) ಹತ್ತಿಯ ಬತ್ತಿಯನ್ನು ಹಸುವಿನ (ಆಕಳ) ತುಪ್ಪದಲ್ಲಿ ಅಥವಾ ಎಳ್ಳಿನ ಎಣ್ಣೆಯಲ್ಲಿ ನೆನೆಯಿಸಿ (ತೋಯಿಸಿ) ಹೂವುಗಳನ್ನು ಕೈಯಲ್ಲಿ ಹಿಡಿದುಕೊಂಡು ಬತ್ತಿ ಯನ್ನು ದೀಪದಿಂದ ಹತ್ತಿಸಿ (ಹಚ್ಚಿ) ಭಕ್ತಿಯಿಂದ ವಿಷ್ಣುವಿಗೆ ಸಮರ್ಪಿಸಬೇಕು.

ವಾಸಿಷ್ಠಸ್ಮೃತಿಯು (ಅಲ್ಲೇ ಪುಟ ೬೯) ಹೀಗೆ ಹೇಳುತ್ತದೆ—

ಗೋಘೃತೇನ ಸುಸಂಯುಕ್ತಂ ದೀಪಂ ಚ ವಿನಿವೇದಯೇತ್ ॥

(ಅರ್ಥ) ಮಂಗಳಾರತಿ ಬತ್ತಿಯನ್ನು (ಮೂರನ್ನು ಮಾತ್ರ) ಆಕಳ ತುಪ್ಪದಲ್ಲಿ ನೆನೆಸಿ ದೀಪವನ್ನು ಬೆಳಗಬೇಕು (ಮತ್ತು ಬೆಳಗಿ ಆರಿಸಿಬಿಡಬೇಕು). ಆರತಿ ಮಾಡು ವಾಗಲೂ ಧೂಪ ಹಾಕುವಾಗಲೂ ಭಗವನ್ಮೂರ್ತಿಯನ್ನು ನೋಡುತ್ತಿರಬೇಕು.—ಇದು ಮಹಾ ಪುಣ್ಯಕರವೆಂದು ಸ್ಕಾಂದಪುರಾಣದಲ್ಲಿ (ಅಲ್ಲೇ ಪು. ೬೯, ಟಿ. iii) ಹೇಳಿದೆ—

ಧೂಪಕಾಲೇ ದೀಪಕಾಲೇ ಕರಾಭ್ಯಾಂ ಚ ಪ್ರವಂದನೇ ।
ಭಕ್ತ್ಯಾ ಕರೋತಿ ಯೋ ನಿತ್ಯಂ ಭಗವನ್ಮೂರ್ತಿದರ್ಶನಮ್ ।
ಕುಲಕೋಟಿ ಸಮುದ್ಧೃತ್ಯ ಯಾತಿ ವಿಷ್ಣೋಃ ಪರಂ ಪದಮ್ ॥

(ಅರ್ಥ) ಧೂಪ ಹಾಕುವಾಗಲೂ ಮಂಗಳಾರತಿ ಮಾಡುವಾಗಲೂ ನಮಸ್ಕಾರ ಮಾಡಿ ಕೈ ಮುಗಿಯುವಾಗಲೂ ಯಾರು ನಿತ್ಯವೂ ಭಗವನ್ಮೂರ್ತಿಯ ದರ್ಶನ ಮಾಡು

ತ್ತಾರೋ ಅವರು ಕುಲಕೋಟಿಯನ್ನು ಉದ್ಧಾರ ಮಾಡಿ ಶಾಶ್ವತವಾದ ವಿಷ್ಣುಸ್ಥಾನ (ವೈಕುಂಠ)ವನ್ನು ಸೇರುತ್ತಾರೆ.

ಧೂಪಕಾಲೇ ಹರೇರ್ವಕ್ತ್ರಂ ಧೂಪಧೂಮ್ರಂ ಮನೋಹರಮ್ ।
ಚಾರುಹಾಸಂ ಪ್ರಪಶ್ಯಂತಿ ತೇಷಾಂ ಪುಣ್ಯಮನಂತಕಮ್ ॥

(ಅರ್ಥ) ಧೂಪ ಹಾಕುವ ಸಮಯದಲ್ಲಿ ಭಗವಂತನ ಮನೋಹರವಾದ ಮಂದ-ಹಾಸಯುಕ್ತವಾದ ಮುಖವನ್ನು ಧೂಪದ ಮಬ್ಬಿನಲ್ಲೇ ಯಾರು ನೋಡುತ್ತಾರೋ ಅವರ ಪುಣ್ಯಕ್ಕೆ ಎಣೆಯೇ ಇಲ್ಲ. 'ಪುಣ್ಯಕ್ಕೆ ಎಣೆಯೇ ಇಲ್ಲ' ಎಂದು ಹೇಳಿದ್ದನ್ನೇ ಮುಂದೆ ವಿಸ್ತರಿಸುತ್ತದೆ—

ರಾಜಸೂಯಸಹಸ್ರೇಣ ದೀಕ್ಷಿತಸ್ಯ ಮಹಾತ್ಮನಃ ।
ತತ್ಫಲಂ ಸಮವಾಪ್ನೋತಿ ನೋದತೇ ಹರಿಮಂದಿರೇ ॥

(ಅರ್ಥ) ಸಾವಿರ ರಾಜಸೂಯ ಮಾಡುವವನಿಗೆ ಏನು ಪುಣ್ಯ ಬರುತ್ತದೋ ಧೂಪ ಹಾಕಿದಲ್ಲಿ ಭಗವಂತನ ಮೂರ್ತಿಯ ದರ್ಶನ ಮಾಡಿದವನಿಗೂ ಆ ಪುಣ್ಯ ಬರುತ್ತದೆ ಅವನು ವಿಷ್ಣುಲೋಕವನ್ನು (ವೈಕುಂಠವನ್ನು) ಸೇರಿ ಸುಖಿಯಾಗಿರುತ್ತಾನೆ.

ಏಕಾರ್ತಿಕ್ಯದೀಪ ಬೆಳಗುವಾಗ ಹೇಳಿಕೊಳ್ಳಬಹುದಾದ ಹೆಚ್ಚಿನ ಶ್ಲೋಕಗಳು—

ಪದ್ಮಮಾಲಾದಲ್ಲಿ " ವನಸ್ಪತ್ಯುದ್ಭವೇತ್ಯಾದಿ ಮಂತ್ರೈಃ"-ವನಸ್ಪತ್ಯುದ್ಭವ...... ಮೊದಲಾದ ಮಂತ್ರಗಳಿಂದ ಧೂಪಾರತಿ ಮಾಡಬೇಕೆಂದು ಹೇಳಿದರಷ್ಟೆ. ಅದರಲ್ಲಿ 'ಆದಿ-ಮೊದಲಾದ' ಮಂತ್ರಗಳಿಂದ ಎಂಬು ಹೇಳಿದ್ದರಿಂದ ಕೆಳಗಿನ ಶ್ಲೋಕಗಳನ್ನು ಗ್ರಹಣ ಮಾಡಬಹುದು (ಪ್ರಭಂ., ಪದ್ಮ., ಪುಟ ೬೬-೬೭)—

ವಸಂತತಿಲಕಾವೃತ್ತ

ಧ್ಯೇಯಃ ಸದಾ ಪರಿಭವಘ್ನಮಭೀಷ್ಟದೋಹಂ
ತೀರ್ಥಾಸ್ಪದಂ ಶಿವವಿರಿಂಚಿನುತಂ ಶರಣ್ಯಮ್ ।
ಭೃತ್ಯಾರ್ತಿಹಂ ಪ್ರಣತಪಾಲಭವಾಬ್ಧಿಪೋತಂ
ವಂದಾಮಹೇ ಪುರುಷ ತೇ ಚರಣಾರವಿಂದಮ್ ॥

(ಭಾಗವತ, ೧೧ ಸ್ಕಂ., ೫ ಅ, ೩೩ ಶ್ಲೋ.)

ಕಠಿನ ಶಬ್ದಾರ್ಥ— ಧ್ಯೇಯಃ-ಧ್ಯಾನಿಸತಕ್ಕದ್ದು, ಪರಿಭವ—ಸೋಲು, ಅವಜಯ, ತಿರಸ್ಕಾರ, ಘ್ನ—ನಾಶ ಮಾಡುವಂಥಾ, ಅಭೀಷ್ಟದಃ—ಬೇಡಿದ ಇಷ್ಟಾರ್ಥಗಳನ್ನು ಕೊಡುವವನು, ಅಹಂ—ಅಹೇಯನಾದ ಭಗವಂತನು, ತೀರ್ಥಾಸ್ಪದಂ—ಪಾವಿತ್ರ್ಯತೆಗೆ ಕಾರಣನಾದ ಪವಿತ್ರ ಮಾಡುವ, ವಿರಿಂಚಿ-ಬ್ರಹ್ಮದೇವರು, ನುತ—ಸ್ತುತ್ಯನಾದ, ಸ್ತುತಿಸಲ್ಪಡುವ,

ಶರಣ್ಯಂ–ಶರಣಾಗತರಕ್ಷಕನಾದ, ಭೃತ್ಯ–ಸೇವಕರ (ಭಕ್ತರ) + ಆರ್ತಿ-ದುಃಖಗಳನ್ನು + ಹಂ-ಪರಿಹರಿಸುವ, ನಾಶಮಾಡುವಂಥಾ, ಪ್ರಣತ–ನಮಸ್ಕಾರ ಮಾಡುವವರನ್ನು, ಪಾಲ–ಸಂರಕ್ಷಿಸುವ, ಭವ–ಸಂಸಾರವೆಂಬ + ಅಬ್ಧಿ-ಸಮುದ್ರವನ್ನು–ಪೋತಂ-ದಾಟಿಸುವಂಥಾ ಹರಿಗೋಲಿನಂತಿರುವ, ವಂದಾಮಹೇ–ನಾವೆಲ್ಲ ವಂದಿಸುತ್ತೇವೆ. ಪುರುಷ-ಪೂರ್ಣ ಷಡ್ಗುಣವುಳ್ಳವನಾದ್ದರಿಂದಲೂ ದೇಹದಲ್ಲಿ ಅಂತರ್ಯಾಮಿಯಾಗಿರುವುದರಿಂದಲೂ, ಪುರುಷಶಬ್ದವಾಚ್ಯನಾದ ಹೇ ಭಗವಂತ! ಶ್ರೀಹರಿಯೇ, ತೇ-ನಿನ್ನ, ಚರಣಾರವಿಂದಂ–ಪಾದಕಮಲವನ್ನು.

ಸೂಚನೆ— ಈ ಶ್ಲೋಕದಲ್ಲಿ ಎರಡು ಪ್ರಧಾನವಾಕ್ಯಗಳಿವೆ. ೧. ಅಭೀಷ್ಟದಃ ಅಹಂ ಸದಾ ಧ್ಯೇಯಃ-ಭಕ್ತರ ಸಕಲಾಭೀಷ್ಟವನ್ನೂ ಕೊಡುವಂಥಾ ನನ್ನ ಅಂತರ್ಯಾಮಿಯಾದ ಅಹೇಯನಾದ್ದರಿಂದ ಅಹಂ ಶಬ್ದವಾಚ್ಯನಾದ ಭಗವಂತನನ್ನು ಸದಾ ಧ್ಯಾನಿಸಬೇಕು. ೨. ಹೇ ಪುರುಷ! ತೇ ಚರಣಾರವಿಂದಂ ವಂದಾಮಹೇ–ಹೇ ಪೂರ್ಣ ಷಡ್ಗುಣನಾದ ಭಗವಂತ! ನಾವು ನಿನ್ನ ಚರಣಾರವಿಂದವನ್ನು ವಂದಿಸುತ್ತೇವೆ—ಎಂಬುದು ಎರಡನೆ ವಾಕ್ಯ. ಪರಿಭವಘ್ನಂ ಮೊದಲಾದ ಐದು ಪದಗಳು ಚರಣಾರವಿಂದಂ—ಗೆ ವಿಶೇಷಣಗಳು.

ಶ್ಲೋಕದ ಭಾವಾರ್ಥ— ಭಕ್ತರ ಇಷ್ಟಾರ್ಥಗಳನ್ನು ಕೊಡುವ ಅಹೇಯನಾದ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ಸದಾ ಧ್ಯಾನಿಸುತ್ತಿರಬೇಕು. ಹೇ ಪೂರ್ಣ-ಷಡ್ಗುಣನಾದ ದೇಹದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಪುರುಷನಾಮಕನಾದ ಹೇ ಸ್ವಾಮಿ, ೧) ಸಕಲ ವಿಧವಾದ ಅಂಜಿಕೆಯು ಅಪಮಾನಾದಿ ಅನಿಷ್ಟಗಳನ್ನು ಪರಿಹರಿಸುವ, ೨) ಪಾವಿತ್ರ್ಯಕ್ಕೆ ಕಾರಣೀಭೂತವಾದ, ೩) ಶಿವ-ಬ್ರಹ್ಮಾದಿಗಳಿಂದ ವಂದ್ಯನಾದ (ಸ್ತುತ್ಯವಾದ), ೪) ಮೊರೆಹೊಕ್ಕ ಜನರಿಗೆ ಆಶ್ರಯದಾತನಾದ, ೫) ನಮಸ್ಕರಿಸುವ ಭಕ್ತರನ್ನು ಸಂರಕ್ಷಿಸುವ ಮತ್ತು ಸಂಸಾರವೆಂಬ ಸಮುದ್ರವನ್ನು ದಾಟಿಸುವ ಹರಿಗೋಲಿನಂತೆ (ದೋಣಿಯಂತೆ) ಇರುವ ನಿನ್ನ ಪಾದಕಮಲವನ್ನು ವಂದಿಸುತ್ತೇವೆ.

ಈ ಶ್ಲೋಕವು ಶ್ರೀರಾಮಚಂದ್ರದೇವರ ಚರಿತ್ರಸೂಚಕವಾಗಿ ಅವರ ಸ್ತುತಿಪರವಾಗಿದೆ. ಇದೂ ಅಲ್ಲೇ ಭಾಗವತದಲ್ಲೇ ಪಠಿತವಾಗಿದೆ—

ವಸಂತತಿಲಕವೃತ್ತ

ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ
ಧರ್ಮಿಷ್ಠ ಮಾರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವದ್
ವಂದಾಮಹೇ ಪುರುಷ ತೇ ಚರಣಾರವಿಂದಮ್ ॥

ಕಠಿನ ಶಬ್ದಾರ್ಥ— ತ್ಯಕ್ತ್ವಾ (ತ್ಯಜ್ ಧಾತು, ಬಿಡು, ತ್ಯಜಿಸು)-ಬಿಟ್ಟು, ತ್ಯಜಿಸಿ, ಸುದುಸ್ತ್ಯಜ-ಬಿಡುವುದಕ್ಕೆ (ತ್ಯಜಿಸುವುದಕ್ಕೆ) ಬಹಳ ಅಸಾಧ್ಯವಾದ, ಸುರೇಪ್ಸಿತ (ಸುರ+ಈಪ್ಸಿತ)-ದೇವತೆಗಳಿಂದಲೂ ಅಪೇಕ್ಷಿತವಾದ, ಆರ್ಯ-ವಚಸಾ-ತಂದೆಯ ಮಾತಿನಿಂದ, ಯತ್-ಯಾವುದು, ಏನು, ಅಗಾತ್-ಹೋದನೋ, ಮಾಯಾಮೃಗಂ-ಮಾಯಾಜಿಂಕೆಯಾದ (ಮಾರೀಚನನ್ನು), ದಯಿತಯಾ-ಪತ್ನಿಯಾದ ಸೀತಾದೇವಿಯಿಂದ, ಈಪ್ಸಿತಂ-ಅಪೇಕ್ಷಿಸಲ್ಪಟ್ಟ, ಅನ್ವಧಾವತ್-ಹಿಂದಟ್ಟಿಸಿಕೊಂಡುಹೋದನೋ.

ಭಾವಾರ್ಥ— ಯಾವ ಶ್ರೀರಾಮಚಂದ್ರನ (ಕೈಯಿಗೆ ಬಂದದ್ದನ್ನು) ಬಿಡುವುದಕ್ಕೆ ಅಸಾಧ್ಯವಾದ ಮತ್ತು ದೇವತೆಗಳೂ ಬಯಸಲು ಯೋಗ್ಯವಾದ ರಾಜ್ಯಲಕ್ಷ್ಮಿಯನ್ನು ತಂದೆಯ ಮಾತಿನಂತೆ ತ್ಯಜಿಸಿಬಿಟ್ಟು ಕಾಡಿಗೆ ಹೋದನೋ ಮತ್ತು ಯಾರು ತನ್ನ ಪತ್ನಿಯಾದ ಸೀತೆಯು ಅಪೇಕ್ಷೆಪಟ್ಟ ಮಾಯಾಜಿಂಕೆಯನ್ನು ಅಟ್ಟಿಸಿಕೊಂಡು ಹೋದನೋ ಅಂಥಾ ರಾಮಾವತಾರ ಮಾಡಿದ ಪೂರ್ಣಷಡ್ಗುಣನಾದ ಹೇ ನಾರಾಯಣ ನಿನ್ನ ಪಾದ-ಕಮಲವನ್ನು ನಾವು ವಂದಿಸುವೆವು.

ಕೆಳಗಿನ ಈ ಶ್ಲೋಕವು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ಎರಡನೇ ಅಧ್ಯಾಯದ ಮಂಗಳಶ್ಲೋಕ.

ಮಾಲಿನೀವೃತ್ತ

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನಃ ॥

ಕಠಿನ ಶಬ್ದಾರ್ಥ— ಅಚಿಂತ್ಯಃ-ಇಷ್ಟೇ ಎಂದು ನಿರ್ಣಯಿಸಲು ಸಾಧ್ಯವಿಲ್ಲ; ಸಮಗ್ರವಾಗಿ ತಿಳಿಯಲು ಅಸಾಧ್ಯನಾದ. ಅಭೀಷ್ಟ-ಇಷ್ಟಾರ್ಥ (ಕೋರಿಕೆ) ಗಳನ್ನು + ಅವಾಪ್ತಿದಃ-ಕೊಡುವಂಥಾ, ಅರ್ಣಃ-ಸಮುದ್ರ, ನಿರ್ಮುಕ್ತ-ಬಿಡಲ್ಪಟ್ಟ, ರಹಿತನಾದ, ಸರಸಿಜ-ಕಮಲದಂತೆ, ನಯನಃ-ಕಣ್ಣುಗಳುಳ್ಳ, ಅಸೌ-ಈ (ಪ್ರತ್ಯಕ್ಷಗೋಚರನಾದ), ಮಾನದಃ-ಅಳತೆಗೆ (ಯೋಗ್ಯತೆಗೆ) ತಕ್ಕಂತೆ ಮೋಕ್ಷಾನಂದವನ್ನು ಕೊಡುವಂಥಾ, ನಃ-ನಮಗೆ.

ತಾತ್ಪರ್ಯ— ಶ್ರೀಪತಿಯಾದ ಶ್ರೀಹರಿಯು ಸದಾ ಜಯಶೀಲನಾಗಿದ್ದಾನೆ. ಅವನನ್ನು ಸಮಗ್ರವಾಗಿ ಯಾರೂ ಅರಿಯಲಾರರು. ರಮಾ-ಬ್ರಹ್ಮಾದಿ ಸಕಲ ದೇವತೆಗಳಿಂದಲೂ ಮುಖ್ಯವಾಗಿ ಸರ್ವೋತ್ತಮತ್ವೇನ ಅವನೊಬ್ಬನೇ ವಂದ್ಯನಾಗಿದ್ದಾನೆ.

ಆ ಶ್ರೀಹರಿಯು ರಮಾಬ್ರಹ್ಮಾದಿಗಳಿಗೂ ಮುಖ್ಯನಾದ ವಿದ್ಯೋಪದೇಶಕನಾಗಿದ್ದಾನೆ. ಸಕಲ ಭಕ್ತರಿಗೂ ಅವರವರ ಅಭೀಷ್ಟವನ್ನು ಸಲ್ಲಿಸತಕ್ಕವನು. ಸಚ್ಚಿದಾನಂದಾದಿ ಸಕಲ ಗುಣಗಳಿಗೂ ಸಮುದ್ರದಂತೆ ಇದ್ದಾನೆ. ನಿತ್ಯದಲ್ಲೂ (ಯಾವ ಯಾವ ಕಾಲಕ್ಕೂ) ಯಾವ ವಿಧವಾದ ಅಜ್ಞಾನ, ಪಾರತಂತ್ರ್ಯ, ದೇಹನಾಶಾದಿ ಯಾವ ವಿಧವಾದ ದೋಷವೂ ಸುತರಾಂ ಇಲ್ಲದವನು. ಕಮಲದಳದಂತೆ ಆಕರ್ಷಣೀಯವಾದ ಕಣ್ಣುಗಳುಳ್ಳ ಪ್ರತ್ಯಕ್ಷಗೋಚರನಾದ ಶ್ರೀಮನ್ನಾರಾಯಣ ನಮಗೆ ನಮ್ಮ ನಮ್ಮ ಸಾಧನಗಳಿಗೆ ತಕ್ಕಂತೆ ಮೋಕ್ಷದಲ್ಲಿ ಆನಂದವನ್ನು ಕೊಡತಕ್ಕಂಥಾ ಮಹಾಸ್ವಾಮಿಯಾಗಿದ್ದಾನೆ. ಇಂಥಾ ಭಗವಂತ ಸರ್ವದಾ ಜಯಶೀಲನಾಗಿದ್ದಾನೆ.

ವಿಷ್ಣುಪೂಜಾವಿಧಾನಂ ತು ಪದ್ಮಮಾಲಾನುಸಾರತಃ ।
ವದತಾ ವಿಷ್ಣುತೀರ್ಥೇನ ವಿಸ್ತರೇಣ ಯಥಾಮತಿ ॥ ೧ ॥
ಅಭಿಷೇಕವಿಧಿಂ ಪ್ರೋಕ್ತ್ವಾ ವಸ್ತ್ರಾದ್ಯರ್ಪಣಪೂರ್ವಕಮ್
ಸಪ್ತಾವರಣಪೂಜಾದಿ-ಕ್ರಮಂ ಚಾಥ ನಿರೂಪ್ಯ ವೈ ॥ ೨ ॥
ಧೂಪದೀಪವಿಧಾನಂ ಚ ಕ್ರಮೇಣಾತ್ರ ನಿರೂಪಿತಮ್ ।
ವಾಗ್ರೂಪಯಾ ಸೇವಯೈವ ಪ್ರೀಯೇತಾಂ ಮಧ್ವಮಾಧವೌ ॥ ೩ ॥

ನೈವೇದ್ಯಪ್ರಕರಣ

ಲಕ್ಷ್ಮೀನಾರಾಯಣಂ ನತ್ವಾ ಮಧ್ವಾದೀಂಶ್ಚ ಗುರೂನಪಿ ।
ನೈವೇದ್ಯಪ್ರಕರಣಂ ತು ಪ್ರವಕ್ಷ್ಯಾಮಿ ಸವಿಸ್ತರಮ್ ॥

ನೈವೇದ್ಯಪ್ರಕರಣದ ಮಹತ್ವ

ಯದ್ಯಪಿ ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ "ಪತ್ರಂ ಪುಷ್ಪಂ ಫಲಂ ತೋಯಂ" ಎಂದು 'ಪತ್ರವನ್ನೋ ಪುಷ್ಪವನ್ನೋ ಹಣ್ಣನ್ನೋ ಅದೂ ಸಿಗದಿದ್ದರೆ ನೀರನ್ನೇ ಆದರೂ (೯ ಅ., ೨೬ ಶ್ಲೋ.) ಯಾರು ಸಮರ್ಪಿಸುತ್ತಾರೋ ಅದನ್ನು ನಾನು ಸ್ವೀಕರಿಸುತ್ತೇನೆ' ಎಂದು ಹೇಳಿರುವುದರಿಂದ ಭಗವಂತನಿಗೇನು ಏನಿದ್ದರೇನು ಅದನ್ನೇ ತೆಗೆದುಕೊಳ್ಳುತ್ತಾನೆ ಎಂದು ಹೇಳಿದ್ದರಿಂದ ನೈವೇದ್ಯ ಸಮರ್ಪಿಸುವುದು ಬಹಳ ಸುಲಭ ಎಂದು ಅನೇಕರ ಕಲ್ಪನೆಯಿರಬಹುದು. ಆದರೆ ಒಂದು ನಾಯಿಗೆ ಏನೋ ಅನ್ನ ಹಾಕಿದರೆ ಅದು ಮೂಸದಿರಬಹುದು. ಹೀಗಿರುವಾಗ ಹದಿನಾಲ್ಕು ಲೋಕಗಳಿಗೆ ಒಡೆಯನೂ ಸುಖಪೂರ್ಣನೂ ಆದ ಆ ಭಗವಂತ ಹೇಗಿಟ್ಟರೂ ಆ ನೈವೇದ್ಯವನ್ನು ತೆಗೆದುಕೊಳ್ಳುತ್ತಾನೆಂದು ಕಲ್ಪಿಸಿಕೊಳ್ಳುವುದು ಎಂಥಾ ಮೂರ್ಖತನವಾಗುತ್ತದೆ! ಆ ಸ್ವಾಮಿ 'ಭಕ್ತ್ಯಾ ಪ್ರಯಚ್ಛತಿ' ಎಂದು ಹೇಳಿರುವುದನ್ನು ನಾವು ಗಮನಿಸಬೇಕು. 'ಯಚ್ಛತಿ' ಎಂದು ಹೇಳದೆ

"ಪ್ರ-ಯಚ್ಛತಿ" ಎಂದು ಕೊಡುವುದರಲ್ಲೇ ಮಹತ್ವವನ್ನು (ವಿಶೇಷಾನುಸಂಧಾನವನ್ನು) ಸೂಚಿಸಿದ್ದಾನೆ. ಜೊತೆಗೆ "ಭಕ್ತ್ಯಾ" ಎಂದೂ ಸಹ ಹೇಳಿದ್ದಾನೆ. ಭಕ್ತಿಪೂರ್ವಕವಾಗಿ ಅನುಸಂಧಾನಪೂರ್ವಕವಾಗಿ ಇಟ್ಟರೆ ಮಾತ್ರ (ಭಕ್ತ್ಯುಪಹೃತಂ) ಸ್ವೀಕರಿಸುತ್ತಾನೆಯೇ ಹೊರತು ಇಲ್ಲದಿದ್ದರೆ ಸರ್ವಥಾ ಸ್ವೀಕರಿಸಲಾರ. ಆ ಅನುಸಂಧಾನಕ್ರಮವನ್ನೇ ಶ್ರೀಮತ್ ಟೀಕಾಕೃತ್ಪಾದರು ಪದ್ಮಮಾಲಾದಲ್ಲಿ ಕಿಂಚಿತ್ ತೋರಿಸಿ ಮಾರ್ಗದರ್ಶನ ಮಾಡಿದ್ದಾರೆ. ಅದನ್ನು ಸುಸ್ಪಷ್ಟವಾಗಿ ಮನಸ್ಸಿಗೆ ಹತ್ತುವಂತೆ ವಿವರಿಸುವುದೇ ನಮ್ಮ ಧ್ಯೇಯವಾಗಿದೆ.

ಪದ್ಮಮಾಲಾದಲ್ಲಿ ಹೇಳಿದ ವಿಧಾನ

ನೈವೇದ್ಯವಿಧಾನವನ್ನು ಪದ್ಮಮಾಲಾದಲ್ಲಿ ಹದಿನಾರು ಶ್ಲೋಕಗಳಲ್ಲಿ (97ರಿಂದ 112 ಪೂರ್ತಿ) ಹೇಳಿದ್ದಾರೆ. ಇದಕ್ಕೆ ವಿವರಣೆ ಬರೆಯುತ್ತ ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯರು ಅನೇಕ ಟಿಪ್ಪಣಿಗಳನ್ನೂ ವಿಶೇಷಾಂಶಗಳನ್ನೂ ಕೊಟ್ಟಿರುವುದಲ್ಲದೆ ಪರಿಶಿಷ್ಟದಲ್ಲೂ ಸಹ ಅನೇಕ ವಿಚಾರಗಳನ್ನು ಸಂಗ್ರಹಿಸಿದ್ದಾರೆ. ಇದರಿಂದಲೇ ನೈವೇದ್ಯ-ಸಮರ್ಪಣೆಯ ಮಹತ್ವ ತಿಳಿಯುತ್ತದೆ.

ಪದ್ಮಮಾಲಾದ ಆ ಹದಿನಾರು ಶ್ಲೋಕಗಳನ್ನು ಮನಸ್ಸಿಗೆ ಹತ್ತುವಂತೆ ಈ ರೀತಿಯಾಗಿ ವಿಂಗಡಿಸಿಕೊಂಡು ವಿವರಿಸುವೆವು. i) ಮಂಡಲ ಮಾಡುವುದು, ii) ನೈವೇದ್ಯ ಸ್ಥಾಪನೆ, iii) ಪ್ರೋಕ್ಷಣೆ, iv) ಮುದ್ರೆಗಳು, v) ಪರಿಶೇಚನ, ಅಪೋಶನ, ಪ್ರಾಣಾಹುತಿ, vi) ಸಮರ್ಪಣ ವಿಧಿ, vii) ಅನುಸಂಧಾನ [ಅನ್ನಾದಿ ಕರ್ತೃಗಳು, ರಸಾಭಿಮಾನಿಗಳು, ಅನ್ನಾದ್ಯಭಿಮಾನಿಗಳು, ಯೋಗ್ಯಪದಾರ್ಥಗಳು, ನಿಷಿದ್ಧಪದಾರ್ಥಗಳು, ನೈವೇದ್ಯದಲ್ಲಿ ವಾಸುದೇವಾದಿ ರೂಪಗಳು, ಭಗವಂತನು ಸ್ವೀಕರಿಸುವ ಕ್ರಮ, ತುಲಸೀ-ದಳಾರ್ಪಣ, ಅಭಿಘಾರ), viii) ಉತ್ತರಾಪೋಶನ, ix) ಗಂಡೂಷಾದಿ ಸಮರ್ಪಣ, x) ತಾಂಬೂಲ ಮತ್ತು ದಕ್ಷಿಣೆ.

ದ್ವಾದಶಸ್ತೋತ್ರಪಠನ

'ನೈವೇದ್ಯಸಮರ್ಪಣಕಾಲೇ ದ್ವಾದಶಸ್ತೋತ್ರಂ ಪಠೇತ್' ಎಂದರೆ ನೈವೇದ್ಯ-ಸಮರ್ಪಣಕಾಲದಲ್ಲಿ ದ್ವಾದಶಸ್ತೋತ್ರವನ್ನು ಪಠಿಸುವುದು ಪ್ರಾಚೀನರಿಂದ ಸಂಪ್ರದಾಯಬದ್ಧವಾಗಿ ಬಂದ ರೂಢಿಯಾಗಿದೆ. ದ್ವಾದಶಸ್ತೋತ್ರ ಪಾರಾಯಣದಿಂದ ಅಮೃತವೃಷ್ಟಿ ಮಾಡಿದಂತೆ ಆಗುವುದೆಂದು ಕೆಲವರು ಹೇಳುವುದುಂಟು. [ಆದ್ದರಿಂದ ಪ್ರಕೃತ ಕೆಳಗೆ ದ್ವಾದಶಸ್ತೋತ್ರದ ಪ್ರಥಮಾಧ್ಯಾಯವನ್ನೂ ಅದರ ಭಾವಾರ್ಥವನ್ನೂ ಕೊಡಲಾಗಿದೆ.]

ದ್ವಾದಶಸ್ತೋತ್ರದ ಅರ್ಥವನ್ನು ವಿಶ್ವಪತಿತೀರ್ಥರ ಟೀಕೆಯಿಂದಲೂ ಬೆಳಗಾಂನಲ್ಲಿ ಮುದ್ರಿತವಾದ ಪಾಂಶ್ರೀ ತಾತಾಚಾರ್ಯರ ಟೀಕೆಯಿಂದಲೂ ಉಡುಪಿ ಪಾವಂಜೆ ಗುರುರಾವ್ ಅವರು ಮುದ್ರಿಸಿದ ಕನ್ನಡಾರ್ಥದಿಂದಲೂ ತಿಳಿದುಕೊಳ್ಳಬಹುದು. ಅದರ

ಸದ್ಯಕ್ಕೆ ಅವು ಯಾವುವೂ ಉಪಲಭ್ಯವಿಲ್ಲ. ಹೊಂಬಾಳಿ ಬಂಧುಗಳು, ಗದಗ ಇವರು ಮುದ್ರಿಸಿರುವ ಭಾವಾರ್ಥಸಹಿತವಾದ ಪುಸ್ತಕ ಮಾತ್ರ ಈಗ ಉಪಲಭ್ಯವಿದೆ.

ಅಥ

ದ್ವಾದಶಸ್ತೋತ್ರೇ ಪ್ರಥಮಾಧ್ಯಾಯಃ

ಶ್ರೀ ಗುರುಭ್ಯೋ ನಮಃ । ಹರಿಃ ಓಂ

ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ ।
ಇಂದಿರಾಪತಿಮಾದ್ಯಾದಿ—ವರದೇಶವರಪ್ರದಮ್ ॥ ೧ ॥

(ಕಠಿನ ಶಬ್ದಾರ್ಥ) ವಂದ್ಯಂ-ವಂದಿಸಲು ಎಂದರೆ ಸ್ತುತಿಸಲು ಮತ್ತು ನಮಸ್ಕರಿಸಲು ಅರ್ಹನಾದ, ವಂದನೆ ಮಾಡಬೇಕಾದ, ನಿರಂಜನಂ-ಸರ್ವದೋಷದೂರನಾದ, ಇಂದಿರಾಪತಿಂ-ಲಕ್ಷ್ಮೀಪತಿಯಾದ, ಆದ್ಯ-ಎಲ್ಲರಿಗೂ ಮೊದಲು ಹುಟ್ಟಿದ (ಬ್ರಹ್ಮದೇವರು), ಆದಿ-ಮೊದಲಾದ, ವರದ+ಈಶ-ವರವನ್ನು ಕೊಡುವ (ದೇವತೆಗಳಲ್ಲೇ) ಮುಖ್ಯಸ್ಥರಾದ, ವರಪ್ರದಂ-ಮೋಕ್ಷಾದ್ಯಖಿಳಾಭೀಷ್ಟಗಳನ್ನೂ ಕೊಡುವ.

(ಭಾವಾರ್ಥ) ವಂದನೀಯರಾದ ಸಕಲ ದೇವತೆಗಳೆಲ್ಲರಿಂದಲೂ ವಂದ್ಯನಾದ, ಸದಾ ನಿರ್ದುಷ್ಟನಾದ ಆನಂದಾದಿ ಗುಣಪೂರ್ಣನಾದ, ಸರ್ವದೋಷದೂರನಾದ, ಎಲ್ಲರಿಗೂ ವರ ಕೊಡತಕ್ಕ ದೇವತೆಗಳಲ್ಲೆಲ್ಲಾ ಶ್ರೇಷ್ಠರಾದ ಬ್ರಹ್ಮರುದ್ರಾದಿಗಳಿಗೇ ಮೋಕ್ಷಾದ್ಯಖಿಳ ಪುರುಷಾರ್ಥಗಳನ್ನು ಕೊಡುವ ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು (ವಾಸುದೇವನನ್ನು) ವಂದಿಸುತ್ತೇನೆ ಎಂದರೆ ಪ್ರಾರ್ಥಿಸಿ (ಸ್ತುತಿಸಿ) ನಮಸ್ಕರಿಸುತ್ತೇನೆ.

ಈಗ ನಖಶಿಖಾಂತ ವರ್ಣನೆ ಮಾಡಲು ಆರಂಭಿಸಿ ಮೊದಲು ಪಾದಗಳ ವರ್ಣನೆ ಮಾಡುತ್ತಾರೆ—

ನಮಾಮಿ ನಿಖಿಲಾಧೀಶ ಕಿರೀಟಾಘೃಷ್ಟಪೀಠವತ್ ।
ಹೃತ್ತಮಃಶಮನೇಽರ್ಕಾಭಂ ಶ್ರೀಪತೇಃ ಪಾದಪಂಕಜಮ್ ॥೨॥

(ಕಠಿನ ಶಬ್ದಾರ್ಥ) ನಿಖಿಲ-ಸಮಸ್ತ, ಅಧೀಶ-ದೇವಶ್ರೇಷ್ಠರ, ಅಘೃಷ್ಟ-ತಗಲುವುದರಿಂದ, ತಾಕುವ ಅಥವಾ ಸ್ಪರ್ಶ ಮಾಡುವ, ಪೀಠ-ಕಾಲಿನ ಮೇಲ್ಭಾಗ (ಮುಂಗಾಲು), ಪೀಠವತ್-ಮುಂಗಾಲುಳ್ಳ, ಹೃತ್-ಹೃದಯದ, ತಮಃ-ಕತ್ತಲೆಯನ್ನು, ಶಮನೇ-ನಿವಾರಿಸುವುದರಲ್ಲಿ, ಪರಿಹರಿಸುವುದರಲ್ಲಿ, ಅರ್ಕ-ಸೂರ್ಯ, ಆಭಂ-ಸದೃಶನಾದ, ಸಮಾನನಾದ, ಪಂಕಜ-ಕಮಲ, ಪದ್ಮ.

(ಭಾವಾರ್ಥ) ಬ್ರಹ್ಮರುದ್ರೇಂದ್ರಾದಿ ಸಕಲ ದೇವಾಧಿದೇವತೆಗಳ ಕಿರೀಟಗಳೂ ಸ್ಪರ್ಶಮಾಡುವ ಮುಂಗಾಲುಳ್ಳ ಮತ್ತು ಹೃದಯಾಂಧಕಾರವನ್ನು ನಿರ್ಮೂಲ ಮಾಡುವುದರಲ್ಲಿ ಸೂರ್ಯನಿಗೆ ಸದೃಶನಾದ ಶ್ರೀಲಕ್ಷ್ಮೀಪತಿಯ ಪಾದಪದ್ಮಗಳನ್ನು ನಮಸ್ಕರಿಸುತ್ತೇನೆ.

ಜಾಂಬೂನದಾಂಬರಾಧಾರಂ ನಿತಂಬಂ ಚಿಂತ್ಯಮೀಶಿತುಃ ।
ಸ್ವರ್ಣಮಂಜೀರಸಂವೀತ—ಮಾರೂಢಂ ಜಗದಂಬಯಾ ॥ ೩ ॥

(ಕಠಿನ ಶಬ್ದಾರ್ಥ) ಜಾಂಬೂನದ-ಬಂಗಾರ, ಅಂಬರ–ಬಟ್ಟೆ, ವಸ್ತ್ರ, ಜಾಂಬೂನದಾಂಬರ-ಜರತಾರಿ ಅಂಚುಳ್ಳ ಪೀತಾಂಬರ, ಆಧಾರಂ-ಆಧಾರಭೂತವಾದ ಎಂದರೆ ಉಟ್ಟಿರುವ, ಧರಿಸಿರುವ, ನಿತಂಬ-ಸೊಂಟ, ಕಟಿಪ್ರದೇಶ, ಚಿಂತ್ಯಂ-ಚಿಂತಿಸತಕ್ಕದ್ದು, ಧ್ಯಾನಮಾಡಬೇಕಾದ್ದು, ಈಶಿತುಃ (ಋಕಾರಾಂತವಾದ ಈಶಿತೃ ಶಬ್ದದ ಷಷ್ಠೀ ಏಕವಚನ)-ಸರ್ವಸ್ವಾಮಿಯ, ಜಗದೀಶನ, ಸ್ವರ್ಣ–ಬಂಗಾರದ, ಮಂಜೀರ–ಒಡ್ಯಾಣ ಅಥವಾ ಉಡಿದಾರ, ಅಥವಾ ಸೊಂಟದ ಪಟ್ಟಿ (ವಸ್ತುತಃ 'ಮಂಜೀರಃ' ಎಂದರೆ ಕಾಲ್ಕಡಗ, ಆದರೆ ಆ ಅರ್ಥ ಇಲ್ಲಿ ಹೊಂದುವುದಿಲ್ಲವಾದ್ದರಿಂದ ಉಪಲಕ್ಷಣಯಾ ಸೊಂಟಪಟ್ಟಿ ಅಥವಾ ಉಡಿದಾರ ಎಂದಿಟ್ಟುಕೊಳ್ಳಬೇಕು.) ಸಂವೀತಂ–ಸುತ್ತಲ್ಪಟ್ಟ, ಆರೂಢಂ-ಕುಳಿತಿರುವ, ಜಗದಂಬಯಾ–ಜಗನ್ಮಾತೆಯಾದ ಲಕ್ಷ್ಮೀದೇವಿಯಿಂದ.

(ಭಾವಾರ್ಥ) ಜರೀ ಅಂಚಿನ ಪೀತಾಂಬರವನ್ನು ಧರಿಸಿರುವ ಮತ್ತು ಕನಕದ ಸೊಂಟಪಟ್ಟಿಯನ್ನು (ಅಥವಾ ಉಡಿದಾರವನ್ನು) ಧರಿಸಿರುವ, ಲಕ್ಷ್ಮೀದೇವಿಯನ್ನು ಧರಿಸಿರುವ ಭಗವಂತನ ಸೊಂಟವನ್ನು ಧ್ಯಾನಿಸಬೇಕು.

ಉದರಂ ಚಿಂತ್ಯಮೀಶಸ್ಯ ತನುತ್ವೇಽಪ್ಯಖಿಲಂಭರಮ್ ।
ವಲಿತ್ರಯಾಂಕಿತಂ ನಿತ್ಯ— ಮುಪಗೂಢಂ ಶ್ರಿಯೈಕಯಾ ॥ ೪ ॥

(ಶಬ್ದಾರ್ಥ) ಚಿಂತ್ಯಂ-ಧ್ಯಾನ ಮಾಡತಕ್ಕದ್ದು, ಈಶಸ್ಯ–ಸ್ವಾಮಿಯ, ತನುತ್ವೇ ಅಪಿ-(ನೋಡುವುದಕ್ಕೆ) ತೆಳ್ಳಗಿದ್ದರೂ (ಚಿಕ್ಕದಾಗಿದ್ದರೂ), ಅಖಿಲಂಭರಂ–ಸಕಲ ಲೋಕಗಳನ್ನೂ ಧರಿಸಿದ, ವಲಿ ತ್ರಯ-ಹೊಟ್ಟೆಯ ಮೇಲಿರುವ (ಸಲ್ಲಕ್ಷಣೋಪೇತವಾದ) ಮೂರು ರೇಖೆಗಳು, ಅಂಕಿತಂ–ಗುರುತಿರುವ, ಉಪಗೂಢಂ–ಆಲಿಂಗಿತವಾದ, ಶ್ರಿಯಾ ಏಕಯಾ-ಲಕ್ಷ್ಮೀದೇವಿಯೊಬ್ಬಳಿಂದಲೇ.

(ಭಾವಾರ್ಥ). ಭಗವಂತನ ಉದರವು ಪುಟ್ಟದಾಗಿದ್ದರೂ ಸಕಲ ಲೋಕಗಳನ್ನು ಧರಿಸಿದೆಯೆಂದೂ, ಅದರಲ್ಲಿ ಮೂರು ರೇಖೆಗಳು ಅಡ್ಡಡ್ಡಾಗಿ ಹಾದುಹೋಗಿವೆಯೆಂದೂ, ಅದನ್ನು ಲಕ್ಷ್ಮೀದೇವಿ ನಿರಂತರವಾಗಿ ಆಲಿಂಗನ ಮಾಡಿಕೊಂಡಿದ್ದಾಳೆಂದೂ ಧ್ಯಾನ

ಮಾಡಬೇಕು. (ಹೊಟ್ಟೆಯು ತೆಳ್ಳಗಿರಬೇಕಲ್ಲದೆ ಅದರಲ್ಲಿ ಮೂರು ಅಡ್ಡರೇಖೆಗಳಿರಬೇಕು. ಇದು ಮಹಾಪುರುಷರ ಲಕ್ಷಣ.)

ಸ್ಮರಣೀಯಮುರೋ ವಿಷ್ಣೋ—ರಿಂದಿರಾವಾಸಮುತ್ತಮಮ್ ।
(ಪಾಠಾಂ) ವಾಸಮೀಶಿತುಃ ।
ಅನಂತಮಂತವದಿವ ಭುಜಯೋರಂತರಂ ಗತಮ್ ॥ ೫ ॥

(ಶಬ್ದಾರ್ಥ) ಸ್ಮರಣೀಯಂ-ಧ್ಯಾನಿಸಬೇಕು. ಉರಃ-ಎದೆ, ವಕ್ಷಃಸ್ಥಳ. ಇಂದಿರಾ-ವಾಸಂ-ಶ್ರೀವತ್ಸವೆಂಬ ಲಾಂಛನವುಳ್ಳ, ಶ್ರೀವತ್ಸಲಾಂಛನೋಪೇತವಾದ. ಅಂತವತ್ ಇವ-ಅಳತೆಗೆ ಒಳಪಟ್ಟ ರೀತಿಯಲ್ಲಿ. ಅಂತರಂ ಗತಂ-ಮಧ್ಯೆ ಸಿಕ್ಕಿಕೊಂಡಿರುವ, ಮಧ್ಯವರ್ತಿಯಾದ, ಮಧ್ಯದಲ್ಲಿರುವ.

(ಭಾವಾರ್ಥ) ಆ ವಿಷ್ಣುವಿನ ವಕ್ಷಃಸ್ಥಳವು ಶ್ರೀವತ್ಸವೆಂಬ ಲಾಂಛನದಿಂದ ಕೂಡಿದೆಯೆಂದೂ, ಸ್ವಭಾವತಃ ಅಳತೆಯಿಲ್ಲದೆ ಅನಂತವಾಗಿದ್ದರೂ (ವಿಶೇಷವೆಂಬ ಪ್ರಭಾವಶಕ್ತಿಯಿಂದ) ಎರಡು ತೋಳುಮಧ್ಯೆ ಮಾತ್ರವೇ ಇರುವಂತೆ ಕಾಣಿಸಿದರೂ (ವಸ್ತುತಃ) ಅಪಾರವೂ ಅನಂತವೂ ಆಗಿದೆಯೆಂದು ಧ್ಯಾನ ಮಾಡಬೇಕು.

ಶಂಖಚಕ್ರಗದಾಪದ್ಮ—ಧರಾಶ್ಚಿಂತ್ಯಾ ಹರೇರ್ಭುಜಾಃ ।
ಪೀನವೃತ್ತಾ ಜಗದ್ರಕ್ಷಾ—ಕೇವಲೋದ್ಯೋಗಿನೋಽನಿಶಮ್ ॥ ೬ ॥

(ಶಬ್ದಾರ್ಥ) ಪೀನ-ದಪ್ಪ, ವೃತ್ತಾಃ-ದುಂಡಗೆ, ಗುಂಡಾಗಿ, ಉದ್ಯೋಗಿನಃ-ಉದ್ಯೋಗವುಳ್ಳ, ನಿರತವಾದ, ಅನಿಶಂ-ನಿರಂತರವಾಗಿ.

(ಭಾವಾರ್ಥ) ಭಗವಂತ ತನ್ನ ನಾಲ್ಕು ತೋಳುಗಳಲ್ಲಿ ಶಂಖಚಕ್ರಗದಾಪದ್ಮಗಳನ್ನು ಧರಿಸಿದ್ದಾನೆಂತಲೂ, ಆ ನಾಲ್ಕು ತೋಳುಗಳೂ ದಪ್ಪಗೆ ದುಂಡಗೆ ಇವೆಯೆಂದೂ ಚಿಂತನೆ ಮಾಡಬೇಕು. ಆ ತೋಳುಗಳು ನಿರಂತರವಾಗಿ ಸಕಲ ಲೋಕಗಳ ಸಂರಕ್ಷಣೆಯಲ್ಲೇ ನಿರತವಾಗಿವೆಯೆಂದೂ ಧ್ಯಾನ ಮಾಡಬೇಕು.

ಸಂತತಂ ಚಿಂತಯೇತ್ ಕಂಠಂ ಭಾಸ್ವತ್ ಕೌಸ್ತುಭಭಾಸಕಮ್ ।
ವೈಕುಂಠಸ್ಯಾಖಿಲಾ ವೇದಾ ಉದ್ಗೀರ್ಯಂತೇಽನಿಶಂ ಯತಃ ॥

(ಶಬ್ದಾರ್ಥ) ಸಂತತಂ-ಸದಾ, ಯಾವಾಗಲೂ, ಭಾಸ್ವತ್-ಪ್ರಕಾಶಿಸುತ್ತಿರುವ, ಕೌಸ್ತುಭ-ವಿಷ್ಣುವಿನ ಕಂಠದಲ್ಲಿರುವ (ಕ್ಷೀರಸಮುದ್ರದಲ್ಲಿ ಹುಟ್ಟಿದ) ದಿವ್ಯವಾದ ಒಂದು ಮಣಿ. ಭಾಸಕಂ-ಪ್ರಕಾಶಿಸುತ್ತಿರುವ, ವೈಕುಂಠಸ್ಯ-ನಾರಾಯಣನ, ಉದ್ಗೀರ್ಯಂತೇ-ಉಚ್ಚರಿಸಲ್ಪಡುತ್ತವೆ (ಹೊರಗೆ ಬರುತ್ತವೆ, ಹೊರಬೀಳುತ್ತವೆ). ಅನಿಶಂ-ನಿರಂತರವಾಗಿ, (ಶ್ಲೋ. ೬-೭). ಯತಃ-ಯಾವುದರಿಂದ.

(ಭಾವಾರ್ಥ) ಭಗವಂತ ನಾರಾಯಣನ ಕಂಠವು ಸದಾ ಪ್ರಜ್ವಲಿಸುತ್ತಿರುವ ಕೌಸ್ತುಭಮಣಿಯಂತೆ ಥಳಥಳ ಹೊಳೆಯುತ್ತಿರುವುದೆಂದೂ ಆ ಕಂಠದಿಂದಲೇ ನಿರಂತರವಾಗಿ ನಾಲ್ಕು ವೇದಗಳೇ ಮೊದಲಾದ ಸಕಲ ವಿದ್ಯೆಗಳೂ ಹೊರಬರುತ್ತಿರುತ್ತವೆಯೆಂದೂ ಧ್ಯಾನ ಮಾಡಬೇಕು.

ಸ್ಮರೇತ ಯಾಮಿನೀನಾಥ—ಸಹಸ್ರಾಮಿತಕಾಂತಿಮತ್ ।
ಭವತಾಪಾಪನೋದೀಡ್ಯಂ ಶ್ರೀಪತೇರ್ಮುಖಪಂಕಜಮ್ ॥ ೮ ।

(ಕಠಿನ ಶಬ್ದ) ಸ್ಮರೇತ-(ನೀವು) ಸ್ಮರಿಸಬೇಕು. ಯಾಮಿನೀ-ರಾತ್ರಿ. ಯಾಮಿನೀ-ನಾಥ-ರಾತ್ರಿಗೆ ಒಡೆಯನಾದ ಚಂದ್ರ. ಅಮಿತ-ಮಿತಿಯಿಲ್ಲದ, ಅಸಂಖ್ಯ, ಕಾಂತಿಮತ್-(ಮತುಪ್ ಪ್ರತ್ಯಯ)-ಕಾಂತಿಯುಳ್ಳ, ಭವ-ಸಂಸಾರ, ತಾಪ-ದುಃಖ, ಸಂತಾಪ. ಅಪನೋದಿ-(ಧಾತು ನುದ್-ಓಡಿಸು) ಪರಿಹರಿಸುವ, ಈಡ್ಯಂ (ಧಾತು ಈಡ್-ಸ್ತುತಿಸು)-ಸ್ತುತ್ಯವಾದ, ಸ್ತೋತ್ರಾರ್ಹವಾದ, ಪಂಕಜ-ಕಮಲ.

(ಭಾವಾರ್ಥ) ಅಸಂಖ್ಯಸಹಸ್ರಸಂಖ್ಯಾಕರಾದ ಚಂದ್ರರಂತೆ ಕಾಂತಿಯುಳ್ಳ ಮತ್ತು ಸಂಸಾರತಾಪತ್ರಯಗಳನ್ನು ಪರಿಹರಿಸುವಂಥಾ ಸ್ತೋತ್ರಾರ್ಹವಾದ ರಮಾಪತಿಯ ಮುಖಕಮಲವನ್ನು (ಹೃದಯದಲ್ಲಿ) ಸ್ಮರಿಸಬೇಕು (ಸ್ಮರಿಸತಕ್ಕದ್ದು).

ಪೂರ್ಣಾನಂದಸುಖೋದ್ಭಾಸಿ ಮಂದಸ್ಮಿತಮಧೀಶಿತುಃ ।
ಗೋವಿಂದಸ್ಯ ಸದಾ ಚಿಂತ್ಯಂ ನಿತ್ಯಾನಂದಪದಪ್ರದಮ್ ॥ ೯ ॥

(ಕಠಿನ ಶಬ್ದಾರ್ಥ) ಉದ್ಭಾಸಿ-ಮೆರೆಯುವ, ಪ್ರಕಾಶಿಸುವ, ಮಂದಸ್ಮಿತಂ-ಮಂದಹಾಸವು, ಮುಗುಳ್ನಗೆಯು, ಅಧೀಶಿತುಃ-(ಅಧಿ+ಈಶಿತುಃ, ಶ್ಲೋಕ ೩, ೫)-ದೇವೋತ್ತಮನಾದ, ಪದ-ಪದವಿಯನ್ನು, ಸ್ಥಾನವನ್ನು, ಪ್ರದಂ-(ದಾ ಧಾತು-ಕೊಡು)-ಕೊಡುವಂಥಾ.

(ಭಾವಾರ್ಥ) ದೇವದೇವೋತ್ತಮನಾದ ಗೋವಿಂದನ ಮಂದಹಾಸವು ಪರಿಪೂರ್ಣವಾದ (ಅನಂತವಾದ) ಆನಂದವನ್ನೂ ಸುಖವನ್ನೂ ಬೀರುತ್ತಿರುತ್ತದೆ. ಅದರ ಸ್ಮರಣೆ ಮಾಡುವುದರಿಂದಲೇ ಶಾಶ್ವತವಾದ ಸ್ವರೂಪಾನಂದಾವಿರ್ಭಾವವನ್ನು ಪಡೆಯುವ ಮುಕ್ತಿ-ಸ್ಥಾನವು ಲಭಿಸುತ್ತದೆ. ಆದಕಾರಣ ಆ ಸ್ವಾಮಿಯ ಮಂದಹಾಸವನ್ನು ನಿತ್ಯವೂ ಧ್ಯಾನಿಸಬೇಕು.

ಸ್ಮರಾಮಿ ಭವಸಂತಾಪ—ಹಾನಿದಾಮೃತಸಾಗರಮ್ ।
ಪೂರ್ಣಾನಂದಸ್ಯ ರಾಮಸ್ಯ ಸಾನುರಾಗಾವಲೋಕನಮ್ ॥೧೦॥

(ಶಬ್ದಾರ್ಥ) ಭವ-ಸಂತಾಪ-ಸಂಸಾರತಾಪತ್ರಯವನ್ನು, ಹಾನಿದ-ಧ್ವಂಸ ಮಾಡುವ, ನಾಶಮಾಡುವಂಥಾ, ಸ+ಅನುರಾಗ-ಕರುಣಾಮಯವಾದ, ಅನುಕಂಪವನ್ನು ಸೂಸುವ, ಅವಲೋಕನಂ-ದೃಷ್ಟಿಯನ್ನು, ನೋಟವನ್ನು.

(ಭಾವಾರ್ಥ) ಪೂರ್ಣಾನಂದಮಯವಾದ ಶ್ರೀರಾಮಚಂದ್ರನ ನೋಟವು (ದೃಷ್ಟಿ) ಭಕ್ತರ ಮೇಲಿರುವ ಅನುಕಂಪವನ್ನು ಸುರಿಸುವಂತಿರುತ್ತದೆ. ಅದರ ಧ್ಯಾನದಿಂದ ಸಮಸ್ತ ವಿಧವಾದ ಸಂಸಾರತಾಪತ್ರಯವೂ ಇಂಗಿಹೋಗುತ್ತದೆ. ಅಂಥಾ ದಯೆಯೆಂಬ ಅಮೃತದ ಸಾಗರದಂತಿರುವ ಭಗವಂತನ ಕೃಪಾವಲೋಕನವನ್ನು (ಕರುಣಾಪೂರ್ಣ ದೃಷ್ಟಿಯನ್ನು) ನಾನು ಧ್ಯಾನ ಮಾಡುತ್ತೇನೆ. (ಪೂರ್ಣಾನಂದಸ್ವರೂಪಿಯಾದ ಶ್ರೀರಾಮದೇವರು ನಮ್ಮನ್ನು ಕೃಪಾದೃಷ್ಟಿಯಿಂದ ನೋಡುತ್ತಿದ್ದಾನೆಂದು ಧ್ಯಾನ ಮಾಡುವುದರಿಂದಲೇ ಸಕಲ ಸಂಸಾರ-ತಾಪತ್ರಯಗಳೂ ಇಂಗಿಹೋಗುತ್ತವೆಯೆಂದು ಭಾವ.)

ಧ್ಯಾಯೇದಜಸ್ರಮೀಶಸ್ಯ ಪದ್ಮಜಾದಿಪ್ರತೀಕ್ಷಿತಮ್ ।
ಭ್ರೂಭಂಗಂ ಪಾರಮೇಷ್ಠ್ಯಾದಿ—ಪದದಾಯಿ ವಿಮುಕ್ತಿದಮ್ ॥

(ಕಠಿನ ಶಬ್ದಾರ್ಥ) ಧ್ಯಾಯೇತ್-ಧ್ಯಾನ ಮಾಡಬೇಕು. ಅಜಸ್ರಂ-ನಿರಂತರವಾಗಿ, ಸದಾ, ಪದ್ಮಜ-ಆದಿ-ಬ್ರಹ್ಮದೇವರೇ ಮೊದಲಾದ (ದೇವತೆಗಳಿಂದ), ಪ್ರತಿ-ಈಕ್ಷಿತಂ-ಧ್ಯಾನಿಸಲ್ಪಡುವ, ಭ್ರೂ-ಹುಬ್ಬು, ಭ್ರೂಭಂಗಂ-ಹುಬ್ಬು ಹಾರಿಸುವುದನ್ನು, ಪಾರ-ಮೇಷ್ಠ್ಯ+ಆದಿ-ಬ್ರಹ್ಮಪದವಿಯೇ ಮೊದಲಾದ, ಪದದಾಯಿ-ಪದವಿಗಳನ್ನು ಕೊಡುವ.

(ಭಾವಾರ್ಥ) ಪರಮಾತ್ಮ ಹುಬ್ಬು ಅಡಿಸಿದರೆ ಸಾಕು—ಬ್ರಹ್ಮಪದವೀ, ರುದ್ರ-ಪದವೀ, ಇಂದ್ರಪದವಿಯೇ ಮುಂತಾದ ಸ್ಥಾನಗಳು ಅದಕ್ಕೆ ಯೋಗ್ಯರಾದ ದೇವತೆಗಳಿಗೆ ದೊರಕುತ್ತವೆ. ಸಕಲರಿಗೂ ಮೋಕ್ಷಕ್ಕೂ ಆ ಭ್ರೂಭಂಗವೇ ಕಾರಣವಾಗಿದೆ. ಆದಕಾರಣ ಬ್ರಹ್ಮೇಂದ್ರಾದಿ ಸಕಲ ದೇವತೆಗಳೂ ಭಗವಂತನ ಭ್ರೂವಿಲಾಸವನ್ನು ಧ್ಯಾನಿಸುತ್ತಿರುತ್ತಾರೆ. ಅಂಥಾ ಭ್ರೂವಿಲಾಸವನ್ನು ನಾನೂ ಧ್ಯಾನಮಾಡುತ್ತೇನೆ.

ಸಂತತಂ ಚಿಂತಯೇಽನಂತ—ಮಂತಕಾಲೇ ವಿಶೇಷತಃ ।
ನೈವೋದಾಪುರ್ ಗೃಣಂತೋಽಂತಂ ಯದ್ಗುಣಾನಾಮಜಾದಯಃ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ದ್ವಾದಶಸ್ತೋತ್ರೇ ಪ್ರಥಮೋಽಧ್ಯಾಯಃ

(ಶಬ್ದಾರ್ಥ) ಚಿಂತಯೇ-(ನಾನು) ಧ್ಯಾನಿಸುತ್ತೇನೆ. ಅನಂತಂ-ಅಂತವಿಲ್ಲದ ಭಗವಂತನನ್ನು, ಅಚ್ಯುತನನ್ನು, ನೈವ ಉದಾಪುಃ-ಸೇರಲೇ ಇಲ್ಲ, ಸರ್ವಥಾ ಸೇರಲಿಲ್ಲ, ಗೃಣಂತ-ಹೇಳುತ್ತಾ, ಸ್ತುತಿಸುತ್ತಾ (ಧಾತು ಗ ಕ್ರ್ಯಾದಿ, ೯ ಗ. ಪರ.-ಹೇಳು, ಉಸಿರು), ಅಜ-ಆದಯಃ-ಬ್ರಹ್ಮಾದಿ ದೇವತೆಗಳು.

(ಭಾವಾರ್ಥ) ಅನಂತ ಮಹಿಮೋಪೇತನಾದ (ಅನಂತಂ) ಯಾವ ಭಗವಂತನ ಗುಣ (ಮಹಿಮೆ)ಗಳನ್ನು ಬ್ರಹ್ಮಾದಿ ದೇವತೆಗಳು ಎಷ್ಟು ಹೇಳಿದರೂ (ವರ್ಣಿಸಿದರೂ) (ಗೃಣಂತಃ) ಕೊನೆಮುಟ್ಟದೆ ಹೋದರೋ ಅಂಥಾ ಅಪಾರ ಮಹಿಮನಾದ ಅಚ್ಯುತನನ್ನು ನಿರಂತರವಾಗಿ (ಎಡೆಬಿಡದೆ) ಧ್ಯಾನಿಸುತ್ತೇನೆ. ಅಂತಕಾಲದಲ್ಲಂತೂ ವಿಶೇಷವಾಗಿ ಧ್ಯಾನ ಮಾಡುತ್ತೇನೆ. ಏಕೆಂದರೆ ಭಗವದ್ಗೀತೆಯಲ್ಲಿ (೮ ಅ., ೫-೬ ಶ್ಲೋಕ) ಹೇಳಿದಂತೆ ಕೊನೆಯ ಗಳಿಗೆಯಲ್ಲಿ ಭಗವಂತನ ಸ್ಮರಣೆ ಬಂದರೆ ಮೋಕ್ಷವೇ ಪ್ರಾಪ್ತಿಯಾಗುತ್ತದೆ. ಆದಕಾರಣ ವಿಶೇಷವಾಗಿ ಮರಣಕಾಲದಲ್ಲಿ ಸ್ಮರಣೆ ಬರುವುದಕ್ಕಾಗಿ ಜೀವನದ ಉದ್ದಕ್ಕೂ ಅಹೋರಾತ್ರಿಯೂ ನಿರಂತರವಾಗಿ ಆ ಭಗವಂತನನ್ನು ಧ್ಯಾನ ಮಾಡುತ್ತಿರುತ್ತೇನೆಂದು ಭಾವ. ಇಲ್ಲಿಗೆ ದ್ವಾದಶಸ್ತೋತ್ರದ ಪ್ರಥಮಾಧ್ಯಾಯದ ಭಾವಾರ್ಥ ಮುಗಿಯಿತು.

ಕಾಲಾವಕಾಶವಿದ್ದರೆ ಮಿಕ್ಕ ಅಧ್ಯಾಯಗಳನ್ನೂ ಪಠಿಸಬಹುದು. ಮತ್ತು ದ್ವಾದಶ ಸ್ತೋತ್ರ ಹೇಳಿಕೊಳ್ಳುತ್ತಾ ನೈವೇದ್ಯ ಇಡುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು.

i) ಮಂಡಲ ಮಾಡುವುದು —

ನೈವೇದ್ಯ ಇಡಬೇಕಾದ ಸ್ಥಳಶುದ್ಧಿಗಾಗಿ ನೆಲವನ್ನು ಗೋಮಯ (ಸೆಗಣಿ)ದಿಂದ ಸಾರಿಸಿ ಚೌಕನೆಯ ಮಂಡಲ ಮಾಡಿ ರಂಗವಲ್ಲಿಯಿಂದ ನಾಲ್ಕು ಕಡೆಗೂ ಚೌಕಟ್ಟು ಬರೆದು ಮಧ್ಯೆ ಶ್ರೀ ಬೀಜವನ್ನು (ಓಂ ಶ್ರೀಂ ಓಂ ಅಥವಾ ಶ್ರೀಂ ಎಂದು) ಬರೆಯುವುದು ಮೊದಲನೆಯ ಕರ್ತವ್ಯ. ಅನ್ನವೇ ಮೊದಲಾದ ಮುಸುರೆ ಪದಾರ್ಥಗಳಿಗೇ ಬೇರೆ ಮಂಡಲವನ್ನೂ ಹಾಲು ಮೊಸರು ಹಣ್ಣು ಹಂಪಲು ಮುಂತಾದ ಮುಸುರೆಯಲ್ಲದ ಪದಾರ್ಥಗಳನ್ನು ಇಡುವುದಕ್ಕೆ ಮತ್ತೊಂದು ಮಂಡಲವನ್ನೂ ಮಾಡಬೇಕು. ಈ ಮಂಡಲಗಳನ್ನು ದೇವರ ಎದುರಿಗೆ ಮಾಡುವುದು ಉತ್ತಮಪಕ್ಷ. ಈ ವಿಚಾರಗಳನ್ನೇ ಪದ್ಯಮಾಲಾದಲ್ಲಿ ಹೀಗೆ ಹೇಳಿದ್ದಾರೆ—

[ಸಾಜ್ಯಂ ತ್ರಿವರ್ತಿ ಮಂತ್ರೇಣ] ತತೋ ನೈವೇದ್ಯಮರ್ಪಯೇತ್ ।
ದೇವಸ್ಯಾಗ್ರೇ ಭುವಂ ಶೋಧ್ಯ ಶ್ರೀಬೀಜಂ ತತ್ರ ಸಂಲ್ಲಿಖೇತ್ ॥೯೭॥

ಧೂಪವನ್ನು ಮಾಡಿ ಏಕಾರ್ತಿಕ್ಯ ದೀಪಾರತಿ ಮಾಡಿದ ಬಳಿಕ ದೀಪಗಳನ್ನು ಹಚ್ಚಿಟ್ಟು ಭಗವಂತನ ನೈವೇದ್ಯ ಇಡುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ದೇವರ ಮುಂಭಾಗದಲ್ಲಿ ಬಲಗಡೆ ಗೋಮಯದಿಂದ ಸಾರಿಸಿ ಚೌಕನೆಯ ಎರಡು ಮಂಡಲಗಳನ್ನು ಮಾಡಿ ಆ ಎರಡಕ್ಕೂ ಸುತ್ತಲೂ ರಂಗೋಲಿಗಳನ್ನು ಹಾಕಿ ಮಧ್ಯದಲ್ಲಿ ಶ್ರೀ ಬೀಜವನ್ನು ಎಂದರೆ ಶ್ರೀಂ ಎಂದು ಬರೆಯಬೇಕು. (ಸಂಸ್ಕೃತದಲ್ಲಿ ಶ್ರೀ ಎಂಬುದು ಅವಿಭಕ್ತಿಕರೂಪ, ಅದಕ್ಕೆ ಅರ್ಥವಿಲ್ಲ. ಆದ್ದರಿಂದ ಶ್ರೀಃ ಎಂದು ವಿಸರ್ಗಸಹಿತವಾಗಿ

ಬರೆದರೆ ಮಾತ್ರವೇ ಅದು ಲಕ್ಷ್ಮೀವಾಚಕವಾಗುತ್ತದೆ. ಅನುಸ್ವಾರಸಹಿತವಾಗಿ ಶ್ರೀಂ ಎಂದು ಬರೆಯುವುದಂತೂ ಇನ್ನೂ ಶ್ರೇಷ್ಠ)

ಮಂಡಲ ಮಾಡದೆ ನೆಲದ ಮೇಲೆ ನೈವೇದ್ಯವನ್ನು ಇಟ್ಟರೆ ಅದು ಭೂಸ್ಪರ್ಶದಿಂದಲೇ ಅಶುದ್ಧವಾಗುತ್ತದೆ. ಆದ್ದರಿಂದ ಚೌಕನೆಯ ಮಂಡಲ ಮಾಡಿ ಅದರ ಮೇಲೇ ನೈವೇದ್ಯಕ್ಕಿಡುವ ಪದಾರ್ಥಗಳನ್ನು ಇಡಬೇಕು. ಇದೇ ರೀತಿ ನಾವು ಊಟಕ್ಕೆ ಕೂಡುವಾಗಲೂ ಮಂಡಲ ಮಾಡಿಯೇ ಅದರ ಮೇಲೆ ಎಲೆ ಹಾಕಬೇಕು. ಇದೇ ಶಿಷ್ಟಾಚಾರ ಪದ್ಧತಿ. ಅತಿಥಿಗಳಿಗೆ ಎಲೆ ಹಾಕಿದಾಗಲೂ ಹಬ್ಬಹಾಡಿಯ ದಿನಗಳಲ್ಲೂ ಪ್ರತಿಯೊಬ್ಬರ ಎಲೆಯ ಮುಂದೂ ಸಹ ರಂಗವಲ್ಲೀ ಹಾಕುವ ರೂಢಿಯೂ ನಮ್ಮಲ್ಲಿದೆ. ಹೀಗಿರುವಾಗ ಭಗವಂತನಿಗೆ ನೈವೇದ್ಯಕ್ಕೆ ಇಡುವಾಗ ಮಂಡಲ ಮಾಡಿ ರಂಗವಲ್ಲಿಯಿಂದ ಅಲಂಕರಿಸಬೇಕೆಂಬುದು ಏನಾಶ್ಚರ್ಯ.

ಅಕಸ್ಮಾತ್ ರಂಗವಲ್ಲಿ ಇಲ್ಲದಿದ್ದರೆ ಬರಿಯ ಕೈಯಿಂದ ನೀರಿನಿಂದಲಾದರೂ ಸುತ್ತ ನಾಲ್ಕು ಕಡೆಯೂ ಗೆರೆ ಎಳೆದು ಮಧ್ಯದಲ್ಲಿ ಶ್ರೀಂ ಎಂದು ಬರೆಯಬೇಕು.

ii) ನೈವೇದ್ಯಪದಾರ್ಥಗಳ ಸ್ಥಾಪನೆ—

ಪದ್ಯಮಾಲಾದಲ್ಲಿ " ನೈವೇದ್ಯಮುಪರಿ ಸ್ಥಾಪ್ಯ "–'ನೈವೇದ್ಯಪದಾರ್ಥಗಳನ್ನು ಆ ಚೌಕನೆಯ ಮಂಡಲದ ಮೇಲೆ ಇಟ್ಟು' ಎಂದು ಹೇಳಿದ್ದಾರಾಗಲಿ ಅದರ ಕ್ರಮವು ಸಂಪ್ರದಾಯಬದ್ಧವಾಗಿರುವುದರಿಂದ ಅದನ್ನು ವಿವರಿಸಲಿಲ್ಲ. ನಾವು ಊಟಕ್ಕೆ ಕೂಡುವಾಗ ಎಲೆಯ ಮೇಲೆ ಪದಾರ್ಥಗಳನ್ನು ಬಡಿಸುವುದಕ್ಕೆ ಒಂದು ಕ್ರಮವಿದೆಯಲ್ಲವೇ! ಭಗವಂತನ ಮುಂದೆ ನೈವೇದ್ಯಕ್ಕೆ ಇಡುವಾಗಲೂ ಅದೇ ಕ್ರಮದಲ್ಲೇ ಇಡಬೇಕು. ಅಲ್ಲದೆ ಮುಸುರೆ ಪದಾರ್ಥಗಳ ಜೊತೆ ಹಾಲು ಮೊಸರು ಹಣ್ಣು-ಹಂಪಲು ಕುಡಿಯುವ ನೀರು (ಪಾನೀಯ) ಮೊದಲಾದ ಮುಸುರೆಯಿಲ್ಲದ ಪದಾರ್ಥಗಳನ್ನು ಬೆರೆಸಬಾರದು. ಅದಕ್ಕಾಗಿಯೇ ಮೊದಲು ಅನ್ನಾದಿ ಮುಸುರೆಪದಾರ್ಥಗಳನ್ನು ಇಡುವುದಕ್ಕೆ ಒಂದು ಮಂಡಲವನ್ನೂ ಮುಸುರೆಯಿಲ್ಲದ ಪದಾರ್ಥಗಳನ್ನು ಇಡುವುದಕ್ಕಾಗಿ ಇನ್ನೊಂದು ಮಂಡಲವನ್ನೂ ಮಾಡಬೇಕೆಂದು ಹೇಳಿದ್ದು.

"ನೈವೇದ್ಯಪದಾರ್ಥಗಳನ್ನು ಇಡುವ ಕ್ರಮ" — ದೇವರ ಮುಂದೆ ಯಾವ ಪದಾರ್ಥಗಳನ್ನು ಹೇಗೆ (ಯಾವ ಕ್ರಮದಲ್ಲಿ) ಇಡಬೇಕೆಂಬುದನ್ನು ಕೆಳಗಿನ ಶ್ಲೋಕಗಳು ತಿಳಿಸಿಕೊಡುತ್ತವೆ. ಇಲ್ಲಿ ದಿಕ್ಕುಗಳನ್ನು ನಿರ್ಧಾರ ಮಾಡುವಾಗ ದೇವರಿಗೂ ನೈವೇದ್ಯಕ್ಕೂ ಮಧ್ಯೆ ಇರುವ ಭಾಗವೇ 'ಪೂರ್ವ'ದಿಕ್ಕೆಂದು ಭಾವಿಸಿಕೊಂಡು ಅದರಿಂದ ಮಿಕ್ಕ ದಿಕ್ಕುಗಳನ್ನು ನಿರ್ಧರಿಸಬೇಕು.

ಭಕ್ಷಾಣ್ಯಾಗ್ನೇಯಕೋಣೇ ತು ಐಶಾನ್ಯಾಂ ಪಾಯಸಂ ನ್ಯಸೇತ್ ।
ನೈರ್ಋತ್ಯಾಂ ಲೇಹ್ಯಪೇಯಾದಿ ವಾಯವ್ಯಾಮುಪಭೋಜನಮ್ ॥
ಮಧ್ಯೇ ಚರುಂ ಸ್ಥಾಪಯಿತ್ವಾ ಸ್ಥಾಪಯೇದ್ ಘೃತಪಾತ್ರಕಮ್ ।
ಪರಮಾನ್ನಚರೋರ್ಮಧ್ಯೇ ಘೃತಪಾತ್ರಂ ವಿನಿಕ್ಷಿಪೇತ್ ॥

— ವಾದಿರಾಜಕೃತ 'ನೈವೇದ್ಯಪ್ರಕರಣ'ದಿಂದ (ಪ್ರಭಂಜನರ ಪದ್ಯಮಾಲಾ)

(ಅರ್ಥ) ಭಕ್ಷ್ಯಪದಾರ್ಥಗಳನ್ನು ಅಗ್ನೇಯದಿಕ್ಕಿನಲ್ಲೂ ಐಶಾನ್ಯದಲ್ಲಿ ಪಾಯಸವನ್ನೂ ನೈರುತ್ಯದಲ್ಲಿ ಲೇಹ್ಯಪೇಯಾದಿಗಳನ್ನೂ ಎಂದರೆ ಚಟ್ನಿ, ಕೋಸುಂಬರಿ, ಗೊಜ್ಜು, ಮೊದಲಾದುವನ್ನೂ ವಾಯುವ್ಯದಲ್ಲಿ ತೊವ್ವೆಯನ್ನೂ (ಉಪಭೋಜನವನ್ನೂ) ಮಧ್ಯದಲ್ಲಿ ಅನ್ನದ ಪಾತ್ರೆಯನ್ನೂ ಇಡಬೇಕು. ಅನ್ನಕ್ಕೂ ಪಾಯಸಕ್ಕೂ ಮಧ್ಯೆ ತುಪ್ಪದ ಪಾತ್ರೆಯನ್ನು ಇಡಬೇಕು.

ಈ ಪದಾರ್ಥಗಳನ್ನು ಇಡುವಾಗಲೂ ಶಿಷ್ಟರ ಒಂದು ಸಂಪ್ರದಾಯವಿದೆ. ಶ್ರಾದ್ಧದಲ್ಲಿ ಮೊದಲು ಅನ್ನವನ್ನು ಹಾಕಿ ಆಮೇಲೆ ಪಾಯಸ ಬಡಿಸಿ ಭಕ್ಷ್ಯಗಳನ್ನು ಬಡಿಸಿ ಕೊನೆಗೆ ತೊವ್ವೆ ಬಡಿಸುತ್ತಾರೆ. ಆದ್ದರಿಂದ ದೇವರಿಗೆ ನೈವೇದ್ಯಕ್ಕೆ ಇಡುವಾಗ ಮೊದಲು ಲೇಹ್ಯಪೇಯಾದಿಗಳನ್ನು ಇಟ್ಟು ಆಮೇಲೆ ಪಲ್ಯ-ಪಳದ್ಯ ಮೊದಲಾದುವನ್ನು ಇಟ್ಟು ಅನಂತರ ಅಗ್ನೇಯದಲ್ಲಿ ಚಿತ್ರಾನ್ನವನ್ನೂ ಭಕ್ಷ್ಯಪದಾರ್ಥಗಳನ್ನೂ ಇಟ್ಟು ತೊವ್ವೆಯನ್ನೂ ಪಾಯಸವನ್ನೂ ಇಟ್ಟ ಬಳಿಕ ಅನ್ನದ ಪಾತ್ರೆಯನ್ನಿಟ್ಟು ಕೊನೆಯಲ್ಲಿ ತುಪ್ಪದ ಪಾತ್ರೆಯನ್ನು ಅನ್ನ-ಪಾಯಸಗಳ ನಡುವೆ ಇಡಬೇಕು. ಹೀಗೆ ಮುಸುರೆಪದಾರ್ಥಗಳನ್ನು ಇಟ್ಟಿದ್ದಾದನಂತರ ಹಾಲು ಮೊಸರು, ನೀರು (ಪಾನೀಯ) ಹಣ್ಣು-ಹಂಪಲು ಮೊದಲಾದ ಪದಾರ್ಥಗಳನ್ನು ಬೇರೆ ಮಂಡಲದಲ್ಲಿ ಇಡಬೇಕು. ನೈವೇದ್ಯಕ್ಕೆ ಅನ್ನವನ್ನೇ ಇಡುವ ಪ್ರಸಂಗವಿಲ್ಲದಿದ್ದರೆ ತೆಂಗಿನಕಾಯಿ ಬಾಳೆಹಣ್ಣು ಕಲ್ಲುಸಕ್ಕರೆ ಹಾಲು ಮೊಸರು ಮುಂತಾದ ಪದಾರ್ಥಗಳನ್ನೇ ಇಡಬಹುದು. ಅದೂ ಇಲ್ಲದಿದ್ದರೆ 'ಪತ್ರಂ ಪುಷ್ಪಂ ಫಲಂ ತೋಯಂ' (ತೋಯಂ-ನೀರನ್ನು) ಎಂದು ಹೇಳಿದಂತೆ ಒಂದು ಪಾತ್ರೆಯಲ್ಲಿ ನೀರನ್ನು ಇಟ್ಟಾದರೂ ಭಗವಂತನಿಗೆ ನೈವೇದ್ಯವನ್ನಂತೂ ಸಮರ್ಪಣೆ ಮಾಡಲೇಬೇಕು ಅಂಥಾ ಸಂದರ್ಭದಲ್ಲಿಯೇ 'ಭೀಮಸೇನಕೃತ ಮಾನಸಿಕ ಪೂಜಾಪದ್ಧತಿ'ಯಲ್ಲಿ ಹೇಳಿದಂತೆ ಮನಸ್ಸಿನಿಂದಲೇ ಭಕ್ಷ್ಯ-ಭೋಜ್ಯಗಳನ್ನೂ ಅನ್ನ-ಪಾಯಸಾದಿ ಪದಾರ್ಥಗಳನ್ನೂ ತಾಂಬೂಲವನ್ನೂ ನೆನಸಿಕೊಂಡು ಭಗವಂತನಿಗೆ ಸಮರ್ಪಿಸಬೇಕು. ಈ ವಿಚಾರ ಮುಂದೆ "ಸೌವರ್ಣೇ ಸ್ಥಾಲಿವರ್ಯೇ.. " ಎಂಬ ಶ್ಲೋಕಕ್ಕೆ ಅರ್ಥ ಹೇಳುವಾಗ ಬರುವುದು.

ನೈವೇದ್ಯಕ್ಕೆ ಇಡುವ ಪದಾರ್ಥಗಳನ್ನು ದೇವರ ಮುಂದೆ ಹೇಗಿಡಬೇಕೆಂಬುದನ್ನು ಮುಂದಿನ ಚಿತ್ರವು ಸ್ಪಷ್ಟಪಡಿಸುತ್ತದೆ :



ಚಾತುರ್ಮಾಸ್ಯದಲ್ಲಿ ಒಂದೊಂದು ತಿಂಗಳಲ್ಲಿ ಒಂದೊಂದು ಪದಾರ್ಥ ನಿಷಿದ್ಧವಾಗಿರುತ್ತದೆ. ಉದಾಹರಣೆ ಮೊದಲ ತಿಂಗಳಲ್ಲಿ ತೆಂಗಿನಕಾಯಿ, ಬಾಳೆಹಣ್ಣುಗಳೂ ತರಕಾರಿ ಹುಳಿ-ಸಾರು ಎಲ್ಲವೂ ನಿಷಿದ್ಧ. ಆಗ ಈ ಪದಾರ್ಥಗಳನ್ನು ನೈವೇದ್ಯ ಮಾಡಬಾರದು. ಕಲ್ಲುಸಕ್ಕರೆ ತುಪ್ಪ ತಾಂಬೂಲ (ವಿಳ್ಯೇದೆಲೆ-ಅಡಿಕೆ) ಇವು ಮಾತ್ರ ಎಲ್ಲ ಕಾಲದಲ್ಲೂ ಬರುತ್ತದೆ, ಇವಕ್ಕೆ ನಿಷೇಧವೇ ಇಲ್ಲ. ನಿಷಿದ್ಧಪದಾರ್ಥಗಳನ್ನು ಭಗವಂತನಿಗೆ ಸರ್ವಥಾ ಸಮರ್ಪಿಸಬಾರದೆಂದು ಭಗವದ್ಗೀತಾಭಾಷ್ಯದಲ್ಲಿ (ಅಧ್ಯಾಯ ೯, ಶ್ಲೋಕ ೨೬) 'ಪತ್ರಂ ಪುಷ್ಪಂ ಫಲಂ' ಎಂಬುದಕ್ಕೆ ಅರ್ಥ ಹೇಳುವಾಗ "ನತ್ವವಿಹಿತಪತ್ರಾದಿ। ತಸ್ಯಾಪರಾಧತ್ವೋಕ್ತೇರ್ವರಾಹಾದೌ" ಎಂದರೆ ವರಾಹಪುರಾಣಾದಿ ಸ್ಮೃತಿಗಳಲ್ಲಿ ನಿಷಿದ್ಧ-ಪತ್ರ ಪುಷ್ಪ ಫಲಾದಿಗಳನ್ನು ಭಗವಂತನಿಗೆ ಸಮರ್ಪಿಸುವುದೂ ಮಹಾಪರಾಧವಾಗುತ್ತದೆ. ಯೆಂದು ಹೇಳಿರುವುದರಿಂದ ಭಗವಂತನಿಗೆ ನಿಷಿದ್ಧವಾದ ಪತ್ರಪುಷ್ಪಫಲಾದಿಗಳು ಯಾವುದನ್ನೂ ಸಮರ್ಪಿಸಬಾರದೆಂದು ಶ್ರೀಮದಾಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರಾದಕಾರಣ ಹಾಲು ಮೊಸರು ತೆಂಗಿನಕಾಯಿ ಮೊದಲಾದುವು ಸಾಮಾನ್ಯವಾಗಿ ನಿಷೇಧವಿಲ್ಲದಿದ್ದರೂ ಚಾತುರ್ಮಾಸ್ಯದಲ್ಲಿ ಆಯಾ ತಿಂಗಳುಗಳಲ್ಲಿ ಮಾತ್ರವೇ ನಿಷಿದ್ಧವಾದ್ದರಿಂದ ಆ ಕಾಲದಲ್ಲಿ ಮಾತ್ರ ಇಡಬಾರದು.

ಸರ್ವಥಾ ನಿಷಿದ್ಧ ಪದಾರ್ಥಗಳು—

ಈರುಳ್ಳಿ ಬೆಳ್ಳುಳ್ಳಿಗಳೂ, ಬದನೆಕಾಯಿ, ಎಲೆಕೋಸು, ನವಿಲುಕೋಸು, ಬಳ್ಳಿಯಲ್ಲಿ ಬೆಳೆಯುವ ತರಕಾರಿಗಳು—ಉದಾಹರಣೆಗೆ ಅವರೆ, ಚಪ್ಪರದವರೆ, ಸೀಮೆಬದನೆ

ಮೊದಲಾದುವು (ಅದರ ಸಿಹಿಗುಂಬಳವಾಗಲಿ ಬೂದುಗುಂಬಳವಾಗಲಿ ಸೌತೆಕಾಯಾಗಲಿ ನಿಷಿದ್ಧವಲ್ಲ), ಕ್ಯಾರೆಟ್, ಟೊಮೆಟೊ ಮೊದಲಾದುವೆಲ್ಲ ಸರ್ವಥಾ ನಿಷಿದ್ಧ ಪದಾರ್ಥಗಳು. ಇವುಗಳನ್ನು ಯಾವ ಸಂದರ್ಭದಲ್ಲೂ ಭಗವಂತನಿಗೆ ನಿವೇದಿಸಕೂಡದು. ಹಾಗೆಯೇ ಹಾಲಿಗೆ ಒಂದು ಹರಳು ಉಪ್ಪು ಬಿದ್ದರೂ ಅದು ನಿಷಿದ್ಧವಾಗುತ್ತದೆ. ಕೆಲವರು ಶಾವಿಗೆ ಮಾಡುವಾಗ ಹಿಟ್ಟಿಗೆ ಒಂದು ಚಿಟಿಕೆ ಉಪ್ಪು ಬೆರೆಸುತ್ತಾರೆ. ಅಂಥಾ ಶಾವಿಗೆ ಪಾಯಸಕ್ಕೆ ಹಾಲು ಹಾಕುವುದರಿಂದ ಅದೂ (ಶಾವಿಗೆ ಪಾಯಸವಾದರೂ) ನಿಷಿದ್ಧ. ಶಾವಿಗೆಗೆ ಒಂದು ಹರಳು ಉಪ್ಪೂ ಬಿದ್ದಿಲ್ಲವೆಂದು ಖಾತರಿಯಾದರೆ ಮಾತ್ರ ಶಾವಿಗೆ ಪಾಯಸ ನೈವೇದ್ಯಕ್ಕೆ ಇಡಲು ಯೋಗ್ಯವಾಗುತ್ತದೆ. ಇದರಂತೆ ಚಾತುರ್ಮಾಸ್ಯದ ಕಡೇ ತಿಂಗಳಲ್ಲಿ ಮೆಣಸಿನ ನೀರು (ಸಾರು) ಮಾಡಿ ಅದಕ್ಕೆ ಹಾಲು ಹಾಕುವುದುಂಟು. ಆ ಸಾರಿಗೆ ಉಪ್ಪು ಹಾಕಿರುವುದರಿಂದ ಹಾಲು ಹಾಕಿದರೆ ನಿಷಿದ್ಧವಾಗುತ್ತದೆ, ಅದನ್ನು ನೈವೇದ್ಯಕ್ಕೆ ಇಡಬಾರದು. ಹೀಗೆ ಮಾವಿನಹಣ್ಣಿನ ಕಾಲದಲ್ಲಿ ಹಾಲು ಹಾಕಿ ಮಾವಿನಹಣ್ಣಿನ ಸೀಕರಣೆ ಮಾಡಿ ಅದಕ್ಕೂ ಕೆಲವರು ಸ್ವಲ್ಪ ಉಪ್ಪು ಬೆರೆಸುವರು; ಹಾಲಿಗೆ ಉಪ್ಪು ಬೆರೆತದ್ದರಿಂದ ಆ ಸೀಕರಣೆಯೇ ನಿಷಿದ್ಧವಾಗುವುದು. ಇವುಗಳೆಲ್ಲ ಸೂಕ್ಷ್ಮ ವಿಚಾರಗಳಾದುದರಿಂದ ನೈವೇದ್ಯಕ್ಕೆ ಇಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು.

ನಿಷಿದ್ಧಪದಾರ್ಥಗಳ ವಿಚಾರ ಮುಗಿದ ಬಳಿಕ ನೈವೇದ್ಯಕ್ಕೆ ಯೋಗ್ಯವಾದಂತಹ ಪದಾರ್ಥಗಳಾವುವು? ಎಂಬ ವಿಚಾರ ಬರುವುದು ಸಹಜವಾಗಿದೆ. ಆ ವಿಚಾರವೂ ಪಂಚರಾತ್ರಾದಿ ಗ್ರಂಥಗಳಲ್ಲಿ ಹೇಳಿದೆಯೆಂದು ಶ್ರೀ ಪ್ರಭಂಜನರು ತಮ್ಮ 'ಪದ್ಮಮಾಲಾ' ಪುಸ್ತಕದಲ್ಲಿ (ಪುಟ ೬೫, ದ್ವಿತೀಯ ಸಂಸ್ಕರಣ) 'ವಿಶೇಷ ವಿಚಾರ'ಗಳಲ್ಲಿ ಕೊಟ್ಟಿದ್ದಾರೆ.

ನೈವೇದ್ಯಕ್ಕೆ ಯೋಗ್ಯವಾದ ಪದಾರ್ಥಗಳು—

ಪಂಚರಾತ್ರದಲ್ಲಿ ಹೀಗೆ ಹೇಳಿದೆ—

ಪ್ರಥಮಂ ತ್ವೋದನಂ ಪ್ರೋಕ್ತಂ ಲವಣಂ ವ್ಯಂಜನಾದಿಕಮ್ ।
(ತು + ಓದನಂ = ತ್ವೋದನಂ. ಓದನ = ಅನ್ನ, ಅಕ್ಕಿಯ ಅನ್ನ)
ಲೇಹ್ಯಂ ಪೇಯಂ ಚ ಚೋಷ್ಯಂ ಚ ಖಾದ್ಯಂ ಚೈವ ಚತುರ್ವಿಧಮ್ ।೧।।

(ಅರ್ಥ) ಮೊದಲನೆಯದು (ಎಲ್ಲದಕ್ಕೂ ಮೂಲಭೂತವಾದದ್ದು) ಅಕ್ಕಿಯಿಂದ ಮಾಡಿದ ಅನ್ನ. ಉಪ್ಪು ತರಕಾರಿಗಳಿಂದ ಮಾಡಿದ ಪಲ್ಯ ಮೊದಲಾದುವು (ವ್ಯಂಜನಗಳು) ಚಟ್ನಿ, ಉಪ್ಪಿನಕಾಯಿ ಮೊದಲಾದ ಬಾಡಿಸಿಕೊಳ್ಳುವ ಪದಾರ್ಥಗಳು ಲೇಹ್ಯ. ಕುಡಿಯತಕ್ಕ ಸಾರು, ಹುಳಿ, ಖೀರು ಮೊದಲಾದುವು ಪೇಯಗಳು. ಗೊಜ್ಜುಗಳು, ಪಳದ್ಯ, ರಾಯತ, ಮೊದಲಾದುವು ಚೋಷ್ಯಗಳು. ಖಾದ್ಯ ಎಂದರೆ ತಿನ್ನುವ ಪದಾರ್ಥಗಳು— ಚಿತ್ರಾನ್ನ, ಗುಡಾನ್ನ, ಮುದ್ಗಾನ್ನ (ಹುಗ್ಗಿ), ಭಾತುಗಳು ಸಕ್ಕರೆಯ ಪೊಂಗಲು ಮೊದಲಾದುವು.

ಪರಮಾನ್ನಂ ಹರಿದ್ರಾನ್ನಂ ಚಿತ್ರಾನ್ನಂ ಕೇವಲಂ (ಚೋದನಂ) ತಥಾ।
(ಚೋದನಂ = ಚ + ಓದನಂ)
ಗುಡೋದನಂ ಚ ಮುದ್ಗಾನ್ನ—ಮಿತ್ಯನ್ನಂ ಷಡ್ವಿಧಂ ಸ್ಮೃತಮ್ ॥೨॥

(ಅರ್ಥ) ಪರಮಾನ್ನ ಎಂದರೆ ಅಕ್ಕಿ ಹಾಕಿ ಮಾಡಿದ ಪಾಯಸ. (ಸಾಮಾನ್ಯವಾಗಿ ಅಕ್ಕಿ ಕಡಲೇಬೇಳೆ ಹಾಕಿ ಮಾಡುವರು), ಹರಿದ್ರ ಎಂದರೆ ಅರಿಶಿನ, ಆದರಿಂದ ಅರಿಶಿನ ಹಾಕಿ ಮಾಡಿದ ನಿಂಬೇಹಣ್ಣಿನ ಚಿತ್ರಾನ್ನ ಎನ್ನಬಹುದು. ಚಿತ್ರಾನ್ನ ಎಂದರೆ ಹುಣಿಸೇ-ಹಣ್ಣು ಹಾಕಿ ಮಾಡಿದ ಎಳ್ಳುಪುಡಿ ಚಿತ್ರಾನ್ನ (ಪುಳಿಹೋರೆ ಅಥವಾ ಪುಳಿಯೋಗರೆ), ಶುದ್ಧ ಅನ್ನ, ಗುಡೋದನ ಎಂದರೆ ಅಕ್ಕಿ-ಕಡಲೇಬೇಳೆ ಬೆರಸಿ ಹುಗ್ಗಿಯಂತೆ ಮಾಡಿ ಅದಕ್ಕೆ ಬೆಲ್ಲ ಹಾಕಿ ಬೇಯಿಸುತ್ತಾರೆ; ಅದಕ್ಕೆ ಗುಡಾನ್ನ ಅಥವಾ ಗುಡೋದನ ಎಂದು ಹೆಸರು (ಗುಡ–ಬೆಲ್ಲ). ಮುದ್ಗಾನ್ನ ಎಂದರೆ (ಮುದ್ಗ–ಹೆಸರುಕಾಳು) ಹೆಸರುಬೇಳೆ ಅಕ್ಕಿ ಹಾಕಿ ಮಾಡಿದ ಭಕ್ಷ್ಯ—ಉಪ್ಪು ಹಾಕಿದರೆ ಹುಗ್ಗಿ ಎನಿಸುತ್ತದೆ; ಉಪ್ಪು ಹಾಕದೆ ಸಕ್ಕರೆ ಹಾಕಿದರೆ ಸಕ್ಕರೆಪೊಂಗಲು ಎನಿಸುತ್ತದೆ. ಹೀಗೆ ಅನ್ನವು ಆರು ವಿಧವಾಗಿದೆ.

ಸರ್ವಂ ಭಕ್ಷ್ಯಂ ಚ ಭೋಜ್ಯಂ ಚ ರಸೈಃ ಷಡ್ಭಿಃ ಸಮನ್ವಿತಮ್ ।
ಕದಳೀಪನಸಾಮ್ರಾಣಾಂ ಸುಪಕ್ವಾನಿ ಫಲಾನಿ ಚ ॥ ೩ ॥

(ಅರ್ಥ) ಷಡ್ರಸೋಪೇತವಾದ ತಿನ್ನುವ ಪದಾರ್ಥಗಳು ಮತ್ತು ಸಿಹಿಭಕ್ಷ್ಯಗಳು ಲಾಡು; ಜಿಲೇಬಿ ಮೊದಲಾದುವು) ಹಾಗೂ ಖಾರದ ಭಕ್ಷ್ಯಗಳು (ಅಂಬೊಡೆ, ಬುರುಬುರಿ ಅಥವಾ ಬೋಂಡ, ಖಾರದ ಬೂಂದಿ ಮೊದಲಾದುವು). ಕದಳೀ-ಬಾಳೆಹಣ್ಣು, ಪನಸ-ಹಲಸಿನಹಣ್ಣು, ಆಮ್ರ-ಮಾವಿನಹಣ್ಣು ಮೊದಲಾದ ಚೆನ್ನಾಗಿ ಮಾಗಿದಂತಹ ಹಣ್ಣುಗಳು.

ಕಂದಮೂಲವ್ಯಂಜನಾನಿ ಘೃತಮಿಶ್ರಫಲಾನಿ ಚ ।
ಶ್ರೀನಿವಾಸ! ನಮಸ್ತುಭ್ಯಂ ಮಹಾನೈವೇದ್ಯಮುತ್ತಮಮ್ ।
ಗೃಹಾಣ ತ್ವಂ ಮಹಾವಿಷ್ಣೋ ಮಹಾನಂದವಿವರ್ಧನ ॥ ೪ ॥
(ಪಾಠಾಂತರ— ಸಂಗೃಹಾಣ ಸುರಶ್ರೇಷ್ಠ ಶ್ರೀಶಭಕ್ತಾರ್ತಿನಾಶನ ॥)

(ಅರ್ಥ) ಕಂದ-ಸುವರ್ಣಗೆಡ್ಡೆ ಅಥವಾ ಕ್ಯಾವೆಗಡ್ಡೆ ಮೊದಲಾದ ಗಡ್ಡೆಗಳು. ಗೆಣಸು ಮೊದಲಾದ ಮೂಲಗಳು. ವ್ಯಂಜನಾನಿ-ತರಕಾರಿಗಳು (ಶಾಕ ಪತ್ರಾಣಿ) ಸೊಪ್ಪುಗಳು, ತುಪ್ಪ ಬೆರೆಸಿದ ಅಡಿಗೆಗಳು ಮತ್ತು ನಾನಾ ವಿಧವಾದ ಫಲಗಳು ಇವೇ ಮೊದಲಾದ ಪದಾರ್ಥಗಳನ್ನು, ಹೇ ಶ್ರೀನಿವಾಸ (ಲಕ್ಷ್ಮೀಪತೇ) ಮಹಾವಿಷ್ಣುವೇ (ಅಥವಾ ರಮಾಪತಿಯೇ)— ಶ್ರೀಶ, ಭಕ್ತರ ಆರ್ತಿ–ದುಃಖವನ್ನು, ನಾಶನ–ಪರಿಹಾರ

ಮಾಡುವ ಸ್ವಾಮಿಯೇ ನಿನಗೆ ನಮಸ್ಕಾರ, ಈ ನೈವೇದ್ಯಕ್ಕಿಟ್ಟ ಪದಾರ್ಥಗಳನ್ನೆಲ್ಲ ಸ್ವೀಕರಿಸು. (ಭಗವಂತ ಸಕಲ ಪದಾರ್ಥಗಳಲ್ಲೂ ಇರುವ 'ಸ್ವಾಖ್ಯ'ರಸವನ್ನು ಮಾತ್ರ ಸ್ವೀಕರಿಸುತ್ತಾನೆ, ಜಡಪದಾರ್ಥವನ್ನು ಸ್ವೀಕರಿಸುವುದಿಲ್ಲ ಎಂಬ ಭಾಗವನ್ನು ಸಂಕರ್ಷಣ ಒಡೆಯರು ಹರಿಕಥಾಮೃತಸಾರದ 'ನೈವೇದ್ಯಸಂಧಿ'ಯ ಟೀಕೆಯಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾರೆ.) ಪರಮಾತ್ಮ ಎಲ್ಲಾ ನೈವೇದ್ಯಗಳಲ್ಲಿರುವ ಸ್ವಾಖ್ಯರಸವನ್ನೇ ಸ್ವೀಕರಿಸುತ್ತಾನೆ ಎಂದು ಅನುಸಂಧಾನ ಮಾಡಿಕೊಂಡೇ ನೈವೇದ್ಯಕ್ಕಿಡಬೇಕು.

ಇನ್ನು ವಿಷ್ಣುತೀರ್ಥೀಯವೆಂಬ ಶ್ರೀ ಮಧ್ವಾಚಾರ್ಯರ ತಮ್ಮಂದಿರಾದ ವಿಷ್ಣುತೀರ್ಥ ರಚಿತವಾದ ಗ್ರಂಥದಲ್ಲಿ ಹೀಗೆ ಹೇಳಿದೆ (..., ಪುಟ 109) (ಶ್ರೀ ಪ್ರಭಂಜನರ ಪದ್ಯಮಾಲಾ, ಪುಟ ೭೫)

ನೈವೇದ್ಯಂ ಪಾಯಸಾದ್ಯಂ ಸ್ಯಾ—ನ್ನಾನಾಭಕ್ಷ್ಯಸಮನ್ವಿತಮ್ ।
*ಹವಿಷ್ಯಂ ಘೃತಪಕ್ವಂ ಚ ಫಲಾನಿ ವಿವಿಧಾನಿ ಚ ॥
ಅಭ್ಯುಕ್ಷ್ಯ ಮೂಲಮಂತ್ರೇಣ ತಾನ್ಯಾಲಭ್ಯ ವಸಂ ಜಪೇತ್ (?) ॥

(ಅರ್ಥ) ನೈವೇದ್ಯಕ್ಕೆ ಇಡುವ ಪದಾರ್ಥಗಳೆಂದರೆ ಪಾಯಸವೇ ಮೊದಲಾದ ಅಡಿಗೆ ಪದಾರ್ಥಗಳು ಮತ್ತು ತುಪ್ಪದಲ್ಲಿ ಬೇಯಿಸಿದ ನಾನಾವಿಧ ಭಕ್ಷ್ಯಗಳು.

(ಸಮನ್ವಿತಂ–ಸೇರಿದ್ದು ಅಥವಾ ಒಡಗೂಡಿದ್ದು.) ಅವುಗಳನ್ನೆಲ್ಲಾ ದೇವರ ಮುಂದೆ ತಂದಿಟ್ಟು ಮೂಲಮಂತ್ರದಿಂದ ನೀರನ್ನು ಪ್ರೋಕ್ಷಿಸಿ ಭಗವಂತನಿಗೆ ಸಮರ್ಪಿಸಬೇಕು.

ಯೋಗದೀಪಿಕಾ ಎಂಬ ಗ್ರಂಥದಲ್ಲಿ (೧೦ನೇ ಪ್ರಕರಣದಲ್ಲಿ) ಹೀಗೆ ಹೇಳಿದೆ —

ವನಸ್ಥಾನ್ ಫಲಮೂಲಾದೀನ್ ವಿನಾ ದ್ರವ್ಯಂ ಸುಖಾಗತಾನ್ ।
ಈಷತ್ಪ್ರಯತ್ನತಃ ಸಾಧ್ಯಾನ್ ಯೋ ನಿತ್ಯಂ ಹ್ಯರ್ಪಯೇದ್ ಬುಧಃ । ೬೬ ॥
ತಸ್ಯ ಪ್ರೀತೋ ಜಗನ್ನಾಥೋ ಭವತ್ಯೇವ ನ ಸಂಶಯಃ ।
ಭಕ್ತಾನುಕಂಪೀ ವಿಷ್ಣುರ್ಹಿ ಕಿಮು ವಕ್ತವ್ಯಮೇವ ಹಿ ॥ ೬೭ ॥

(ಈಷತ್–ಸ್ವಲ್ಪ, ಅತ್ಯಲ್ಪ; ಭಕ್ತ + ಅನುಕಂಪೀ–ಭಕ್ತರಲ್ಲಿ ದಯಾಳುವಾದ)

(ಅರ್ಥ) ಕಾಡಿನಲ್ಲಿ ಬೆಳೆದ ಹಣ್ಣುಗಳನ್ನೂ, ಮೂಲಿಕೆಗಳನ್ನೂ, ದುಡ್ಡು ಕೊಟ್ಟು ಕೊಳ್ಳದೇ ಲಭ್ಯವಾದಲ್ಲಿ ಅಥವಾ ಸುಲಭವಾಗಿ (ಸ್ವಲ್ಪ ಪ್ರಯತ್ನದಿಂದಲೇ) ಸಿಗುವ (ದೊರಕುವ) ಹಾಗಿದ್ದ ಪಕ್ಷದಲ್ಲಿ ಯಾರು ಭಗವಂತನಿಗೆ ನಿತ್ಯವೂ ಸಮರ್ಪಿಸುತ್ತಾರೋ

* ಕವ್ಯಂ- ಶ್ರಾದ್ಧದಲ್ಲಿ ಮಾಡುವ ಅಡಿಗೆಗೆ ಕವ್ಯ ಎಂದೂ, ಶುಭದಲ್ಲಿ ಮಾಡುವ ಅಡಿಗೆಗೆ ಹವ್ಯವೆಂದೂ ರೂಢಿ.

ಅವರಿಗೆ ಪರಮಾತ್ಮ ಪ್ರೀತನಾಗುತ್ತಾನೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಭಕ್ತರಲ್ಲಿ ದಯಾಮಯನಾದ ವಿಷ್ಣುವು ಏನನ್ನು ಕೊಟ್ಟರೂ ತೃಪ್ತನಾಗುತ್ತಾನೆಂದು ಹೇಳತಕ್ಕದ್ದೇನಿದೆ?

(ಇದರ ಒಳಅಭಿಪ್ರಾಯವೇನೆಂದರೆ ನಾವು ನಿತ್ಯ ಊಟಕ್ಕೆ ಮಾಡುವ ಅಡಿಗೆಯ ಪದಾರ್ಥಗಳನ್ನೇ ಇಡಬೇಕು. ಅದರಿಂದಲೇ ಭಗವಂತ ತೃಪ್ತನಾಗುತ್ತಾನೆ, ಇಲ್ಲದಿದ್ದರೆ ಇಲ್ಲವೆನ್ನುವಂತೆಯೂ ಇಲ್ಲ. ಕಾಡಿನಲ್ಲಿ ಬೆಳೆಯುವ ಹಣ್ಣುಗಳನ್ನೂ ಗೆಡ್ಡೆ ಗೆಣಸುಗಳನ್ನೂ ಹಸಿ ಹಸಿಯಾಗಿ ಇಟ್ಟರೂ ಕೂಡ ಆ ಶ್ರೀಹರಿ ತೃಪ್ತನಾಗುತ್ತಾನೆ. ಕಾಡಿನಲ್ಲಿ ಬೆಳೆದ ಪದಾರ್ಥಗಳು ಭಗವಂತನಿಗೆ ಇಷ್ಟವೆಂದು ತಿಳಿದು ಅಂಥಾ ಪದಾರ್ಥಗಳನ್ನೇ ಹುಡುಕಿಕೊಂಡು ಹೋಗುವ ಅವಶ್ಯಕತೆಯೂ ಇಲ್ಲ ಎಂದು ತೋರಿಸುವುದಕ್ಕಾಗಿ 'ದುಡ್ಡು ಕೊಟ್ಟು ಕೊಂಡುಕೊಳ್ಳುವಂಥಾ' ಅಥವಾ 'ಸ್ವಲ್ಪ ಪ್ರಯತ್ನದಿಂದಲೇ ಲಭ್ಯವಾಗುವ' ಎಂಬ ವಿಶೇಷಣಗಳನ್ನು ಸೇರಿಸಿದರು. ಭಗವಂತನಿಗೆ ರುಚಿರುಚಿಯಾದ ಪದಾರ್ಥಗಳನ್ನು ಕಂಡರೆ ಮಾತ್ರ ಇಷ್ಟ—ಮಿಕ್ಕದ್ದನ್ನು ಸ್ವೀಕರಿಸುವುದಿಲ್ಲವೆಂಬ ನಿಯಮವೇನೂ ಇಲ್ಲ. ಆದಕ್ಕೆ ಪ್ರತಿಯಾಗಿ ಏನು ನೈವೇದ್ಯ ಇಡುತ್ತೇವೆಂಬುದು ಮುಖ್ಯವಲ್ಲ. ನಾವು ಎಷ್ಟು ಭಕ್ತಿಯಿಂದ ಇಡುತ್ತೇವೆಂಬುದನ್ನೇ ಭಗವಂತ ಗಮನಿಸುತ್ತಾನೆಂಬುದನ್ನು ಸೂಚಿಸುವುದಕ್ಕಾಗಿ 'ಭಕ್ತಾನುಕಂಪೀ ವಿಷ್ಣುರ್ಹಿ' ಎಂದು ಹೇಳಿದರು. ಇದಕ್ಕೆ ಅತ್ಯುತ್ತಮ ನಿದರ್ಶನ ಮಹಾಭಾರತದಲ್ಲಿ ಸಿಗುತ್ತದೆ. ಶ್ರೀಕೃಷ್ಣಪರಮಾತ್ಮ ಪಾಂಡವರ ಸಂಧಾನಕ್ಕಾಗಿ ಹಸ್ತಿನಾವತಿಗೆ ಹೋಗಿದ್ದಾಗ ದುರ್ಯೋಧನನು ಕೃಷ್ಣನನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಳ್ಳುವ ದುರುದ್ದೇಶದಿಂದ ಅನೇಕ ವಿಧ ಭಕ್ಷ್ಯ ಭೋಜ್ಯಗಳನ್ನೆಲ್ಲಾ ಮಾಡಿಸಿ ಕಾದುಕೊಂಡಿದ್ದ. ಭಗವಂತ ಅಲ್ಲಿ ಹಣಕಿಯೂ ಸಹ ಹಾಕಲಿಲ್ಲ. ಆದೇ ವಿದುರ ಶ್ರೀಕೃಷ್ಣಪರಮಾತ್ಮ ತನ್ನ ಮನೆಗೆ ಅತಿಥಿಯಾಗಿ ಬಂದನಲ್ಲಾ ಎಂಬ ಭಕ್ತಿಭರದಿಂದ ಮೈಯುಬ್ಬಿ ತನ್ನ ಹತ್ತಿರ ಇದ್ದ ಸ್ವಲ್ಪೇಸ್ವಲ್ಪ ಹಾಲನ್ನೇ ಅವನಿಗೆ ಸಮರ್ಪಿಸಿದನು. ಆ ಸ್ವಾಮಿ ಅಷ್ಟು ಹಾಲಿನಿಂದಲೇ ಸಂತೃಪ್ತನಾಗಿ ಬೀದಿಯಲ್ಲೆಲ್ಲಾ ಹಾಲು ಕೋಡಿ ಹರಿಯುವಂತೆ ಮಾಡಿಸಿಬಿಟ್ಟನು. ಇದಕ್ಕೂ ಮೊದಲು ದ್ರೌಪದಾದೇವಿ ರಾತ್ರಿ ಸಮಯದಲ್ಲಿ ಕೊಟ್ಟಂಥಾ ಒಂದು ಕಾಳು ಅನ್ನದಿಂದಲೇ ತೃಪ್ತನಾಗಿ ತೇಗಿಬಿಟ್ಟನು. ಆದರಿಂದ ಎಂಭತ್ತು ಸಾವಿರ ಶಿಷ್ಯರೊಡನೆ ಪಾಂಡವರ ಮಾನಾಪಹರಣ ಮಾಡುವ ದುರುದ್ದೇಶದಿಂದ ಬಂದಿದ್ದ ದುರ್ವಾಸಾದಿಗಳೆಲ್ಲರಿಗೂ ಹೊಟ್ಟೆ ತುಂಬಿಹೋಯಿತು. ರಾಮಾಯಣದಲ್ಲಿ ಶಬರಿ ಕೊಟ್ಟ ಎಂಜಲು ಫಲಗಳಿಂದಲೇ ಶ್ರೀರಾಮದೇವರು ತೃಪ್ತರಾಗಲಿಲ್ಲ. ಇದರಿಂದ ನೈವೇದ್ಯಕ್ಕೆ—ಭಗವಂತ ಪ್ರೀತನಾಗುವುದಕ್ಕೆ ಭಕ್ತಿ ಪ್ರಧಾನವೇ ಹೊರತು 'ಪದಾರ್ಥ ಏನು ಎಂಬುದು ಮುಖ್ಯವಲ್ಲ'ವೆಂದು ಹೇಳಿದಂತಾಯಿತು.

ಹಾಗಾದರೆ ನೈವೇದ್ಯಕ್ಕೆ ಏನು ಇಡಬೇಕೆಂದು ಹೇಳುತ್ತಾರೆ—

ಶರೀರಯಾತ್ರಾಸಿದ್ಧ್ಯರ್ಥ—ಮನ್ನಪಾನಧನಾದಿಕಾನ್ ।
ಸಂಪಾದಯತಿ ಯಾನೇವ ಪೂಜಾರ್ಥಂ ತಾನ್ ಪ್ರಕಲ್ಪಯೇತ್ ॥೭೦

(ಅರ್ಥ) ನಮ್ಮ ಶರೀರಪೋಷಣೆಗಾಗಿ ನಾವು ಪ್ರತಿನಿತ್ಯ ಏನು ಅಡಿಗೆಗಳನ್ನು ಮಾಡುತ್ತೇವೋ ಅದೇ ಅನ್ನ ಮೊದಲಾದ ಪದಾರ್ಥಗಳನ್ನೂ ಹಾಲು ಮೊಸರು (ಸಾರು-ಹುಳಿ) ಮೊದಲಾದ ಕುಡಿಯುವ ಪಾನಗಳನ್ನೂ, ನೈವೇದ್ಯಕ್ಕಿಡಬೇಕೇ ಹೊರತು ಭಗವಂತ ತೃಪ್ತನಾಗಲೆಂದು ಕಾಡಿನಲ್ಲಿ ಬೆಳೆದ ಪದಾರ್ಥಗಳನ್ನು ಅಥವಾ ಹಣ್ಣು-ಹಂಪಲುಗಳನ್ನು ಹುಡುಕಿಕೊಂಡು ಹೋಗಬೇಕಾದ ಅವಶ್ಯಕತೆಯಿಲ್ಲ. ಇದು ನಿತ್ಯ-ನೈವೇದ್ಯದ ಮಾತಾಯಿತು. ಇನ್ನು ವಿಶೇಷ ಹಬ್ಬ ಹಾಡಿಗಳಲ್ಲಿ, ಶ್ರೀಕೃಷ್ಣಜನ್ಮಾಷ್ಟಮೀ ದಿನ, ಶ್ರೀರಾಮನವಮಿಯಲ್ಲಿ, ಧನುರ್ಮಾಸದಲ್ಲಿ—ವಿಶೇಷ ಫಲಾದಿಗಳನ್ನೂ ವಿಶೇಷ ಭಕ್ಷ್ಯಭೋಜ್ಯಗಳನ್ನೂ ಮಾಡಿಸಲೇಬೇಕು. ಅವನ್ನು ಯಥಾಶಕ್ತಿ ಸಂಪಾದಿಸಿ ನೈವೇದ್ಯಕ್ಕೆ ಇಡಬೇಕೆಂದೂ ಭಾವ. ಇನ್ನು 'ಧನಾಧಿಕಂ' ಎಂದು ಹೇಳಿದ್ದರಿಂದ ನಿತ್ಯ ಭಗವಂತನಿಗೆ ಯಥಾಶಕ್ತಿ ದಕ್ಷಿಣ ಸಮರ್ಪಿಸಬೇಕೆಂದೂ ಅದಕ್ಕೆ ನಿಯಮವಿಲ್ಲವೆಂದೂ, ಶ್ರಾದ್ಧಾದಿ ದಿನಗಳಲ್ಲಿ ಹಬ್ಬಹಾಡಿಗಳಲ್ಲಿ ತನ್ನ ಯೋಗ್ಯತಾನುಸಾರ ದಕ್ಷಿಣೆ ಕೊಡಲೇಬೇಕೆಂದೂ ದಾನ ಮಾಡುವುದರಲ್ಲಿ ಯೋಗ್ಯತೆಯಿದ್ದರೂ ಲೋಭ ಮಾಡಬಾರದೆಂದೂ (ವಿತ್ತಶಾಠ್ಯಂ ನ ಕಾರಯೇತ್) ಅರ್ಥವಾಗುತ್ತದೆ.

ಪಂಚರಾತ್ರದಲ್ಲಿ ಭಗವಂತನಿಗೆ ಏನು ಸಮರ್ಪಿಸಬೇಕು? ಹೇಗೆ ಸಮರ್ಪಿಸಬೇಕು ಎಂಬುದನ್ನು ಹೀಗೆ ಹೇಳಿದ್ದಾರೆ (ಅಲ್ಲೇ)—

ಶುದ್ಧೋದಕಂ ಶೀತಲಂ ಚ ಕರ್ಪೂರೇಲಾದಿವಾಸಿತಮ್ ।
ಸಾಂದ್ರಂ ಸುದಧಿ ತಕ್ರಂ ಚ ಸಾಕ್ಷಾದಮೃತಮೇವ ಚ ।
ಮಯಾ ಸಮರ್ಪಿತಂ ದೇವ ಗೃಹಾಣ ರಮಯಾ ಸಹ ॥

ಶಬ್ದಾರ್ಥ— ಶೀತಲಂ–ತಣ್ಣಗಿರುವ, ಕರ್ಪೂರ–ಪಚ್ಚಕರ್ಪೂರ, ಏಲಾ–ಏಲಕ್ಕಿ, ವಾಸಿತಂ–ವಾಸನೆಯುಳ್ಳ, ಸಾಂದ್ರಂ–ಗಟ್ಟಿಯಾದ, ಗರಣೆಗರಣೆಯಾದ, ಸುದಧಿ–ಒಳ್ಳೆಯ ಮೊಸರು (ಹೆಪ್ಪು ಹಾಕಿದ ಮೊಸರು ಎಂದರ್ಥ), ತಕ್ರಂ–ಮಜ್ಜಿಗೆ, ಮಯಾ–ನನ್ನಿಂದ, ಗೃಹಾಣ–ಸ್ವೀಕರಿಸು.

ಭಾವಾರ್ಥ— ಹೇ ಸ್ವಾಮಿ! ನಾನು ನಿನಗಾಗಿ ಪಚ್ಚಕರ್ಪೂರ, ಏಲಕ್ಕಿ ಮೊದಲಾದ ಪದಾರ್ಥಗಳನ್ನು ಹಾಕಿ ಘಮಘಮಿಸುವಂಥಾ ತಣ್ಣನೆಯ ನೀರನ್ನೂ ಗರಣೆಗರಣೆಯಾಗಿರುವ ಉತ್ತಮವಾದ ಹೆಪ್ಪಿನ ಮೊಸರನ್ನೂ, ಮಜ್ಜಿಗೆಯನ್ನೂ ಸಾಕ್ಷಾತ್ ಅಮೃತವನ್ನೂ ಸಮರ್ಪಿಸುತ್ತಿದ್ದೇನೆ. ಹೇ ದೇವ! ನೀನು ಇವೆಲ್ಲವನ್ನೂ ಲಕ್ಷ್ಮೀಸಮೇತನಾಗಿ ಸ್ವೀಕರಿಸುವವನಾಗು—ಎಂದು ಪ್ರಾರ್ಥಿಸಬೇಕೆಂದು ಹೇಳಿದೆ.

ಸೂಚನೆ— ಈಗ ಅನೇಕರ ಮನೆಗಳಲ್ಲಿ ಅಡಿಗೆಗಾಗಿ ಗ್ಯಾಸನ್ನೂ ವಿದ್ಯುತ್ತಿನ ಒಲೆಗಳನ್ನೂ ಸೀಮೆಎಣ್ಣೆಯ ಸ್ಟೋವ್ವುಗಳನ್ನೂ ಬಳಸುವುದು ಬಹಳ ರೂಢಿಗೆ ಬಂದಿದೆ. ಇವುಗಳ ಮೇಲೆ ಮಾಡಿದ ಪದಾರ್ಥಗಳು ನ್ಯಾಯವಾಗಿ ನೈವೇದ್ಯಕ್ಕೆ ಇಡಲು ಅನರ್ಹವಾಗಿವೆ. ಕ್ವಚಿತ್ ಭಗವಂತನಿಗೆ ಸಮರ್ಪಿಸಿದರೂ ರಮಾದಿಗಳಿಗೆ ನೈವೇದ್ಯಕ್ಕೆ ಇಡುವಂತಿಲ್ಲ—ಸರ್ವಥಾ ಇಡಬಾರದು.

ಹೀಗೆ ನೈವೇದ್ಯಕ್ಕೆ ಪದಾರ್ಥಗಳನ್ನು ಇಟ್ಟಮೇಲೆ ಅವುಗಳ ಮೇಲೆಲ್ಲಾ ಅಭಿಘಾರ ಮಾಡಿ (ತುಪ್ಪ ಹಾಕಿ) ಅವನ್ನು ನೀರಿನಿಂದ ಪ್ರೋಕ್ಷಿಸಬೇಕು. ಆದರೆ ತುಪ್ಪದಲ್ಲಿ ಕರಿದ ಪದಾರ್ಥಗಳಿಗೂ (ಉದಾ: ಕರಿಗಡುಬು), ತುಪ್ಪ ಹಾಕಿ ಬೇಯಿಸಿದ ಪದಾರ್ಥಗಳಿಗೂ ಪದಾರ್ಥಗಳಿಗೂ (ಉದಾ: ಸಿರಾ, ಕೇಸರಿ ಭಾತು, ಸಕ್ಕರೆ ಪೊಂಗಲು) ಪುನಃ ಅಭಿಘಾರ ಮಾಡಬೇಕಾಗಿಲ್ಲ. ಎಲ್ಲದರ ಮೇಲೂ ತುಲಸೀದಳವನ್ನು—ಒಂದು ದಳವನ್ನಾದರೂ—ಹಾಕಬೇಕು.

ಪ್ರೋಕ್ಷಣೆಯ ವಿಚಾರ

ಪದ್ಮಮಾಲಾದಲ್ಲಿ ಹೀಗೆ ಹೇಳಿದ್ದಾರೆ—

ನೈವೇದ್ಯಮುಪರಿ ಸ್ಥಾಪ್ಯ ಶುದ್ಧ ತೋಯೇನ ಪ್ರೋಕ್ಷಯೇತ್ ।

'ಮಂಡಲದ ಮೇಲೆ ನೈವೇದ್ಯಪದಾರ್ಥಗಳನ್ನು ಇಟ್ಟು ಶುದ್ಧೋದಕದಿಂದ ಅವನ್ನು ಪ್ರೋಕ್ಷಿಸಬೇಕು.' ಇದನ್ನು ನೋಡಿದರೆ ನೀರನ್ನು ಹಾಗೆಯೇ ಪ್ರೋಕ್ಷಿಸಬೇಕೆಂದು ಕಾಣುತ್ತದೆ. ಆದರೆ ಸಂಪ್ರದಾಯ ಪದ್ಧತಿ ಹೀಗಿಲ್ಲ. ಪ್ರೋಕ್ಷಣೆಗಾಗಿಯೇ ಬೇರೆ ಶುದ್ಧ ಜಲವನ್ನು ಶಂಖಕ್ಕೆ ಹಾಕಿ ಅದನ್ನು (ನೀರನ್ನು) ಎಂಟು ಸರಿ (ಅಥವಾ ಪಕ್ಷಾಂತರ ಹನ್ನೆರಡು ಸರಿ) ಮೂಲಮಂತ್ರ (ಅಷ್ಟಾಕ್ಷರಮಂತ್ರ)ದಿಂದ ಅಭಿಮಂತ್ರಿಸಿ ಆ ನೀರನ್ನು ಕೈಗೆ ಬಗ್ಗಿಸಿಕೊಂಡು ನೈವೇದ್ಯದ ಮೇಲೆ ಪ್ರೋಕ್ಷಿಸಬೇಕು. ಶಂಖದಿಂದಲೇ ನೇರವಾಗಿ ನೈವೇದ್ಯದ ಮೇಲೆ ಪ್ರೋಕ್ಷಿಸಬಾರದು, ಅದು ನಿಷಿದ್ಧ. ಏಕೆಂದರೆ—

ನ ಪಿಬೇಚ್ಛಂಖತೋಯಂ ಚ, ನ ಚ ಭೂಮೌ ವಿನಿಕ್ಷಿಪೇತ್ ।
ನ ಪ್ರೋಕ್ಷಯೇಚ್ಚ ನೈವೇದ್ಯಂ ಭುಂಜಾನಸ್ತ್ವಘವಾನ್ ಭವೇತ್

(ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಸದಾಚಾರಸ್ಮೃತಿಯ ವ್ಯಾಖ್ಯಾನದಿಂದ—ಗುರುಸಾರ್ವಭೌಮ ಪತ್ರಿಕೆಯಲ್ಲಿ

(ಶಬ್ದಾರ್ಥ)— ನ ಪಿಬೇತ್-ಕುಡಿಯಬಾರದು, ತೋಯಂ-ನೀರನ್ನು, ನ ವಿನಿಕ್ಷಿಪೇತ್-ಇಡಬಾರದು, ಭುಂಜಾನಃ ತು-ಊಟ ಮಾಡಿದವನು, ಅಘವಾನ್-ಪಾಪಿಷ್ಠನು.

(ಭಾವಾರ್ಥ) ಶಂಖದ ನೀರನ್ನು ಕುಡಿಯಲೂ ಬಾರದು. (ಉದಾಹರಣೆಗೆ—ಶಂಖಭ್ರಮಣ ಮಾಡಿದ ನೀರನ್ನು ಪ್ರೋಕ್ಷಿಸಿಕೊಳ್ಳುವರೇ ವಿನಾ ಕುಡಿಯುವುದಿಲ್ಲ) ಶಂಖ.

ವನ್ನು ಬರಿಯ ನೆಲದ ಮೇಲೂ ಇಡಬಾರದು. (ಶಂಖದ ಪೀಠದ ಮೇಲೇ ಇಡಬೇಕು.) ಶಂಖದಿಂದಲೇ ನೈವೇದ್ಯವನ್ನು ಪ್ರೋಕ್ಷಿಸಬಾರದು. (ಶಂಖದಲ್ಲಿ ಹಾಕಿರುವ ನೀರನ್ನು ಕೈಗೆ ಬಗ್ಗಿಸಿಕೊಂಡು ಪ್ರೋಕ್ಷಿಸಬೇಕೇ ವಿನಾ ಶಂಖದಿಂದಲೇ ನೈವೇದ್ಯವನ್ನು ಪ್ರೋಕ್ಷಿಸಬಾರದು.) ಹಾಗೆ ನೇರವಾಗಿ ಶಂಖದಿಂದಲೇ ಪ್ರೋಕ್ಷಿಸಿ ನೈವೇದ್ಯ ಮಾಡಿದ ಪದಾರ್ಥವನ್ನು ತಿಂದರೆ ಅಥವಾ ಶಂಖೋದಕವನ್ನು ಕುಡಿದರೆ ಪಾಪಿಷ್ಠನಾಗುವನು.

ಶಂಖತೋಯಂ ಪಿಬೇಚ್ಚಾಜ್ಞಾ—ಚ್ಛಂಖಂ ಕೃತ್ವಾ ತು ಭೂತಲೇ।
ನ ಪ್ರೋಕ್ಷಯೇಚ್ಚ ನೈವೇದ್ಯಂ ಭುಂಜಾನೋಽಪ್ಯಘವಾನ್ ಭವೇತ್।

(ಅದೇ ಆಧಾರದಿಂದ)

(ಶಬ್ದಾರ್ಥ) ಅಜ್ಞಾತ್—ಮೂರ್ಖತನದಿಂದ

(ಅರ್ಥ) ಶಂಖದ ನೀರನ್ನು ಮೂರ್ಖತನದಿಂದಲೂ ಕುಡಿಯಬಾರದು. ಶಂಖವನ್ನು ಮೂರ್ಖತನದಿಂದಲೂ ನೆಲದ ಮೇಲೆ ಇಡಬಾರದು. ಅದೇ ರೀತಿ ಶಂಖದಿಂದಲೇ ತಿಳಿಯದೆ ನೈವೇದ್ಯವನ್ನು ಪ್ರೋಕ್ಷಿಸಬಾರದು. ಹಾಗೆ ಪ್ರೋಕ್ಷಿಸಿದ ನೈವೇದ್ಯವನ್ನು ತಿಂದರೆ ಅವನು ಪಾಪಿಷ್ಠನಾಗುತ್ತಾನೆ.

ಸೂಚನೆ— ಮೇಲಿನ ಎರಡು ಪ್ರಮಾಣಗಳಲ್ಲೂ "ಶಂಖದಿಂದಲೇ" ನೈವೇದ್ಯಕ್ಕೆ ನೇರವಾಗಿ ಪ್ರೋಕ್ಷಣೆ ಮಾಡಬಾರದೆಂದು ಹೇಳಿದೆಯೇ ವಿನಾ 'ಶಂಖದ ನೀರನ್ನೇ ಪ್ರೋಕ್ಷಿಸಬಾರದು' ಎಂದು ಹೇಳಿಲ್ಲ. ಆದ್ದರಿಂದ ಸಂಪ್ರದಾಯದ ರೂಢಿಗೆ—ಶಂಖಕ್ಕೆ ಬೇರೆ ನೀರು ಹಾಕಿ, ಅದನ್ನು ಅಭಿಮಂತ್ರಿಸಿ, ಆ ನೀರನ್ನು ಕೈಗೆ ಬಗ್ಗಿಸಿಕೊಂಡು ಕೈಯಿಂದಲೇ ಪ್ರೋಕ್ಷಿಸಬೇಕೆಂಬ ರೂಢಿಗೆ ವಿರೋಧವಾಗಿಲ್ಲ.

ಶಂಖಕ್ಕೆ ಶುದ್ಧೋದಕ ಹಾಕಿದ ಮೇಲೆ ಅದನ್ನು ಮೂಲಮಂತ್ರದಿಂದ ಎಂಟು ಸಲ ಅಭಿಮಂತ್ರಿಸಬೇಕು; ಪಿ. ಪಿ. ಉಪಾಧ್ಯಾಯರು 'ಹನ್ನೆರಡು ಸಲ' ಅಭಿಮಂತ್ರಿಸಬೇಕು' ಎಂದು ಬರೆದಿದ್ದಾರೆ. ಆದರೆ ಅವರೇ ಉದಹರಿಸಿರುವ ವಿಷ್ಣುತೀರ್ಥೀಯ ವಚನಗಳು ಹೀಗಿವೆ— 1) 'ಅಷ್ಟವಾರಂ ಜಪೇನ್ಮಂತ್ರಮ್'; 2) ಅಭ್ಯುಕ್ಷ್ಯ ಮೂಲಮಂತ್ರೇಣ ತಾನ್ಯಾಲಭ್ಯಾಷ್ಟಧಾ ಜಪೇತ್ !' (ಉಪಾಧ್ಯಾಯರ ಸದಾಚಾರಸ್ಮೃತಿ ವ್ಯಾಖ್ಯಾನದಿಂದ)

ಶಬ್ದಾರ್ಥ— ಅಭ್ಯುಕ್ಷ್ಯ-ಪ್ರೋಕ್ಷಿಸಿ, ತಾನಿ-ಅವುಗಳನ್ನು (ನೈವೇದ್ಯಕ್ಕೆ ಇಟ್ಟ ಪದಾರ್ಥಗಳನ್ನು), ಆಲಭ್ಯ-ಹಿಡಿದುಕೊಂಡು, ಅಷ್ಟಧಾ-ಎಂಟು ಸಾರಿ.

(ಅರ್ಥ) 1) ಮೂಲಮಂತ್ರವನ್ನು ಎಂಟು ಸರಿ ಜಪಿಸಬೇಕು 2 (ನೀರನ್ನು) ಕೈಯಲ್ಲಿ ಹಿಡಿದುಕೊಂಡು ಎಂಟಾವರ್ತಿ ಮೂಲಮಂತ್ರದಿಂದ ಜಪಿಸಿ ಅನಂತರ ನೈವೇದ್ಯದ ಮೇಲೆ ಪ್ರೋಕ್ಷಿಸಬೇಕು.

ಇನ್ನು ಸಂಪ್ರದಾಯದ ಪದ್ಧತಿಯು ಹೇಗಿದೆ ಎಂಬುದನ್ನು ಕೆಳಗಿನ ವಾಕ್ಯಗಳು ವಿವರಿಸುವುವು: ೧) ಉಡುಪಿಯ 'ಆಹ್ನಿಕಮಂಜರೀ'ಯಲ್ಲಿ ಹೀಗೆ ಹೇಳಿದೆ— "ನೈವೇದ್ಯಾರ್ಥ ಪ್ರತ್ಯೇಕ ಜಲವನ್ನು ಶಂಖದಲ್ಲಿ ತುಂಬಿಸಿ......ಅಭಿಮಂತ್ರಿಸಿ......ಆ ಶಂಖೋದಕವನ್ನು ಕೈಯಲ್ಲಿಟ್ಟು......ನೈವೇದ್ಯಕ್ಕೆ ಪ್ರೋಕ್ಷಿಸಿ......"

೨) ಕೆ. ಶೇಷಗಿರಿರಾಯರ ತೆಲುಗುಲಿಪಿಯ 'ಆಹ್ನಿಕ ಮಂಜರೀ'ಯಲ್ಲಿ ಹೀಗೆ ಹೇಳಿದೆ – "ನೈವೇದ್ಯದ ಮೇಲೆ ತುಳಸೀದಳವನ್ನು ಹಾಕಿ, ಪ್ರೋಕ್ಷಣಪಾತ್ರದಲ್ಲಿದ್ದ ಉದಕವನ್ನು ಶಂಖದಲ್ಲಿ ಹಾಕಿ......ಆ ಉದಕವನ್ನು ಕೈಯಲ್ಲಿ ಹಾಕಿಕೊಂಡು ಅಷ್ಟಾಕ್ಷರದಿಂದಲು ಗಾಯತ್ರಿಯಿಂದಲು ೧೨ ಆವರ್ತಿ ಅಭಿಮಂತ್ರಿಸಿ 'ನಾರಾಯಣಾಯ ವಿದ್ಮಹೇ' ಎಂಬ ವಿಷ್ಣುಗಾಯತ್ರಿಯಿಂದ ಆ ಉದಕವನ್ನು ನೈವೇದ್ಯದ ಮೇಲೆ ಪ್ರೋಕ್ಷಣ ಮಾಡಿ ..." ೩) ಕುಂಭಕೋಣದ ರಾ. ಗುರುರಾಜಾಚಾರ್ಯರು ಪ್ರಕಟಿಸಿದ ಸಂಸ್ಕೃತಲಿಪಿಯ "ದೇವತಾರ್ಚನ ಪದ್ಧತಿ"ಯಿಂದ— "ಪ್ರಣವೇನಾಭಿಘಾರ್ಯ, ತುಳಸೀದಲಂ ನಿಧಾಯ, ಕಲಶೋದಕೇನ ಶಂಖಂ ಪ್ರಪೂರ್ಯ,... ತದುದಕಂ ಹಸ್ತೇ ಗೃಹೀತ್ವಾ, ಮೂಲ ಮಂತ್ರಮಷ್ಟವಾರಮಭಿಮಂತ್ರ್ಯ, 'ನಾರಾಯಣಾಯ ವಿದ್ಮಹೇ...... ಇತಿ ನೈವೇದ್ಯಂ ಪ್ರೋಕ್ಷ್ಯ" (ಇದರ ಕನ್ನಡ ಅನುವಾದ) "ಪ್ರಣವಮಂತ್ರದಿಂದ ಅಭಿಘಾರ ಮಾಡಿ, ತುಳಸೀದಳವನ್ನು ಹಾಕಿ, ಕಲಶೋದಕದಿಂದ ಶಂಖವನ್ನು ತುಂಬಿ,.. ಆ ನೀರನ್ನು ಕೈಗೆ ತೆಗೆದುಕೊಂಡು (ಬಗ್ಗಿಸಿಕೊಂಡು) ಮೂಲಮಂತ್ರವನ್ನು ಎಂಟು ಆವರ್ತಿ ಜಪಿಸಿ, 'ನಾರಾಯಣಾಯ ವಿದ್ಮಹೇ' ಎಂಬ ವಿಷ್ಣುಗಾಯತ್ರೀ ಮಂತ್ರದಿಂದ ನೈವೇದ್ಯವನ್ನು ಪ್ರೋಕ್ಷಿಸಿ." ಇತ್ಯಾದಿ. ೪) ವಾರಣಾಸೀ (ಕಾಶೀ, ಕ್ಷೇತ್ರನಿವಾಸಿಗಳಾಗಿದ್ದ ಪ್ರಸಿದ್ಧ ಪುರೋಹಿತರಾದ ಗೋಪಾಲಾಚಾರ್ಯ ಟೋಣಪೇ ಇವರ 'ವೈಷ್ಣವದೇವಪೂಜಾಪದ್ಧತಿ' ಯಿಂದ— ಹಿಂದಿಯ ಕನ್ನಡಾನುವಾದ "ತುಲಸಿಯನ್ನೂ ಶಂಖದಿಂದ ನೀರನ್ನು (ಕೈಗೆ) ತೆಗೆದುಕೊಂಡು 'ಓಂ ನಮೋ .' ಎಂಬ ಮೂಲಮಂತ್ರವನ್ನು ಹನ್ನೆರಡಾವರ್ತಿ ಜಪಿಸಿ ನೀರನ್ನು ನೈವೇದ್ಯದ ಮೇಲೆ ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಬೇಕು....." ೫) ವೇದಾಂತವಿದ್ವಾನ್ ಅಯಾಚಿತ ಧೀರೇಂದ್ರಾಚಾರ್ಯರ 'ದೇವಪೂಜಾಪ್ರವೇಶ'ದಿಂದ "ನೈವೇದ್ಯಕ್ಕೆ ಪದಾರ್ಥಗಳನ್ನು) ಇಟ್ಟು ಶಂಖಕ್ಕೆ ನೀರು ಹಾಕಿಕೊಂಡು ಅಥವಾ ಹಾಗೆಯೇ ಪ್ರೋಕ್ಷಣೆ ಮಾಡುವುದು" ೬) ನಮ್ಮ ಹಿರಿಯರು ಬರೆದಿಟ್ಟ 'ದೇವತಾರ್ಚನ ವಿಧಿ'ಯಿಂದ— "ಕಲಶೋದಕೇನ ಶಂಖಂ ಪೂರಯಿತ್ವಾ ಗಾಯತ್ರೀಮೂಲಮಂತ್ರಾಭ್ಯಾಮಭಿಮಂತ್ರ್ಯ ತಜ್ಜಲಂ ಕರೇ ಧೃತ್ವಾ ನೈವೇದ್ಯೋಪರಿ ವಿಷ್ಣುಗಾಯತ್ರ್ಯಾ ಪ್ರೋಕ್ಷಯೇತ್" (ಅನುವಾದ) (ನೈವೇದ್ಯ ಪದಾರ್ಥಗಳನ್ನು ಮಂಡಲದ ಮೇಲೆ ಇಟ್ಟ ಬಳಿಕ) ಕಲಶದ ನೀರಿನಿಂದ ಶಂಖವನ್ನು ತುಂಬಿ ಗಾಯತ್ರಿಯಿಂದಲೂ ಮೂಲಮಂತ್ರದಿಂದಲೂ ಅಭಿಮಂತ್ರಿಸಿ ಆ ನೀರನ್ನು ಕೈಗೆ ಬಗ್ಗಿಸಿಕೊಂಡು ನೈವೇದ್ಯದ ಮೇಲೆ ವಿಷ್ಣು ಗಾಯತ್ರಿಯಿಂದ ಪ್ರೋಕ್ಷಿಸಬೇಕು.

ಇವಿಷ್ಟೂ ಭಿನ್ನಭಿನ್ನ ಸಂಪ್ರದಾಯಪದ್ಧತಿಗಳಿಂದ ತಿಳಿದುಬರುವ ನಿರ್ಣಯ-ವೇನೆಂದರೆ— ಶುದ್ಧೋದಕವನ್ನು ಶಂಖಕ್ಕೆ ಹಾಕಿ ಆ ನೀರು ಪವಿತ್ರವಾಗುವುದಕ್ಕಾಗಿ ಮೂಲಮಂತ್ರದಿಂದ (ಎಂಟು ಸಾರಿ ಅಥವಾ ಹನ್ನೆರಡು ಸಾರಿ) ಅಭಿಮಂತ್ರಿಸಿ (ಗಾಯತ್ರಿ ಮಂತ್ರದಿಂದಲೂ ಮಂತ್ರಿಸಿದರೆ ತಪ್ಪಿಲ್ಲ) ಆ ನೀರನ್ನು ಕೈಗೆ ಬಗ್ಗಿಸಿಕೊಂಡು ಕೈಯಿಂದಲೇ 'ನಾರಾಯಣಾಯ ವಿದ್ಮಹೇ' ಎಂಬ ವಿಷ್ಣುಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಬೇಕು. ಆದರೆ ಶಂಖದಿಂದಲೇ ಪ್ರೋಕ್ಷಿಸಬಾರದು ಎಂದು ಹೇಳಿದಂತಾಯಿತು.

ಆದರೆ ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲಿ (ದ್ವಿತೀಯ ಸಂ. ೧೯೮೫, ಪುಟ ೮೩) ಉದಾಹೃತವಾಗಿರುವ 'ಪೂಜಾಕಲ್ಪಲತಾ' ವಚನವು ಹೀಗಿದೆ— "ನೈವೇದ್ಯಕಾಲೇ ತು ಸಾಕ್ಷಾದೇವ ಹಸ್ತೇ ಧೃತ್ವಾ ತೇನೈವ ಪ್ರೋಕ್ಷಣಮಿತಿ ಸಂಪ್ರದಾಯವಿದಃ." ಇದರಂತೆ ನೈವೇದ್ಯಕಾಲದಲ್ಲಿ ನೀರನ್ನು ಶಂಖಕ್ಕೆ ಹಾಕದೆ ನೇರವಾಗಿಯೇ ಕೈಗೆ ಹಾಕಿಕೊಂಡೇ ಪ್ರೋಕ್ಷಿಸಬೇಕು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದಕಾರಣ ಅವರವರ ಹಿರಿಯರ ಪದ್ಧತಿಯಂತೆ ಮಾಡುವುದು ಉತ್ತಮ. ಎರಡೂ ಪದ್ಧತಿಗಳು ಭಗವಂತನಿಗೆ ಒಪ್ಪಿಗೆ— 'ಯದ್ಯದಾಚರತಿ ಶ್ರೇಷ್ಠಃ,'

ವಿಶೇಷ ವಿಚಾರ— ಪೀ. ಪೀ. ಲಕ್ಷ್ಮೀನಾರಾಯಣ ಉಪಾಧ್ಯಾಯರು 'ಸದಾಚಾರ ಸ್ಮೃತಿ' ವ್ಯಾಖ್ಯಾನದಲ್ಲಿ ಹೀಗೆ ಬರೆದಿದ್ದಾರೆ— 'ಮೂಲಮಂತ್ರದಿಂದ ನೈವೇದ್ಯವನ್ನು ಪ್ರೋಕ್ಷಿಸಬೇಕು. ಎಂಟು ಸಲ ಮೂಲಮಂತ್ರದಿಂದ ಜಪಿಸಬೇಕು. ಹನ್ನೆರಡು ಸಲ ಮೂಲಮಂತ್ರದಿಂದ ಜಪಿಸಬೇಕು. ಹನ್ನೆರಡು ಸಲ ಮೂಲಮಂತ್ರದಿಂದ ಜಪಿಸಿ ನೈವೇದ್ಯದ ಮೇಲೆ 'ಅಮೃತಂ ದುಹ' (ಎಂದರೆ ಅಮೃತವನ್ನು ಸುರಿಸು) ಎಂದು ಹೇಳಬೇಕು. 'ಓಂ ವಂ ಅಮೃತದ್ರಾವಿಣ್ಯೈ ಸುರಭ್ಯೈ ನಮಃ' ಎಂಬ ಕಾಮಧೇನುಮಂತ್ರವನ್ನು ಎಂಟು ಸಲ ಜಪಿಸಬೇಕು. 'ಓಂ ರಂ ಸಹಸ್ರಾರ ಹುಂ ಫಟ್' ಎಂಬ ಸುದರ್ಶನ-ಮಂತ್ರವನ್ನು ಹೇಳುತ್ತಾ ನೈವೇದ್ಯಕ್ಕೆ ಪ್ರೋಕ್ಷಣವನ್ನು ಮಾಡಬೇಕು. (ಇದರಿಂದ ಶಂಖಕ್ಕೆ ಹಾಕಿಕೊಂಡು ಪ್ರೋಕ್ಷಿಸಬಾರದು ಎಂಬರ್ಥವಾಗುತ್ತದೆ.)

ನೈವೇದ್ಯಕ್ಕೆ ತೋರಿಸಬೇಕಾದ ಮುದ್ರೆಗಳು— 1) ಅಮೃತೀಕರಣಾರ್ಥಂ ಧೇನು-ಮುದ್ರಾಂ ಪ್ರದರ್ಶಯಾಮಿ-ನೈವೇದ್ಯವು ಅಮೃತಮಯವಾಗುವುದಕ್ಕಾಗಿ ಕಾಮಧೇನು ಮುದ್ರೆಯನ್ನು ತೋರಿಸುತ್ತೇನೆ. 2) ಪವಿತ್ರೀಕರಣಾರ್ಥಂ ಶಂಖಮುದ್ರಾಂ ಪ್ರದರ್ಶ-ಯಾಮಿ-ಇಟ್ಟ ನೈವೇದ್ಯಪದಾರ್ಥಗಳು ಪರಿಶುದ್ಧವಾಗುವುದಕ್ಕಾಗಿ ಶಂಖಮುದ್ರೆಯನ್ನು ತೋರಿಸುತ್ತೇನೆ. ೩) ಸಂರಕ್ಷಣಾರ್ಥಂ 'ಓಂ ಸುದರ್ಶನಾಯ ಹುಂ ಫಟ್ ಸ್ವಾಹಾ— ಇತಿ ಚಕ್ರಮುದ್ರಾಂ ಪ್ರದರ್ಶಯಾಮಿ'- ಸಂರಕ್ಷಣೆಗಾಗಿ ಚಕ್ರಮುದ್ರೆಯನ್ನು ತೋರಿಸುತ್ತೇನೆ. 4) ನಿರ್ವಿಷೀಕರಣಾರ್ಥಂ ತಾರ್ಕ್ಷ್ಯಮುದ್ರಾಂ ಪ್ರದರ್ಶಯಾಮಿ.-ವಿಷಪರಿಹಾರಕ್ಕಾಗಿ ಗರುಡಮುದ್ರೆಯನ್ನು ತೋರಿಸುತ್ತೇನೆ. 5) ಅಭಿವೃದ್ಧ್ಯರ್ಥಂ ಗಿರಿಮುದ್ರಾಂ

(ಮೇರುಮುದ್ರಾಂ) ಪ್ರದರ್ಶಯಾಮಿ-ಅನ್ನಾದಿ ನೈವೇದ್ಯಕ್ಕೆ ಇಟ್ಟ ಪದಾರ್ಥಗಳು ವೃದ್ಧಿಯಾಗುವುದಕ್ಕಾಗಿ ಮೇರುಮುದ್ರೆಯನ್ನು ತೋರಿಸುತ್ತೇನೆ. (ಸೂಚನೆ— ಧೇನು ಶಂಖ ಮೊದಲಾದ ಮುದ್ರೆಗಳ ಚಿತ್ರಗಳನ್ನು ಉಡುಪಿಯ ಆಹ್ನಿಕಮಂಜರಿಯಲ್ಲಿ ಕಲಶ-ಪೂಜಾ ಕ್ರಮದಲ್ಲೂ ಹೊಂಬಾಳೆಯವರ ಆಹ್ನಿಕಪದ್ಧತಿಯಲ್ಲೂ ಕೊಟ್ಟಿದೆ. ಅವನ್ನು ನೋಡಿ ಕಲಿಯಬಹುದು. ಮೇರುಮುದ್ರೆ ಹೇಗೆಂದರೆ ಎಡಗೈಯಿನ ಅಂಗೈಯನ್ನು ಅಗಲಿಸಿ ಹಿಡಿದು ಅದರ ಮೇಲೆ ಬಲಗೈಯನ್ನು ಮುಷ್ಟಿಯಾಗಿ ಮಡಚಿ ಎಡಗೈಯಿನ ಅಂಗೈಮೇಲಿಟ್ಟು ಬಲಗೈಯಿನ ಹೆಬ್ಬೆಟ್ಟನ್ನು ಮೇಲ್ಮುಖವಾಗಿ ಎತ್ತುವುದು.) 6) ಶೈತಲ್ಯಾರ್ಥಂ ಶಶಿಮುದ್ರಾಂ (ಚಂದ್ರಮುದ್ರಾಂ) ಪ್ರದರ್ಶಯಾಮಿ-ಪದಾರ್ಥಗಳು ಬಹಳ ಬಿಸಿಯಾಗಿರದೆ ತಿನ್ನುವಂತೆ ತಣ್ಣಗಾಗುವುದಕ್ಕಾಗಿ ಶಶಿ(ಚಂದ್ರ)ಮುದ್ರೆಯನ್ನು ತೋರಿಸುತ್ತೇನೆ. (ಬಲಗೈಯಿನ ಹೆಬ್ಬೆಟ್ಟನ್ನೂ ತರ್ಜನೀ ಬೆಟ್ಟನ್ನೂ ಚಾಚಿ ಚಂದ್ರಾಕಾರವಾಗಿ— ಅಥವಾ ಅರ್ಧಚಕ್ರಾಕಾರವಾಗಿ —ತೋರಿಸುವುದಕ್ಕೆ ಚಂದ್ರಮುದ್ರೆ ಎಂದು ಹೆಸರು.)। ಇತಿ ಷಣ್ಮುದ್ರಾಃ ಪ್ರದರ್ಶ್ಯ। ಎಂದು ಆರು ಮುದ್ರೆಗಳನ್ನು ತೋರಿಸಬೇಕು.

ಪದ್ಯಮಾಲಾದಲ್ಲಿ ಹೇಳಿದ ನೈವೇದ್ಯಸಮರ್ಪಣಕ್ರಮ

ಮೊದಲು ಪದ್ಯಮಾಲಾದಲ್ಲಿ ಕೊಟ್ಟ ವಿಧಾನವನ್ನು ತಿಳಿಸಿ ಅನಂತರ ಹೆಚ್ಚಿನ ವಿಚಾರಗಳನ್ನು ಹೇಳುವೆವು. ಆಗ ನೈವೇದ್ಯಕ್ರಮವು ಸರಳವಾಗಿ ತಿಳಿಯುತ್ತದೆ.

ನೈವೇದ್ಯಮುಪರಿ ಸ್ಥಾಪ್ಯ ಶುದ್ಧತೋಯೇನ ಪ್ರೋಕ್ಷಯೇತ್ ।
'ಸೌವರ್ಣೈ'ರಿತಿ ಮಂತ್ರೇಣ ಮೂಲಮಂತ್ರೇಣ ಮಂತ್ರಯೇತ್॥೯೮॥

(ಅರ್ಥ) ನೈವೇದ್ಯದ ಪದಾರ್ಥಗಳನ್ನು ಶುದ್ಧ ಮಂಡಲದ ಮೇಲಿಟ್ಟು ಶುದ್ಧೋದಕದಿಂದ ಪ್ರೋಕ್ಷಿಸಬೇಕು. (ಅವರವರ ಹಿರಿಯರ ಪದ್ಧತಿಯಂತೆ ಶಂಖಕ್ಕೆ ನೀರು ಹಾಕಿ ಅಭಿಮಂತ್ರಿಸಿ ಕೈಗೆ ಬಗ್ಗಿಸಿಕೊಂಡಾದರೂ ಪ್ರೋಕ್ಷಿಸಬಹುದು, ಅಥವಾ ನೀರನ್ನು ನೇರವಾಗಿ ಕೈಗೇ ಹಾಕಿಕೊಂಡು ಅಭಿಮಂತ್ರಿಸಿಯಾದರೂ ಪ್ರೋಕ್ಷಿಸಬಹುದು.) ಅನಂತರ "ಸೌವರ್ಣೈಃ ಸ್ಥಾಲಿವರ್ಯೈಃ" ಎಂಬ ಶ್ಲೋಕವನ್ನು ಪಠಿಸಿ ಮೂಲಮಂತ್ರವನ್ನೂ ಪಠಿಸಬೇಕು.

ಅಮೃತಸ್ರಾವಿಣೀಂ ಧೇನುಂ ನೈವೇದ್ಯೋಪರಿ ಚಿಂತಯೇತ್ ।
ಸುಮುದ್ರಾಂ ಪ್ರದರ್ಶ್ಯೋರ್ಧ್ವೇಚ್ಛಾಂ 'ಸುರಭ್ಯೈ ನಮ' ಇತ್ಯಪಿ ೯೯।

(ಅರ್ಥ) ಆಮೇಲೆ ಅಮೃತವನ್ನು ಸುರಿಸುತ್ತಿರುವ ಕಾಮಧೇನುವನ್ನು ಸ್ಮರಿಸಿ, ಅಮೃತೀಕರಣಾರ್ಥವಾಗಿ ಧೇನುಮುದ್ರೆಯನ್ನು ತೋರಿಸುತ್ತಾ ಲಕ್ಷ್ಮೀನಾರಾಯಣ ಉಪಾಧ್ಯಾಯರು ಸೂಚಿಸಿದಂತೆ 'ಅಮೃತಂ ದುಹ' ಎಂದೂ, 'ಓಂ ವಂ ಅಮೃತ-

ದ್ರಾವಿಣ್ಯೈ ಸುರಭ್ಯೈ ನಮಃ" ಎಂಬ ಕಾಮಧೇನುಮಂತ್ರವನ್ನು (ಎಂಟು ಸರಿ ಅಥವಾ ಒಂದಾವರ್ತಿಯಾದರೂ) ಪಠಿಸಬೇಕು.

ಹುಂ ಫಡಂತಂ ಸಹ ಸ್ವಾಹೇ—ತ್ಯುಕ್ತ್ವಾ ಮುದ್ರಾಂ ಸುದರ್ಶನೀಮ್ ।
ಗಾರುಡೀಂ ಚಾಥ ಸಂದರ್ಶ್ಯ ಗೃಹೀತ್ವಾಽಥ (ಚ) ಕರೇ ಜಲಮ್ ॥೧೦೦॥

(ಅರ್ಥ) ಆಮೇಲೆ 'ಓಂ ನಮೋ ಭಗವತೇ ಸುದರ್ಶನಾಯ ಮಹಾಚಕ್ರಾಯ ಹುಂ ಫಟ್ ಸ್ವಾಹಾ' (ಇದು ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲಿರುವ ಪಾಠ) ಅಥವಾ ಲಕ್ಷ್ಮೀನಾರಾಯಣ ಉಪಾಧ್ಯಾಯರು ಸೂಚಿಸಿದಂತೆ 'ಓಂ ರಂ ಸಹಸ್ರಾರ ಹುಂ ಫಟ್' ಎಂಬ ಸುದರ್ಶನಮಂತ್ರವನ್ನು ಪಠಿಸುತ್ತಾ ಸಂರಕ್ಷಣಾರ್ಥ ಚಕ್ರ (ಸುದರ್ಶನ) ಮುದ್ರೆಯನ್ನು ತೋರಿಸಬೇಕು. ಆಮೇಲೆ ನಿರ್ವಿಷೀಕರಣಾರ್ಥವಾಗಿ ಗರುಡಮುದ್ರೆಯನ್ನೂ ಉಪಲಕ್ಷಣಯಾ ಪವಿತ್ರೀಕರಣಾರ್ಥ ಶಂಖಮುದ್ರೆಯನ್ನೂ ಅಭಿವೃದ್ಧ್ಯರ್ಥ ಮೇರು (ಗಿರಿ) ಮುದ್ರೆಯನ್ನೂ ಶೈತ್ಯಾರ್ಥ ಶಶಿ (ಚಂದ) ಮುದ್ರೆಗಳನ್ನೂ ತೋರಿಸಬೇಕು. ಆಮೇಲೆ ಪರಿಷಿಂಚನೆ ಮಾಡುವುದಕ್ಕಾಗಿ ಕೈಯಲ್ಲಿ ನೀರನ್ನು ತೆಗೆದುಕೊಂಡು (ಇಲ್ಲೂ ಎರಡು ಪಕ್ಷವುಂಟು—ಶಂಖಕ್ಕೆ ಹಾಕಿದ್ದ ನೀರಿನಲ್ಲೇ ಸ್ವಲ್ಪ ಭಾಗ ಮೊದಲು ಕೈಗೆ ಬಗ್ಗಿಸಿಕೊಂಡು ಅದನ್ನು ಪ್ರೋಕ್ಷಿಸಬೇಕು, ಮಿಕ್ಕ ನೀರನ್ನು ಎರಡನೆಯ ಸಾರಿ ಪೂರ್ತಿ ಬಗ್ಗಿಸಿಕೊಂಡು ಅದನ್ನು ಮುಂದೆ ಹೇಳುವ ಮಂತ್ರದಿಂದ ನೈವೇದ್ಯಕ್ಕೆ ಪರಿಷಿಂಚನೆ ಮಾಡಬೇಕೆಂಬುದು ಒಂದು ಪಕ್ಷ. ಪ್ರೋಕ್ಷಿಸುವುದಕ್ಕೆ ಕಲಶೋದಕವನ್ನು ನೇರವಾಗಿ ತೆಗೆದುಕೊಂಡು ಪ್ರೋಕ್ಷಿಸಿದಂತೆ ಪುನಃ ಇನ್ನೊಂದು ಸಾರಿ ಕಲಶೋದಕವನ್ನು ನೇರವಾಗಿ ಕೈಗೆ ಹಾಕಿಕೊಂಡು ಮುಂದೆ ಹೇಳುವ ಮಂತ್ರವನ್ನು ಪಠಿಸಿ ಪರಿಷಿಂಚನೆ ಮಾಡಬೇಕು ಎಂಬುದು ಇನ್ನೊಂದು ಪಕ್ಷ. ಇಲ್ಲೂ ಸಹ ಅವರವರ ಹಿರಿಯರು ಮಾಡಿದಂತೆ ಮಾಡುವುದೇ ಕ್ಷೇಮಕರ.)

ಪರಿಷಿಂಚಾಮಿ ಸತ್ಯಂ ತ್ವ—ರ್ತೇನೇತಿ ಚ ಕ್ರಮಾದ್ ವದೇತ್ ।
ಪರಿತಃ ಸಿಂಚಯೇತ್ ತೋಯಂ ತತ ಆಪೋಶನಂ ಕ್ಷಿಪೇತ್ ॥೧೦೧॥

(ಅರ್ಥ) (ಕೈಗೆ ಹಾಕಿಕೊಂಡ ಜಲವನ್ನು) ಹಗಲುಹೊತ್ತಾದರೆ 'ಸತ್ಯಂ ತ್ವರ್ತೇನ ಪರಿಷಿಂಚಾಮಿ' ಎಂಬ ಮಂತ್ರದಿಂದಲೂ, ರಾತ್ರಿಹೊತ್ತಾದರೆ 'ಋತಂ ತ್ವಾ ಸತ್ಯೇನ ಪರಿಷಿಂಚಾಮಿ' ಎಂದು ವ್ಯುತ್ಕ್ರಮ (ತಲೆಕೆಳಕಾಗಿ) ಮಂತ್ರದಿಂದಲೂ ಪಠಿಸುತ್ತಾ ನೈವೇದ್ಯಕ್ಕೆ ಇಟ್ಟಿರುವ ಎಲ್ಲ ಪದಾರ್ಥಗಳನ್ನೂ ಸುತ್ತುಗಟ್ಟಬೇಕು. ಆಮೇಲೆ ಆಪೋಶನವನ್ನು ಹಾಕಬೇಕು.

ಆಪೋಶನ ಹಾಕುವ ಮಂತ್ರಗಳು

ಮಹಾಲಕ್ಷ್ಮ್ಯಾ ಸುಧಾರೂಪಂ ಕರೇ ತೇ ದಕ್ಷಿಣೇಽನಘ ।
(ಪಾಠಾಂ— ಮಹಾಲಕ್ಷ್ಮೀ ಸಮೇತಸ್ಯ ವಿಷ್ಣೋ ತೇ ದಕ್ಷಿಣೇ ಕರೇ ।)
ಆಪೋಶನಂ ದೀಯಮಾನಂ ಪಿಬ ದೇವ ರಮಾಪತೇ ॥ ೧೦೨ ॥

(ಶಬ್ದಾರ್ಥ) ಆಪಃ–ನೀರನ್ನು, ಅಶನ–ತಿನ್ನುವುದು ಅಥವಾ ಕುಡಿಯುವುದೇ ಆಪೋಶನ. ಸುಧಾರೂಪಂ–ಅಮೃತರೂಪವಾದ (ಅಮರ—'ಪೀಯೂಷ- ಮಮೃತಂ ಸುಧಾ') ಅನಘ— ಅಘ–ಪಾಪಗಳು ಇಲ್ಲದವನು, ಹೇ ದೋಷರಹಿತನೇ. ದೀಯ-ಮಾನಂ–(ಕರ್ಮಣಿ ಪ್ರಯೋಗ) ಕೊಡಲ್ಪಡುತ್ತಿರುವ. ಪಿಬ–ಕುಡಿ.

(ಅರ್ಥ) ಹೇ ದೋಷರಹಿತನಾದ ಲಕ್ಷ್ಮೀಪತಿಯೇ. ಮಹಾಲಕ್ಷ್ಮೀದೇವಿಯು ನಿನ್ನ ಬಲಗೈಯಲ್ಲಿ ಹಾಕುತ್ತಿರುವ (ಕೊಡುತ್ತಿರುವ) ಅಮೃತಸ್ವರೂಪವಾದ ಆಪೋಶನವನ್ನು ಕುಡಿಯುವನಾಗು.

ಸುಧಾರಸಂ ಸುವಿಪುಲಂ ಆಪೋಶನಮಿದಂ ತವ ।
ಗೃಹಾಣ ತ್ವಂ ಸುರಶ್ರೇಷ್ಠ! (ಪಾಠಾಂ: ಗೃಹಾಣ ಕಲಶಾನೀತಂ)
ಯಥೇಷ್ಟಮುಪಭುಜ್ಯತಾಮ್ ॥ ೧೦೩ ॥

(ಶಬ್ದಾರ್ಥ) ಸು–ಬಹಳ, ವಿಪುಲಂ–ಅಧಿಕವಾದ, ಗೃಹಾಣ–ಸ್ವೀಕರಿಸು, ಉಪಭುಜ್ಯತಾಂ–ಕುಡಿಯಲ್ಪಡಲಿ (ಕರ್ಮಣಿ ಪ್ರಯೋಗ).

(ಅರ್ಥ) ಹೇ ದೇವೋತ್ತಮನಾದ ಭಗವಂತ, ನಾರಾಯಣ! ಅಮೃತರಸವಂತಿರುವ ಬಹಳ ಅಧಿಕವಾದ, ನಿನಗಾಗಿ ಕೊಡುತ್ತಿರುವ (ಪಾಠಾಂ.— ಕಲಶದಿಂದ ಹಾಕುತ್ತಿರುವ) ಈ ಆಪೋಶನವನ್ನು ಹಿಡಿ (ತೆಗೆದುಕೋ, ಸ್ವೀಕರಿಸು) ಮತ್ತು ಯಥೇಷ್ಟವಾಗಿ ಇದನ್ನು ಸ್ವೀಕರಿಸು.

ಇತಿ ಮಂತ್ರಮುದೀರ್ಯಾಥ ದೇವ ದಕ್ಷಿಣಹಸ್ತಕೇ ।
ಲಕ್ಷ್ಮ್ಯಾ ಪ್ರದೀಯಮಾನಂ ಚ ಸುಧಾರಸಮಯಂ ಶುಭಮ್ ॥ ೧೦೪ ॥

ಆಪೋಶನಮಿದಂ ಧ್ಯಾತ್ವಾ ಽಮೃತೋಪಸ್ತರಣಮಸಿ ।
ಇತ್ಯುಕ್ತ್ವಾ ಽಽಪೋಶನೋಚ್ಛಿಷ್ಟಂ ಜಲಂ ಪಾತ್ರಾಂತರೇ ಕ್ಷಿಪೇತ್ ॥

(ಶಬ್ದಾರ್ಥ) ಉದೀರ್ಯ–ಹೇಳಿ, ಉಚ್ಚರಿಸಿ, ಪ್ರದೀಯಮಾನಂ–(ಕರ್ಮಣೀ ವರ್ತಮಾನ ಕೃದಂತ) ಕೊಡಲ್ಪಡುತ್ತಿರುವ, ಧ್ಯಾತ್ವಾ–ಧ್ಯಾನ ಮಾಡಿ (ತಿಳಿದು),

ಇತ್ಯುಕ್ತ್ವಾ— ಇತಿ-ಹೀಗೆಂದು + ಉಕ್ತ್ವಾ-ಹೇಳಿ (ಯಣ್ ಸಂಧಿ), ಆಪೋಶನೋಚ್ಛಿಷ್ಟಂ-ಆಪೋಶನ ಹಾಕಿದ ಮೇಲೆ ಉಳಿದ (ಅಥವಾ ಮಿಕ್ಕ), ಪಾತ್ರಾಂತರೇ-ಇನ್ನೊಂದು ಪಾತ್ರೆಯಲ್ಲಿ, ಕ್ಷಿಪೇತ್-ಹಾಕಬೇಕು.

(ಅರ್ಥ) ಮೇಲಿನ ಎರಡು ಶ್ಲೋಕಗಳನ್ನು ಹೇಳಿ ಸ್ವಾಮಿಯ ಬಲಗೈಯಲ್ಲಿ ಲಕ್ಷ್ಮೀದೇವಿಯೇ ಸಾಕ್ಷಾತ್ತಾಗಿ ಈ ಅಮೃತರಸಮಯವಾದ ಆಪೋಶನವನ್ನು ಹಾಕುತ್ತಿದ್ದಾಳೆಂದು ಮನಸ್ಸಿನಲ್ಲಿ ತಿಳಿದು 'ಅಮೃತೋಪಸ್ತರಣಮಸಿ' ಎಂಬ ಮಂತ್ರ ಹೇಳಿ ಆಪೋಶನ ಹಾಕಿ ಉಳಿದ ನೀರನ್ನು ಬೇರೆ ಪಾತ್ರೆಯಲ್ಲಿ ಹಾಕಬೇಕು.

ಮೇಲೆ ೯೮ನೇ ಪದ್ಯಮಾಲಾ ಶ್ಲೋಕದಲ್ಲಿ (ಪುಟ ೨೯೧) ಬಂದ "ಸೌವರ್ಣೈಃ" ಎಂಬ ಮಂತ್ರಪಾಠವು ಹೀಗಿದೆ—

ಸ್ರಗ್ಧರಾವೃತ್ತ (7 + 7 + 7)

ಸೌವರ್ಣೈ ಸ್ಥಾಲಿವರ್ಯೈಃ (ಪಾಠಾಂ. ಸೌವರ್ಣೇ ಸ್ಥಾಲಿವರ್ಯೇ)
ಮಣಿಗಣಖಚಿತೈರ್ (ತೇ) ಗೋಘೃತಾಕ್ತಾನ್ ಸುಪಕ್ವಾನ್ ।
ಭಕ್ಷ್ಯಾನ್ ಭೋಜ್ಯಾಂಶ್ಚ ಲೇಹ್ಯಾ—ನಪಿ ಸಕಲಮಹತ್
(ಪಾಠಾಂ —ನಪರಿಮಿತಮಿದಂ, ನಪರಮಪಿ ಮಹತ್)
ಚೋಷ್ಯಮನ್ನಂ ನಿಧಾಯ ।
ನಾನಾಶಾಕೈರುಪೇತಂ, ದಧಿಮಧುಸುಘೃತ
(ಪಾಠಾಂ— ದಧಿಮಧುರಘೃತ, ಸಮಧುದಧಿಘೃತಂ)—
ಕ್ಷೀರಪಾನೀಯ-ಯುಕ್ತಂ
ತಾಂಬೂಲಂ ಚಾಪಿ (ಚಾಸ್ಯ) ವಿಷ್ಣೋಃ ಪ್ರತಿದಿವಸಮಹಂ
ಮಾನಸೇ ಚಿಂತಯಾಮಿ ॥

ಈ ಶ್ಲೋಕ 'ಭೀಮಸೇನದೇವರ ಮಾನಸಪೂಜಾ' ಎಂಬ ಸ್ತೋತ್ರದಲ್ಲಿ ಬಂದಿದೆ.

(ಶಬ್ದಾರ್ಥ) ಸೌವರ್ಣೈಃ (ರ್ಣೇ)-ಬಂಗಾರದಿಂದ ಮಾಡಿದ, ಸ್ಥಾಲೀ-[ಹಿಂದೀ-ಥಾಲೀ] ತಟ್ಟೆ, ವರ್ಯ-ಶ್ರೇಷ್ಠವಾದ, ಸ್ಥಾಲಿವರ್ಯೈಃ [ರ್ಯೇ]-ದೊಡ್ಡದೊಡ್ಡ ತಟ್ಟೆಗಳಿಂದ[ಗಳಲ್ಲಿ], ಮಣಿಗಣಖಚಿತೈಃ[ತೇ]-ನವರತ್ನಮಣಿಗಳಿಂದ ಕೆತ್ತಿದ, ಗೋಘೃತ ಅಕ್ತಾನ್-ಆಕಳ [ಹಸುವಿನ] ತುಪ್ಪದಿಂದ ನೆನೆಸಲ್ಪಟ್ಟ [ತುಪ್ಪ ಹಾಕಿದ ಎಂದರ್ಥ.] ಸು-ಪಕ್ವಾನ್-ಚೆನ್ನಾಗಿ ಬೇಯಿಸಿದ. ಭಕ್ಷ್ಯಾನ್-ಲಾಡು, ಚಿರೋಟಿ, ಹೋಳಿಗೆ, ಮೊದಲಾದ ಭಕ್ಷ್ಯಗಳನ್ನೂ ಭೋಜ್ಯಾನ್-ತಿನ್ನಲು ಯೋಗ್ಯವಾದ ಅನ್ನ,

ಚಿತ್ರಾನ್ನ, ಕೇಸರೀಭಾತು, ಬಿಸಿಬೇಳೆ ಭಾತು ಇತ್ಯಾದಿಗಳನ್ನೂ, ಲೇಹ್ಯಾನ್-ನೆಂಚಿ ಕೊಳ್ಳುವ ಚಟ್ನಿ, ಗೊಜ್ಜು, ಉಪ್ಪಿನಕಾಯಿ, ಪಳದ್ಯ ಮೊದಲಾದ ಪದಾರ್ಥಗಳನ್ನೂ, ಚೋಷ್ಯಂ-ಕುಡಿಯಬೇಕಾದ ಪದಾರ್ಥಗಳು (ಪಾಯಸ, ಖೀರು, ಪಾನಕ ನೀರು-ಮಜ್ಜಿಗೆ ಮೊದಲಾದುವು) [ಸೂಚನೆ: ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪೇಯ— ಈ ಶಬ್ದಗಳೆಲ್ಲಾ ವ್ಯಾಕರಣರೀತ್ಯಾ 'ಕೃತ್ಯ'ರೂಪಗಳು; ಎಲ್ಲ ಧಾತುಗಳ ಮೇಲೂ 'ಯ' ಎಂಬ ಕೃತ್ಯಪ್ರತ್ಯಯವು 'ಯೋಗ್ಯವಾದುದು, ಅರ್ಹವಾದುದು' ಎಂಬ ಅರ್ಥದಲ್ಲಿ ಬಂದು ಈ ರೂಪಗಳಾಗಿವೆ. ಗಮ್-ಹೋಗು ಎಂಬ ಧಾತುವಿನಿಂದ ಗಮ್ಯ-ಹೋಗಬಹುದಾದ, ಹೋಗಲು ಶಕ್ಯಂಥಾ, ಹೋಗಲು ಯೋಗ್ಯವಾದ ಸ್ಥಳವೆಂದು ಹೇಗೆ ಅರ್ಥವಾಗುತ್ತದೆಯೋ ಹಾಗೆಯೇ ಭಕ್ಷ್-ತಿನ್ನು, ಅದಕ್ಕೆ ಯೋಗ್ಯವಾದುದು ಭಕ್ಷ್ಯ—ಸ್ವತಂತ್ರವಾಗಿ ತಿನ್ನುವ ಪದಾರ್ಥಗಳು—ಲಾಡು, ಚಿರೋಟಿ ಮೊದಲಾದುವು. ಭುಜ್-ಊಟಮಾಡು (ಭೋಜನ), ಅದಕ್ಕೆ ಯೋಗ್ಯವಾದುವು ಭೋಜ್ಯಗಳು. ಅನ್ನ ಹಾಗೇ ತಿನ್ನಲು ಬರುವುದಿಲ್ಲ, ಆದ್ದರಿಂದ ಅದು ಭೋಜ್ಯ. ಹಾಗೆಯೇ ಚಿತ್ರಾನ್ನ, ಹುಗ್ಗಿ, ಸಕ್ಕರೆಪೊಂಗಲು, ಮೊದಲಾದುವೆಲ್ಲ ಭೋಜ್ಯಪದಾರ್ಥಗಳು – ಭಕ್ಷ್ಯಗಳಲ್ಲ. ಲಿಹ್ ಎಂದರೆ ನೆಕ್ಕು ಎಂದರ್ಥ. ಆದ್ದರಿಂದ ನೆಕ್ಕಿಕೊಂಡು ತಿನ್ನುವ ಚಟ್ನಿ, ಗೊಜ್ಜು, ಉಪ್ಪಿನಕಾಯಿ ಮೊದಲಾದುವು ಲೇಹ್ಯಪದಾರ್ಥಗಳು. ಚೂಷ್ ಎಂದರೆ ಚಪ್ಪರಿಸಿ-ಕೊಂಡು ಕುಡಿ ಎಂದರ್ಥ. ಆದ್ದರಿಂದ ಚೋಷ್ಯಗಳೆಂದರೆ ಚಪ್ಪರಿಸಿಕೊಂಡು ಕುಡಿಯುವ ಪಾಯಸ, ಖೀರು, ಮಾವಿನಹಣ್ಣಿನ ಸೀಕರಣೆ ಮೊದಲಾದ ಪದಾರ್ಥಗಳು ಎಂದರ್ಥ. ಪಾ (ಪಿಬ್) ಎಂದರೆ ಗಟಗಟ ಕುಡಿ ಎಂದರ್ಥ. ಆದ್ದರಿಂದ 'ಪೇಯ' ಎಂದರೆ ಗಟಗಟ ಕುಡಿಯುವುದಕ್ಕೆ ಯೋಗ್ಯವಾದ ನೀರು, ಪಾನಕ, ನೀರುಮಜ್ಜಿಗೆ ಮೊದಲಾದ ಪದಾರ್ಥ. ಹೀಗೆ ಒಂದೊಂದಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಮೇಲು.] ನಿಧಾಯ-ಇಟ್ಟು, ಶಾಕೈಃ-ತರಕಾರಿಗಳಿಂದ, ಉಪೇತಂ-ಕೂಡಿದ, ದಧಿ-ಮೊಸರು, ಮಧು-ಜೇನುತುಪ್ಪ, ಮಧುರ-ರುಚಿಯಾದ, ಸು-ಒಳ್ಳೆಯ, ಘೃತ-ತುಪ್ಪ, ಸ ಮಧು-ದಧಿ-ಘೃತಂ-ಜೇನುತುಪ್ಪ ಮೊಸರು ತುಪ್ಪ ಇವುಗಳಿಂದ ಸಮೇತವಾದ, ಕ್ಷೀರ-ಹಾಲು, ಪಾನೀಯ-ಕುಡಿಯುವ ನೀರು, ಯುಕ್ತಂ-ಕೂಡಿದ, ಚಾಪಿ (ಚ+ಅಪಿ)-ಇವನ್ನೂ ಕೂಡ, ಚಾಸ್ಯ ವಿಷ್ಣೋಃ— ಚ-ತಾಂಬೂಲ ಇವೆಲ್ಲವನ್ನೂ, ಅಸ್ಯ ವಿಷ್ಣೋಃ-ಈ ವಿಷ್ಣುವಿಗೆ, ಮಾನಸೇ-ಮನಸ್ಸಿನಲ್ಲೇ, ಚಿಂತಯಾಮಿ-ಧ್ಯಾನಿಸುತ್ತೇನೆ.

ಶ್ಲೋಕದ ಭಾವಾರ್ಥ— ಭಗವಂತನಿಗೆ ನೈವೇದ್ಯ ಬಡಿಸುವುದಕ್ಕಾಗಿ ದೊಡ್ಡ-ದೊಡ್ಡ ಬಂಗಾರದಿಂದ ಮಾಡಿ ನವರತ್ನಗಳಿಂದ ಕೆತ್ತಿದ ತಟ್ಟೆಗಳಿಂದ ಅಲಂಕರಿಸಿ ಸಿದ್ಧ ಮಾಡಿದೆಯೆಂದೂ (ಅಥವಾ ಸಪ್ತಮೀ ವಿಭಕ್ತಿಯಲ್ಲಿ ಹೇಳಿದರೆ—ಸೌವರ್ಣೇ ಸ್ಥಾಲಿ-ವರ್ಯೇ ಇತ್ಯಾದಿ—ತಟ್ಟೆಗಳಲ್ಲಿ ಈ ಮುಂದಿನ ಪದಾರ್ಥಗಳನ್ನು ಬಡಿಸಿದೆಯೆಂದು)

ಚಿಂತಿಸಬೇಕು. ಏನು ಬಡಿಸಿದೆ ಎಂದರೆ ನಾನಾ ವಿಧವಾದ ಭಕ್ಷ್ಯಗಳನ್ನೂ ಭೋಜ್ಯಗಳನ್ನೂ ನೆಂಚಿಕೊಳ್ಳುವ ಚಿಟ್ನಿ, ಗೊಜ್ಜು ಮೊದಲಾದ ಪದಾರ್ಥಗಳನ್ನೂ ಇಟ್ಟಿದೆ. ಅಲ್ಲದೆ ನಾನಾವಿಧವಾದ ತರಕಾರಿಗಳಿಂದ ಮಾಡಿದ ಪಲ್ಯಗಳನ್ನೂ ಮುದ್ದುಪಲ್ಯಗಳನ್ನೂ ತೊವ್ವೆಗಳನ್ನೂ ಬಡಿಸಿದೆ. ಎಲ್ಲ ಪದಾರ್ಥಗಳ ಮೇಲೂ ಅತಳತುಪ್ಪದಿಂದ ಅಭಿಘಾರ ಮಾಡಿದೆ. ಎಲ್ಲ ಪದಾರ್ಥಗಳನ್ನೂ ಪಕ್ವವಾಗಿ ಬೇಯಿಸಿದೆ. ಅಲ್ಲದೆ ಬೇರೆಬೇರೆ ಬಟ್ಟಲುಗಳಲ್ಲಿ ಬೇಕಾದಾಗ ಹಾಕಿಕೊಳ್ಳಲು ಮೊಸರನ್ನೂ ಜೇನುತುಪ್ಪವನ್ನೂ ತುಪ್ಪವನ್ನೂ ಹಾಲನ್ನೂ ಇಟ್ಟಿದೆ. ಕುಡಿಯುವುದಕ್ಕೇ ಬೇರೆ ಘಮಘಮಿಸುವ ನೀರನ್ನೂ ಇಟ್ಟಿದೆ. ಇನ್ನೊಂದು ತಟ್ಟೆಯಲ್ಲಿ ತಾಂಬೂಲಕ್ಕಾಗಿ ಎಲೆ ಅಡಿಕೆ ಸುಣ್ಣಗಳನ್ನೂ ಇಟ್ಟಿದೆ ಎಂದೂ, ಭಗವಂತ ಇದನ್ನೆಲ್ಲಾ ಸ್ವೀಕರಿಸುತ್ತಾನೆಂದೂ ಪ್ರತಿನಿತ್ಯವೂ ಮನಸ್ಸಿನಲ್ಲಿಯೇ ಸಂಕಲ್ಪಿಸಿ ಸಮರ್ಪಿಸಬೇಕು. ಪರಮಾತ್ಮ ಅಷ್ಟರಿಂದಲೇ ತೃಪ್ತನಾಗುತ್ತಾನೆ. (ಆದರೆ ಚಾತುರ್ಮಾಸ್ಯಕಾಲದಲ್ಲಿ ಒಂದೊಂದು ತಿಂಗಳಲ್ಲಿ ಒಂದೊಂದು ಪದಾರ್ಥ ನಿಷಿದ್ಧವೆನಿಸುವುದರಿಂದ —ಚಾತುರ್ಮಾಸ್ಯದ ನಾಲ್ಕು ತಿಂಗಳಲ್ಲೂ ಈ ಶ್ಲೋಕವನ್ನು ಹೇಳಬಾರದು. ಪ್ರಮಾಣ: 'ಚಾತುರ್ಮಾಸ್ಯೇ ನೈವೇದ್ಯಸಮರ್ಪಣಕಾಲೇ 'ಸಾಜ್ಯ'ಮಿತಿ ಮಂತ್ರೋ ನ ಪಠನೀಯ ಇತಿ ಭಾತಿ' [ಪೂಜಾಕಲ್ಪಲತಾ — ಶ್ರೀ ಪ್ರಭಂಜನರ 'ಪದ್ಯಮಾಲಾ' ಪುಟ ೭೩])

ಇಷ್ಟೇ ಅಲ್ಲದೆ 'ಭೀಮಸೇನದೇವರ ಮಾನಸಪೂಜಾಪದ್ಧತಿ'*ಯಲ್ಲಿ ನಾನಾವಿಧವಾದ ಕಡುಬು, ಚಕ್ಕುಲಿ ಮೊದಲಾದ ಭಕ್ಷ್ಯಗಳನ್ನೂ, ವಿಧವಿಧವಾದ ಅಡಿಗೆಗಳನ್ನೂ ವಿವಿಧ ಫಲಗಳನ್ನೂ ಮಾನಸಿಕವಾಗಿಯೇ ಸಮರ್ಪಿಸಬೇಕೆಂದು ಹೇಳಿದೆ.

ಭಗವಂತನಿಗೆ ಮೇಲೆ ಹೇಳಿದ ವಿಧಾನದಿಂದ ಆಪೋಶನವನ್ನು ಹಾಕಿದ ಬಳಿಕ ಭಗವಂತನಿಗೆ ಪಂಚಪ್ರಾಣಾಹುತಿಗಳನ್ನು ಕೊಡಬೇಕು ಆ ಕ್ರಮವನ್ನು 'ಪದ್ಯಮಾಲಾ' ದಲ್ಲಿ ಹೀಗೆ ವರ್ಣಿಸಿದೆ—

ಪಂಚಪ್ರಾಣಾಹುತಿಗಳನ್ನು ಕೊಡುವ ಕ್ರಮ

ಈ ವಿಷಯದಲ್ಲಿ "ತತಃ ಪ್ರಾಣಾದ್ಯಾಹುತಯೋ ಹೋತವ್ಯಾಃ ಪರಮಾತ್ಮನಿ" -ಅನಂತರ (ಆಪೋಶನ ಹಾಕಿದ ನಂತರ) ಭಗವಂತನಿಗೆ ಪ್ರಾಣಾದಿ ಪಂಚಪ್ರಾಣಾಹುತಿ

---

* ಈ ಮಾನಸಪೂಜಾ ಕ್ರಮವನ್ನು ಕನ್ನಡಾರ್ಥಸಹಿತವಾಗಿ ಡಾ। ಬಿ. ವಿ. ರಾಘವೇಂದ್ರ ರಾವ್, 88/62, ಈಸ್ಟ್ ಎಂಡ್ ಬಿ ಮೇನ್ ರೋಡ್, ಜಯನಗರ ಒಂಬತ್ತನೇ ಬ್ಲಾಕ್, ಬೆಂಗಳೂರು-560069 ಇವರು ಮುದ್ರಿಸಿ ಪ್ರಕಟಿಸಿದ್ದಾರೆ. ಅದರ ಮೂಲಪಾಠವನ್ನು ಮಾತ್ರ ಕಾಶೀಕ್ಷೇತ್ರದ ಗೋಪಾಲಾಚಾರ್ಯ ಟೋಣಪೆ ಇವರು ಪ್ರಕಟಿಸಿದ 'ವೈಷ್ಣವದೇವಪೂಜಾಪದ್ಧತಿ'ಯಲ್ಲೂ ಕೊನೆಯಲ್ಲಿ ಕೊಟ್ಟಿದ್ದಾರೆ.

ಗಳನ್ನೂ ಕೊಡಬೇಕೆಂದು ಹಾರೀತವಚನವಿದೆಯೆಂದು ಲ. ನಾ. ಉಪಾಧ್ಯಾಯರ 'ಸದಾಚಾರಸ್ಮೃತಿ'ಯ ವ್ಯಾಖ್ಯಾನದಲ್ಲಿ ಕೊಟ್ಟಿದ್ದಾರೆ. ಮೊದಲು 'ಪದ್ಯಮಾಲಾ'ದಲ್ಲಿ ಏನು ಹೇಳಿದ್ದಾರೆ ನೋಡೋಣ—

ತತಃ ಪ್ರಾಣಾತ್ಮನೇ ಪೂರ್ವ—ಮುಕ್ತ್ವಾ ನಾರಾಯಣಾಯ ಚ ।
ಸ್ವಾಹಾಂತಮಿತಿ ಪಂಚೈತಾ ಆಹುತೀಃ ಕ್ರಮಶೋ ವದನ್ ॥೧೦೬॥
ಶಂಖತೋಽಯಂ ಕ್ಷಿಪೇತ್ ಪಾತ್ರೇ ಪ್ರತ್ಯಾಹುತ್ಯೈಕಪಾತ್ರಕಮ್ ।
'ಮಧುವಾತಾ' ತಥಾ 'ಸ್ವಾದು' 'ಭೋಜಂ ತ್ವೇ'ತಿ
ಪಠೇದೃಚಃ ॥೧೦೭॥

ಶಬ್ದಾರ್ಥ— ಪೂರ್ವಂ ಉಕ್ತ್ವಾ—ಪ್ರಾಣಾತ್ಮನೇ, ಅಪಾನಾತ್ಮನೇ, ವ್ಯಾನಾತ್ಮನೇ, ಉದಾನಾತ್ಮನೇ, ಸಮಾನಾತ್ಮನೇ ಎಂದು ಪಂಚಪ್ರಾಣರ ಹೆಸರುಗಳನ್ನೂ ಕ್ರಮವಾಗಿ ಹೇಳಿಕೊಂಡು ಎಂದರ್ಥ. ನಾರಾಯಣಾಯ ಎಂಬುದು 'ನಾರಾಯಣೇದಂ ನ ಮಮ'—ಇದು ನಾರಾಯಣನಿಗೆ ಸೇರಿದ್ದು, ನನ್ನದಲ್ಲ, ಎಂಬ ತ್ಯಕ್ತಮಂತ್ರವನ್ನು ಸೂಚಿಸುತ್ತದೆ. ಶ್ರೀ ಕೃಷ್ಣಂಜನರು ಇದನ್ನು 'ಪ್ರಾಣಾತ್ಮನೇ ಶ್ರೀ ನಾರಾಯಣಾಯ ಸ್ವಾಹಾ' ಎಂದು ಅನ್ವಯಿಸಿಕೊಂಡು ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ಕ್ರಮದಿಂದ ಪ್ರಾಣಾದಿ ಪಂಚಕದಲ್ಲಿರುವ ಭಗವನ್ಮೂರ್ತಿಗಳನ್ನು ಹೇಳಿದ್ದಾರೆ. ಕುಂಭಕೋಣದ ಗುರುರಾಜಾಚಾರ್ಯರ 'ದೇವತಾರ್ಚನ ಪದ್ಧತಿ'ಯಲ್ಲೂ ಈ ಕ್ರಮದಲ್ಲೇ ಕೊಟ್ಟಿದ್ದಾರೆ. ಆದರೆ ಉಡುಪಿಯ 'ಆಹ್ನಿಕಮಂಜರಿ,' ಪಾವಂಜೆ ಗುರುರಾಯರ 'ದೇವಪೂಜಾಪದ್ಧತಿ', ತೆಲುಗು 'ಆಹ್ನಿಕಮಂಜರಿ', ಗೋಪಾಲಾಚಾರ್ಯರ 'ವೈಷ್ಣವ ದೇವಪೂಜಾ ಪದ್ಧತಿ', ನಮ್ಮ ಹಿರಿಯರು ಬರೆದಿರುವ 'ದೇವತಾರ್ಚನವಿಧಿ' ಎಲ್ಲದರಲ್ಲೂ ಪ್ರಾಣಾದಿ ಪಂಚರೂಪಗಳಲ್ಲಿ ಅನಿರುದ್ಧಾದಿ ಪಂಚ ಭಗವನ್ಮೂರ್ತಿಗಳನ್ನೇ ಕೊಟ್ಟಿದ್ದಾರೆ. ಯದ್ಯಪಿ ಭಗವನ್ಮೂರ್ತಿಗಳಲ್ಲಿ ಪರಸ್ಪರ ಭೇದವಿಲ್ಲದಿದ್ದರೂ ಕ್ರಮದಲ್ಲಿ ಮಾತ್ರ ವ್ಯತ್ಯಾಸವುಂಟು. ಯಾರಿಗೆ ಯಾವ ಕ್ರಮ ಉಪದೇಶವಾಗಿದೆಯೋ ಅವರು ಅದೇ ಕ್ರಮವನ್ನು ಅನುಸರಿಸಿ ಪ್ರಾಣಾಹುತಿಗಳನ್ನು ಕೊಡಬೇಕು. ಒಂದು ದಿನ ನಾರಾಯಣಾದಿ ಕ್ರಮದಲ್ಲಿ ಮಾಡಿ ಮತ್ತೊಂದು ದಿನ ಅನಿರುದ್ಧಾದಿ ಕ್ರಮ ಹೀಗೆ ಮಾತ್ರ ಮಾಡುವುದು ಯೋಗ್ಯವಲ್ಲ. ಯಾವುದಾದರೂ ಒಂದು ಕ್ರಮವನ್ನೇ ಕ್ಲುಪ್ತವಾಗಿ ಅನುಸರಿಸಬೇಕು.

ಶ್ಲೋಕಗಳ ಭಾವಾರ್ಥ— ಅನಂತರ ಎಂದರೆ ಆಪೋಶನ ಕೊಟ್ಟು ಉಳಿದ ನೀರನ್ನು ಬೇರೆ ಪಾತ್ರೆಯಲ್ಲಿ ಹಾಕಿದ ಬಳಿಕ, (ಶಂಖಕ್ಕೆ ನೀರನ್ನು ಹಾಕಿಕೊಂಡು) ಪ್ರಾಣಾತ್ಮನೇ, ಅಪಾನಾತ್ಮನೇ ಇತ್ಯಾದಿ ಪಂಚಪ್ರಾಣರ ಹೆಸರುಗಳನ್ನು ಹೇಳುತ್ತಾ ನಾರಾಯಣಾದಿ ಪಂಚಭಗವದ್ರೂಪಗಳ ಅಥವಾ ಅನಿರುದ್ಧಾದಿ ಪಂಚರೂಪಗಳನ್ನು

ಹೇಳಿ 'ಸ್ವಾಹಾ' ಎಂದು ಹೇಳಿ (ಎಂದರೆ ಪ್ರಾಣಾತ್ಮನೇ ಶ್ರೀ ನಾರಾಯಣಾಯ ಸ್ವಾಹಾ ಅಥವಾ ಶ್ರೀ ಪ್ರಾಣಾತ್ಮನೇ ಶ್ರೀ ಅನಿರುದ್ಧಾಯ ಸ್ವಾಹಾ) ಎಂದು ಕ್ರಮವಾಗಿ ಸ್ವಾಹಾಂತವಾಗಿ ಹೇಳುತ್ತಾ ಒಂದೊಂದು ಮಂತ್ರಕ್ಕೂ ಒಂದೊಂದು ಸಾರಿ ಶಂಖದಲ್ಲಿನ ನೀರನ್ನು ಬೇರೆ ಪಾತ್ರೆಯಲ್ಲಿ ಹಾಕುತ್ತಾ ಪ್ರಾಣಾಹುತಿಗಳನ್ನು ಕೊಡಬೇಕು. ಮತ್ತು ಪ್ರತಿಯೊಂದು ಆಹುತಿಗೂ 'ನಾರಾಯಣಾಯೇದಂ ನ ಮಮ' ಎಂದು ತ್ಯಾಗಮಂತ್ರವನ್ನೂ ಹೇಳಬೇಕು. ಆಮೇಲೆ "ಮಧು ವಾತಾ ಋತಾಯತೇ", "ಸ್ವಾದುಃ ಪವಸ್ವ", "ಭೋಜಂ ತ್ವಾ" ಎಂಬ ಋಕ್ಕುಗಳನ್ನು ಪಠಿಸಬೇಕು.

ನಮ್ಮ ಹಿರಿಯರು ಬರೆದಿಟ್ಟಿರುವ ಪುಸ್ತಕದಲ್ಲಿ ಈ ಪ್ರಾಣಾದಿ ಪಂಚಾಹುತಿ ಮಂತ್ರಗಳು ಸ್ವಲ್ಪ ಉದ್ದವಾಗಿವೆ. ಆದ್ದರಿಂದ ಅದನ್ನು ಮೊದಲು ಕೊಟ್ಟು ಸಂಕ್ಷೇಪಕ್ರಮವನ್ನು ಅನಂತರ ತೋರಿಸುವೆನು.

ಪಂಚಪ್ರಾಣಾಹುತಿ ಮಂತ್ರಗಳು (ವಿಸ್ತಾರಕ್ರಮ)

೧. ಓಂ ಪ್ರಾಣಸ್ಥಾಯ ಪ್ರಾಣಪ್ರೇರಕಾಯ ಪ್ರಾಣರೂಪಿಣೇ ಪ್ರಾಣನಾಮ್ನೇ ಏಕೀಭೂತಾವತಾರಾಯ ಶಾಂತಿರೂಪರಮಾಯುಜೇ ಪ್ರಾಣಾತ್ಮನೇ ಶ್ರೀ ಅನಿರುದ್ಧಾಯ ಸ್ವಾಹಾ । ಶ್ರೀ ಅನಿರುದ್ಧಾಯೇದಂ ನ ಮಮ ॥

೨. ಓಂ ಅಪಾನಸ್ಥಾಯ ಅಪಾನಪ್ರೇರಕಾಯ ಅಪಾನರೂಪಿಣೇ ಅಪಾನನಾಮ್ನೇ ಏಕೀಭೂತಾವತಾರಾಯ ಕೃತಿರೂಪರಮಾಯುಜೇ ಅಪಾನಾತ್ಮನೇ ಶ್ರೀ ಪ್ರದ್ಯುಮ್ನಾಯ ಸ್ವಾಹಾ । ಶ್ರೀ ಪ್ರದ್ಯುಮ್ನಾಯೇದಂ ನ ಮಮ ॥

೩. ಓಂ ವ್ಯಾನಸ್ಥಾಯ ವ್ಯಾನಪ್ರೇರಕಾಯ ವ್ಯಾನರೂಪಿಣೇ ವ್ಯಾನನಾಮ್ನೇ ಏಕೀಭೂತಾವತಾರಾಯ ಜಯಾರೂಪರಮಾಯುಜೇ ವ್ಯಾನಾತ್ಮನೇ ಶ್ರೀ ಸಂಕರ್ಷಣಾಯ ಸ್ವಾಹಾ । ಶ್ರೀ ಸಂಕರ್ಷಣಾಯೇದಂ ನೈವೇದ್ಯಂ ಸಮರ್ಪಯಾಮಿ । ಶ್ರೀ ಸಂಕರ್ಷಣಾಯೇದಂ ನ ಮಮ ॥

೪. ಓಂ ಉದಾನಸ್ಥಾಯ ಉದಾನಪ್ರೇರಕಾಯ ಉದಾನರೂಪಿಣೇ ಉದಾನನಾಮ್ನೇ ಏಕೀಭೂತಾವತಾರಾಯ ಮಾಯಾರೂಪರಮಾಯುಜೇ

ಉದಾನಾತ್ಮನೇ ಶ್ರೀ ವಾಸುದೇವಾಯ ಸ್ವಾಹಾ । ಶ್ರೀ ವಾಸುದೇವಾಯೇದಂ ನೈವೇದ್ಯಂ ಸಮರ್ಪಯಾಮಿ । ಶ್ರೀ ವಾಸುದೇವಾಯೇದಂ ನ ಮಮ ॥

೫. ಓಂ ಸಮಾನಸ್ಥಾಯ ಸಮಾನಪ್ರೇರಕಾಯ ಸಮಾನರೂಪಿಣೇ ಸಮಾನನಾಮ್ನೇ ಏಕೀಭೂತಾವತಾರಾಯ ಶ್ರೀರೂಪರಮಾಯುಜೇ ಸಮಾನಾತ್ಮನೇ ಶ್ರೀ ನಾರಾಯಣಾಯ ಸ್ವಾಹಾ । ಓಂ ನಮೋ ನಾರಾಯಣಾಯ ಸ್ವಾಹಾ । ಇದಂ ನೈವೇದ್ಯಂ ಸಮರ್ಪಯಾಮಿ । ನಾರಾಯಣಾಯೇದಂ ನ ಮಮ ॥

ಮೇಲಿನ ಮಂತ್ರಗಳಲ್ಲಿರುವ ಪದಗಳ ಅರ್ಥ ಸುಲಭವಾಗಿಯೇ ಇದೆ. ಭಗವಂತ ಪ್ರಾಣಾದಿ ಪಂಚ ವಾಯುರೂಪಗಳಲ್ಲೂ ಪಂಚಪ್ರಾಣರಲ್ಲೂ ಆಯಾ ನಾಮಗಳಿಂದಲೇ ಇದ್ದು ಅವರಿಗೆ ಪ್ರೇರಕನಾಗಿ (ಅಂತರ್ಯಾಮಿಯಾಗಿ) ಅನಿರುದ್ಧಾದಿ ಪಂಚರೂಪಗಳಿಂದ ಇದ್ದು ಆಯಾ ಕಾರ್ಯ ನಡೆಸುತ್ತಾನೆ. ಹೀಗೆ ಪಂಚರೂಪದಿಂದ ಇದ್ದರೂ ಅವನು ಒಬ್ಬನೇ, ಭಿನ್ನ-ಭಿನ್ನ ಅಲ್ಲ (ಏಕೀಭೂತಾವತಾರಾಯ). ಐದು ರೂಪಗಳಲ್ಲೂ ಶಾಂತಿ-ಕೃತಿ ಮೊದಲಾದ ಲಕ್ಷ್ಮೀದೇವಿಯ ಭಿನ್ನ-ಭಿನ್ನ ರೂಪಗಳಿಂದ ಸಮೇತನಾಗಿದ್ದಾನೆ. (ರಮಾರೂಪ-ಲಕ್ಷ್ಮೀರೂಪದಿಂದ, ಯುಜೇ-ಕೂಡಿದವನಾದ. ಯುಜ್ ಧಾತುವಿಗೆ ಸೇರಿಸು, ಜೋಡಿಸು ಎಂದರ್ಥ.)

ಸಂಕ್ಷೇಪರೂಪದ ಪ್ರಾಣಾಹುತಿ ಮಂತ್ರಗಳು

೧. ಓಂ ಪ್ರಾಣಾಯ ಸ್ವಾಹಾ । ಪ್ರಾಣಾತ್ಮನೇ ಶಾಂತಿಪತಿ ಶ್ರೀ ಅನಿರುದ್ಧಾಯೇದಂ ನ ಮಮ ।

೨. ಓಂ ಅಪಾನಾಯ ಸ್ವಾಹಾ। ಅಪಾನಾತ್ಮನೇ ಕೃತಿಪತಿ ಶ್ರೀ ಪ್ರದ್ಯುಮ್ನಾಯೇದಂ ನ ಮಮ ।

೩. ಓಂ ವ್ಯಾನಾಯ ಸ್ವಾಹಾ। ವ್ಯಾನಾತ್ಮನೇ ಜಯಾಪತಿ ಶ್ರೀ ಸಂಕರ್ಷಣಾಯೇದಂ ನ ಮಮ ।

೪. ಓಂ ಉದಾನಾಯ ಸ್ವಾಹಾ। ಉದಾನಾತ್ಮನೇ ಮಾಯಾಪತಿ ಶ್ರೀ ವಾಸುದೇವಾಯೇದಂ ನ ಮಮ ।

೫. ಓಂ ಸಮಾನಾಯ ಸ್ವಾಹಾ। ಸಮಾನಾತ್ಮನೇ ಶ್ರೀಪತಿ ಶ್ರೀ ನಾರಾ-ಯಣಾಯೇದಂ ನ ಮಮ ॥

(ಎಂದು ಹೇಳುತ್ತಾ ಶಂಖೋದಕವನ್ನು ಬೇರೆ ಪಾತ್ರೆಯಲ್ಲಿ ಹಾಕುತ್ತಾ ಹೋಗಬೇಕು.)

ವ್ಯುತ್ಕ್ರಮದಿಂದ ಪ್ರಾಣಾಹುತಿ ಮಂತ್ರಗಳು

(ಶ್ರೀ ಪ್ರಭಂಜನರ ಮತ್ತು ಕುಂಭಘೋಣದ ಗುರುರಾಜಾಚಾರ್ಯರ ಕ್ರಮದಂತೆ)

೧. ಓಂ ಪ್ರಾಣಾತ್ಮನೇ ಶ್ರೀ ನಾರಾಯಣಾಯ ಸ್ವಾಹಾ। ಪ್ರಾಣಾತ್ಮನೇ ಶ್ರೀ ನಾರಾಯಣಾಯೇದಂ ನ ಮಮ। ಅಥವಾ ಪ್ರಾಣಾಯ ಸ್ವಾಹಾ ನಾರಾಯಣಾಯೇದಂ ನ ಮಮ॥

೨. ಓಂ ಅಪಾನಾತ್ಮನೇ ಶ್ರೀ ವಾಸುದೇವಾಯ ಸ್ವಾಹಾ। ಅಪಾನಾತ್ಮನೇ ಶ್ರೀ ವಾಸುದೇವಾಯೇದಂ ನ ಮಮ। ಅಥವಾ ಅಪಾನಾಯ ಸ್ವಾಹಾ ವಾಸುದೇವಾಯೇದಂ ನ ಮಮ॥

೩. ಓಂ ವ್ಯಾನಾತ್ಮನೇ ಶ್ರೀ ಸಂಕರ್ಷಣಾಯ ಸ್ವಾಹಾ। ವ್ಯಾನಾತ್ಮನೇ ಶ್ರೀ ಸಂಕರ್ಷಣಾಯೇದಂ ನ ಮಮ। ಅಥವಾ ವ್ಯಾನಾಯ ಸ್ವಾಹಾ ಸಂಕರ್ಷಣಾಯೇದಂ ನ ಮಮ॥

೪. ಓಂ ಉದಾನಾತ್ಮನೇ ಶ್ರೀ ಪ್ರದ್ಯುಮ್ನಾಯ ಸ್ವಾಹಾ। ಉದಾನಾತ್ಮನೇ ಶ್ರೀ ಪ್ರದ್ಯುಮ್ನಾಯೇದಂ ನ ಮಮ। ಅಥವಾ ಉದಾನಾಯ ಸ್ವಾಹಾ ಪ್ರದ್ಯುಮ್ನಾಯೇದಂ ನ ಮಮ॥

೫. ಓಂ ಸಮಾನಾತ್ಮನೇ ಶ್ರೀ ಅನಿರುದ್ಧಾಯ ಸ್ವಾಹಾ। ಸಮಾನಾತ್ಮನೇ ಶ್ರೀ ಅನಿರುದ್ಧಾಯೇದಂ ನ ಮಮ। ಅಥವಾ ಸಮಾನಾಯ ಸ್ವಾಹಾ ಅನಿರುದ್ಧಾಯೇದಂ ನ ಮಮ॥

೬. (ಕುಂಭಕೋಣ ಪುಸ್ತಕದಲ್ಲಿ ಹೆಚ್ಚಿಗೆ) ಓಂ ಬ್ರಹ್ಮಣೇ ಸ್ವಾಹಾ। ಬ್ರಹ್ಮಣ ಇದಂ ನ ಮಮ॥

ಹೀಗೆ ಈ ಐದು ಮಂತ್ರಗಳಿಂದ ಪ್ರಾಣಾಹುತಿಯನ್ನು ಕೊಟ್ಟಮೇಲೆ (ಶಂಖದಿಂದ ಐದು ಸರಿ ಬೇರೆ ಪಾತ್ರೆಗೆ ನೀರು ಹಾಕಿದ ಬಳಿಕ) 'ಮಧು ವಾತಾ ಋತಾಯತೇ'

(ಋಗ್ವೇದ 1ನೇ ಮಂ., 90 ಸೂ., 6-8 ಋಕ್ಕುಗಳು) ಎಂಬ ಜೇನುತುಪ್ಪ ಅಭಿಷೇಕ ಮಾಡುವಾಗ ಹೇಳುವ ಮಂತ್ರವನ್ನೂ "ಸ್ವಾದುಃ ಪವಸ್ವ" (ಋ. 9-85-6) ಎಂಬ ಸಕ್ಕರೆ ಅಭಿಷೇಕ ಮಾಡುವಾಗ ಹೇಳುವ ಮಂತ್ರವನ್ನೂ ಪಠಿಸಬೇಕು. (ಈ ಎರಡು ಮಂತ್ರಗಳ ಅರ್ಥವನ್ನೂ ಅಭಿಷೇಕ ಕಲಾಪದಲ್ಲಿ ಹೇಳಲಾಗಿದೆ.) ಆಮೇಲೆ "ಭೋಜಂ ತ್ವಾಂ" ಎಂಬ ಕೆಳಗಿನ ಋಙ್ಮಂತ್ರವನ್ನೂ ಪಠಿಸಬೇಕು.

i) ಓಂ ಭೋಜಂ ತ್ವಾಮಿಂದ್ರ ವಯಂ ಹುವೇಮ
ದದಿಷ್ಟ್ವಮಿಂದ್ರಾಪಾಂಸಿ ವಾಜಾನ್ ।
ಅವಿಡ್ಢೀಂದ್ರ ಚಿತ್ರಯಾ ನ ಊತೀ
ಕೃಧಿ ವೃಷನ್ನಿಂದ್ರ ವಸ್ಯಸೋ ನಃ ॥

(ಋ. 2 ಮಂ., 17 ಸೂ., 8 ಋ. ಅಥವಾ ೨ ಅಷ್ಟ., ೬ ಅಧ್ಯಾ., ೨೦ ವರ್ಗ)

ಇದೇ ರೀತಿ ಕೆಳಗಿನ ಮಂತ್ರಗಳನ್ನೂ ಪಠಿಸಬೇಕೆಂದು ಉಡುಪಿಯ ಆಹ್ನಿಕ-ಮಂಜರಿಯಲ್ಲೂ 'ದೇವಪೂಜಾಪದ್ಧತಿ'ಯಲ್ಲೂ ಕೊಟ್ಟಿದೆ.

ii) ಓಂ ಅಂತಶ್ಚರತಿ ಭೂತೇಷು ಗುಹಾಯಾಂ ಸರ್ವತೋ ಮುಖಃ।
ತ್ವಂ ಯಜ್ಞಸ್ತ್ವಂ ವಷಟ್ಕಾರ— ಸ್ತ್ವಂ ವಿಷ್ಣುಃ ಪುರುಷಃ ಪರಃ॥

iii) ಓಂ ಯಾ ವಾಂ ಕಶಾ ಮಧುಮ—ತ್ಯಶ್ವಿನಾ ಸೂನೃತಾವತೀ ।
ತಯಾ ಯಜ್ಞಂ ಮಿಮಿಕ್ಷತಮ್ ॥

(ಋ. I, 22.3; ಅಷ್ಟ. ೧. ೨ ಅ., ೪ ವ.)

iv) ಓಂ ಯೇ ದೇವಾಸೋ ದಿವ್ಯೇಕಾದಶ ಸ್ಥ
ಪೃಥಿವ್ಯಾಮಧ್ಯೇಕಾದಶ ಸ್ಥ।

ಅಪ್ಸುಕ್ಷಿತೋ ಮಹಿನೈಕಾದಶ ಸ್ಥ

ತೇ ದೇವಾಸೋ ಯಜ್ಞಮಿಮಂ ಜುಷಧ್ವಮ್ ||

(ಋ. ೧ ಮಂ., ೧೩೯ ಸೂ., ೧೧ ಋ. ಅಥವಾ ೨ ಅಷ್ಟ., ೨ ಅ., ೬ ವರ್ಗ)

v) ಓಂ ಚಂದ್ರಮಾ ಮನಸೋ ಜಾತ—

ಶ್ಚಕ್ಷೋಃ ಸೂರ್ಯೋ ಅಜಾಯತ |

ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ ವಾಯುರಜಾಯತ ||

(ಋ. ೧೦ ಮಂ, ೯೦ ಸೂ., ೧೩ ಮಂ;
ಪುರುಷಸೂಕ್ತ ಋಗ್ವೇದಪಾಠದಲ್ಲಿ 13ನೇ ಮಂತ್ರ)

ಈ ಮಂತ್ರಗಳ ಅರ್ಥ

i) ಪದವಿಭಾಗ— ದದಿಷ್ವ...ಪಾಂಸಿ-ದದಿಃ, ತ್ವಂ, ಇಂದ್ರ, ಅಪಾಂಸಿ.
ಅವಿಡ್ಢೀಂದ್ರ-ಅವಿಡ್ಢಿ + ಇಂದ್ರ

(ಸೂಚನೆ—

ಈ ಮೊದಲನೇ "ಭೋಜಂ ತ್ವಾಂ" ಋಕ್ಕಿನಲ್ಲಿರುವ ಇಂದ್ರ ಶಬ್ದವು ದೇವೇಂದ್ರನ ಪರವಾಗಿಯೂ, ಮುಖ್ಯವೃತ್ತಿಯಿಂದ ಇಂದ್ರಾಂತರ್ಗತ ಮುಖ್ಯಪ್ರಾಣದೇವರ ಪರವಾಗಿಯೂ, ಪರಮಮುಖ್ಯವೃತ್ತಿಯಿಂದ ಇಂದ್ರಾಂತರ್ಗತ ಇಂದ್ರನಿಯಾಮಕ, ಇಂದ್ರ-ನಾಮಕ ಶ್ರೀವಿಷ್ಣುವಿಗೂ ಅನ್ವಯಿಸುತ್ತದೆ. 'ಇದಿ ಪರಮೈಶ್ವರ್ಯೇ' ಎಂಬ ಧಾತುವಿನಿಂದ ಪರಮೈಶ್ವರ್ಯಶಾಲಿಯಾದ್ದರಿಂದ ದೇವೇಂದ್ರನಿಗೆ ಅನ್ವಯಿಸುತ್ತದೆ. ಶ್ರೀಹರಿ ಪರವಾಗಿ ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ಪ್ರಥಮಾಧ್ಯಾಯದ ಎರಡನೇ ಸೂಕ್ತದಲ್ಲಿ ಹೀಗೆ ನಿರುಕ್ತಿ ಹೇಳಿದ್ದಾರೆ— 'ಇಂದ್ರಃ ಸ ಪರಮೈಶ್ವರ್ಯಾತ್ ಇದಮುದ್ದಿಶ್ಯ ಚ ದ್ರುತೇಃ | ದರ್ಶನಾದಂ ದೀಪ್ತಿಮತ್ವಾತ್ ಇದಂ ರಾತೀತಿ ವಾ ಭವೇತ್ |' ಎಂದು ಹೇಳಿದ್ದಾರೆ. ಅದರಂತೆ 1) ನಿರುಪಚರಿತಪರಮೈಶ್ವರ್ಯಶಾಲಿಯಾದ್ದರಿಂದ ಇಂದ್ರನೆಂದು ಹೆಸರು. ಇದ್ (ಇಂದ್) ಧಾತುವಿನ ಮೇಲೆ ಔಣಾದಿಕ 'ರ'. ಪ್ರತ್ಯಯ ಬಂದಿದೆ. 2) ಇದಂ ಎಂದರೆ ವಿಷಯಗಳ ಸಮೂಹವನ್ನು ಕುರಿತು ದ್ರು-ಧಾವಿಸುವುದರಿಂದ ಎಂದರೆ ಸರ್ವವಿಷಯಗಳನ್ನು ಭೋಗಿಸುವುದರಿಂದಲೂ ಇಂದ್ರ. ಇದಂ + ದ್ರು-ಇಂದ್ರ. 3)

ಇದಂ-ಈ ಸಕಲವನ್ನೂ, ದೃಶ್-ನೋಡುವುದರಿಂದಲೂ ಇಂದ್ರ. ಇದಂ+ದೃಶ್. 4) ಇಂಧೀ ದೀಪ್ತೌ ಎಂದು ಧಾತುಪಾಠವಿರುವುದರಿಂದ ಇಂಧೇ-ಪ್ರಕಾಶತೇ ಇತಿ ಚ ಇಂದ್ರ; ಪ್ರಕಾಶಿಸುವುದರಿಂದಲೂ ಇಂದ್ರ. ಇಂಧ್+ರ ಪ್ರತ್ಯಯ. ನಿರುಕ್ತಿನಿಯಮದಂತೆ ಧ ಕಾರಕ್ಕೆ ದ-ಕಾರಾದೇಶ ಬಂದಿದೆ. 5) ಇದಂ-ಅಭೀಷ್ಟಂ ರಾತಿ-ದದಾತೀತಿ ವಾ ಇಂದ್ರಃ. ಇದಂ-ಇದನ್ನು ಎಂದರೆ ಅಭೀಷ್ಟವನ್ನು, ರಾ ಎಂದರೆ ಕೊಡುತ್ತಾನಾದ್ದರಿಂದಲೂ ಇಂದ್ರಃ. ಇದಂ+ರ ಸೇರಿದಾಗ ಇದಂ ಎಂಬುದು ಇಂದ್ ಎಂದು ವ್ಯತ್ಯಾಸವಾಗುತ್ತದೆ. (ಋಗ್ಭಾಷ್ಯ ಟೀಕಾನುಸಾರ ಅರ್ಥ) ಈ ಅರ್ಥಗಳೆಲ್ಲ ಸ್ವಲ್ಪಮಟ್ಟಿಗೆ ವಾಯುದೇವರಿಗೂ ಅನ್ವಯಿಸುತ್ತದೆ. ಆದ್ದರಿಂದ ಅವರಿಗೂ ಇಂದ್ರ ಹೆಸರು ಅನ್ವಯಿಸುತ್ತದೆ. ಅಂತೂ ಒಟ್ಟಿನಲ್ಲಿ ಪರಮೈಶ್ವರ್ಯಶಾಲಿಯಾದ್ದರಿಂದಲೂ, 2) ಸರ್ವ ವಿಷಯಗಳನ್ನು ಭೋಗಿಸುವುದರಿಂದಲೂ, 3) ಈ ಸಕಲವನ್ನೂ ನೋಡುವುದರಿಂದಲೂ, 4) ಪ್ರಕಾಶಿಸುವುದರಿಂದಲೂ, ಮತ್ತು 5) ಅಭೀಷ್ಟವನ್ನು ಕೊಡುವುದರಿಂದಲೂ ಆ ಭಗವಂತನಿಗೂ ವಾಯುದೇವರಿಗೂ ಇಂದ್ರನೆಂದು ಹೆಸರು.

(ಮಂತ್ರಾರ್ಥ) ಇಂದ್ರ-ಎಲೈ ದೇವತೆಗಳ ಒಡೆಯನಾದ ದೇವೇಂದ್ರನೇ ಇಂದ್ರಾಂತರ್ಗತ ಹೇ ಮುಖ್ಯಪ್ರಾಣದೇವರೇ, ಇಂದ್ರನಿಗೂ ಮುಖ್ಯಪ್ರಾಣನಿಗೂ ಪ್ರೇರಕನೂ ನಿಯಾಮಕನೂ ಅಂತರ್ಯಾಮಿಯೂ ಆದ ಅನಂತಕೋಟಿ ಬ್ರಹ್ಮಾಂಡಗಳ ಒಡೆಯನೂ ಪರಮೈಶ್ವರ್ಯಶಾಲಿಯೂ ಆದ ಹೇ ವಿಷ್ಣುವೇ! (ಇದೇ ರೀತಿ ಇಂದ್ರ ಎಂಬ ಸಂಬೋಧನೆ ಬಂದ ಕಡೆಯಲ್ಲೆಲ್ಲಾ ಅರ್ಥ ಹೇಳಬೇಕು.) ಭೋಜಂ-'ಭುಜ ಪಾಲನಾಭ್ಯವಹಾರಯೋಃ' ಎಂಬ ಧಾತುಪಾಠವಿರುವುದರಿಂದ (ರುಧಾದಿ. ಉಭಯಪದಿ) ಭುಜ್ (7 ಗ. ಉ. ಪ.) ಎಂದರೆ ರಕ್ಷಿಸು, ಊಟ ಮಾಡು ಅಥವಾ ತಿನ್ನು ಮತ್ತು ಭೋಗಿಸು ಎಂದು ಅರ್ಥವಿರುವುದರಿಂದ ಸಂರಕ್ಷಕನೂ, ಅನ್ನಾದಿ ಭೋಗಪ್ರದನೂ ಆದ, ತ್ವಾಂ-ನಿನ್ನನ್ನು, ವಯಂ-ನಾವುಗಳು, ಹುವೇಮ-ಹು ದಾನ ಅದನಯೋಃ (3 ಗ. ಪರ.) ಎಂದು ಧಾತುಪಾಠವಿರುವುದರಿಂದ ಹೋಮ ಮಾಡಿ ಆಹುತಿ ಕೊಡುತ್ತೇವೆ ಅರ್ಥಾತ್ ಆರಾಧಿಸುತ್ತೇವೆ ಎಂದರ್ಥ. ಹೇ ಇಂದ್ರ-ಎಲೈ ಇಂದ್ರನೇ (ವಿಷ್ಣುವೇ), ತ್ವಂ-ನೀನು, ಅಪಾಂಸಿ-ಅ ಸಮಂತಾತ್ ಪಾಲಯಂತಿ ಎಂದರೆ ಅ-ಚೆನ್ನಾಗಿ, ಪ-ರಕ್ಷಿಸತಕ್ಕವುಗಳಾದ್ದರಿಂದ ಅಪಃ ಎಂಬ ಕರ್ಮಗಳನ್ನೂ, ವಾಜಾನ್-ಅನ್ನವನ್ನೂ (ಅನ್ನೋದಕಗಳನ್ನೂ), ದದಿಃ-ಡುದಾಞ್ ದಾನೇ ಎಂಬ ಧಾತುವಿನಿಂದ ಕೊಡತಕ್ಕವನಾಗಿ (ದಾತನಾಗಿ)ದ್ದೀಯೆ. ಇಂದ್ರ-ಎಲೈ ದೇವೇಂದ್ರನೇ, (ಮುಖ್ಯಪ್ರಾಣನೇ ವಿಷ್ಣುವೇ), ಚಿತ್ರಯಾ-ನಾನಾ ಬಗೆಯಾದ, ಊತೀ-ರಕ್ಷಣಾಸಾಧನಗಳಿಂದ, ನಃ-ನಮ್ಮನ್ನು; ಅವಿಡ್ಢಿ-(ಅವ ರಕ್ಷಣೇ) ಕಾಪಾಡು. ವೃಷನ್-ಇಷ್ಟಾರ್ಥಗಳನ್ನು ವೃಷ್ಟಿಮಾಡುವ (ಸುರಿಸುವ), ಇಂದ್ರ-ಇಂದ್ರನೇ (ವಿಷ್ಣುವೇ)! ನಃ-ನಮ್ಮನ್ನು, ವಸ್ಯಸಃ-ಸಮೃದ್ಧರನ್ನಾಗಿ (ವಸು-ಧನ ಧಾನ್ಯಸಮೃದ್ಧಿ), ಕೃಧಿ-ಮಾಡು.

ತಾತ್ಪರ್ಯ— ಹೇ ದೇವೇಂದ್ರ, ತದಂತರ್ಗತ ಹೇ ಮುಖ್ಯಪ್ರಾಣ, ತದಂತರ್ಗತನೂ ಪರಮೈಶ್ವರ್ಯಶಾಲಿಯೂ ಆದ ಹೇ ವಿಷ್ಣುವೇ, ನಾವು ನಿನ್ನ ಪ್ರೀತ್ಯರ್ಥವಾಗಿ ನಿನ್ನ ಪೂಜಾರೂಪವಾದ ಯಜ್ಞಗಳನ್ನೂ ಜ್ಞಾನಯಜ್ಞವನ್ನೂ ತಪೋಯಜ್ಞವನ್ನೂ ಮಾಡುತ್ತೇವೆ. ನೀನು ನಮ್ಮನ್ನು ಜೀವನನಿರ್ವಹಣೆಗಾಗಿ ಬೇಕಾಗುವ ಉದ್ಯೋಗದಲ್ಲೂ ನಿನ್ನ ಸೇವಾರೂಪವಾದ ಸತ್ಕರ್ಮಾನುಷ್ಠಾನದಲ್ಲೂ ಪ್ರೇರಿಸುವವನಾಗು. ನಮ್ಮನ್ನು ಅನಿಷ್ಟಗಳಿಂದ ರಕ್ಷಿಸಿ ನಾವು ಧನ-ಧಾನ್ಯಸಮೃದ್ಧಿಯುಳ್ಳವರಾಗುವಂತೆ ಮಾಡು ಎಂದು ಭಾವ.

ii) 'ಓಂ ಅಂತಶ್ಚರಸಿ ಭೂತೇಷು......' (ಶ್ಲೋಕ ಪುಟ ೩೦೦ರಲ್ಲಿ)

(ಅರ್ಥ) ಹೇ ವಿಷ್ಣುವೇ, ನೀನು ಸರ್ವತೋಮುಖಃ-ಸರ್ವವ್ಯಾಪಿಯಾಗಿದ್ದು, ಭೂತೇಷು-ಪೃಥಿವ್ಯಾದಿ ಪಂಚಭೂತಗಳಲ್ಲೂ ಸಕಲ ಪ್ರಾಣಿಗಳಲ್ಲೂ, ಗುಹಾಯಾಂ-ಹೃದಯಗುಹೆಯಲ್ಲಿದ್ದು, ಅಂತಶ್ಚರಸಿ-ಅಂತರ್ಯಾಮಿಯಾಗಿ ಸರ್ವಪ್ರೇರಕನಾಗಿದ್ದೀಯೆ. ತ್ವಂ ಯಜ್ಞಃ-ನೀನೇ ಸಕಲ ಯಜ್ಞಭೋಕ್ತನು. ತಂ ವಷಟ್ಕಾರಃ-ನೀನೇ ಹೋಮದ್ರವ್ಯಗಳಾಗಿಯೂ ಹೋಮಸಾಧನಗಳಾಗಿಯೂ ಹೋಮಮಂತ್ರರೂಪನಾಗಿಯೂ ಇದ್ದೀಯೆ. ತ್ವಂ ವಿಷ್ಣುಃ-ನೀನೇ ವಿಷ್ಣುವು. ಪುರುಷಃ-ಪೂರ್ಣಷಡ್ಗುಣನೂ, ಪುರ-ದೇಹದಲ್ಲಿ, ಶ(ಷ)-ವಾಸ ಮಾಡುವವನೂ ಆಗಿದ್ದೀಯೆ. ಪರಃ-ದೇಹವು ನಾಶವಾದರೂ ನೀನು ನಾಶರಹಿತನಾಗಿ ಉತ್ತಮೋತ್ತಮನಾಗಿದ್ದೀಯೆ.

(ತಾತ್ಪರ್ಯ) ಹೇ ವಿಷ್ಣೋ, ನೀನೇ ಸರ್ವಾಂತರ್ಯಾಮಿಯಾಗಿ ಪೃಥಿವ್ಯಾದಿ ಪಂಚಭೂತಗಳಲ್ಲೂ ಸರ್ವಪ್ರಾಣಿಗಳಲ್ಲೂ ಇದ್ದು ಸಕಲ ಕಾರ್ಯಗಳನ್ನೂ ನಡೆಸುವಿಯಲ್ಲದೆ ಸಕಲ ಪ್ರಾಣಿಗಳ ಹೃದಯದಲ್ಲೂ ಅಂತರ್ಯಾಮಿಯಾಗಿದ್ದು ಅವುಗಳಿಂದ ಸಕಲ ಯಜ್ಞಭೋಕ್ತನೂ ಯಜ್ಞ ಮಾಡುವವನೂ, ಮಾಡಿಸುವವನೂ ಆಗಿದ್ದು ಸಕಲ ಯಾಗಸಾಧನೆಗಳಲ್ಲೂ ನೀನೇ ಸನ್ನಿಹಿತನಾಗಿರುವಿ. ನೀನು ಸರ್ವತ್ರ ವ್ಯಾಪ್ತನಾಗಿದ್ದರೂ ಪ್ರತಿಯೊಬ್ಬ ಪ್ರಾಣಿಯ ದೇಹದಲ್ಲೂ ನೆಲೆಸಿರುವಿಯಾದರೂ ಅವುಗಳ ದೇಹ ನಾಶವಾದರೂ ನೀನು ನಾಶರಹಿತನಾಗಿ ಏಕಪ್ರಕಾರವಾಗಿರುವಿ.

iii) 'ಯಾ ವಾಂ ಕಶಾ......' (ಶ್ಲೋಕ ಪುಟ ೩೦೧ರಲ್ಲಿ)

ಅವತಾರಿಕೆ— ಕಶಾ ಎಂದರೆ ಕುದುರೆ, ದನ ಮೊದಲಾದುವನ್ನು ಹೊಡೆಯುವ ಚಾವಟಿ. ಈ ಮಂತ್ರದಲ್ಲಿ ಚಾವಟಿಯಿಂದ ಯಜ್ಞದ ಪದಾರ್ಥಗಳನ್ನು ಮುಟ್ಟುವಂತೆ ಪ್ರಾರ್ಥಿಸಲಾಗಿದೆ (ಋಗ್ಭಾಷ್ಯ ಟೀಕಾ). ಹಾಗೆ ಮುಟ್ಟುವುದರಿಂದ ಏನು ಲಾಭವೆಂದರೆ ಭಾಷ್ಯಕಾರರು (ಮಧ್ವಾಚಾರ್ಯರು) ಹೇಳುತ್ತಾರೆ— 'ಕಶಯಾ ಸ್ಪೃಷ್ಟಿಮಾತ್ರೇಣ ಮಧುರಂ ಕುರುತೋಽಖಿಲಮ್ । ಅತೋ ಮಿಮಿಕ್ಷತಮಿಃ । (ಋಗ್ಭಾಷ್ಯ) ಅರ್ಥ— ಕಶೆಯಿಂದ—ಚಾವಟಿಯಿಂದ ಸ್ಪರ್ಶಮಾತ್ರ ಮಾಡೋಣದರಿಂದಲೇ (ಸ್ಪೃಷ್ಟಿ-ಸ್ಪರ್ಶ) ಅಶ್ವಿನೀದೇವತೆಗಳು ಸಕಲ ಪದಾರ್ಥಗಳನ್ನೂ ಮಧುರವನ್ನಾಗಿ (ಪವಿತ್ರವನ್ನಾಗಿ)

ಮಾಡುತ್ತಾರೆ. ಆದ್ದರಿಂದ ಅವರಿಬ್ಬರನ್ನೂ ಮಿಮಿಕ್ಷತಂ-ಸ್ಪರ್ಶ ಮಾಡಿ ಎಂದು ಈ ಮಂತ್ರದಲ್ಲಿ ಪ್ರಾರ್ಥಿಸಲಾಗಿದೆ. 'ಮಿಮಿಕ್ಷತಂ' ಎಂಬ ಪದದ ಅರ್ಥವನ್ನೇ ವಿವರಿಸುತ್ತಾರೆ—ಸ್ಪರ್ಶೋ ಮೇಕ್ಷಣಮುಚ್ಯತೇ (ಋಗ್ಭಾಷ್ಯ). 'ಮಿಕ್ಷಸ್ಪರ್ಶನೇ' ಎಂದು ಧಾತುಪಾಠವಿರುವುದರಿಂದ ಮಿಮಿಕ್ಷತಂ ಎಂದರೆ ನೀವಿಬ್ಬರೂ ಮುಟ್ಟಿ ಎಂದರ್ಥ. ಸ್ಪರ್ಶಕ್ಕೇ ಮೇಕ್ಷಣವೆಂದು ಹೆಸರು. ಸೂನೃತಾವತೀ ಎಂಬುದು 'ಕಶಾ' ಶಬ್ದಕ್ಕೆ ಹೇಗೆ ವಿಶೇಷಣವಾಗುತ್ತದೆಯೆಂಬುದನ್ನು ತೋರಿಸುತ್ತಾರೆ. 'ವೇದವಾಕ್ಯಸ್ತುತತ್ವೇನ ಕಶಾ ಸಾ ಸೂನೃತಾವತೀ ।' (ಋಗ್ಭಾಷ್ಯ). ಸೂನೃತಾವತೀ ಎಂದರೆ ವೇದವಾಕ್ಯದಿಂದ ಸ್ತುತಿಸಲ್ಪಡುವ ಎಂದರ್ಥ, ಆದ್ದರಿಂದ ವಿಶೇಷಣವಾಗುತ್ತದೆ. ಋಕ್ಕಿನಲ್ಲಿರುವ ಯಜ್ಞ ಪದ ಯಜ್ಞದಲ್ಲಿ ಉಪಯೋಗಿಸಲ್ಪಡುವ ಯಾಜ್ಞಿಕ ಪದಾರ್ಥಗಳನ್ನು ಲಕ್ಷಣಾವೃತ್ತಿಯಿಂದ ಹೇಳುತ್ತಾ ತೃತೀಯ ಪಾದದ ತಾತ್ಪರ್ಯವನ್ನು ತೋರಿಸುತ್ತಾರೆ—'ತಯೈವ ಘೃತಸೋಮಾದಿ ಸ್ಪೃಶತಂ ಯಾಜ್ಞಿಕಂ ವಸು ।" (ಋಗ್ಭಾಷ್ಯ). ತಯಾ-ಅದರಿಂದ ಎಂದರೆ ಆ ಕಶೆ (ಚಾವಟಿ)ಯಿಂದಲೇ ಯಜ್ಞದ ಪದಾರ್ಥಗಳಾದ ಘೃತ ಸೋಮರಸ ಮೊದಲಾದುವನ್ನು, ಮಿಮಿಕ್ಷತಂ ಎಂದರೆ ನೀವಿಬ್ಬರೂ ಮುಟ್ಟಿರಿ ಎಂದರ್ಥ.

ಈ ಮಂತ್ರದಲ್ಲಿ ಬಂದಿರುವ ಅಶ್ವಿನಾ ಶಬ್ದಕ್ಕೆ 'ಅಶ್ವಿನೌ-ಎಲೈ ನಾಸತ್ಯ-ದಸ್ರ ಎಂಬ ಇಬ್ಬರು ಅಶ್ವಿನೀ ದೇವತೆಗಳೇ' ಎಂದು ಸಂಬೋಧನೆಯೇ ಅರ್ಥ. ಇದು ದೇವತಾಪರವಾದ ಅರ್ಥವಾಯಿತು. ಭಗವಂತನ ಪರವಾಗಿ ಹೇಗೆ ಅರ್ಥ ಮಾಡಬೇಕು ಎಂದರೆ—ಆಶು ವಾನಾದ್ಗತೇರಶ್ವೀ ಕ್ಷಿಪ್ರವಗತಿತೋಽಥವಾ। ಅಶ್ನುತೇಽಖಿಲಮಿತ್ಯೇವಾಶ್ವಿತ್ವಾತ್ತಥಾಶ್ವಿನೌ। (ಋಗ್ಭಾಷ್ಯ ೧ ಅಧ್ಯಾ. ೩ ಸೂಕ್ತ, ೧ನೇ ಋಕ್). i) ಆಶು-ಬೇಗ, ವೇಗವಾಗಿ, ವ-'ವಾ ಗತಿ ಗಂಧನಯೋಃ' ಎಂಬ ಧಾತುವಿನಿಂದ ಗತಿ (ಚಲನೆ) ಯುಳ್ಳವರಾದ್ದರಿಂದ ಭಗವಂತನಿಗೆ ಅಶ್ವಿ ಎಂದು ಹೆಸರು. ii) ಆಶು-ಬೇಗನೆ, ವ-ಅವಗತಿ-ತಿಳಿದುಕೊಳ್ಳುವುದರಿಂದಲೂ ಸರ್ವಜ್ಞನಾದ್ದರಿಂದಲೂ ಅಶ್ವಿ ಎಂದು ಹೆಸರು. iii) ಅಶೂ ವ್ಯಾಪ್ತೌ ಎಂದು ಧಾತುಪಾಠವಿರುವುದರಿಂದ ಅಶ್ನುತೇ ಸಕಲಂ ವ್ಯಾಪ್ನೋತೀತಿ ವಾ ಅಶ್ವೀ. ಸರ್ವತ್ರ ವ್ಯಾಪ್ತನಾದವನಾದ್ದರಿಂದಲೂ ಅಶ್ವೀ. ಅಶ್ವಿನೀದೇವತೆಗಳು ಇಬ್ಬರಾದ್ದರಿಂದ ಅಶ್ವಿನೌ ಎಂಬ ದ್ವಿವಚನ ಪ್ರಯೋಗ. ಅವರ ಪರವಾದರೆ ಬೇರೆ ಅರ್ಥ ಹೇಳಬೇಕು. ಅದೇನೆಂದರೆ—ಅಶ್ವರೂಪಿಯಾದ ಸೂರ್ಯನು ಹೆಣ್ಣುಕುದುರೆಯಾಗಿದ್ದ ಛಾಯಾದೇವಿಯಲ್ಲಿ ಈ ಇಬ್ಬರು ಮಕ್ಕಳನ್ನು ಪಡೆದನು. ಇವರಿಬ್ಬರೂ ಆ ಹೆಣ್ಣು-ಕುದುರೆಯ (ವಡವಾ) ಮೂಗಿನ ಎರಡು ಹೊಳ್ಳೆಗಳಿಂದ ಒಟ್ಟಿಗೆ ಅವಳಿ-ಜವಳಿ ಮಕ್ಕಳಾಗಿ ಹುಟ್ಟಿದರು. ಆದ್ದರಿಂದ ಅವರಿಗೆ ಅಶ್ವಿನೌ ಎಂದು ಹೆಸರು. (ಈ ಕಥೆಯು ಹರಿವಂಶದಲ್ಲಿ ಬರುತ್ತದೆ.)

ಇನ್ನು ಈ ಮಂತ್ರಕ್ಕೆ ಆಚಾರ್ಯರ ಋಗ್ಭಾಷ್ಯ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ 'ಮಂತ್ರಾರ್ಥಮಂಜರೀ'ಗೆ ಅನುಸಾರವಾಗಿ ಹೀಗೆ ಅರ್ಥವಾಗುತ್ತದೆ. ಅಶ್ವಿನಾ-ಎಲೈ ಅಶ್ವಿನೀದೇವತೆಗಳಿರಾ (ತದಂತರ್ಗತ ಹೇ ಹರಿವಾಯುಗಳೇ), ಯಾ-ಯಾವ, ವಾಂ-ನಿಮ್ಮಿಬ್ಬರಿಗೆ ಸೇರಿದ, ಮಧುಮತೀ-ಅಮೃತವನ್ನು ಸುರಿಸುವುದರಿಂದ ಸ್ಪರ್ಶಮಾತ್ರದಿಂದಲೇ ಸಕಲ ಪದಾರ್ಥಗಳಲ್ಲೂ ಮಾಧುರ್ಯವನ್ನು ಉಂಟುಮಾಡು ವಂಥಾದ್ದೂ (ಭಾಷ್ಯದಲ್ಲಿ ಹೇಳಿದ ವಿವರಣೆಯನ್ನು ನೋಡಿ), ಸೂನೃತಾವತೀ—ಸೂನೃತಾ ಎಂದರೆ ವೇದವಾಣೀ, ಅದು 'ವತೀ'-ಉಳ್ಳದ್ದು ಎಂದರೆ ವೇದವಾಣಿಗಳಿಂದ ಸ್ತುತಿಸಲ್ಪಡುವದೂ (ಭಾಷ್ಯ— ವೇದವಾಕ್ಯಸ್ತುತತ್ವೇನ), ಕಶಾ-ನಿಮ್ಮ ಚಾವಟಿಯಾಗಿದೆ. ತಯಾ-ಅದರಿಂದ (ಚಾವಟಿಯಿಂದ), ಯಜ್ಞಂ- [-ಭಾಷ್ಯಂ—ಘೃತ-ಸೋಮಾದಿ ಯಾಜ್ಞಿಕಂ ವಸು]-ಯಜ್ಞಕ್ಕೆ ಸಂಬಂಧಿಸಿದ ಘೃತ ಸೋಮರಸ ಮೊದ-ಲಾದ ಯಾಜ್ಞಿಕ ಪದಾರ್ಥಗಳನ್ನು, ಮಿಮಿಕ್ಷತಂ-ನೀವಿಬ್ಬರೂ ಮುಟ್ಟಿರಿ.

(ತಾತ್ಪರ್ಯ) ಹೇ ಅಶ್ವಿನೀ ದೇವತೆಗಳೇ (ಮತ್ತು ಹರಿವಾಯುಗಳೇ), ನೀವು ಇಬ್ಬರೂ ಉಪಯೋಗಿಸುವ ಕುದುರೆಯನ್ನು ಓಡಿಸುವುದಕ್ಕೂ ಹೊಡೆಯುವುದಕ್ಕೂ ಕಶೆಯು (ಚಾವಟಿಯು) ಮಹಾ ಪ್ರಭಾವವುಳ್ಳದ್ದು. ಅದು ಅಮೃತಮಯವಾದ್ದರಿಂದ ಅದರಿಂದ ಯಾವ ಪದಾರ್ಥವನ್ನು ಸ್ಪರ್ಶ ಮಾಡಿದರೂ ಅವೆಲ್ಲ ಸ್ಪರ್ಶಮಾತ್ರದಿಂದಲೇ ಮಧುರರಸೋಪೇತವಾಗುತ್ತವೆ. ನಿಮ್ಮ ಆ ಕಶೆಯಿಂದ ಯಜ್ಞಕ್ಕಾಗಿ ಸಿದ್ಧಪಡಿಸಿರುವ ಘೃತ, ಸೋಮರಸ ಮೊದಲಾದ ಸಕಲ ಯಾಜ್ಞಿಕ ಪದಾರ್ಥಗಳನ್ನೂ [ಪ್ರಕೃತ ಸಂದರ್ಭ ದಲ್ಲಿ ನೈವೇದ್ಯಕ್ಕೆ ಇಟ್ಟಿರುವ ಪದಾರ್ಥಗಳನ್ನು] ಸ್ಪರ್ಶಮಾಡಿರಿ. ಅದರಿಂದ ಇವೆಲ್ಲವೂ ಮಧುರವಾಗಿಯೂ ಪಾವನವಾಗಿಯೂ ಆಗಲಿ ಎಂದು ಭಾವ.

ಪ್ರಕೃತ ನಾವು ನೈವೇದ್ಯಕ್ಕೆ ಅನೇಕ ಪದಾರ್ಥಗಳನ್ನು ಇಟ್ಟಿದ್ದೇವೆ. ಇವೆಲ್ಲವನ್ನೂ ನಿಮ್ಮ ಆ ಕಶೆಯಿಂದ [ದೃಷ್ಟಿಮಾತ್ರದಿಂದ] ಸ್ಪರ್ಶ ಮಾಡಿರಿ. ಇವೆಲ್ಲ ಮಧುರರಸ-ಪೂರ್ಣವೂ, ಪವಿತ್ರವೂ ಆಗುತ್ತವೆ— ಎಂದು ಪ್ರಕೃತ ಸಂದರ್ಭಕ್ಕೆ ಅರ್ಥವಾಗುತ್ತದೆ.

ಈ ಋಕ್ಕಿಗೆ ಅರ್ಥ ಹೇಳಲು ಸಾಯಣರು ಎಷ್ಟು ಹೊಸೆದಾಡಿದ್ದಾರೆ ನೋಡಿರಿ.

ಸಾಯಣಭಾಷ್ಯರೀತ್ಯಾ ಈ ಮಂತ್ರಕ್ಕೆ ಅರ್ಥ

ಅಶ್ವಿನಾ-ಹೇ ಅಶ್ವಿನೀದೇವತೆಗಳಿರಾ, ವಾಂ-ನಿಮ್ಮಿಬ್ಬರ, ಯಾ ಕಶಾ-ಯಾವ ಚಾವಟಿಯು ಇದೆಯೋ ಅದು, ಮಧುಮತೀ—ಮಧು ಶಬ್ದವು ಉದಕದ ನಾಮಗಳಲ್ಲಿ [ನಿರುಕ್ತದಲ್ಲಿ] ಪಠಿತವಾಗಿರುವುದರಿಂದ ಮಧು ಎಂದರೆ ನೀರು, ಅದರಿಂದ ಮಧುಮತೀ ಎಂದರೆ ನೀರುಳ್ಳದ್ದು ನೀರಿಂದ ಕೂಡಿದ್ದು ಎಂದರ್ಥವಾಗುತ್ತದೆ. ಕುದುರೆಗಳು ವೇಗ ವಾಗಿ ಓಡುವುದರಿಂದ ಏನು ಬೆವರು ಬರುತ್ತದೆಯೋ ಅದರಿಂದ ಈ ಚಾವಟಿಯು ಒದ್ದೆ ಯಾಗಿದೆ, ಅದರಿಂದ ನೀರಿಂದ ಕೂಡಿದ್ದು ಎಂದು ಹೇಳಲಾಗಿದೆ. ಮತ್ತು ಸೂನೃತಾವತೀ-

‘ಊನ ಪರಿಹಾಣೇ’ ಎಂದು ಧಾತುಪಾಠವಿರುವುದರಿಂದ ಸು-ಬಹಳ, ಊನ-ಪ್ರಿಯವಾದುದೂ, ಋತಾವತೀ-ಸತ್ಯವೂ ಆದ ಮಾತುಳ್ಳದ್ದು. ಚಾವಟಿಯನ್ನು ಬಲವಾಗಿ ಝಾಡಿಸುವುದರಿಂದ ಛಟ್‌ಛಟ್ ಎಂದು ಏನು ಶಬ್ದ ಬರುತ್ತದೆಯೋ, ಚಾವಟಿಯಿಂದ ಹೊಡೆಯುವಾಗ ಕುದುರೆ ಸವಾರನು (ಸಾರಥಿಯು) ಕುದುರೆಗಳನ್ನು ಬೇಗ ಓಡಿಸುವುದಕ್ಕಾಗಿ ಏನು ಗದ್ದಲ ಮಾಡುತ್ತಾನೋ, ಇವೆರಡೂ ವೇಗಸೂಚಕಗಳಾದ್ದರಿಂದ ಯಜಮಾನನಿಗೆ (ರಥದಲ್ಲಿ ಕೂತವನಿಗೆ) ಇಷ್ಟವೇ ಆಗಿರುತ್ತದೆ. ಅಥವಾ ನಿರುಕ್ತದಲ್ಲಿ ಮಾತಿಗೆ ಹೇಳಿರುವ ಐವತ್ತೇಳು ಹೆಸರುಗಳ ಪೈಕಿ ‘ಕಶಾ ಧಿಷಣಾ’ ಎಂದು ಕಶಾ ಶಬ್ದವೂ ಪಠಿತವಾಗಿರುವುದರಿಂದ ಕಶಾ ಎಂದರೆ ‘ಮಾತು’ ಎಂದೂ ಅರ್ಥವಾಗುತ್ತದೆ. ಅದರಂತೆ— ಅಶ್ವಿನಾ-ಹೇ ಅಶ್ವಿನೀ ದೇವತೆಗಳೇ, ವಾಂ-ನಿಮ್ಮಿಬ್ಬರ, ಯಾ-ಯಾವ, ಕಶಾ-ಮಾತು (ನುಡಿಯು) ಇದೆಯೋ, ಅದು, ಮಧುಮತೀ-ಮಾಧುರ್ಯದಿಂದ ಕೂಡಿದ್ದಾಗಿರುತ್ತದೆ. ಎಂದರೆ ಕ್ರೌರ್ಯರಹಿತವಾಗಿರುತ್ತದೆಯೆಂದರ್ಥ. ಮತ್ತು ಸೂನೃತಾವತೀ-ಪ್ರಿಯವೂ ಸತ್ಯವೂ ಆಗಿರುವಂಥಾದ್ದು. (ಉತ್ತರಾರ್ಧದ ಅರ್ಥ) ತಯಾ ಆ ಚಾವಟಿಯೊಡನೆ ಅಥವಾ ಅಂಥಾ ಮಾತಿನಿಂದ ಕೂಡಿದವರಾಗಿ ಬಂದು, ಯಜ್ಞಂ ಮಿಮಿಕ್ಷತಂ ನೀವಿಬ್ಬರೂ ಸೋಮರಸವನ್ನು ಹಿಂಡಲು ಅಪೇಕ್ಷಿಸುವರಾಗಿರಿ.

(ತಾತ್ಪರ್ಯ) ಕಶಾ ಎಂದರೆ ಚಾವಟಿ ಎಂದು ಒಂದರ್ಥ; ಮಾತು ಎಂದು ಇನ್ನೊಂದರ್ಥ ಚಾವಟಿಯು ಕುದುರೆಗಳನ್ನು ವೇಗವಾಗಿ ಓಡಿಸುವುದರಿಂದ ವೇಗದಿಂದ ಉಂಟಾದ ಬೆವರಿನಿಂದ ಕುದುರೆಗಳ ಮೈ ಒದ್ದೆಯಾಗಿರುತ್ತದೆ. ಬೆವರಿನಿಂದ ಒದ್ದೆಯಾದ ಕುದುರೆಯ ಮೇಲೆ ಚಾವಟಿಯನ್ನು ಹೊಡೆಯುವುದರಿಂದ ಚಾವಟಿಯೂ ಒದ್ದೆಯಾಗಿರುತ್ತದೆಯೆಂಬುದನ್ನು ‘ಮಧುಮತೀ’ ಎಂಬ ವಿಶೇಷಣ ಹೇಳುತ್ತದೆ. ಕುದುರೆಯನ್ನು ವೇಗವಾಗಿ ಓಡಿಸುವುದಕ್ಕಾಗಿ ಚಾವಟಿಯನ್ನು ಕುದುರೆಯ ಮೈಗೆ ಹೊಡಿಯದೆ ಛಟ್-ಛಟ್ ಎನ್ನಿಸುತ್ತಿರುತ್ತಾನೆ. ಕುದುರೆಯನ್ನು ವೇಗವಾಗಿ ಓಡಿಸಲು ಬಾಯಲ್ಲಿ ಏನೇನೋ ಸದ್ದು ಮಾಡುತ್ತಿರುತ್ತಾನೆ. ಇದನ್ನೇ ಸೂನೃತಾವತೀ ಎಂಬ ವಿಶೇಷಣ ಹೇಳುತ್ತದೆ. ಹೇ ಅಶ್ವಿನೀ ದೇವತೆಗಳೇ, ಇಂಥಾ ಕಶೆಯೊಡನೆ ಬಂದು ನಮ್ಮ ಯಜ್ಞದಲ್ಲಿ ಸೋಮರಸವನ್ನು ಸುರಿಸಲು ಪ್ರಯತ್ನ ಮಾಡಿರಿ ಎಂದು ಕಶಾಪರವಾದ ಅರ್ಥ.

ಕಶಾ ಎಂದರೆ ಮಾತು ಎಂದರ್ಥವಾದರೆ ನಿಮ್ಮ ಮಾತು ಬಿರುಸಾಗಿರದೆ ನಯವಾಗಿ ಇರುತ್ತದೆ. ಇದೇ ಮಧುಮತೀ. ಮತ್ತು ಕೆಲಸ ಮಾಡುವವರಿಗೆ ಉತ್ಸಾಹ ಕೊಡುವಂತೆ ಸ್ವಲ್ಪ ಹೊಗಳಿಕೆಯುಳ್ಳದ್ದೂ ಆಗಿರುತ್ತದೆ—ಇದೇ ಸೂನೃತಾವತೀ. ಇಂಥಾ ಮಾತಿನಿಂದ ಕೂಡಿದ ನೀವಿಬ್ಬರೂ ನಮ್ಮ ಯಜ್ಞಕ್ಕೆ ಬಂದು ಸೋಮರಸವು ಸ್ರವಿಸುವಂತೆ ಮಾಡಲು ಸಮರ್ಥರಿದ್ದೀರೆಂದು ಭಾವ.

iv) ಯೇ ದೇವಾಸೋ ದಿವ್ಯೇಕಾದಶ ಸ್ಥ

ಪೃಥಿವ್ಯಾಮಧ್ಯೇಕಾದಶ ಸ್ಥ ।

ಅಪ್ಸುಕ್ಷಿತೋ ಮಹಿನೈಕಾದಶ ಸ್ಥ

ತೇ ದೇವಾಸೋ ಯಜ್ಞಮಿಮಂ ಜುಷಧ್ವಮ್ ॥

(ಋಗ್ವೇದ ೧ ಮಂ., ೧೩೯ ಸೂ., ೧೧ ಋಕ್, ದ್ವಿ.ಅಷ್ಟ.ದ್ವಿ.ಅ. ೪ ವರ್ಗ) ಅಲ್ಲದೆ ತೈತ್ತಿರೀಯ ಸಂಹಿತೆಯಲ್ಲಿ ೧ನೇ ಕಾಂಡದ ೪ನೇ ಪ್ರಪಾಠಕದಲ್ಲಿ ೧೦ನೇ ಅನುವಾಕದಲ್ಲಿ ೧ನೇ ಮಂತ್ರ. (ತೈ.ಪಾಠದಲ್ಲಿ 'ಅಪ್ಸುಕ್ಷಿತಃ' ಎಂಬುದಕ್ಕೆ ಬದಲಾಗಿ 'ಅಪ್ಸುಷದಃ' ಎಂಬ ಪಾಠವಿದೆ.) ಈ ಮಂತ್ರ ಪಂಕ್ತಿ ಛಂದಸ್ಸಿನಲ್ಲಿದೆ.

ಸಾಯಣ ಮತ್ತು ಭಟ್ಟಭಾಸ್ಕರ ಭಾಷ್ಯರೀತ್ಯಾ ಅರ್ಥ— ಹೇ ದೇವಾಸಃ–ಹೇ ದೇವತೆಗಳಿರಾ ! ಯೇ–ಯಾವ ನೀವು, ದಿವಿ–ಸ್ವರ್ಗದಲ್ಲಿ, ಏಕಾದಶ ಸ್ಥ–ಹನ್ನೊಂದು ಸಂಖ್ಯೆಯುಳ್ಳವರಾಗಿದ್ದೀರೋ, ಪೃಥಿವ್ಯಾಂ ಅಧಿ-ಭೂಮಿಯ ಮೇಲೂ, ಏಕಾದಶ ಸ್ಥ–ಹನ್ನೊಂದು ಸಂಖ್ಯೆಯುಳ್ಳವರಾಗಿದ್ದೀರೋ, ಅಪ್ಸುಕ್ಷಿತಃ- (ಅಪ್ ಶಬ್ದವು ಅಂತರಿಕ್ಷ ನಾಮದಲ್ಲಿ ಬಂದಿರುವುದರಿಂದ ಅಪ್ಸು ಎಂದರೆ ಅಂತರಿಕ್ಷದಲ್ಲಿ ಎಂದರ್ಥ. ಕ್ಷಿತಃ ಅಥವಾ ಸದಃ–ಎಂದರೆ ವಾಸಿಸುವ, ವಾಸ ಮಾಡುವ ಎಂದರ್ಥ.) ಅಂತರಿಕ್ಷದಲ್ಲಿ ವಾಸ ಮಾಡುವ ಹೇ ದೇವತೆಗಳೇ ! ನೀವು, ಮಹಿನಾ–ಮಹಿಮೆಯಿಂದ (ನಿಮ್ಮ ವಿಭೂತಿರೂಪದಿಂದ, ಏಕಾದಶ ಸ್ಥ - ಹನ್ನೊಂದು ಮಂದಿಯಾಗಿದ್ದೀರೋ. ತೇ – ಆ, ದೇವಾಸಃ-ಒಟ್ಟು ಮೂವತ್ತಮೂರು ಮಂದಿ ದೇವತೆಗಳೂ, ಇಮಂ ಯಜ್ಞಂ–ನಮ್ಮ ಯಜ್ಞವನ್ನು (ಪೂಜಾರೂಪ ಯಜ್ಞವನ್ನು ಎಂದು ಪ್ರಕೃತ ಸಂದರ್ಭದಲ್ಲಿ ಅರ್ಥ), ಜುಷಧ್ವಮ್– ಸೇವಿಸಿರಿ ಎಂದರೆ ಇಲ್ಲಿ ನಾವು ಕೊಡುವ ಹವಿಸ್ಸನ್ನು (ನೈವೇದ್ಯವನ್ನು) ಸ್ವೀಕರಿಸಿ ನಮ್ಮನ್ನು ಅನುಗ್ರಹಿಸಿ ಸಂತೋಷಪಡಿಸಿರಿ ಎಂದು ಭಾವ.

ಸೂಚನೆ— ಸಾಯಣರಾಗಲಿ ಭಟ್ಟಭಾಸ್ಕರರಾಗಲಿ ಹನ್ನೊಂದು ಮಂದಿ ಯಾರು ಎಂಬ ಬಗ್ಗೆ ಏನೊಂದೂ ವಿವರಣೆ ಕೊಟ್ಟಿಲ್ಲ. ಅದು ಅವರಿಗೂ ನುಂಗಬಾರದ ತುತ್ತಾಗಿದೆ. ಏಕಾದಶ ರುದ್ರರು ಎಂದು ಪ್ರಸಿದ್ಧಿಯಿರುವುದರಿಂದ ದಿವಿ ಎಂಬುದಕ್ಕೋ ಪೃಥಿವ್ಯಾಂ ಎಂಬುದಕ್ಕೋ ಆ ಹನ್ನೊಂದು ರುದ್ರರನ್ನು ತೆಗೆದುಕೊಂಡು ಹೊಂದಿಸಬಹುದು. ಅಂತರಿಕ್ಷದಲ್ಲಿ (ಅಪ್ಸು) ದ್ವಾದಶಾದಿತ್ಯರಿರುವುದು ಪ್ರಸಿದ್ಧಿಯಿದೆ. ಅವರ ಪೈಕಿ

ಒಬ್ಬನು (ಪೂಷನ್ ಎಂಬುವನು) ಸಾಕ್ಷಾದ್ವಿಷ್ಣು ಎಂದಿಟ್ಟುಕೊಂಡು ಮಿಕ್ಕ ಹನ್ನೊಂದನ್ನೂ ಹೇಗೋ ಹೊಂದಿಸಬಹುದು. ಆದರೂ ಇನ್ನೊಂದು ಹನ್ನೊಂದು ರೂಪಗಳು ಉಳಿಯುತ್ತವೆ. ಅವು ಯಾವುವು ಎಂಬುದು ಸಂದಿಗ್ಧವಾಗಿದೆ. ವೇದದಲ್ಲಿ ಈ ರೀತಿ ಅರ್ಥವಿಲ್ಲದ ಪದಗಳನ್ನು ಎಂದೂ ಹೇಳುವುದಿಲ್ಲ. ಅದನ್ನು ಹೊಂದಿಸುವುದೇ ಭಾಷ್ಯದ— ವ್ಯಾಖ್ಯಾನದ ಪ್ರಯೋಜನ. ಏನೋ ಅರ್ಥ ಹೇಳುವುದು ಅಸ್ವಾರಸ್ಯಬೋಧಕ.

ತಾತ್ಪರ್ಯ— ಹೇ ದೇವತೆಗಳಿರಾ! ನೀವು ದ್ಯು(ಸ್ವರ್ಗ)ಲೋಕದಲ್ಲೂ ಭೂಮಿಯ ಮೇಲೂ ಗಗನ (ಅಂತರಿಕ್ಷ)ದಲ್ಲೂ ಹನ್ನೊಂದು ಹನ್ನೊಂದು ರೂಪಗಳಿಂದ ಸನ್ನಿಹಿತರಾಗಿದ್ದೀರಿ ನಿಮ್ಮ ಮಹಿಮೆ ಅಪಾರವಾದುದು. ನೀವೆಲ್ಲ ಮೂವತ್ತಮೂರು ಮಂದಿಯೂ ಒಟ್ಟಿಗೆ ಕಲೆತು ನಾವು ಈಗ ಮಾಡುತ್ತಿರುವ ನೈವೇದ್ಯಸಮರ್ಪಣರೂಪ ಯಜ್ಞಕ್ಕೆ ದಯಮಾಡಿಸಿ ನಮ್ಮ ಅಲ್ಪಸೇವೆಯನ್ನು (ನೈವೇದ್ಯಭಾಗವನ್ನು) ಸ್ವೀಕರಿಸಿ ನಮ್ಮನ್ನು ಅನುಗ್ರಹಿಸಿರಿ ಎಂದರ್ಥ. (ನಾವು ಸಮಸ್ತ ನೈವೇದ್ಯವನ್ನೂ ಭಗವಂತನಿಗೆ ಸಮರ್ಪಿಸುತ್ತೇವೆ. ಭಗವಂತ ತನ್ನ ಸ್ವಾಖ್ಯರಸವನ್ನು ತಾನು ತೆಗೆದುಕೊಂಡು ಉಳಿದ ರಸವನ್ನು ತಾರತಮ್ಯಾನುಸಾರ ರಮಾ-ಬ್ರಹ್ಮಾದಿ ಪುಷ್ಕರಾಂತ ಸಕಲರಿಗೂ ಹಂಚಿಕೊಡುವನು. ನೀವೆಲ್ಲ ನಿಮ್ಮ ನಿಮ್ಮ ಭಾಗವನ್ನೆಲ್ಲ ತೆಗೆದುಕೊಂಡ ಬಳಿಕ ಉಳಿದ ಮನುಷ್ಯೋಚಿತ ಭೋಗ್ಯರಸವನ್ನು ನಮಗೆ ಅನುಗ್ರಹಿಸಿ ನಮ್ಮನ್ನು ಪುನೀತರನ್ನಾಗಿ ಮಾಡಿ ಎಂದು ಒಳ ಅಭಿಪ್ರಾಯ.)

v) 'ಚಂದ್ರಮಾ ಮನಸೋ ಜಾತಃ....'

ಈ ಮಂತ್ರ ಪುರುಷಸೂಕ್ತದಲ್ಲಿ ಬಂದಿದೆ. ಅದರ ಸಾಮಾನ್ಯಾರ್ಥವನ್ನು ಅಭಿಷೇಕ-ಕಲಾಪದಲ್ಲಿ 'ಪುರುಷಸೂಕ್ತ'ಕ್ಕೆ ಅರ್ಥ ಬರೆಯುವಾಗ ಕೊಟ್ಟಿದೆ. ಅಲ್ಲಿ ನೋಡಿಕೊಳ್ಳಬಹುದು.

ಇದೇ ಸಂದರ್ಭದಲ್ಲೇ 'ಸತ್ಯಂ ತ್ವರ್ತೇನ ಪರಿಷಿಂಚಾಮಿ' 'ಋತಂ ತ್ವಾ ಸತ್ಯೇನ ಪರಿಷಿಂಚಾಮಿ' ಎಂಬ ಪರಿಷೇಚನ ಮಂತ್ರಗಳಿಗೂ 'ಅಮೃತೋಪಸ್ತರಣಮಸಿ ಸ್ವಾಹಾ' ಮತ್ತು 'ಅಮೃತಾಪಿಧಾನಮಸಿ ಸ್ವಾಹಾ' ಎಂಬ ಆಪೋಶನಮಂತ್ರಗಳಿಗೂ 'ಪ್ರಾಣಾಯ ಸ್ವಾಹಾ' ಮೊದಲಾದ ಪ್ರಾಣಾಹುತಿ ಮಂತ್ರಗಳಿಗೂ ಅರ್ಥ ಹೇಳುವುದು ಪ್ರಸಂಗೋಚಿತವಾಗಿದೆ. ಆದ್ದರಿಂದ ಅವುಗಳಿಗೂ ಅರ್ಥ ತಿಳಿದುಕೊಂಡುಬಿಡೋಣ.

ಪರಿಷೇಚನ ಮಂತ್ರಗಳು

ಇವು (ಕ) 'ಸತ್ಯಂ ತ್ವರ್ತೇನ ಪರಿಷಿಂಚಾಮಿ' ಎಂದೂ, (ಖ) 'ಋತಂ ತ್ವಾ ಸತ್ಯೇನ ಪರಿಷಿಂಚಾಮಿ' ಎಂದೂ ಎರಡಿವೆ. ಮೊದಲನೆಯ ಮಂತ್ರವನ್ನು ಬೆಳಗ್ಗೆ ಹೇಳ-

ಬೇಕೆಂದೂ, ಎರಡನೆಯದನ್ನು ರಾತ್ರಿ ಹೇಳಬೇಕೆಂದೂ ಶ್ರುತಿಯೇ (ತೈತ್ತಿರೀಯ ಬ್ರಾಹ್ಮಣವೇ ಹೇಳುತ್ತದೆ—ನೋಡಿ. ಅಲ್ಲದೆ ಅದರ ಅರ್ಥವೂ ಅಲ್ಲೇ ವಿವರಿಸಲ್ಪಟ್ಟಿದೆ:

ಋತಂ ತ್ವಾ ಸತ್ಯೇನ ಪರಿಷಿಂಚಾಮೀತಿ ಸಾಯಂ ಪರಿಷಿಂಚತಿ।

ಸತ್ಯಂ ತ್ವರ್ತೇನ ಪರಿಷಿಂಚಾಮೀತಿ ಪ್ರಾತಃ। ಅಗ್ನಿರ್ವಾ ಋತಮ್।

ಅಸಾವಾದಿತ್ಯಃ ಸತ್ಯಮ್। ಅಗ್ನಿಮೇವ ತದಾದಿತ್ಯೇನ ಸಾಯಂ ಪರಿಷಿಂಚತಿ।

ಅಗ್ನಿನಾದಿತ್ಯಂ ಪ್ರಾತಃ ಸಃ ॥

(ತೈ.ಬ್ರಾ. ೨ ಕಾಂಡ, ೧ ಪ್ರಶ್ನ, ೧೧ ಅನುವಾಕ)

(ಅರ್ಥ) 'ಋತಂ ತ್ವಾ ಸತ್ಯೇನ ಪರಿಷಿಂಚಾಮಿ' ಎಂಬ ಮಂತ್ರದಿಂದಲೇ ಸಾಯಂಕಾಲ (ರಾತ್ರಿ) ಪರಿಷೇಚನೆ ಮಾಡಬೇಕು. ಋತಂ ಎಂಬುದು ಅಗ್ನಿಯೇ. ಸತ್ಯಂ ಎಂಬುದು ಈ ಸೂರ್ಯನೇ ಆಗಿದ್ದಾನೆ. ಆದ್ದರಿಂದ (ತತ್) ಸಾಯಂಕಾಲ (ಸೂರ್ಯನು ಅಸ್ತನಾಗಿರುವುದರಿಂದ) ಅಗ್ನಿಯನ್ನೇ ಆದಿತ್ಯನಿಂದ ಪರಿಷೇಚನೆ ಮಾಡಬೇಕು. ಬೆಳಗಿನ ಹೊತ್ತು ಸೂರ್ಯನು ಪ್ರಕಾಶಿಸುತ್ತಿರುವುದರಿಂದ ಋತಾಖ್ಯನಾದ ಅಗ್ನಿಯಿಂದಲೇ ಸತ್ಯಾಖ್ಯ ಸೂರ್ಯನನ್ನು ಸುತ್ತುಗಟ್ಟಬೇಕು (ಪರಿಷೇಚನೆ ಮಾಡಬೇಕು.) ಇದು ಸಾಮಾನ್ಯವಾದ ಅರ್ಥವಾಯಿತು.

ಬೃಹದಾರಣ್ಯಕೋಪನಿಷತ್ತಿನಲ್ಲಿ ಮೂರನೇ ಅಧ್ಯಾಯದ ಎರಡನೇ ಅಶ್ವಮೇಧ ಬ್ರಾಹ್ಮಣದಲ್ಲಿ ಅಂಗನಿಯಾಮಕನಾದ್ದರಿಂದ ಸಕಲಾಂಗಗಳಿಗೂ ಸಾರಭೂತನಾದ್ದರಿಂದ ಅಗ್ನಿನಾಮಕನಾದ ವಾಯುವನ್ನು ಭಗವಂತ ಸೃಷ್ಟಿಸಿದನೆಂದೂ ಆ ವಾಯು ತನ್ನನ್ನು ಮೂರು ಸಮಭಾಗಗಳಾಗಿ ಮಾಡಿಕೊಂಡು ಒಂದು ರೂಪದಿಂದ ಆದಿತ್ಯನಲ್ಲೂ ಇನ್ನೊಂದು ರೂಪದಿಂದ ವಾಯುವಿನಲ್ಲೂ ಮತ್ತೊಂದು ರೂಪದಿಂದ ಅಗ್ನಿಯಲ್ಲೂ ಸನ್ನಿಹಿತನಾಗಿದ್ದು ಲೋಕವನ್ನು ಸಂರಕ್ಷಿಸುವುದಕ್ಕೆ ಭಗವಂತನಿಗೆ ಅನುಕೂಲವಾಗಿದ್ದಾನೆಂಬುದನ್ನು 'ಸ ತ್ರೇಧಾತ್ಮಾನಂ ವ್ಯಕುರುತ' ಎಂಬ ಉಪನಿಷದ್ವಾಕ್ಯ ಹೇಳುತ್ತದೆ. ಇನ್ನು ಆ ವಾಯುವಿಗೆ ಯಥಾರ್ಥಜ್ಞಾನವುಳ್ಳವನಾದ್ದರಿಂದ ಋತಂ ಎಂದೂ ವೇದೋಕ್ತ ಸಮಸ್ತ ಕರ್ಮಗಳನ್ನೂ ಅನುಷ್ಠಾನ ಮಾಡುವವನಾದ್ದರಿಂದ ಸತ್ಯಂ ಎಂದೂ ಹೆಸರು. ಇದನ್ನೇ ತೈತ್ತಿರೀಯ ಶಾಂತಿಪಾಠದಲ್ಲಿ, 'ನಮಸ್ತೇ ವಾಯೋ' ಎಂದು ಹೇಳಿ

'ಋತಂ ವದಿಷ್ಯಾಮಿ। ಸತ್ಯಂ ವದಿಷ್ಯಾಮಿ।' ಎಂದು ವರ್ಣಿಸಿದೆ. ಇದೇ ರೀತಿ ಈ ಎರಡು ಶಬ್ದಗಳನ್ನೂ ಐತರೇಯ ಭಾಷ್ಯದಲ್ಲಿ (೩ ಪ್ರಪಾಠಕ, ೭ ಅಧ್ಯಾಯ) "ಋತಂ ಯಥಾವದವಗತಂ ತ್ವಾಂ ವದಿಷ್ಯಾಮಿ। ಸತ್ಯಂ ಸಾಧುಗಣೈಸ್ತತಂ ಸರ್ವನಿಯಂತಾರಂ ಚ" ಎಂದರೆ ಋತಂ ಎಂದರೆ ಯಥಾರ್ಥಜ್ಞಾನಗೋಚರನೆಂದೂ, ಸತ್ಯಂ ಎಂದರೆ ಸಾಧುಗುಣಗಳಿಂದ ಕೂಡಿ ವ್ಯಾಪ್ತನಾದವನೆಂದೂ ಸರ್ವನಿಯಾಮಕನೆಂದೂ ವಿಷ್ಣುಪರವಾಗಿಯೂ ವ್ಯಾಖ್ಯಾನ ಮಾಡಿದ್ದಾರೆ. ಅದರಂತೆ ಪ್ರಾತಃಕಾಲದಲ್ಲಿ ಹೇಳುವ 'ಸತ್ಯಂ ತ್ವರ್ತೇನ ಪರಿಷಿಂಚಾಮಿ' ಎಂಬುದಕ್ಕೆ 'ಸತ್ಯಂ' ಆದಿತ್ಯಾಂತರ್ಗತನಾಗಿ ಸದ್ಗುಣಪರಿಪೂರ್ಣನೂ ಸರ್ವನಿಯಾಮಕನೂ ಆದ ವಿಷ್ಣುರೂಪಿಯಾದ, ತ್ವಾಂ–ನಿನ್ನನ್ನು, (ತ್ವರ್ತೇನ = ತ್ವಾ + ಋತೇನ) ಋತೇನ–ಋತನಾಮಕ ಅಗ್ನಿಸ್ಥನಾದ ಯಥಾರ್ಥಜ್ಞಾನವುಳ್ಳವನಾದ್ದರಿಂದ ಋತನಾಮಕನಾದ ಮುಖ್ಯಪ್ರಾಣನಿಂದ, ಪರಿಷಿಂಚಾಮಿ ಎಂದರೆ ಸುತ್ತುಗಟ್ಟುತ್ತೇನೆ ಎಂಬರ್ಥ.

ಅದೇ ರೀತಿ ಸಂಜೆ ಹೇಳುವ 'ಋತಂ ತ್ವಾ ಸತ್ಯೇನ ಪರಿಷಿಂಚಾಮಿ' ಎಂಬುದಕ್ಕೆ ಋತಂ–ಋತನಾಮಕನಾದ ಅಗ್ನಿಯಲ್ಲಿ ಅಂತರ್ಯಾಮಿಯಾಗಿದ್ದು ಅಗ್ನಿಗೂ ನಿಯಾಮಕನಾದ್ದರಿಂದ ಯಥಾರ್ಥಾವಗತತ್ವೇನ ಋತಶಬ್ದವಾಚ್ಯನೂ ಆದ ವಿಷ್ಣುವಾದ, ತ್ವಾ–ನಿನ್ನನ್ನು, ಸತ್ಯೇನ–ಸತ್ಯಶಬ್ದವಾಚ್ಯನಾದ ಆದಿತ್ಯನಲ್ಲಿ ಸನ್ನಿಹಿತನಾದ ಸತ್ಯಶಬ್ದವಾಚ್ಯನಾದ ಮುಖ್ಯಪ್ರಾಣನಿಂದ (ರಾತ್ರಿಕಾಲದಲ್ಲಿ ಸೂರ್ಯನು ಅಗ್ನಿಯನ್ನು ಪ್ರವೇಶಿಸುತ್ತಾನೆ ಎಂದು ಶ್ರುತಿಯಿದೆ. ಅದರಂತೆ ಆದಿತ್ಯನಲ್ಲಿದ್ದ ಮುಖ್ಯಪ್ರಾಣನಿಂದ) ಅಗ್ನಿಸ್ಥ ಸತ್ಯನಾಮಕ ಶ್ರೀವಿಷ್ಣುವನ್ನು ಸುತ್ತುಗಟ್ಟುತ್ತೇನೆ ಎಂದು ಅರ್ಥ.

iv) ಆಪೋಶನ ಮಂತ್ರಗಳ ಅರ್ಥ — ಪ್ರಾರಂಭಿಸುವಾಗ 'ಅಮೃತೋಪಸ್ತರಣಮಸಿ ಸ್ವಾಹಾ' ಎಂದೂ, ಊಟ ಮುಗಿದಮೇಲೆ 'ಅಮೃತಾಪಿಧಾನಮಸಿ ಸ್ವಾಹಾ' ಎಂದು ಹೇಳುವೆವಷ್ಟೆ. ಇದರ ಅರ್ಥವನ್ನು ಛಾಂದೋಗ್ಯಭಾಷ್ಯಕ್ಕೆ ಅರ್ಥ ಬರೆಯುವಾಗ ಸ್ವರ್ಗೀಯ ಅಗ್ನಿಹೋತ್ರಿ ನಾರಾಯಣತಂತ್ರಿಗಳು ೭ನೇ ಅಧ್ಯಾಯ, ಖಂಡಕ್ಕೆ ಅರ್ಥ ಬರೆಯುವ ಸಂದರ್ಭದಲ್ಲಿ (ಪುಟ ೨೪೭) ಪಾದಟಿಪ್ಪಣಿಯಲ್ಲಿ ಹೀಗೆ ಬರೆದಿದ್ದಾರೆ— ಸಂದರ್ಭ— ಛಾಂದೋಗ್ಯ ಉಪನಿಷತ್ತಿನ ಏಳನೇ ಅಧ್ಯಾಯದ ಒಂದನೇ ಖಂಡದಲ್ಲಿ ಈ ಆಖ್ಯಾಯಿಕೆ (ಕಥೆ) ನಿರೂಪಿತವಾಗಿದೆ— ಇಂದ್ರಿಯಾಭಿಮಾನಿಗಳೆಲ್ಲ ತಾವು ತಾವೇ ಶ್ರೇಷ್ಠರೆಂದು ತಿಳಿದುಕೊಂಡು ತಮ್ಮ ತಂದೆಯಾದ ಬ್ರಹ್ಮನನ್ನು 'ನಮ್ಮಲ್ಲಿ ಯಾರು ಶ್ರೇಷ್ಠ?' ಎಂದು ಕೇಳಿದರು. ಅದಕ್ಕೆ ಬ್ರಹ್ಮನು 'ನನ್ನ ಶರೀರದಿಂದ ಯಾರು ಹೊರಟಾಗ ನನ್ನ ಶರೀರವು ಬಿದ್ದುಹೋಗುವುದೋ ಅವನೇ ಶ್ರೇಷ್ಠ' ಎಂದರು. ಅದರಂತೆ ವಾಕ್, ಶ್ರೋತ್ರ, ಚಕ್ಷುಸ್, ಮನಸ್ ಮೊದಲಾದ ಇಂದ್ರಿಯಾಭಿಮಾನಿಗಳು ಒಬ್ಬೊಬ್ಬರಾಗಿ

ಎಲ್ಲರೂ ಹೊರಟರು. ಆದರೂ ದೇಹ ಬೀಳಲಿಲ್ಲ. ಕಡೆಗೆ ಮುಖ್ಯಪ್ರಾಣನು ಹೊರಡಲು ಸಿದ್ಧನಾಗುವುದೇ ತಡ, ಬಾಕಿ ಎಲ್ಲ ಇಂದ್ರಿಯಾಭಿಮಾನಿಗಳೂ ಕಿತ್ತುಕೊಂಡು ಹೊರಟಂತೆ ಆಯಿತು. ಆಗ ಎಲ್ಲರೂ ಮುಖ್ಯಪ್ರಾಣನೇ ಎಲ್ಲರಿಗಿಂತ ಶ್ರೇಷ್ಠನೆಂದು ತಿಳಿದುಕೊಂಡು ಅವರನ್ನು ಹೋಗದಂತೆ ಪ್ರಾರ್ಥಿಸಿಕೊಂಡರಲ್ಲದೆ 'ನೀವೇ ನಮ್ಮೆಲ್ಲರಿಗಿಂತ ಜ್ಯೇಷ್ಠರೂ ಸರ್ವಶ್ರೇಷ್ಠರೂ ಆಗಿದ್ದೀರಿ' ಎಂದು ಪ್ರಾರ್ಥಿಸಿದರು. 'ಭಗವನ್ನೇಧಿ ತ್ವಂ ನಃ ಶ್ರೇಷ್ಠೋಸಿ ಮೋತ್ಕ್ರಮೀರಿತಿ' (ಭಗವನ್-ಸ್ವಾಮಿ, ಏಧಿ-ಬನ್ನಿರಿ, ತ್ವಂ-ನೀವು, ನಃ-ನಮ್ಮ ಮಧ್ಯೆ, ಶ್ರೇಷ್ಠಃ ಅಸಿ-ಎಲ್ಲರಿಗಿಂತಲೂ ಶ್ರೇಷ್ಠರಾಗಿದ್ದೀರಿ, ಮಾ ಉತ್ಕ್ರಮೀಃ-ಈ ದೇಹದಿಂದ ಹೊರಟುಬಿಡಬೇಡಿ. (ಹೊರಟರೆ ದೇಹವು ಬಿದ್ದುಹೋಗುವುದು. ಇತಿ-ಎಂದು ಹೇಳಿದರು)

ಮುಂದಿನ ಎರಡನೇ ಖಂಡದಲ್ಲಿ ಈ ಕಥೆ ಬರುವುದು—ಅನಂತರ ಮುಖ್ಯಪ್ರಾಣ ಆ ದೇವತೆಗಳನ್ನು 'ನನಗೆ ಅನ್ನವಾವುದು?' ಎಂದು ಕೇಳಿದರು. ಆದಕ್ಕೆ ಆ ದೇವತೆಗಳು 'ಮನುಷ್ಯಾದಿ ಉತ್ತಮ ಪ್ರಾಣಿಗಳಿಂದ ಹಿಡಿದು ನಾಯಿ ಮೊದಲಾದ ಕೀಳುಜಾತಿಯ ಪ್ರಾಣಿಗಳವರೆಗೆ ಏನೇನು ತಿನ್ನುವರೋ ಅದೆಲ್ಲವೂ—ನಿಮ್ಮ ಶಕ್ತಿಯಿಂದಲೇ (ಬಲದಿಂದಲೇ) ತಿನ್ನುವುದರಿಂದ ನಿಮ್ಮ ಅಧೀನವೇ ಆಗಿರುವುದರಿಂದ—ಅದೆಲ್ಲವೂ ನಿನ್ನ ಆಹಾರವೇ!' ಎಂದು ಹೇಳಿದರು. ಹೀಗೆ ಸಕಲ ದೇವತೆಗಳೂ ಪ್ರಾಣದೇವರಿಗೆ ಅನ್ನವನ್ನು ಸಮರ್ಪಿಸುತ್ತಾರೆ. ಆಮೇಲೆ ಪ್ರಾಣದೇವರು ಪುನಃ ಅವರನ್ನು 'ನನಗೆ ವಸ್ತ್ರವಾವುದು?' ಎಂದು ಕೇಳಿದರು. ಆದಕ್ಕೆ ಆ ದೇವತೆಗಳು 'ಪ್ರಾಣಿಗಳು ಕುಡಿಯುವ ನೀರೇ ನಿಮಗೆ ವಸ್ತ್ರ' ಎಂದರು. (ಉಪನಿಷದ್ವಾಕ್ಯ) 'ಕಿಂ ನೋ ವಾಸೋ ಭವಿಷ್ಯತೀ?'ತಿ, 'ಆಪ' ಇತಿ ಹೋಚುಃ। ತಸ್ಮಾದ್ವಾ ಏತದಶಿಷ್ಯಂತಃ ಪುರಸ್ತಾಚ್ಚೋಪರಿಷ್ಟಾಚ್ಚಾದ್ಭಿಃ ಪರಿದಧತಿ।' ಈ ವಿಷಯದಲ್ಲಿ ಜ್ಞಾನಿಗಳ ಆಚಾರವೂ ಇದೆಯೆಂದು ಉಪನಿಷತ್ತು ಹೇಳುತ್ತದೆ. ಹೀಗೆ ಅನ್ನ ತಿಂದ ಬಳಿಕ ಕುಡಿಯುವ ನೀರು ಪ್ರಾಣದೇವರಿಗೆ ವಸ್ತ್ರವಾಗುವುದರಿಂದ ಶಿಷ್ಟಾಚಾರವಂತರು ಊಟಕ್ಕೆ ಮುಂಚೆ 'ಅಮೃತಾಪಿಸ್ತರಣಮಸಿ ಸ್ವಾಹಾ' ಎಂದು ಹೇಳಿ ಆಪೋಶನ ತೆಗೆದುಕೊಂಡು ಪ್ರಾಣಾಹುತಿ ತೆಗೆದುಕೊಳ್ಳುತ್ತಾರೆ. ಊಟ ಮುಗಿದಮೇಲೆ ಕೊನೆಯಲ್ಲಿ 'ಅಮೃತಾಪಿಧಾನಮಸಿ ಸ್ವಾಹಾ' ಎಂದು ಹೇಳಿ ಉತ್ತರಾಪೋಶನ ತೆಗೆದುಕೊಂಡೇ ಊಟದಿಂದ ಏಳುತ್ತಾರೆ. ಮೊದಲು ತೆಗೆದುಕೊಂಡದ್ದು ಉಡುವ ವಸ್ತ್ರ (ಧೋತ್ರ)ವಾಗಿಯೂ ಕೊನೆಯಲ್ಲಿ ತೆಗೆದುಕೊಂಡದ್ದು ಹೊದಿಯುವ ವಸ್ತ್ರವು (ಉತ್ತರೀಯ)ದಂತೆಯೂ ಆಗಿರುತ್ತದೆ.

ಮಂತ್ರಗಳ ಅರ್ಥ— ಅಮೃತ!-ಎಲೈ ನೀರೇ, (ನೀನು) ಉಪಸ್ತರಣಂ-ಉಡುವ (ಧರಿಸುವ) ವಸ್ತ್ರವಾಗಿ, ಅಸಿ-ಆಗಿದ್ದೀಯೆ. ಸ್ವಾಹಾ-ನಿನಗೆ ಸ್ವಾಗತ. ಅಮೃತ-ಎಲೈ ನೀರೇ, (ನೀನು) ಅಪಿಧಾನಂ-ಮುಚ್ಚಳವಾಗಿ (ಹೊದಿಕೆಯಾಗಿ), ಅಸಿ-ಆಗಿದ್ದೀಯೆ. ಸ್ವಾಹಾ-ನಿನಗೆ ಸ್ವಾಗತ.

ಪಂಚಪ್ರಾಣಾಹುತಿಗಳು

ಮುಖ್ಯಪ್ರಾಣನಿಗೇ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂದು ಐದು ರೂಪಗಳಿವೆ. ಈ ಐದು ಪ್ರಾಣರೂಪಗಳಿಂದ ತನ್ನ ಮಕ್ಕಳಾದ ಹಾಗೂ ರುದ್ರನ ಮಕ್ಕಳಾದ ಪ್ರಾಣಾದಿನಾಮಕ ಪಂಚ ಉಪಪ್ರಾಣಗಳ ನಿಯಾಮಕನಾಗಿ ಐದು ದೇಹಗತ ಕಾರ್ಯಗಳನ್ನು ನಡೆಯಿಸುವರು. ಪ್ರಾಣಾದಿ ಪಂಚಪ್ರಾಣಗಳ ಕಾರ್ಯವನ್ನು ಅಮರದಲ್ಲಿರುವ ಈ ಶ್ಲೋಕ ಹೇಳುತ್ತದೆ.

ಹೃದಿ ಪ್ರಾಣೋ ಗುದೇಽಪಾನಃ ಸಮಾನೋ ನಾಭಿಸಂಸ್ಥಿತಃ ।
ಉದಾನಃ ಕಂಠದೇಶಸ್ಥೋ ವ್ಯಾನಃ ಸರ್ವಶರೀರಗಃ ।

ಹೃದಯದಲ್ಲಿ (ಶ್ವಾಸಕೋಶದಲ್ಲಿ) ಪ್ರಾಣ ಇರುವನು. ಗುದದಲ್ಲಿ ಅಪಾನನು ಇದ್ದು ಕೆಟ್ಟ ವಾಯುವನ್ನು ಹೊರಗೆ ಓಡಿಸುವನು. ಸಮಾನನು ನಾಭಿಯಲ್ಲಿರುವನು. ಉದಾನನು ಕಂಠದೇಶದಲ್ಲಿಯೂ, ವ್ಯಾನನು ಸರ್ವಶರೀರದಲ್ಲಿದ್ದು ರಕ್ತಚಲನೆಗೂ ಮಾಂಸಖಂಡಗಳ ಚಲನೆಗೂ ಸಹಾಯಕನಾಗಿರುವನು. ಬ್ರಹ್ಮ ಎಂಬುದೂ ಮುಖ್ಯಪ್ರಾಣನ ಹೆಸರೇ— 'ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ' ಪ್ರಾಣಾದಿ ಶಬ್ದಗಳ ನಿಷ್ಪತ್ತಿಯನ್ನು ತೈತ್ತಿರೀಯ ಭಾಷ್ಯದಲ್ಲಿ ಹೇಳಿದ್ದಾರೆ.

ಮುಂದೇನು ಮಾಡಬೇಕೆಂದರೆ ಪದ್ಯಮಾಲಾದಲ್ಲಿ ಹೀಗೆ ಹೇಳಿದೆ—

ಪಾನೀಯಮರ್ಪಯೇತ್ ಪಶ್ಚಾತ್ ತತೋ ಜವನಿಕಾಂ ಕ್ಷಿಪೇತ್ ।
ಭುಂಜಾನಂ ಚಿಂತಯೇನ್ಮೂಲಂ ಜಪೇದಷ್ಟೋತ್ತರಂ ಶತಮ್ ।೧೦೮।।

(ಶಬ್ದಾರ್ಥ) ಪಾನೀಯಂ-ಕುಡಿಯುವುದಕ್ಕೆ ನೀರನ್ನು, ಅರ್ಪಯೇತ್-ಸಮರ್ಪಿಸಬೇಕು. ಪಶ್ಚಾತ್-ಅನಂತರ, ತತಃ-ಆಮೇಲೆ, ಅನಂತರ, ಜವನಿಕಾಂ-ಮರೆಯನ್ನು, ಕ್ಷಿಪೇತ್-ಹಾಕಬೇಕು. ಭುಂಜಾನಂ-ಊಟ ಮಾಡುತ್ತಿರುವನೆಂದು, ಮೂಲಂ-ಮೂಲಮಂತ್ರವನ್ನು, ಅಷ್ಟೋತ್ತರ ಶತಂ-ನೂರೆಂಟು ಸಾರಿ.

(ತಾತ್ಪರ್ಯ) ಪ್ರಾಣಾಹುತಿ ಕೊಟ್ಟ ಬಳಿಕ ಭಗವಂತನಿಗೆ ಕುಡಿಯುವುದಕ್ಕಾಗಿ ನೀರನ್ನು ಸಮರ್ಪಿಸಬೇಕು. ಅನಂತರ ತನ್ನ ಮುಖವನ್ನು ವಸ್ತ್ರದಿಂದ ಮರೆಮಾಡಿಕೊಂಡು (ಮುಸುಕು ಹಾಕಿಕೊಂಡು) ಪರಮಾತ್ಮ ನೈವೇದ್ಯಕ್ಕೆ ಇಟ್ಟ ಪದಾರ್ಥಗಳನ್ನು ಭೋಜನ ಮಾಡುತ್ತಿದ್ದಾನೆಂದು ಚಿಂತಿಸುತ್ತಾ ಮೂಲಮಂತ್ರವನ್ನು ನೂರೆಂಟಾವರ್ತಿ ಜಪಿಸಬೇಕು.

ಪಾನೀಯ ಸಮರ್ಪಣೆಯ ವಿಷಯವಾಗಿ ಲ.ನಾ. ಉಪಾಧ್ಯಾಯರು ಈ ಪಾದ್ಮ-ತಂತ್ರವಚನವನ್ನು ಉದಹರಿಸಿ ಅರ್ಥವನ್ನೂ ಬರೆದಿದ್ದಾರೆ –

ಪಾನೀಯಪಾತ್ರಂ ಸೌವರ್ಣ—ಮಥವಾ ಕಲಧೌತಕಮ್ ।
ವೃತ್ತಾತ್ಯಯತಂ ಸುವೃತ್ತಂ ವಾ ಭವೇದಾಯತಮೇವ ವಾ ।
ಪ್ರಸ್ಥಾಪರ ಪ್ರಮಾಣಂ ತು ಪೂರಯೇಚ್ಛಾಂತಗಂ ಜಲಮ್ ॥

(ಅರ್ಥ) ನೀರಿಗಾಗಿ ಇಟ್ಟಿರುವ ಪಾತ್ರವು ಭಂಗಾರ ಅಥವಾ ಬೆಳ್ಳಿಯಿಂದ ಮಾಡಲ್ಪಟ್ಟಿರಬೇಕು. ಎರಡು ಪಾರ್ಶ್ವದಲ್ಲಿ ವರ್ತುಲವಾಗಿಯೂ (ಗುಂಡಾಗಿಯೂ) ಉಳಿದ ಎರಡು ಪಾರ್ಶ್ವದಲ್ಲಿ ಉದ್ದವಾಗಿಯೂ ಇರಬೇಕು. ಅಥವಾ ವರ್ತುಲಾಕಾರವಾಗಿಯಾಗಲಿ ಉದ್ದವಾಗಿಯಾಗಲಿ ಇರಬೇಕು. ಆ ಪಾತ್ರೆಯೊಳಗೆ ಕಡಿಮೆ ಪಕ್ಷ (ಕನಿಷ್ಠ ಪಕ್ಷ) ಒಂದು ಪ್ರಸ್ಥದಷ್ಟು (ಸೇರಿನಷ್ಟು) ನೀರನ್ನು ತುಂಬಬೇಕು.

ನೀರನ್ನು ಈ ಮಂತ್ರ ಹೇಳಿ ಸಮರ್ಪಿಸಬೇಕೆಂದು ಪೂಜಾಕಲ್ಪಲತಾದಲ್ಲಿ ಹೇಳಿದೆಯೆಂದು ಶ್ರೀ ಪ್ರಭಂಜನರ 'ಪದ್ಮಮಾಲಾ'ದಲ್ಲಿ ಕೊಟ್ಟಿದೆ—

ಗಂಗೋದಕಂ ಸಮಾನೀತಂ ಹೇಮಕುಂಭೇನ ನಿರ್ಮಲಮ್ ।
ಗೃಹ್ಯತಾಂ ಮೇ ಹೃಷೀಕೇಶ ಪ್ರಸೀದ ಪುರುಷೋತ್ತಮ ॥

(ಅರ್ಥ) ಸಕಲೇಂದ್ರಿಯಗಳಿಗೂ ನಿಯಾಮಕನಾದ ಹೇ ಶ್ರೀಹರಿಯೇ! (ಹೃಷೀಕ-ಇಂದ್ರಿಯಗಳಿಗೆ, ಈಶ-ಒಡೆಯ) ಭಂಗಾರದ ಕೊಡದಲ್ಲಿ ತರಲ್ಪಟ್ಟ ನಿರ್ಮಲವಾದ ಗಂಗಾಜಲವನ್ನು ನನಗಾಗಿ ಸ್ವೀಕರಿಸು. ಹೇ ಪುರುಷೋತ್ತಮನೇ! ಪ್ರಸನ್ನನಾಗು.

ಇನ್ನು ನೈವೇದ್ಯ ಸಂಬಂಧಪಟ್ಟ ಕೆಲವು ನಿಯಮಗಳನ್ನು ಮೊದಲು ತಿಳಿಸುವೆನು.

ನೈವೇದ್ಯಕ್ಕೆ ಸಂಬಂಧಿಸಿದ ಕೆಲವು ನಿಯಮಗಳು

1. ಯಾವ ಪಾತ್ರೆಯಲ್ಲಿ ಅಡಿಗೆ ಮಾಡಿದೆಯೋ ಆ ಪಾತ್ರೆಗಳಲ್ಲೇ ನೈವೇದ್ಯಕ್ಕೆ ಇಡಬಾರದು, ಬೇರೆ ಪಾತ್ರೆಯಲ್ಲೇ ಇಡಬೇಕು ಎಂಬುದು ಒಂದು ಪಕ್ಷ.

2. ಮಣ್ಣಿನ ಪಾತ್ರೆಗಳಲ್ಲೂ ಕಬ್ಬಿಣದ ಪಾತ್ರೆಗಳಲ್ಲೂ, ಮರದ ಪಾತ್ರೆಗಳಲ್ಲೂ, ಚಿಗುರು ಎಲೆಯ ಮೇಲೂ ಕೈಯಲ್ಲೂ ಭೂಮಿಯ ಮೇಲೂ ನೈವೇದ್ಯಕ್ಕೆ ಇಡಬಾರದು.

3. ಅದಕ್ಕೆ ಪ್ರತಿಯಾಗಿ ಭಂಗಾರ, ಬೆಳ್ಳಿ, ತಾಮ್ರ, ಹಾಗೂ ಕಂಚು ಪಾತ್ರೆಗಳೂ ಮುತ್ತುಗದ ಎಲೆ, ತಾಮ್ರಪಾತ್ರಗಳೂ ನೈವೇದ್ಯಕ್ಕೆ ಇಡಲು ಯೋಗ್ಯವಾದುವು. ಇದಕ್ಕೆ ಪ್ರಮಾಣ— (ತೆಲುಗು ಅಹ್ನಿಕಮಂಜರಿಯಿಂದ)

ಪಾಕಪಾತ್ರೇಣ ನೈವೇದ್ಯಂ ಯೋಽರ್ಪಯೇನ್ಮಮ ನಿತ್ಯಶಃ ।
ಮಮ ದ್ರೋಹೀತಿ ತಂ ಮತ್ವಾ ನಿತರಾಂ ಬಾಧತೇ ಕಲಿಃ ॥

(ಅರ್ಥ) ಯಾವನು ನಿಕೃಷ್ಟವೂ ಅಡಿಗೆ ಮಾಡಿದ ಪಾತ್ರೆಯಲ್ಲೇ ನನಗೆ ನೈವೇದ್ಯಕ್ಕೆ ಇಡುತ್ತಾನೋ ಅವನನ್ನು ನನ್ನ (ಭಗವಂತನ) ದ್ರೋಹಿಯೆಂದು ತಿಳಿದು ಕಲಿಯು ಬಹಳ ಬಾಧಿಸುತ್ತಾನೆ. (ನಿತರಾಂ–ತುಂಬಾ, ಬಹಳ)

ಮೃಣ್ಮಯೇ ಲೋಹಪಾತ್ರೇ ಚ ಪಾಷಾಣೇ ಲೋಹ-ಕಾಷ್ಟಕೇ ।
ಪಲ್ಲವೇ ಕರ-ಭೂಮ್ಯೋಸ್ತು ನೈವೇದ್ಯಂ ನೈವ ದಾಪಯೇತ್ ॥ ೭ ॥

(ಶಬ್ದಾರ್ಥ) ಮೃಣ್ಮಯೇ–ಮಣ್ಣಿನ ಪಾತ್ರೆಯಲ್ಲೂ (ಮಡಕೆಯಲ್ಲೂ), ಲೋಹ-ಕಬ್ಬಿಣ, ಕಾಷ್ಠ-ಕಟ್ಟಿಗೆ, ಮರದ ಪಾತ್ರೆ, ಪಲ್ಲವೇ–ಎಳೆಯ ಚಿಗುರಿನ ಮೇಲೂ, ಕರ–ಕೈಯಲ್ಲೂ, ಭೂಮ್ಯೋಃ ತು-ನೆಲದ ಮೇಲೂ, ನೈವೇದ್ಯಂ-ನೈವೇದ್ಯವನ್ನು, ನೈವ ದಾಪಯೇತ್-ಕೊಡಿಸಬಾರದು (ಇಡಬಾರದು).

(ಭಾವಾರ್ಥ) ಮಣ್ಣಿನ ಪಾತ್ರೆಗಳಲ್ಲೂ, ಕಬ್ಬಿಣದ ಪಾತ್ರೆಗಳಲ್ಲೂ, ಕಲ್ಲಿನ ಪಾತ್ರೆಗಳಲ್ಲೂ, ಮರದ ಪಾತ್ರೆಗಳಲ್ಲೂ, ಲೋಹದ ಎಂದರೆ ಅಲ್ಯೂಮಿನಿಯಂ ಪಾತ್ರೆಗಳಲ್ಲೂ, ಎಳೆಯ ಚಿಗುರಿನ ಮೇಲೂ, ಕೈಯಲ್ಲೂ. ನೆಲದ ಮೇಲೂ ನೈವೇದ್ಯಕ್ಕೆ ಇಡಬಾರದು.

ಸೌವರ್ಣಂ ರಜತಂ ತಾಮ್ರಂ ಕಾಂಸ್ಯ ಪಾಲಾಶಪತ್ರಕಮ್ ।
ನೈವೇದ್ಯಾಯಾಬ್ಜಪತ್ರಂ ತು ಪಾತ್ರಂ ವಿಷ್ಣೋರತಿಪ್ರಿಯಮ್ ॥

(ಶಬ್ದಾರ್ಥ) ಸೌವರ್ಣಂ ಪಾತ್ರಂ-ಭಂಗಾರದ ಪಾತ್ರೆ, ರಜತಂ ಪಾತ್ರಂ-ಬೆಳ್ಳಿಯ ಪಾತ್ರೆ, ಕಾಂಸ್ಯ–ಕಂಚಿನ ಪಾತ್ರೆ, ಪಾಲಾಶ–ಮುತ್ತುಗದ ಎಲೆ, ಅಬ್ಜಪತ್ರಂ–ಕಮಲದ ಎಲೆಯು.

(ಭಾವಾರ್ಥ) ಭಂಗಾರದ ಪಾತ್ರೆಗಳೂ, ಬೆಳ್ಳಿಯ ಪಾತ್ರೆಗಳೂ, ತಾಮ್ರದ ಪಾತ್ರೆಗಳೂ, ಕಂಚಿನ ಪಾತ್ರೆಗಳೂ, ಮುತ್ತುಗದ ಎಲೆಯೂ ನೈವೇದ್ಯಕ್ಕೆ ಯೋಗ್ಯವಾದುವು. ಕಮಲದ ಎಲೆಯಾದರೆ ವಿಷ್ಣುವಿಗೆ ಬಹಳ ಪ್ರೀತಿ.

4. ಮಂಡಲ ಮಾಡುವಾಗ ಮುಸುರೆ ಪದಾರ್ಥಗಳನ್ನು ಇಡಲು ಬೇರೆ ಮಂಡಲವನ್ನೂ ಮುಸುರೆಯಿಲ್ಲದ ಹಾಲು ಮೊಸರು ತುಪ್ಪ ಹಣ್ಣು ಮೊದಲಾದುವನ್ನು ಇಡುವುದಕ್ಕಾಗಿ ಪ್ರತ್ಯೇಕವಾಗಿ ಮತ್ತೊಂದು ಮಂಡಲ ಮಾಡಿ ಅದರ ಮೇಲೇ ಇಡಬೇಕು.

5. ನೈವೇದ್ಯವನ್ನು ಅಕಳ ತುಪ್ಪದಿಂದ ಪ್ರಣವೋಚ್ಚಾರ ಮಾಡಿ ಅಭಿಘಾರ ಮಾಡದೆ ದೇವರಿಗೆ ಸಮರ್ಪಿಸಬಾರದು.

6. ನೈವೇದ್ಯಕ್ಕೆ ಇಡುವ ಪದಾರ್ಥಗಳನ್ನು ಮೂಸಿನೋಡಿ ಇಡಬಾರದು. ಹಿಂದಿನ ದಿನ ಮಾಡಿದ ಪದಾರ್ಥಗಳನ್ನೂ (ತಂಗಳು ಪದಾರ್ಥಗಳನ್ನೂ) ಇಡಬಾರದು.

7. ಅಭೋಜ್ಯವಾದ ಪದಾರ್ಥಗಳನ್ನು ದೇವರಿಗೆ ಸರ್ವಥಾ ಸಮರ್ಪಿಸಬಾರದು. ನೈವೇದ್ಯಕ್ಕೆ ಯೋಗ್ಯವಾದ ತರಕಾರಿಗಳನ್ನೂ, ಅಯೋಗ್ಯವಾದ ಪದಾರ್ಥಗಳನ್ನೂ

ಲ. ನಾ. ಉಪಾಧ್ಯಾಯರು 'ಸದಾಚಾರಸ್ಮೃತಿ' ವ್ಯಾಖ್ಯಾನದಲ್ಲಿ ತೋರಿಸಿದ್ದಾರೆ. ಕೆಲವನ್ನು ಮಾತ್ರ ಕೆಳಗೆ ಸಂಗ್ರಹಿಸಿಕೊಟ್ಟಿದೆ.

8. "ಯೋಗ್ಯವಾದ ಪದಾರ್ಥಗಳು"— ಹಣ್ಣುಗಳು, ಭಕ್ಷ್ಯಗಳು, ಬಾಳೆಹಣ್ಣು, ಪಡುವಲಕಾಯಿ, ಕಿರುನೆಲ್ಲಿ, ದೊಡ್ಡ ನೆಲ್ಲಿ, ಬೂದಗುಂಬಳಕಾಯಿ, ಸೌತೆಕಾಯಿ, ಹಲಸಿನ ಹಣ್ಣು, ಹಲಸಿನಕಾಯಿ, ತೆಂಗಿನಕಾಯಿ, ಬೇಲದ ಹಣ್ಣು-ಕಾಯಿ, ಮಾವಿನ ಹಣ್ಣು, ಮಾವಿನಕಾಯಿ, ದ್ರಾಕ್ಷಾಫಲ, ನಿಂಬೇಹಣ್ಣು, ಹುಣಸೇಕಾಯಿ, ಹುಣಸೇಹಣ್ಣು, ಸ್ವರ್ಣ (ಸೂರಣ)ಗೆಡ್ಡೆ, ಗೆಣಸು ಮೊದಲಾದ ಗೆಡ್ಡೆಗಳು ಇತ್ಯಾದಿ.

9. "ನಿಷಿದ್ಧ ಪದಾರ್ಥಗಳು"— ಹುರುಳಿ, ಅವರೆ, ಮೂಲಂಗಿ, ನುಗ್ಗೇಕಾಯಿ, ರಾಗಿ, ಬದನೇಕಾಯಿ, ಬಿಲ್ವಫಲ, ಇತ್ಯಾದಿ. 'ಯಸ್ಯೋದರೇ ಪ್ರವರ್ತಂತೇ ತಸ್ಯ ದೂರತರೋ ಹರಿಃ'—ಇವುಗಳು ಯಾವನ ಹೊಟ್ಟೆಯಲ್ಲಿ ಸೇರುವುವೋ ಶ್ರೀಹರಿಯು ಅವನನ್ನು ಬಿಟ್ಟು ದೂರ ಹೋಗುವನು.

ಅ) ಶ್ರೀ ಪ್ರಭಂಜನಾಚಾರ್ಯರೂ 'ಪದ್ಯಮಾಲಾ'ದಲ್ಲಿ ನೈವೇದ್ಯಪ್ರಕರಣದ ವಿಶೇಷಾಂಶಗಳ ಕೆಳಗೆ 'ನೈವೇದ್ಯಯೋಗ್ಯ ಪದಾರ್ಥಗಳ'ನ್ನು ಹೀಗೆ ಸೂಚಿಸಿದ್ದಾರೆ. (ಪುಟ ೭೫)—

ನೈವೇದ್ಯಂ ಪಾಯಸಾದ್ಯಂ ಸ್ಯಾ—ನ್ನಾನಾಭಕ್ಷಸಮನ್ವಿತಮ್ ।
ಹವಿಷ್ಯಂ ಘೃತಪಕ್ವಂ ಚ ಫಲಾನಿ ವಿವಿಧಾನಿ ಚ ॥

—ವಿಷ್ಣುತೀರ್ಥೀಯ II, 109

(ಅರ್ಥ) ನೈವೇದ್ಯಕ್ಕೆ ಈ ಪದಾರ್ಥಗಳನ್ನಿಡಬಹುದು—ಪಾಯಸ, ಮೊದಲಾದ ಅಡಿಗೆ ಪದಾರ್ಥಗಳು, ನಾನಾ ವಿಧವಾದ ಭಕ್ಷ್ಯಗಳು, ಅನ್ನ, ತುಪ್ಪದಲ್ಲಿ ಬೇಯಿಸಿದ ಅಥವಾ ಕರಿದು ಮಾಡಿದ ಪದಾರ್ಥಗಳು, ನಾನಾ ವಿಧವಾದ ಹಣ್ಣುಗಳು.

ಆ) ಯೋಗದೀಪಿಕಾದಲ್ಲಿ (ಪ್ರಕರಣ X) ಹೀಗೆ ಹೇಳಿದೆಯನ್ನುತ್ತಾರೆ (ಅಲ್ಲೇ)—

ವನಸ್ಥಾನ್ ಫಲಮೂಲಾದೀನ್ ವಿನಾ ದ್ರವ್ಯಂ ಸುಖಾಗತಾನ್ ।
ಈಷತ್ಪ್ರಯತ್ನತಃ ಸಾಧ್ಯಾನ್ ....

(ಅರ್ಥ) ಕಾಡಿನಲ್ಲಿ ಬಿಟ್ಟ ಹಣ್ಣು ಗೆಣಸುಗಳು ದುಡ್ಡು ಕೊಡದೆ ಸಿಕ್ಕರೆ ಅಥವಾ ಸ್ವಲ್ಪ ಪ್ರಯತ್ನದಿಂದ ಅದು ಸಿಗುವಂತಿದ್ದರೆ ಅವನ್ನು ಸಮರ್ಪಿಸಬಹುದು.

ಶರೀರಯಾತ್ರಾಸಿದ್ಧ್ಯರ್ಥ—ಮನ್ನಪಾನಧನಾದಿಕಾನ್ ।
ಸಂಪಾದಯತಿ ಯಾನೇವ ಪೂಜಾರ್ಥಂ ತಾನ್ ಪ್ರಕಲ್ಪಯೇತ್ ॥

(ಅರ್ಥ) ನಮ್ಮ ಹೊಟ್ಟೆ ತುಂಬುವುದಕ್ಕಾಗಿ ಏನೇನು (ಅನಿಷಿದ್ಧ) ಪದಾರ್ಥಗಳನ್ನು ಸಂಪಾದಿಸಿ ಸಿದ್ಧಪಡಿಸುತ್ತೇವೋ ಅದನ್ನೆಲ್ಲ ನೈವೇದ್ಯಕ್ಕಿಡಬಹುದು.

ಇ) ಪಂಚರಾತ್ರದಲ್ಲಿ ಈ ರೀತಿ ಹೇಳಿದೆ—

ಪ್ರಥಮಂ ತ್ವೋದನಂ ಪ್ರೋಕ್ತಂ ಲವಣಂ ವ್ಯಂಜನಾಧಿಕಮ್ ।
ಲೇಹ್ಯಂ ಪೇಯಂ ಚ ಚೋಷ್ಯಂ ಚ ಖಾದ್ಯಂ ಚೈವ ಚತುರ್ವಿಧಮ್ ॥

(ಅರ್ಥ) ಮೊದಲನೆಯದು ಅನ್ನ (ತು + ಓದನಂ = ತ್ವೋದನಂ = ಅನ್ನ), ಉಪ್ಪು, ನೆಂಚಿಕೊಳ್ಳುವ ಪಲ್ಯ ಮೊದಲಾದುವು; ಇವು ಲೇಹ್ಯ (ನೆಕ್ಕಿ ತಿನ್ನತಕ್ಕವು), ಪೇಯ (ಕುಡಿಯತಕ್ಕವು), ಚೋಷ್ಯ (ಚಪ್ಪರಿಸಿ ಕುಡಿಯತಕ್ಕವು, ಗೊಜ್ಜು, ಸೀಕರಣೆ ಇತ್ಯಾದಿ), ಖಾದ್ಯ (ತಿನ್ನತಕ್ಕವು—ಅನ್ನ, ಚಿತ್ರಾನ್ನ, ಹಯಗ್ರೀವ ಮೊದಲಾದುವು ಎಂದು ನಾಲ್ಕು ವಿಧವಾಗಿವೆ.

ಪರಮಾನ್ನಂ ಹರಿದ್ರಾನ್ನಂ ಚಿತ್ರಾನ್ನಂ ಚೋದನಂ ತಥಾ ।
ಗುಡೋದನಂ ಚ ಮುದ್ಗಾನ್ನ—ಮಿತ್ಯನ್ನಂ ಷಡ್ವಿಧಂ ಸ್ಮೃತಮ್ ॥

(ಅರ್ಥ) ಪರಮಾನ್ನ (ಪಾಯಸ), ಹರಿದ್ರಾನ್ನ (ಹರಿದ್ರಾ-ಅರಿಶಿನ; ಅರಿಶಿನ ಹಾಕಿ ಮಾಡಿದ ನಿಂಬೇಹಣ್ಣಿನ ಚಿತ್ರಾನ್ನ ಇತ್ಯಾದಿ, ಚಿತ್ರಾನ್ನ (ಹುಣಸೇಹಣ್ಣು ಹಾಕಿ ಮಾಡಿದ ಎಳ್ಳುಪುಡಿ ಚಿತ್ರಾನ್ನ ಅಥವಾ ಪುಳಿಹೋರೆ), ಬರಿಯ ಅನ್ನ, ಗುಡೋದನ- (ಗುಡ-ಬೆಲ್ಲ, ಓದನ-ಅನ್ನ. ಅಕ್ಕಿ ಕಡಲೆ ಹಾಕಿ ಬೇಯಿಸಿ ಬೆಲ್ಲ ಹಾಕಿ ಮಾಡಿದ ಹುಗ್ಗಿ, ಮುದ್ಗಾನ್ನ (ಮುದ್ಗ-ಹೆಸರುಬೇಳೆ. ಹೆಸರುಬೇಳೆ ಅಕ್ಕಿ ಹಾಕಿ ಮಾಡಿದ ಹುಗ್ಗಿ ಅಥವಾ ಪೊಂಗಲು) ಎಂದು ಅನ್ನವೇ ಆರು ವಿಧವಾಗಿದೆ.

ಸರ್ವಂ ಭಕ್ಷ್ಯಂ ಚ ಭೋಕ್ಷ್ಯಂ(ಜ್ಯಂ) ಚ
ರಸೈಃ ಷಡ್ಭಿಃ ಸಮನ್ವಿತಮ್ ॥ ೯ ॥

(ಅರ್ಥ) ಹುಳಿ, ಖಾರ, ಸಿಹಿ, ಉಪ್ಪು, ಒಗರು ಇತ್ಯಾದಿ ಷಡ್ರಸೋಪೇತವಾದ ಭಕ್ಷ್ಯ, ಭೋಜ್ಯಗಳು.

ಕದಳೀಪನಸಾಮ್ರಾಣಾಂ ಸುಪಕ್ವಾನಿ ಫಲಾನಿ ಚ ।
ಕಂದ-ಮೂಲ-ವ್ಯಂಜನಾನಿ ಘೃತಮಿಶ್ರಫಲಾನಿ ಚ ॥

(ಅರ್ಥ) ಕದಳೀ-ಬಾಳೆಹಣ್ಣು, ಪನಸ-ಹಲಸಿನಹಣ್ಣು, ಆಮ್ರಾಣಾಂ-ಮಾವಿನ ಹಣ್ಣು ಇವೇ ಮೊದಲಾದ ಮಾಗಿದ (ಚೆನ್ನಾಗಿ ಹಣ್ಣಾದ) ನಾನಾವಿಧವಾದ ಹಣ್ಣುಗಳು, ಗೆಡ್ಡೆಗಳು, ಗೆಣಸು ಮೊದಲಾದ ತರಕಾರಿಗಳು, ತುಪ್ಪ ಇರುವ ಹಣ್ಣುಗಳು ಇವುಗಳೆಲ್ಲವನ್ನೂ ದೇವರಿಗೆ ನೈವೇದ್ಯಕ್ಕೆ ಇಡಬಹುದು.

10. ಯದ್ಯದಿಷ್ಟತಮಂ ಲೋಕೇ ಯಚ್ಚಾತಿ ಪ್ರಿಯಮಾತ್ಮನಃ ।
ತತ್ತನ್ನಿವೇದಯೇದ್ವಿಷ್ಣೋಸ್—ತದಾನಂತ್ಯಾಯ ಕಲ್ಪತೇ ॥

(ಲ.ನಾ. ಉಪಾಧ್ಯಾಯರ 'ಸದಾಚಾರಸ್ಮೃತಿ' ವ್ಯಾಖ್ಯಾನದಿಂದ)

(ಅರ್ಥ) ಲೋಕದಲ್ಲಿ ತನಗೆ ಅತ್ಯಂತ ಇಷ್ಟವಾದ ಮತ್ತು ಪ್ರಿಯವಾದ ವಸ್ತುಗಳನ್ನೂ (ಅವು ನಿಷಿದ್ಧವಲ್ಲದಿದ್ದರೆ) ವಿಷ್ಣುವಿಗೆ ಸಮರ್ಪಿಸಬೇಕು. ಆದರಿಂದ ಅನಂತ ಫಲವು ಬರುತ್ತದೆ.

11. ಅಡಿಗೆ ಮಾಡಿರುವ ಪದಾರ್ಥಗಳನ್ನು ಬೇರೆ ಪಾತ್ರೆಗಳಲ್ಲಿಯೇ ನೈವೇದ್ಯಕ್ಕೆ ಇಡುವ ಸಂಪ್ರದಾಯವೂ ಇದೆ. ಆದರೆ ಅಡಿಗೆ ಮಾಡಿರುವ ಎಲ್ಲಾ ಪದಾರ್ಥಗಳನ್ನೂ ಆಯಾ ಪಾತ್ರೆಗಳಲ್ಲೇ ಇಡುವ ಸಂಪ್ರದಾಯವೂ ಇದೆ; ಇದು 'ಸರ್ವಸಮರ್ಪಣ ಸಂಪ್ರದಾಯ' ಎನಿಸುತ್ತದೆ. (ಲ.ನಾ.ಉಪಾಧ್ಯಾಯರ 'ಸದಾಚಾರಸ್ಮೃತಿ' ವ್ಯಾಖ್ಯಾನದಿಂದ) ಇದಕ್ಕೆ ಪ್ರಮಾಣ—

ಅದ್ಯ ತಿಷ್ಠತಿ ಯತ್ಕಿಂಚಿತ್ ಕಲ್ಪಿತಂ ಚಾಪರೇ(ರಂ) ಗೃಹೇ ।
ಪಕ್ವಮನ್ನಂ ಸ(ಸು)ಪಾನೀಯಂ ಸರ್ವೋಪಸ್ಕರಸಂಯುತಮ್ ॥೧॥
ಯಥಾಕಾಲಂ ಮನುಷ್ಯಾದ್ಯೈರ್ ಭೋಕ್ಷ್ಯಮಾಣಂ ಶರೀರಿಭಿಃ ।
(ಪಾಠಾಂ. ಭೋಜ್ಯಮಾನಂ ಸುರೈರಪಿ)
ತತ್ಸರ್ವಂ ವಿಷ್ಣುಪೂಜಾಸ್ತು ಪ್ರೀಯತಾಂ ಮೇ ಜನಾರ್ದನಃ ॥೨॥

(ಕಠಿನ ಶಬ್ದಾರ್ಥ) ಅದ್ಯ-ಈ ದಿನ, ಇವತ್ತು, ಕಲ್ಪಿತಂ-ಮಾಡಲ್ಪಟ್ಟಿದೆಯೋ, ಅಪರೇ ಗೃಹೇ-ಬೇರೆಯವರ ಮನೆಯಲ್ಲಿ, ಸರ್ವ ಉಪಸ್ಕರ ಸಂಯುತಂ-ನೆಂಚಿಕೊಳ್ಳುವುದು, ಕಲಸಿಕೊಳ್ಳುವುದೇ ಮೊದಲಾದ ಸಕಲ ಸಾಮಗ್ರಿಗಳ ಸಮೇತವಾಗಿ, ಭೋಜ್ಯಮಾನಂ-ತಿನ್ನಲ್ಪಡುವುದೆಲ್ಲ, ಶರೀರಿಭಿಃ-ಪ್ರಾಣಿಗಳಿಂದ, ಸುರೈರಪಿ-ದೇವತೆಗಳಿಂದಲೂ.

[ಅರ್ಥ] ಈ ದಿವಸ ನಮ್ಮ ಮನೆಯಲ್ಲಿ ಏನೇನು ಅಡಿಗೆ ಮಾಡಿದೆಯೋ ಅಥವಾ ಬೇರೆಯವರ ಮನೆಯಲ್ಲಿ ಏನೇನು ಪಕ್ವಾನ್ನ ಮೊದಲಾದುವೂ ಅವಕ್ಕೆ ಬೇಕಾದ ಕಲಸಿಕೊಳ್ಳುವ [ಹುಳಿ, ಸಾರು ಮೊದಲಾದುವು] ಅಥವಾ ನೆಂಚಿಕೊಳ್ಳುವ [ಪಲ್ಯ, ಚಟ್ನಿ, ಗೊಜ್ಜು ಮೊದಲಾದುವು] ಸಕಲ ಪರಿಕರಗಳೊಡನೆಯೂ, ಅಲ್ಲದೆ ಆಯಾ ಕಾಲದಲ್ಲಿ ಮನುಷ್ಯರೇ ಮೊದಲಾದ ಪ್ರಾಣಿಗಳೂ, ಸಕಲ ದೇವತೆಗಳೂ ಸ್ವೀಕರಿಸುವುದೆಲ್ಲವೂ ವಿಷ್ಣುಪೂಜಾರೂಪವಾಗಲಿ. ಸಕಲರಲ್ಲಿ ಅಂತರ್ಗತನಾದ ಜನಾರ್ದನನು ನನ್ನ ಈ ಸಮರ್ಪಣೆಯಿಂದ ಪ್ರೀತನಾಗಲಿ.

ಅಲ್ಲದೆ ಲ.ನಾ. ಉಪಾಧ್ಯಾಯರ 'ಸದಾಚಾರಸ್ಮೃತಿ ವ್ಯಾಖ್ಯಾನ'ದಲ್ಲಿ ನೈವೇದ್ಯಕ್ಕೆ ಇಡಬೇಕಾದ ಕ್ರಮವನ್ನು ತಿಳಿಸುವ ಪ್ರಮಾಣಶ್ಲೋಕಗಳಲ್ಲಿ (ಆದರ ಆಕರವನ್ನು ಹೇಳಿಲ್ಲ) ಹೀಗೆ ಹೇಳಿದೆ—

ಸ್ಥಲಶುದ್ಧಿಂ ತತಃ ಕೃತ್ವಾ ದೇವಸ್ಯಾಗ್ರೇ ಲಿಖೇಚ್ಛ್ರಿಯಃ ।
ಬೀಜಂ ತತ್ರ ಚ ನೈವೇದ್ಯಂ ತತ್ತತ್ಪಾತ್ರಸ್ಥಮೇವ ಚ ।
ಆನೀಯ ಸ್ಥಾಪ್ಯ............

(ಅರ್ಥ) ಸ್ಥಲಶುದ್ಧಿಯನ್ನು ಮಾಡಿ ದೇವರ ಎದುರಿಗೆ (ಚೌಕನೆಯ ಮಂಡಲವನ್ನು ಮಾಡಿ ಅದರ ಮಧ್ಯದಲ್ಲಿ) ಶ್ರೀ ಬೀಜವನ್ನು (ಎಂದರೆ 'ಶ್ರೀಂ') ಎಂದು ಬರೆದು ಅದರಲ್ಲಿ ನೈವೇದ್ಯವನ್ನು "ಯಾವ ಯಾವ ಪಾತ್ರೆಗಳಲ್ಲಿ ಮಾಡಿದೆಯೋ ಆ ಪಾತ್ರೆಗಳಲ್ಲೇ" ತಂದಿಟ್ಟು—ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಅಡಿಗೆ ಮಾಡಿದ ಪಾತ್ರೆಗಳಲ್ಲೇ ನೈವೇದ್ಯಕ್ಕೆ ಇಡುವುದೂ ಸಂಪ್ರದಾಯವಿದೆಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ನಮ್ಮ ಹಿರಿಯರು ಬರೆದಿಟ್ಟ 'ದೇವರ ಪೂಜಾಪದ್ಧತಿ'ಯಲ್ಲೂ 'ಸಮಗ್ರಂ ನಿವೇದಯೇತ್' —ಮಾಡಿದಷ್ಟನ್ನೂ ನಿವೇದಿಸಬೇಕು ಎಂದು ಬರೆದಿದೆ. ಸಮಾರಾಧನೆ ಅಡಿಗೆಯಲ್ಲಿ ಒಂದೊಂದು ಪದಾರ್ಥವೂ ಬಹಳ ಇರುವುದರಿಂದ ಅಲ್ಲಿ ಮಾತ್ರ 'ಸಮಗ್ರ' ಇಡಲು ಸಾಧ್ಯವಿಲ್ಲವಾದ್ದರಿಂದ ತಟ್ಟೆಯಲ್ಲಿ ಎಲ್ಲ ಪದಾರ್ಥಗಳನ್ನೂ ತಂದು ಅದನ್ನೇ ನೈವೇದ್ಯ ಮಾಡುವುದು ವಾಡಿಕೆ.

ದೇವರ ಮುಂದೆ ನೈವೇದ್ಯಕ್ಕೆ ಪದಾರ್ಥಗಳನ್ನು ಇಡುವಾಗಲೂ ನಾವು ಭೋಜನಕ್ಕೆ ಎಲೆಯ ಮೇಲೆ ಹೇಗೆ ಶಿಸ್ತಿನಿಂದ ಇಂಥಾ ಕಡೆ ಪಾಯಸ, ಇಂಥಾ ಕಡೆ ಪಲ್ಯ, ಇಂಥಾ ಕಡೆ ಭಕ್ಷ್ಯ ಎಂದು ಬಡಿಸುವೆವೋ ಅದೇ ಕ್ರಮದಲ್ಲೇ ನೈವೇದ್ಯಕ್ಕೆ ಇಡಬೇಕು. ದೇವರು ಊಟಕ್ಕೆ ಕುಳಿತಿದ್ದಾನೆ ಎಂದು ತಿಳಿದುಕೊಂಡು ಅವನಿಗೆ ಸಮ್ಮುಖವಾಗಿ ಪದಾರ್ಥಗಳನ್ನು ಇಡಬೇಕು. ದೇವರಿಗೂ ಎಲೆಗೂ ಅಥವಾ ಮಾಡಿರುವ ಶುದ್ಧಿಮಂಡಲಕ್ಕೂ ಮಧ್ಯೆ ಇರುವ ಭಾಗವೇ ಪೂರ್ವವೆಂದೂ ನಮಗೂ ಮಂಡಲಕ್ಕೂ ಮಧ್ಯೆ ಇರುವ ಭಾಗ ಪಶ್ಚಿಮವೆಂದೂ ನಮ್ಮ ಬಲಭಾಗ ದಕ್ಷಿಣವೆಂದೂ ಎಡಭಾಗ ಉತ್ತರವೆಂದೂ ತಿಳಿದುಕೊಂಡು ಪದಾರ್ಥಗಳನ್ನು ಕ್ರಮವಾಗಿ ಇಡಬೇಕು. ಆ ಕ್ರಮವನ್ನು ಶ್ರೀಮದ್ವಾದಿರಾಜಸ್ವಾಮಿಗಳು 'ನೈವೇದ್ಯ ಪ್ರಕರಣ'ದಲ್ಲಿ ಹೀಗೆ ಹೇಳಿದ್ದಾರೆಂದು ಶ್ರೀ ಪ್ರಭಂಜನರ ಪದ ಮಾಲಾದಲ್ಲಿ ಕೊಟ್ಟಿದೆ.

ನೈವೇದ್ಯಕ್ಕೆ ಪದಾರ್ಥಗಳನ್ನು ಇಡುವ ಕ್ರಮ

ಭಕ್ಷ್ಯಾಣ್ಯಾಗ್ನೇಯ ಕೋಣೇ ತು ಐಶಾನ್ಯಾಂ ಪಾಯಸಂ ನ್ಯಸೇತ್।
ನೈರ್ಋತ್ಯಾಂ ಲೇಹ್ಯಪೇಯಾದಿ ವಾಯವ್ಯಾಮುಪಭೋಜನಮ್ ॥೧॥
ಮಧ್ಯೇ ಚರುಂ ಸ್ಥಾಪಯಿತ್ವಾ ಸ್ಥಾಪಯೇದ್ ಘೃತಪಾತ್ರಕಮ್।
ಪರಮಾನ್ನಚರ್ವೋರ್ಮಧ್ಯೇ ಘೃತಪಾತ್ರಂ ವಿನಿಕ್ಷಿಪೇತ್ ॥೨॥

(ಅರ್ಥ) ಮಧ್ಯೆ ಚರುಪಾತ್ರೆ (ಅನ್ನದ ಪಾತ್ರೆ) ಇಡಬೇಕು. ಭಕ್ಷ್ಯಗಳನ್ನು ಆಗ್ನೇಯ ಮೂಲೆಯಲ್ಲೂ, ಈಶಾನ್ಯ ದಿಕ್ಕಿನಲ್ಲಿ ಪಾಯಸವನ್ನೂ, ನೈಋತ್ಯಮೂಲೆಯಲ್ಲಿ ಲೇಹ್ಯ ಪೇಯಗಳನ್ನೂ, ವಾಯವ್ಯದಲ್ಲಿ ಚಿತ್ರಾನ್ನ ಮೊದಲಾದ ಉಪಭೋಜನಪದಾರ್ಥಗಳನ್ನೂ ಇಟ್ಟು ಅನ್ನಕ್ಕೂ ಪಾಯಸಕ್ಕೂ ನಡುವೆ ತುಪ್ಪದ ಪಾತ್ರೆ ಇಡಬೇಕು.

ಈ ವಿಚಾರ ಕೆಳಗಿನ ಚಿತ್ರದಿಂದ ಸ್ಪಷ್ಟವಾಗುತ್ತದೆ—



ದೇವರಿಗೆ ಅಡಿಗೆ ಮಾಡುವ (ಪಾಕಕರ್ತೃ) ದೇವತೆಗಳು

ಭಗವಂತನಿಗೆ ಅಡಿಗೆ ಮಾಡಿ ಬಡಿಸಲು ಮುಖ್ಯಮುಖ್ಯ ದೇವತೆಗಳೇ ಬರುತ್ತಾರೆ. ಆಯಾ ಅಡಿಗೆಗಳನ್ನು ಇಂಥಿಂಥಾ ದೇವತೆ ಮಾಡಿದ್ದು ಎಂದು ಚಿಂತಿಸಬೇಕು.

ಅನ್ನಂ ಸರಸ್ವತೀ ಕುರ್ಯಾತ್ ಬ್ರಹ್ಮಾ ಕುರ್ಯಾತ್ ತಥಾ ರಸಮ್ ।
(ಪಾಠಾಂ. ತಥಾ ಹರೇಃ ।)
ಸೂಪಂ ಕುರ್ಯಾನ್ಮಹಾಲಕ್ಷ್ಮೀರ್ ಘೃತಂ ನಾರಾಯಣಃ ಸ್ವಯಮ್ ॥
(ಪಾಠಾಂ ನಾರಾಯಣಾಯ ವೈ॥)

ಪಾಯಸಂ ಭಾರತೀ ಕುರ್ಯಾದ್ ಭಕ್ಷ್ಯಂ ವಾಯುರ್ಜಗತ್ಪ(ತಿಃ)ತೇಃ ।
ಇಂದ್ರಶಚ್ಯಾದಿಕಾಃ ಸರ್ವಾಃ ಕುರ್ಯುಃ ಶಾಕಾದಿಕಂ (ಹರೇಃ) ತಥಾ ॥

ಉಷಾದ್ಯಾಃ ಸರ್ವಪಾನೀಯಂ ಕುರ್ಯುರ್ದೇವಸ್ಯ ಚಕ್ರಿಣಃ ।
ಪರಿವೇಷಯತೀಶಂ ಶ್ರೀರ್ ಮುಖ್ಯಪ್ರಾಣಸ್ತು ವೀಜಯೇತ್ ।
ಭಾರತ್ಯಾದ್ಯಾಃ ಪರಿಚರಂ—ವೇಂದ್ರಾದ್ಯಾ (ಜಯಾದ್ಯಾ)
ದ್ವಾರಪಾಲಕಾಃ ॥

(ಅರ್ಥ) ಸರಸ್ವತೀದೇವಿಯು ಅನ್ನ ಮಾಡುತ್ತಾಳೆ. ಬ್ರಹ್ಮದೇವರು ಸಾರು (ರಸಂ) ಮಾಡುತ್ತಾರೆ. ರಮಾದೇವಿ ತೊವ್ವೆ ಮಾಡುತ್ತಾಳೆ. ತುಪ್ಪವನ್ನು ಸ್ವಯಂ ನಾರಾಯಣನೇ ಕಾಯಿಸುತ್ತಾನೆ. ಭಾರತಿಯು ಪಾಯಸವನ್ನೂ ವಾಯುದೇವರು ಭಕ್ಷ್ಯಗಳನ್ನೂ ಮಾಡಿದರೆ ಇಂದ್ರ-ಶಚೀ ಮೊದಲಾದವರು ತರಕಾರಿಗಳಿಂದ ಪಲ್ಯಗಳನ್ನು ತಯಾರಿಸುತ್ತಾರೆ. ಮುಷ್ಕಾದಿಗಳು ನೀರಿನ ಏರ್ಪಾಡು ಮಾಡುತ್ತಾರೆ. ಭಗವಂತ ಊಟಕ್ಕೆ ಕುಳಿತಾಗ ಲಕ್ಷ್ಮೀದೇವಿಯೇ ಬಡಿಸುತ್ತಾಳೆ. ಮುಖ್ಯಪ್ರಾಣನು ಬೀಸಣಿಗೆಯಿಂದ ಗಾಳಿ ಹಾಕುತ್ತಾನೆ. ಭಾರತೀ ಮೊದಲಾದವರು ಪರಿಚಾರಿಕೆ ಮಾಡುತ್ತಾರೆ. ಇಂದ್ರಾದಿಗಳೂ ಜಯಾದಿಗಳೂ ದ್ವಾರಪಾಲಕರಾಗಿರುತ್ತಾರೆ.

ಷಡ್ರಸಾಭಿಮಾನಿ ದೇವತೆಗಳು

ರಸಾಭಿಮಾನಿ ದೇವತೆಗಳನ್ನು ಪಂಚರಾತ್ರದಲ್ಲಿ ಹೀಗೆ ಹೇಳಿದೆ—

ರಮಾ ವಾಯುಶ್ಚ ಮಾಧುರ್ಯ— ಮಾನಿನೌ ಪರಿಕೀರ್ತಿತೌ ।
ಧರಾ ಸರಸ್ವತೀ ಹ್ಯಾಮ್ಲ— ಮಾನಿನ್ಯೌ ಪರಿಕೀರ್ತಿತೇ ॥ ೧ ॥
ಸೌಪರ್ಣೀ ಚ ಕಟೋಃ ಸೂರ್ಯೋ ವರುಣಶ್ಚಾಭಿಮಾನಿನಃ ।
ಕಷಾಯಸ್ಯ ಚ ಮಾನಿನ್ಯೌ ಸೌಪರ್ಣೀ ಚ ಶಚೀ ತಥಾ ॥ ೨ ॥
ಉಮಾ ಚ ಶ್ಯಾಮಲಾ ಚೈವ ತಿಕ್ತಸ್ಯ ಪರಿಕೀರ್ತಿತೇ ।
ರಸಸಾಮಾನ್ಯಮಾನೀ ತು ಹ್ಯುದಾನಃ ಪರಿಕೀರ್ತಿತಃ ॥ ೩ ॥
ರಸಾಭಿಮಾನಿನೋ ದೇವಾ— ನೇವಂ ಜ್ಞಾತ್ವಾ ವಿಚಕ್ಷಣಃ ॥

(ಅರ್ಥ) ಮಧುರ (ಸಿಹಿ) ರಸಕ್ಕೆ ಲಕ್ಷ್ಮೀ ಮತ್ತು ವಾಯು. ಆಮ್ಲಕ್ಕೆ (ಹುಳಿ ರಸಕ್ಕೆ) ಧರಾ ಮತ್ತು ಸರಸ್ವತೀ. ಕಟು (ಕಹಿ) ರಸಕ್ಕೆ ಸೌಪರ್ಣೀ (ಗರುಡನ ಪತ್ನೀ), ಸೂರ್ಯ ಮತ್ತು ವರುಣರು. ಕಷಾಯಕ್ಕೆ (ಒಗರಿಗೆ) ಸೌಪರ್ಣೀ ಮತ್ತು ಶಚಿ. ತಿಕ್ತಕ್ಕೆ (ಖಾರಕ್ಕೆ) ಉಮಾ (ಪಾರ್ವತೀ) ಮತ್ತು ಶ್ಯಾಮಲಾ (ಯಮನ ಪತ್ನೀ). ಉದಾನ ವಾಯು ಎಲ್ಲ ರಸಸಾಮಾನ್ಯಕ್ಕೆ ಅಭಿಮಾನೀ. ಹೀಗೆ ರಸಾಭಿಮಾನಿಗಳನ್ನು ತಿಳಿದವನು ವಿವೇಕಿಯೆನಿಸುತ್ತಾನೆ.

ಅನ್ನಾದಿ ಪದಾರ್ಥಗಳಲ್ಲಿರುವ ಮುಖ್ಯ ಭಗವದ್ರೂಪಗಳು

ಪ್ರತಿಯೊಂದು ಪದಾರ್ಥದಲ್ಲೂ ಒಬ್ಬೊಬ್ಬ ಅಭಿಮಾನಿ ದೇವತೆಯೂ ಅವರ ಅಂತರ್ಗತವಾದ ಒಂದೊಂದು ಭಗವದ್ರೂಪವೂ ಇರುತ್ತದೆ. ಆಯಾ ಪದಾರ್ಥಗಳಲ್ಲಿರುವ

ಅಭಿಮಾನಿದೇವತೆಯನ್ನು ತಿಳಿದು ತದಂತರ್ಗತ ಭಗವದ್ರೂಪಗಳನ್ನು ಪ್ರತಿಮಾದಿಗಳಲ್ಲಿರುವ ಭಗವದ್ರೂಪಗಳನ್ನು ಐಕ್ಯಚಿಂತನೆ ಮಾಡುವುದೇ ನೈವೇದ್ಯ ಮಾಡುವುದೆನಿಸಿಕೊಳ್ಳುತ್ತದೆ. ಹೀಗೆ ಮಾಡುವುದರಿಂದ ಭಗವಂತ ಆ ಪದಾರ್ಥಗಳಲ್ಲಿರುವ ಸ್ವಾಖ್ಯರಸವನ್ನು ತೆಗೆದುಕೊಳ್ಳುವುದಲ್ಲದೆ ಮಿಕ್ಕ ರಸವನ್ನು ರಮಾ ಬ್ರಹ್ಮಾದಿ ಪುಷ್ಕರಪರ್ಯಂತ ಸಕಲ ದೇವತೆಗಳಿಗೂ ಕೊಟ್ಟು ನಾವು ಸ್ವೀಕರಿಸಬೇಕಾದ ಮನುಷ್ಯಭೋಗ್ಯ ಭಾಗವನ್ನು ಉಳಿಸುವನು. ಈ ಉಳಿದ ಭಾಗಕ್ಕೇ ಯಜ್ಞಶಿಷ್ಟವೆಂದು ಹೆಸರು.

ಯಾವ ಯಾವ ಪದಾರ್ಥಗಳಿಗೆ ಯಾರು ಯಾರು ಅಭಿಮಾನಿಗಳು? ಅಲ್ಲಿ ಯಾವ ಯಾವ ಭಗವದ್ರೂಪವಿದೆ? ಎಂಬ ಪ್ರಮೇಯವನ್ನು ಬ್ರಹ್ಮಾಂಡಪುರಾಣದಲ್ಲೂ ಪಾಂಚರಾತ್ರದಲ್ಲೂ ವಿಸ್ತಾರವಾಗಿ ಹೇಳಿದೆ. ಅದನ್ನು ಕೆಳಗೆ ಕೊಡುವೆವು. ಈ ವಿಚಾರವನ್ನೇ ವಿಜಯದಾಸರು ಸುಳಾದಿಯಾಗಿ ಬರೆದಿದ್ದಾರಲ್ಲದೆ, ಜಗನ್ನಾಥದಾಸರೂ ನೈವೇದ್ಯಸಂಧಿಯಲ್ಲಿ ಹೇಳಿದ್ದಾರೆ. ಆನಂದ್ ಪ್ರಿಂಟರ್ಸ್ ಅವರು 'ನೈವೇದ್ಯಸಮರ್ಪಣ ಸುಳಾದಿ' ಯೆಂದೇ ಚಿಕ್ಕ ಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಪಂಚರಾತ್ರೋಕ್ತ ಶ್ಲೋಕಗಳನ್ನೂ ಕೊಟ್ಟಿದ್ದಾರಲ್ಲದೆ ಆ ವಿಷಯವನ್ನು ನೆನಪಿಟ್ಟುಕೊಳ್ಳಲು ಅನುಕೂಲವಾಗುವಂತೆ ಪಟ್ಟಿ ರೂಪದಲ್ಲೂ ಕೊಟ್ಟಿದ್ದಾರೆ. ಸುದರ್ಶನ ಕಲಾಮಂದಿರದ ದ್ವಾರಕಿಯವರೂ ಇದನ್ನೇ ದಪ್ಪ ರಟ್ಟಿನ ಮೇಲೆ ಪ್ರಕಟಿಸಿದ್ದಾರೆ. ಶ್ರೀ ಪ್ರಭಂಜನರ ಪದ್ಯಮಾಲಾಪಲ್ಲೂ ಈ ಶ್ಲೋಕಗಳನ್ನೂ ಅದರ ವಿವರಣೆಗಳನ್ನೂ ಕೊಟ್ಟಿದ್ದಾರೆ.

ಆದರೆ ಇಷ್ಟನ್ನೆಲ್ಲಾ ನೆನಪಿಟ್ಟುಕೊಳ್ಳುವುದು ಸ್ವಲ್ಪ ದುಸ್ತರವಾದ್ದರಿಂದ ಕಡೇ ಪಕ್ಷ ಈ ರೀತಿ ಏಳು ರೂಪಗಳನ್ನಾದರೂ ಅವಶ್ಯ ತಿಳಿದುಕೊಳ್ಳಬೇಕು. ಈ ರೀತಿ ತಿಳಿದು ನೈವೇದ್ಯ ಮಾಡಿದ್ದನ್ನು ಭೋಜನ ಮಾಡಿದರೂ ನಿತ್ಯ ಉಪವಾಸ ಮಾಡಿದಂತೆಯೇ ಆಗುತ್ತದೆಯೆಂದು ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ (ಸಂಧಿ ೪, ಪದ್ಯ ೧೦, ೧೩) ಹೇಳಿದ್ದಾರೆ. ಅವಕಾರಣ ಇಷ್ಟನ್ನಾದರೂ ಮರೆಯದೆ ನಿತ್ಯವೂ ತಪ್ಪದೆ ಹೇಳಿಕೊಳ್ಳಬೇಕು.

ವಾಸುದೇವಸ್ತು ಚಾನ್ನಸ್ಥೋ ಭಕ್ಷ್ಯೇ ಸಂಕರ್ಷಣಃ ಸ್ಮೃ(ಸ್ಥಿ)ತಃ।
ಪಾಠಾಂ. ದೇವಸ್ತಥಾನ್ನಸ್ಥೋ ಚ ಭಕ್ಷ್ಯೇ ಸಂಕರ್ಷಣಸ್ತಥಾ ।
ಪ್ರದ್ಯುಮ್ನಃ ಪರಮಾನ್ನೇ ಚ (ತು)
ಹ್ಯ(ಅ)ನಿರುದ್ಧೋ ಘೃತೇ ಸ್ಥಿತಃ ॥೧॥
ಗರುಡಧ್ವಜಸ್ತು ಸೂಪೇ ಚ ಶಾಕೇ ತೂಪೇಂದ್ರ ಉಚ್ಯತೇ ।
ನಾರಾಯಣಸ್ತು ಸರ್ವತ್ರೇ—ತ್ಯೇವಂ ಜ್ಞಾತ್ವಾ ನಿವೇದಯೇತ್ ॥೨॥

(ಅರ್ಥ) ಒಟ್ಟು ಅನ್ನದಲ್ಲಿ ವಾಸುದೇವನಿದ್ದಾನೆ. ಭಕ್ಷ್ಯಗಳಲ್ಲಿ ಎಲ್ಲದರಲ್ಲೂ ಸಂಕರ್ಷಣರೂಪದಿಂದ ಇರುತ್ತಾನೆ. ಪಾಯಸದಲ್ಲಿ ಪ್ರದ್ಯುಮ್ನರೂಪದಿಂದ ಇರುತ್ತಾನೆ. ತುಪ್ಪದಲ್ಲಿ ಅನಿರುದ್ಧ. ತೊವ್ವೆಯಲ್ಲಿ ಗರುಡಧ್ವಜನು ಅಥವಾ ಗರುಡವಾಹನರೂಪೀ ಕೃಷ್ಣ ಪರಮಾತ್ಮ. ತರಕಾರಿಗಳಲ್ಲಿ ಉಪೇಂದ್ರಮೂರ್ತಿ. ಎಲ್ಲದರಲ್ಲೂ ನಾರಾಯಣರೂಪದಿಂದ ಇರುತ್ತಾನೆ ಎಂದು ತಿಳಿದು ನೈವೇದ್ಯವನ್ನು ಭಗವಂತನಿಗೆ ಸಮರ್ಪಿಸಬೇಕು.

ಹರಿಕಥಾಮೃತಸಾರದ ಹೇಳಿಕೆ

ಈ ಶ್ಲೋಕಗಳ ಭಾವವನ್ನೇ ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ (೪ ಸಂಧಿ ೧೦ ಮತ್ತು ೧೩ ಪದ್ಯ) ಎಷ್ಟು ಸೊಗಸಾಗಿ ಹೇಳಿದ್ದಾರೆ ನೋಡಿ:—

ವಾಸುದೇವನು ಅನ್ನದೊಳು ನಾ
ನಾ ಸುಭಕ್ಷ್ಯದಿ ಸಂಕರುಷಣ ಕೃ-
ತೀಶನು ಪರಮಾನ್ನದೊಳು ಘೃತದೊಳಗಿಪ್ಪನನಿರುದ್ಧ ।
ಆ ಸುಪರ್ಣಾಂಸಗನು ಸೂಪದಿ
ವಾಸವಾನುಜ ಶಾಕದೊಳು ಮೂ-
ಲೇಶ ನಾರಾಯಣನು ಸರ್ವತ್ರದಲಿ ನೆಲೆಸಿಹನು ॥ ೧೦ ॥

ಈಪರಿಯಲರಿತುಂಬ ನರ ನಿ-
ತ್ಯೋಪವಾಸಿ ನಿರಾಮಯನು ನಿ-
ಷ್ಪಾಪಿ ನಿತ್ಯ ಮಹತ್ಸುಯಜ್ಞಗಳಾಚರಿಸಿದವನು ।
.... ॥ ೧೩ ॥

(ಶಬ್ದಾರ್ಥ) ಕೃತೀಶ–ಕೃತಿಪತಿ ಪ್ರದ್ಯುಮ್ನ, ಸುಪರ್ಣ–ಗರುಡ, ಅಂಸ–ಹೆಗಲ ಮೇಲೆ, ಗ–ಇರುವವನು, ಗರುಡವಾಹನನಾದ ಶ್ರೀಕೃಷ್ಣನೇ 'ಸುಪರ್ಣಾಂಸಗನು', ಸೂಪ–ತೊವ್ವೆ, ವಾಸವಾನುಜ— ವಾಸವ–ದೇವೇಂದ್ರನ, ಅನುಜ–ತಮ್ಮನಾದ ಉಪೇಂದ್ರ, ಶಾಕ–ತರಕಾರಿ, ಕಾಯಿಪಲ್ಯಗಳು, ನಿರಾಮಯ–(ಆಮಯ–ರೋಗ, ಅದಿಲ್ಲದವನು) ಆರೋಗ್ಯಶಾಲಿ.

ಜಗನ್ನಾಥದಾಸರಾಯರ ಈ ನುಡಿಯಿಂದ 'ವಾಸುದೇವಸ್ತು ಚಾನ್ನಸ್ಥಃ' ಎಂಬ ಮಂತ್ರದ ಅರ್ಥವನ್ನು ತಿಳಿದುಕೊಂಡು ಯಥಾಶಕ್ತಿ ಅನುಷ್ಠಾನಕ್ಕೆ ತಂದುಕೊಳ್ಳುವುದು ಎಷ್ಟು ದೊಡ್ಡ ವಿಚಾರ—ಎಷ್ಟು ಮಹತ್ವದ ಸಂಗತಿ! ಎಂಬುದು ಅರ್ಥವಾಗುತ್ತದೆ.

ಇನ್ನು ಬ್ರಹ್ಮಾಂಡಪುರಾಣದಲ್ಲೂ ಪಂಚರಾತ್ರದಲ್ಲೂ ಹೇಳಿದ ಅನ್ನಾದ್ಯಭಿಮಾನಿ ದೇವತೆಗಳನ್ನೂ ಅವರಲ್ಲಿ ಅಂತರ್ಗತ ಭಗವದ್ರೂಪಗಳನ್ನೂ ತಿಳಿಸುವ ಮೂಲಶ್ಲೋಕಗಳನ್ನೂ ಕೆಳಗೆ ಕೊಟ್ಟು ಅನಂತರ ಪದಾರ್ಥಗಳ ಹೆಸರುಗಳನ್ನೂ ಅವುಗಳ ಅಭಿಮಾನಿ ದೇವತೆಗಳನ್ನೂ ತದಂತರ್ಗತ ಭಗವದ್ರೂಪಗಳನ್ನೂ ನೆನಪಿಟ್ಟುಕೊಳ್ಳಲು ಅನುಕೂಲವಾಗುವಂತೆ ಆನಂದ್ ಪ್ರಿಂಟರ್ಸ್ ಅವರ 'ನೈವೇದ್ಯ ಸುಳಾದಿ' ಪುಸ್ತಕವನ್ನು ಅನುಸರಿಸಿ ಕೊಟ್ಟಿದ್ದೇನೆ. ಸಂಸ್ಕೃತ ಚೆನ್ನಾಗಿ ತಿಳಿಯದವರು ವಿಜಯದಾಸರ 'ನೈವೇದ್ಯ ಸುಳಾದಿ' ಯನ್ನೂ ಜಗನ್ನಾಥದಾಸರ ಹರಿಕಥಾಮೃತಸಾರದ ೩೧ನೇ 'ನೈವೇದ್ಯ ಸಮರ್ಪಣ' ಸಂಧಿಯನ್ನೂ ಕಂಠಪಾಠ ಮಾಡುವುದು ಉತ್ತಮ. ಸಂಕರ್ಷಣ ಒಡೆಯರ ಟೀಕೆ ಓದಿದರಂತೂ ಎಲ್ಲ ವಿಚಾರಗಳೂ ತಲೆ ಮೇಲೆ ಹೊಡೆದಂತೆ ಮುಂದಟ್ಟಾಗುವುವು. ನೈವೇದ್ಯ ಮಾಡುವ ಅನುಸಂಧಾನವೂ ಸ್ಪಷ್ಟವಾಗಿ ತಿಳಿಯುತ್ತದೆ.

ಅನ್ನಾದಿ ನೈವೇದ್ಯ ಪದಾರ್ಥಗಳ ಅಭಿಮಾನಿ ದೇವತೆಗಳು ಮತ್ತು ತದ್ಗತ ಭಗವದ್ರೂಪಗಳು

(ಬ್ರಹ್ಮಾಂಡ ಪುರಾಣಾಂತರ್ಗತ ಹಾಗೂ ಪಂಚರಾತ್ರೋಕ್ತ ಶ್ಲೋಕಗಳು)

ಕಂಸಗಳಲ್ಲಿ ಕೊಟ್ಟಿರುವುದು 'ತೆಲುಗು ಅಹ್ನಿಕಮಂಜರಿ'ಯಲ್ಲಿದ್ದ ಪಾಠಗಳು. ಕೆಲವು ಕಡೆ 'ಪ್ರ' ಎಂದು ಕೊಟ್ಟಿದೆ; ಅದು ಶ್ರೀ ಪ್ರಭಂಜನರ 'ಪದ್ಯಮಾಲಾ' ಪಾಠಗಳೆಂದು ತಿಳಿಯಬೇಕು. ಪ್ರಾಯಶಃ ಆನಂದ್ ಪ್ರಿಂಟರ್ಸ್ ಅವರ 'ನೈವೇದ್ಯಸಮರ್ಪಣ ಸುಳಾದಿಯ ಪಾಠಗಳು ಶ್ರೀ ಪ್ರಭಂಜನರ 'ಪದ್ಯಮಾಲಾ' ಪಾಠದಂತೆಯೇ ಇವೆ. ಶ್ಲೋಕಗಳ ಅರ್ಥ ಸುಲಭವಾಗಿರುವುದರಿಂದಲೂ ಮುಂದೆ ಕೊಟ್ಟಿರುವ ಪಟ್ಟಿಯಿಂದಲೇ ಎಲ್ಲವೂ ಅರ್ಥವಾಗುವುದರಿಂದಲೂ ಶ್ಲೋಕಗಳ ಅರ್ಥವನ್ನು ಬೇರೆಯಾಗಿ ಕೊಟ್ಟಿಲ್ಲ. ಕೆಲವು ಕಠಿನ ಶಬ್ದಗಳಿಗೆ ಮಾತ್ರ ಆಯಾಯಾ ಶ್ಲೋಕಗಳ ಕೆಳಗೇ ಅರ್ಥ ಕೊಟ್ಟಿದೆ.

ಅನ್ನಾಭಿಮಾನೀ ಚಂದ್ರಸ್ತು ವಿಚಿಂತ್ಯಃ ಕೇಶವಃ ಪರಃ ।

ಉಡುಪಿ 'ಆಹ್ನಿಕಮಂಜರಿ' ಪಾಠಾಂ, 'ವಿಚಿಂತ್ಯಸ್ತತ್ರ ಕೇಶವಃ'

ಭಾರತೀ ಪರಮಾನ್ನ(ಸ್ಯ)ಸ್ಥಾ ದೇವೋ ನಾರಾಯಣಃ ಪ್ರಭುಃ ॥೧॥

ಸೂಚನೆ— ಅನ್ನದ ಒಂದೊಂದು ಅಗುಳಿನಲ್ಲೂ ಚಂದ್ರನಿದ್ದಾನೆಂದೂ ಅವನಲ್ಲಿ ಕೇಶವನು ಸನ್ನಿಹಿತನಾಗಿದ್ದಾನೆಂದೂ, ಆದರೆ ಇಡೀ ಅನ್ನದ ರಾಶಿಯಲ್ಲಿ ಒಟ್ಟಿಗೆ ಸೇರಿ ವಾಸುದೇವನಿದ್ದಾನೆಂದೂ ತಿಳಿಯಬೇಕು; ಇದೇ ವ್ಯತ್ಯಾಸ.

ಹೀಗೆಯೇ ಪರಮಾನ್ನದ ಕಾಳು-ಕಾಳಿನಲ್ಲಿ ಭಾರತೀ-ನಾರಾಯಣರೂ ಒಟ್ಟು ಪಾಯಸದಲ್ಲಿ ಪ್ರದ್ಯುಮ್ನನೂ ಇರುವರೆಂದು ತಿಳಿಯಬೇಕು.

ಭಕ್ಷ್ಯೇಷು ಸೂರ್ಯೋಽಧಿಷ್ಠಾತಾ ವಿಚಿಂತ್ಯಸ್ತತ್ರ ಮಾಧವಃ ।
(ಭಕ್ಷ್ಯೇ ಸೂರ್ಯೋಽಪ್ಯಧಿಷ್ಠಾತಾ)
ಘೃತಾಭಿಮಾನಿನೀ ಲಕ್ಷ್ಮೀರ್ ಗೋವಿಂದಸ್ತತ್ರ ದೇವತಾ ॥ ೨॥

ಸೂಚನೆ—ಹೋಳಿಗೆ ಮೊದಲಾದ (ಕರಿಯದೇ ಇರುವ) ಭಕ್ಷ್ಯಗಳಲ್ಲಿ ಬಿಡಿಬಿಡಿಯಾಗಿ ಒಂದೊಂದರಲ್ಲೂ ಸೂರ್ಯನು ಅಭಿಮಾನಿ, ಅವನಲ್ಲಿ ಮಾಧವನಿರುತ್ತಾನೆಂದೂ ಒಟ್ಟು ಸೇರಿಸಿದ ಎಲ್ಲಾ ವಿಧ ಭಕ್ಷ್ಯಗಳಲ್ಲಿ ಒಟ್ಟಾರೆಯಾಗಿ ಸಂಕರ್ಷಣನಿದ್ದಾನೆಂದೂ ತಿಳಿಯಬೇಕು; 'ಭಕ್ಷ್ಯೇ ಸಂಕರ್ಷಣಃ ಸ್ಮೃತಃ' ಎಂಬುದಕ್ಕೆ ಹೀಗೆ ಅರ್ಥವ್ಯತ್ಯಾಸ. ಇದೇ ರೀತಿ ತುಪ್ಪವನ್ನು ಅಭಿಘಾರ ಮಾಡುವಾಗ ಅದರಲ್ಲಿ ಲಕ್ಷ್ಮಿಯೂ ಗೋವಿಂದನೂ ಇದ್ದಾರೆಂದೂ ದೊನ್ನೆಯಲ್ಲಿ ಅಥವಾ ಪಾತ್ರೆಯಲ್ಲಿ ಇಟ್ಟಾಗ ಅನಿರುದ್ಧ ಸನ್ನಿಹಿತನಾಗಿದ್ದಾನೆಂದೂ ತಿಳಿಯಬೇಕು—'ಹ್ಯನಿರುದ್ಧೋ ಘೃತೇ ಸ್ಥಿತಃ'

ಸರಸ್ವತೀ ಕ್ಷೀರನಿಷ್ಠಾ ವಿಷ್ಣುಂ ತತ್ರ ವಿಚಿಂತಯೇತ್ ।
ಚತುರ್ಮುಖೋ ಮಂಡ(ಕಾನಾಂ)ಮಾನೀ
ವಿಚಿಂತ್ಯೋ ಮಧುಸೂದನಃ ॥ ೩ ॥

ಮಂಡಕ-ಮಂಡಿಗೆ

ನವನೀತಂ ವಾಯು(ದೈ)ದೇವ್ಯಂ
ಚಿಂತ್ಯಸ್ತತ್ರ (ವಿಚಿಂತ್ಯಸ್ತು) ತ್ರಿವಿಕ್ರಮಃ ।
ದಧಿಸ್ಥೌ ಸೋಮ-ವರುಣೌ ವಾಮನಸ್ತತ್ರ ದೇವತಾ ॥ ೪ ॥

ನವನೀತ-ಬೆಣ್ಣೆ, ಸೋಮ-ಚಂದ್ರ

ಮೊಸರಿಗೆ ಚಂದ್ರ-ವರುಣರಿಬ್ಬರೂ ಅಭಿಮಾನಿಗಳು.

ಸೂಪಾಭಿಮಾನೀ ಗರುಡಃ ಶ್ರೀಧರಸ್ತತ್ರ ದೇವತಾ ।
ಮಿತ್ರಸ್ತು ಪತ್ರಶಾ(ಕೇ ಚ)ಕಾನಾಂ
ಹೃಷೀಕೇಶಸ್ತು ದೇವತಾ (ತತ್ರಗಃ) ॥ ೫ ॥

ಸೂಪ-ತೊವ್ವೆ, ಮಿತ್ರ-ಮಿತ್ರನಾಮಕ ಸೂರ್ಯ (ದ್ವಾದಶಾದಿತ್ಯರಲ್ಲಿ ಒಬ್ಬನು).

'ಗರುಡಧ್ವಜಸ್ತು ಸೂಪೇ ಚ' ಎಂದಿರುವುದರಿಂದ ಗರುಡಧ್ವಜನಾದ ಶ್ರೀಕೃಷ್ಣನೂ ಸನ್ನಿಹಿತನಾಗಿರುವನೆಂದು ತಿಳಿಯತಕ್ಕದ್ದು. ಪತ್ರಶಾಕ ಎಂದರೆ ದಂಟಿನಸೊಪ್ಪು ಮೊದಲಾದ ಸೊಪ್ಪಿನ ತರಕಾರಿಗಳು.

ಶೇಷಸ್ತು ಫಲಶಾಕೇ (ಚ) ಷು ಪದ್ಮನಾಭಸ್ತು (ತತ್ರಗಃ) ದೇವತಾ ।
ಗೌರೀ ಸರ್ವಾಮ್ಲವಸ್ತುಸ್ಥಾ ತತ್ರ ದಾಮೋದರಃ (ಪ್ರಭುಃ)
ಸ್ಮೃತಃ ॥ ೬ ॥

ಫಲಶಾಕ ಎಂದರೆ ಸೌತೇಕಾಯಿ, ಬೆಂಡೇಕಾಯಿ ಮೊದಲಾದ ಕಾಯಿಪಲ್ಯಗಳು. 'ಶಾಕೇ ತೂಪೇಂದ್ರ ಉಚ್ಯತೇ' ಎಂದು ಹೇಳಿದ್ದು ಎಲ್ಲಾ ವಿಧ—ಕಾಯಿ-ಸೊಪ್ಪು-ತರಕಾರಿಗಳಿಂದ ಮಾಡಿದ ಎಲ್ಲಾ ಪದಾರ್ಥಗಳಲ್ಲಿ ಉಪೇಂದ್ರನೆಂದೂ, ಹಸಿ ತರಕಾರಿಗಳಲ್ಲಿ ಶೇಷದೇವರಿದ್ದಾರೆಂದೂ ತಿಳಿಯಬೇಕು. ಅಮ್ಲ ಎಂದರೆ ಹುಳಿ. ನಿಂಬೇಹಣ್ಣು, ಹುಣಸೇಕಾಯಿ, ಹುಳಿಮಾವಿನಕಾಯಿ, ಹುಣಸೇಹಣ್ಣು ಹಾಗೂ ಹುಳಿಯಾದ ಕಿತ್ತಳೆ, ದ್ರಾಕ್ಷಿ ಮೊದಲಾದ ಹಣ್ಣುಗಳಿಗೂ ಪಾರ್ವತೀದೇವಿ ಅಭಿಮಾನಿ.

ಅನಾಮ್ಲ(ರಸಗೋ)ವಶಗೋ ರುದ್ರಶ್-ಚಿಂತ್ಯಃ ಸಂಕರ್ಷಣಃ ಪರಃ ।
ಶರ್ಕರಾಗುಡ(ಗಃ)ಪಃ ಶಕ್ರೋ ವಾಸುದೇವಸ್ತು ತತ್ರಗಃ ॥ ೭ ॥

ಶರ್ಕರಾ–ಸಕ್ಕರೆ ಅಥವಾ ಕಲ್ಲುಸಕ್ಕರೆ, ಗುಡ-ಬೆಲ್ಲ, ಶಕ್ರ-ದೇವೇಂದ್ರ, ಇಂದ್ರ.

ಅನಾಮ್ಲ ಎಂದರೆ ಹುಳಿಯಿಲ್ಲದ ಪದಾರ್ಥಗಳು—ಸಿಹಿಮಾವಿನಕಾಯಿ, ಹುಳಿ ಇಲ್ಲದ ಕಿತ್ತಳೆ, ಮಾವಿನಹಣ್ಣು, ದ್ರಾಕ್ಷಿ ಮೊದಲಾದ ಹಣ್ಣುಗಳೂ ಗ್ರಾಹ್ಯ.

ಉಪಸ್ಕ(ರೇಷು)ರಸ್ಥೋ ವಾಗೀಶಃ ಪ್ರದ್ಯುಮ್ನಸ್ತತ್ರ ದೇವತಾ ।
ಕಟುದ್ರವ್ಯಪತಿರ್ಧರ್ಮೋ ಹ್ಯನಿರುದ್ಧ(ಶ್ಚ)ಸ್ತು ತತ್ರಗಃ ॥ ೮ ॥

ಉಪಸ್ಕರ ಎಂದರೆ ಪೂರ್ಣ ಮಾಡುವ, ಸಹಾಯ ಮಾಡುವ, ಅಮುಖ್ಯವಾದ ಪದಾರ್ಥ ಎಂದರ್ಥ. ಅದರಂತೆ ವ್ಯಂಜನ ಪದಾರ್ಥಗಳು, ಅನ್ನದ ಜೊತೆ ಕಲಸಿಕೊಳ್ಳುವ ಹುಳಿ, ಸಾರು, ಪಳದ್ಯಗಳು ಚಟ್ನಿ ಮೊದಲಾದುವು ಎಂದಾಗುತ್ತದೆ. ಸಂಕರ್ಷಣ ಒಡೆಯರು 'ಕೋಸಂಬರಿ ಮೊದಲಾದವು' ಎನ್ನುತ್ತಾರೆ. ವಾಗೀಶಃ ಎಂದರೆ ಗೀಷ್ಪತಿ ಅಥವಾ ವಾಚಸ್ಪತಿ ಎಂಬಂತೆ ಮಾತಿನ ಒಡೆಯರಾದ ಬೃಹಸ್ಪತ್ಯಾಚಾರ್ಯರು ಎಂದು ಕೆಲವರು ಅರ್ಥ ಮಾಡಿದ್ದಾರೆ. ಇದಕ್ಕೆ ಅನುಕೂಲವಾಗಿ ಹರಿಕಥಾಮೃತಸಾರದಲ್ಲೂ 'ಸ್ಮರಿಸು ವಾಚಸ್ಪತಿಯ ಸೋಪಸ್ಕರದೊಳಗೆ' ಎಂದು ಹೇಳಿದೆ. ಇದಕ್ಕೆ ಸಂಕರ್ಷಣ ಒಡೆಯರು 'ವಾಚಸ್ಪತಿಯ' ಎಂಬುದಕ್ಕೆ 'ವಾಕ್ಯಾಭಿಮಾನಿಯಾದ ಬೃಹಸ್ಪತ್ಯಾಚಾರ್ಯರನ್ನು' ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ವಿಜಯದಾಸರು 'ನೈವೇದ್ಯ ಸುಳಾದಿ'ಯಲ್ಲಿ 'ಪರಿಪರಿ ಸೋಪಸ್ಕಾರದಲ್ಲಿಗೆ ಅಭಿಮಾನಿ। ಪರಮೇಷ್ಠಿ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. 'ಪರಮೇಷ್ಠೀ ಪಿತಾಮಹಃ' ಎಂಬ ಅಮರದಂತೆ ಅದಕ್ಕೆ ಚತುರ್ಮುಖ ಬ್ರಹ್ಮ ಎಂದೇ ಅರ್ಥವಾಗುತ್ತದೆ. ವಾಗೀಶ ಎಂದರೂ ವಾಕ್-ಸರಸ್ವತಿಗೆ, ಈಶ-ಪತಿ ಎಂದು ಅರ್ಥವಾಗುವುದರಿಂದ ಬ್ರಹ್ಮ ಎಂದೂ ಅರ್ಥವಾಗುತ್ತದೆ. ಹೀಗೆ ವಿರೋಧ ಬರುವುದರಿಂದ ಬೃಹಸ್ಪತಿಯೂ ಬ್ರಹ್ಮನೂ ಇಬ್ಬರೂ ಎಂದೂ ಬೃಹಸ್ಪತಿ ಅಮುಖ್ಯನೆಂದೂ, ಬ್ರಹ್ಮದೇವರು ಮುಖ್ಯರೆಂದೂ ತಿಳಿಯಬೇಕು.

ಕಟು ಎಂದರೆ ಕಹಿ. ಆದ್ದರಿಂದ ಕಟುದ್ರವ್ಯ ಎಂದರೆ ಹಾಗಲಕಾಯಿ ಮೊದಲಾದ ತರಕಾರಿಗಳೂ, ಮೆಂತ್ಯ ಮೊದಲಾದ ಸಾಂಬಾರ ಪದಾರ್ಥಗಳೂ ಬರುತ್ತವೆ.

ಧರ್ಮ ಎಂದರೆ ಯಮಧರ್ಮ, ಯಮರಾಜ.

ರಾಮಠೇಲಾ ಸರ್ಷಪ-ಶ್ರೀ— ಖಂಡಕರ್ಪೂರಗಃ ಸ್ಮರಃ ।
(ರಾಮಠೇ ಸರ್ಷಪೇ ಶ್ರೀಶ್ಚ   ಏಲಾ ಕರ್ಪೂರಯೋಸ್ತಥಾ)
ದೇವತಾ ತತ್ರ ಭಗವಾನ್   ಸಾಕ್ಷಾತ್ ಶ್ರೀಪುರುಷೋತ್ತಮಃ ॥ ೯ ॥

ರಾಮಠ–ಇಂಗು, ಏಲಾ-ಏಲಕ್ಕಿ, ಸರ್ಷಪಾ–ಸಾಸು(ಸಿ)ವೆ, ಶ್ರೀಖಂಡ-ಸುಗಂಧ ದ್ರವ್ಯ ಅಥವಾ ಪರಿಮಳದ್ರವ್ಯ, ಕರ್ಪೂರ–ಪಚ್ಚಕರ್ಪೂರ, ಸ್ಮರಃ–ಮನ್ಮಥ, ಶ್ರೀಶ್ಚ–ಲಕ್ಷ್ಮಿ.

ವಿಜಯದಾಸರು 'ನೈವೇದ್ಯಸುಳಾದಿ'ಯಲ್ಲಿ 'ಸರಕು ಸಂಬಾರಗಳು ಇಂಗು ಸಾಸಿವೆ ಏಳಾ। ಮರೀಚಿ ಜೀರಿಗಿ ಮೊದಲಾದ ಕರ್ಪೂರ ಚಂದನ ಕೇ। ಸರ ಮೊದಲಾದ ಪರಿಪರಿ (ಅಥವಾ ಬಗೆಬಗೆ) ವಿಧವಾದ। ಪರಿಮಳದ್ರವ್ಯಕ್ಕೆ ಮನುಮಥ ಅಧಿಪ' ಎಂದೂ, ಹರಿ. ಕಥಾಮೃತಸಾರದಲ್ಲಿ 'ಸರುಷಪ ಶ್ರೀರಾಮಠೇಳದಿ। ಸ್ಮರನ' ಎಂದೂ ಹೇಳಿರುವುದರಿಂದ ತೆಲುಗುಪುಸ್ತಕಪಾಠದಲ್ಲಿರುವ 'ಶ್ರೀಶ್ಚ' ಎಂಬುದು ತಪ್ಪೆಂದು ಅರ್ಥವಾಗುತ್ತದೆ. ಅದನ್ನೇ 'ರಾಮಠೇ ಸರ್ಷಪೇ ಮಾರಃ' ಎಂದಾಗಲಿ, 'ರಾಮಠೇ ಸರ್ಷಪೇಽನಂಗಃ' ಎಂದಾಗಲಿ ತಿದ್ದಿಕೊಳ್ಳಬೇಕು. ಮಾರಃ ಅಥವಾ ಅನಂಗಃ ಎಂದರೂ ಮನ್ಮಥ (ಸ್ಮರ) ಎಂದೇ ಅರ್ಥ.

ವಿಜಯದಾಸರ ಸುಳಾದಿಯಲ್ಲಿರುವ 'ಮರೀಚಿ' ಎಂದರೆ ಮೆಣಸಿನಕಾಯಿ ಎಂದರ್ಥ. ಇಂಗು, ಜೀರಿಗೆ, ಮೆಣಸು, ಮೆಣಸಿನಕಾಯಿ ಮೊದಲಾದ ಸಂಬಾರಪದಾರ್ಥಗಳಿಗೂ, ಕೇಸರಿ, ಪಚ್ಚಕರ್ಪೂರ, ಏಲಕ್ಕಿ ಮೊದಲಾದ ಪರಿಮಳದ್ರವ್ಯಗಳಿಗೂ, ಮನ್ಮಥ ಅಭಿಮಾನಿಯೆಂದೂ, ಅವನಲ್ಲಿ ಪುರುಷೋತ್ತಮನು ನಿಯಾಮಕನಾಗಿರುತ್ತಾನೆಂದೂ ಅರ್ಥವಾಯಿತು.

ಚೋಷ್ಯ ಮಂಡಕ- ತೈಲೇಯ— ಪಕ್ವಪಶ್ಚಂದ್ರನಂದನಃ ।
[(ಪ್ರ)ಪಕ್ವಪ (ಶ್ಚೇಂ)ಶ್ಚಂದ್ರನಂದನಃ]
(ಚೋಷ್ಯೇ ಪೇಯೇ ಚ ತೈಲೇ ಚ   ಪಕ್ವ ಗಂಧೇಂದ್ರನಂದನಃ ।)
ಅಧೋಕ್ಷಜಸ್ತತ್ರದೇವಸ್— ತಿಲ-ಕೂಷ್ಮಾಂಡ ಮಾಷಕೈಃ (ಪಜ್ಜೈಃ)॥

ಚೋಷ್ಯ ಎಂದರೆ ಹರಿಕಥಾಮೃತಸಾರ ಹೇಳುವಂತೆ 'ನಾಲಿಗಿಂದಲಿ ಸ್ವೀಕರಿಪ ರಸ' ಎಂದರೆ ನಾಲಿಗೆಯಿಂದ ಚಪ್ಪರಿಸಿಕೊಂಡು ತಿನ್ನುವ ಗೊಜ್ಜುಗಳು ಅಥವಾ ಉಪ್ಪಿನಕಾಯಿ. ಮಂಡಕ ಎಂದರೆ ಕರಿಗಡುಬುಗಳು. ತೈಲೇಯ ಪಕ್ವ-ಎಣ್ಣೆಯಲ್ಲಿ ಕರಿದ ಪದಾರ್ಥಗಳು —ಆಂಬೊಡೆ, ಬೋಂಡ ಅಥವಾ ಬುರಿಬುರಿ, ಚಕ್ಕುಲಿ ಮೊದಲಾದುವು. ಹ.ಕ.ಸಾ.ದಲ್ಲಿ 'ಘೃತ। ತೈಲಪದಾರ್ಥದೊಳು' ಎಂದು ಹೇಳಿರುವುದರಿಂದ ತುಪ್ಪದಲ್ಲಿ ಕರಿದ ಪದಾರ್ಥಗಳೂ ಸೇರುತ್ತವೆ. ಪೇಯ ಎಂದರೆ ಪಾನಕ, ನೀರುಮಜ್ಜಿಗೆ ಮೊದಲಾದ ಕುಡಿಯುವ ಪದಾರ್ಥಗಳು. ಚಂದ್ರನಂದನಃ ಎಂದೂ ಇಂದ್ರನಂದನಃ ಎಂದೂ ಎರಡು ಪಾಠಗಳಾಗುತ್ತವೆ. ಚಂದ್ರನಂದನ ಎಂದರೆ ಚಂದ್ರನ ಮಗನಾದ ಬುಧ ಎಂದರ್ಥ. ಇದು 'ಘೃತ।

ತೈಲಪಕ್ವಪದಾರ್ಥದೊಳಗಿಪ ಚಂದ್ರನಂಡನನ' ಎಂಬ ಹ.ಕ.ಸಾ. ಪಾಠಕ್ಕೆ ಅನುಸಾರವಾಗಿದೆ. ಇಂದ್ರನಂದನನ ಎಂಬರೆ ದೇವೇಂದ್ರನ ಮಗ 'ಜಯಂತ'; ಇದು "ಪರೀಕ್ಷಿಸು ತೈಲಪಕ್ವ ಜಯಂತ" ಎಂಬ ವಿಜಯದಾಸರ 'ನೈವೇದ್ಯಸುಳಾದಿ'ಗೆ ಅನುಸಾರವಾಗಿದೆ.

ತಿಲ-ಎಳ್ಳು, ಕೂಷ್ಮಾಂಡ-(ಬೂದ)ಕುಂಬಳಕಾಯಿ, ಮಾಷ-ಉದ್ದು (ಇದು 'ನಿರ್ಮಿತೇ' ಎಂಬ ಮುಂದಿನ ಶ್ಲೋಕದೊಡನೆ ಅನ್ವಯಿಸುತ್ತದೆ.)

ನಿರ್ಮಿತೇ (ತು)ಷು ಪತಿರ್ದಕ್ಷೋ ನಾರಸಿಂಹಸ್ತು ತತ್ರಗಃ ।
ಮನುರಾ(ಜೋ)ದ್ಯೋ ಮಾಷಭಕ್ಷ್ಯ—
ಪತಿಶ್ಚಿಂತ್ಯೋಽಚ್ಯುತಃ ಪ್ರಭುಃ ॥ ೧೧ ॥

ತಿಲ-ಕೂಷ್ಮಾಂಡ-ಮಾಷಗಳಿಂದ, ನಿರ್ಮಿತೇ-ಮಾಡಿದ ಪದಾರ್ಥಗಳಲ್ಲಿ ಎಂದರೆ ಎಳ್ಳಿನಿಂದ ಮಾಡಿದ ಎಳ್ಳುಂಡೆ, ಚಿಗಳಿ, ಎಳ್ಳುಪುಡಿ ಚಿತ್ರಾನ್ನ (ಪುಳಿಹೋರೆ ಅಥವಾ ಪುಳಿಯೋಗರೆ) ಮೊದಲಾದುವು. ಕೂಷ್ಮಾಂಡ ಎಂದರೆ ಬೂದುಗುಂಬಳಕಾಯಿ ಹಾಕಿ ಮಾಡಿದ 'ಸಂಡಿಗೆ' ಮೊದಲಾದುವು (ಸಂಕರ್ಷಣ ಒಡೆಯರ ಟೀಕೆ). ಮಾಷ ಎಂದರೆ ಉದ್ದಿನಬೇಳೆಯ ಜೊತೆ ಹಾಕಿ ಮಾಡಿದ ಪದಾರ್ಥಗಳು—ಚಕ್ಕುಲಿ, ತೇಂಗೊಳಲು, ದೋಸೆ, ಇಡ್ಲಿ, ಹುಯ್ಯಿಗಡುಬು ಮೊದಲಾದುವು—ಇವುಗಳಿಗೆಲ್ಲಾ ದಕ್ಷಪ್ರಜಾಪತಿಯು ಅಭಿಮಾನಿ. ಮಾಷಭಕ್ಷ್ಯ ಎಂದರೆ ಸಂಕರ್ಷಣ ಒಡೆಯರು ಹೇಳುವಂತೆ 'ಉದ್ದುಮಾತ್ರದಿಂದ ನಿರ್ಮಿತವಾದ ವಡೆ(ಒಡೆ) ಸಾಂಕೇತವಾದ ಭಕ್ಷ್ಯದಲ್ಲಿ, ಮತ್ತು ಜಹಾಂಗೀರುಗಳಲ್ಲಿ' ಎಂದರ್ಥ. ಮನುರಾಜ ಅಥವಾ ಆದ್ಯಮನುಃ ಎಂದರೆ ಸ್ವಾಯಂಭೂ ಮನು.

ಲವಣಶ್ಚೋ ಹಿ ನಿರ್ಋತಿರ್ (ಲವಣಸ್ಥೋ ನಿರ್ಋತಿಶ್ಚ)
ದೇವತಾ ತು ಜನಾರ್ದನಃ ।
ಫಲತದ್ರಸ(ಗಃ)ಯೋಃ ಪ್ರಾಣ ಉಪೇಂದ್ರಸ್ತತ್ರ ದೇವತಾ ॥ ೧೨ ॥

ಲವಣ-ಉಪ್ಪು, ಫಲ ಎಂದರೆ ತೆಂಗಿನಕಾಯಿ, ಬಾಳೆಹಣ್ಣು, ಹಲಸಿನಹಣ್ಣು, ಮಾವಿನಹಣ್ಣು, ಕಿತ್ತಲೇಹಣ್ಣು, ಸೇಬು ಮೊದಲಾದುವು. ತದ್ರಸ ಎಂದರೆ ಎಳನೀರು, ಮಾವಿನ ಸೀಕರಣೆ, ಹಣ್ಣಿನ ಪರಬತ್ತುಗಳು.

ಪ್ರಾಣಃ ಎಂದರೆ ಸಂಕರ್ಷಣ ಒಡೆಯರು 'ದಾಸಪ್ರಾಣ' ಎನ್ನುತ್ತಾರೆ. ಅಂದರೆ ಮುಖ್ಯಪ್ರಾಣನಲ್ಲ ಎಂದರ್ಥ. ಶ್ರೀ ಪ್ರಭಂಜನರು 'ಅಹಂಕಾರಿಕ ಪ್ರಾಣ' ಎನ್ನುತ್ತಾರೆ.

ಗಂಗಾ ತಾಂಬೂಲಗಾಂ ವಿದ್ಧಿ ಶ್ರೀಹರಿಸ್ತತ್ರ ದೇವತಾ ।
ಬುಧಃ ಸ್ವಾದೂದಕಪತಿಃ ಶ್ರೀಕೃಷ್ಣಸ್ತತ್ರ ದೇವತಾ ॥ ೧೩ ॥

ವಿದ್ಧಿ-ತಿಳಿದುಕೋ, ಸ್ವಾದು-ರುಚಿಯಾದ (ಸಿಹಿಯಾದ), ಉದಕ-(ಕುಡಿಯುವ) ನೀರು, ತಾಂಬೂಲ-ವೀಳ್ಯೇದೆಲೆ (ವೀಳ್ಯದ ಎಲೆ), ಅಡಿಕೆ, ಸುಣ್ಣ.

ಪುಷ್ಕರಃ (ಸರ್ವಶುದ್ಧೇಷು) ಪಾಕಶುದ್ಧೀಶೋ
(ಪ್ರಭಂ.) ಪಾಕಶು(ಸಿ)ದ್ಧೀಶೋ
ಹಂಸಸ್ತತ್ರಾಧಿದೇವತಾ (ಶ್ರೀಹಂಸಸ್ತತ್ರದೇವತಾ) ।
ಸರ್ವಸ್ವಾದುರಸಾಧೀಶಾ ರತಿರ್ವಿಶ್ವಸ್ತು (ತದ್ಗತಃ) ತತ್ರಗಃ ॥ ೧೪ ॥

'ಪಾಕಶುದ್ಧಿಗೆ ಪುಷ್ಕರ ಹಂಸನಾಮಕದೇವ (ವಿಜಯದಾಸರು) 'ಸಾಧುಕರ್ಮವ ಪುಷ್ಕರನು ಸುನಿ। ವೇದಿತ ಪದಾರ್ಥಗಳ ಶುದ್ಧಿಯ। ಗೈದಗೋಸುಗ ಹಂಸನಾಮಕ-ಗರ್ಪಿಸುತಲಿಪ್ಪ' (ಹ. ಕ. ಸಾ.—ಜಗನ್ನಾಥದಾಸರು). ಈ ವಿಷಯದಲ್ಲಿ ಸಂಕರ್ಷಣ ಒಡೆಯರು ಹೀಗೆ ಬರೆದಿದ್ದಾರೆ (ಹರಿಕಥಾಮೃತಸಾರ ಟೀಕಾ, ೩೨ ಸಂಧಿ, ೨೧ ಪದ್ಯದ ವಿಶೇಷಾರ್ಥ);— ನೈವೇದ್ಯಸಮರ್ಪಣ ಪ್ರಾರಂಭದಲ್ಲಿ ಪುಷ್ಕರನನ್ನು 'ಈ ಪದಾರ್ಥಗಳನ್ನು ಶ್ರೀ ಪರಮಾತ್ಮಗೆ ಅರ್ಪಿಸಲು ಪವಿತ್ರ ಮಾಡಿಕೊಡೆ'ಂತ (ಪ್ರಾರ್ಥಿಸಿ) ಪುಷ್ಕರನ ಅಧೀನ ಮಾಡಿದರೆ ಪದಾರ್ಥಗತ ರಸದಲ್ಲಿ.......ತಾನು ಸ್ವೀಕರಿಸತಕ್ಕ ರಸ ಬೇರೆ ತೆಗೆದು ತನಗೆ ಸ್ವೋತ್ತಮನಾದ ಶನೈಶ್ಚರನ ದ್ವಾರಾ ಹೀಗೆಯೇ ಕ್ರಮಕ್ರಮವಾಗಿ ವಾಯು-ದೇವರಲ್ಲಿ ಸೇರಿ ಅವರ ದ್ವಾರಾ ರಮಾದೇವಿಗೂ ತದ್ದ್ವಾರಾ ಪರಮಾತ್ಮನಲ್ಲಿ ಸೇರತದೆ.... ಪರಮಾತ್ಮ ಮಾನುಷಭೋಗ್ಯ ದೇವಭೋಗ್ಯ ರಮಾಭೋಗ್ಯ ತನ್ನ ಭೋಗ್ಯ ಯಾವತ್ತೂ ಸಮಸ್ತ) ರಸಗಳನ್ನು.......ತನ್ನ ಉದರದಲ್ಲಿ....ಧರಿಸೋವನಾಗತಾನೆ. ಈ ರೀತ್ಯಾ ಭಗವಂತ ಸ್ವೀಕರಿಸಿದ್ದರಿಂದ ಆ ನೈವೇದ್ಯ ಪವಿತ್ರವಾಯಿತು.

ತದನಂತರ...ಪರಮಾತ್ಮ ತನ್ನ ಸ್ವಾಖ್ಯರಸ ತಾನು ಸ್ವೀಕಾರ ಮಾಡಿ, ಮಿಕ್ಕ ರಸ... ಲಕ್ಷ್ಮೀದೇವೇರ ವಶ ಮಾಡತಾನೆ. ಅವರು ತಮ್ಮ (ಮಧ್ಯಮ) ರಸ ತಾವು ತೆಗೆದು-ಕೊಂಡು, ಮಿಕ್ಕ (ಅಧಮ) ರಸ ಬ್ರಹ್ಮ-ವಾಯುಗಳಿಗೆ ಕೊಡತಾರೆ. [ವಾಯುದೇವರಿಂದ ಮಿಕ್ಕ ಸಕಲ ದೇವತೆಗಳೂ ಮನುಷ್ಯಾದಿಗಳೂ ಪುಷ್ಕರನ ಪರ್ಯಂತ ತಮ್ಮ ತಮ್ಮ ರಸ ಪಡೆಯುತ್ತಾರೆ. ಇದಕ್ಕೆ ಪ್ರಮಾಣ ಬೃಹದಾರಣ್ಯಕೋಪನಿಷತ್, ೩ ಅ., ೩ ಬ್ರಾಹ್ಮಣ, ೧೮ ಖಂಡ, "ತೇ ದೇವಾ ಅಬ್ರುವನ್..." ಇತ್ಯಾದಿ. "ಅಸು ನೋಽಸ್ಮಿನ್ನನ್ನ ಆಭಜ-ಸ್ವೇತಿ ತೇ ವೈ 'ಮಾಽಭಿಸಂವಿಶತೇತಿ, ತಥೇತಿ ತಗ್‌ ಸಮಂತಂ ಪರಿಣ್ಯವಿಶಂತ, ತಸ್ಮಾ-ದ್ಯನೇನಾನ್ನಮತ್ತಿ ತೇನೈತಾಸ್ತೃಪ್ಯಂತಿ।' " ಇದರ ಸಂಕ್ಷಿಪ್ತಾರ್ಥ— ಸಕಲೇಂದ್ರಿಯಾ-ಭಿಮಾನಿಗಳೂ ತಾವು ಹೆಚ್ಚು ಎಂದು ಗರ್ವಿಷ್ಠರಾದ್ದರಿಂದ ಮುಖ್ಯಪ್ರಾಣನು ಜೀವರು ತಿಂದ ಸಕಲ ಆಹಾರವನ್ನೂ ತಾನೇ ಸ್ವೀಕರಿಸಲಾರಂಭಿಸಿದನು. ಆಗ ಎಲ್ಲ ಇಂದ್ರಿಯಾಭಿ-ಮಾನಿಗಳೂ ನಿಶ್ಶಕ್ತರಾಗಿ ಪ್ರಾಣದೇವನನ್ನು 'ಸ್ವಾಮಿ! ನಮಗೂ ಸ್ವಲ್ಪ ಭಾಗ ಕೊಡಿ'

ಎಂದು ಪ್ರಾರ್ಥಿಸಿಕೊಂಡರು. ಅದಕ್ಕೆ ಪ್ರಾಣನು 'ಹಾಗಾದರೆ ಆಗಲಿ. ನನ್ನ ಸುತ್ತಲೂ ನಿಲ್ಲಿ' ಎಂದನು. ಹಾಗೆಯೇ ಅವರೆಲ್ಲ ಮುಖ್ಯಪ್ರಾಣನ ಸುತ್ತಲೂ ನಿಂತರು. ಅದರಿಂದ ಮುಖ್ಯಪ್ರಾಣನು ಏನು ತಿನ್ನುತ್ತಾನೋ ಅದರಿಂದಲೇ ಅವರೆಲ್ಲರೂ ತೃಪ್ತರಾಗುತ್ತಾರೆ.

ಅದರಂತೆ ಮುಖ್ಯಪ್ರಾಣನ ಮುಖಾಂತರ ಸಕಲ ದೇವತೆಗಳಿಗೂ ಋಷ್ಯಾದಿಗಳಿಗೂ ಪುಷ್ಕರನ ವರೆಗೆ ಎಲ್ಲರಿಗೂ ಅವರವರ ಪಾಲು ಹಂಚಿಹೋಗುತ್ತದೆ. ಬೇರಿಗೆ ನೀರು ಹಾಕಿದರೆ ಎಲೆಎಲೆಗೂ ಹೇಗೆ ಹಂಚಿಹೋಗುತ್ತದೋ ಹಾಗೆ ಎಂದು ತಿಳಿಯಬೇಕು.] ಪುಷ್ಕರ ತನ್ನ ಭೋಗ್ಯರಸ ತಾನು ಸ್ವೀಕಾರ ಮಾಡಿ ಮಾನುಷಭೋಗ್ಯರಸ ಯಥಾಪ್ರಕಾರ ಪದಾರ್ಥದಲ್ಲಿ ಸೇರಿಸಿ ಇಟ್ಟುಬಿಡುತ್ತಾನೆ. ತದನಂತರ ಅಧಿಕಾರಿಗಳು ಭೋಜನ ಮಾಡ-ತಾರೆ. (ಹೀಗೆ ಪುಷ್ಕರ ಪಾಕಶುದ್ಧಿ ಮಾಡತಕ್ಕವನೆಂದು ತಿಳಿಯಬೇಕು.)

ರತಿ ಎಂದರೆ ಮನ್ಮಥನ ಪತ್ನಿಯಾದ ರತೀದೇವಿಯು, 'ಸರ್ವಸ್ವಾದುರಸ'ಗಳಿಗ 'ಸಮಸ್ತವಾದ ಸಿಹಿಯಿಂದ ಯುಕ್ತವಾದ ರಸಗಳಿಗೆ ಅಭಿಮಾನಿ ಅವಳ ಗೋಳಕಾಂತರ್ಗತನಾಗಿ ವಿಶ್ವರೂಪೀ ಪರಮಾತ್ಮ ಇರೋವನಾಗಿದ್ದಾನೆ.' (ಸಂಕರ್ಷಣ ಒಡೆಯರು). 'ಬೇಕಾದ ಸ್ವಾದುರಸಗಳಿಗೆ ರತಿ ವಿಶ್ವ' (ವಿಜಯದಾಸರು).

ಚುಲ್ಲೀಪತಿಃ ಸ್ವಯಂ ವಹ್ನಿರ್—ಭಾರ್ಗವಸ್ತತ್ರ ದೇವತಾ ।
ಕರೀಷಕಾಷ್ಠಮಾನೀ ತು ವಸಂತ ಋಷಭಃ ಪ್ರಭುಃ ॥ ೧೫ ॥

ಚುಲ್ಲೀ–ಒಲೆ, ಇದ್ದಿಲು ಒಲೆ ಅಥವಾ ಅಗ್ಗಿಷ್ಟಿಕೆ. ವಹ್ನಿಃ–ಅಗ್ನಿದೇವ, ಭಾರ್ಗವ-ಪರಶುರಾಮದೇವರು, ಕರೀಷ-ಕುರುಳು ಅಥವಾ ಬೆರಣಿ (ತಟ್ಟಿ ಒಣಗಿಸಿದ ಸೆಗಣಿ), ಕಾಷ್ಠ-ಸೌದೆ, ಉರಿಸುವ ಕಟ್ಟಿಗೆ ಮತ್ತು ಉಪಲಕ್ಷಣಯಾ ಇದ್ದಿಲೂ ಸಹ. ವಸಂತ-ವಸಂತಋತುವಿಗೆ ಅಭಿಮಾನಿಯಾದ 'ವಸಂತ'ನಾಮಕ ದೇವತೆ. ಋಷಭ–ಋಷಭ ರೂಪೀ ಪರಮಾತ್ಮ (ಭಾಗವತ ಪಂಚಮಸ್ಕಂಧದಲ್ಲಿ ಋಷಭಚರಿತೆ ಬಂದಿದೆ).

ಶ್ರೀದೇವೀ ಪಾಕ(ಕರ್ತ್ರೀ ತು)ಕರ್ತೃಸ್ಥಾ ತತ್ರ ವಿಶ್ವಂಭರಃ ಪ್ರಭುಃ ।
ನೈವೇದ್ಯಮಂಡಲಸ್ಥಾ ಭೂರ್ ವರಾಹಸ್ತತ್ರ ದೇವತಾ ॥ ೧೬ ॥

'ಪಾಕಕರ್ತರೊಳು ಶ್ರೀದೇವಿ ವಿಶ್ವಂಭರ' (ವಿಜಯದಾಸರು) ಎಂಬಿರುವುದರಿಂದ 'ಪಾಕಕರ್ತ್ರೀ' ತೆಲುಗುಪಾಠ ಸರಿಹೊಂದುತ್ತದೆ. 'ಪಾಕಕರ್ತೃಗಳೊಳಗೆ ಚತುರ್ದಶ । ಲೋಕಮಾತೆ ಮಹಾಲಕುಮಿ ಗತ । ಶೋಕ ವಿಶ್ವಂಭರನ ತಿಳಿವುದು ಎಲ್ಲ ಕಾಲದಲಿ ।' ಎಂಬ ಹ.ಕ.ಸಾ. ಉಕ್ತಿಯಿಂದ 'ಪಾಕಕರ್ತೃಸ್ಥಾ' ಎಂಬ ಪಾಠ ಸರಿಹೊಂದುತ್ತದೆ.

ತದೂರ್ಧ್ವಭಾಗ(ಗೋ ವಿಷ್ಣುಃ)ಯೋರ್ವಿಘ್ನಸ್
ತತ್ರ ಧ್ಯೇಯಃ ಕುಮಾರಕಃ (ವಿಶ್ವಾಖ್ಯಸ್ತತ್ರ) ದೇವತಾ ।
ವಿಶ್ವಕ್ಸೇನಸ್ತ್ವಾವರಣೇ ಪುರುಷಸ್ತತ್ರ ದೇವತಾ ॥ ೧೭ ॥

ತದೂರ್ಧ್ವಭಾಗ-ನೈವೇದ್ಯದ ಮೇಲಿರುವ ಭಾಗಕ್ಕೆ, ವಿಘ್ನೇ-ಗಣಪತಿ, 'ಆಕಾಶ-ಭಾಗಕ್ಕೆ ಗಣಪತಿ ಕುಮಾರ' (ವಿಜಯದಾಸರು). '......ಉಪರಿ ಚೈಲಪ। ಏಕದಂತ ಸನತ್ಕುಮಾರನ ಧೇನಿಪುದು ಬುಧರು ।' (ಹ.ಕ.ಸಾ.) ಸಂಕರ್ಷಣ ಒಡೆಯರ ಟೀಕೆ— ಉಪರಿ ಚೈಲಪ-ನಿವೇದನ ಪದಾರ್ಥಗಳ ಮೇಲೆ ಹೊದಿಸತಕ್ಕ ವಸ್ತ್ರಾಭಿಮಾನಿ (ಅಥವಾ ಎಲೆ-ತಟ್ಟೆ ಮುಂತಾದ ಪದಾರ್ಥಗಳ ಅಭಿಮಾನಿ)ಯಾದವನು ಏಕದಂತ-ವಿಘ್ನೇಶ. ಈ ವಿನಾಯಕನ ಅಂತರ್ಗತದಲ್ಲಿ ಸನತ್ಕುಮಾರನಾಮಕ ಭಗವಂತನೆಂದು ತಿಳಿಯಬೇಕು. ಆದ್ದರಿಂದ 'ವಿಶ್ವಾಖ್ಯಸ್ತತ್ರ ದೇವತಾ' ಎಂಬ ತೆಲುಗುಪುಸ್ತಕಪಾಠ ಪ್ರಮಾದವೆನಿಸುತ್ತದೆ. ಆವರಣೇ ಎಂದರೆ (ಸಂಕರ್ಷಣ ಒಡೆಯರ ವಿವರಣೆ) ನಿವೇದನಕ್ಕೆ ತಂದಿಟ್ಟ ಜಡಪದಾರ್ಥಗಳು ನಿವೇದನ ಮಾಡೋ ಕಾಲದಲ್ಲಿ ಅನ್ಯರ ದೃಷ್ಟಿಗೆ ಬೀಳದಂತೆ ನೈವೇದ್ಯ ಪದಾರ್ಥಗಳ ಸುತ್ತಲೂ ಹಿಡಿಯುತಕ್ಕ ವಸ್ತ್ರದಲ್ಲಿ, ವಿಶ್ವಕ್ಸೇನನು (ವಿಷ್ಣುವಿನ ಸೇನಾಧಿಪತಿಯು) ಪರದೆಯ (ತೆರೆಯ) ರೂಪದಿಂದ ಇರುತ್ತಾನೆ. ಅವನಲ್ಲಿ ಪುರುಷನಾಮಕ ಪರಮಾತ್ಮ ಇರುತ್ತಾನೆ. 'ಶ್ರೀನಿವಾಸನ ಭೋಗ್ಯವಸ್ತುವ। ಕಾಣಗೊಡದಂದದಲಿ ವಿಶ್ವ। ಕ್ಸೇನ ಪರಿಖಾರೂಪನಾಗಿಹನಲ್ಲಿ ಪುರುಷಾಖ್ಯ।' (ಹ.ಕ.ಸಾ.)

ರಮಾ ಶ್ರೀತುಲಸೀ ಸಂಸ್ಥಾ ಕಪಿಲಸ್ತತ್ರ ದೇವತಾ।
ದುರ್ಗಾ ಭೋಜನಪಾ(ತ್ರಸ್ಥಾ)ತ್ರೇಷು ಸತ್ಯಾಖ್ಯಸ್ತತ್ರ ದೇವತಾ ॥ ೧೩ ॥

ರಮಾ-ಲಕ್ಷ್ಮೀದೇವಿ, 'ಲೋಕಪವಿತ್ರ ತುಲಸಿಯಲ್ಲಿ ರಮಾ ಕಪಿಲ।' (ವಿಜಯದಾಸರು). 'ಲೋಕಬಾಂಧವನಂತೆ ಪೊಳೆವ ಭೋಜನಪಾತ್ರೆಗೆ। ಲೋಕಜನನಿ ದುರ್ಗಾ ಪರಿರಾಣಿ ಸತ್ಯಾ' (ವಿಜಯದಾಸರ ಸುಳಾದಿ). ಲೋಕಬಾಂಧವನಂತೆ – ಲೋಕಕ್ಕೆ ಕಣ್ಣಿನಂತಿರುವ ಸೂರ್ಯನಂತೆ, ಪೊಳೆವ-ಹೊಳೆಯುವ.

ಪಾತ್ರಪಾ (ಪ್ರಭಂ. ಪಾತ್ರೇಶಾ) ವಾರುಣೀ ದೇವೀ
(ವಾರುಣೀ ಪಾತ್ರಗಾ ದೇವೀ) ಚಾ(ಹ್ಯಾ)ನಂದಸ್ತತ್ರ ದೇವತಾ।
ವ್ಯಂಜನಸ್ಥಾ ತು ಸೌಪರ್ಣೀ ದತ್ತಾಖ್ಯಸ್ತತ್ರ ದೇವತಾ ॥ ೧೪ ॥

ತೆಲುಗು ಪಾಠದಲ್ಲಿ 'ವಾರುಣೀ ಪಾತ್ರಗಾ' ಎಂಬ ಅರ್ಧವು ಮೊದಲಿದ್ದು, 'ದುರ್ಗಾ ಭೋಜನ...' ಎಂಬ ಅರ್ಧವು ಆಮೇಲೆ ಪಠಿತವಾಗಿದೆ. ವಿಜಯದಾಸರ ಸುಳಾದಿಯಲ್ಲೂ ಅದೇ ಕ್ರಮದಲ್ಲಿ ಹೇಳಿರುವುದರಿಂದ ಆ ಪಾಠವೇ ಸಾಧುವೆಂದು ತೋರುತ್ತದೆ. ಪಾತ್ರಪಾ, ಪಾತ್ರೇಶಾ, ಪಾತ್ರಗಾ— (ಮೂರಕ್ಕೂ) ಪದಾರ್ಥಗಳನ್ನು ಇಡುವ ಎಲ್ಲಾ ಪಾತ್ರೆಗಳಿಗೂ ಎಂದರ್ಥ. ವಾರುಣೀದೇವಿ-ಶೇಷದೇವರ ಪತ್ನಿಯಾದ ವಾರುಣಿಯೇ ಅಭಿಮಾನಿ. ಅವಳಲ್ಲಿ ಆನಂದನಾಮಕ ಪರಮಾತ್ಮ. 'ರಾಕೇಂದುವಿನಂತೆ ಪಾಕಪಾತ್ರೆಗೆ ಕೇಳು। ಕಾಕೋದರನ ರಾಣಿ ವಾಣಿ ಅನಂತಾ (ಆನಂದ)।' (ವಿಜಯದಾಸರು). ರಾಕೇಂದು-ಹುಣ್ಣಿಮೆಯ

ಚಂದ್ರ. ಕಾಕೋದರ–ಹಾವು (ಆದಿಶೇಷ). ಅವನ 'ರಾಣಿ ವಾಣಿ' ಎಂದರೆ 'ವಾರುಣೀ ದೇವಿ.' 'ಆನಂದ' ಎಂಬುದಕ್ಕೆ ಬದಲಾಗಿ 'ಸುಳಾದಿ'ಯಲ್ಲಿ 'ಅನಂತ' ಅಥವಾ 'ಅನ್ನದಾ' ಎಂದು ಬರೆದಿರುವುದು ಪ್ರಮಾದವೆಂದು ತೋರುತ್ತದೆ. 'ವ್ಯಂಜನಸ್ಥಾ' ಎಂಬ ಅರ್ಥವು ತಿಲುಗುಪಾಠದಲ್ಲಿಲ್ಲ. ವಿಜಯದಾಸರ ಸುಳಾದಿಯನ್ನು ನೋಡಿದರೆ 'ವ್ಯಂಜನಸ್ಥಾ' ಎಂಬ ಪಾಠವು ಸರಿಯಲ್ಲವೆಂದು ತೋರುತ್ತದೆ. 'ವ್ಯಂಜನ' ಎಂದರೆ ನೆಂಚಿಕೊಳ್ಳುವ ಪದಾರ್ಥ. ವಿಜಯದಾಸರು ಸ್ಪಷ್ಟವಾಗಿ "ಶೋಕ ಕಳೆವ ನಾನಾ ಮಾಟ ತಿದ್ದಿದ ಮಾ। ಣಿಕಮಯ ಬಟ್ಟಲಿಗೆ ಸೌಪರ್ಣಿದತ್ತನು" ಎಂದು ಹೇಳಿದ್ದಾರೆ. ಆದ್ದರಿಂದ ರತ್ನಖಚಿತ ಬಟ್ಟಲಿಗೆ ಸೌಪರ್ಣೀ ಎಂದರೆ ಗರುಡನ ಪತ್ನೀ ಅಭಿಮಾನಿ. ಅವಳಲ್ಲಿ ದತ್ತ-ರೂಪೀ ಪರಮಾತ್ಮ—ಎಂದು ತಿಳಿಯಬೇಕು.

ಮುಖ್ಯಪ್ರಾಣಪತಿರ್ಭೋಗೇ ಯಜ್ಞಾಖ್ಯಸ್ತತ್ರದೇವತಾ ॥ ೩೦ ॥

ಈ ಅರ್ಥವು ಪ್ರಭಂಜನರ ಪುಸ್ತಕದಲ್ಲಿ ಮಾತ್ರ ಇದೆ. ಭೋಜನಕಾರ್ಯಕ್ಕೆ ಮುಖ್ಯ ಪ್ರಾಣದೇವರು, ಅವರಲ್ಲಿ ಯಜ್ಞನಾಮಕ ಪರಮಾತ್ಮ ಇದ್ದಾನೆಂದು ತಿಳಿದು ನೈವೇದ್ಯ ಸಮರ್ಪಣೆ ಮಾಡಬೇಕು.

ಇಲ್ಲಿಗೆ ಬ್ರಹ್ಮಾಂಡಪುರಾಣೋಕ್ತ ಮತ್ತು ಪಾಂಚರಾತ್ರೋಕ್ತ ನೈವೇದ್ಯಾಭಿಮಾನಿಗಳ ಮತ್ತು ತದ್ಗತ ಭಗವದ್ರೂಪಗಳ ಸಂಸ್ಕೃತ ಶ್ಲೋಕರೂಪ ವರ್ಣನೆ ಮುಗಿಯಿತು.

ನೈವೇದ್ಯ ಪದಾರ್ಥಗಳಲ್ಲಿರುವ ಅಭಿಮಾನಿಗಳೂ ಮತ್ತು ತದ್ಗತ ಭಗವದ್ರೂಪಗಳು

A. ಚತುರ್ವಿಂಶತಿ ಭಗವದ್ರೂಪಗಳು

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪಗಳು
1.	ಅನ್ನ	ಚಂದ್ರ	ಕೇಶವ
2.	ಪರಮಾನ್ನ, ಪಾಯಸ	ಭಾರತೀ	ನಾರಾಯಣ
3.	ಭಕ್ಷ್ಯಗಳು	ಸೂರ್ಯ	ಮಾಧವ
4.	ಘೃತ (ತುಪ್ಪ)	ಲಕ್ಷ್ಮೀದೇವಿ	ಗೋವಿಂದ
5.	ಹಾಲು	ಸರಸ್ವತೀ	ವಿಷ್ಣು
6.	ಮಂಡಿಗೆ	ಚತುರ್ಮುಖ ಬ್ರಹ್ಮ	ಮಧುಸೂದನ
7.	ನವನೀತ (ಬೆಣ್ಣೆ)	ವಾಯುದೇವರು	ತ್ರಿವಿಕ್ರಮ

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪಗಳು
8	ದಧಿ (ಮೊಸರು)	ಚಂದ್ರ ಮತ್ತು ವರುಣರು	ವಾಮನ
9.	ಸೂಪ (ತೊವ್ವೆ)	ಗರುಡ	ಶ್ರೀಧರ
10.	ಪತ್ರಶಾಕ (ಸೊಪ್ಪಿನ ತರಕಾರಿ)	ಮಿತ್ರನಾಮಕ ಸೂರ್ಯ	ಹೃಷೀಕೇಶ
11.	ಫಲಶಾಕ (ಕಾಯಿ-ಪಲ್ಯಗಳ ತರಕಾರಿ)	ಶೇಷದೇವರು	ಪದ್ಮನಾಭ
12.	ಆಮ್ಲವಸ್ತುಗಳು (ಹುಳಿಪದಾರ್ಥಗಳು)	ಗೌರೀ	ದಾಮೋದರ
13.	ಅನಾಮ್ಲ ದ್ರವ್ಯಗಳು (ಹುಳಿಯಿಲ್ಲದ ಕಾಯಿ-ಗಳು, ಹಣ್ಣುಗಳು)	ರುದ್ರದೇವರು	ಸಂಕರ್ಷಣ
14.	ಸಕ್ಕರೆ, ಕಲ್ಲುಸಕ್ಕರೆ ಹಾಗೂ ಬೆಲ್ಲ (ಗುಡ)	ದೇವೇಂದ್ರ	ವಾಸುದೇವ
15.	ಉಪಸ್ಕರ ಪದಾರ್ಥಗಳು ವ್ಯಂಜನಪದಾರ್ಥಗಳು (ಹುಳಿ, ಪಳದ್ಯ, ಕೋಸುಂಬರಿಗಳು)	ಬೃಹಸ್ಪತಿ (ಜಗನ್ನಾಥ (ಜಗನ್ನಾಥದಾಸರಂತೆ) ಪರಮೇಷ್ಠಿ—ಬ್ರಹ್ಮ-ದೇವರು (ವಿಜಯದಾಸರಂತೆ).	ಪ್ರದ್ಯುಮ್ನ
16.	ಕಟು (ಕಹಿ) ದ್ರವ್ಯಗಳು (ಹಾಗಲಕಾಯಿ, ಮೆಂತ್ಯ ಇತ್ಯಾದಿ)	ಯಮಧರ್ಮ	ಅನಿರುದ್ಧ

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪಗಳು
17.	ಸಾಂಬಾರ ಪದಾರ್ಥಗಳು ಮತ್ತು ಪರಿಮಳ-ದ್ರವ್ಯಗಳು (ಉದಾ : ಇಂಗು, ಸಾಸಿವೆ, ಜೀರಿಗೆ, ಮೆಣಸಿನಕಾಯಿ ಇತ್ಯಾದಿ. ಕೇಸರಿ, ಏಲಕ್ಕಿ ಪಚ್ಚಕರ್ಪೂರ, ಇತ್ಯಾದಿ)	ಮನ್ಮಥ	ಪುರುಷೋತ್ತಮ
18.	೧. ಚೋಷ್ಯ (ನಾಲಿಗೆಯಲ್ಲಿ ಚಪ್ಪರಿಸುವ ಗೊಜ್ಜುಗಳು, ಉಪ್ಪಿನಕಾಯಿ, ಇತ್ಯಾದಿ)	ಬುಧ (ಚಂದ್ರನ ಮಗ) (ಹರಿಕಥಾಮೃತಸಾರ ರೀತ್ಯಾ)	ಅಧೋಕ್ಷಜ
	೨. ಘೃತ/ತೈಲಪಕ್ವ (ತುಪ್ಪ ಅಥವಾ ಎಣ್ಣೆಯಲ್ಲಿ ಕರಿದ) ಪದಾರ್ಥಗಳು	ಜಯಂತ (ದೇವೇಂದ್ರನ ಮಗ) (ವಿಜಯದಾಸರ ಸುಳಾದಿ ರೀತ್ಯಾ)	
	೩. ಪೇಯುಗಳು (ಪಾನಕ, ಸೀರುಮಜ್ಜಿಗೆ ಇತ್ಯಾದಿ)		
19.	ಎಳ್ಳು, ಕುಂಬಳಕಾಯಿ ಮತ್ತು ಉದ್ದು ಬೆರಸಿ ಮಾಡಿದ ಪದಾರ್ಥಗಳು —ಎಳ್ಳುಂಡೆ, ಚಿಗಳಿ, ಸಂಡಿಗೆ, ದೋಸೆ, ಇಡ್ಲಿ, ಚಕ್ಕುಲಿ, ಇತ್ಯಾದಿ	ದಕ್ಷಪ್ರಜಾಪತಿ	ನರಸಿಂಹ

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪಗಳು
20.	ಕೇವಲ ಉದ್ದಿನಿಂದ ಮಾಡಿದ ಪದಾರ್ಥಗಳು —ಒಡೆ, ಜಹಂಗೀರ್	ಸ್ವಾಯಂಭೂ ಮನು	ಅಚ್ಯುತ
21.	ಲವಣ (ಉಪ್ಪು)	ನಿರುಋತಿ	ಜನಾರ್ದನ
22.	ಹಣ್ಣುಗಳು, ಹಣ್ಣಿನ ರಸಗಳು, ತೆಂಗಿನಕಾಯಿ, ಬಾಳೆಹಣ್ಣು, ಷರಬತ್ತು	ಅಹಂಕಾರಿಕ ಪ್ರಾಣ	ಉಪೇಂದ್ರ
23.	ತಾಂಬೂಲ (ಅಡಿಕೆ, ವೀಳ್ಯದೆಲೆ, ಸುಣ್ಣ)	ಗಂಗಾದೇವಿ	ಶ್ರೀಹರಿ
24.	ಸ್ವಾದೂದಕ (ಕುಡಿಯುವ ನೀರು)	ಬುಧ	ಶ್ರೀಕೃಷ್ಣ

B. ಹೆಚ್ಚಿನ ಭಗವದ್ರೂಪಗಳು

25.	ನೈವೇದ್ಯ ಶುದ್ಧಿಗೆ	ಪುಷ್ಕರ	ಹಂಸನಾಮಕ ಪರಮಾತ್ಮ
26.	ಸಿಹಿರವಕ್ಕೆ	ರತೀದೇವಿ	ವಿಶ್ವನಾಮಕ ಪರಮಾತ್ಮ
27.	ಒಲೆ, ಅಗ್ಗಿಷ್ಟಿಗೆ	ಅಗ್ನಿ	ಪರಶುರಾಮ
28.	ಜರಣಿ (ಕುರುಳು), ಸೌದೆ ಮತ್ತು ಇದ್ದಿಲು	ವಸಂತ	ಋಷಭ
29.	ಅಡಿಗೆ ಮಾಡುವವನಲ್ಲಿ ನಿಂತು ಅಡಿಗೆಯನ್ನು ಮಾಡುವವಳು	ಲಕ್ಷ್ಮೀದೇವಿ	ವಿಶ್ವಂಭರಮೂರ್ತಿ

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪ
30.	ನೈವೇದ್ಯವನ್ನು ಇಡಲು ಮಾಡಿದ ಚಚ್ಚೌಕ ಮಂಡಲಕ್ಕೆ	ಭೂದೇವಿ (ಧರಾದೇವಿ)	ವರಾಹ
31.	ನೈವೇದ್ಯದ ಮೇಲೆ ಹೊದಿಸುವ ಬಟ್ಟೆ ಅಥವಾ ಮುಚ್ಚುವ ಪಾತ್ರೆ, ಎಲೆ ಇತ್ಯಾದಿ	ಗಣೇಶ	ಸನತ್ಕುಮಾರ
32.	ನೈವೇದ್ಯ ಕಾಣಿಸದಂತೆ ಸುತ್ತಲೂ ಹಿಡಿಯುವ 'ಪರಿಖಾ' (ತೆರೆಗೆ)	ವಿಷ್ವಕ್ಸೇನ	ಪುರುಷನಾಮಕ ಪರಮಾತ್ಮ
33.	ತುಲಸೀ	ರಮಾದೇವಿ	ಕಪಿಲರೂಪೀ ಪರಮಾತ್ಮ
34.	' ನೈವೇದ್ಯ ಇಡುವ ' ಪಾತ್ರೆಗಳಲ್ಲಿ	ವಾರುಣೀ (ಶೇಷದೇವರ ಪತ್ನಿ)	ಅನಂದರೂಪೀ ಪರಮಾತ್ಮ (ಅನಂತ)
35.	'ಅಡಿಗೆ ಮಾಡುವ' ತಪ್ಪಲೆ, ಕೊಳದಪ್ಪಲೆ ಮೊದಲಾದ ಪಾತ್ರೆಗಳಲ್ಲಿ	ದುರ್ಗಾದೇವಿ	ಸತ್ಯನಾಮಕ ಪರಮಾತ್ಮ
36.	ನೈವೇದ್ಯಕ್ಕೆ ಇಡುವ ರತ್ನಖಚಿತ ಬಟ್ಟಲು	ಸೌಪರ್ಣೀ (ಗರುಡನ ಪತ್ನೀ)	ದತ್ತನಾಮಕ ಪರಮಾತ್ಮ
36.	ಭೋಜನ ಮಾಡುವುದು	ಮುಖ್ಯಪ್ರಾಣ	ಯಜ್ಞನಾಮಕ ಪರಮಾತ್ಮ

ಕ್ರಮ ಸಂಖ್ಯೆ	ಪದಾರ್ಥಗಳು	ಅಭಿಮಾನಿ ದೇವತೆಗಳು	ತದ್ಗತ ಭಗವದ್ರೂಪ
30.	ನೈವೇದ್ಯವನ್ನು ಇಡಲು ಮಾಡಿದ ಚಚ್ಚೌಕ ಮಂಡಲಕ್ಕೆ	ಭೂದೇವಿ (ಧರಾದೇವಿ)	ವರಾಹ
31.	ನೈವೇದ್ಯದ ಮೇಲೆ ಹೊದಿಸುವ ಬಟ್ಟೆ ಅಥವಾ ಮುಚ್ಚುವ ಪಾತ್ರೆ, ಎಲೆ ಇತ್ಯಾದಿ	ಗಣೇಶ	ಸನತ್ಕುಮಾರ
32.	ನೈವೇದ್ಯ ಕಾಣಿಸದಂತೆ ಸುತ್ತಲೂ ಹಿಡಿಯುವ 'ಪರಿಖಾ' (ತೆರೆಗೆ)	ವಿಷ್ವಕ್ಸೇನ	ಪುರುಷನಾಮಕ ಪರಮಾತ್ಮ
33.	ತುಲಸೀ	ರಮಾದೇವಿ	ಕಪಿಲರೂಪೀ ಪರಮಾತ್ಮ
34.	'ನೈವೇದ್ಯ ಇಡುವ' ಪಾತ್ರೆಗಳಲ್ಲಿ	ವಾರುಣೀ (ಶೇಷದೇವರ ಪತ್ನಿ)	ಅನಂದರೂಪೀ ಪರಮಾತ್ಮ (ಅನಂತ)
35.	'ಅಡಿಗೆ ಮಾಡುವ' ತಪ್ಪಲೆ, ಕೊಳದಪ್ಪಲೆ ಮೊದಲಾದ ಪಾತ್ರೆಗಳಲ್ಲಿ	ದುರ್ಗಾದೇವಿ	ಸತ್ಯನಾಮಕ ಪರಮಾತ್ಮ
36.	ನೈವೇದ್ಯಕ್ಕೆ ಇಡುವ ರತ್ನಖಚಿತ ಬಟ್ಟಲು	ಸೌಪರ್ಣೀ (ಗರುಡನ ಪತ್ನೀ)	ದತ್ತನಾಮಕ ಪರಮಾತ್ಮ
36.	ಭೋಜನ ಮಾಡುವುದು	ಮುಖ್ಯಪ್ರಾಣ	ಯಜ್ಞನಾಮಕ ಪರಮಾತ್ಮ

(ಅರ್ಥ) ಪುರಾಣಪ್ರವಕ್ತರಾದ ವೇದವ್ಯಾಸರು ಸಾಕ್ಷಾತ್ ವಿಷ್ಣುಸ್ವರೂಪರು. ವರಾಹರೂಪೀ ಭಗವಂತನು ಬೆತ್ತವನ್ನು (ವೇತ್ರ–ಬೆತ್ತ) ಹಿಡಿದುಕೊಂಡು ಯಾವಾಗಲೂ 'ಜಯ ಜಯ' ಎಂದು ಹೇಳುತ್ತಿರುತ್ತಾನೆ.

ಧನ್ವಂತರಿರ್ಭಿಷಕ್‌ಶ್ರೇಷ್ಠಃ ಭೈಷಜ್ಯಮಕರೋತ್ ತದಾ ।
ದುಷ್ಟಸ್ಯ ಶಿಕ್ಷಣೇ ದಕ್ಷಃ ರಾಮಃ ಪರಶುಭೃತ್ ಸದಾ ।
ರತ್ನಪೀಠೇ ಸಮಾಸೀನಂ ವಿಷ್ಣುಂ ತತ್ರ ವಿಚಿಂತಯೇತ್ ॥ ೬

(ಅರ್ಥ) ವೈದ್ಯಶ್ರೇಷ್ಠನಾದ (ಭಿಷಕ್-ವೈದ್ಯ) ಧನ್ವಂತರಿಯು (ಭೈಷಜ್ಯಂ-ವೈದ್ಯಕೀಯ ಕೆಲಸವನ್ನು) ವೈದ್ಯರಂತೆ ಎಲ್ಲಾ ಪದಾರ್ಥಗಳನ್ನು ಪರೀಕ್ಷಿಸಿ ಸರಿಯಾಗಿದೆ ಎಂದು ಹೇಳುವನು. ಪರಶುಧಾರಿಯಾದ ಪರಶುರಾಮನು ದುಷ್ಟರನ್ನು ಶಿಕ್ಷಿಸುವುದರಲ್ಲಿ ಸಮರ್ಥನು. ಇವರೆಲ್ಲರ ಮಧ್ಯದಲ್ಲಿ ಶ್ರೀವಿಷ್ಣುವು ರತ್ನಪೀಠದಲ್ಲಿ ಭೋಜನಕ್ಕೆ ಕುಳಿತಿದ್ದಾನೆಂದು ತಿಳಿಯಬೇಕು.

ನೈವೇದ್ಯ ಸ್ವೀಕರಿಸೆಂದು ಪ್ರಾರ್ಥಿಸುವ ಮಂತ್ರಗಳು

ಅದ್ಯ ತಿಷ್ಠತಿ ಯತ್ಕಿಂಚಿತ್ ಕಲ್ಪಿತಂ ಚಾಪ(ರಂ)ರೇ ಗೃಹೇ ।
ಪಕ್ವಮನ್ನಂ ಸು(ಸ)ಪಾನೀಯಂ ಸರ್ವೋಪಸ್ಕರಸಂಯುತಮ್ ॥ ೧
ಯಥಾಕಾಲಂ ಮನುಷ್ಯಾದ್ಯೈರ್ ಭೋಕ್ಷ್ಯಮಾಣಂ ಶರೀರಿಭಿಃ ।
(ಪಾಠಾಂ. ಭೋಜ್ಯಮಾನಂ ಸುರೈರಪಿ)
ತತ್ ಸರ್ವಂ ವಿಷ್ಣುಪೂಜಾಸ್ತು ಪ್ರೀಯತಾಂ ಮೇ ಜನಾರ್ದನಃ ॥ ೨
(ಈ ಶ್ಲೋಕಗಳ ಅರ್ಥವನ್ನು ಹಿಂದೆಯೇ ಕೊಟ್ಟಿದೆ)

ವಸಂತತಿಲಕಾವೃತ್ತ

ಅನ್ನಾನಿ ಪಾಯಸಮುಖಾನಿ ವಿಶುದ್ಧಿಮಂತಿ
ಸ್ನಿಗ್ಧಾನಿ ಸತ್ಕದ(ಲ)ಲಿಮೋದಕಸಂ(ಭೃ)ಯುತಾನಿ ।
ಸರ್ಪಿರ್ (ಸರ್ವಂ) ಗುಡೈರ್ಮಧುಭಿರಾದ್ರ್ಯತಮಾನಿ ಭೂಯಃ
(ಪಾಠಾಂ ಕುಂಭಕೋಣ ಮಧುಭಿರಾರ್ಜಿತಮೇವ ಭೂಯಃ)
ಸ್ವಾಮಿನ್ ಸಮರ್ಪಿತಮಿದಂ ಹಿ ನಮೋ ನಮಸ್ತೇ ॥ ೩
(ಪಾಠಾಂ. ಪ್ರಭುಂ. ಸಮರ್ಪಯತಿ ಧನ್ಯತಮೋ ನರಸ್ತೇ)

ಕಠಿನ ಶಬ್ದಾರ್ಥ— ಮುಖಾನಿ-ಮೊದಲಾದುವು, ಸ್ನಿಗ್ಧಾನಿ-ನೆನೆದವು, ಒದ್ದೆಯಾದುವು ಅಥವಾ ಅಂಟಾದುವು, ಸತ್. ಕದಲಿ-ಒಳ್ಳೆಯ ಬಾಳೆಹಣ್ಣು, ಮೋದಕ-ಕಡುಬು, ಸಂಭೃತ ಅಥವಾ ಸಂಯುತ-ಕೂಡಿದ್ದು, ಸೇರಿದ್ದು, ಸರ್ಪಿಃ-ತುಪ್ಪ (ಅಮರ. ಘೃತಮಾಜ್ಯಂ ಹವಿಃ ಸರ್ಪಿಃ), ಗುಡ-ಬೆಲ್ಲ, ಮಧುಭಿಃ-ರುಚಿರುಚಿಯಾದ ಅಥವಾ ಜೇನುತುಪ್ಪದಿಂದ, ಆರ್ದ್ರ-ಒದ್ದೆಯಾದ, ಆರ್ದ್ರೀತಮಾನಿ-ಚೆನ್ನಾಗಿ ನೆನೆದಿರುವ, ಭೂಯಃ-ಪುನಃ, ಮತ್ತೆ. ಪಾಠಾಂ. ಅರ್ಜಿತ-ಸಂಪಾದಿಸಿದ.

(ಭಾವಾರ್ಥ)— ಹೇ ಸ್ವಾಮಿ ವಿಷ್ಣೋ! ಪರಿಶುದ್ಧವಾದ ಅನ್ನಗಳು, ಪಾಯಸ, ಮೊದಲಾದ ಅಡಿಗೆ ಪದಾರ್ಥಗಳನ್ನೂ ತುಪ್ಪ ಜಿನುಗುತ್ತಿರುವ ಕಡುಬುಗಳು, ಬಾಳೆಹಣ್ಣಿನ ರಸಾಯನಗಳನ್ನೂ ತುಪ್ಪ ಮಧುರವಾದ ಬೆಲ್ಲ ಜೇನುತುಪ್ಪ ಹಾಕಿ ರುಚಿರುಚಿಯಾಗಿ ಮಾಡಿದೆ. ಹೇ ಭಗವಂತ, ಇದೋ ಇದನ್ನೆಲ್ಲ ನಿನ್ನ ಮುಂದೆ ಇಟ್ಟಿದ್ದೇನೆ, ನಿನಗೆ ಸಮರ್ಪಿಸುತ್ತಿದ್ದೇನೆ. ಇವನ್ನೆಲ್ಲ ಸ್ವೀಕರಿಸುವವನಾಗು. (ಪ್ರಥಂ. ಪಾಠಾಂತರಕ್ಕೆ ಅರ್ಥ) ಹೇ ಸ್ವಾಮಿ! ಇಂಥಾ ನೈವೇದ್ಯವನ್ನು ಯಾರು (ಮನಸ್ಸಿನಿಂದಾದರೂ) ಸಮರ್ಪಿಸುತ್ತಾನೋ ಆ ಮನುಷ್ಯನೇ ಧನ್ಯ.

ಸೂಚನೆ—'ಸೌವರ್ಣೇ ಸ್ಥಾಲಿವರ್ಯೇ' ಎಂಬ ಶ್ಲೋಕದಲ್ಲಿ ಈ ಪದಾರ್ಥಗಳನ್ನು ಮಾನಸಿಕವಾಗಿ ಅರ್ಪಿಸಿದರೂ ಭಗವಂತನಿಗೆ ತೃಪ್ತಿಯಾಗುತ್ತದೆ ಎಂದು ಹೇಳಿದೆ. ಅದ್ದರಿಂದ ಹೀಗೆ ಅರ್ಪಿಸುವವನೇ ಧನ್ಯತಮ ಎಂದು ಶ್ಲೋಕದ ಅಭಿಪ್ರಾಯ. ಮನಸ್ಸಿನಿಂದಲೂ ಅರ್ಪಿಸುವುದಕ್ಕೆ ಆಗದ ಮನುಷ್ಯನಿಗೆ ಧಿಕ್ಕಾರ ಎಂಬ ಭಾವನೆಯೂ ಇದರಲ್ಲಿ ಅಡಗಿದೆ. ಏಕೆಂದರೆ ಕೃಷ್ಣಾಮೃತಮಹಾರ್ಣವ (18ನೇ ಶ್ಲೋಕ)ದಲ್ಲಿ ಹೇಳಿದಂತೆ—

ದ್ರವ್ಯಾಣಾಮಪ್ಯಭಾವೇ ತು ಸಲಿಲೇನಾಪಿ ಪೂಜಿತಃ ।
ಯೋ ದದಾತಿ ಸ್ವಕಂ ಸ್ಥಾನಂ ಸ ತ್ವಯಾ ಕಿಂ ನ ಪೂಜಿತಃ ? ॥

(ಅರ್ಥ) ದುಡ್ಡಿಲ್ಲದೆ ಇದ್ದರೆ ಹೋಗಲಿ, ನೀರಿನಿಂದ (ಸಲಿಲ-ನೀರು) ಪೂಜಿಸಿದರೂ, 'ಅಪಿ' ಶಬ್ದದಿಂದ ಅದೂ ಸಾಧ್ಯವಿಲ್ಲದಿದ್ದರೆ ಕೇವಲ ಮಾನಸಿಕ ಪದಾರ್ಥಗಳಿಂದಲೇ ಪೂಜೆ ಮಾಡಿದರೂ ಆ ಭಗವಂತ ಮುಕ್ತಿ ಕೊಡುತ್ತಿದ್ದ. ಅಷ್ಟು ಸುಲಭವಾಗಿ ಒಲಿಯುವ ಶ್ರೀಹರಿಯನ್ನು ಪೂಜಿಸಲಿಲ್ಲವೇ? ಎಂಥಾ ಭ್ರಷ್ಟ ನೀನು! ಎಂದು ಯಮರಾಜ ನರಕಕ್ಕೆ ಎಸೆಯುವುದಕ್ಕೆ ಮುಂಚೆ ಜೀವರನ್ನು ಕೇಳುತ್ತಾನಂತೆ ಮಾನಸಪೂಜೆಯನ್ನು ಸಾಕ್ಷಾತ್ ಭೀಮಸೇನದೇವರೇ ರೂಢಿ ಹಾಕಿಕೊಟ್ಟಿದ್ದಾರಾದಕಾರಣ ಅದು ಸರ್ವಥಾ ಗ್ರಾಹ್ಯ. ಅಲ್ಲದೆ ಪುರುಷಸೂಕ್ತಕ್ಕೆ ಸಂಕ್ಷೇಪವಾಗಿ ಅರ್ಥ ಬರೆಯುವಾಗಲೂ ಈ ಮಾನಸಿಕ ಪೂಜೆಯ ಮಹತ್ವವನ್ನು ತೋರಿಸಿಕೊಟ್ಟಿದ್ದೇವೆ. ಅದ್ದರಿಂದ ಅದು ಸರ್ವಥಾ ಮಾನ್ಯವಾಗಿದೆ.

ಇನ್ನೊಂದು ಶ್ಲೋಕ

(ಉಡುಪಿ ಆಹ್ನಿಕಮಂಜರಿಯಲ್ಲೂ, ಕುಂಭಕೋಣದ 'ದೇವಪೂಜಾಪದ್ಧತಿ'ಯಲ್ಲೂ ಇದನ್ನು ಕೊಟ್ಟಿದೆ.)

ನೈವೇದ್ಯಂ ಪಾಯಸಂ ಭಕ್ಷ್ಯಂ ನಾನಾ ಶಾಕೈಃ ಸಮನ್ವಿತಮ್ ॥
ಹವಿಷ್ಯಂ ಘೃತಪಕ್ವಂ ಚ ಫಲಾನಿ ವಿವಿಧಾನಿ ಚ ॥ ೪

(ಅರ್ಥ) ಪಾಯಸವನ್ನೂ ನಾನಾ ವಿಧವಾದ ಭಕ್ಷ್ಯಗಳನ್ನೂ ಅನೇಕ ವಿಧವಾದ ತರಕಾರಿಗಳಿಂದ ಸಿದ್ಧ ಮಾಡಿ ಬಗೆಬಗೆಯ ನೈವೇದ್ಯಗಳನ್ನೂ ತುಪ್ಪದಲ್ಲಿ ಬೇಯಿಸಿದ ನಾನಾ ಬಗೆಯ ಹವಿರ್ಯೋಗ್ಯ ಪದಾರ್ಥಗಳನ್ನೂ (ಅಡಿಗೆಗಳನ್ನೂ) ನಾನಾವಿಧವಾದ ಹಣ್ಣುಹಂಪಲುಗಳನ್ನೂ (ನಿನ್ನ ಮುಂದೆ ನೈವೇದ್ಯಕ್ಕಾಗಿ ಇಟ್ಟಿದ್ದೇನೆ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.)

ಶ್ರೀನಿವಾಸ! ನಮಸ್ತುಭ್ಯಂ ಮಹಾನೈವೇದ್ಯಮುತ್ತಮಮ್ ।
ಸಂಗೃಹಾಣ ಸುರಶ್ರೇಷ್ಠ (ಪಾಠಾಂ. ನಿತ್ಯತೃಪ್ತ! ಗೃಹಾಣೇದಂ)
(ಉಡುಪಿ ಆಹ್ನಿಕಮಂಜರಿ ಕುಂಭಕೋಣ ದೇವತಾರ್ಚನ ರೀತ್ಯಾ)
ಕೃಪಯಾ ಭಕ್ತವತ್ಸಲ ॥ ೫

(ಅರ್ಥ) ಹೇ ದೇವೋತ್ತಮನಾದ ಲಕ್ಷ್ಮೀಪತಿಯೇ! (ಶ್ರೀನಿವಾಸನೇ, ಭಕ್ತವತ್ಸಲನೇ! ನಿನಗೆ ನಮಸ್ಕಾರ. ನಿನ್ನ ಮುಂದಿಟ್ಟಿರುವ ಮಹಾನೈವೇದ್ಯವನ್ನು ಸ್ವೀಕರಿಸು.

(ತೆಲುಗು ಆಹ್ನಿಕಮಂಜರಿಯಲ್ಲಿ ಹೇಳಿದ ಕೆಲವು ಶ್ಲೋಕಗಳು)

ಅನಂತರೂಪೇಣ ರಮಾಂ ತ್ವತ್ಪೂಜಾಂ ಕರ್ತುಮಂಜಸಾ ।
ನ ಶಶಾಕೋಽಲ್ಪಸಾರೋಽಹಂ ನ ಶಕ್ನೋಮೀತಿ ಕಿಂ ವದೇ ? ॥ ೬

(ಅರ್ಥ) ('ಏನು ಧನ್ಯಳೋ ಲಕುಮಿ' ಎಂಬ ಕೀರ್ತನೆಯಲ್ಲಿ ಪುರಂದರದಾಸರು ಹಾಡಿ ತೋರಿಸಿರುವಂತೆ) ಲಕ್ಷ್ಮೀದೇವಿಯು ಅನಂತರೂಪಗಳಿಂದ (ಪಾತ್ರೆಗಳು, ಭೋಜ್ಯ ವಸ್ತುಗಳು ಮೊದಲಾದ ಅನಂತರೂಪದಿಂದ) ನಿನ್ನ ಪೂಜೆಯನ್ನು ತೃಪ್ತಿಕರವಾಗಿ (ಅಂಜಸಾ-ಚೆನ್ನಾಗಿ, ನಿನಗೆ ತೃಪ್ತಿಯಾಗುವಂತೆ ಅಥವಾ ತನಗೆ ತೃಪ್ತಿಯಾಗುವಂತೆ) ಮಾಡಲಾರದೆ ಹೋದಳು (ನ ಶಶಾಕ-ಸಾಧ್ಯವಾಗಲಿಲ್ಲ). ಹೀಗಿರುವಾಗ ಅಲ್ಪಶಕ್ತಿಯುಳ್ಳ ನನಗೆ ಮಾಡಲು ಸಾಧ್ಯವಿಲ್ಲವೆಂದು ಏನು ಹೇಳಿಕೊಳ್ಳಲಿ, ಸ್ವಾಮಿ ?

ಕ್ಷಮಸ್ವಾಪರಾಧಂ ಮೇ ದಯಾಸಾಗರ ತೇ ನಮಃ ।
ಭಕ್ತ್ಯೇಯಮಿತಿ ಮಾಂ ಬುದ್ಧ್ವಾ ಸ್ವೀಕುರುಷ್ವ ಮದರ್ಪಿತಮ್ ॥

(ಅರ್ಥ) ಹೇ ರಮಾಕಮಲೇಂದ್ರ, ನಿನಗೆ ನಮಸ್ಕಾರ, ನನ್ನ ಸಕಲಾಪರಾಧಗಳನ್ನೂ ಕ್ಷಮಿಸು. ನನ್ನನ್ನು 'ಇವನು ನನ್ನ ಭಕ್ತ'ನೆಂದು ತಿಳಿದು ನಾನು ಅರ್ಪಿಸಿದ ನೈವೇದ್ಯವನ್ನು ಸ್ವೀಕರಿಸು, ಹೆಚ್ಚು ಹೇಳಲು ನಾನು ಸಮರ್ಥನಲ್ಲ.

ರಮಾಬ್ರಹ್ಮಾದಿಭಿರ್ದೇವೈರ್ ನಿಯಮೇನ ಸಮರ್ಪಿತಮ್ ।
ಭಕ್ತಾನುಗ್ರಹಕಾಮೇನ ಸ್ವೀಕರ್ತವ್ಯಂ ತ್ವಯಾ ಹರೇ ॥ ೮

(ಕುಂಭಕೋಣ 'ದೇವತಾರ್ಚನ ವಿಧಿ'ಯಿಂದ)

(ಅರ್ಥ) ರಮಾ ಬ್ರಹ್ಮಾದಿ ದೇವತೆಗಳು ನಿನಗೆ ನಿಯಮಪೂರ್ವಕ (ವಿಧಿಪ್ರಕಾರ) ತಪ್ಪದೇ ನೈವೇದ್ಯವನ್ನು ಸಮರ್ಪಿಸುತ್ತಾರೆ. ನೀನು ನಿತ್ಯತೃಪ್ತನಾದರೂ ಭಕ್ತರಿಗೆ ಅನುಗ್ರಹ ಮಾಡುವ ಅಭಿಲಾಷೆಯಿಂದ, ಹೇ ಶ್ರೀಹರಿಯೇ, ಇದನ್ನು ಸ್ವೀಕರಿಸು.

ಇದಂ ರಹಸ್ಯಂ ಪರಮಂ ಬ್ರಹ್ಮಣಾ ನಾರದಾಚ್ಛ್ರುತಮ್ ।
ಮಯಾ ತನ್ಮುಖತಃ ಪ್ರಾಪ್ತಂ ಯುಷ್ಮಭ್ಯಂ ತನ್ನಿವೇದಿತಮ್ ॥ ೯

(ತೆಲುಗು ಆಹ್ನಿಕಮಂಜರಿಯಿಂದ, ೭ನೇ ಶ್ಲೋಕದ ನಂತರ)

(ಅರ್ಥ) ಈ ಪರಮರಹಸ್ಯವನ್ನು (ಭಗವಂತನಲ್ಲಿ ನಿವೇದಿಸಿಕೊಳ್ಳುವ ಕ್ರಮವನ್ನು) ಬ್ರಹ್ಮದೇವರು ನಾರದರಿಂದ ಕೇಳಿದರು. ಆ ಬ್ರಹ್ಮದೇವರಿಂದ ನಾನು ಕೇಳಿದೆ. ಅದನ್ನು ನಿಮಗೆ ಹೇಳುತ್ತಿದ್ದೇನೆ (ಎಂದು ಯಾವುದೋ ಪುರಾಣದ ವಾಕ್ಯ—ಒಟ್ಟು ಮಹಾತ್ಮರು [ಸೂತರು] ಶೌನಕಾದಿಗಳಿಗೆ ಹೇಳಿದ್ದಿರಬೇಕು).

ಯೋಗದೀಪಿಕಾದಲ್ಲಿ ಹೇಳಿದ ಅನುಸಂಧಾನಕ್ರಮ

ಶ್ರೀ ಪ್ರಭಂಜನರ 'ಪದ್ಯಮಾಲಾ'ದಿಂದ (ಪುಟ ೮೧) ಸಂಗ್ರಹ

ಗಂಧಮಾಲ್ಯಾಂಬರಾದೀಂಶ್ಚ ಭಕ್ಷ್ಯಭೋಜ್ಯಕಾದಿಕಾನಪಿ ।
ಭುಂಕ್ತೇ ವಿಷ್ಣುಃ ಪೂರ್ಣಶಕ್ತಿರ್ ಬಾಹ್ಯಭೋಗವಿಲಕ್ಷಣಾನ್ ॥ 53

(ಅರ್ಥ) ಪೂರ್ಣಶಕ್ತಿಯುಳ್ಳ ಶ್ರೀವಿಷ್ಣು ಗಂಧ ಹೂವಿನಹಾರಗಳು, ವಸ್ತ್ರಗಳನ್ನೂ ಅದೇ ರೀತಿ ಭಕ್ಷ್ಯ ಭೋಜ್ಯಗಳನ್ನೂ ಬಾಹ್ಯಭೋಗಕ್ಕೆ ವಿರುದ್ಧವಾಗಿ (ನಾವೆಲ್ಲ ತಿನ್ನುವಂತೆ ಪ್ರತ್ಯಕ್ಷವಾಗಿ ಧರಿಸದೆ ಅಥವಾ ತಿನ್ನದೆ) ದೃಷ್ಟಿಮಾತ್ರದಿಂದಲೇ ಸ್ವೀಕರಿಸುತ್ತಾನೆ.

ತತ್ತದಾಕಾರಸಂಯುಕ್ತಾನ್ ಸ್ವರೂಪಾನ್ ಸ್ವೀಕರೋತ್ಯಜಃ ।
ಇತಿ ವಿಜ್ಞಾನಮಾತ್ರೇಣ ಪೂಜಿತೋ ಭವತಿ ಸ್ಫುಟಮ್ ॥ 55

(ಅರ್ಥ) ಆಯಾ ವಸ್ತುಗಳಲ್ಲಿ ಆಯಾ ಆಕಾರದಿಂದ ಇರುವ ತನ್ನ ರೂಪವನ್ನೇ ಆ ಸ್ವಾಮಿ ಸ್ವೀಕರಿಸುತ್ತಾನೆಯೇ ಹೊರತು (ಇದನ್ನೇ ಸ್ವಾಖ್ಯರಸ ಎನ್ನುತ್ತಾರೆ.) ಜಡ-ಪದಾರ್ಥಗಳನ್ನು ಸ್ವೀಕರಿಸುವುದಿಲ್ಲ. ಈ ರೀತಿ ತಿಳಿದುಕೊಂಡು ಅನುಸಂಧಾನ ಮಾಡಿದರೇ ಸಾಕು. ಅದೇ ಭಗವಂತನ ನಿಜವಾದ ಪೂಜೆ, ಅದರಿಂದಲೇ ಭಗವಂತ ಸ್ಪಷ್ಟವಾಗಿ ಪ್ರೀತನಾಗುತ್ತಾನೆ.

ತತ್ತದಾಕಾರ ಸಂಯುಕ್ತಾ ದೇವಾಃ ಸರ್ವೇಽಪಿ ಸರ್ವದಾ ।
ಸ್ಥಿತಾ ಭೋಜ್ಯಪದಾರ್ಥೇಷು ಕ್ಯರ್ಪಯೇಯುಃ ಸ್ವರೂಪಕಾನ್ ॥ 56

(ಅರ್ಥ) ಆಯಾ ಪದಾರ್ಥಗಳಲ್ಲಿ ಆಯಾ ಆಕಾರದಿಂದ ಅಭಿಮಾನಿಗಳಾಗಿರುವ ಸಕಲ ದೇವತೆಗಳೂ ಭೋಜ್ಯಪದಾರ್ಥಗಳಲ್ಲಿರುವ ಆಯಾ ಭಗವದ್ರೂಪಗಳಿಗೆ ಅರ್ಪಿಸುತ್ತಾರೆ. ಉದಾಹರಣೆ: ಅನ್ನದಲ್ಲಿ ಅನ್ನದ ಅಗಳುಗಳ ರೂಪದಿಂದಿರುವ ಚಂದ್ರನು ತನ್ನಲ್ಲಿ ಅಂತರ್ಗತನಾದ ಭಗವಂತನಲ್ಲಿ ಅನ್ನಗತ ಭಗವದ್ರೂಪದ ಐಕ್ಯಚಿಂತನೆ ಮಾಡುತ್ತಾನೆ. ಹೀಗೆಯೇ ಸಕಲ ಪದಾರ್ಥಗಳಲ್ಲಿರುವ ಆಯಾ ಅಭಿಮಾನಿದೇವತೆಗಳು ಆಯಾ ವಸ್ತುಗತ ಭಗವದ್ರೂಪದಲ್ಲಿ ತಮ್ಮ ಅಂತರ್ಯಾಮಿ ಭಗವದ್ರೂಪವನ್ನು ನೋಡುತ್ತಾರೆ. ನಾವೂ ಅದೇ ರೀತಿ ಆಯಾ ವಸ್ತುವಿನಲ್ಲಿರುವ ದೇವತಾಂತರ್ಗತ ಭಗವದ್ರೂಪಕ್ಕೂ ನಾವು ಪೂಜಿಸುತ್ತಿರುವ ಪ್ರತಿಮೆಯಲ್ಲಿ ನಾವು ಆವಾಹಿಸಿರುವ ನಮ್ಮ ಬಿಂಬಮೂರ್ತಿಗೂ ಐಕ್ಯವನ್ನು ಚಿಂತಿಸುವುದೇ ಆಯಾ ವಸ್ತುಗಳನ್ನು ನೈವೇದ್ಯಕ್ಕೆ ಇಡುವ ಅನುಸಂಧಾನ. ಇದರಿಂದಲೇ ಭಗವಂತ ತೃಪ್ತನಾಗುವನೆಂದು ಮುಂದಿನ ಶ್ಲೋಕ ತಿಳಿಸುತ್ತದೆ.

ಅನಂತೇಂದ್ರಿಯಸಂಭೋಗ್ಯಂ ಭುಂಕ್ತೇ ಹ್ಯಾನಂದಸಾಗರಃ ।
ಇತಿ ವಿಜ್ಞಾನಮಾತ್ರೇಣ ಪ್ರೀತೋ ಭವತಿ ನಿತ್ಯಶಃ ॥ 62

(ಅರ್ಥ) ಆನಂದಸಾಗರನಾದ ಆ ಭಗವಂತನಿಗೆ ಅನಂತೇಂದ್ರಿಯಗಳಿವೆ. ಅವು-ಗಳಲ್ಲಿ ಯಾವುದರಿಂದ ಬೇಕಾದರೂ ಆ ಸ್ವಾಮಿ ತನ್ನ ಸ್ವಾಖ್ಯರಸವನ್ನು ಸ್ವೀಕರಿಸುತ್ತಾನೆ. ಹೀಗೆ ತಿಳಿದುಕೊಂಡರೇ ಸಾಕು, ಆ ಸ್ವಾಮಿ ನಿತ್ಯದಲ್ಲೂ ಪ್ರೀತನಾಗುತ್ತಾನೆ.

ಫಲಪುಷ್ಪಾದಿಕೇಷ್ವೀಶಃ ಜಡೇಷ್ವಪಿ ಹರಿಃ ಪರಃ ।
(ಫಲ + ಪುಷ್ಪ + ಆದಿಕೇಷು + ಈಶಃ ಪದಚ್ಛೇದ)
ಸ್ವಮಾತ್ರಭೋಗ್ಯಸಾರಾಂಶ್ಚ ಮಹಾಲಕ್ಷ್ಮ್ಯಸ್ತಥೈವ ಚ ॥ 71

ಬ್ರಹ್ಮೇಶ ಶಕ್ರ ಕಾಮಾದಿ— ದೇವಾನಾಂ ಚ ಪೃಥಕ್ ಪೃಥಕ್ ।
ಏವಂ ಮಾನುಷಪರ್ಯಂತಂ ಸ್ಥಿತಾನಾಮಧಿಕಾರಿಣಾಮ್ ॥ 72

ಯೋಗ್ಯಾನ್ ಸಾರಾಂಸ್ತಥಾ ಶ್ರೀಶಃ ಪೂರ್ಣಾನಂದಃ ಪರಾತ್ಪರಃ ।
ಭುಂಕ್ತೇ ದೇವಃ ಪರಾನಂದೋ ಹ್ಯಚಿಂತ್ಯೈಶ್ವರ್ಯಯೋಗ್ಯತಃ ॥ 73

(ತಾತ್ಪರ್ಯ) ಪೂರ್ಣಾನಂದನೂ ಸರ್ವೋತ್ತಮನೂ ಆದ ಆ ವಿಷ್ಣು ಫಲ ಪುಷ್ಪ-ನೀರು-ನೈವೇದ್ಯ ಮೊದಲಾದ ಎಲ್ಲ ಪದಾರ್ಥಗಳಲ್ಲೂ ಇರುವ ಅನೇಕ ಸಾರಭಾಗಗಳಲ್ಲಿ ಕೇವಲ ತನಗೇ ಸೇರುವ ಸ್ವಾಖ್ಯರಸವನ್ನೂ ಹಾಗೆಯೇ ಲಕ್ಷ್ಮೀದೇವಿಗೆ ಸೇರಬೇಕಾದ ರಸಭಾಗವನ್ನೂ ಆದರ ನಂತರ ಅವಳಿಗೂ ಅಧಮರಾದ ಬ್ರಹ್ಮ ರುದ್ರ-ದೇವೇಂದ್ರ ಮೊದಲಾದ ಸಮಸ್ತ ದೇವತೆಗಳಿಗೆ (ಪುಷ್ಕರನ ವರೆಗೆ) ಸೇರಬೇಕಾದ ಅವರವರ ಸಾರ-ಭಾಗಗಳನ್ನೂ ಅದೇ ರೀತಿ ಅತ್ಯಂತ ಕೆಳಮಟ್ಟದ ಮನುಷ್ಯರವರೆಗೂ ಸೇರಬೇಕಾದ ಮಾನುಷೋಚಿತಭಾಗ. ಎಲ್ಲವನ್ನೂ ತನ್ನ ಅಚಿಂತ್ಯಾದ್ಭುತವಾದ ಮಹಿಮೆಯ ಬಲದಿಂದ ಸ್ವೀಕರಿಸುತ್ತಾನೆ. (ಇದಕ್ಕೆ ವಿವರಣೆ ಪೂಜಾಕಲ್ಪಲತಾ) ದಿಂದ—ಪ್ರಥಂ. ಪದ್ಮಮಾಲಾ ಪುಟ ೮೦ರಿಂದ—ಭಗವಾನ್....ಭಕ್ತೈಃ ಸಮರ್ಪಿತಂ ನೈವೇದ್ಯಂ ಸ್ವೀಕೃತ್ಯ, ತ್ರೇಧಾ ವಿಭಜ್ಯ, ಉತ್ತಮಂ ಸ್ವಯಂ ಗೃಹೀತ್ವಾ। ಮಧ್ಯಮಂ ರಮಾಯೈ ದತ್ವಾ, ಅಧಮಂ ಬ್ರಹ್ಮಾದಿಭ್ಯೋ ದದಾತಿ।—ಭಕ್ತರು ಸಮರ್ಪಿಸುವ ನೈವೇದ್ಯವನ್ನು ಪರಮಾತ್ಮ ಸ್ವೀಕರಿಸಿ ಅದನ್ನು ಮೂರು ಭಾಗವಾಗಿ ವಿಂಗಡಿಸಿ, ಉತ್ತಮವಾದದ್ದನ್ನು ತಾನು ಸ್ವೀಕರಿಸಿ, ಮಧ್ಯಮ ಭಾಗವನ್ನು ರಮಾದೇವಿಗೆ ಕೊಟ್ಟು ಅಧಮಭಾಗವನ್ನು ಬ್ರಹ್ಮಾದಿ ದೇವತೆಗಳಿಗೆ ಕೊಡುವನು. ಇಯಾಂಸ್ತು ವಿಶೇಷಃ। ರಮಾಯೈ ಮಧ್ಯಮಮಾಘ್ರಾಯ ದದಾತಿ, ಬ್ರಹ್ಮಾದಿಭ್ಯಃ ಅಧಮಂ ದೃಷ್ಟ್ಯಾ ಸ್ವೀಕೃತ್ಯ ದದಾತೀತಿ। ಅದರಲ್ಲೇ ಇಷ್ಟು ಮಾತ್ರ ವಿಶೇಷ—ಲಕ್ಷ್ಮೀದೇವಿಯ ಭಾಗವಾದ ಮಧ್ಯಮರಸವನ್ನು ಮೂಸಿನೋಡಿ, ಅವಳಿಗೆ ಕೊಡುತ್ತಾನೆ. ಬ್ರಹ್ಮಾದಿಗಳಿಗೆ ಸೇರಬೇಕಾದ ಅಧಮಭಾಗವನ್ನು ದೃಷ್ಟಿಯಿಂದ ಸ್ವೀಕರಿಸಿ ಕೊಡುತ್ತಾನೆ. ಆ ಅಧಮಭಾಗದಲ್ಲೇ ತಾರತಮ್ಯಾನುಸಾರ ಉತ್ತಮ-ಉತ್ತಮ ರಸಗಳನ್ನು ಬ್ರಹ್ಮಾದಿಗಳು ತೆಗೆದುಕೊಂಡು ಉಳಿದ ಅಧಮ-ಅಧಮ ರಸಗಳಲ್ಲಿ ಪುಷ್ಕರನ ಪರ್ಯಂತವಾಗಿರುವ ಎಲ್ಲಾ ದೇವರ್ಷಿ-ಗಂಧರ್ವಾದಿಗಳೂ ತಮ್ಮ ತಮ್ಮ ಭಾಗವನ್ನು ತೆಗೆದುಕೊಳ್ಳುತ್ತಾರೆ. ಅವರೆಲ್ಲರೂ ತೆಗೆದುಕೊಂಡ ಬಳಿಕ ಉಳಿದ ಮಾನುಷೋಚಿತ ಭಾಗವನ್ನು ಪುಷ್ಕರ ಆಯಾ ಪದಾರ್ಥದಲ್ಲೇ ಉಳಿಸಿಬಿಡುತ್ತಾನೆ. ಅದನ್ನು ನಾವೆಲ್ಲ ಪರಮ ಪಾವನವೆಂದು ತೆಗೆದುಕೊಳ್ಳುತ್ತೇವೆ.

ಮಾನುಷೇಂದ್ರಿಯಭೋಗ್ಯಾಂಸ್ತು ಸ್ವದೃಷ್ಟ್ಯೈವ ಸ್ವೀಕರೋತ್ಯಜಃ ।
ಇತಿ ಜ್ಞಾತ್ವಾ ರಮೇಶಸ್ಯ ಹ್ಯರ್ಪಣಾದೇವ ಸರ್ವದಾ ॥ 74
ಪ್ರೀತೋ ಭವೇತ್ ಪರಾನಂದ- ವಿಗ್ರಹಃ ಪರಮೇಶ್ವರಃ ॥ 75
ಇತ್ಯಾದಿ ಚ ಯಥಾಶಕ್ತಿ ಸಂಸ್ಮರೇದ್ ಹರಿಭೋಜನೇ ॥ 80

(ಯೋಗದೀಪಿಕಾ X ಪ್ರಕರಣ)

(ಅರ್ಥ) (ಅಥವಾ ರಸದಲ್ಲೂ ಕಡೆಯ ಭಾಗವಾದ) ಮನುಷ್ಯರು ತಮ್ಮ ಇಂದ್ರಿಯಗಳಿಂದ ಸ್ವೀಕರಿಸಬಹುದಾದ ಕನಿಷ್ಠಭಾಗ ರಸವನ್ನೂ ತನ್ನ ದೃಷ್ಟಿಯಿಂದ ಸ್ವೀಕರಿಸಿ ಅದರಲ್ಲೇ ಉಳಿಸಿಬಿಡುತ್ತಾನೆ. ಈ ರೀತಿ ಅನುಸಂಧಾನ ಮಾಡಿಕೊಂಡೇ ರಮಾಪತಿಗೆ ನೈವೇದ್ಯವನ್ನು ಸಮರ್ಪಿಸಬೇಕು. ಈ ಅನುಸಂಧಾನದಿಂದಲೇ ಭಗವಂತ ಪ್ರೀತನಾಗುತ್ತಾನೆ. ಅವನು ಅನಂತವಾದ ನಿರ್ದುಷ್ಟವಾದ ಆನಂದಮಯವಾದ ದೇಹವುಳ್ಳವನಾದ್ದರಿಂದ ಈ ನೈವೇದ್ಯದಿಂದ ವಿಶೇಷವಾಗಿ ಹೊಸದಾಗಿ ಏನೂ ಆನಂದವಾಗಬೇಕಾದ್ದಿಲ್ಲ. ನಮ್ಮ ಅನುಗ್ರಹಕ್ಕಾಗಿಯೇ ಸ್ವೀಕರಿಸುತ್ತಾನೆ. ಇತ್ಯಾದಿ ವಿಚಾರಗಳನ್ನು ನೈವೇದ್ಯ ಸಮರ್ಪಣ ಕಾಲದಲ್ಲಿ ಯಥಾಶಕ್ತಿ ತಿಳಿದುಕೊಂಡು ಅನುಸಂಧಾನ ಮಾಡಬೇಕು.

ಈ ವಿಚಾರವನ್ನೇ ಛಾಂದೋಗ್ಯಭಾಷ್ಯದಲ್ಲೂ ಹೀಗೆ ಹೇಳಿದ್ದಾರೆ —

"ಸಿದ್ಧಮೇವಾನ್ನವಸ್ತ್ರಾದ್ಯಂ ವಿಷ್ಣೋಃ ಸ್ವಾತಂತ್ರ್ಯತಃ ಸದಾ ।
ಸ್ವಾರ್ಥಂ ಸಮರ್ಪಯೇದ್ ವಿಷ್ಣೌ ಯಥಾ ಪ್ರಾಣೇ ಸುರೈಃ ಪುರಾ ॥"

ಇತಿ ಕರ್ಮಾನುಪೂರ್ವ್ಯಾಮ್ ॥

(೫ನೇ ಅಧ್ಯಾಯ, ೨ನೇ ಖಂಡದಲ್ಲಿ, ೨ನೇ ಮಂತ್ರದಲ್ಲಿ)

(ಅರ್ಥ) ಶ್ರೀವಿಷ್ಣು ಸ್ವತಂತ್ರನಾದ್ದರಿಂದ ಸಕಲ ಪದಾರ್ಥಗಳೂ ಅವನಿಗೇ ಸೇರಿದವೇ ಆಗಿವೆ. ಆದರೂ ಕೂಡ ಭಕ್ತನು ತನ್ನ ಶ್ರೇಯಸ್ಸಿಗಾಗಿ ಆ ಪರಮಾತ್ಮನಿಗೆ ಸೇರಿದ ವಸ್ತುಗಳೇ ಆಗಿದ್ದರೂ ಅನ್ನ ಬಟ್ಟೆ ಮೊದಲಾದ ವಸ್ತುಗಳನ್ನು ಆ ಭಗವಂತನಿಗೆ ಅರ್ಪಿಸಬೇಕು. ಅದರಂತೆಯೇ ಮೊದಲೇ ಪ್ರಾಣದೇವರ ಅಧೀನದಲ್ಲಿದ್ದ ಅನ್ನ ವಸ್ತ್ರಾದಿಗಳನ್ನು ಮಿಕ್ಕ ದೇವತೆಗಳೂ ಪ್ರಾಣದೇವರಿಗೆ ಅರ್ಪಿಸಿದರು ಎಂದು 'ಕರ್ಮಾನುಪೂರ್ವೀ' ಎಂಬ ಗ್ರಂಥದಲ್ಲಿ ಹೇಳಿದೆ.

ನೈವೇದ್ಯವನ್ನು ಮೂರು ವಿಧವಾಗಿ ಸ್ವೀಕರಿಸುವನು

'ಯೋಗದೀಪಿಕೆ'ಯಲ್ಲಿ (ಪುಟ ೩೪೩) ಭಗವಂತ ಸ್ವಾಖ್ಯರಸವನ್ನೂ ರಮಾಯೋಗ್ಯರಸವನ್ನೂ ಬ್ರಹ್ಮಾದಿಯೋಗ್ಯರಸವನ್ನೂ ಬೇರೆಬೇರೆಯಾಗಿ (ಪೃಥಕ್ ಪೃಥಕ್) ಸ್ವೀಕರಿಸುತ್ತಾನೆಂದೂ 'ಪೂಜಾಕಲ್ಪಲತಾ'ದಲ್ಲಿ (ಅದೇ ಪುಟದಲ್ಲೇ) 'ತ್ರೇಧಾ ವಿಭಜ್ಯ' ಸ್ವೀಕರಿಸುತ್ತಾನೆಂದೂ ಹೇಳಿತ್ತು. ಅದು ಹೇಗೆ? ಎಂಬುದರ ವಿವರಣೆ ಐತರೇಯ ಭಾಷ್ಯದಲ್ಲಿ ಉದಾಹೃತವಾದ ಋಕ್‌ಸಂಹಿತೆಯ ಈ ವಾಕ್ಯದಿಂದ ಸ್ಪಷ್ಟವಾಗಿ ತಿಳಿಯುತ್ತದೆ. (ಪ್ರಥಮ. ಪದ್ಯಮಾಲಾ, ಪುಟ ೮೦)—

ಅದನಾಽಽಘ್ರಾಣದೃಕ್ಸ್ವಾಖ್ಯ—ಯೋಗತ್ರಯವಿಭಾಗತಃ
ಮುಖ-ನಾಸಾ ಚಕ್ಷುಷಾಂ ತದ್—ಭೋಗ್ಯಮನ್ನಂ ಹರೇಃ ಶ್ರುತಮ್ ॥

(ಐತರೇಯ ಭಾಷ್ಯ, ೨ ಪ್ರಪಾಠಕ, ೧ ಅಧ್ಯಾ., ೨ ಖಂಡ)

ಭಗವಂತನು ಭೋಜ್ಯರಸವನ್ನು ಮೂರು ವಿಧವಾಗಿ ಸ್ವೀಕರಿಸುವನು. ಬಾಯಿಯಿಂದ ಉತ್ತಮವಾದ ಸ್ವಾದ್ಯರಸವನ್ನು ತಿನ್ನುವನು ; ಮೂಗಿನಿಂದ ಮಧ್ಯಮರಸವನ್ನು ಮೂಸಿನೋಡಿ (ಆಘ್ರಾಣಿಸಿ) ರಮಾದೇವಿಗೆ ಕೊಡುವನು; ಬ್ರಹ್ಮಾದಿಗಳಿಗೆ ಸೇರಬೇಕಾದ ಅಧಮರಸವನ್ನು ಕಣ್ಣಿನಿಂದ ದೃಷ್ಟಿಸಿ ಅವರಿಗೆ ಕೊಡುವನು. ಇದೇ ರೀತಿ ಅಧ್ಯಾತ್ಮದಲ್ಲಿ (ನಮ್ಮ ದೇಹದಲ್ಲಿ) ಬಾಯಲ್ಲಿರುವ ಪರಶುರಾಮರೂಪದಿಂದ ತಿನ್ನುವನು (ತಿನ್ನಿಸುವನು). ಮೂಗಿನಲ್ಲಿರುವ ನರಸಿಂಹರೂಪದಿಂದ ಆಘ್ರಾಣಿಸುವನು. ಕಣ್ಣಿನಲ್ಲಿರುವ ಕಪಿಲರೂಪದಿಂದ ದರ್ಶನ ಮಾಡಿಸುವನು.

ಭಗವಂತನಿಗೆ ನಾನಾ ರೂಪಗಳಿಂದ ನೈವೇದ್ಯವನ್ನು ಸ್ವೀಕರಿಸಲು ಪ್ರಾರ್ಥನೆ

(ಉಡುಪಿ ಅಹ್ವೀ.ವಂ, ಕುಂಭಕೋಣ 'ದೇವಪೂಜಾ'
ಮತ್ತು ಪ್ರಭಂ. 'ಪದ್ಮಮಾಲಾ')

ಭಗವನ್ ಶ್ರೀಪತೇ ನ್ಯಸ್ತಂ ನೈವೇದ್ಯಂ ತ್ವತ್ಪುರೋ ಮಯಾ ।
ಕಪಿಲಾತ್ಮಕ-ದಿವ್ಯೇನ ಚಕ್ಷುಷಾ ತ್ವಂ ವಿಲೋಕಯ ॥ ೧

ಕಠಿನ ಶಬ್ದಾರ್ಥ— ನ್ಯಸ್ತ-ಇಡಲ್ಪಟ್ಟ, ತ್ವತ್ಪುರಃ-ನಿನ್ನ ಮುಂದೆ, ಮಯಾ-ನನ್ನಿಂದ, ಚಕ್ಷುಷಾ-ಕಣ್ಣಿನಿಂದ, ತ್ವಂ-ನೀನು, ವಿಲೋಕಯ-ನೋಡು.

(ಅರ್ಥ) ಹೇ ಲಕ್ಷ್ಮೀಪತಿಯಾದ ಭಗವಂತ! ನಾನು ನಿನ್ನ ಮುಂದುಗಡೆ ಇಟ್ಟಿರುವ ಸಕಲ ನೈವೇದ್ಯಪದಾರ್ಥಗಳನ್ನೂ "ಕಪಿಲ"ರೂಪವಾದ ನಿನ್ನ ಕಣ್ಣಿನಿಂದ ನೋಡುವವನಾಗು.

ಕೃತ್ವಾ ಪವಿತ್ರಂ ಪೂರ್ಣಂ (ತಂ) ಚ ಸಾಧು ಸ್ವಾದುರಸೈರ್ಯುತಮ್ ।
ನೃಸಿಂಹಾತ್ಮಕರೂಪೇಣ ದಿವ್ಯ ಘ್ರಾಣೇಂದ್ರಿಯೇಣ ತು ।
ತದ್ವಸ್ತುನಿಷ್ಠಗಂಧಂ ಚ ದಿವ್ಯಮಾಜಿಘ್ರ ಚಿನ್ಮಯ ॥ ೨

(ಪ್ರಭಂ. ಪಾಠಾಂ. ದಿವ್ಯಮಾಘ್ರಾಯ)

(ಶಬ್ದಾರ್ಥ) ಕೃತ್ವಾ-ಮಾಡಿ, ಪೂತಂ-ಪಾವನವನ್ನಾಗಿ, ಸಾಧು-ಚೆನ್ನಾಗಿ ಅಥವಾ ಉತ್ತಮವಾದ (ರಸಕ್ಕೆ ವಿಶೇಷಣ), ಸ್ವಾದು-ರುಚಿಯಾದ, ಸಿಹಿಯಾದ, ಯುತ-ಕೂಡಿದ, ಘ್ರಾಣೇಂದ್ರಿಯ-ಮೂಸಿನೋಡುವ ಇಂದ್ರಿಯ (ಮೂಗು), ನಿಷ್ಠ-ಇರುವ, ಆಜಿಘ್ರ-ಮೂಸಿನೋಡು, ಆಘ್ರಾಯ-ಮೂಸಿನೋಡಿ.

(ಅರ್ಥ) ಈ ನೈವೇದ್ಯವೆಲ್ಲವೂ ಪವಿತ್ರವೂ ಪೂರ್ಣವೂ ಚೆನ್ನಾಗಿ ಉತ್ತಮವಾದ ರಸಗಳಿಂದ ಕೂಡಿದಂತೆಯೂ ಆಗುವಂತೆ ಮಾಡಿ, "ನೃಸಿಂಹ"ರೂಪವಾದ ದಿವ್ಯವಾದ ನಿನ್ನ ಮೂಗಿನಿಂದ ಈ ವಸ್ತುಗಳಲ್ಲಿರುವ ಸುವಾಸನೆಯನ್ನು ಮೂಸಿನೋಡು.

ಭೃಗುರಾಮಸ್ವರೂಪೇಣ ದಿವ್ಯವಾಗಿಂದ್ರಿಯೇಣ ತು ।
ಸಾಂತ್ವಯ ಶ್ಲಕ್ಷ್ಣಯಾ ವಾಚಾ ಭಕ್ತಂ ಮಾಮನುಕಂಪಯಾ ॥ ೩

(ಉತ್ತರಾರ್ಧವು ಕೇವಲ ಪ್ರಭಂಜನರ 'ಪದ್ಯಮಾಲಾ'ದಲ್ಲಿ ಮಾತ್ರವಿದೆ. ಉಡುಪಿ ಆಹ್ನಿಕ ಮಂಜರಿಯಲ್ಲೂ ಕುಂಭಕೋಣದ 'ದೇವಪೂಜಾಪದ್ಧತಿ'ಯಲ್ಲೂ ಇಲ್ಲ.)

ಶಬ್ದಾರ್ಥ— ಭೃಗುರಾಮ-ಪರಶುರಾಮ, ವಾಗಿಂದ್ರಿಯ-ಮಾತನಾಡುವ ಇಂದ್ರಿಯ ಎಂದರೆ ಬಾಯಿ (ವದನ), ಸಾಂತ್ವಯ-ಸಮಾಧಾನ ಮಾಡು, ಶ್ಲಕ್ಷ್ಣಯಾ-ನಯವಾದ, ಮೃದುವಾದ (ಅಮರ— ಶ್ಲಕ್ಷ್ಣಂ, ದಭ್ರಂ, ಕೃಶಂ, ತನು), ವಾಚಾ-ಮಾತಿನಿಂದ, ಅನುಕಂಪಯಾ-ದಯದಿಂದ, ಕೃಪೆಯಿಂದ.

(ಅರ್ಥ) ಹೇ ಭಗವಂತ, ಪರಶುರಾಮರೂಪವಾದ ನಿನ್ನ ವಾಗಿಂದ್ರಿಯದಿಂದ ಎಂದರೆ ಬಾಯಿಂದ ಭಕ್ತನಾದ ನನ್ನನ್ನು ನಯವಾದ ಮೃದು-ಮಧುರವಾದ ಮಾತುಗಳಿಂದ ಸಮಾಧಾನಪಡಿಸುವವನಾಗು.

ಕೂರ್ಮಸ್ವರೂಪರೂಪೇಣ ದಿವ್ಯಜಿಹ್ವೇಂದ್ರಿಯೇಣ ತು ।
ಆಸ್ವಾದಯ ಸ್ವಾದುರಸಂ ಭುಂಕ್ಷ್ವ ದೇವ ರಮಾಪತೇ ॥ ೪
ಅಗಣಯ್ಯಾಪರಾಧಾನ್ಮೇ ಪ್ರಸಾದಂ ಕುರು ಕೇಶವ ॥ ೫

(ಶಬ್ದಾರ್ಥ) ಜಿಹ್ವೇಂದ್ರಿಯ-ನಾಲಿಗೆ, ಆಸ್ವಾದಯ-ರುಚಿ ನೋಡು, ಚಪ್ಪರಿಸಿ ನೋಡು, ಸ್ವಾದುರಸಂ-ಸಿಹಿಯಾದ (ಉತ್ತಮವಾದ, ರುಚಿಯಾದ), ರಸವನ್ನು, ಭುಂಕ್ಷ್ವ-ಭೋಜನ ಮಾಡು, ತಿನ್ನುವವನಾಗು, ಅಗಣಯ್ಯ-ಎಣಿಸದೆ, ಲೆಕ್ಕಿಸದೆ, ವಿಚಾರ ಮಾಡದೆ, ಮೇ-ನನ್ನ, ಪ್ರಸಾದಂ-ಅನುಗ್ರಹವನ್ನು, ಪ್ರಸಾದಂ ಕುರು-ಪ್ರಸನ್ನನಾಗು, ಅನುಗ್ರಹ ಮಾಡು. ಕೇಶವ ಶಬ್ದಾರ್ಥವನ್ನು ಗೀತಾಭಾಷ್ಯದಲ್ಲಿ ಎರಡನೇ ಅಧ್ಯಾಯದ ೫೪ನೇ ಶ್ಲೋಕದಲ್ಲಿ ಹೇಳಿದ್ದಾರೆ— ಕ-ಬ್ರಹ್ಮದೇವರನ್ನೂ, ಈಶ-ರುದ್ರದೇವರನ್ನೂ, ವ-ನಿಯಮಿಸುವವನು. ಸೃಷ್ಟ್ಯಾದಿಗಳಿಂದ ಬ್ರಹ್ಮರುದ್ರೇಂದ್ರಾದಿ ಸಕಲ ದೇವತಾ-ಪ್ರವರ್ತಕನೆಂದು ಅರ್ಥ.

(ಅರ್ಥ) ನಿನ್ನ ನಾಲಿಗೆಯೇ ಕೂರ್ಮಸ್ವರೂಪವಾಗಿದೆ. ಅಂಥಾ ಕೂರ್ಮರೂಪವಾದ ನಿನ್ನ ನಾಲಿಗೆಯಿಂದ ಈ ನೈವೇದ್ಯಗಳಲ್ಲಿರುವ ಉತ್ತಮವಾದ ಷಡ್ರಸಗಳನ್ನೂ ಆಸ್ವಾದಿಸಿ ನೋಡಿ ಭೋಜನ ಮಾಡು. ರಮಾವಲ್ಲಭನಾದ ಹೇ ಸ್ವಾಮಿ ನಿನಗೆ ನಾನೇನ- ಕೊಡಬಲ್ಲೆ.

ನನ್ನ ಸಕಲಾಪರಾಧಗಳನ್ನೂ ಕ್ಷಮಿಸಿ ಈ ನೈವೇದ್ಯವನ್ನು ಸ್ವೀಕರಿಸಿ ನನ್ನ ಮೇಲೆ ಅನುಗ್ರಹ ಮಾಡು, ಪ್ರಸನ್ನನಾಗು ಎಂದರ್ಥ.

ನೆನಪಿಟ್ಟುಕೊಳ್ಳಿ

1. ಕಪಿಲಾತ್ಮಕ ಕಣ್ಣಿನಿಂದ ಈ ನೈವೇದ್ಯಕ್ಕೆ ಇಟ್ಟಿರುವ ಪದಾರ್ಥಗಳನ್ನು ನೋಡಿ ಪವಿತ್ರವನ್ನೂ ಪೂರ್ಣವನ್ನೂ ಮಾಡು.
2. ನೃಸಿಂಹಾತ್ಮಕ ಮೂಗಿನಿಂದ ನೈವೇದ್ಯದಲ್ಲಿರುವ ಸುವಾಸನೆಯನ್ನು ಸ್ವೀಕರಿಸು.
3. ಭೃಗುರಾಮ (ಪರಶುರಾಮ) ರೂಪಾತ್ಮಕ ವಾಗಿಂದ್ರಿಯದಿಂದ ಭಕ್ತನಾದ ನನ್ನ ಮೇಲೆ ಒಳ್ಳೆಯ ಮಾತು ಹೇಳಿ ದಯಮಾಡು.
4. ಕೂರ್ಮರೂಪವಾದ ಜಿಹ್ವೇಂದ್ರಿಯದಿಂದ ರುಚಿ ನೋಡಿ ಭೋಜನ ಮಾಡು... ಎಂದು ಅನುಸಂಧಾನ ಮಾಡಬೇಕು.

ಈ ಪ್ರಕಾರ ಪ್ರಾರ್ಥಿಸಿದ ಮೇಲೆ ಟೀಕಾಚಾರ್ಯರು ಪದ್ಯಮಾಲಾದಲ್ಲಿ ಹೇಳಿದಂತೆ "ಸ್ವಾದುಃ ಪವಸ್ವ" ಎಂಬ ಋಕ್ಕನ್ನು ಪಠಿಸುತ್ತಾ ಕುಡಿಯುವುದಕ್ಕೆ ನೀರು ಕೊಡುತ್ತಾ 'ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ' ಎಂದು ಹೇಳುತ್ತಾ ಉದ್ಧರಣೆಯಿಂದ ನೀರನ್ನು ಅರ್ಘ್ಯದ ಬಟ್ಟಲಿಗೆ ಬಿಡಬೇಕು. ಆಮೇಲೆ 'ಮಧುವಾತಾ ಋತಾಯತೇ' ಎಂಬ ಮಂತ್ರವನ್ನು ಪಠಿಸಬೇಕು. (ಈ ಎರಡು ಮಂತ್ರಗಳ ಅರ್ಥವನ್ನೂ ಅಭಿಷೇಕ. ಕಲಾಪದಲ್ಲಿ ಕೊಟ್ಟಿದೆ)

ಓಂ। ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ

ಸ್ವಾದುರಿಂದ್ರಾಯ ಸುಹವೀತುನಾಮ್ನೇ।

ಸ್ವಾದುರ್ಮಿತ್ರಾಯ ವರುಣಾಯ ವಾಯವೇ

ಬೃಹಸ್ಪತಯೇ ಮಧುಮಾಁ ಅದಾಭ್ಯಃ ॥

(ಋ. ೯ ಮಂ., ೮೫ ಸೂ., ೬ ಋಕ್; ೭ ಅಷ್ಟ, ೩ ಅಧ್ಯಾ, ೧೦ ವರ್ಗ)

ಓಂ। ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ।

ಮಾಧ್ವೀರ್ನಃ ಸಂತ್ವೋಷಧೀಃ ॥

ಮಧು ನಕ್ತಮುತೋಷಸೋ ಮಧುಮತ್ ಪಾರ್ಥಿವಂ ರಜಃ।

ಮಧು ದ್ಯೌರಸ್ತು ನಃ ಪಿತಾ ॥

ಮಧುಮಾನ್ನೋ ವನಸ್ಪತಿರ್ ಮಧುಮಾಁ ಅಸ್ತು ಸೂರ್ಯಃ।

ಮಾಧ್ವೀರ್ಗಾವೋ ಭವಂತು ನಃ ॥

(ಋ. ೧ ಮಂ., ೯೦ ಸೂ., ೬-೮ ಋಕ್)
೧ ಅಷ್ಟ., ೬ ಅಧ್ಯಾ., ೧೮ ವರ್ಗ ಮತ್ತು
ತೈ. ಸಂ. ೪ ಅಷ್ಟ., ೨ ಪ್ರ., ೯ ಅನು., ೩-೫ ಮಂ.)

ಈ ಎರಡೂ ಮಂತ್ರಗಳನ್ನು ಪಠಿಸಿದ ಬಳಿಕ ನೈವೇದ್ಯದಲ್ಲಿರುವ ಸಕಲ ರಸವೂ ಪರಮಾತ್ಮಸ್ವರೂಪವೇ ಎಂದು ನೆನಪು ಕೊಡುವುದಕ್ಕಾಗಿ ತೈತ್ತಿರೀಯೋಪನಿಷತ್ತಿನ (೨ ವಲ್ಲಿ, ೭ ಅನುವಾಕ, ೨ನೇ ವಾಕ್ಯ) ಈ ವಾಕ್ಯವನ್ನೂ ಬೃಹದಾರಣ್ಯಕೋಪನಿಷತ್ತಿನ 'ಪೂರ್ಣಮದಃ' (೫ ಅಧ್ಯಾ., ೧ ಬ್ರಾಹ್ಮಣ, ೧ ಮಂತ್ರ) ಎಂಬ ಮಂತ್ರವನ್ನೂ ಪಠಿಸಬೇಕೆಂದು ಉಡುಪಿ ಆಹ್ನಿಕಮಂಜರಿಯಲ್ಲಿ ಕುಂಭಕೋಣದ ದೇವಪೂಜಾಪದ್ಧತಿಯಲ್ಲೂ ಕೊಟ್ಟಿದೆ.

i) ಓಂ। ರಸೋ ವೈ ಸಃ। ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ-

ಭವತಿ ॥

ii) ಓಂ। ಪೂರ್ಣಮದಃ ಪೂರ್ಣಮಿದಂ

ಪೂರ್ಣಾತ್ ಪೂರ್ಣಮುದಚ್ಯತೇ।

ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥

ಈ ಮಂತ್ರಗಳ ಅರ್ಥ

i) ಸಃ-ಸುಕೃತರೂಪಿಯಾದ ಆ ವಾಸುದೇವನು, ರಸಃ. ವೈ-ಕೇವಲ ಆನಂದ ರೂಪನೇ ಆಗಿದ್ದಾನೆ. ಹಿ-ಯಾವ ಕಾರಣದಿಂದ ಆ ವಾಸುದೇವನು ಆನಂದಸ್ವರೂಪ ನಾಗಿದ್ದಾನೋ ಆದ್ದರಿಂದ, (ರಸಂ, ಹಿ, ಏವ, ಅಯಂ—ಎಂದು ಪದಚ್ಛೇದ) ಅಯಂ-ಈ ಜ್ಞಾನಿಯು, ರಸಂ ಏವ-ಆನಂದರೂಪಿಯಾದ ಭಗವಂತನನ್ನೇ, ಲಬ್ಧ್ವಾ-ಪಡೆದು, ಆನಂದೀ ಭವತಿ-ತಾನೂ ಆನಂದಮಯನಾಗುತ್ತಾನೆ.

ತಾತ್ಪರ್ಯ— ವಾಸುದೇವರೂಪೀ ಪರಮಾತ್ಮ ಕೇವಲಾನಂದಮಯಸ್ವರೂಪನಾದ್ದರಿಂದ ಮುಕ್ತಿಯಲ್ಲಿ ಅವನನ್ನೇ ಸೇರುವುದರಿಂದ ಜ್ಞಾನಿಯೂ ಆನಂದಮಯನಾಗಿ-ಬಿಡುತ್ತಾನೆ.

ii) ಅದಃ-ಮೂಲರೂಪವು, ಪೂರ್ಣಂ-ಪರಿಪೂರ್ಣವಾಗಿರುತ್ತದೆ. ಇದಂ-ಈ ಅವತಾರರೂಪವೂ, ಪೂರ್ಣಂ-ಪರಿಪೂರ್ಣವಾಗಿರುತ್ತದೆ. ಪೂರ್ಣಾತ್-ಪರಿಪೂರ್ಣವಾದ ಮೂಲರೂಪದಿಂದ, ಪೂರ್ಣಂ-ಪರಿಪೂರ್ಣವಾದ ಅವತಾರರೂಪವು, ಉದಚ್ಯತೇ-ಸೃಷ್ಟಿ-ಕಾಲದಲ್ಲಿ ಹೊರಬೀಳುತ್ತದೆ. ಪೂರ್ಣಸ್ಯ-ಪೂರ್ಣವಾದ ಮೂಲರೂಪದಿಂದ, ಪೂರ್ಣಂ-ಪೂರ್ಣವಾದ ಅವತಾರರೂಪವನ್ನು, ಆದಾಯ-ತೆಗೆದುಕೊಂಡರೂ, ಪೂರ್ಣಂ ಏವ-ಪೂರ್ಣವಾಗಿಯೇ, ಅವಶಿಷ್ಯತೆ-ಉಳಿದಿರುತ್ತದೆ.

ಪ್ರಕೃತ ಸಂದರ್ಭಕ್ಕೆ ಈ ಎರಡೂ ಹೀಗೆ ಅನ್ವಯವಾಗುತ್ತದೆ—

i) ಎಲ್ಲ ಪದಾರ್ಥಗಳಲ್ಲೂ ಇರುವ ಸಾರರೂಪನೇ ಭಗವಂತನಾದ ವಾಸುದೇವ. ಅವನು ಪರಿಪೂರ್ಣಾನಂದನಾದ್ದರಿಂದ ಈ ರಸಗಳನ್ನು ಆಸ್ವಾದಿಸುವುದರಿಂದ ಏನು ಆನಂದ ಆಗಬಹುದೋ ಆ ಪೂರ್ಣಾನಂದ ಅವನೇ ಆಗಿದ್ದಾನೆ. ಹೀಗೆ ತಿಳಿದು ಅನು-ಸಂಧಾನ ಮಾಡುವವರಿಗೂ ಆ ಸ್ವಾಮಿ ಮೋಕ್ಷವನ್ನು ಕೊಟ್ಟು ಸ್ವಸ್ವರೂಪಾನಂದವನ್ನು ಅನುಭವಿಸುವಂತೆ ಮಾಡುತ್ತಾನೆ.

ii) ಎಲ್ಲ ಪದಾರ್ಥಗಳಲ್ಲಿಯೂ ಆ ಪರಮಾತ್ಮನಿದ್ದರೂ ಅವನ ರೂಪಗಳಲ್ಲಿ ಭೇದವಿಲ್ಲವಾದ್ದರಿಂದ ಎಲ್ಲವೂ ಪೂರ್ಣರೂಪಗಳೇ, ಬಿಡಿಬಿಡಿಯಾಗಿ ಕೇಶವ-ನಾರಾಯಣಾದಿ ರೂಪಗಳಿಂದ ಬೇರೆಬೇರೆ ಇದ್ದಂತೆ ಕಂಡರೂ ಅವನು ಒಂದೇ. ಅಷ್ಟೇ ಅಲ್ಲ. ಪ್ರತಿಮಾದಿಗಳಲ್ಲಿ ಆವಾಹಿಸಲ್ಪಟ್ಟಿರುವ ನನ್ನ ಬಿಂಬಮೂರ್ತಿಯೂ (ಅಥವಾ ಸೂರ್ಯಾಂತರ್ಗತ ಸ್ವಾಮಿಯೂ) ಈ ಪದಾರ್ಥನಿಷ್ಠ ಭಗವದ್ರೂಪವೂ ಒಂದೇ—ಎಲ್ಲವೂ ಪರಿಪೂರ್ಣರೂಪಗಳು.

ಈ ರೀತಿ ಅನುಸಂಧಾನದಿಂದ ನೈವೇದ್ಯವನ್ನು ಸಮರ್ಪಿಸುತ್ತಾ 'ಓಂ ನಮೋ ನಾರಾಯಣಾಯ । ಸಶ್ರೀಕಾಯ ಸಪರಿವಾರಾಯ ಶ್ರೀಲಕ್ಷ್ಮೀನಾರಾಯಣಾಯ ಸರ್ವೋಪಸ್ಕರಸಂಯುಕ್ತಂ ಅನ್ನಾದಿ ಮಹಾನೈವೇದ್ಯಂ ಸಮರ್ಪಯಾಮಿ ।' ಎಂದು ಹೇಳಿ ಕೈಮುಗಿದು ಸಕಲನೈವೇದ್ಯವನ್ನೂ ಭಗವಂತನಿಗೆ ಸಮರ್ಪಿಸಬೇಕು. ಮುಂದೇನು ಮಾಡಬೇಕೆಂದರೆ 'ಪದ್ಮಮಾಲಾ'ದಲ್ಲಿ ಹೇಳಿದಂತೆ ಬಟ್ಟೆಯಿಂದ ಮುಖಕ್ಕೆ ಮುಸುಕು ಹಾಕಿಕೊಂಡು (ನೈವೇದ್ಯಪದಾರ್ಥಗಳನ್ನು ನಮ್ಮ ಕಣ್ಣು ನೋಡದಂತೆ) ಭಗವಂತ ಊಟ ಮಾಡುತ್ತಿದ್ದಾನೆಂದು ಮನಸಾ ಚಿಂತಿಸುತ್ತಾ (ಸಾಧ್ಯವಾದರೆ) ನೂರೆಂಟು ಸಾರಿ ಮೂಲಮಂತ್ರವನ್ನು ಜಪಿಸಬೇಕು. ಕಾಲಾವಕಾಶವಿಲ್ಲದಿದ್ದರೆ 'ಅಷ್ಟಾವಿಂಶತಿವಾರಂ ದ್ವಾದಶವಾರಂ ವಾ' ಇಪ್ಪತ್ತೆಂಟುಸಾರಿಯಾಗಲಿ ಅದೂ ಸಾಧ್ಯವಿಲ್ಲದಿದ್ದರೆ ಕನಿಷ್ಠಪಕ್ಷ ಹನ್ನೆರಡಾವರ್ತಿಯಾದರೂ ಜಪಿಸಬೇಕು. ಆಮೇಲೆ ಮುಸುಕು ತೆಗೆದು ಉತ್ತರಾಪೋಶನ ಕೊಡಬೇಕು. ಅದರ ಕ್ರಮವನ್ನು ಪದ್ಮಮಾಲಾದಲ್ಲಿ ಹೀಗೆ ಹೇಳಿದ್ದಾರೆ—

ಉತ್ತರಾಪೋಶನ ಕೊಡುವ ಕ್ರಮ

ಈ ಕ್ರಮವನ್ನು ಸಂಕ್ಷೇಪವಾಗಿ 'ಪದ್ಮಮಾಲಾ'ದಲ್ಲಿ ಹೀಗೆ ಕೊಟ್ಟಿದ್ದಾರೆ—

ಉತ್ತರಾಪೋಶನಂ ಪಶ್ಚಾತ್—'ದಮೃತಾಪಿಧಾನಮಸಿ' ।
ಇತ್ಯುಕ್ತ್ವಾ ಽಽಪೋಶನೋಚ್ಛಿಷ್ಟಂ—ಜಲಂ ಪಾತ್ರಾಂತರೇ
ಕ್ಷಿಪೇತ್ ॥ ೧೦೯ ॥

(ಶಬ್ದಾರ್ಥ) ಪಶ್ಚಾತ್–ಅನಂತರ, ಇತ್ಯುಕ್ತ್ವಾ = ಇತಿ + ಉಕ್ತ್ವಾ (ಯಣ್ ಸಂಧಿ) ಇತಿ–ಹೀಗೆ, ಉಕ್ತ್ವಾ–ಹೇಳಿ, ಉಚ್ಛಿಷ್ಟಜಲಂ–ಉತ್ತರಾಪೋಶನ ಹಾಕಿದಬಳಿಕ ಉಳಿದ ನೀರನ್ನು, ಕ್ಷಿಪೇತ್–ಹಾಕಬೇಕು.

(ಅರ್ಥ) ಮೂಲಮಂತ್ರವನ್ನು ಜಪಿಸಿ ಮುಸುಕನ್ನು ತೆಗೆದ ನಂತರ ನೀರಿನಿಂದ ಕೈ ತೊಳೆದುಕೊಂಡು 'ಅಮೃತಾಪಿಧಾನಮಸಿ ಸ್ವಾಹಾ' ಎಂದು ಹೇಳಿ ಉತ್ತರಾಪೋಶನ ಕೊಟ್ಟು. ಉಳಿದ ನೀರನ್ನು ಬೇರೆ ಪಾತ್ರೆಗೆ (ಅರ್ಘ್ಯದ ಬಟ್ಟಲಿಗೆ) ಹಾಕಬೇಕು.

ಮುಸುಕು ತೆಗೆದಮೇಲೆ ಕೈಗೆ ಸ್ವಲ್ಪ ನೀರು ಹಾಕಿ ತೊಳೆದುಕೊಂಡು ಭಗವಂತನನ್ನು ಈ ರೀತಿಯಾಗಿ 'ಉತ್ತರಾಪೋಶನ ತೆಗೆದುಕೋ' ಎಂದು ಪ್ರಾರ್ಥಿಸಬೇಕು.

ಮಹಾಲಕ್ಷ್ಮ್ಯಾ ದೀಯಮಾನಂ ಕರೇ ತೇ ದಕ್ಷಿಣೇಽನಘ ।
ಉತ್ತರಾಪೋಶನಂ ದಿವ್ಯಂ ಪಿಬ ದೇವ ರಮಾಪತೇ ॥

(ಅರ್ಥ) ಹೇ ದೋಷದೂರನಾದ (ಅನಘ) ರಮಾಪತಿಯೇ! ನಿನ್ನ ಬಲಗೈಯಲ್ಲಿ ಲಕ್ಷ್ಮೀದೇವಿಯಿಂದ ಕೊಡಲ್ಪಡುತ್ತಿರುವ ದಿವ್ಯವಾದ ಉತ್ತರಾಪೋಶನವನ್ನು ಕುಡಿಯುವವನಾಗು. (ಉತ್ತರ-ಕಡೆಯಲ್ಲಿ, ಅನಂತರದಲ್ಲಿ, ಅಪಃ-ನೀರನ್ನು, ಅಶನ-ಕುಡಿಯುವುದು)

ಪದ್ಮಮಾಲಾ ಶ್ಲೋಕ ನೋಡಿದರೆ ಉತ್ತರಾಪೋಶನವನ್ನು ಶಂಖದಿಂದ ಕೊಡಬಾರದು, ಬರಿಯ ಉದ್ಧರಣೆಯಿಂದ ಕೊಡಬೇಕೆಂದು ತೋರುತ್ತದೆ. ಆದರೆ ಉದ್ಧರಣೆಯಿಂದ ಆಪೋಶನ ಕೊಟ್ಟರೆ 'ನೀರು ಉಳಿಯುವ' ಸಂಭವನೇ ಇಲ್ಲ. ಆದ್ದರಿಂದ ಉತ್ತರಾಪೋಶನವನ್ನು ಶಂಖಕ್ಕೆ ನೀರು ಹಾಕಿಕೊಂಡು ಅದರಿಂದಲೇ ಕೊಡಬೇಕು ಎಂದು ಅರ್ಥವಾಗುತ್ತದೆ. ಅಲ್ಲದೆ ಪ್ರಾರ್ಥನಾಶ್ಲೋಕದಲ್ಲಿ 'ಮಹಾಲಕ್ಷ್ಮ್ಯಾ ದೀಯಮಾನಂ' ಎಂದಿರುವುದೂ ಶಂಖದಿಂದ ಕೊಡಬೇಕು ಎನ್ನುವುದಕ್ಕೆ ಸಹಕಾರಿಯಾಗಿದೆ. ಇದರ ಮೇಲೆ ಅವರವರ ಪೂರ್ವಿಕರ ಆಚಾರ ಹೇಗಿದೆಯೋ ಹಾಗೆ ಮಾಡಲು ಅಡ್ಡಿಯಿಲ್ಲ. ಉತ್ತರಾಪೋಶನ ಹಾಕಿ ಉಳಿದ ನೀರನ್ನು ಅರ್ಘ್ಯದ ಬಟ್ಟಲಿಗೆ ಹಾಕಬೇಕು.

ಕ್ರಮ — 'ಮಹಾಲಕ್ಷ್ಮ್ಯಾ' ಎಂದು ಪ್ರಾರ್ಥಿಸಿ ಶಂಖಕ್ಕೆ ನೀರು ಹಾಕಿಕೊಂಡು ಅದರಿಂದಲೋ ಅಥವಾ ಉದ್ಧರಣೆಯಿಂದಲೋ ನೀರನ್ನು 'ಓಂ ನಮೋ ನಾರಾಯಣಾಯ। ಅಮೃತಾಪಿಧಾನಮಸಿ ಸ್ವಾಹಾ। ಉತ್ತರಾಪೋಶನಂ ಸಮರ್ಪಯಾಮಿ' ಎಂದು ಹೇಳಿ ಒಂದು ಸರಿ ನೀರನ್ನು ಹಾಕಿ ಉಳಿದ ನೀರನ್ನು ಬೇರೆ ಪಾತ್ರೆಗೆ ಹಾಕಬೇಕು. ಅನಂತರ 'ಸಶ್ರೀಕಾಯ ಸಪರಿವಾರಾಯ ಸ್ವಾಹಾ' ಎಂದು ಹೇಳಿ ಮೂಲಮಂತ್ರದಿಂದ ಮೂರು ಸಲ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ಊಟದಿಂದ ಎದ್ದಮೇಲೆ ಕೈ ತೊಳೆದುಕೊಂಡು, ಬಾಯಿ ಮುಕ್ಕಳಿಸಿ ಕೈಕಾಲು ತೊಳೆದುಕೊಂಡು ಆಚಮನ ಮಾಡುವುದು ಶಿಷ್ಟರ ಪದ್ಧತಿ. ಅದರಂತೆ ದೇವರಿಗೂ ಮಾಡಿಸಬೇಕು. ಇದನ್ನು 'ಗಂಡೂಷ ವಿಧಿ' ಎನ್ನುತ್ತಾರೆ. ಆ ವಿಧಿ ಹೇಗೆಂಬುದನ್ನು ಪದ್ಮಮಾಲಾದಲ್ಲಿ ಹೀಗೆ ಹೇಳಿದ್ದಾರೆ.

ಗಂಡೂಷಾದಿ ವಿಧಿಃ

ವಾಮೇ ಗಂಡೂಷಪಾತ್ರಂ ಸ್ಯಾತ್ ತತ್ರ ಗಂಡೂಷಮರ್ಪಯೇತ್ ।
ಹಸ್ತಪ್ರಕ್ಷಾಲನಂ ತತ್ರ ಪಶ್ಚಾದಾಚಮನಂ ಕ್ಷಿಪೇತ್ ॥ ೧೧೦ ॥

(ಶಬ್ದಾರ್ಥ) ವಾಮೇ-ದೇವರ ಎಡಭಾಗದಲ್ಲಿ, ಗಂಡೂಷ-ಬಾಯಿ ಮುಕ್ಕಳಿಸುವುದು, ಸ್ಯಾತ್-ಇಡಬೇಕು, ಹಸ್ತಪ್ರಕ್ಷಾಲನ-ಕೈ ತೊಳೆದುಕೊಳ್ಳುವುದು, ಕ್ಷಿಪೇತ್-ಹಾಕಬೇಕು.

(ಅರ್ಥ) ದೇವರ ಎಡಭಾಗದಲ್ಲಿ ಗಂಡೂಷಕ್ಕೆ ಒಂದು ಪಾತ್ರೆಯನ್ನಿಟ್ಟಿರಬೇಕು. ಅದರಲ್ಲಿ ಗಂಡೂಷಕ್ಕೆ ನೀರು ಹಾಕಬೇಕು. ಅದರಲ್ಲೇ ಕೈ ತೊಳೆದುಕೊಳ್ಳುವುದಕ್ಕೂ ನೀರನ್ನು ಹಾಕಬೇಕು. ಅನಂತರ ಆಚಮನಕ್ಕಾಗಿ ಮೂರು ಸಾರಿ ನೀರನ್ನು ಹಾಕಬೇಕು.

ದೇವಸ್ಯ ವಾಮಭಾಗೇ ಗಂಡೂಷಪಾತ್ರಂ ನಿಕ್ಷಿಪ್ಯ, ದ್ವಾದಶ ಗಂಡೂಷಾಣಿ ಸಮರ್ಪಯಾಮಿ। (ಎಂದು ಹೇಳುತ್ತಾ ಅದರಲ್ಲಿ ಉದ್ಧರಣೆಯಿಂದ ನೀರನ್ನು ಹಾಕಬೇಕು. ಅನಂತರ ಕೈ ತೊಳೆಯುವುದಕ್ಕೆ (ಕರೋದ್ವರ್ತನಕ್ಕೆ) ನೀರು ಕೊಡುತ್ತೇನೆ ಎಂದು ಪ್ರಾರ್ಥಿಸುವ ಈ ಶ್ಲೋಕವನ್ನು ಪಠಿಸಬೇಕು.)

ಚಂದನಂ ಚ ಸಕರ್ಪೂರಂ ಕಸ್ತೂರ್ಯಾದಿಸಮನ್ವಿತಮ್ ।
ಕರೋದ್ವರ್ತನಕಂ ದೇವ ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್ ॥

(ಅರ್ಥ) ಚಂದನ, ಕರ್ಪೂರ, ಕಸ್ತೂರಿ ಮೊದಲಾದ ಪದಾರ್ಥಗಳನ್ನು ಹಾಕಿರುವ ಕೈತೊಳೆದುಕೊಳ್ಳುವ ಈ ನೀರನ್ನು, ಹೇ ಸ್ವಾಮಿ! ನಿನ್ನ ಪ್ರೀತ್ಯರ್ಥ ಕೊಡುತ್ತಿದ್ದೇನೆ. ಇದನ್ನು ಸ್ವೀಕರಿಸುವನಾಗು. (ಹೀಗೆ ಪ್ರಾರ್ಥಿಸಿ) ಓಂ ನಮೋ ನಾರಾಯಣಾಯ। ಮುಖಪ್ರಕ್ಷಾಲನಂ (ಕರೋದ್ವರ್ತನಕಂ) ಸಮರ್ಪಯಾಮಿ। ದಂತಶೋಧನಂ ಸಮರ್ಪಯಾಮಿ। ಹಸ್ತಪ್ರಕ್ಷಾಲನಂ ಸಮರ್ಪಯಾಮಿ। ಪಾದಪ್ರಕ್ಷಾಲನಂ ಸಮರ್ಪಯಾಮಿ। ಮುಖವಸ್ತ್ರಂ ಸಮರ್ಪಯಾಮಿ। ಆಚಮನಂ ಸಮರ್ಪಯಾಮಿ (ಎಂದು ಹೇಳುತ್ತಾ ನೀರು ಹಾಕುತ್ತಿರಬೇಕು.)

ತತಃ ನೈವೇದ್ಯಪಾತ್ರಾಣಿ ವಿಸರ್ಜಯಿತ್ವಾ, ಸ್ಥಳಶುದ್ಧಿಂ ಕುರ್ಯಾತ್। (ಅನಂತರ ನೈವೇದ್ಯಕ್ಕೆ ಇಟ್ಟಿದ್ದ ಪಾತ್ರೆಗಳನ್ನು ತೆಗೆದು ಪಾತ್ರೆ ಇಟ್ಟ ಸ್ಥಳದಲ್ಲಿ ಸಾರಿಸಿ ಶುದ್ಧ ಮಾಡಬೇಕು. ಅಹ್ನೀಕಮಂಜರಿಯ (ಉಡುಪಿ) ಪ್ರಕಾರ ನೈವೇದ್ಯ ತೆಗೆದಿಡುವುದಕ್ಕೆ ಮುಂಚೆ ವಿಷ್ವಕ್ಸೇನ ಭಾಗವನ್ನು ತೆಗೆದಿಟ್ಟು, ವೈಶ್ವದೇವಕ್ಕೆ ಬೇರೆ ಭಾಗ ತೆಗೆದಿಟ್ಟು, ವಿಷ್ವಕ್ಸೇನನ ಭಾಗದ ಜೊತೆ ಸ್ವಲ್ಪ ಮೊಸರು ಸೇರಿಸಿ, ದೇವರಿಗೆ ತಾಂಬೂಲ ಸಮರ್ಪಿಸಿದ ಮೇಲೆ 'ನೈವೇದ್ಯಶೇಷಂ ವಿಷ್ವಕ್ಸೇನಾಯ ಸ್ವಾಹಾ' ಎಂದು ಹೇಳಿ ನಿರ್ಮಾಲ್ಯ ಪುಷ್ಪ-ತುಳಸಿಯನ್ನೂ ತೀರ್ಥವನ್ನೂ ಕೊಟ್ಟು, ಆ ಭಾಗದ ಮೇಲೆ ನೀರು ಹಾಕಿ ಅದನ್ನು ವಿಸರ್ಜಿಸಿ, ಅನಂತರ ಘಂಟಾನಾದವನ್ನು ಮಾಡಿ ನೈವೇದ್ಯವನ್ನು ತೆಗೆದಿಡಬೇಕು. ಈ ಪದ್ಧತಿ ನಮ್ಮಲ್ಲಿ ಹೆಚ್ಚು ಪ್ರಚಾರದಲ್ಲಿಲ್ಲ.)

ಅನಂತರ ದೇವರಿಗೆ ಮೂಲಮಂತ್ರದಿಂದ ಮೂರು ಸರಿ ತುಲಸೀ-ಪುಷ್ಪಗಳನ್ನು ಸಮರ್ಪಿಸಿ ತಾಂಬೂಲವನ್ನೂ ಸುವರ್ಣಪುಷ್ಪ ದಕ್ಷಿಣೆಯನ್ನೂ ಸಮರ್ಪಿಸಬೇಕು. ಆ ಕ್ರಮವನ್ನು ಪದ್ಮಮಾಲಾದಲ್ಲಿ ಹೀಗೆ ವರ್ಣಿಸಿದ್ದಾರೆ—

ತಾಂಬೂಲ ಸಮರ್ಪಣೆ ಮತ್ತು ದಕ್ಷಿಣೆ

ಮೂಲೇನ ಪುಷ್ಪತ್ರಿತಯಮರ್ಪಯಿತ್ವಾ ತತೋ ವದೇತ್ ।
'ಪೂಗೀಫಲಂ ಸಖದಿರ-ಚೂರ್ಣಕರ್ಪೂರ ಸಂಯುತಮ್ ॥೧೧೧॥
ನಾಗವಲ್ಲೀದಲೈರ್ಯುಕ್ತಂ ತಾಂಬೂಲಂ ಗೃಹ್ಯತಾಂ ವಿಭೋ' ।
ಇತಿ ತಾಂಬೂಲಕಂ ದದ್ಯಾತ್ 'ನಾಕಸ್ಯೇ'ತಿ ಚ ದಕ್ಷಿಣಾಮ್ ॥

(ಶಬ್ದಾರ್ಥ) ಪುಷ್ಪತ್ರಿತಯಂ-ಮೂರು ಸಾರಿ ಪುಷ್ಪವನ್ನು (ಅರ್ಪಿಸಬೇಕು) ಪೂಗೀಫಲಂ—ಅಡಕೆ, ಖದಿರ-ತೆರೆ ಎಂಬ ಒಂದು ವಿಧವಾದ ಗಿಡ. ಖದಿರಾ ಎಂದು ಸ್ತ್ರೀಲಿಂಗವಾದರೆ 'ಮುಟ್ಟಿದರೆ ಮುನಿ' ಎಂಬ ಸಸ್ಯವಾಗುತ್ತದೆ. ಸುವಾಸನೆಗಾಗಿ ಇದರ ಪುಡಿಯನ್ನು ಅಡಕೆಯ ಜೊತೆ ಸೇರಿಸುವರು. (ಈಗ ಹೆಚ್ಚು ಬಳಕೆಯಲ್ಲಿ ಕಾಣುತ್ತಿಲ್ಲ.) ಚೂರ್ಣ-ಸುಣ್ಣ, ಕರ್ಪೂರ-ಪಚ್ಚಕರ್ಪೂರ, ನಾಗವಲ್ಲೀ ದಳ-ವೀಳ್ಯದ ಎಲೆ ಅಥವಾ ವಿಳ್ಯೇದಲೆ, ಗೃಹ್ಯತಾಂ-ಸ್ವೀಕರಿಸಲ್ಪಡಲಿ (ಕರ್ಮಣಿ ಪ್ರಯೋಗ).

(ಅರ್ಥ) ಓಂ ನಮೋ ನಾರಾಯಣಾಯ ಎಂದು ಹೇಳಿ (ಭೋಜನ ಮುಗಿಸಿ ಬಂದ ಭಗವಂತನಿಗೆ) ಮೂರು ಸಾರಿ ಹೂವನ್ನು ಏರಿಸಿ 'ಪೂಗೀಫಲಂ' ಎಂಬ ಶ್ಲೋಕ ಹೇಳಿ ತಾಂಬೂಲವನ್ನೂ 'ನಾಕಸ್ಯ' ಎಂಬ ಯಜ್ಞಮಂತ್ರದಿಂದ (ಅಥವಾ 'ಹಿರಣ್ಯಗರ್ಭಸ್ಥಂ' ಎಂಬ ಮಂತ್ರದಿಂದ) ದಕ್ಷಿಣೆಯನ್ನೂ ಸಮರ್ಪಿಸಬೇಕು.

ತಾಂಬೂಲದ ಮಂತ್ರ—ಪಾಠಾಂತರಗಳು

ಪೂಗೀಫಲಂ ಸಖದಿರ— ಚೂರ್ಣಕರ್ಪೂರ ಸಂಯುತಮ್ ।
ನಾಗವಲ್ಲೀದಲೈರ್ಯುಕ್ತಂ ತಾಂಬೂಲಂ ಗೃಹ್ಯತಾಂ ವಿಭೋ ॥
ಎಂಬುವುದು ಟೀಕಾಕಾರರ ಪಾಠ.

ಪೂಗೀಫಲಸಮಾಯುಕ್ತಂ ನಾಗವಲ್ಲೀದಲೈರ್ಯುತಮ್ ।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥
ಎಂಬುವುದು ಉಡುಪಿ ಅಷ್ಟೀಕವಾಂಜರಿ ಮತ್ತು ಉಡುಪಿ ದೇವಪೂಜಾಪದ್ಧತಿಯ ಪಾಠ.

ಪೂಗೀಫಲಂ ಸಕರ್ಪೂರಂ ನಾಗಪರ್ಣಸಮನ್ವಿತಮ್ ।
ಗೃಹಾಣ ಚೂರ್ಣಸಂಯುಕ್ತಂ ತಾಂಬೂಲಂ ಸುಮನೋಹರಮ್ ॥
ಎಂಬುದು ಶ್ರೀ ಪ್ರಭಂಜನರ 'ಪದ್ಮಮಾಲಾ'ದ ಪಾಠಾಂತರ.

ಪೂಗೀಫಲಂ ಮಹದ್ದಿವ್ಯಂ ನಾಗವಲ್ಲೀದಲೈರ್ಯುತಮ್ ।
ಖದಿರಾದಿ ಸಮಾಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥

ಎಂಬುದು ವಾರಣಾಸಿ ಟಿ. ಗೋಪಾಲಾಚಾರ್ಯರ 'ವೈಷ್ಣವ ದೇವಪೂಜಾಪದ್ಧತಿ'ಯ ಪಾಠ.

ಪೂಗೀಫಲಂ ಸಕರ್ಪೂರಂ ನಾಗವಲ್ಲಿದಲೈರ್ಯುತಮ್ ।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥

ಎಂಬುದು ನಮ್ಮ ಹಿರಿಯರು ಬರೆದಿಟ್ಟ 'ದೇವಪೂಜಾಪದ್ಧತಿ'ಯ ಪಾಠ.

ಏಲಾಲವಂಗಕರ್ಪೂರ—ನಾಗರಾದ್ಯೈರ್ವಿಮಿಶ್ರಿತಮ್ ।
ಗೋಕ್ಷೀರಸೇಚಿತಂ ಪೂಗಂ ನಾಗವಲ್ಲೀದಲೈರ್ಯುತಮ್ ।
ಕರ್ಪೂರ ಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥

ಎಂಬುದು ತೆಲುಗು ಆಹ್ನಿಕಮಂಜರಿಯ ಪಾಠಾಂತರ.

ಕಠಿನ ಶಬ್ದಾರ್ಥ—ಪೂಗೀಫಲ-ಅಡಕೆ, ನಾಗವಲ್ಲೀ (ದಳ)-ವೀಳ್ಯದೆಲೆ, ಚೂರ್ಣ-ಸುಣ್ಣ, ಖದಿರಾ, ಖದಿರ-(ಮೇಲೆ ಪದ್ಮಮಾಲಾ ಶ್ಲೋಕದಲ್ಲಿ ಅರ್ಥ ಕೊಟ್ಟಿದೆ.) ಏಲಾ-ಏಲಕ್ಕಿ, ಲವಂಗ-ಲವಂಗ, ನಾಗರಂ-ಒಣಗಿದ ಶುಂಠಿ, ಸೇಚಿತಂ-ನೆನೆಸಿದ, ಚುಮುಕಿಸಿದ, (ಎಲ್ಲದಕ್ಕೂ) ಕೂಡಿದ, ಬೆರೆತ ಎಂದರ್ಥ. ಗೃಹ್ಯತಾಂ, ಪ್ರತಿಗೃಹ್ಯತಾಂ-(ನಿನ್ನಿಂದ) ಸ್ವೀಕರಿಸಲ್ಪಡಲಿ, ತೆಗೆದುಕೊಳ್ಳಲ್ಪಡಲಿ (ಕರ್ಮಣಿ ಪ್ರಯೋಗ), ಗೃಹಾಣ-ತೆಗೆದುಕೋ, ಸ್ವೀಕರಿಸು.

(ಅರ್ಥ) ಸ್ಪಷ್ಟವಾಗಿದೆ.

ಈ ಶ್ಲೋಕಗಳಲ್ಲಿ ಯಾವುದನ್ನಾದರೂ ಒಂದನ್ನು ಹೇಳಿ, 'ಓಂ ನಮೋ ನಾರಾಯಣಾಯ। ಭಗವತೇ ಕ್ರಮುಕ ತಾಂಬೂಲಂ ಸಮರ್ಪಯಾಮಿ।' ಎಂದು ಹೇಳಿ ನೀರು ಹಾಕಬೇಕು. ಕೆಲವರು ನೈವೇದ್ಯಕ್ಕೆ ಇಟ್ಟ ವೀಳ್ಯೇದೆಲೆಯಲ್ಲಿ ಒಂದು ಎಲೆಯ ತುದಿಯನ್ನು (ಕೊನೆಯ ಭಾಗವನ್ನು) ಚೂರು ಚಿವುಟುತ್ತಾರೆ (ಅಥವಾ ಮುರಿಯುತ್ತಾರೆ).

ದಕ್ಷಿಣೆಯ ಮಂತ್ರಗಳು

ದಕ್ಷಿಣೆ ಕೊಡುವಾಗ ಟೀಕಾರಾಯರು ಹೇಳಿದ 'ನಾಕಸ್ಯ' ಎಂಬ ಯಜುರ್ಮಂತ್ರವಲ್ಲದೆ (ಅದನ್ನು ಮುಂದೆ ಕೊಡುವೆವು.) 'ಹಿರಣ್ಯಗರ್ಭಗರ್ಭಸ್ಥಂ' ಎಂಬ ಸ್ಮೃತಿಮಂತ್ರ ಹೇಳುವುದೇ ಹೆಚ್ಚು ರೂಢಿಯಲ್ಲಿರುವುದರಿಂದ ಮೊದಲು ಅದನ್ನು ಕೊಡುವೆವು.

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದ(ಂ ಅತಃ)ಮತಃ ಶಾಂತಿಂ ಪ್ರಯಚ್ಛ ಮೇ ॥

ಶಬ್ದಾರ್ಥ— ಹಿರಣ್ಯಗರ್ಭ–ಬ್ರಹ್ಮದೇವರು, ಗರ್ಭಸ್ಥಂ–ಅದರ ಗರ್ಭದಲ್ಲಿರುವ, ಹೇಮ–ಬಂಗಾರ, (ಅಮರ— ಸ್ವರ್ಣಂ ಸುವರ್ಣಂ ಕನಕಂ ಹಿರಣ್ಯಂ ಹೇಮ ಹಾಟಕಮ್ ।) ವಿಭಾವಸೋಃ–ಅಗ್ನಿಯ (ಅಮರ—ಸೂರ್ಯವಹ್ನೀ ವಿಭಾವಸೂ । ನಾನಾರ್ಥವರ್ಗ 'ಚಿತ್ರಭಾನುರ್ವಿಭಾವಸುಃ' ಸ್ವರ್ಗವರ್ಗ), ಮೇ–ನನಗೆ.

(ಅರ್ಥ) ಬ್ರಹ್ಮದೇವರ ಗರ್ಭದಲ್ಲಿದ್ದ ಮತ್ತು ಅಗ್ನಿಗೆ ಬೀಜರೂಪವಾದ ಬಂಗಾರವು ದಾನ ಮಾಡುವುದರಿಂದ ಅನಂತ ಪುಣ್ಯದ ಫಲ ಕೊಡುತ್ತದೆ. ಆದ್ದರಿಂದ ಹೇ, ಬಂಗಾರಾಭಿಮಾನಿಯಾದ ಮುಖ್ಯಪ್ರಾಣನೇ, ಅದರಿಂದ (ಹಿರಣ್ಯದಾನದಿಂದ—ದಕ್ಷಿಣಾ-ದಾನದಿಂದ) ನನಗೆ ಶಾಂತಿಯನ್ನು (ಮೋಕ್ಷವನ್ನು) ಕೊಡು.

ಬೃಹದಾರಣ್ಯಕೋಪನಿಷತ್ತಿನಲ್ಲಿ (೧ ಅ., ಉದ್ಗೀಥ ೩ನೇ ಬ್ರಾಹ್ಮಣ, ೨೬ ಖಂಡ) 'ತಸ್ಯ ಹೈತಸ್ಯ ಸಾಮ್ನೋ ಯಃ ಸುವರ್ಣಂ ವೇದ, ಭವತಿ ಹಾಸ್ಯ ಸುವರ್ಣಂ' ಎಂದು ಹೇಳಿದೆ. ಬೃಹದ್ಭಾಷ್ಯದಲ್ಲಿ ಇದರ ಅರ್ಥಪ್ರತಿಪಾದಕವಾದ 'ಭೂಷಣಸ್ವರ್ಣರೂಪೀ ಚ ಸ ಏವಾಪಿ ಸ್ವರಸ್ಥಿತಃ' ಎಂಬ ಮಹಾಸಂಹಿತಾವಾಕ್ಯವನ್ನು ಉದಹರಿಸಿದ್ದಾರೆ. ಸಾಮ ನಾಮಕನಾದ ಮುಖ್ಯಪ್ರಾಣನೇ ಭೂಷಣ (ಒಡವೆ)ಗಳ ಮತ್ತು ಸ್ವರ್ಣ (ಬಂಗಾರ)ದ ರೂಪನೂ ಆಗಿದ್ದಾನೆ. ಈ ವಿಚಾರವನ್ನು ತಿಳಿದು ಉಪಾಸನೆ ಮಾಡುವವನಿಗೂ ಸುವರ್ಣ-ಲಾಭವಾಗುತ್ತದೆ. ಅಲ್ಲದೆ ಅವನ ಸ್ವರವು ವಾಯುದೇವರ ಸನ್ನಿಧಾನದಿಂದ ಪರಿಶುದ್ಧವಾಗುತ್ತದೆಯೆಂದು ಹೇಳಿದೆ. ಆದ್ದರಿಂದ 'ಶಾಂತಿಂ ಪ್ರಯಚ್ಛ ಮೇ' ಎಂದು ಪ್ರಾರ್ಥನ ಮಾಡಿದ್ದು ಜಡವಾದ ಬಂಗಾರಕ್ಕಲ್ಲ; ತನ್ನಿಷ್ಠ ತದಭಿಮಾನಿಯಾದ ವಾಯುದೇವರನ್ನು ಎಂದು ತಿಳಿಯಬೇಕು.

ಶ್ರೀ ಪ್ರಭಂಜನಾಚಾರ್ಯರು 'ಇತಿ ತಾಂಬೂಲಕಂ ದದ್ಯಾತ್ ನಾಕಸ್ಯೇತಿ ಚ ದಕ್ಷಿಣಾಮ್' ಎಂಬ ಪಾಠಕ್ಕೆ 'ಹಿರಣ್ಯರೂಪ ಇತ್ಯುಕ್ತ್ವಾ ದದ್ಯಾದ್ವೈ ಸ್ವರ್ಣದಕ್ಷಿಣಾಮ್' ಎಂದು ಪಾಠಾಂತರವಿದೆಯೆಂದು (ಪುಟ ೮೪) ತೋರಿಸಿದ್ದಾರೆ. ಈ ಅರ್ಥಕ್ಕೆ —'ಹಿರಣ್ಯರೂಪಃ' ಎಂಬ ಋಙ್ಮಂತ್ರವನ್ನು ಹೇಳಿ (ಇತಿ+ಉಕ್ತ್ವಾ=ಹೇಳಿ; ಇತ್ಯುಕ್ತ್ವಾ, ಯಣ್ ಸಂಧಿ) ಸ್ವರ್ಣ (ಬಂಗಾರದ) ದಕ್ಷಿಣೆಯನ್ನು ಕೊಡಬೇಕು— ಎಂದು ಅರ್ಥವಾಗುತ್ತದೆ. 'ಹಿರಣ್ಯರೂಪಃ' ಎಂಬ ಮಂತ್ರಪಾಠವು ಹೀಗಿದೆ—

ಹಿರಣ್ಯರೂಪಃ ಸ ಹಿರಣ್ಯಸಂದೃ-

ಗಪಾಂ ನಪಾತ್ ಸೇದು ಹಿರಣ್ಯವರ್ಣಃ ।

ಹಿರಣ್ಯಯಾಯಾತ್ ಪರಿ ಯೋನೇರ್ನಿಷದ್ಯಾ

ಹಿರಣ್ಯದಾ ದದತ್ಯನ್ನಮಸ್ಮೈ ||

(ಋ. ೨ ಮಂ., ೩೫ ಸೂ., ೧೦ ಋಕ್; ೨ ಅಷ್ಟಕ, ೭ ಅಧ್ಯಾ., ೨೪ ವರ್ಗ)

ಈ ಮಂತ್ರಕ್ಕೆ ಅರ್ಥವನ್ನು 'ಆಭರಣಸಮರ್ಪಣೆ' ಮಾಡುವ ಸಂದರ್ಭದಲ್ಲಿ ಹಿಂದೆಯೇ (ಪುಟ ೨೨೪ರಲ್ಲಿ) ಕೊಟ್ಟಿದೆ.

ಇನ್ನು ಪದ್ಮಮಾಲಾದಲ್ಲಿ ಹೇಳಿದ 'ನಾಕಸ್ಯ' ಎಂಬ ಋಙ್ಮಂತ್ರಪಾಠ ಹೀಗಿದೆ—

ಓಂ। ನಾಕಸ್ಯ ಪೃಷ್ಠೇ ಅಧಿ ತಿಷ್ಠತಿ ಶ್ರಿತೋ

ಯಃ ಪೃಣಾತಿ ಸ ಹ ದೇವೇಷು ಗಚ್ಛತಿ।

ತಸ್ಮಾ ಆಪೋ ಘೃತಮರ್ಷಂತಿ ಸಿಂಧವಸ್

ತಸ್ಮಾ ಇಯಂ ದಕ್ಷಿಣಾ ಪಿನ್ವತೇ ಸದಾ ||

(ಋ. ೧ ಮಂ., ೧೨೫ ಸೂ., ೫ ಋಕ್; ೨ ಅಷ್ಟ., ೧ ಅಧ್ಯಾ., ೧೦ ವರ್ಗ)

ಹೀಗೆ ದಕ್ಷಿಣಾಸಮರ್ಪಣ ಮಂತ್ರ(ಗಳನ್ನು)ವನ್ನು ಪಠಿಸಿ, "ಓಂ ನಮೋ ನಾರಾಯಣಾಯ। ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ" ಎಂದು ಹೇಳಿ ಹೂವು, ತುಳಸೀ ಏರಿಸಬೇಕು. ಇಲ್ಲಿಗೆ ನೈವೇದ್ಯಪ್ರಕರಣ ಮುಗಿಯಿತು. ಮುಂದೆ ಮಹಾ-ಮಂಗಳಾರತಿ (ಅಥವಾ ಮಂಗಳನೀರಾಜನ) ಮತ್ತು ಮಂತ್ರಪುಷ್ಪಗಳ ವಿವರಣೆ ಬರುತ್ತದೆ.

ಹೀಗೆ ವಿಸ್ತಾರವಾಗಿ ನೈವೇದ್ಯಪ್ರಕರಣ ವಿಸ್ತರಿಸಿದರೂ ಏಕಾದಶೀ ದಿನಗಳಲ್ಲೂ ಗೋಕುಲಾಷ್ಟಮೀ ದಿನಗಳಲ್ಲೂ ಅನ್ನವನ್ನೇ ನೈವೇದ್ಯಕ್ಕೆ ಇಡುವಂತಿಲ್ಲವಾದ್ದರಿಂದ ಏಕಾದಶೀ ದಿನ ಏನು ಮಾಡಬೇಕು? ಯಾವ ಮಂತ್ರ ಹೇಳಬೇಕು? ಏನು ನೈವೇದ್ಯ ಮಾಡಬೇಕು? ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಅದಕ್ಕೆ ನಮ್ಮ ಹಿರಿಯರು ಬರೆದಿಟ್ಟ 'ದೇವಪೂಜಾ ಪದ್ಧತಿ'ಯಲ್ಲಿ 'ಏಕಾದಶ್ಯಾಂ ವಕ್ತವ್ಯ ಮಂತ್ರಾಃ' ಎಂದೇ ಬೇರೆ ಬರೆದಿಟ್ಟಿದ್ದಾರೆ. ಅದೇ ರೀತಿ ಉಡುಪಿ ಆಹ್ನಿಕಮಂಜರಿಯಲ್ಲೂ 'ಏಕಾದಶ್ಯಾಂ ನೈವೇದ್ಯ ಸಮರ್ಪಣಂ' ಎಂದು ಬೇರೆ ಕೊಟ್ಟಿದ್ದಾರೆ.

ಏಕಾದಶ್ಯಾಂ ಗೋಕುಲಾಷ್ಟಮ್ಯಾಂ ಚ
ವಕ್ತವ್ಯ ನೈವೇದ್ಯಮಂತ್ರಾಃ

(ನಮ್ಮ ಹಿರಿಯರು ಬರೆದಿಟ್ಟ ಪುಸ್ತಕದ ಮಂತ್ರಗಳು)

ಶಾರ್ದೂಲವಿಕ್ರೀಡಿತ ವೃತ್ತ

ಪೂರ್ಣಾನಂದ ಮಹೋದಧೇ ಪ್ರಿಯತಮಂ ಭಲ್ಲಾತಕೀ ದಾಡಿಮಂ
ಚೂತೋರ್ವಾರುಕ ನಾರಿಕೇಳ-ಬದರೀ—ಮುಖ್ಯೈಸ್ತ್ವದೀಯೇ ದಿನೇ ೧

ಶಷ್ಕುಲ್ಯೈಸ್ತಿಲಲಡ್ಡುಕಾನ್ ಗುಡಯುತಾನ್ ನಾನಾ ವಿಧಾನ್ ಮೋದಕಾನ್
ಫೇನಾದ್ಯೈಃ ಪೃಥುಲಾಶ್ಚ ಶರ್ಕರಯುತಾನ್ ಖಂಡೇಕ್ಷು-ಮುದ್ಗಾದಿಕಾನ್ ।
ಖರ್ಜೂರ ಕದಳೀ ರಸಾಲ ಪನಸಂ ದ್ರಾಕ್ಷಾ ಕಪಿತ್ಥಾದಿಕಂ
ಮುಖ್ಯಂ ಸ್ವಾದ್ವಮೃತೋಪಮಂ ಫಲಯುತಂ ಸಂಗೃಹ್ಯತಾಮಚ್ಯುತ ೨

ಅನುಷ್ಟುಪ್

ಅಪೂಪಾನ್ ವಿವಿಧಾನ್ ಸ್ವಾದೂನ್ ಸಜೀರಕ-ಮರೀಚಿಕಾನ್ ।
ಕದಲಿ-ಪನಸಾಮ್ರಾಣಾಂ ಪಕ್ವಾನಿ ಚ ಫಲಾನಿ ಚ ೩

ಕಂದಮೂಲ-ವ್ಯಂಜನಾನಿ ಘೃತಮಿಶ್ರ ಫಲಾನಿ ಚ ।
ಗೃಹ್ಯತಾಂ ದೇವದೇವೇಶ ತ್ವದ್ದಿನೇ ಹ್ಯರ್ಪಿತಂ ಮಯಾ ೪

ಶಬ್ದಾರ್ಥ— ಮಹೋದಧೇಃ-ದೊಡ್ಡ ಸಮುದ್ರದಂತಿರುವ, ಭಲ್ಲಾತಕೀ-ಗೋಡಂಬಿ, ದಾಡಿಮಂ-ದಾಳಿಂಬೆ, ಚೂತ-ಮಾವು, ಉರ್ವಾರುಕ-ಸಿಹಿಗೊಂಟಿ ಹಣ್ಣು ಅಥವಾ ಕರಬೂಜ, ನಾರಿಕೇಳ-ತೆಂಗು, ಬದರೀ-ಬೋರೆಹಣ್ಣು, ತ್ವದೀಯೇ ದಿನೇ-ಹರಿದಿನವಾದ ಏಕಾದಶಿಯಲ್ಲಿ (ಅಥವಾ ಗೋಕುಲಾಷ್ಟಮಿಯಲ್ಲಿ, ಶಷ್ಕುಲ್ಯಃ-ಚಕ್ಕುಲಿಗಳು, ತಿಲ ಲಡ್ಡುಕಾನ್ ಎಳ್ಳಿನ ಉಂಡೆಗಳನ್ನು, ಗುಡ ಬೆಲ್ಲ, ಮೋದಕಾನ್-ಕಡುಬುಗಳನ್ನು, ಫೇನ-ನೊರೆ, ಬುರುಗು, ಫೇನಾದ್ಯೈಃ-ನೊರೆನೊರೆಯಾಗಿರುವ, ಪೃಥುಲ-ಗಟ್ಟಿಯಾದ, ದಟ್ಟವಾದ, ಶರ್ಕರ-ಸಕ್ಕರೆ, ಖಂಡೇಕ್ಷು-ಕಬ್ಬಿನ ಜಲ್ಲೆ, ಮುದ್ಗಾನ್-ಹೆಸರುಕಾಳು (ಕೋಸಂಬರಿ), ಖರ್ಜೂರ-ಬೆಂಡುಖರ್ಜೂರ ಹಾಗೂ ಉತ್ತತ್ತಿ, ಕದಳೀ-ಬಾಳೆ, ರಸಾಲ-ಮಾವಿನ ಹಣ್ಣು, ಪನಸ-ಹಲಸಿನ ಹಣ್ಣು, ಕಪಿತ್ಥ-ಬೇಲದ (ಬ್ಯಾಲದ) ಹಣ್ಣು, ಸ್ವಾದ್ವಮೃತೋಪಮಂ— ಸ್ವಾದು-ರುಚಿಯಾದ, ಅಮೃತ-ಅಮೃತಕ್ಕೆ, ಉಪಮಂ-ಸಮಾನವಾದ, ಸಂಗೃಹ್ಯತಾಂ-ಸ್ವೀಕರಿಸಲ್ಪಡಲಿ (ಕರ್ಮಣಿ).

ಅಪೂಪ–ಹಿಟ್ಟಿನಿಂದ ಮಾಡಿದ ಸಿಹಿತಿಂಡಿ, ಹೋಳಿಗೆ, ಒಬ್ಬಟ್ಟು, ಜೀರಕ–ಜೀರಿಗೆ, ಮರೀಚಕ–ಮೆಣಸು, ಪನಸ–ಹಲಸಿನ ಹಣ್ಣು, ಅಮ್ರ–ಮಾವಿನ ಹಣ್ಣು, ಕಂದ-ಗೆಡ್ಡೆ, ಮೂಲ–ಬೇರು (ಗೆಣಸು).

ಅರ್ಥ (೧ನೇ ಶ್ಲೋಕ)— ಪೂರ್ಣಾನಂದದ ದೊಡ್ಡ ಸಮುದ್ರದಂತಿರುವ ಹೇ ಭಗವಂತನೇ! ನಿನ್ನ ದಿನದಲ್ಲಿ ನಿನಗೆ ಅತ್ಯಂತ ಪ್ರಿಯವಾದ ಗೋಡಂಬಿ, ದಾಳಿಂಬೆ, ಮಾವು, ಕರಬೂಜ, ತೆಂಗಿನಕಾಯಿ, ಬೋರೆಹಣ್ಣು ಮೊದಲಾದ ಪದಾರ್ಥಗಳನ್ನೂ, (೨ನೇ ಶ್ಲೋಕ) ಚಕ್ಕುಲಿಗಳು, ಬೆಲ್ಲ ಹಾಕಿ ಮಾಡಿದ ಎಳ್ಳುಂಡೆಗಳು, ಬಗೆಬಗೆಯ ಕಡುಬುಗಳನ್ನೂ, ನೊರೆನೊರೆಯಾಗಿರುವ ಕಬ್ಬಿನ ರಸವನ್ನೂ, ಹೆಸರುಬೇಳೆ ಕೋಸಂಬರಿ, ಬೆಂಡುಖರ್ಜೂರ, ಬಾಳೆಹಣ್ಣು, ಮಾವಿನಹಣ್ಣು, ಹಲಸಿನಹಣ್ಣು, ದ್ರಾಕ್ಷಿ, ಬೇಲದ ಹಣ್ಣು ಮೊದಲಾದ ರುಚಿರುಚಿಯಾದ ಅಮೃತಕ್ಕೆ ಸಮಾನವಾದ ಹಣ್ಣುಗಳನ್ನು ಸ್ವೀಕರಿಸುವನಾಗು.

(೩-೪ ಶ್ಲೋಕಗಳು) ರುಚಿರುಚಿಯಾದ ಹಿಟ್ಟಿನಿಂದ ಮಾಡಿದ ನಾನಾ ಬಗೆಯ ಹೋಳಿಗೆಗಳನ್ನೂ, ಜೀರಿಗೆ-ಮೆಣಸು ಹಾಕಿ ಮಾಡಿದ ಪದಾರ್ಥಗಳನ್ನೂ, ಚೆನ್ನಾಗಿ ಮಾಗಿದ ಬಾಳೆ, ಹಲಸು, ಮಾವು ಮೊದಲಾದ ನಾನಾ ಬಗೆಯ ಹಣ್ಣುಗಳನ್ನೂ, ಗೆಡ್ಡೆ-ಗೆಣಸುಗಳನ್ನೂ, ತುಪ್ಪದಿಂದ ಕೂಡಿದ ಹಣ್ಣುಗಳನ್ನೂ, ಹೇ ದೇವೋತ್ತಮ, ನಿನ್ನ ಹರಿದಿನದಲ್ಲಿ ಅರ್ಪಿಸುತ್ತಿದ್ದೇನೆ. ಇವನ್ನೆಲ್ಲಾ ಸ್ವೀಕರಿಸುವನಾಗು— ಎಂದು ತಾತ್ಪರ್ಯ.

ಆಹ್ನಿಕಮಂಜರಿಯಲ್ಲಿನ ಪಾಠ

ನಾಗರಂ ಶರ್ಕರಾಯುಕ್ತ—ಮೇಲಾಘೃತವಿಮಿಶ್ರಿತಮ್ ।
ನಾಲಿಕೇರಫಲಂ ಚೈವ ಫಲಂ ಸ್ವಾದುರಸಾತ್ಮಕಮ್ ೧

ದ್ರಾಕ್ಷಾ-ಜಂಬೀರ-ಚೂತಾನಿ ಕಪಿತ್ಥಾಮಲಕೇ ತಥಾ ।
ದಾಡಿಮಂ ಪನಸಂ ಪಕ್ವ—ಮುರ್ವಾರುಕರಸಾಯನಮ್ ೨

ಬದರೀ ಜಂಬುನಿಂಬಾನಿ ಮುದ್ಗಾನಿ ಚಣಕಾನಿ ಚ ।
ತಿಲ-ತಂಡುಲಪಿಷ್ಟಂ ಚ ಏಲಾಘೃತವಿಮಿಶ್ರಿತಮ್ ೩

ಪಂಚಖಾದ್ಯಂ ದಧಿ ಕ್ಷೀರಂ ನವನೀತಂ ಶುಭಾವಹಮ್ ।
ಗಂಗೋದಕಂ ಚ ಪಾನೀಯಂ ಶುಭವಾಸನಯಾಯುತಮ್ ೪

ನಿತ್ಯತೃಪ್ತೇಂದಿರಾರಾಧ್ಯ ಗೃಹಾಣ ಕಮಲಾಪತೇ ।
ಇತಿ ಪ್ರಸಾದ್ಯ ದೇವೇಶ—ಮೇಕಾದಶ್ಯಾಂ ಸಮರ್ಪಯೇತ್ ೫

ಕಠಿನ ಶಬ್ದಾರ್ಥ— (ಶ್ಲೋ. ೧) ನಾಗರಂ–ಒಣಶುಂಠಿ, ಶರ್ಕರಾ–ಸಕ್ಕರೆ, ಏಲಾ–ಏಲಕ್ಕಿ, ವಿಮಿಶ್ರಿತಂ–ಬೆರೆಸಿದ, ಸೇರಿಸಿದ ಅಥವಾ ಹಾಕಿ ಕಲಸಿದ, ನಾಲಿಕೇರ–ನಾರಿಕೇಲ–ತೆಂಗಿನಕಾಯಿ, (ಶ್ಲೋ. ೨) ಜಂಬೀರ–ನಿಂಬೇಹಣ್ಣು, ಚೂತ–ಮಾವು, ಕಪಿತ್ಥ–ಬೇಲದ (ಬ್ಯಾಲದ) ಹಣ್ಣು, ಆಮಲಕ–ನೆಲ್ಲೀಕಾಯಿ, ಪನಸಂ–ಹಲಸಿನ ಹಣ್ಣು, ಉರ್ವಾರುಕ–ಕರಬೂಜದ ಹಣ್ಣು, ಸಿಪ್ಪೋಟಿ ಹಣ್ಣು, ರಸಾಯನ–ಹಣ್ಣಿನ ಜೊತೆ ಸಕ್ಕರೆ ಅಥವಾ ಬೆಲ್ಲ ಹಾಕಿ ಮಾಡಿದ ಸೀಕರಣೆ ಅಥವಾ ರಸಾಯನ, (ಶ್ಲೋ. ೩) ಬದರೀ–ಬೋರೆಹಣ್ಣು, ಜಂಬೂ–ನೇರಳೆಹಣ್ಣು, ನಿಂಬ–ಬೇವು, ಮುದ್ಗಾನಿ–ಹೆಸರುಕಾಳು (ನೆನೆಸಿದ ಹೆಸರುಕಾಳು ಅಥವಾ ಹೆಸರುಬೇಳೆ ಕೋಸಂಬರಿ, ಚಣಕಾನಿ–ಕಡ್ಲೆಕಾಳು (ನೆನೆಸಿದ ಕಡಲೇಕಾಳು ಅಥವಾ ಕಡ್ಲೇಬೇಳೆ ಕೋಸಂಬರಿ ಅಥವಾ ಹೆಸರುಕಾಳಿನ ಮತ್ತು ಕಡಲೆಕಾಳಿನ ಗುಗ್ಗರಿ), ತಿಲ–ಎಳ್ಳು, ತಂಡುಲ–ಅಕ್ಕಿ, ತಿಲಪಿಷ್ಟ ಎಂದರೆ ಚಿಗಳಿ ಉಂಡೆ, ತಂಡುಲಪಿಷ್ಟ ಎಂದರೆ ಅಕ್ಕಿಹಿಟ್ಟಿನ ತಂಬಿಟ್ಟು), (ಶ್ಲೋ. ೪) ಪಂಚಖಾದ್ಯ–ಐದು ಪದಾರ್ಥಗಳನ್ನು ಬೆರೆಸಿ ಮಾಡಿದ ನೈವೇದ್ಯ (ಉಡುಪಿಯ ಕೃಷ್ಣನ 'ಪಂಚಖಾದ್ಯ' ಎಂಬ ಹೆಸರು ಪ್ರಸಿದ್ಧವಾಗಿದೆ), ಹಂಪೆಯಲ್ಲಿರುವ ಯಂತ್ರೋದ್ಧಾರಕ ಪ್ರಾಣದೇವರಿಗೆ ದ್ರಾಕ್ಷಿ, ಗೋಡಂಬಿ, ಉತ್ತುತ್ತೆ, ಕಲ್ಲುಸಕ್ಕರೆ, ಕೊಬ್ಬರಿ ಈ ಐದನ್ನೂ ಬೆರೆಸಿ 'ಪಂಚಖಾದ್ಯ' ನೈವೇದ್ಯ ಮಾಡುವರು.) ನವನೀತ–ಬೆಣ್ಣೆ.

ಶ್ಲೋಕಗಳ ಭಾವಾರ್ಥ— (ಶ್ಲೋ. ೧) ಒಣಶುಂಠಿಗೆ ಸಕ್ಕರೆ ಏಲಕ್ಕಿ, ತುಪ್ಪಗಳನ್ನು ಬೆರೆಸಿ, ಶುಂಠಿ ಬೆಲ್ಲವನ್ನೂ, ರುಚಿಯಾದ ಸಿಹಿಯಾಗಿರುವ ತೆಂಗಿನಕಾಯನ್ನೂ, (ಶ್ಲೋ. ೨) ರುಚಿಯಾಗಿಯೂ ಮಧುರವಾಗಿಯೂ ಇರುವ ದ್ರಾಕ್ಷಿ, ನಿಂಬೆಹಣ್ಣು, ಮಾವಿನಹಣ್ಣುಗಳನ್ನೂ, ಹಾಗೆಯೇ ಬೇ(ಬ್ಯಾ)ಲದಹಣ್ಣು, ನೆಲ್ಲೀಕಾಯಿಗಳನ್ನೂ, ದಾಳಿಂಬೆ, ಹಲಸಿನಹಣ್ಣುಗಳನ್ನೂ, ಮಾಗಿದ ಕರಬೂಜ ಹಣ್ಣಿನ ರಸಾಯನವನ್ನೂ, (ಶ್ಲೋ. ೩) ಬೋರೆಹಣ್ಣು, ನೇರಳೆಹಣ್ಣುಗಳನ್ನೂ, ಬೇವಿನ (ಹೂವನ್ನೂ), ಹೆಸರು ಮತ್ತು ಕಡಲೆಗಳ ಕೋಸಂಬರಿಗಳನ್ನೂ ಅಥವಾ ಉಸಲಿಗಳನ್ನೂ ಅಥವಾ ನೆನೆಸಿದ ಕಡಲೆಕಾಳು-ಹೆಸರುಕಾಳುಗಳನ್ನೂ, ಏಲಕ್ಕಿ, ತುಪ್ಪ ಹಾಕಿ ಮಾಡಿದ ಎಳ್ಳಿನ ಚಿಗಳಿಯನ್ನೂ, ಅಕ್ಕಿಹಿಟ್ಟಿನ ತಂಬಿಟ್ಟನ್ನೂ, (ಶ್ಲೋ. ೪) ಪಂಚಖಾದ್ಯವನ್ನೂ, ಹಾಲು, ಮೊಸರು, ಬೆಣ್ಣೆಗಳನ್ನೂ, ಘಮಘಮಿಸುವ ಕೇಸರಿ, ಪಚ್ಚಕರ್ಪೂರ, ಏಲಕ್ಕಿ ಮೊದಲಾದ ಪರಿಮಳ ದ್ರವ್ಯಗಳನ್ನು ಹಾಕಿದ ಕುಡಿಯುವ ಗಂಗೋದಕವನ್ನೂ, (ಶ್ಲೋ. ೫) ಹೇ, ನಿತ್ಯತೃಪ್ತನಾದ ಸಾಕ್ಷಾಲ್ಲಕ್ಷ್ಮೀದೇವಿಯಿಂದಲೇ ಆರಾಧಿಸಲ್ಪಡುವ ಶ್ರೀಹರೇ, ಇವನ್ನೆಲ್ಲಾ ಸ್ವೀಕರಿಸುವವನಾಗು ಎಂದು ಬಿನ್ನವಿಸಿಕೊಂಡು ಏಕಾದಶೀ ದಿನಗಳಲ್ಲೂ ಗೋಕುಲಾಷ್ಟಮೀ ದಿವಸದಲ್ಲೂ ಸಮರ್ಪಿಸಬೇಕು.

ಉಪಸಂಹಾರ

ದೇವತಾರ್ಚನಮಧ್ಯೇ ತು ನೈವೇದ್ಯಪ್ರಕರಣಂ ಯತ್ ।
ಪದ್ಯಮಾಲಾಂ ಸಮಾಶ್ರಿತ್ಯ ವಿಸ್ತರೇಣ ನಿರೂಪಿತಮ್ ॥ ೧ ॥

(ಅರ್ಥ) ದೇವತಾರ್ಚನವಿಧಿಯ ಮಧ್ಯದಲ್ಲಿ ನೈವೇದ್ಯಪ್ರಕರಣ ಏನಿದೆಯೋ ಅದನ್ನು ಮುಖ್ಯವಾಗಿ ಟೀಕಾಚಾರ್ಯರ 'ಪದ್ಯಮಾಲಾ'ವನ್ನು ಅನುಸರಿಸಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿತು.

ವಿವಿಧಾಃ ಸಂಪ್ರದಾಯಾಶ್ಚ ತತ್ತದ್ವಿಧಿನಿಷೇಧಯೋಃ ।
ಯಥಾಮತಿ ವಿವಿಚ್ಯೈವ ಸಪ್ರಮಾಣಂ ಪ್ರದರ್ಶಿತಾಃ ॥ ೨ ॥

(ಅರ್ಥ) ನೈವೇದ್ಯಕ್ಕೆ ಇಡುವ ಪದಾರ್ಥಗಳು, ಪ್ರೋಕ್ಷಣೆ, ಆಪೋಶನ, ಪ್ರಾಣಾಹುತಿ ಮೊದಲಾದ ವಿಚಾರಗಳಲ್ಲೂ ದೇಶಭೇದದಿಂದ ಅಥವಾ ಸಂಪ್ರದಾಯಭೇದದಿಂದ ರೂಢಿಯಾಗಿ ಬಂದಿರುವ ವಿಧಿನಿಷೇಧಗಳೆರಡನ್ನೂ ಪ್ರಮಾಣಪೂರ್ವಕವಾಗಿ ಹೇಳಿರುವುದರಲ್ಲಿ ಅದರಲ್ಲಿ ಯಾವುದು ಉಚಿತ, ಹೇಗೆ ಮಾಡಬೇಕು? ಎಂಬ ಬಗ್ಗೆ ವಿಮರ್ಶೆಯನ್ನೂ ಮಾಡಿ ತಿಳಿಸಲಾಗಿದೆ.

ಅನ್ನಾದಿಮಾನಿನೋ ದೇವಾ—ಸ್ತನ್ನಿಷ್ಠಾ ಹರಿಮೂರ್ತಯಃ ।
ಮಂತ್ರೈರುಕ್ತಾನುಸಂಧಾನ—ಕ್ರಮಾಶ್ಚ ವಿವಿಧಾಃ ಸ್ಫುಟಮ್ ॥ ೩ ॥

(ಅರ್ಥ) ಅನ್ನಾದಿ ವಿವಿಧ ಪದಾರ್ಥಗಳ ಅಭಿಮಾನಿದೇವತೆಗಳನ್ನೂ ತದಂತರ್ಗತ ಭಗವದ್ರೂಪಗಳನ್ನೂ ಸ್ಪಷ್ಟವಾಗಿ ತಿಳಿಸಿದ್ದೇನಲ್ಲದೆ ಮಂತ್ರಗಳಲ್ಲಿ ಹೇಳಿದ ಅನುಸಂಧಾನ ಕ್ರಮಗಳನ್ನೂ ಸ್ಫುಟವಾಗಿ ತಿಳಿಸಿದ್ದೇನೆ

ಅತ್ರೋಕ್ತ ಸರ್ವಮಂತ್ರಾಣಾಂ ಶಬ್ದಾರ್ಥಾ ಹ್ಯರ್ಥ ಏವ ಚ ।
ವರ್ಣಿತಾ ವಿಷ್ಣುತೀರ್ಥೇನ ಶ್ರದ್ಧಯಾ ಶ್ರೀಶತುಷ್ಟಯೇ ॥ ೪ ॥

(ಅರ್ಥ) ಇಲ್ಲಿ ಬರುವ ಪ್ರತಿಯೊಂದು ಶ್ಲೋಕದ ಹಾಗೂ ಋಙ್ಮಂತ್ರದ ಕಠಿನ ಶಬ್ದಾರ್ಥವನ್ನೂ ಶ್ಲೋಕಾರ್ಥ ಭಾವಾರ್ಥಗಳನ್ನೂ ಶ್ರದ್ಧಾಪೂರ್ವಕವಾಗಿ ವಿಷ್ಣುತೀರ್ಥನೆಂಬ ನಾನು ಕೇವಲ ಶ್ರೀಹರಿಪ್ರೀತ್ಯರ್ಥವಾಗಿಯೇ ವಿವರಿಸಿದ್ದೇನೆ.

ಶ್ರೀಕೃಷ್ಣಾರ್ಪಣಮಸ್ತು

ಇಲ್ಲಿಗೆ ನೈವೇದ್ಯಪ್ರಕರಣವು ಮುಗಿಯಿತು.

ಮಂಗಳ ನೀರಾಜನ

i) ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ।

ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ॥

ಋಗ್ವೇದ ಸಂಹಿತಾ 8 ಮಂ. 69 ಸೂ. 8ನೇ ಮಂತ್ರ,
೬ ಅಷ್ಟಕ, ೫ ಅಧ್ಯಾಯ, ೬ ವರ್ಗ)

ಈ ಮಂತ್ರಕ್ಕೆ ಶ್ರೀಮದಾಚಾರ್ಯರೇ 'ಕರ್ಮನಿರ್ಣಯ'ದಲ್ಲಿ (ಐತರೇಯಾರಣ್ಯಕ ಅರಣ್ಯಕ) ವಿಸ್ತಾರವಾಗಿ ವ್ಯಾಖ್ಯಾನ ಮಾಡಿದ್ದಾರೆ. ಅದಕ್ಕೆ ಟೀಕೆಯೂ ಇದೆ, ಶ್ರೀ ರಾಘವೇಂದ್ರಸ್ವಾಮಿಗಳವರ ಟಿಪ್ಪಣಿಯೂ ಇದೆ. ಅವನ್ನೆಲ್ಲಾ ಹೊಂದಿಸಿ ಈ ಮಂತ್ರದ ಅರ್ಥ ವಿವರಿಸಲಾಗಿದೆ.

(೧) ಈ ಮಂತ್ರವು 'ಅರ್ಚತ ಪ್ರಾರ್ಚತ' ಎಂದು ಪ್ರಾರಂಭವಾಗಿದೆ. ಪ್ರಾರ್ಚತ ಎಂಬುದು ಪ್ರ ಉಪಸರ್ಗಸಹಿತವಾದ 'ಅರ್ಚತ' ಶಬ್ದವೇ ಆಗಿದೆ 'ಪ್ರ' ಎಂಬ ಉಪಸರ್ಗ 'ಪ್ರಕರ್ಷೇಣ' 'ಪ್ರಕೃಷ್ಟಂ'-ಹೆಚ್ಚಿನ, ಹಿರಿದಾದ ಎಂಬ ಅರ್ಥದಲ್ಲಿ ಬಂದಿದೆ. ಅಲ್ಲದೆ ವೇದದಲ್ಲಿ ಒಂದು ಅಕ್ಷರವೂ ವ್ಯರ್ಥವಾಗಿ ಸೇರಿರುವದಿಲ್ಲವಾದ್ದರಿಂದ ಒಂದು ಉಪಸರ್ಗವಿಲ್ಲದೆಯೂ ಪುನಃ ಅವನ್ನೇ ಉಪಸರ್ಗಸಹಿತವಾಗಿಯೂ ಇಲ್ಲಿ ಪ್ರಯೋಗ ಮಾಡಿರುವುದರಿಂದ ಸೂಚಿತವಾದ ವಿಶೇಷಾರ್ಥವನ್ನು ಶ್ರೀಮದಾಚಾರ್ಯರು ತೋರಿಸುತ್ತಾರೆ (ಟೀಕೆಯಲ್ಲಿ ಹೇಳಿದ ವಿಷಯ) (ಮೂಲ—[ಎಂದರೆ ಆಚಾರ್ಯರ ವ್ಯಾಖ್ಯಾನದ ಮೂಲ ಎಂದರ್ಥ]) ಅರ್ಚನಂ ಯಜ್ಞಾದಿ। ಪ್ರಾರ್ಚನಂ ಜ್ಞಾನಧ್ಯಾನಾದಿ। ಅರ್ಚ ಪೂಜಾಯಾಂ ಎಂದು ಧಾತುಪಾಠವಿದೆ (ಭ್ವಾದಿ ಪರಸ್ಮೈ) ಅರ್ಚ್-ಅರ್ಚಿಸು, ಪೂಜಿಸು, ಆರಾಧಿಸು ಎಂದರ್ಥ. ಅರ್ಚತ ಎಂಬುದು ಲೋಟ್ (ಆಜ್ಞಾರ್ಥ) ಬಹುವಚನರೂಪ; ಅದಕ್ಕೆ 'ನೀವೆಲ್ಲರೂ ಅರ್ಚಿಸಿರಿ' ಎಂದು ಸಾಮಾನ್ಯಾರ್ಥ ಉಪಸರ್ಗರಹಿತವಾದ ಈ ಅರ್ಚತ ಎಂಬುದಕ್ಕೆ ಯಜ್ಞಾದಿ ಕರ್ಮಗಳಿಂದ ಅರ್ಚಿಸಿರಿ ಎಂದರ್ಥವಾಗುತ್ತದೆ ಪ್ರ ಉಪಸರ್ಗ 'ಹೆಚ್ಚಿಗೆಯನ್ನು' (ಪ್ರಕೃಷ್ಟತ್ವವನ್ನು) ತೋರಿಸುತ್ತದೆ. ಅದನ್ನೇ 'ಜ್ಞಾನಧ್ಯಾನಾದಿ' ಎಂದು ತೋರಿಸುತ್ತಾರೆ ಸುಮ್ಮನೆ ಕರ್ಮ ಮಾಡಿದರೇ ಸಾಲದು, ಅದನ್ನು ಜ್ಞಾನಪೂರ್ವಕವಾಗಿಯೇ ಮಾಡಬೇಕೆಂಬುದನ್ನು ಪ್ರ ಉಪಸರ್ಗ ತೋರಿಸುತ್ತದೆ. ಆದ್ದರಿಂದ ಪ್ರಾರ್ಚತ ಎಂದರೆ ಜ್ಞಾನಪೂರ್ವಕವಾಗಿ ಧ್ಯಾನ ಮಾಡುತ್ತಾ ಅರ್ಚಿಸಿರಿ ಎಂದರ್ಥ. ಕೇವಲ ಕರ್ಮ ಮಾಡುವುದಕ್ಕಿಂತ ಜ್ಞಾನಪೂರ್ವಕವಾಗಿ ಮಾಡುವುದು ಶ್ರೇಷ್ಠ. (ಟೀಕಾ) ತತ್ರ ಕುತೋ ಯಜ್ಞಾಂತತೋ ಜ್ಞಾನಾದೇಃ ಪ್ರಕರ್ಷತ್ವಮಿತ್ಯತ ಆಹ

– ಶ್ರೇಯಾನಿತಿ। (ಅರ್ಥ) ಆ ಎರಡರಲ್ಲಿ ಯಜ್ಞಾದಿ ಕರ್ಮಗಳಿಗಿಂತಲೂ ಜ್ಞಾನಾದಿಗಳು ಹೇಗೆ ಶ್ರೇಷ್ಠವೆಂಬುದನ್ನು ತೋರಿಸುತ್ತಾರೆ. (ಮೂಲ) 'ಶ್ರೇಯಾನ್ ದ್ರವ್ಯಮಯಾದ್ ಯಜ್ಞಾತ್ ಜ್ಞಾನಯಜ್ಞಃ ಪರಂತಪ' ಇತಿ ಭಗವದ್ವಚನಾತ್ (ಗೀತಾ ೪ ಅಧ್ಯಾಯ, ೩೩ ಶ್ಲೋ.). ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಮಯವಾದ ಯಜ್ಞ ಶ್ರೇಷ್ಠವೆಂದು ಹೇಳಿದ್ದಾನೆ

(೨) ಪ್ರಿಯಮೇಧಾಸಃ ಎಂಬುದು ಸಂಬೋಧನಾ ಬಹುವಚನರೂಪ. (ಟೀಕಾ) 'ಪ್ರಿಯಮೇಧಾಸ' ಇತ್ಯೇತದ್ ದ್ವ್ಯರ್ಥಮ್ — ಈ ಶಬ್ದಕ್ಕೆ ಎರಡು ಅರ್ಥಗಳಿವೆ. — ಅದನ್ನೇ ಟೀಕಾದಲ್ಲಿ ತೋರಿಸುತ್ತಾರೆ. (ಅ) ಪ್ರಿಯೋ ಮೇಧೋ ಯಜ್ಞೋ ಯೇಷಾಮಿತಿ। 'ಆಜ್ಜಸೇರಸುಕ್' (ಪಾ. ೭/೧/೫೦)। ಮೇಧ ಎಂಬುದು ಅಕಾರಾಂತ ಪುಲ್ಲಿಂಗ ಶಬ್ದ, ಅದಕ್ಕೆ 'ಮೇಧೋ ಯಜ್ಞಃ ಸಮುದ್ದಿಷ್ಟಃ' ಎಂಬ ಪ್ರಮಾಣದಂತೆ ಯಜ್ಞ ಎಂದರ್ಥ ಆದರಿಂದ ಯಜ್ಞವು ಯಾರಿಗೆ ಪ್ರಿಯವಾಗಿದೆಯೋ ಅವರು ಎಂದು ಬಹುವ್ರೀಹಿ ಸಮಾಸ. ಯಜ್ಞವೇ ಪ್ರಿಯವಾಗಿರುವವರೇ ಅಥವಾ ಯಜ್ಞಾದ್ಯನುಷ್ಠಾನ (ಕರ್ಮ) ನಿರತರಾದ ಜನಗಳೇ ಎಂಬುದು ಕರ್ಮಪರವಾದ ಮೊದಲನೇ ಅರ್ಥ. ಪ್ರಿಯ + ಮೇಧ ಸೇರಿದರೆ ಪ್ರಿಯಮೇಧ ಎಂದಾಗಬೇಕು, ಪ್ರಿಯಮೇಧಾಸಃ ಎಂದು ಹೇಗಾಯಿತು? ಪಾಣಿನಿಯು ಹೀಗೆ ಹೇಳಿದ್ದಾರೆ— ಅಕಾರಾಂತ ಪುಲ್ಲಿಂಗ ಶಬ್ದಗಳಿಗೆ ವೈದಿಕಪ್ರಯೋಗಗಳಲ್ಲಿ ಪ್ರಥಮಾ ವಿಭಕ್ತಿ ಬಹುವಚನ ಪ್ರತ್ಯಯ (ಜಸ್)ದ ಮುಂದೆ ಅಸುಕ್ (–ಅಸ್) ಎಂಬ ಆಗಮ ಬರುವುದೆಂದು ಹೇಳಿದ್ದಾರೆ. ಅದರಂತೆ ಮೇಧ ಶಬ್ದದ ಮೇಲೆ ಅಸುಕ್ (–ಅಸ) ಆಗಮ ಬಂದು ಪ್ರಿಯಮೇಧಾಸಃ ಎಂದಾಗಿದೆ.
(ಆ) (ಟೀಕಾ) ಪ್ರಿಯಾ ಮೇಧಾ ಜ್ಞಾನಂ ಯೇಷಾಮಿತಿ ವಾ। 'ನಿತ್ಯಮಸಿಚ್ ಪ್ರಜಾಮೇಧಯೋಃ' (ಪಾ. ೫/೪/೧೨೨). ಮೇಧಾ ಎಂಬುದು ಆಕಾರಾಂತ ಸ್ತ್ರೀಲಿಂಗ ಶಬ್ದ, ಇದಕ್ಕೆ 'ಜ್ಞಾನ' ಎಂಬ ಅರ್ಥವಿದೆ. (ಉದಾ. ಮೇಧಾವಿ–ಬುದ್ಧಿವಂತ.) ಆದರಿಂದ ಜ್ಞಾನವು ಯಾರಿಗೆ ಪ್ರಿಯವಾಗಿದೆಯೋ ಅವರು ಎಂದು ಪುನಃ ಬಹುವ್ರೀಹಿ ಸಮಾಸವೇ. ಆದರಿಂದ ಜ್ಞಾನಪ್ರಾಚುರ್ಯವುಳ್ಳ ಹೇ ಜನರೇ ಎಂದು ಅರ್ಥ. ಸಮಾಸದಲ್ಲಿ 'ಪ್ರಜಾ' ಶಬ್ದದ ಮೇಲೂ ಅಸಿಚ್ (ಅಸ್) ಎಂಬ ಪ್ರತ್ಯಯ ನಿತ್ಯವಾಗಿ ಬರುವುದೆಂದು ಪಾಣಿನಿ ಹೇಳುವುದರಿಂದ ಪ್ರಿಯಮೇಧಾಸಃ ಎಂಬ ರೂಪ ಸಿದ್ಧವಾಗಿದೆ.

(೩) (ಟೀಕಾ) ದ್ವಯಮಪಿ ತಂತ್ರೇಣೋಕ್ತಮಿತಿ ಭಾವೇನ ಯಥಾಯೋಗ್ಯಂ ಯೋಜಯತಿ—ಪ್ರಿಯೇತಿ। (ರಾಘ. ಟಿಪ್ಪಣೀ) ಸಕೃದುಚ್ಚರಿತಂ ಅನೇಕಾರ್ಥದಂ ತಂತ್ರಮ್। (ಅರ್ಥ) ಒಂದಾವರ್ತಿ ಹೇಳಿದ್ದಕ್ಕೇ ಅನೇಕಾರ್ಥ ಕೊಡುವಂತಿದ್ದರೆ ಅದಕ್ಕೆ ತಂತ್ರವೆಂದು ಹೆಸರು. ಆದರಂತೆ ಮಂತ್ರದಲ್ಲಿ 'ಪ್ರಿಯಮೇಧಾಸಃ' ಎಂದು ಒಂದೇ ಪದವಿದ್ದರೂ ಅದಕ್ಕೆ ಎರಡರ್ಥವಿರುವುದರಿಂದ ಅದನ್ನೇ ಆವೃತ್ತಿ ಮಾಡಿಕೊಂಡು ಅರ್ಚತ,

ಪ್ರಾರ್ಚತಗಳೊಡನೆ ಹೇಗೆ ಸೇರಿಸಿ ಅರ್ಥ ಹೇಳಬೇಕೆಂಬುದನ್ನು ಶ್ರೀಮದಾಚಾರ್ಯರು ತೋರಿಸಿಕೊಡುತ್ತಾರೆ—(ಮೂಲ) ಪ್ರಿಯಯಜ್ಞಾ ಅರ್ಚತ। ಪ್ರಿಯಜ್ಞಾನಾ ಪ್ರಾರ್ಚತ। (ಅರ್ಥ) ೧ನೇ ಅರ್ಥ— ಪ್ರಿಯಮೇಧಾಸಃ— ಪ್ರಿಯಯಜ್ಞಾಃ-ಎಲ್ಲ ಯಜ್ಞಾದಿ ಕರ್ಮಗಳಲ್ಲೇ ಹೆಚ್ಚು ಆಸಕ್ತಿಯುಳ್ಳ ಕರ್ಮನಿಷ್ಠರಾದ ಹೇ ಜನಗಳೇ; ಅರ್ಚತ-ನೀವು ಇದೇ ರೀತಿಯ ಕರ್ಮಗಳಿಂದಲೇ ಭಗವಂತನನ್ನು ಆರಾಧಿಸುತ್ತಿರಿ, ಕರ್ಮವನ್ನು ಬಿಡಬೇಡಿ ಎಂದರ್ಥ.

೨ನೇ ಅರ್ಥ— ಪ್ರಿಯಮೇಧಾಸಃ— ಪ್ರಿಯಜ್ಞಾನಾಃ-ಕರ್ಮಕ್ಕಿಂತಲೂ ಹೆಚ್ಚಾಗಿ ಜ್ಞಾನದಲ್ಲೇ ಅಭಿರುಚಿಯುಳ್ಳ, ಜ್ಞಾನಧ್ಯಾನಾದ್ಯನುಷ್ಠಾನಪರರಾದ—ಅದ್ದರಿಂದ ಕರ್ಮನಿಷ್ಠರಿಗಿಂತ ಶ್ರೇಷ್ಠರಾದ ಹೇ ಉತ್ತಮಾಧಿಕಾರಿಗಳೇ, ಪ್ರಾರ್ಚತ-ನೀವು ಕೇವಲ ಕರ್ಮದಲ್ಲಿ ಮಾತ್ರ ನಿರತರಾಗದೆ, ಕರ್ಮನಿಷ್ಠ ಅನುಸಂಧಾನವನ್ನು ತಿಳಿದುಕೊಂಡು ಭಗವದರ್ಪಣಬುದ್ಧಿಯಿಂದ ತಿಳಿದುಕೊಂಡು ಸಕಲ ಕರ್ಮಗಳನ್ನೂ 'ಜ್ಞಾನಪೂರ್ವಕ-ವಾಗಿಯೇ' ಅನುಷ್ಠಾನ ಮಾಡಿರಿ—ಜ್ಞಾನಧ್ಯಾನಾದ್ಯನುಷ್ಠಾನಗಳಿಂದಲೇ ಭಗವಂತನನ್ನು ಆರಾಧಿಸಿರಿ ಎಂದರ್ಥ.

(೪) ಮೂಲಮಂತ್ರದಲ್ಲಿ ಮುಂದೆ ಪುನಃ 'ಅರ್ಚತ' ಎಂದು ಹೇಳಿ 'ಅರ್ಚಂತು ಪುತ್ರಕಾಃ' ಎಂದು ಹೇಳಿದೆ. ಇಲ್ಲಿ, ಅರ್ಚತ ಎಂಬುದನ್ನೇ ಎರಡು ಸರಿ ಪ್ರಯೋಗಿಸಿರುವುದರಿಂದ ಆ ಶಬ್ದದ ಪುನರಾವೃತ್ತಿ (ಅಥವಾ ದ್ವಿರುಕ್ತಿ) ಇದ್ದಂತೆ ಕಾಣಿಸುತ್ತದೆ. ದ್ವಿರುಕ್ತಿ ಎಂದೇ ಒಪ್ಪೋಣ ಎಂದರೆ ಮಂತ್ರದ ಕೊನೆಯಲ್ಲಿ ಮತ್ತೊಂದು ಮೂರನೆಯ 'ಅರ್ಚತ' ಬಂದಿದೆ. ಅದ್ದರಿಂದ ಎರಡನೇ ಸರಿ 'ಅರ್ಚತ' ಎಂದು ಹೇಳಿದ್ದಕ್ಕೆ ಆಚಾರ್ಯರು ವಿಶೇಷಾರ್ಥವನ್ನು ಹೇಳುತ್ತಾರೆ ಅಲ್ಲಿಯೇ 'ಪುತ್ರಕಾಃ' ಎಂಬ ಶಬ್ದವಿದೆ. ಪುತ್ರ ಶಬ್ದದ ಮೇಲೆ ಅಲ್ಪಾರ್ಥದಲ್ಲಿ 'ಕ' ಪ್ರತ್ಯಯ ಬಂದು 'ಪುತ್ರಕ' ಎಂದಾಗಿದೆ; ಇದಕ್ಕೆ 'ಅಲ್ಪ ಯೋಗ್ಯತೆಯುಳ್ಳ' ಅಥವಾ 'ಅಲ್ಪ ಜ್ಞಾನವುಳ್ಳ' ಮಕ್ಕಳೇ, ಎಂದು ಅರ್ಥವಾಗುತ್ತದೆ. ಇದೂ ಸಹ ಸಂಬೋಧನಾ (ಬಹುವಚನ) ರೂಪವೇ ಆಗಿದೆ 'ಅರ್ಚಂತು ಪುತ್ರಕಾಃ' ಎಂಬುದಕ್ಕೆ ಹೀಗೆ ಅರ್ಥ ಹೇಳಬಾರದೆಂದು ಟೀಕಾದಲ್ಲಿ ತೋರಿಸಿದ್ದಾರೆ. (ಟೀಕಾ) ನನು ಪ್ರಿಯಯಜ್ಞಾಃ ಕರ್ಮಿಣೋಽಲ್ಪಕಾಃ, ತೇ ಅನಾದರಣೀಯಾ ಏವ, ನ ವಿಧೇಯಾಃ ಇತ್ಯಾಶಂಕಾನಿರಾಸಾರ್ಥತ್ವಾತ್, 'ಅರ್ಚಂತು ಪುತ್ರಕಾಃ' ಇತಿ, ನ ಪುನರುಕ್ತಮಿತಿ ಭಾವೇನಾಹ—ಪುತ್ರಕಾ ಇತಿ। (ಅರ್ಥ) ಪ್ರಿಯಯಜ್ಞರಾದ ಕರ್ಮನಿಷ್ಠ ಜನಗಳು 'ಅಲ್ಪರು', ಅದ್ದರಿಂದ ಅವರನ್ನು ಅನಾದರ ಮಾಡಬೇಕೇ ವಿನಾ ಅವರನ್ನು ಕುರಿತು 'ಅರ್ಚತ' ಎಂದು ಹೇಳುವುದು ಸರಿಯಲ್ಲ ಎಂಬ ಶಂಕೆಯನ್ನು ನಿರಾಸ ಮಾಡುವುದಕ್ಕಾಗಿಯೂ, ಎರಡು ಸರಿ 'ಅರ್ಚತ' ಎಂದು ಹೇಳಿದ್ದು ಪುನರುಕ್ತಿಯಲ್ಲವೆಂದೂ ತೋರಿಸುವುದಕ್ಕಾಗಿ ಆಚಾರ್ಯರು—'ಅರ್ಚಂತು ಪುತ್ರಕಾಃ' ಎಂಬುದರ

ಅನ್ವಯವನ್ನು ತೋರಿಸಿಕೊಡುತ್ತಾರೆ. (ಮೂಲ) ಪುತ್ರಕಾ ಅಲ್ಪಕಾ ಅಪ್ಯರ್ಚತ। (ಅರ್ಥ) ಪುತ್ರಕಾಃ ಎಂಬುದಕ್ಕೆ ಜ್ಞಾನದಲ್ಲೂ ಶಕ್ತಿಯಲ್ಲೂ ಯೋಗ್ಯತೆಯಲ್ಲೂ (ಎಲ್ಲಾ ವಿಚಾರಗಳಲ್ಲೂ) ಅಲ್ಪರಾಗಿದ್ದರೂ ಸಹ—ಚಿಂತೆಯಿಲ್ಲ, ಅರ್ಚತ—ಅರ್ಚಿಸಿರಿ, ನಿಮಗೆ ತಿಳಿದಷ್ಟೇ ಅರ್ಚನೆ ಮಾಡಿರಿ. ಪುತ್ರಕಾಃ ಜೊತೆ 'ಅಪಿ' ಶಬ್ದವನ್ನು ಸೇರಿಸಿಕೊಂಡು ಅನ್ವಯ ಮಾಡಬೇಕೆಂದು ಸೂಚಿಸಿದ್ದಾರೆ.

(೫) ಆಶಂಕೆ. 'ಪುತ್ರಕಾಃ ಅರ್ಚತ' ಎಂದು ಹೇಳುವುದು ಸರಿಯಲ್ಲ. ಅರ್ಚತ ಎಂಬುದು ಮಧ್ಯಮ ಪುರುಷ ಬಹುವಚನವಾದ್ದರಿಂದ ಅದರೊಡನೆ 'ಪುತ್ರಕಾಃ' ಎಂಬ ಪ್ರಥಮ ಪುರುಷ ಕರ್ತೃಪದ ಹೊಂದುವುದಿಲ್ಲವಲ್ಲಾ ಎಂದು ಆಶಂಕೆ ಮಾಡಿಕೊಂಡು ಅದನ್ನು ಪರಿಹರಿಸುತ್ತಾರೆ—ಮೂಲಮಂತ್ರದಲ್ಲಿ 'ಅರ್ಚಂತು ಪುತ್ರಕಾಃ' ಎಂದೇ ಇದೆಯಾದ್ದರಿಂದ ದೋಷವಿಲ್ಲ ಆಚಾರ್ಯರು ಎರಡನೇ ಅರ್ಚತ ಎಂಬುದರ ಯೋಜನೆ ತೋರಿಸುವುದಕ್ಕಾಗಿ ಹಾಗೆ ಹೇಳಿದರು.

(೬) ಅಲ್ಪಬುದ್ಧಿಯುಳ್ಳವರಾದರೂ ಅವರನ್ನೂ ಅನಾದರಣೆ ಮಾಡಬಾರದು ಎಂದು ಹೇಳಿದ್ದನ್ನೇ ಆಚಾರ್ಯರು ಸಮರ್ಥಿಸುತ್ತಾರೆ— 'ನ ಬುದ್ಧಿಭೇದಂ ಜನಯೇ—ದಜ್ಞಾನಾಂ ಕರ್ಮಸಂಗಿನಾಮ್ । ಜೋಷಯೇತ್ ಸರ್ವ ಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರೇತ್ ।' (ಗೀತಾ ೩/೨೬) ಇತಿ ಚ। ಈ ಶ್ಲೋಕಕ್ಕೆ ಗೀತಾವಿವೃತ್ತಿಯ ಪ್ರಕಾರ ಹೀಗೆ ಅರ್ಥವಾಗುತ್ತದೆ. (ಪೀಠಿಕೆ) ಅಜ್ಞರಿಗೆ ಕರ್ಮದಲ್ಲಿ ಆಸಕ್ತಿಯನ್ನು ಹುಟ್ಟಿಸುವುದಕ್ಕಾಗಿಯೂ ಜ್ಞಾನಿಯು ಕರ್ಮವನ್ನು ಮಾಡಬೇಕೆಂದು ಹೇಳುತ್ತಾರೆ—ಅಜ್ಞಾನಾಂ—ಭಗವಂತನ ಸ್ವರೂಪವನ್ನು ತಿಳಿಯದ, ಕರ್ಮಸಂಗಿನಾಂ—ಕರ್ಮನಿಷ್ಠರಾದ ಜನಗಳಿಗೆ, ಬುದ್ಧಿಭೇದಂ—ಬುದ್ಧಿಯ ವಿಪರ್ಯಾಸವನ್ನು, ನ ಜನಯೇತ್—ಮಾಡಬಾರದು ಏನೇನೋ ಹೇಳಿ ಅವರಿಗೆ ಬುದ್ಧಿ ಅಲ್ಲೋಲಕಲ್ಲೋಲವಾಗಿ ಕರ್ಮ ಬಿಟ್ಟುಬಿಡುವಂತೆ ಮಾಡಬಾರದು. ವಿದ್ವಾನ್—ಪಂಡಿತನಾದವನು, ಯುಕ್ತಃ—ಮನೋಯೋಗವುಳ್ಳವನಾಗಿ (ಮನಃಪೂರ್ವಕ ಪೂಜಾದಿಗಳನ್ನು ಮಾಡುತ್ತಾ), ಸಮಾಚರನ್-ಕರ್ಮವನ್ನು ಮಾಡುತ್ತಲೇ, ಸರ್ವ ಕರ್ಮಾಣಿ-ಸಮಸ್ತ ಕರ್ಮಗಳನ್ನೂ, ಜೋಷಯೇತ್—ಸೇವಿಸುವಂತೆ ಮಾಡಬೇಕು. ತಾತ್ಪರ್ಯವೇನೆಂದರೆ—ಕರ್ಮದ ರಹಸ್ಯವನ್ನು ತಿಳಿಯದೆ ಏನೋ ಒಂದು ರೀತಿ ಕರ್ಮದಲ್ಲಿ ನಿರತರಾದ ಅಜ್ಞಾನಿಗಳಿಗೆ—ಇದು ಸರಿಯಲ್ಲ, ಅದು ಹಾಗಲ್ಲ ಇದು ಹೀಗೆ ಎಂದು ಹೇಳಿ ಅವರ ಬುದ್ಧಿಭ್ರಮಣೆಯಾಗಿ ಕರ್ಮವನ್ನೇ ಬಿಡುವಂತೆ ಎಂದಿಗೂ ಮಾಡಬಾರದು. ಅದಕ್ಕೆ ಪ್ರತಿಯಾಗಿ ತಾನೂ ಕರ್ಮದಲ್ಲಿ ಆಸಕ್ತನಾದಂತೆ ತೋರಿಸಿ ಅಜ್ಞಾನಿಯು ಎಲ್ಲ ಕರ್ಮಗಳನ್ನೂ ಮಾಡುವಂತೆ ಪ್ರೇರೇಪಿಸಬೇಕು. ಹೀಗೆ ಭಗವದ್ಗೀತೆ ಹೇಳುವುದರಿಂದ 'ಅಲ್ಪ'ರಾದರೂ ಅವರನ್ನು ದೊಡ್ಡ ಜ್ಞಾನಿಗಳೂ ಅನಾದರಣೆ ಮಾಡಬಾರದೆಂದು ಮುಖ್ಯಾಭಿಪ್ರಾಯ.

(೬) ಆಶಂಕೆ (ಟೀಕೆ) ನನು 'ಪ್ರಿಯಮೇಧಾಸಃ ಪುತ್ರಕಾ ಅರ್ಚತ, ಅರ್ಚತ' ಇತಿ ಆದರಾರ್ಥಾಭ್ಯಾಸತಯಾ ಕುತೋ ನ ವ್ಯಾಖ್ಯಾಯತೇ ? ಏವಂ ವ್ಯಾಖ್ಯಾನೇ ಅಪಿ ಶಬ್ದಸ್ಯ ನ ಅಧ್ಯಾಹರ್ತವ್ಯ ಇತ್ಯತ ಆಹ—ಉತಶಬ್ದಾದಿತಿ । (ಅರ್ಥ) 'ಪ್ರಿಯಮೇಧಾಸಃ ಪುತ್ರಕಾಃ ಎಂಬುದನ್ನು ಅರ್ಚತ-ಅರ್ಚತ ಎಂಬುದರೊಡನೆಯೇ ಅನ್ವಯ ಮಾಡಿ, ಆದರಾರ್ಥದಲ್ಲಿ ಅಭ್ಯಾಸ (ದ್ವಿರುಕ್ತಿ) ಬಂದಿದೆ ಎಂದು ಏಕೆ ವ್ಯಾಖ್ಯಾನ ಮಾಡಬಾರದು? ಅದರಲ್ಲಿ ತಪ್ಪೇನು? ಹಾಗೆ ವ್ಯಾಖ್ಯಾನ ಮಾಡಿದರೆ ನೀವು (ಆಚಾರ್ಯರು) ಸೇರಿಸಿಕೊಂಡಂತೆ ಅಪಿ ಶಬ್ದವನ್ನೂ ಸೇರಿಸಿಕೊಳ್ಳಬೇಕಾಗುವುದಿಲ್ಲವಲ್ಲಾ ಎಂದರೆ—ಆದಕ್ಕೆ ಆಚಾರ್ಯರೇ 'ಉತ ಶಬ್ದಾತ್' ಎಂದು ಪರಿಹಾರ ಹೇಳುತ್ತಾರೆ. (ಮೂಲ) 'ಉತ ಎಂದು ಪರಿಹಾರ ಹೇಳುತ್ತಾರೆ. (ಮೂಲ) ಉತ ಶಬ್ದಾತ್ ಜ್ಞಾನಿನಾಮಪ್ಯರ್ಚನಂ ಯುಕ್ತಮ್ । (ಅರ್ಥ) ಉತ-ಮತ್ತು, ಕೂಡ—ಎಂಬ ಶಬ್ದಪ್ರಯೋಗವಿರುವುದರಿಂದ ಜ್ಞಾನಿಗಳೂ ಸಹ ಜ್ಞಾನ ಧ್ಯಾನಗಳ ಜೊತೆಯಲ್ಲೇ ಕರ್ಮಿಷ್ಠರಂತೆಯೇ 'ಅರ್ಚನೆ' ಮಾಡಬೇಕೆಂದು ಅರ್ಥವಾಗುತ್ತದೆ. ಆಚಾರ್ಯರ ಈ ವಾಕ್ಯದಲ್ಲಿ ಅಡಗಿರುವ ಭಾವವನ್ನು ಟೀಕಾದಲ್ಲಿ ಸ್ಪಷ್ಟವಾಗಿ ತೋರಿಸುತ್ತಾರೆ. (ಟೀಕಾ) ಸಮುಚ್ಚಯಾರ್ಥಸ್ಯ 'ಉತ' ಶಬ್ದಸ್ಯ ವಿದ್ಯಮಾನತ್ವಾತ್ ನೈಕವಾಕ್ಯತಾ। (ಅರ್ಥ) 'ಉತ' ಶಬ್ದವು 'ಸಮುಚ್ಚಯ'ವನ್ನು (ಜೋಡಣೆಯನ್ನು, ಬೆರಸುವಿಕೆಯನ್ನು) ತೋರಿಸುವುದರಿಂದ ನೀವು ಹೇಳಿದಂತೆ ಒಂದೇ ವಾಕ್ಯವಾಗಿ ಗ್ರಹಣ ಮಾಡುವಂತಿಲ್ಲ, ಬೇರೆ ವಾಕ್ಯವೆಂದೇ ಗ್ರಹಣ ಮಾಡಬೇಕಾಗಿದೆ. (ಟೀಕಾ) ತಸ್ಯೈವ 'ಅಪ್ಯ'ರ್ಥತ್ವಾತ್ ನಾಧ್ಯಾಹಾರ ಇತಿ ಭಾವಃ । 'ಉತ' ಶಬ್ದಕ್ಕೇ 'ಕೂಡ' (ಅಪಿ) ಎಂಬ ಅರ್ಥವಿರುವುದರಿಂದ ಆಚಾರ್ಯರು ಅದರ ಅರ್ಥವನ್ನೇ 'ಅಪಿ' ಶಬ್ದದಿಂದ ಹೇಳಿದರೇ ಹೊರತು ಅಧ್ಯಾಹಾರ ಮಾಡಿಕೊಂಡಿಲ್ಲ—ಆದ್ದರಿಂದ ನೀವು ಹೇಳಿದ 'ಅಪಿ ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುವುದಿಲ್ಲ' ಎಂಬ ಆಕ್ಷೇಪಣೆ ಸಹ ನಿರಸ್ತವಾಯಿತು.

(೭) 'ಉತ' ಶಬ್ದದ ಯೋಜನೆ ಹೇಗೆ? ಎಂಬುದನ್ನು ವಿವರಿಸಲು ಟೀಕಾದಲ್ಲಿ ಸಂದೇಹ ತೋರಿಸುತ್ತಾರೆ. (ಟೀಕಾ) ನನು ಪ್ರಿಯ ಯಜ್ಞಾ ಏವ ಕಾಮದಲ್ಪಕಾಃ; ತೇಷಾಂ ಕೈಃ ಸಹ ಸಮುಚ್ಚಯಃ? ನ ಚ ಜ್ಞಾನಿಭಿಃ। ತೇಷಾಂ ಪ್ರಾರ್ಚನಾಧಿಕಾರಿಣಾಂ ಅರ್ಚನಾಭಾವಾತ್। ಸಮಾನ ವಿಷಯ ಏವ ಸಮುಚ್ಚಯ ಇತ್ಯತ ಆಹ—ಜ್ಞಾನಿನಾಮ ಪೀತಿ (ಅರ್ಥ) ಪುತ್ರಕಾಃ ಎಂಬ ಸಂಬೋಧನೆಯಿಂದ ಸೂಚಿತರಾದ ಅವರು ಯಜ್ಞನಿಷ್ಠರಾದ ಕರ್ಮನಿಷ್ಠರೇ ಆಗಿದ್ದಾರೆ. ಉತ ಶಬ್ದವು ಸಮುಚ್ಚಯವನ್ನು ತೋರಿಸುತ್ತದೆ ಎಂದು ಹೇಳಿದ್ದರಿಂದ ಈ ಕರ್ಮಿಷ್ಠರನ್ನು ಯಾರ ಜೊತೆ ಸೇರಿಸುವಿರಿ? ಜ್ಞಾನಿಗಳ ಜೊತೆಯಂತೂ ಸೇರಿಸುವಹಾಗಿಲ್ಲ, ಅವರಿಗೆ 'ಪ್ರಾರ್ಚತ' ಎಂದು ವಿಶೇಷ ವಿಧಾನವಿರುವುದರಿಂದ ಅವರಿಗೆ 'ಅರ್ಚತ' ಎಂಬುದು ಅನ್ವಯಿಸುವುದಿಲ್ಲ. ಸಮುಚ್ಚಯ ಸಮಾನ

ಧರ್ಮವುಳ್ಳವರಲ್ಲಿ ಮಾತ್ರ ಕೂಡುತ್ತದೆಯಲ್ಲವೆ! ಎಂದು ಶಂಕೆ ಬಂದರೆ ಅದರ ಪರಿಹಾರಕ್ಕಾಗಿಯೇ ಆಚಾರ್ಯರು 'ಜ್ಞಾನಿನಾಮಪಿ' ಎಂದು ಅರ್ಥ ಮಾಡಿದ್ದಾರೆ. ಜ್ಞಾನಿಗಳೂ ಸಹ ಕರ್ಮಿಷ್ಠರಂತೆಯೇ 'ಅರ್ಚನೆ'ಯನ್ನು ಮಾಡಲೇಬೇಕು ಎಂಬುದನ್ನು 'ಉತ' ಶಬ್ದ ತೋರಿಸುತ್ತದೆ.

(೯) ಪುನಃ ಆಶಂಕೆ—(ಟೀಕಾ) 'ತಸ್ಮಾತ್ ಕರ್ಮ ನ ಕುರ್ವಂತಿ ಯತಯಃ' (?) ಇತ್ಯಾದಿ ವಿರೋಧಾದಿತ್ಯತ ಉಕ್ತಂ— ಸ್ವಾಶ್ರಮೇತಿ। (ಅರ್ಥ) ಜ್ಞಾನಿಗಳೂ ಅರ್ಚನೆ ಮಾಡಬೇಕು ಎಂದು ಹೇಳಿದರೆ 'ಯತಿಗಳು ಸಕಲ ಕರ್ಮಗಳನ್ನೂ ಬಿಟ್ಟವ-ರಾದ್ದರಿಂದ (ಕಾಮ್ಯ) ಕರ್ಮಗಳನ್ನು ಮಾಡುವುದಿಲ್ಲ' ಎಂಬ ಪ್ರಮಾಣಕ್ಕೆ ವಿರೋಧ ಬರುವುದಲ್ಲಾ ಎಂದರೆ—'ಸ್ವಾಶ್ರಮ' ಎಂಬ ವಾಕ್ಯದಿಂದ ಪರಿಹಾರ ಮಾಡುತ್ತಾರೆ. (ಮೂಲ) ಸ್ವಾಶ್ರಮಾನುಸಾರೇಣ। (ಅರ್ಥ) ತಮ್ಮ ತಮ್ಮ ವರ್ಣಾಶ್ರಮೋಚಿತವಾಗಿ ಅರ್ಚನೆ ಮಾಡಬೇಕೆಂದು ಅರ್ಥ. ಯತಿಗಳಿಗೂ ತಮ್ಮ ತಮ್ಮ ಉಪಾಸ್ಯಮೂರ್ತಿಯನ್ನು ಅರ್ಚಿಸುವುದು ವಿಹಿತವಾಗಿದೆಯಾದ್ದರಿಂದ ಜ್ಞಾನಿಗಳೂ ಅರ್ಚನೆ ಮಾಡಲೇಬೇಕೆಂಬುದು ಸಿದ್ಧವಾಯಿತು. (ಈ ಅರ್ಥ ಬರುವುದರಿಂದಲೇ ಅದರಾರ್ಥವಾಗಿ ದ್ವಿರುಕ್ತಿ ಬಂದಿದೆಯೆಂದು ವ್ಯಾಖ್ಯಾನ ಮಾಡಬಾರದು,)

ಹೀಗೆ ಅರ್ಥ ಹೇಳಿದರೆ 'ಕರ್ಮ ನ ಕುರ್ವಂತಿ' ಎಂಬುದಕ್ಕೂ ವಿರೋಧ ಬರುವುದಿಲ್ಲ ಎಂದು ಟೀಕಾದಲ್ಲಿ ಸಮಾಧಾನ ಹೇಳುತ್ತಾರೆ. (ಟೀಕಾ) ಅಸ್ವಕೀಯ ಕರ್ಮ ವಿಷಯಮಿತಿ ಭಾವಃ। (ಅರ್ಥ) 'ಕರ್ಮಗಳನ್ನು ಮಾಡುವುದಿಲ್ಲ' ಎಂದು ಹೇಳಿದ್ದು ಸ್ವಕೀಯ ಧರ್ಮವಲ್ಲದೆ ಬೇರೆ ಕರ್ಮಗಳಿಗೆ ಅನ್ವಯಿಸುತ್ತದೆಯಾದ್ದರಿಂದ ವಿರೋಧವಾಗುವುದಿಲ್ಲ.

(೧೦) ಜ್ಞಾನಿಗಳೂ ಸಾಮಾನ್ಯ ಅರ್ಚನೆ ಮಾಡಬೇಕೆಂದು ಅರ್ಥ ಮಾಡಿದ್ದನ್ನು ಶ್ರುತಿವಾಕ್ಯ (ಮೂಲ) ದಿಂದಲೇ ಸಮರ್ಥಿಸುತ್ತಾರೆ—

ಅಧಾ ತೇ ವಿಷ್ಣೋ ವಿದುಷಾ ಚಿದರ್ಧ್ಯಃ ಸ್ತೋಮೋ ಯಜ್ಞಶ್ಚ ರಾಧ್ಯೋ ಹವಿಷ್ಮತಾ।

(ಋ. ೧ ಮಂ, ೧೫೬ ಸೂ, ೧ ಋಕ್) ಇತಿ ಶ್ರುತೇಃ॥

(ಇದಕ್ಕೆ ರಾಘ. ಟಿಪ್ಪಣಿಯಂತೆ ಅರ್ಥ)— ಅಧಾ–ಅಥ–ಅನಂತರ; ವಿಷ್ಣೋ–ವಿಷ್ಣುವೇ! ತೇ–ನಿನ್ನ; ಸ್ತೋಮಃ–ಸ್ತುತಿಯೂ ಮತ್ತು ಯಜ್ಞವೂ; ಹವಿಷ್ಮತಾ–ಹವಿಃ ಶಬ್ದದಿಂದ ಉಪಲಕ್ಷಿತವಾದ ಯಜ್ಞಾದಿ ಸಾಧನಗಳುಳ್ಳ; ವಿದುಷಾ ಚಿತ್–ಜ್ಞಾನಿಯಿಂದಲೂ ಕೂಡ; ಅರ್ಧ್ಯಃ–ಮಾಡಲ್ಪಡಬೇಕು. ರಾಧ್ಯಃ–(ಕೊಂದರೆ ಬಂದರೂ) ಸಾಧಿಸಲ್ಪಡಬೇಕು.

ತಾತ್ಪರ್ಯವೇನೆಂದರೆ— ಹೇ ವಿಷ್ಣೋ, ನಿನ್ನ ವಿಚಾರಗಳನ್ನು ತಿಳಿದುಕೊಂಡರೆ ಮಾತ್ರವೇ ಸಾಲದು, ನಿನ್ನ ಪೂಜಾರೂಪವಾದಗ್ನಿಯಜ್ಞಾದ್ಯನುಷ್ಠಾನಗಳನ್ನು ಜ್ಞಾನಿಗಳೂ ಮಾಡಲೇ ಬೇಕು— ಮಾಡಿ ಸಾಧಿಸಲೇಬೇಕು. ಇದರಿಂದ ಯತಿಗಳೂ ಕೂಡ—ಜ್ಞಾನಿಗಳ ವಿಷಯ ಹೇಳುವುದೇನಿದೆ—ಸ್ವೋಚಿತ ಕರ್ಮಾನುಷ್ಠಾನ ಮಾಡಲೇಬೇಕೆಂದು ಸಿದ್ಧವಾಗುತ್ತದೆ.

(೧೨) (ಮೂಲ) ಕಿಂ ತದರ್ಚನೀಯಮ್ ? 'ಧೃಷ್ಣು'—ಧೃಷ್ಟಂ ಪರಂ ಬ್ರಹ್ಮ ವಾಸುದೇವಾತ್ಮಕಮ್' (ಅರ್ಥ) 'ಅರ್ಚತ' 'ಪ್ರಾರ್ಚತ' ಎಂದು ಹೇಳಿತಲ್ಲಾ, ಯಾರನ್ನು ಅರ್ಚಿಸಬೇಕು? ಎಂದರೆ ಮಂತ್ರವು ಹೇಳುತ್ತದೆ—ಧೃಷ್ಣು ಅರ್ಚತ। ಧೃಷ್ಣು ಎಂದರೆ ಧೈರ್ಯಶಾಲಿಯಾದ ಎಂದರ್ಥ. (ಇದರ ವಿವರಣೆ ಮುಂದೆ ರಾಘವೇಂದ್ರಸ್ವಾಮಿಗಳ ಟಿಪ್ಪಣಿಯಂತೆ ಮಂತ್ರಾರ್ಥ ಹೇಳುವಾಗ ೧೬ನೇ ವಿಭಾಗದಲ್ಲಿ ಬರುವುದು.) ಅದು ಯಾವುದು ಎಂದರೆ 'ಪರಂ ಬ್ರಹ್ಮ' ಎಂದು ತೋರಿಸುತ್ತಾರೆ. ಕೆಲವರು ಪರಬ್ರಹ್ಮ ಎಂದರೆ ಬೇರೆ ಅರ್ಥ ಹೇಳುತ್ತಾರೆ, ಆದ್ದರಿಂದ ಅದನ್ನು ಸ್ಪಷ್ಟಪಡಿಸುವುದಕ್ಕಾಗಿ 'ವಾಸುದೇವಾತ್ಮಕಂ' ಎಂದು ಆಚಾರ್ಯರು ಹೇಳಿದ್ದಾರೆಂದು ಟೀಕಾದಲ್ಲಿ ಹೇಳಿದೆ. ಏವಂ ಚ ನಮಗೆ ನಿಯಾಮಕನಾದ ವಾಸುದೇವನನ್ನೇ ಕರ್ಮನಿಷ್ಠರೂ ಜ್ಞಾನಿಗಳೂ ಯತಿಗಳೂ ಕೂಡ ಪೂಜಿಸಲೂ ಬೇಕು, ಧ್ಯಾನ-ಜ್ಞಾನಾದಿಗಳಿಂದ ಆರಾಧಿಸಲೂ ಬೇಕು. ಅಷ್ಟೇ ಅಲ್ಲ, ಹೆಚ್ಚು ತಿಳುವಳಿಕೆಯಿಲ್ಲದವರು ಅರ್ಚಿಸುತ್ತಿದ್ದರೆ ಅವರಿಗೆ ಪ್ರೋತ್ಸಾಹ ಕೊಡಬೇಕೇ ಹೊರತು, ಅವರನ್ನು ಎಂದೂ ಅನಾದರ ಮಾಡಬಾರದು ಎಂದೂ ಹೇಳಿದಂತಾಯಿತು.

(೧೩) ಪುರಂ ನ ಎಂಬ ಉಳಿದ ಮಂತ್ರಭಾಗಕ್ಕೆ ಅರ್ಥ ಹೇಳುತ್ತಾರೆ— (ಮೂಲ) ಪುರಂ—ದೇಹಂ ನಾರ್ಚತ। ಪುರಂ—ದೇಹವನ್ನು, ನ—ಅರ್ಚನೆ ಮಾಡಬೇಡಿ. (ಟೀಕಾ) ಪುರಶಬ್ದೇನ ಕೇವಲಸ್ತದಭಿಮಾನೀ ಚೋಚ್ಯತೇ। ಧೃಷ್ಣು ಶಬ್ದೇನ ನಿರ್ಭಯತ್ವ-ಸಭಯತ್ವಯುಕ್ತಿರುಕ್ತಾ। (ಅರ್ಥ) ಪುರ ಎಂದರೆ ಕೇವಲ ದೇಹ ಎಂದೂ, ದೇಹಾಂತರ್ಯಾಮಿ ಎಂದೂ ಅರ್ಥವಾಗುತ್ತದೆ. ಇದರಲ್ಲಿ ಯಾವುದನ್ನು ಪೂಜಿಸಬೇಕು? ಯಾವುದನ್ನು ಪೂಜಿಸಬಾರದು? ಎಂದು ತೋರಿಸಲು ಧೃಷ್ಣು-ನಿರ್ಭಯವಾದ ಎಂಬ ವಿಶೇಷಣ ಕೊಟ್ಟಿದೆ. ನಿರ್ಭಯನಾದ ಅಂತರ್ಯಾಮಿಯನ್ನು ಪೂಜಿಸಬೇಕೇ ವಿನಾ ಸಭಯನಾದ ಜೀವನನ್ನು ಪೂಜಿಸಬಾರದೆಂದು ಯುಕ್ತಿಯನ್ನು ಹೇಳಿದೆ.

(೧೪) (ಟೀಕಾ) ಆಗಮಸಮ್ಮತಿಂ ಚಾಹ—ಪ್ರತ್ಯುದ್ಗಮೇತಿ। (ಅರ್ಥ) ದೇಹವನ್ನು ಅರ್ಚಿಸಬಾರದು ಎಂದು ಹೇಳಿದ್ದಕ್ಕೆ ಆಗಮಸಮ್ಮತಿಯನ್ನು ಹೇಳುತ್ತಾರೆ. (ಮೂಲ)

'ಪ್ರತ್ಯುದ್ಗಮ-ಪ್ರಶ್ರಯಣಾಭಿವಾದನಂ
ವಿಧೀಯತೇ ಸಾಧು ಮಿಥಃ ಸುಮಧ್ಯಮೇ।
ಪ್ರಾಜ್ಞೈಃ ಪರಸ್ಮೈ ಪುರುಷಾಯ ಚೇತಸಾ
ಗುಹಾಶಯಾಯೈವ ನ ದೇಹಮಾನಿನೇ।'

ಇತಿ ಭಾಗವತೇ (೪ ಸ್ಕಂ, ೩ ಅ, ೨೨ ಶ್ಲೋ.)

ಇದು ರಾಯರು ಟಿಪ್ಪಣಿಯಲ್ಲಿ ತೋರಿಸಿರುವಂತೆ 'ಚತುರ್ಥ ಸ್ಕಂಧೇ ಭವಾನೀಂ ಪ್ರತಿರುದ್ರವಚನಂ'—ಭಾಗವತ ಚತುರ್ಥ ಸ್ಕಂಧದಲ್ಲಿ ಪಾರ್ವತಿಗೆ ರುದ್ರದೇವರು ಹೇಳಿದ ಮಾತು. ದಕ್ಷನು ತನ್ನ ಅಳಿಯ ತನಗೆ ನಮಸ್ಕಾರ ಮಾಡಲಿಲ್ಲವಾದ್ದರಿಂದ ಅಳಿಯನ ಮೇಲೆ ಕುಪಿತನಾಗಿದ್ದಾನೆ ಎಂದು ಕಲ್ಪಿಸಿಕೊಂಡು ಅದಕ್ಕೆ ಉತ್ತರವಾಗಿ ಹೇಳಿದ ಮಾತು ಈ ಶ್ಲೋಕ. ಇದರ ಅನ್ವಯಾರ್ಥ— ಸುಮಧ್ಯಮೇ-ಸುಂದರವಾದ ನಡುಪ್ರದೇಶ (ಸೊಂಟ) ವುಳ್ಳ ಹೇ ಸುಂದರಿ ಪಾರ್ವತಿಯೇ, ಪ್ರಾಜ್ಞೈಃ-ಧರ್ಮದ ರಹಸ್ಯವನ್ನು ಅರಿತ ಜ್ಞಾನಿಗಳಿಂದ, ಮಿಥಃ-ವ್ಯಕ್ತಿಗಳು ಪರಸ್ಪರ ಭೇಟಿಯಾದಾಗ ಒಬ್ಬರಿಗೊಬ್ಬರು, ಪ್ರತ್ಯುದ್ಗಮ-ಪ್ರಶ್ರಯಣಾಭಿವಾದನಂ— ಪ್ರತ್ಯುದ್ಗಮ-ಎದುರುಗೊಳ್ಳುವುದು, ಪ್ರಶ್ರಯಣ-ನಮ್ರತೆಯನ್ನು ತೋರಿಸುವುದು, ಅಭಿವಾದನಂ-ನಮಸ್ಕಾರ ಮಾಡುವುದು ಮೊದಲಾದ ಸತ್ಕಾರವು ಸಾಧು-ಸರಿಯಾಗಿ (ಸಮಾನಸ್ಕಂಧರಲ್ಲಿ), ವಿಧೀಯತೇ-ಮಾಡಲ್ಪಡುತ್ತದೆ. ಅಥವಾ ಉತ್ತಮರನ್ನು ಕಂಡರೆ ತಾವೇ ಮಾಡಬೇಕೇ ಹೊರತು ಅವರಿಂದ ಆ ಸತ್ಕಾರವನ್ನು ತಾವು ಅಪೇಕ್ಷಿಸಬಾರದು. ಇದೇ ಸಾಧು-ಯೋಗ್ಯ. ಆದರೆ ಉತ್ತಮಾಧಿಕಾರಿಯೇ ತನಗಿಂತ ಕೀಳಾದವನಿಗೆ ಆದರಿಸುವ ಪ್ರಸಂಗ ಬಂದರೆ— ಆಗ, ಗುಹಾಶಯಾಯ-ಆ ಅಧಮಾಧಿಕಾರಿಯ ಹೃದಯದಲ್ಲಿ ವಾಸಿಸುವ (ಅಂತರ್ಯಾಮಿಯಾದ), ಪರಸ್ಮೈ ಪುರುಷಾಯ-ಸರ್ವೋತ್ತಮನಾದ ಶ್ರೀಹರಿಗೇ, ಚೇತಸಾ ವಿಧೀಯತೇ-ಮನಸ್ಸಿನಿಂದಲೇ ನಮಸ್ಕಾರಾದಿಗಳು ಮಾಡಲ್ಪಡುತ್ತವೆಯೇ ಹೊರತು ತಲೆ ಬಗ್ಗಿಸಿ ಕಾಯಿಕವಾಗಿ ಮಾಡಲ್ಪಡುವುದಿಲ್ಲ. ನ (ಏವ) ದೇಹಮಾನಿನೇ-ದೇಹಕ್ಕೆ ಒಡೆಯನಾದ ಜೀವನಿಗೆ ಎಂದೂ ಮಾಡಲ್ಪಡತಕ್ಕದ್ದಲ್ಲ. ಇಲ್ಲಿ— ದೊಡ್ಡವರಲ್ಲಾಗಲಿ, ಚಿಕ್ಕವರಲ್ಲಾಗಲಿ, ಸಮಾನಸ್ಕಂಧರಲ್ಲಾಗಲಿ ನಮಸ್ಕಾರ ಮಾಡುವುದು ಆ ದೇಹಕ್ಕಲ್ಲ, ಪ್ರತ್ಯುತ ದೇಹಾಂತರ್ಗತ ಅಂತರ್ಯಾಮಿಗೇ ಎಂಬ ಅನುಸಂಧಾನ ಮಾಡಿಕೊಳ್ಳಬೇಕು. ಅದ್ದರಿಂದ ಶ್ರುತಿಯೂ 'ನ ಪುರಂ' ಎಂದು ಹೇಳಿತೆಂದು ತಿಳಿಯಬೇಕು.

(೧೪) ಭಾಗವತ ಶ್ಲೋಕದಲ್ಲಿ 'ಸರ್ವರ ಅಂತರ್ಗತನಾದ ಶ್ರೀಹರಿಗೇ ನಮಸ್ಕಾರ ಮಾಡಬೇಕೆ'ಂದು ಹೇಳಿದ್ದರಿಂದ ರುದ್ರಾದಿ ದೇವತೆಗಳಿಗಾಗಲಿ, ಗುರು ಮೊದಲಾದ ವ್ಯಕ್ತಿಗಳಿಗಾಗಲಿ ನಮಸ್ಕರಿಸಕೂಡದು' ಎಂದು ಹೇಳಿದಂತೆ ಕಾಣುತ್ತದೆ. ಅದ್ದರಿಂದ ತನಗಿಂತ ಉತ್ತಮರಿಗೆ ಅವಶ್ಯ ವಂದಿಸಬೇಕೆಂಬುದನ್ನು ಸ್ಪಷ್ಟವಾಗಿ ಹೇಳುವ ವ್ಯಾಸಸ್ಮೃತಿಯನ್ನು ಉದಹರಿಸುತ್ತಾರೆ— (ಮೂಲ)

ಸ ದೇಹಮಾನಿಹರಯೇ ಪ್ರಣಮೇತ್ ಕೇವಲಾಯ ವಾ।
ನ ದೇಹಾಯ ನ ತಸ್ಮಾನ್ನ—ಪರಾಯ ಚ ಕಥಂಚನ । —ಇತಿ ವ್ಯಾಸಸ್ಮೃತೌ

(ಅರ್ಥ) ತನಗಿಂತ ಉತ್ತಮಾಧಿಕಾರಿಗಳಾಗಿದ್ದರೆ ಆಗ, ಸದೇಹಮಾನಿಹರಯೇ-ದೇಹಾಭಿಮಾನಿಯಾದ ಜೀವನಿಂದ ಸಮೇತನಾದ ಅವನ ಅಂತರ್ಯಾಮಿಗೆ (ಎಂದರೆ

ಜೀವನಿಗೂ ಅವನ ಅಂತರ್ಯಾಮಿಗೂ ಇಬ್ಬರಿಗೂ) ವಂದಿಸಬೇಕು. ಅಥವಾ ಕೇವಲ ಅಂತರ್ಯಾಮಿಯಾದ ಭಗವಂತನಿಗೇ ನೇರವಾಗಿ ನಮಸ್ಕರಿಸಬಹುದು. ಆದರೆ ಕೇವಲ ದೇಹಕ್ಕಾಗಲಿ ದೇಹದ ಅಭಿಮಾನವುಳ್ಳ ಜೀವನಿಗಾಗಲೀ ಎಂದಿಗೂ ನಮಸ್ಕಾರ ಮಾಡ-ಬಾರದು.

(೧೫) ಇಷ್ಟೆಲ್ಲಾ ಅರ್ಥ ಹೇಳಿದರೂ ಮಂತ್ರದಲ್ಲಿ ಕಡೆಯಲ್ಲಿರುವ ಒಂದು 'ಅರ್ಚತ' ಎಂಬ ಶಬ್ದ ಉಳಿದುಕೊಂಡಿತೆಂದು ಟೀಕಾದಲ್ಲಿ ತೋರಿಸುತ್ತಾರೆ. (ಟೀಕಾ) ನನ್ವೇವಮಪಿ 'ಅರ್ಚತೇ'ತ್ಯೇಕಂ ಪದಮ್ ಅವಶಿಷ್ಟಮಿತ್ಯತ ಆಹ- ಪುನರಿತಿ। (ಅರ್ಥ) ಇಷ್ಟೆಲ್ಲ ಆದರೂ ಕಡೆಯಲ್ಲಿ 'ಅರ್ಚತ' ಎಂಬ ಒಂದು ಪದ ಉಳಿದುಕೊಂಡಿತು. ಆದಕ್ಕೆ ಅರ್ಥವೇನು? ಎಂದರೆ 'ಪುನಃ' ಎಂಬುದರಿಂದ ಅದರ ಅರ್ಥವನ್ನೂ ಹೇಳುತ್ತಾರೆ— (ಮೂಲ) ಪುನ'ರರ್ಚತೇ'ತಿ ತಾತ್ಪರ್ಯಾರ್ಥಃ॥ (ಅರ್ಥ) ಕಡೆಯಲ್ಲಿ ಪುನಃ ಬಂದಿರುವ 'ಅರ್ಚತ' ಎಂಬ ಶಬ್ದವು ಹೇಳಿದ ಅರ್ಥದ ತಾತ್ಪರ್ಯವನ್ನು (ಮುಖ್ಯಾರ್ಥವನ್ನು) ತೋರಿಸುತ್ತದೆ.

(೧೬) ಒಟ್ಟಿನಲ್ಲಿ ಈ ಮಂತ್ರಕ್ಕೆ ಯಾವ ರೀತಿ ಅರ್ಥ ಸಿದ್ಧವಾಯಿತೆಂಬುದನ್ನು ರಾಘವೇಂದ್ರಸ್ವಾಮಿಗಳು ಕರ್ಮನಿರ್ಣಯ ಟೀಕೆಯ ಟಿಪ್ಪಣಿಯಲ್ಲಿ ಹೀಗೆ ಸ್ಪಷ್ಟವಾಗಿ ತೋರಿಸಿದ್ದಾರೆ. ಮಂತ್ರಾರ್ಥಸ್ತು— ಈ ಮಂತ್ರಕ್ಕೆ ಸಿದ್ಧವಾದ ಅರ್ಥವೇನೆಂದರೆ—

(೧ನೇ ವಾಕ್ಯ) ಹೇ ಪ್ರಿಯಮೇಧಾಸಃ-ಪ್ರಿಯಯಜ್ಞಾಃ-ಯಜ್ಞಾದಿ ಕರ್ಮಗಳಲ್ಲೇ ನಿಷ್ಠರಾದ ಅಧಿಕಾರಿಗಳೇ, ಧೃಷ್ಣು-ಧೃಷ್ಣುಂ-ಭಯರಹಿತನಾದ (ವ್ಯಾಕರಣಾಂಶ— 'ಞಿಧೃಷಾ ಪ್ರಾಗಲ್ಭ್ಯೇ'। 'ತ್ರಸಿ ಗೃಧಿ-ಧೃಷಿ-ಕ್ಷಿಪೇಃ ಕ್ನುಃ' (ಪಾ. ೩/೨/೧೪೦)। ಞಿಧೃಷಾ ಎಂಬುದು ಧಾತುಪಾಠ. ಧೃಷ್ ಧಾತುವಿಗೆ ನಿರ್ಭಯವಾಗಿರು ಎಂಬ ಅರ್ಥವಿದೆ. ಇದರ ಮೇಲೆ ಪಾಣಿನಿಯ ಸೂತ್ರದ ಪ್ರಕಾರ ತ್ರಸ್, ಗೃಧ್, ಧೃಷ್, ಕ್ಷಿಪ್ ಎಂಬ ಧಾತುಗಳ ಮೇಲೆ ತಾಚ್ಛೀಲ್ಯಾರ್ಥದಲ್ಲಿ ಕ್ನು (=ನು) ಎಂಬ ಪ್ರತ್ಯಯ ಬರುತ್ತದೆ. ಈ ಪ್ರತ್ಯಯ 'ಕಿತ್' ಆದ್ದರಿಂದ (ಪ್ರಾರಂಭದಲ್ಲಿ ಕ ಕಾರ ಸೇರಿರುವುದರಿಂದ) ಧಾತುವಿನ ಸ್ವರಕೆ ಗುಣ ಬರುವುದಿಲ್ಲ. ಆದರಂತೆ ಧೃಷ್+ನು ಸೇರಿ ಧೃಷ್ಣು ಎಂದಾಗಿದೆ.) ನಿರ್ಭಯಂ ಬ್ರಹ್ಮ-ನಿರ್ಭಯನಾದ ವಾಸುದೇವನೆಂಬ ಪರಬ್ರಹ್ಮನನ್ನು, ಅರ್ಚತ-ಯಜ್ಞಾದಿ ಸಾಧನಗಳಿಂದ ಪೂಜೆ ಮಾಡಿರಿ. (೨ನೇ ವಾಕ್ಯ) ಪ್ರಿಯಮೇಧಾಸಃ-ಪ್ರಿಯಜ್ಞಾನಾಃ, ಜ್ಞಾನಾಧ್ಯಯನನಿಷ್ಠರಾದ ಹೇ ಉತ್ತಮಾಧಿಕಾರಿಗಳೇ, ಯೂಯಂ-ನೀವೂ ಸಹ, ಧೃಷ್ಣು - ನಿರ್ಭಯನಾದ ಭಗವಂತನನ್ನು, ಪ್ರಾರ್ಚತ - ಜ್ಞಾನಧ್ಯಾನಾದಿನಾ ಪ್ರಕೃಷ್ಟಾರ್ಚನಂ ಕುರುತ-ಅಜ್ಞಾನಿಗಳಂತೆ ಕುರುಡಾಗಿ ಅನುಷ್ಠಾನನಿರತರಾಗದೆ, ಜ್ಞಾನಪೂರ್ವಕವಾಗಿ ವಿಚಾರ ಮಾಡಿ ತಿಳಿದುಕೊಂಡು ಜ್ಞಾನ ಧ್ಯಾನಾದ್ಯನುಷ್ಠಾನಗಳಿಂದ ಉತ್ತಮವಾಗಿ ಅರ್ಚಿಸಿರಿ. (೩ನೇ ವಾಕ್ಯ) ಹೇ ಪ್ರಿಯಮೇಧಾಸಃ - ಪ್ರಿಯಯಜ್ಞಾಃ-ಕರ್ಮನಿಷ್ಠರಾದ ಹೇ ಜನಗಳಿರಾ, ಯೂಯಂ-ನೀವು, ಪುತ್ರಕಾಃ ಉತ-ಅಲ್ಪಕಾ ಅಪಿ-ಯೋಗ್ಯತೆಯಲ್ಲಿ, ಶಕ್ತಿಯಲ್ಲಿ, ಜ್ಞಾನದಲ್ಲಿ, ಅಲ್ಪರಾಗಿದ್ದರೂ

ಕೂಡ, ಧೃಷ್ಣು ಭಗವಂತನನ್ನು, ಅರ್ಚಂತು-ಅರ್ಚಿಸಿ-ನಿಮಗೆ ತಿಳಿದಷ್ಟೇ, ನಿಮಗೆ ತಿಳಿದ ಹಾಗೆಯೇ ಅರ್ಚನೆ ಮಾಡಿರಿ. (೨ನೇ ವಾಕ್ಯ) ಹೇ ಪ್ರಿಯಮೇಧಾಸಃ-ಪ್ರಿಯಜ್ಞಾನಾಃ-ಜ್ಞಾನವೇ ಪ್ರಧಾನವಾಗಿರುವ ಉತ್ತಮಾಧಿಕಾರಿಗಳೇ, ಯೂಯಮಪಿ ಅರ್ಚತ-ನೀವೂ ಸಹ (ಸಾಧಾರಣ ಜನಗಳಂತೆ) ಅರ್ಚನೆ ಮಾಡಿರಿ (ನಿಮ್ಮನ್ನು ನೋಡಿಯಾದರೂ ಅಜ್ಞ ಜನಗಳು ಪೂಜಾದಿಗಳಲ್ಲಿ ನಿರತರಾಗಲಿ.) — ಪ್ರಾರ್ಚನಂ ಕುರ್ವಂತೋಽಪಿ ಯಜ್ಞಾದಿಭಿ-ರರ್ಚನಂ ಕುರುತ—ಜ್ಞಾನಧ್ಯಾನಾದಿ ಸಾಧನೆಗಳಿಂದ ಭಗವಂತನನ್ನು ವಿಶೇಷವಾಗಿ ಅರ್ಚಿಸುತ್ತಿದ್ದರೂ ಕೂಡ, ಯಜ್ಞಾದ್ಯನುಷ್ಠಾನ (ಯಜ್ಞ, ನಿತ್ಯಪೂಜೆ ಇತ್ಯಾದಿ) ಗಳಿಂದಲೂ ಅರ್ಚನೆ ಮಾಡಿರಿ. ಅಟರೆ, ಪುರಂ—ದೇಹಂ ದೇಹಾಭಿಮಾನಿನಂ ಜೀವಂ ವಾ, ದೇಹವನ್ನಾಗಲಿ ದೇಹಾಭಿಮಾನಿಯಾದ ಜೀವವನ್ನಾಗಲಿ, ನ ಅರ್ಚತ-ಅರ್ಚಿಸಬೇಡಿ. ಪುನರರ್ಚತೀತಿ ಅಪರಾರ್ಥ, ಕೊನೆಯಲ್ಲಿ ಇನ್ನೊಮ್ಮೆ 'ಅರ್ಚತ' ಎಂದು ಹೇಳಿದ್ದು ಅರ್ಚನೆ ತಪ್ಪದೆ ಮಾಡಿ ಎಂದು ಆದರವನ್ನು ತೋರಿಸುವುದಕ್ಕಾಗಿ ಬಂದಿದೆ.

ಮಂತ್ರದ ಭಾವಾರ್ಥ— ಈ ಮಂತ್ರವು ಎಲ್ಲಾ ವಿಧ ಜನರಿಗೂ—ಅವರು ಕೇವಲ ಕರ್ಮನಿಷ್ಠರಾಗಿರಲಿ, ಜ್ಞಾನಸಂಪನ್ನರಾಗಿರಲಿ, ಅಲ್ಪಜ್ಞರಾಗಿರಲಿ, ಬಹುಜ್ಞರಾಗಿರಲಿ— ಎಲ್ಲರೂ ಭಗವಂತನನ್ನು ಆರಾಧಿಸಲೇಬೇಕೆಂದು ಕಡ್ಡಾಯವಾಗಿ ವಿಧಿಸುತ್ತದೆ. ಇದರಲ್ಲಿರುವ 'ಪ್ರಿಯಮೇಧಾಸಃ' ಎಂಬ ಸಂಬೋಧನೆಗೆ ಮುಖ್ಯವಾಗಿ ಎರಡು ಪ್ರಕಾರ ಅರ್ಥವಾಗುತ್ತಿದ್ದರೂ ಸಂದರ್ಭಾನುಸಾರವಾಗಿ ಅನೇಕ ಪ್ರಕಾರವಾಗಿ ಅರ್ಥ ವ್ಯತ್ಯಾಸವಾಗುತ್ತದೆ. ಹೇಗೆಂದರೆ—(೧ನೇ ಅರ್ಥ) ಪ್ರಿಯ ಯಜ್ಞಾಃ ಎಂದರೆ ಯಜ್ಞಾದಿಗಳಿಗೇ ಪ್ರಾಧಾನ್ಯತೆಯನ್ನು ಕೊಡುವ ಕರ್ಮಾಚರಣನಿಷ್ಠರಾದ ಜನಗಳೇ, ಸಕಲ ಜಗನ್ನಿಯಾ-ಮಕನಾದ ಆ ಭಗವಂತನನ್ನು ನೀವು ಇದೇ ರೀತಿಯೇ ಯಜ್ಞಾದ್ಯನುಷ್ಠಾನಗಳಿಂದಲೇ ಅರ್ಚಿಸಿರಿ. ಅರ್ಚನೆಯನ್ನು ಬಿಡಬೇಡಿ. (೨ನೇ ಅರ್ಥ) ಕರ್ಮಕ್ಕಿಂತಲೂ ಜ್ಞಾನಕ್ಕೇ ಪ್ರಾಧಾನ್ಯತೆ ಕೊಡುತ್ತಾ ಜ್ಞಾನಪೂರ್ವಕ ಅನುಸಂಧಾನ ಮಾಡಿಕೊಳ್ಳಬಲ್ಲ ಪ್ರಿಯ-ಜ್ಞಾನರಾದ ಹೇ ಶ್ರೇಷ್ಠಜನರೇ, ನೀವು ಜ್ಞಾನ-ಧ್ಯಾನಾದಿಗಳಿಂದಲೇ ಭಗವಂತನನ್ನು ಆರಾಧಿಸಿ ತೃಪ್ತಿಪಡಿಸಿರಿ. ಆದರೆ ಮಾತ್ರ—ಕರ್ಮನಿಷ್ಠರು ಕೀಳು, ಜ್ಞಾನಿಗಳು ಶ್ರೇಷ್ಠರು ಇತ್ಯಾದಿ ಭಾವನೆಗಳಿಂದ ಕರ್ಮನಿಷ್ಠರನ್ನು ಎಂದಿಗೂ ಅನಾದರಣೆ ಮಾಡಬೇಡಿ. ಹಾಗೆ ಮಾಡುವುದು ತಪ್ಪೆಂದು ಗೀತೆಯಲ್ಲಿ ಭಗವಂತ ಕೃಷ್ಣನೇ ಹೇಳಿದ್ದಾನೆ, ನೆನಪಿರಲಿ. (೩ನೇ ವಾಕ್ಯ) ಪುತ್ರಕಾಃ ಎಂದರೆ ಅಲ್ಪಜ್ಞಾನ, ಅಲ್ಪ ಶಕ್ತಿ, ಅಲ್ಪ ಯೋಗ್ಯತೆಯುಳ್ಳ ಚಿಕ್ಕ ಮಕ್ಕಳಿರಾ, ನಿಮ್ಮ ಶಕ್ತಿ, ಯೋಗ್ಯತೆ ಇದ್ದಷ್ಟುಮಟ್ಟಿಗೇ ಭಗವಂತನನ್ನು ಆರಾಧಿಸಿರಿ. ಆರಾಧಿತನಾದ ಆ ಸ್ವಾಮಿ ನಿಮಗೆ ಹೆಚ್ಚು ಶಕ್ತಿ ಜ್ಞಾನಾದಿ ಕೊಟ್ಟು ಉದ್ಧರಿಸುವನು. ಹೆಚ್ಚು ಶಕ್ತಿ ಇಲ್ಲವಲ್ಲಾ ಎಂದು ತಿಳಿದು ಅರ್ಚಿಸುವುದನ್ನೇ ಬಿಡಬೇಡಿ.

(೪ನೇ ಅರ್ಥ) ಪ್ರಿಯಜ್ಞಾನರಾದ ಹೇ ಉನ್ನತಪಟ್ಟದ ಅಧಿಕಾರಿಗಳೇ, ನೀವು ಜ್ಞಾನ ಧ್ಯಾನಾದಿ ಶ್ರೇಷ್ಠ ಅನುಷ್ಠಾನಗಳಲ್ಲಿ ನಿರತರಾಗಿ ಭಗವಂತನನ್ನು ಹೆಚ್ಚಾಗಿ ಆರಾಧಿಸುತ್ತಿದ್ದರೂ ಕೂಡ ಸ್ವವರ್ಣಾಶ್ರಮೋಚಿತವಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಬಿಡದೆ ಅವನ್ನೂ ಮಾಡುತ್ತಾ ಅಜ್ಞಜನಗಳಿಗೆ ಕರ್ಮ ಮಾಡಲು ಉತ್ಸಾಹ ಬರುವಂತೆ ಸದಾಚಾರಶೀಲರಾಗಿ ಭಗವಂತನನ್ನು ಅರ್ಚಿಸಿರಿ. 'ನಾವು ಜ್ಞಾನಿಗಳು' ಎಂಬ ಹೆಮ್ಮೆಯಿಂದ ಮೂಲಭೂತ ಸದಾಚಾರಗಳನ್ನು ಬಿಡಬೇಡಿ, ವಿಷ್ಣುವನ್ನು ಸ್ತೋತ್ರದಿಂದಲೂ ಪೂಜೆಯಿಂದಲೂ ಜ್ಞಾನಿಗಳೂ ಸಹ ಆರಾಧಿಸಬೇಕೆಂದು 'ಅಥಾ ತೇ ವಿಷ್ಣೋ' ಎಂಬ ಶ್ರುತಿ ಹೇಳಿದ್ದು ನೆನಪಿರಲಿ.

ಹೀಗೆ ಸರ್ವರಲ್ಲಿಯೂ ಅಂತರ್ಗತನಾದ ಭಗವಂತನನ್ನು ಸರ್ವಾಂತರ್ಯಾಮಿ ಎಂಬ ಭಾವನೆಯಿಂದಲೂ ಅರ್ಚಿಸಬಹುದು ಅಥವಾ ಅವನನ್ನೇ ಬೇರೆಯಾಗಿಯೂ ಅರ್ಚಿಸಬಹುದೇ ವಿನಾ ಕೇವಲ ದೇಹವನ್ನಾಗಲೀ, ಅಥವಾ ದೇಹಾಭಿಮಾನಿ ಜೀವವನ್ನಾಗಲೀ ಬೇರೆಯಾಗಿ ಆರಾಧಿಸಬಾರದು. ಗುರುಗಳಿಗೂ ಹಿರಿಯರಿಗೂ ನಮಸ್ಕರಿಸುವಾಗ ತನ್ನಿಷ್ಠ-ಭಗವಂತನನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ವಂದಿಸಬೇಕೇ ವಿನಾ ಅವರ ದೇಹಗಳಿಗಾಗಲೀ ಕೇವಲ ದೇಹಗತ ಜೀವಕ್ಕಾಗಲೀ ವಂದಿಸಬಾರದು. ಇದು ಬ್ರಹ್ಮರುದ್ರಾದಿ ದೇವತೆಗಳಿಗೂ ಅನ್ವಯಿಸುತ್ತದೆ. ಬ್ರಹ್ಮರುದ್ರಾದಿಗಳೆಲ್ಲರೂ ವಿಷ್ಣುಭಕ್ತರೆಂಬ ಭಾವನೆಯಿಂದ ನಮಸ್ಕರಿಸಬೇಕೇ ವಿನಾ ಕೇವಲ ಅವರ ಜೀವಕ್ಕೆ ಸ್ವರೂಪಕ್ಕೆ ಮಾತ್ರ ಎಂದಿಗೂ ವಂದಿಸಬಾರದು. ಈ ಪ್ರಮೇಯವನ್ನೇ 'ಪ್ರತ್ಯುದ್ಗಮ ...' ಎಂಬ ಭಾಗವತವಾಕ್ಯವೂ 'ಸದೇಹಮಾನಿ ಹರಯೇ...' ಎಂಬ ವ್ಯಾಸಸ್ಮೃತಿಯೂ ಹೇಳುತ್ತವೆ.

ಈ ಮಂತ್ರಕ್ಕೆ ಸಾಯಣರು ಹೀಗೆ ಅರ್ಥ ಹೇಳಿದ್ದಾರೆ—

ಸಾಯಣಭಾಷ್ಯದ ಪ್ರಕಾರ ಅರ್ಥ

ಋಷ್ಯಾದಿಗಳು— ಅರ್ಚತೇತಿ ಮಂತ್ರಸ್ಯ ಆಂಗೀರಸಃ ಪ್ರಿಯಮೇಧಾ ಋಷಿಃ। ಅನುಷ್ಟುಪ್ ಛಂದಃ । ಇಂದ್ರೋ ದೇವತಾ । ನೀರಾಜನೇ ವಿನಿಯೋಗಃ ।

(ಅನ್ವಯಾರ್ಥ) ಹೇ ಅಧ್ವರ್ಯ್ವಾದಯಃ-ಎಲೈ ಅಧ್ವರ್ಯು ಮೊದಲಾದ ಋತ್ವಿಜರೇ! ಯೂಯಂ ಇಂದ್ರಂ ಅರ್ಚತ ಪೂಜಯತ ಸ್ತುತ್ಯಾ-ನೀವೆಲ್ಲರೂ ಇಂದ್ರನನ್ನು ಅರ್ಚಿಸಿರಿ, ಎಂದರೆ ಸ್ತೋತ್ರದಿಂದ ಪೂಜಿಸಿರಿ ಎಂದರ್ಥ. ಪ್ರಾರ್ಚತ-ಪ್ರಕರ್ಷೇಣಾರ್ಚತ ಇಂದ್ರಮೇವ-ಇಂದ್ರನನ್ನೇ ಚೆನ್ನಾಗಿ ಅರ್ಚಿಸಿರಿ. ಪ್ರಿಯಮೇಧಾಸಃ-ಪ್ರಿಯಮೇಧ ಸಂಬಂಧಿನಃ ತದ್ಗೋತ್ರಾಃ-ಪ್ರಿಯಮೇಧ ಎಂಬ ಋಷಿಯ ಗೋತ್ರದಲ್ಲಿ ಹುಟ್ಟಿದವರೇ, ಯೂಯಂ ಅರ್ಚತ ಇಂದ್ರಂ-ನೀವೂ ಇಂದ್ರನನ್ನು ಅರ್ಚಿಸಿರಿ. ಪುತ್ರಕಾ-ಪುತ್ರಾಃ ಅಪಿ-ಮಕ್ಕಳೂ ಕೂಡ, ಅರ್ಚಂತು ಇಂದ್ರಂ-ಇಂದ್ರನನ್ನು ಅರ್ಚಿಸಲಿ, ಉತ-ಅಪಿ ಚ-ಮತ್ತು, ಪುರಂ-

ನ-ಪಟ್ಟಣದಂತೆ, ಧೃಷ್ಣುಂ-ಧರ್ಷಣಶೀಲಂ ಇಂದ್ರಂ-ದೃಢಕಾಯನಾದ ಇಂದ್ರನನ್ನು, ಅರ್ಚತ-ಅರ್ಚಿಸಿರಿ.

ತಾತ್ಪರ್ಯ— ಹೇ ಯಜ್ಞ ಮಾಡುತ್ತಿರುವ ಅಧ್ವರ್ಯುಗಳೇ ಮೊದಲಾದ ಋತ್ವಿಜರೇ, ನೀವೆಲ್ಲರೂ ಯಜ್ಞಾಧಿಪತಿಯಾದ ಇಂದ್ರನನ್ನು ಸ್ತೋತ್ರದಿಂದ—ಎಂದರೆ ಇಂದ್ರಸೂಕ್ತಗಳನ್ನು ಪಠಿಸಿ—ಪೂಜಿಸಿರಿ. ಅವನನ್ನೇ ಚೆನ್ನಾಗಿ ಅರ್ಚಿಸಿರಿ. ಪ್ರಿಯಮೇಧಃ ಎಂಬ ಋಷಿಯ ಗೋತ್ರದಲ್ಲಿ ಹುಟ್ಟಿದ ಜನಗಳೇ, ನೀವೂ ಇಂದ್ರನನ್ನೇ ಅರ್ಚಿಸಿರಿ. ಎಲೈ ಚಿಕ್ಕ ಮಕ್ಕಳಿರಾ, ನೀವೂ ಕೂಡ ಇಂದ್ರನನ್ನೇ ಅರ್ಚಿಸಿರಿ ಮತ್ತು ಪಟ್ಟಣದಂತೆ ದೃಢಕಾಯನಾದ ಇಂದ್ರನನ್ನು ಅರ್ಚಿಸಿರಿ.

ii) ಶ್ರಿಯೋ ಜಾತಃ ಶ್ರಿಯ ಆ ನಿರಿಯಾಯ

ಶ್ರಿಯಂ ವಯೋ ಜರಿತೃಭ್ಯೋ ದಧಾತಿ ।

ಶ್ರಿಯಂ ವಸಾನಾ ಅಮೃತತ್ವಮಾಯನ್

ಭವಂತಿ ಸತ್ಯಾ ಸಮಿಥಾ ಮಿತದ್ರೌ ॥

(ಋ. ೯ ಮಂ, ೯೪ ಸೂ, ೪ ಋಕ್;
೭ ಅಷ್ಟ, ೪ ಅಧ್ಯಾ, ೪ ವರ್ಗ)

ಋಷ್ಯಾದಿಗಳು— ಶ್ರಿಯೋ ಜಾತ ಇತಿ ಮಂತ್ರಸ್ಯ ಆಂಗಿರಸಃ ಕಣ್ವ ಋಷಿಃ । ತ್ರಿಷ್ಟುಪ್ ಛಂದಃ। ಸೋಮಃ ಪವಮಾನಃ ಶ್ರೀಶ್ಚ ದೇವತೇ। ಮಂಗಳನೀರಾಜನೇ ವಿನಿಯೋಗಃ।

ಈ ಮಂತ್ರವನ್ನು ಶ್ರೀಮದಾಚಾರ್ಯರು ಗೀತಾತಾತ್ಪರ್ಯದಲ್ಲಿ ಸಮಗ್ರವಾಗಿಯೂ ಗೀತಾಭಾಷ್ಯದಲ್ಲಿ ಭಾಗವಾಗಿಯೂ ಹನ್ನೆರಡನೇ ಅಧ್ಯಾಯದಲ್ಲಿ ಲಕ್ಷ್ಮೀದೇವಿಯ ಉಪಾಸಕರಿಗೂ ಮುಕ್ತಿಯಾಗುತ್ತದೆ ಎಂಬ ಪ್ರಮೇಯವನ್ನು ಸಿದ್ಧಪಡಿಸುವುದಕ್ಕೆ ಶ್ರುತಿ ಪ್ರಮಾಣವಾಗಿ ಉದಹರಿಸಿದ್ದಾರೆ. ಆದರಿಂದ ಈ ಋಙ್ಮಂತ್ರದ ಅರ್ಥವನ್ನು ಶ್ರೀಮತ್ ಪದ್ಮನಾಭತೀರ್ಥರೂ ಶ್ರೀಮಜ್ಜಯತೀರ್ಥರು ನ್ಯಾಯದೀಪಿಕಾದಲ್ಲೂ ಹೇಳಿದ್ದಾರೆ. ಇಬ್ಬರು ಹೇಳಿದ ಅರ್ಥ ಸ್ವಲ್ಪ ವ್ಯತ್ಯಾಸವಿರುವುದರಿಂದ ಎರಡು ಅರ್ಥಗಳನ್ನೂ ಬೇರೆ-ಬೇರೆಯಾಗಿ ಹೇಳಿ ತಾತ್ಪರ್ಯವನ್ನೂ ಹೇಳುವೆನು.

ಪದ್ಮನಾಭತೀರ್ಥರು ಹೇಳಿದ ಅರ್ಥ— ಶ್ರಿಯೋ ಜಾತಃ-ಶ್ರೀದೇವಿಯ ಸಮಾರಾಧನೆಗಾಗಿ ಹುಟ್ಟಿದ ಮನುಷ್ಯನು, ಶ್ರಿಯೋ-ಲಕ್ಷ್ಮಿಯ ಪ್ರೀತ್ಯರ್ಥವಾಗಿ, ಆ ಪರಿಯಾಯ-ಮನೆಯಿಂದ ಹೊರಡುತ್ತಾನೆ ಮತ್ತು ಶ್ರೀದೇವಿಯ ಉಪಾಸನೆ ಮಾಡಿ ಸಕಲೇಷ್ಟಾರ್ಥಗಳನ್ನೂ ಪಡೆಯುತ್ತಾನೆ. ಏಕೆಂದರೆ (ಶ್ರೀಃ)-ಆ ಲಕ್ಷ್ಮೀದೇವಿಯು, ಜರಿತೃಭ್ಯಃ-ತನ್ನನ್ನು ಸ್ತೋತ್ರ ಮಾಡುವವರಿಗೆ, ಶ್ರಿಯಂ-ಧನಕನಕಾದಿ ಸಂಪತ್ತನ್ನೂ, ವಯಃ-ದೀರ್ಘಾಯುಸ್ಸನ್ನೂ, ದಧಾತಿ-ಕೊಡುತ್ತಾಳೆ. ಶ್ರಿಯಂ-ಲಕ್ಷ್ಮೀದೇವಿಯನ್ನು, ವಸಾನಾಃ-ಉಪಾಸನೆ ಮಾಡುವ ಅಧಿಕಾರಿಗಳು, ಅಮೃತತ್ವಂ-ಮರಣರಹಿತವಾದ ಮೋಕ್ಷವನ್ನು, ಆಯನ್-ಹೊಂದುತ್ತಾರೆ. ವಿತದ್ರ್ಯಾ-ಜೋಡಿಯಲ್ಲಿ, ಎಂದರೆ ಮುಕ್ತರಾದ ದಂಪತಿಗಳಲ್ಲಿ, ಸಮಿಥಾ-ಇಷ್ಟಾರ್ಥಗಳು (ಸಂ. ಉಪಸರ್ಗ ಇಣ್ ಗತೌ ಅದಾದಿ ಪರಸ್ಮೈ ಧಾತುವಿನ ಮೇಲೆ 'ಸಮೀಣಃ' ಎಂಬ ಉಣಾದಿ ಸೂತ್ರದಂತೆ ೨ ಅಧ್ಯಾ, ೧ ಸೂತ್ರ— ಥಕ್ ಪ್ರತ್ಯಯ ಬಂದು ಸಮಿಥ ಎಂದಾಗಿದೆ.) ಸತ್ಯಾ-ಸತ್ಯವಾಗಿ, ಭವಂತಿ-ಆಗುತ್ತವೆ.

ತಾತ್ಪರ್ಯ— ಯಾರು ಶ್ರೀದೇವಿಯ ಉಪಾಸನೆಗಾಗಿಯೇ ಹುಟ್ಟಿ ಮನೆ ಮಠ ಬಿಟ್ಟು ಹೊರಟು ಶ್ರೀದೇವಿಯನ್ನೇ ಆರಾಧಿಸುತ್ತಾನೋ ಅವನು ಲಕ್ಷ್ಮೀದೇವಿಯ ಅನುಗ್ರಹದಿಂದ ಸಕಲೇಷ್ಟಾರ್ಥಗಳನ್ನೂ ಹೊಂದುತ್ತಾನೆ. ಏಕೆಂದರೆ ಯಾರು ಲಕ್ಷ್ಮೀದೇವಿಯನ್ನು ಶ್ರೀಸೂಕ್ತ-ಅಂಭ್ರಣೀಸೂಕ್ತಾದಿಗಳಿಂದ ಸ್ತುತಿಸಿ ಆರಾಧಿಸುತ್ತಾರೋ ಅವರಿಗೆ ಆಕೆ ಸಕಲ ಸೌಭಾಗ್ಯಗಳನ್ನೂ ದೀರ್ಘಾಯುಸ್ಸನ್ನೂ ಕೊಡುತ್ತಾಳೆ. (ಶ್ರೀಸೂಕ್ತದಲ್ಲಿ—ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ ಎಂದು ಹೇಳಿದಂತೆ ಮನೋರಥಗಳು ಸಂಕಲ್ಪ ಮಾಡಿದ್ದೆಲ್ಲಾ ನಿಜವಾಗುವುದು) ಅದಕ್ಕೂ ಹೆಚ್ಚಾಗಿ ಲಕ್ಷ್ಮೀದೇವಿಯನ್ನು ಉಪಾಸನೆ ಮಾಡುವವರು ಜರಾಮರಣರಹಿತವಾದ ಮೋಕ್ಷವನ್ನೇ ಹೊಂದುತ್ತಾರೆ. ಅಲ್ಲಿಗೆ ಪತ್ನೀಸಮೇತರಾಗಿ ಸಕಲೇಷ್ಟಾರ್ಥಗಳನ್ನೂ ಸತ್ಯವಾಗಿ ಪಡೆಯುತ್ತಾರೆ.

'ನ್ಯಾಯದೀಪಿಕಾ' ಪ್ರಕಾರ (ಗೀತಾತಾತ್ಪರ್ಯದಲ್ಲಿ) ಅರ್ಥ— (ಯಃ)-ಯಾವ ಪುರುಷನು, ಶ್ರಿಯೋ ಜಾತಃ-ಲಕ್ಷ್ಮೀದೇವಿಯ ಆರಾಧನೆಗಾಗಿ ಹುಟ್ಟಿದ್ದಾನೋ ಮತ್ತು, ಶ್ರಿಯೋ-ಲಕ್ಷ್ಮೀದೇವಿಗಾಗಿಯೇ, ಆ ಪರಿಯಾಯ-ಮನೆಯಿಂದ ಹೊರಡುತ್ತಾನೋ ಅವನು, ಶ್ರಿಯಂ-ಲಕ್ಷ್ಮೀದೇವಿಯನ್ನು, ಜರಿತೃಭ್ಯಃ-ಉಪದೇಶ ಮಾಡುವ ತನ್ನ ಗುರುಗಳಿಂದಲೇ, ಶ್ರಿಯಂ-ಸಂಪತ್ತನ್ನ, ವಯಃ-ದೀರ್ಘಾಯುಸ್ಸನ್ನೂ, ದಧಾತಿ-ಪಡೆಯುತ್ತಾನೆ. ಇದೇ ರೀತಿಯೇ, ಶ್ರಿಯಂ-ಲಕ್ಷ್ಮೀದೇವಿಯನ್ನು, ವಸಾನಾಃ-ಉಪಾಸನೆ ಮಾಡುವವರು, ಅಮೃತತ್ವಂ-ಮರಣರಹಿತವಾದ ಮುಕ್ತಿಯನ್ನು, ಆಯನ್-ಹೊಂದುತ್ತಾರೆ. ವಿತದ್ರ್ಯಾ-ಕ್ಷೀರಸಮುದ್ರದಲ್ಲಿರುವ ಲಕ್ಷ್ಮೀದೇವಿಯು ಪ್ರಸನ್ನಳಾದರೆ (ಎಂದು

ಪ್ರಮೇಯದೀಪಿಕಾರೀತ್ಯಾ ಅರ್ಥ), ಮಿತದ್ರೌ-ಗುರು-ಶಿಷ್ಯರೆಂಬ ಜೋಡಿಯಲ್ಲಿ, ಸನಿಥಾ-ಇಷ್ಟಾರ್ಥಗಳು, ಸತ್ಯಾ-ಸತ್ಯಗಳಾಗಿ, ಭವಂತಿ-ಆಗುತ್ತವೆ.

ತಾತ್ಪರ್ಯ— ಯಾವ ಪುರುಷನು ಹಿಂದಿನ ಜನ್ಮದ ಸಂಸ್ಕಾರದಿಂದ — ಹಿಂದೆ ಮಾಡಿದ ಲಕ್ಷ್ಮಿಯ ಉಪಾಸನೆಯ ಫಲವಾಗಿ ಈ ಜನ್ಮದಲ್ಲೂ ಲಕ್ಷ್ಮೀದೇವಿಯ ಉಪಾಸನೆಗಾಗಿಯೇ ಹುಟ್ಟುತ್ತಾನೋ ಮತ್ತು ಅದಕ್ಕಾಗಿ ಮನೆಯನ್ನು ಬಿಟ್ಟು (ಎಂದರೆ ಮನೆಯ ಜಂಜಾಟದಿಂದ ತಪ್ಪಿಸಿಕೊಂಡು) ಬೇರೆ ಕಡೆಗೆ ಹೋಗಿ ಗುರುಗಳು ಉಪದೇಶಿಸಿದ ಪ್ರಕಾರ ಶ್ರೀದೇವಿಯನ್ನು ಆರಾಧಿಸುತ್ತಾನೋ ಅವನಿಗೆ ಆ ಗುರುಗಳ ಮೂಲಕವಾಗಿಯೇ ಸಕಲ ಸಂಪತ್ತುಗಳೂ ದೀರ್ಘಾಯುಸ್ಸೂ ಕೂಡ ಲಭಿಸುತ್ತದೆ. ಅಷ್ಟೇ ಅಲ್ಲದೆ ಲಕ್ಷ್ಮಿಯ ನಿರಂತರ ಉಪಾಸನೆ ಮಾಡುವವರು ಮೋಕ್ಷವನ್ನೇ ಪಡೆಯುತ್ತಾರೆ. ಮತ್ತು ಮೋಕ್ಷದಲ್ಲಿ ಗುರುಶಿಷ್ಯರಿಬ್ಬರೂ ಏನೇನು ಅಪೇಕ್ಷಿಸುತ್ತಾರೋ ಆ ಸಕಲ ಇಷ್ಟಾರ್ಥಗಳೂ ತಪ್ಪದೆ ಸತ್ಯವಾಗಿ ಆಗುತ್ತವೆ.

ಸಾಯಣಭಾಷ್ಯ ರೀತ್ಯಾ ಅರ್ಥ— (ಸೋಮಃ) ಸೋಮದೇವನು (ಚಂದ್ರನು), ಶ್ರಿಯೇ-ಸಂಪತ್ತಿಗಾಗಿ, ಜಾತಃ-ಉತ್ಪನ್ನನಾಗಿದ್ದಾನೆ, ಶ್ರಿಯೇ-ಸಂಪತ್ತಿಗಾಗಿಯೇ, ಆ ನಿರಿಯಾಯ-ಹೊರ ಹೊರಡುತ್ತಾನೆ, ಜರಿತೃಭ್ಯಃ-ಸ್ತೋತೃಗಳಿಗೆ, ಶ್ರಿಯಂ-ಐಶ್ವರ್ಯವನ್ನು, ವಯಃ-ಅನ್ನವನ್ನೂ, ಆಯುಸ್ಸನ್ನೂ, ದಧಾತಿ-ಕೊಡುತ್ತಾನೋ, ಶ್ರಿಯಂ-ಸೋಮನು ಕೊಟ್ಟ ಸಂಪತ್ತನ್ನು, ವಸಾನಾಃ-ಧರಿಸಿದ ಸ್ತೋತೃಗಳು, ಅಮೃತತ್ವಂ-ಮರಣರಾಹಿತ್ಯವನ್ನು, ಆಯನ್-ಹೊಂದಿದರು (ಹೊಂದುತ್ತಾರೆ). ಮಿತದ್ರೌ-ಮಿತಗಾಮಿಯಾದ ಸೋಮದೇವನ ಸಹಾಯವಿರಲು, ಸನಿಥಾ-ಸ್ತೋತೃಗಳ ಯುದ್ಧಗಳು ಸತ್ಯವಾದ ಫಲವುಳ್ಳವುಗಳಾಗಿ, ಭವಂತಿ-ಆಗುತ್ತವೆ.

ತಾತ್ಪರ್ಯ— ಸೋಮನು ಐಶ್ವರ್ಯಕ್ಕಾಗಿ ಉತ್ಪನ್ನನಾಗಿದ್ದಾನೆ. ಮತ್ತು ಐಶ್ವರ್ಯಕ್ಕಾಗಿಯೇ ಹೊರಹೊರಡುತ್ತಾನೆ. ತನ್ನನ್ನು ಸ್ತುತಿಸುವವರಿಗೆ ಅನ್ನವನ್ನೂ ಐಶ್ವರ್ಯಾದಿ ಸಂಪತ್ತನ್ನೂ ಕೊಡುತ್ತಾನೆ. ಸೋಮನಿಂದ ಅನುಗ್ರಹೀತರಾದವರು ಮರಣವಿಲ್ಲದ ಸ್ಥಾನವನ್ನು ಪಡೆಯುತ್ತಾರೆ. ಮಿತಗಾಮಿಯಾದ ಸೋಮನ ಸಹಾಯವಿರಲು ಯುದ್ಧಗಳು ಸತ್ಯವಾದ ಫಲವುಳ್ಳವಾಗಿ ಆಗುತ್ತವೆ. ಅವರಿಗೆ ಯುದ್ಧದಲ್ಲಿ ಜಯವೇ ಆಗುತ್ತದೆ.

ಇನ್ನು "ಜಯತ್ಯಜೋ...." ಇತ್ಯಾದಿ ಮೂರು ಶ್ಲೋಕಗಳೂ ಮಹಾಭಾರತ ತಾತ್ಪರ್ಯನಿರ್ಣಯದ ಮೂರನೇ ಅಧ್ಯಾಯದಲ್ಲಿ ಮೊದಲ ಮೂರು ಶ್ಲೋಕಗಳಾಗಿದ್ದು ಕ್ರಮವಾಗಿ ವೇದವ್ಯಾಸ, ರಾಮ ಮತ್ತು ಕೃಷ್ಣರೂಪಗಳ ಸ್ತುತಿಯಾಗಿವೆ. ಅವುಗಳ ಅನ್ವಯಾರ್ಥ ತಾತ್ಪರ್ಯಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ಹೆಚ್ಚಿಗೆ ವಿವರಣೆಯನ್ನು ವಾದಿರಾಜೀಯ ಭಾವಪ್ರಕಾಶಿಕಾದಿ ವ್ಯಾಖ್ಯಾನಗಳಲ್ಲಿ ನೋಡಬಹುದು.

ವೇದವ್ಯಾಸದೇವರ ಸ್ತುತಿ

i) ಜಯತ್ಯಜೋಽಖಂಡಗುಣೋರುಮಂಡಲಃ
ಸದೋದಿತೋ ಜ್ಞಾನಮರೀಚಿಮಾಲೀ ।
ಸ್ವಭಕ್ತಹಾರ್ದೋಚ್ಚತಮೋನಿಹಂತಾ
ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥ ೧ ॥

ಕಠಿನ ಶಬ್ದಾರ್ಥ— ಅಜಃ–ಜನನರಹಿತ, ಅನಾದಿಯಾದ, ಅಖಂಡ–ಸಮಸ್ತ, ಉರು–ಹೆಚ್ಚಾದ, ಮರೀಚಿ–ಕಿರಣ, ಮರೀಚಿಮಾಲೀ–ಸೂರ್ಯ, ಹಾರ್ದ–ಹೃದಯದಲ್ಲಿರುವ, ತಮಃ–ಅಂಧಕಾರವನ್ನು, ನಿಹಂತಾ–ನಾಶಮಾಡುವಂಥಾ, ಭಾಸ್ಕರಃ–ಸೂರ್ಯ.

ಅನ್ವಯಾರ್ಥ— ಅಜಃ–ಜನನರಹಿತನಾದರೂ, ಅ–ಪರಬ್ರಹ್ಮಸ್ವರೂಪನಾದಂತಹ ತನ್ನಿಂದಲೇ, ಜ–ಅಭಿವ್ಯಕ್ತನಾದ, ಅಖಂಡ .....ಮಂಡಲ— ಅಖಂಡ–ಅನಂತವಾದ, ಗುಣ–ಜ್ಞಾನಾನಂದಾದಿ ಗುಣಗಳ, ಉರು–ಹೆಚ್ಚಾದ (ನಿರವಧಿಕವಾದ), ಮಂಡಲಃ–ಮಂಡಲವಂತಿರುವ ದೇಹವುಳ್ಳ, ಸದಾ–ಯಾವಾಗಲೂ, ಉದಿತಃ–ಉದಯಿಸಿರುವ, ಜ್ಞಾನ. ಮಾಲೀ— ಜ್ಞಾನ–ಜ್ಞಾನವೆಂಬ, ಮರೀಚಿ–ಕಿರಣಗಳ, ಮಾಲೀ–ಸಮೂಹವುಳ್ಳ, ಸ್ವ... ...ನಿಹಂತಾ— ಸ್ವ–ತನ್ನ, ಭಕ್ತ–ಭಕ್ತರ, ಹಾರ್ದ–ಹೃದಯದಲ್ಲಿರುವ, ಉಚ್ಚ–ದಟ್ಟವಾದ (ಅನಾದಿಕಾಲದಿಂದ ಬಂದ ಮತ್ತು ಅಭೇದ್ಯವಾದ), ತಮಃ–ಅಜ್ಞಾನವೆಂಬ ಕತ್ತಲೆಯನ್ನು, ನಿಹಂತಾ–ನಿಶ್ಶೇಷವಾಗಿ ನಾಶಮಾಡುವಂಥಾ, ಆತ್ಮಭಾಸ್ಕರಃ— ಆತ್ಮ–ಸ್ವಕೀಯವಾದ, ಭಾಸ್ಕರಃ–ಪ್ರಕಾಶದಿಂದ ಬೆಳಗುವ, ವ್ಯಾಸಾವತಾರಃ–ವೇದವ್ಯಾಸರೂಪಿಯಾದ, ಹರಿಃ–ಶ್ರೀಹರಿಯು, ಜಯತಿ–ಉತ್ಕೃಷ್ಟನಾಗಿದ್ದಾನೆ.

ತಾತ್ಪರ್ಯ— ಜನನರಹಿತನಾದರೂ ಜ್ಞಾನವನ್ನು ಪ್ರಚಾರ ಮಾಡುವುದಕ್ಕಾಗಿ ತನ್ನಿಂದ ತಾನೇ ವ್ಯಾಸತ್ವೇನ ಅವತಾರ ಮಾಡಿದರು. ಅವರ ದೇಹವು ಜ್ಞಾನಾನಂದಾದಿ ಅನಂತಗುಣಗಳಿಂದ ತುಂಬಿರುವಂಥಾದ್ದು. ಸೂರ್ಯನು ಲೌಕಿಕಪ್ರಕಾಶದಿಂದ ಬೆಳಗಿದರೆ ಈ ವ್ಯಾಸಸೂರ್ಯನು ಜ್ಞಾನವೆಂಬ ಕಿರಣಗಳಿಂದ ಪ್ರಕಾಶಿಸುವವನು. ಆ ಸೂರ್ಯನಿಗೆ ಉದಯಾಸ್ತಗಳುಂಟು. ಈ ಸೂರ್ಯನು ಸದಾ ಉದಯಿಸಿಯೇ ಇರುತ್ತಾನೆ. ಆ ಸೂರ್ಯನ ಪ್ರಕಾಶವು ಭಗವಂತನ ಅಧೀನವಾದುದು. ಈ ಸೂರ್ಯನು ತನ್ನ ಪ್ರಕಾಶದಿಂದಲೇ ಬೆಳಗುತ್ತಾನೆ. ಈ ಸೂರ್ಯನು ಭಕ್ತರ ಹೃದಯದಲ್ಲಿರುವ ಅನಾದಿಕಾಲೀನವಾದ ಅಜ್ಞಾನವನ್ನೂ ನಿಶ್ಶೇಷವಾಗಿ ನಾಶಮಾಡಬಲ್ಲ. ಇಂಥಾ ಶ್ರೀಹರಿಯ ಅವತಾರವೇ ಆದ ವೇದವ್ಯಾಸರು ನಿತ್ಯವೂ (ಉತ್ಕೃಷ್ಟವಾಗಿ) ಸರ್ವೋತ್ತಮರಾಗಿದ್ದಾರೆ.

ii) ಜಯತ್ಯಜೋಽಕ್ಷೀಣ ಸುಖಾತ್ಮಬಿಂಬಃ
ಸ್ವೈಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ
ರಾಮಾವತಾರೋ ಹರಿರಾತ್ಮಭಾಸ್ಕರಃ ॥ ೨ ॥

ಕಠಿನ ಶಬ್ದಾರ್ಥ— ಅಕ್ಷೀಣ-ಕ್ಷಯವಿಲ್ಲದ, ಪ್ರತತಃ-ಪ್ರಕಾಶಿಸುವ, ದುರಿಷ್ಟ-ಅನಿಷ್ಟಕರವಾದ ಸಂಸಾರವನ್ನೂ, ಶತ್ರುಗಳನ್ನೂ, ಚಂದ್ರಮಾಃ-ಚಂದ್ರ.

ಅನ್ವಯಾರ್ಥ— ಈ ಶ್ಲೋಕದಲ್ಲಿ ರಾಮಚಂದ್ರದೇವರನ್ನು ಚಂದ್ರನೆಂದು ಸ್ತುತಿಸುತ್ತಾರೆ. ಅಜಃ-ಜನನರಹಿತನಾದರೂ ತನ್ನ ಸ್ವರೂಪದಿಂದಲೇ ಅಭಿವ್ಯಕ್ತನಾದ, ಅಕ್ಷೀಣ.....ಬಿಂಬಃ— ಅಕ್ಷೀಣ-ಚಂದ್ರನಂತೆ ವೃದ್ಧಿಕ್ಷಯಗಳಿಲ್ಲದ, ಸುಖ-ಆನಂದಾದಿ ಅನಂತಗುಣಮಯವಾದ, ಆತ್ಮ-ವ್ಯಾಪ್ತವಾದ, ಬಿಂಬಃ-ಬಿಂಬವುಳ್ಳ, ಸ್ವೈ...ಪ್ರತತಃ— ಸ್ವ-ಸ್ವರೂಪಭೂತವಾದ, ಐಶ್ವರ್ಯ-ಐಶ್ವರ್ಯವೂ, ಕಾಂತಿ-ಕಾಂತಿ ಇವುಗಳಿಂದ, ಪ್ರತತಃ-ವ್ಯಾಪ್ತನಾಗಿ ಪ್ರಕಾಶಿಸುವ, ಸದೋದಿತಃ-ಯಾವಾಗಲೂ ಉದಯಿಸಿರುವ, ಸ್ವ.....ಹಂತಾ— ಸ್ವ-ತನ್ನ, ಭಕ್ತ-ಭಕ್ತರ, ಸಂತಾಪ-ತಾಪತ್ರಯಗಳನ್ನೂ, ದುರಿಷ್ಟ-ಅನಿಷ್ಟವಾದ ಸಂಸಾರವನ್ನೂ, ಶತ್ರುಗಳನ್ನೂ, ಹಂತಾ ನಾಶ ಮಾಡುವಂಥಾ, ರಾಮಾವತಾರಃ-ಶ್ರೀರಾಮಚಂದ್ರರೂಪಿಯಾದ, ಈಶಚಂದ್ರಮಾಃ-ಸ್ವತಂತ್ರನಾದ ಚಂದ್ರನಾಗಿರುವ, ಹರಿಃ-ಶ್ರೀಹರಿಯು, ಜಯತಿ-ಸರ್ವದಾ ಉತ್ಕೃಷ್ಟನಾಗಿದ್ದಾನೆ.

ತಾತ್ಪರ್ಯ— ರಾಮಚಂದ್ರದೇವರು ಚಂದ್ರನಂತೆ ಆಹ್ಲಾದಕರಾಗಿದ್ದಾರೆ. ಆದರೆ ಅವರಿಗೆ ಚಂದ್ರನಲ್ಲಿರುವ ಯಾವ ದೋಷಗಳೂ—ಚಂದ್ರ ಶುಕ್ಲಪಕ್ಷದಲ್ಲಿ ದಿನೇದಿನೇ ಬೆಳೆಯುತ್ತಾ ಹೋಗುತ್ತಾನೆ, ಕೃಷ್ಣಪಕ್ಷದಲ್ಲಿ ಕ್ಷಯಿಸುತ್ತಾ ಹೋಗುತ್ತಾನೆ—ಈ ರಾಮಚಂದ್ರದೇವರಿಗೆ ವೃದ್ಧಿಕ್ಷಯ ಎರಡೂ ಇಲ್ಲದೆ ಸದಾ ಸ್ವರೂಪಭೂತವಾದ ಅನಂತಾನಂದಾದಿ ಗುಣಗಳಿಂದ ಶೋಭಿಸುತ್ತಲೇ ಇರುತ್ತಾರೆ. ಇವರು ಸದಾ ಉದಯಿಸೇ ಇರುತ್ತಾರೆ. ಇವರಿಗೆ ಅಸ್ತವೇ ಇಲ್ಲ. ಆ ಚಂದ್ರ ಜನರ ಬಾಹ್ಯತಾಪವನ್ನು ಮಾತ್ರ ಹೋಗಲಾಡಿಸಬಲ್ಲನು, ಆದರೆ ಈ ರಾಮಚಂದ್ರದೇವರು ತನ್ನ ಭಕ್ತರ ಸಕಲ ಅನಿಷ್ಟಗಳನ್ನೂ ಪರಿಹರಿಸುವರಲ್ಲದೆ ಸಂಸಾರವೆಂಬ ದೊಡ್ಡ ಅನಿಷ್ಟವನ್ನೇ ಕಳೆಯುವರು. ಆ ಚಂದ್ರನ ಬೆಳಕು ಶ್ರೀಹರಿಯ ತೇಜಸ್ಸಿನಿಂದ ಬೆಳಗುತ್ತದೆ. ಆದರೆ ಈ ಚಂದ್ರನು ಸಕಲ ಜಗತ್ತಿಗೂ ಒಡೆಯನಾದ ಚಂದ್ರನಾಗಿದ್ದಾನೆ (ಈಶ ಚಂದ್ರಃ) ಇಂಥಾ ಚಂದ್ರಸದೃಶನಾದ ರಾಮದೇವರು ಸದಾ ಸರ್ವೋತ್ತಮರಾಗಿದ್ದಾರೆಂದು ತಾತ್ಪರ್ಯವು.

iii) ಜಯತ್ಯಸಂಖ್ಯೋರುಬಲಾಂಬುಪೂರೋ
ಗುಣೋಚ್ಚರತ್ನಾಕರ ಆತ್ಮವೈಭವಃ ।
ಸದಾಸದಾತ್ಮಜ್ಞನದೀಭಿರಾಪ್ಯಃ
ಕೃಷ್ಣಾವತಾರೋ ಹರಿರೇಕ ಸಾಗರಃ ॥ ೩ ॥

ಕಠಿನ ಶಬ್ದಾರ್ಥ— ಅಸಂಖ್ಯ-ಎಣಿಸಲಾಗದ, ಅಗಣಿತವಾದ, ಅಂಬು-ನೀರು, ಪೂರ-ತುಂಬಿದ್ದು, ರತ್ನಾಕರ-ಸಮುದ್ರ, ಆತ್ಮವೈಭವಃ-ತನ್ನಿಂದಲೇ ಪ್ರಾಪ್ತವಾದ ವೈಭವವುಳ್ಳದ್ದು. ಸದಾತ್ಮಜ್ಞ— ಸತ್-ಸರ್ವೋತ್ತಮನಾದ, ಆತ್ಮ-ಪರಮಾತ್ಮನನ್ನು, ಜ್ಞ-ತಿಳಿದ ಬ್ರಹ್ಮಾದಿಗಳೆಂಬ, ಆಪ್ಯಃ-ಹೊಂದಲ್ಪಡುವಂಥಾ, ಪ್ರಾಪ್ಯನಾದ, ಏಕ ಸಾಗರಃ— ಏಕ-ಮುಖ್ಯವಾದ ಅಥವಾ ಏಕಪ್ರಕಾರವಾದ, ಸಾಗರಃ-ಸಾಗರವು.

ಅನ್ವಯಾರ್ಥ— ಈ ಶ್ಲೋಕದಲ್ಲಿ ಶ್ರೀಕೃಷ್ಣನನ್ನು ಸಾಗರಕ್ಕೆ ಹೋಲಿಸಿ ಸಾಗರಕ್ಕಿಂತ ಶ್ರೀಕೃಷ್ಣದೇವರು ಹೇಗೆ ಅತ್ಯುತ್ತಮರಾಗಿದ್ದಾರೆಂದು ತೋರಿಸುತ್ತಾರೆ. ಅಸಂಖ್ಯ...ಪೂರಃ— ಅಸಂಖ್ಯ-ಎಣಿಸಲಾರದಷ್ಟು, ಉರು-ಶ್ರೇಷ್ಠವಾದ, ಬಲ-ಶಕ್ತಿಯೇ (ಪರಾಕ್ರಮವೇ), ಅಂಬು-ನೀರಿನಿಂದ, ಪೂರಃ-ತುಂಬಿತುಳುಕಾಡುವಂಥಾ (ಸಮುದ್ರವು ನೀರಿನಿಂದ ತುಂಬಿದೆ), ಗುಣೋಚ್ಚರತ್ನಾಕರಃ— ಗುಣ-ಜ್ಞಾನಾನಂದಾದಿಗಳಿಗೆ, ಉಚ್ಚ-ಶ್ರೇಷ್ಠವಾದ, ರತ್ನಾಕರಃ-ಸಾಗರದಂತಿರುವ (ಸಾಗರವು ಶ್ರೇಷ್ಠವಾದ ರತ್ನಗಳಿಗೆ ಆಕರವಾಗಿದೆ), ಆತ್ಮವೈಭವಃ-ತನ್ನಿಂದಲೇ ಪ್ರಾಪ್ತವಾದ ವೈಭವವುಳ್ಳ (ಕ್ಷೀರ-ಸಮುದ್ರವು ವಿಷ್ಣುವಿನ ಸಾನ್ನಿಧ್ಯದಿಂದ, ಈ ಸಮುದ್ರಗಳು ವರುಣಾದಿಗಳ ಸಾನ್ನಿಧ್ಯದಿಂದಲೂ ವೈಭವವನ್ನು ಪಡೆದಿವೆ), ಸದಾ-ಯಾವಾಗಲೂ, ಸದಾ......ನದೀಭಿಃ— ಸತ್-ಸರ್ವೋತ್ತಮನಾದ, ಆತ್ಮ-ಪರಮಾತ್ಮನನ್ನು, ಜ್ಞ-ತಿಳಿದಂಥಾ ಬ್ರಹ್ಮಾದಿ ಜ್ಞಾನಿಗಳಿಂದ, ಆಪ್ಯಃ-ಹೊಂದಲ್ಪಡುವ (ಆ ಸಮುದ್ರವು ನದಿಗಳಿಂದ ಹೊಂದಲ್ಪಡುತ್ತದೆ. ಮಳೆಗಾಲದಲ್ಲಿ ವಿಶೇಷವಾಗಿಯೂ, ಬೇಸಿಗೆಯಲ್ಲಿ ಅಲ್ಪವಾಗಿಯೂ ಹೊಂದಲ್ಪಡುತ್ತದೆ.) ಕೃಷ್ಣಾವತಾರಃ=ಕೃಷ್ಣರೂಪಿಯಾದ, ಏಕಸಾಗರಃ-ಮುಖ್ಯವಾದ ಸಾಗರವು ಅಥವಾ ಪ್ರಕಾರವಾಗಿರುವ ಸಾಗರದಂತಿರುವ, ಹರಿಃ-ಶ್ರೀಹರಿಯು, ಜಯತಿ-ಸರ್ವೋತ್ತಮನಾಗಿದ್ದಾನೆ.

ತಾತ್ಪರ್ಯ— ಶ್ರೀಕೃಷ್ಣರೂಪಿ ಪರಮಾತ್ಮನು ಅನೇಕ ವಿಷಯಗಳಲ್ಲಿ ಸಾಗರದಂತೆ ಇದ್ದರೂ ಸಾಗರದಂತೆ ಇತಿಮಿತಿಯುಳ್ಳವನಾಗಿಲ್ಲ. ಸಾಗರವು ನೀರಿನಿಂದ ತುಂಬಿರುವಂತೆ ಶ್ರೀಕೃಷ್ಣನು ಅನಂತವೂ ಅಪಾರವೂ ಆದ ಬಲದಿಂದ ತುಂಬಿದ್ದಾನೆ. ರಾಮಾವತಾರಕ್ಕಿಂತ ಕೃಷ್ಣಾವತಾರದಲ್ಲಿ ಹೆಚ್ಚು ಬಲಪ್ರದರ್ಶನ ಮಾಡಿದ್ದಾನೆಂಬುದು ವಾದಿರಾಜಸ್ವಾಮಿಗಳು

ತೋರಿಸುತ್ತಾರೆ— ಬಾಲ್ಯದಲ್ಲೇ ಪೂತನಾದ್ಯನೇಕ ಅಸುರರನ್ನು ಸಂಹಾರ ಮಾಡಿದನು. ಆಮೇಲೆ ಕಂಸಸಂಹಾರಕ್ಕೆ ಮುಂಚೆ ಕುವಲಯಾಪೀಡಾದಿಗಳನ್ನು ಮಲ್ಲರನ್ನೂ ಸಂಹರಿಸಿ ಕಂಸನನ್ನು ಸಂಹಾರ ಮಾಡಿದನು. ಆಮೇಲೆ ಜರಾಸಂಧ, ನರಕಾಸುರಾದಿಗಳನ್ನೂ ಕಾಲಯವನನನ್ನೂ ಸೋಲಿಸಿದ್ದು ಇತ್ಯಾದಿ. ಸಾಗರವು ಶ್ರೇಷ್ಠವಾದ ಕೆಲವು ರತ್ನಗಳಿಗೆ ನಿಧಿಯಾಗಿದ್ದರೆ ಈ ಕೃಷ್ಣ ಗುಣಗಳೆಂಬ ಅಸಂಖ್ಯಮಣಿಗಳಿಗೆ ನಿಧಿಯಾಗಿದ್ದಾನೆ. ಸಮುದ್ರಕ್ಕೆ ವೈಭವವು ಶ್ರೀಹರಿಯಿಂದ ಅಥವಾ ವರುಣಪ್ರಾಪ್ಯವಾದರೆ ಇವನು ಅತ್ಯ-ವೈಭವವುಳ್ಳವನು. ಸಾಗರವು ಬೇರೆಬೇರೆ ಕಾಲಗಳಲ್ಲಿ ತುಂಬಿದ ಅಥವಾ ಅಲ್ಪ ನೀರಿರುವ ನದಿಗಳಿಂದ ಹೊಂದಲ್ಪಡುತ್ತದೆ. ಆದರೆ ಶ್ರೀಕೃಷ್ಣನು ಜ್ಞಾನಿಶ್ರೇಷ್ಠರಾದ ಬ್ರಹ್ಮಾದಿಗಳಿಂದಲೂ ಯೋಗಿಗಳಿಂದಲೂ ಸದಾ (ನಿರಂತರವಾಗಿ) ಹೊಂದಲ್ಪಡುತ್ತಾನೆ. ಹೀಗೆ ಶ್ರೀಕೃಷ್ಣನು ಎದುರಿಲ್ಲದ ಮುಖ್ಯಸಾಗರದಂತಿದ್ದಾನೆ. ವೇದವ್ಯಾಸ, ರಾಮ, ಕೃಷ್ಣ ಈ ಮೂರು ರೂಪಗಳೂ ಪರಸ್ಪರಾಭಿನ್ನವಾದರೂ ವಿಶೇಷದಿಂದ ಬೇರೆಬೇರೆಯಾಗಿ ಕಾಣುವ ರೂಪತ್ರಯಗಳೆಂದು ತೋರಿಸುವುದಕ್ಕಾಗಿ ಮೂರು ರೂಪಗಳಿಗೂ ಹರಿಃ ಎಂಬ ವಿಶೇಷಣವನ್ನೇ ಸೇರಿಸಿದ್ದಾರೆ

ಮಿಕ್ಕ ಶ್ಲೋಕಗಳ ಅರ್ಥವನ್ನು ಆವಶ್ಯಕತೆ ಬಿದ್ದಲ್ಲಿ ತಿಳಿದವರಿಂದ ತಿಳಿದುಕೊಳ್ಳಬಹುದು. ಇಲ್ಲಿ ಅನಾವಶ್ಯಕವೆಂದು ಕೊಟ್ಟಿಲ್ಲ.

ಇಲ್ಲಿಗೆ ನೀರಾಜನ (ಮಂಗಳಾರತಿಯ) ಪ್ರಕರಣ ಮುಗಿಯಿತು.

ಮಂಗಳ ನೀರಾಜನ ಆದಮೇಲೆ

ಮುಂದೇನು ಮಾಡಬೇಕು ? ಎಂದರೆ ಮುಖ್ಯವಾಗಿ ೧) ಮಂತ್ರಪುಷ್ಪ, ೨) ಶಂಖ ಭ್ರಮಣ, ೩) ಪ್ರದಕ್ಷಿಣ-ನಮಸ್ಕಾರ, ೪) ರಮಾದಿ ಪೂಜಾ—ತದಂಗವಾಗಿ ಗುರು-ಪೂಜಾ ಹಸ್ತೋದಕ, ೫) ಪ್ರತ್ಯಾವಾಹನ, ೬) ಪ್ರಾರ್ಥನಾ, ೭) ಸಮರ್ಪಣ—ಇಷ್ಟು ಕಾರ್ಯಗಳು ಉಳಿಯುತ್ತವೆ. ಈಗ ಒಂದೊಂದಾಗಿ ನಿರೂಪಿಸುತ್ತಾ ಹೋಗೋಣ.

೧) ಮಂತ್ರಪುಷ್ಪ

ಈ ಕ್ರಮವನ್ನು 'ಪದ್ಯಮಾಲಾ'ದಲ್ಲಿ ಹೀಗೆ ಹೇಳಿದ್ದಾರೆ—

ಪುಷ್ಪಾಣ್ಯಷ್ಟೌ ಸಮರ್ಪ್ಯಾಥ ಮೂಲಮಂತ್ರೇಣ ವೈಷ್ಣವಃ ।
ವೇದಮಂತ್ರೈಶ್ಚ ಪೌರಾಣೈ—ರರ್ಪಯೇತ್ ಕುಸುಮಾಂಜಲಿಮ್ ॥
ಚಾಮರಂ ದರ್ಪಣಂ ಛತ್ರಂ ವಾಹನಾನಾಂ ಚ ನಿವೇದಯೇತ್ ।
ಮಹಾರಾಜೋಪಚಾರಾಂಶ್ಚ ಗೀತವಾದ್ಯನೃತ್ಯಾದಿಕಾನ್ ॥
ಸರ್ವಾನ್ ನಿವೇದಯೇದ್ಭಕ್ತ್ಯಾ ಮೂಲಮಂತ್ರೇಣ ಸಾಧಕಃ ॥

ಪ್ರಭಂಜನರ 'ಪದ್ಯಮಾಲಾ', ದ್ವಿತೀಯ ಸಂಪುಟ, ಪುಟ ೧೮

(ಅರ್ಥ) ಎಂಟು ಪುಷ್ಪಗಳು ಎಂದರೆ ಶ್ರೀ ಪ್ರಭಂಜನರು ತೋರಿಸಿರುವಂತೆ ಎಂಟು ಭಾವಪುಷ್ಪಗಳು—

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯ ನಿಗ್ರಹಃ ।
ಸರ್ವಭೂತದಯಾ ಪುಷ್ಪಂ ಕ್ಷಮಾಪುಷ್ಪಂ ತತಃಪರಂ (ಚತುರ್ಥಕಂ)॥
ಜ್ಞಾನಪುಷ್ಪಂ ತಪಃಪುಷ್ಪಂ ಧ್ಯಾನಪುಷ್ಪಂ ಚ ಸಪ್ತಮಮ್ ।
ಸತ್ಯಂ ಚೈವಾಷ್ಟಮಂ ಪುಷ್ಪ—ಮೇಭಿಸ್ತುಷ್ಯತಿ ಕೇಶವಃ ॥ ೨ ॥

ಎಂಬ ಶ್ಲೋಕವನ್ನು ಹೇಳಬೇಕು.

(ಅರ್ಥ) ಅಹಿಂಸೆಯೇ ಮೊದಲನೆಯ ಹೂವು ಎರಡನೆಯದು ಇಂದ್ರಿಯನಿಗ್ರಹ. ಸರ್ವಭೂತಗಳಲ್ಲೂ ದಯೆ ತೋರಿಸುವುದು ಎಂದರೆ ಯಾವ ಪ್ರಾಣಿಯನ್ನೂ ಹಿಂಸಿಸದೇ ಇರುವುದೇ ಮೂರನೇ ಪುಷ್ಪ. ಕ್ಷಮಾಗುಣವೇ ನಾಲ್ಕನೇ ಪುಷ್ಪ. ಜ್ಞಾನ, ತಪಸ್ಸು (ಮಂತ್ರಜಪ ಅಥವಾ ಪೂಜೆ ಅಥವಾ ವೇದಾಧ್ಯಯನ) ಮತ್ತು ಧ್ಯಾನಗಳೂ ಮೂರು ಪುಷ್ಪಗಳು. ಸತ್ಯ ಎಂದರೆ ನಿಜ ಹೇಳುವುದು (ಎಂಬುದು ಸಾಮಾನ್ಯಾರ್ಥ. ಶಾಸ್ತ್ರದಲ್ಲಿ ಹೇಳಿದಂತೆ ಆಚರಿಸುವುದು ಎಂಬುದು ಮುಖ್ಯಾರ್ಥ) ಎಂಟನೇ ಪುಷ್ಪ. (ಏಭಿಃ) ಇವು-ಗಳಿಂದ ಕೇಶವನು ಪ್ರಸನ್ನನಾಗುತ್ತಾನೆ. (ಈ ಶ್ಲೋಕಗಳು ಅಗ್ನಿಪುರಾಣದಲ್ಲಿ ಬಂದಿವೆ. 'ಕಲ್ಯಾಣ' ಎಂಬ ಹಿಂದೀ ಮಾಸಪತ್ರಿಕೆ ಅಗ್ನಿಪುರಾಣ ಸಂಚಿಕೆಯಲ್ಲಿ ಇದು ನನಗೆ ನೋಡಲು ಸಿಕ್ಕಿತು. ಶ್ರೀ ಪ್ರಭಂಜನರ 'ಪದ್ಯಮಾಲಾ'ದಲ್ಲೂ ಕೊಟ್ಟಿದ್ದಾರೆ.)

ಈ ಶ್ಲೋಕವನ್ನು ಹೇಳಿ ಮೂಲಮಂತ್ರವನ್ನು ಎಂಟಾವರ್ತಿ ಉಚ್ಚರಿಸಿ, ವೇದ-ಮಂತ್ರಗಳಿಂದಲೂ, ಪೌರಾಣಿಕ ಮಂತ್ರಗಳನ್ನೂ ಹೇಳಿ ಮಂತ್ರಪುಷ್ಪವನ್ನು ಸಮರ್ಪಿಸ ಬೇಕು. ಮಂತ್ರಪುಷ್ಪ ಎಂದರೆ ಮಂತ್ರಪೂತವಾದ (ಮಂತ್ರೋಚ್ಚಾರದಿಂದ ಪವಿತ್ರವಾದ) ಪುಷ್ಪ ಹೂವು-ತುಳಸಿ ಎಂದರ್ಥ. ನಿತ್ಯದ ಪೂಜೆಯಲ್ಲಿ ನಾವು—ಅಂದರೆ ಮಾಧ್ವರು—ಮಂತ್ರಾಕ್ಷತೆಯನ್ನು ಉಪಯೋಗಿಸುವುದಿಲ್ಲ. ಆದ್ದರಿಂದ ನಿತ್ಯದ ಪೂಜೆಯಲ್ಲಿ ಹೂವು-ತುಳಸಿಯನ್ನು ಏರಿಸಬಹುದು. ಹೂವು ತುಳಸಿ ಇಲ್ಲದಿದ್ದರೆ ಹಾಗೆಯೇ ಕೈಮುಗಿದರೂ ಸಾಕು. ಸತ್ಯನಾರಾಯಣ ಪೂಜೆ, ಅನಂತಪದ್ಮನಾಭನ ಪೂಜೆ, ವರಮಹಾಲಕ್ಷ್ಮೀ ಹಬ್ಬ, ಮೊದಲಾದ ಪರ್ವದಿನಗಳಲ್ಲಿ ಹೂವು ಮಂತ್ರಾಕ್ಷತೆ ಎಲ್ಲರ ಕೈಗೂ ಕೊಟ್ಟು ಎಲ್ಲರೂ ಏರಿಸುವುದು ಪದ್ಧತಿ. ಮತ್ತು ಮಂತ್ರಪುಷ್ಪ ಹಾಕಿದ ಮೇಲೆ ಪ್ರದಕ್ಷಿಣೆ ನಮಸ್ಕಾರ ಮಾಡುವುದೂ ಸಹ ವಾಡಿಕೆ. ಆದರೆ ನಿತ್ಯದ ಪೂಜೆಯಲ್ಲಿ ಎಲ್ಲರ ಕೈಯಲ್ಲೂ ಹೂವು ಮಂತ್ರಾಕ್ಷತೆ ಕೊಡುವುದು ರೂಢಿಯಲ್ಲಿಲ್ಲ. ಆಮೇಲೆ (ಬರೀ ಬಾಯಲ್ಲಿ) ಛತ್ರಂ ಸಮರ್ಪಯಾಮಿ, ಚಾಮರಂ ಸಮರ್ಪಯಾಮಿ, ದರ್ಪಣಂ ಸಮರ್ಪಯಾಮಿ, ಗೀತಂ, ನೃತ್ಯಂ, ಆಂದೋಳಿಕಾಂ (ಪಲ್ಲಕ್ಕಿ) ಅಶ್ವಾರೋಹಣಂ, ಗಜಾರೋಹಣಂ ಸಮರ್ಪ-

ಯಾಮಿ (ಎಂದು ಹೇಳಿ) ಸಮಸ್ತ ರಾಜೋಪಚಾರಾನ್, ದೇವೋಪಚಾರಾನ್, ಭಕ್ತ್ಯುಪ-ಚಾರಾಂಶ್ಚ ಸಮರ್ಪಯಾಮಿ (ಎಂದು ಹೇಳಿ ಭಕ್ತಿಯಿಂದ ಕೈಮುಗಿಯಬೇಕು.) ಮಠಗಳಲ್ಲೂ ದೇವಸ್ಥಾನಗಳಲ್ಲೂ ಛತ್ರ ಚಾಮರ ದರ್ಪಣಾದಿಗಳನ್ನು ನಿಜವಾಗಿಯೇ ತೋರಿಸುವರು.

ಮಂತ್ರಪುಷ್ಪ ಕಾಲದಲ್ಲಿ ಈ ಕೆಳಗಿನ ಮಂತ್ರಗಳನ್ನು (ಕೆಲವನ್ನಾದರೂ) ಪಠಿಸಿ ಅನಂತರ ಮಂತ್ರಪುಷ್ಪ ಸಮರ್ಪಿಸಬೇಕು.

ವೇದೋಕ್ತ ಮಂತ್ರಗಳು

i) ಯೋ ನಃ ಪಿತಾ ಜನಿತಾ ಯೋ ವಿಧಾತಾ
ಧಾಮಾನಿ ವೇದ ಭುವನಾನಿ ವಿಶ್ವಾ।
ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯಂತ್ಯನ್ಯಾ॥

(ಋ. ೧೦ ಮಂ., ೮೨ ಸೂ., ೩ ಋಕ್; ತೈ.ಸಂ. ೪/೬/೨/೩-)

(ತೈತ್ತಿರೀಯ ಶಾಖೆಯಲ್ಲಿ ಎರಡನೇ ಚರಣವು 'ಯೋ ನಃ ಸತೋ ಅಭ್ಯಾ ಸಜ್ಜಜಾನ' ॥ ಎಂದೂ, ನಾಲ್ಕನೇ ಪಾದವು 'ತಗ್ಂ ಸಂಪ್ರಶ್ನಂ' ಎಂದೂ ಇದೆ. ಈ ಮಂತ್ರವನ್ನು ಶ್ರೀಮದಾಚಾರ್ಯರು ಅನೇಕ ಕಡೆ ಉದಹರಿಸಿರುವುದರಿಂದ ಈ ಮಂತ್ರಕ್ಕೆ ಮಾತ್ರ ಅರ್ಥವನ್ನು ಬರೆದಿದೆ.)

ಅರ್ಥ— ಯಃ-ಯಾರು, ನಃ-ನಮಗೆ, ಪಿತಾ-ತಂದೆಯೂ, ಜನಿತಾ-(ಸಾಕುವ ತಂದೆ ಮಾತ್ರವಲ್ಲ [ನಮಗೆ]) ಜನ್ಮ ಕೊಟ್ಟವನೂ ಆಗಿದ್ದಾನೋ, ಯಃ-ಯಾರು, ವಿಧಾತಾ-ನಮ್ಮನ್ನು ಧರಿಸಿದವನೂ, ಪೋಷಕನೂ, ನಮ್ಮ ಆಗು ಹೋಗುಗಳನ್ನು ನಿಯಾಮಿಸುವವನೂ (ನಮ್ಮ ಭೂತ ಭವಿಷ್ಯತ್ತುಗಳನ್ನು ನೋಡಿಕೊಳ್ಳುವವನೂ) ಆಗಿದ್ದಾನೋ, (ಯಃ-ಯಾರು), (ನಮಗೆ ಮಾತ್ರವಲ್ಲ) ವಿಶ್ವಾ-ಸಮಸ್ತವಾದ, ಭುವನಾನಿ-

ಲೋಕಗಳನ್ನೂ, ಧಾಮಾನಿ–ಅದರಲ್ಲಿರುವ ಮನೆಗಳನ್ನೂ (ಧಾಮಾನಿ ಎಂದರೆ ಬೆಳಕು ಎಂದೂ ಅರ್ಥವಾಗುವುದರಿಂದ ಸೂರ್ಯ-ಚಂದ್ರ-ನಕ್ಷತ್ರಾದಿ ಜ್ಯೋತಿಗಳನ್ನೂ) ಅಥವಾ ಜೀವರ ಸ್ವರೂಪಗಳನ್ನೂ, ವೇದ–ತಿಳಿದವನಾಗಿದ್ದಾನೋ, ಯಃ–ಯಾವ ವಿಷ್ಣು, ಏಕಃ ಏವ–ಒಬ್ಬನು ಮಾತ್ರವೇ, ದೇವಾನಾಂ–ಬ್ರಹ್ಮಾದಿ ಸಕಲ ದೇವತೆಗಳ, ನಾಮಧಾ–ನಾಮ (ಹೆಸರು)ಗಳನ್ನು ಧರಿಸಿದ್ದಾನೆ, ಬೇರೆ ಯಾರಿಗೂ ಎಲ್ಲ ದೇವತೆಗಳ ಹೆಸರುಗಳನ್ನು ಧರಿಸುವ ಯೋಗ್ಯತೆ (ಅರ್ಹತೆ)ಯಿಲ್ಲ. ತಂ–ಆ, ಪ್ರಶ್ನಂ–ಪ್ರಶ್ನೆ ಕೇಳುವವನನ್ನು, ಅನ್ಯಾ–ಬೇರೆಯ (ಇತರ), ಭುವನಾ–ಲೋಕಗಳೂ, ಸಂ ಯಂತಿ–ಸೇರುತ್ತವೆ, ಹೊಂದುತ್ತವೆ.

ತಾತ್ಪರ್ಯ— ಆ ವಿಷ್ಣುವೊಬ್ಬನೇ ಬ್ರಹ್ಮಾದಿ ಸಕಲ ಜಗತ್ತಿಗೂ ತಂದೆಯಂತೆ ಪೋಷಕನೂ ಆಗಿರುವನಲ್ಲದೆ ನಮ್ಮೆಲ್ಲರನ್ನೂ ಸೃಷ್ಟಿ ಮಾಡುವವನೂ ಅವನೇ ಆಗಿದ್ದಾನೆ. ಅಷ್ಟೇ ಅಲ್ಲ, ನಮ್ಮ ಭೂತ-ಭವಿಷ್ಯದ್ವರ್ತಮಾನಗಳೆಲ್ಲವನ್ನೂ ಅವನೇ ರೂಪಿಸುತ್ತಾನೆ. ಅವನು ಸಕಲ ಲೋಕಗಳಲ್ಲಿರುವ ಸಮಸ್ತ ವಿಷಯಗಳನ್ನೂ ಬಲ್ಲವನಾಗಿದ್ದಾನೆ. ಆದುದರಿಂದ ಅವನೊಬ್ಬನೇ ಸಕಲ ದೇವತೆಗಳಿಗೂ ಗತಿಪ್ರದನಾದ್ದರಿಂದ ಸಕಲ ದೇವತೆಗಳ ಹೆಸರುಗಳನ್ನೂ ಧರಿಸಿದ್ದಾನೆ. ಮಿಕ್ಕ ಯಾರೂ ವಿಷ್ಣು ನಾರಾಯಣಾದಿ ಅವನ ನಾಮಗಳನ್ನು ಧರಿಸಲು ಸಾಧ್ಯವೇ ಇಲ್ಲ. ಹೀಗೆ ತಿಳಿದವನಿಗೆ ಸದ್ಗತಿಯಾಗುತ್ತದೆ.

ii) ಓಂ ॥ ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ

ನಮೋ ವಯಂ ವೈಶ್ರವಣಾಯ ಕುರ್ಮಹೇ ।

ಸ ಮೇ ಕಾಮಾನ್ ಕಾಮಕಾಮಾಯ ಮಹ್ಯಮ್

ಕಾಮೇಶ್ವರೋ ವೈಶ್ರವಣೋ ದದಾತು ।

ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ ॥

(ತೈತ್ತಿರೀಯಾರಣ್ಯಕದಲ್ಲಿ ೧ನೇ ಅರುಣಪ್ರಶ್ನದಲ್ಲಿ ೩೧ನೇ ಅನುವಾಕದಲ್ಲಿ ೧೫ನೇ ಮಂತ್ರ)

iii) ಯೋ ವೈ ತಾಂ ಬ್ರಹ್ಮಣೋ ವೇದ ಅಮೃತೇನಾವೃತಾಂ ಪುರೀಮ್ ।
ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ ಆಯುಃ ಕೀರ್ತಿಂ ಪ್ರಜಾಂ ದದುಃ ॥

(ತೈ. ಆ. ೧ನೇ ಅರುಣಪ್ರಶ್ನ, ೨೭ನೇ ಅನುವಾಕ, ೯ ಮಂತ್ರ)

iv) ಓಂ ಸ್ವಸ್ತಿ ॥ ಸಾಮ್ರಾಜ್ಯಂ ಭೋಜ್ಯಂ ಸ್ವಾರಾಜ್ಯಂ ವೈರಾಜ್ಯಂ
ಪಾರಮೇಷ್ಠ್ಯಂ ರಾಜ್ಯಂ ಮಹಾರಾಜ್ಯಮಾಧಿಪತ್ಯಮಯಂ ಸಮಂತ-
ಪರ್ಯಾಯೀ ಸ್ಯಾತ್ ಸಾರ್ವಭೌಮಃ ಸಾರ್ವಾಯುಷ ಆಂತಾದಾ
ಪರಾರ್ಧಾತ್ ಪೃಥಿವ್ಯೈ ಸಮುದ್ರಪರ್ಯಂತಾಯಾ ಏಕರಾಳಿತಿ ।
ತದಪ್ಯೇಷ ಶ್ಲೋಕೋಽಭಿಗೀತೋ ಮರುತಃ ಪರಿವೇಷ್ಟಾರೋ ಮರುತ್
ತಸ್ಯಾವಸನ್ ಗೃಹೇ । ಆವಿಕ್ಷಿತಸ್ಯ ಕಾಮಪ್ರೇರ್ವಿಶ್ವೇದೇವಾಃ ಸಭಾಸದ
ಇತಿ ॥

ಭಾಗವತ ಶ್ಲೋಕ (ಗೋಪಿಗೀತೆಯ ಕೊನೆಯ ಶ್ಲೋಕ)

ಓಂ ॥ ತಾಸಾಮಾವಿರಭೂಚ್ಛೌರಿಃ ಸ್ಮಯಮಾನ-ಮುಖಾಂಬುಜಃ ।
ಪೀತಾಂಬರಧರಃ ಸ್ರಗ್ವೀ ಸಾಕ್ಷಾನ್ಮನ್ಮಥಮನ್ಮಥಃ ॥

೨) ಶಂಖಭ್ರಮಣ

'ಪದ್ಮಮಾಲೆ'ಯ ಹೇಳಿಕೆ—

ತತಃ ಶುದ್ಧೇನ ತೋಯೇನ ಶಂಖಮಾಪೂರ್ಯ ಮುದ್ರಿಕಾಃ। ೧೧೬
ಧೇನ್ವಾದೀಃ ಸಂಪ್ರದರ್ಶ್ಯಾಥ ತೋಯಂ ಶಂಖಗತಂ ಸ್ಪೃಶೇತ್।
ಅಷ್ಟವಾರಂ ಜಪೇನ್ಮೂಲಂ ಭ್ರಾಮಯೇತ್ ತ್ರಿಃ ಪ್ರದಕ್ಷಿಣತಃ ೧೧೭
ಶಂಖೋದಕಂ ತು ತತ್ಪಾತ್ರೇ ಸ್ಥಾಪಯಿತ್ವಾ ಪೃಥಕ್ ಸುಧೀಃ ।

(ಕಠಿನ ಶಬ್ದಾರ್ಥ) ತೋಯೇನ-ನೀರಿನಿಂದ, ಆಪೂರ್ಯ-ತುಂಬಿಸಿ (ಶಂಖಕ್ಕೆ ಹಾಕಿ), ಮುದ್ರಿಕಾಃ-ಶಂಖಮುದ್ರೆ, ಚಕ್ರಮುದ್ರೆ, ಧೇನುಮುದ್ರೆಗಳನ್ನು (ಪೂಜಾ-

ಕಲ್ಪಲತಾದಲ್ಲಿ—ಶಂಖದ ಬಾಯಿಯ ಹತ್ತಿರ ಶಂಖಮುದ್ರೆಯನ್ನೂ, ಮಧ್ಯಭಾಗದಲ್ಲಿ ಧೇನುಮುದ್ರೆಯನ್ನೂ, ಹಿಂಭಾಗದಲ್ಲಿ [ಪೃಷ್ಠಭಾಗದಲ್ಲಿ] ಚಕ್ರಮುದ್ರೆಯನ್ನೂ ತೋರಿಸಬೇಕೆಂದು ಹೇಳಿದೆ.) ಶಂಖಗತಂ ತೋಯಂ–ಶಂಖದಲ್ಲಿರುವ ನೀರನ್ನು, ಸ್ಪೃಶೇತ್-ತುಳಸೀದಳ ಇಟ್ಟುಕೊಂಡು ಮುಟ್ಟಬೇಕು. ಮೂಲಂ-ನಾರಾಯಣಾಷ್ಟಾಕ್ಷರ ಮಂತ್ರವನ್ನು, ಭ್ರಾಮಯೇತ್-(ಶಂಖವನ್ನು) ತಿರುಗಿಸಬೇಕು, ಸುತ್ತಿಸಬೇಕು. ತ್ರಿಃ-ಮೂರಾವರ್ತಿ, ಪ್ರದಕ್ಷಿಣತಃ–ಪ್ರದಕ್ಷಿಣಾಕಾರವಾಗಿ, ಕಡೆಯ ಸಾಲಿನ ಅನ್ವಯ ಹೀಗೆ ಮಾಡಬೇಕು. ತತ್ ಶಂಖೋದಕಂ ತು–(ಭ್ರಮಣ ಮಾಡಿದ) ಆ ಶಂಖದ ನೀರನ್ನು, ಪೃಥಕ್ ಪಾತ್ರೇ-ಬೇರೆ ಪಾತ್ರೆಯಲ್ಲಿ, ಸ್ಥಾಪಯಿತ್ವಾ-ಇಟ್ಟು (ಬೇರೆ ಕಡೆ ತೆಗೆದಿಡಬೇಕು) ಸುಧೀಃ-ಪಂಡಿತನು, ಜ್ಞಾನಿಯು.

(ತಾತ್ಪರ್ಯ) ಮಂತ್ರಪುಷ್ಪ ಏರಿಸಿದ ಬಳಿಕ ಶಂಖಕ್ಕೆ ಶುದ್ಧವಾದ ನೀರನ್ನು ಹಾಕಿ, ಶಂಖಮುದ್ರೆ, ಧೇನುಮುದ್ರೆ, ಚಕ್ರಮುದ್ರೆಗಳನ್ನು ತೋರಿಸಿ, ತುಳಸೀ ದಳ ಇಟ್ಟು, ಆ ನೀರನ್ನು ಮೂಲಮಂತ್ರದಿಂದ ಎಂಟಾವರ್ತಿ ಅಭಿಮಂತ್ರಿಸಿ, ಆಮೇಲೆ ಆ ಶಂಖವನ್ನು ದೇವರ ಸುತ್ತಲೂ ಮೂರಾವರ್ತಿ ಪ್ರದಕ್ಷಿಣಾಕಾರವಾಗಿ ಸುತ್ತಿಸಬೇಕು. ಮೊದಲು ಪಾದದಿಂದ ಕಿರೀಟದವರೆಗೆ (ಪಾದಾದಿ ಮುಕುಟಪರ್ಯಂತಂ) ಆಮೇಲೆ ನಾಭಿಯಿಂದ ಕಿರೀಟದವರೆಗೆ (ನಾಭ್ಯಾದಿ ಮುಕುಟಪರ್ಯಂತಂ), ಕೊನೆಯ ಆವರ್ತಿ ಹೃದಯದಿಂದ ಕಿರೀಟದವರೆಗೆ (ಹೃದಯಾದಿ ಮುಕುಟಪರ್ಯಂತಂ) ಸುತ್ತಿಸಿ ಆ ಶಂಖದ ನೀರನ್ನು ಬೇರೆ ಪಾತ್ರೆಯಲ್ಲಿ ಹಾಕಿ ದೂರ ತೆಗೆದಿಡಬೇಕು.—ಇದೇ ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುವ ಶಂಖತೀರ್ಥ ಅಥವಾ ಶಂಖೋದಕ. ಶಂಖೋದಕವನ್ನು ತೀರ್ಥದ ಜೊತೆಗೆ ಬೆರೆಸಲೂಬಾರದು. ಅದನ್ನು ಪ್ರೋಕ್ಷಿಸಿಕೊಳ್ಳಬೇಕೇ ವಿನಾ ಎಂದೂ ಕುಡಿಯಬಾರದು.

ಶಂಖಭ್ರಮಣ ಮಾಡುವುದಕ್ಕೆ ಮೊದಲು ಹೀಗೆ ಸಂಕಲ್ಪ ಮಾಡಬೇಕು—

ದುಷ್ಟಯಕ್ಷರಕ್ಷಃಪಿಶಾಚಾದಿ ದುರ್ದರ್ಶನದೋಷನಿವೃತ್ತ್ಯರ್ಥಂ ದುಷ್ಟಶರೀರೇಂದ್ರಿಯಸ್ಪರ್ಶದೋಷನಿವೃತ್ತ್ಯರ್ಥಂ ಬಿಂಬಚ್ಛಾಯಾದೋಷಪರಿಹಾರಾರ್ಥಂ ಚ ಶಂಖಭ್ರಮಣಂ ಕರಿಷ್ಯೇ ॥

—ಎಂದು ಸಂಕಲ್ಪ ಮಾಡಿ ಕೆಳಗಿನ ಯಾವುದಾದರೊಂದು ಮಂತ್ರವನ್ನು ಹೇಳಿಕೊಳ್ಳುತ್ತಾ ಶಂಖಭ್ರಮಣ ಮಾಡಬೇಕು.

ಓಂ। ಇಮಾ ಆಪಃ ಶಿವತಮಾ ಇಮಾಃ ಸರ್ವಸ್ಯ ಭೇಷಜೀಃ ।
ಇಮಾ ರಾಷ್ಟ್ರಸ್ಯ ವರ್ಧನೀ ಇಮಾ ರಾಷ್ಟ್ರಭೃತೋಽಮೃತಾಃ ॥

(ಪದ್ಮಮಾಲಾ, ಪುಟ ೯೧)

*[ಇಮಾ ಆಪಃ ಶಿವಾಃ ಶುದ್ಧಾಃ ಶೀತಲಾಃ ಸಂತು ಪೂತಾಃ
ಸೂರ್ಯಸ್ಯ ರಶ್ಮಿಭಿಃ ॥]

ಈ ಭಾಗವು ಶ್ರೀ ವಿ. ಪ್ರಭಂಜನಾಚಾರ್ಯರ ಪದ್ಯಮಾಲಾದಲ್ಲಿ ಮಾತ್ರ ಇದೆ. ಅಲ್ಲಿ ಇದು 'ಆಗಮಖಿಲ ಮಂತ್ರ'ವೆಂದೂ ಸೂಚಿಸಿದ್ದಾರೆ.

ಅಥವಾ (ಅ) ಕುಂಭಕೋಣದ 'ದೇವತಾರ್ಚನ ಪದ್ಧತಿ'ಯಲ್ಲಿ ಈ ಋಙ್ಮಂತ್ರ ಕೊಟ್ಟಿದ್ದಾರೆ—

ಓಂ। ತವ ಭ್ರಮಾಸ ಆಶುಯಾ ಪತಂ—
ತ್ಯನು ಸ್ಪೃಶ ಧೃಷತಾ ಶೋಶುಚಾನಃ।
ತಪೂಂಷ್ಯಗ್ನೇ ಜುಹ್ವಾ ಪತಂಗಾ—
ನಸಂದಿತೋ ವಿಸೃಜ ವಿಷ್ವಗುಲ್ಕಾಃ ॥

(ಋ. ೪ ಮಂ., ೪ ಸೂ., ೨ ಋಕ್)

ಅಥವಾ ತೆಲುಗುಲಿಪಿಯ ಆಹ್ನಿಕಮಂಜರಿಯಲ್ಲಿ ಈ ಮಂತ್ರ ಕೊಟ್ಟಿದೆ—

ಓಂ। ಓಷ್ಟಾಭಿಧಾನಾ ನ ಕುಲ—ದಂತೈಃ ಪರಿವೃತಾ ಪವಿಃ।
ಸರ್ವಸ್ಯೈವಾಚ ಈಶಾನಾ ಚಾರು ಮಾಮಿಹ ವಾದಯ ॥

iii) ಪ್ರದಕ್ಷಿಣ—ನಮಸ್ಕಾರ

ಪದ್ಯಮಾಲಾ ಹೇಳಿಕೆ—

ಪ್ರದಕ್ಷಿಣ-ನಮಸ್ಕಾರಾನ್ ಸೂಕ್ತಪಾಠಂ ತತಶ್ಚರೇತ್ ॥ ೧೧೮ ॥

(ಅರ್ಥ) ಶಂಖಭ್ರಮಣ ಮಾಡಿದ ನಂತರ (ಜಗಲಿಯ-ಕಟ್ಟೆಯ ಮೇಲೆ ಕುಳಿತು-ಕೊಂಡಿದ್ದರೆ ಕಟ್ಟೆ ಇಳಿದು ಬಂದು) ಪ್ರದಕ್ಷಿಣ-ನಮಸ್ಕಾರಗಳನ್ನು ಹಾಕಿ ಸ್ತೋತ್ರ-ಪಾಠಗಳನ್ನು (ಜಿತಂತೇ ಸ್ತೋತ್ರ, ವಿಷ್ಣುಸಹಸ್ರನಾಮ, ಈಶಾವಾಸ್ಯೋಪನಿಷತ್ ಅಥವಾ ಅಣುಭಾಷ್ಯ ಇತ್ಯಾದಿಗಳನ್ನು) ಪಠಿಸಬೇಕು.

ಸೂಚನೆ— ಕೆಲವರು ದೇವರನ್ನೆಲ್ಲಾ ಭುಜಂಗಿಸಿದ ಮೇಲೆ (ಕಟ್ಟೆಟ್ಟ ಮೇಲೆ) ಆ ಪೆಟ್ಟಿಗೆಯನ್ನು ಮಧ್ಯೆ ಇಟ್ಟು ಅದಕ್ಕೇ ಪ್ರದಕ್ಷಿಣ ನಮಸ್ಕಾರ ಹಾಕುವ ಪದ್ಧತಿಯಿದೆ.

ಅವರು ಹಾಗೆಯೇ ಮಾಡಬಹುದು. ಪೂಜೆ ನೋಡುತ್ತ ಇದ್ದವರು ಮಂಗಳಾರತಿ ತೆಗೆದುಕೊಂಡು ಪ್ರದಕ್ಷಿಣ-ನಮಸ್ಕಾರ ಹಾಕುವರು—ಇದು ಆದಶ್ಯಾದರೂ ಅನ್ವಯಿಸುತ್ತದೆ ಎಂದು ಇಟ್ಟುಕೊಳ್ಳಬಹುದು. ಒಟ್ಟಿನಲ್ಲಿ ಪ್ರದಕ್ಷಿಣ ನಮಸ್ಕಾರ ಪೂಜೆಯ ಒಂದು ಅಂಗವೆಂದು ತಿಳಿಸುವುದೇ ಟೀಕಾಕಾರರ ಅಭಿಪ್ರಾಯ.

ಪ್ರದಕ್ಷಿಣೆ-ನಮಸ್ಕಾರದ ಕೆಲವು ಮಂತ್ರಗಳು

ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ ।
ತಾನಿ ತಾನಿ ವಿನಶಂತಿ ಪ್ರದಕ್ಷಿಣ ಪದೇ ಪದೇ ॥ ೧ ॥

(ಶಬ್ದಾರ್ಥ) ಯಾನಿ ಕಾನಿ ಚ-ಯಾವ ಯಾವ, ತಾನಿ ತಾನಿ-ಅವೆಲ್ಲವೂ, ಪದೇ ಪದೇ-ಹೆಜ್ಜೆ ಹೆಜ್ಜೆಗೂ.

(ತಾತ್ಪರ್ಯ) ಜನ್ಮ-ಜನ್ಮಾಂತರಗಳಲ್ಲಿ ಏನೇನು ಪಾಪವನ್ನು ಮಾಡಿದ್ದೇವೆಯೋ ಅದೆಲ್ಲವೂ ಪ್ರದಕ್ಷಿಣೆ ಮಾಡಿದರೆ ಹೆಜ್ಜೆ ಹೆಜ್ಜೆಗೂ ನಾಶವಾಗಿಹೋಗುತ್ತವೆ.

ಪಾಪೋಽಹಂ ಪಾಪಕರ್ಮಾಽಹಂ ಪಾಪಾತ್ಮಾ ಪಾಪಸಂಭವಃ ।
ತ್ರಾಹಿ ಮಾಂ ಕೃಪಯಾ ಕೃಷ್ಣ ಶರಣಾಗತವತ್ಸಲ ॥ ೨ ॥

(ಶಬ್ದಾರ್ಥ) ಪಾಪಾತ್ಮಾ-(ಆತ್ಮಾ-ದೇಹ) ಪಾಪಮಯವಾದ ದೇಹವುಳ್ಳವನು, ಸಂಭವಃ-ಹುಟ್ಟಿದವನು, ತ್ರಾಹಿ (ತ್ರಾ ಧಾತುವಿಗೆ ರಕ್ಷಿಸು ಎಂದರ್ಥ) ನನ್ನನ್ನು ರಕ್ಷಿಸು ಕಾಪಾಡು, ವತ್ಸಲ—(ವತ್ಸ-ಕರುವನ್ನು, ಮಗುವನ್ನು, ಲ-ಆದರಿಸು)-ಮಕ್ಕಳಂತೆ ಆದರಿಸುವವನೇ.

(ತಾತ್ಪರ್ಯ) ಹೇ ಕೃಷ್ಣ! ಮೊರೆಹೊಕ್ಕವರನ್ನು ಮಕ್ಕಳಂತೆ ಆದರಿಸುವ (ಪ್ರೀತಿಸುವ) ಹೇ ಸ್ವಾಮಿಯೇ! ನಾನು ಮಹಾಪಾಪಿಷ್ಠ. ಬರೀ ಪಾಪಕೃತ್ಯಗಳನ್ನೇ ಮಾಡುತ್ತಿರುತ್ತೇನೆ. ನನ್ನ ದೇಹವೆಲ್ಲವೂ ಪಾಪಮಯವಾಗಿದೆ. ನಾನು ಹಿಂದೆ ಮಾಡಿದ ಪಾಪಗಳ ಫಲವಾಗಿಯೇ ಈ ಜನ್ಮ ತಾಳಿದ್ದೇನೆ. (ಈಗಲೂ ಪಾಪ ಮಾಡುತ್ತಿರುವುದರಿಂದ ನಾನು ಉದ್ಧಾರವಾಗುವ ಸಂಭವವೇ ಇಲ್ಲ.) ಆದ್ದರಿಂದ ದಯಮಾಡಿ ನನ್ನನ್ನು (ಈ ಪಾಪಕೂಪದಿಂದ ಮೇಲೆತ್ತಿ) ರಕ್ಷಿಸು.

ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ।
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ಜನಾರ್ದನ ॥ ೩ ॥

(ಶಬ್ದಾರ್ಥ) ಅನ್ಯಥಾ-ನೀನು ರಕ್ಷಿಸದಿದ್ದರೆ ಬೇರೆಯ ಮಾರ್ಗ, ರಕ್ಷ ರಕ್ಷ-ರಕ್ಷಿಸು, ರಕ್ಷಿಸು, ಕಾಪಾಡು, ಕಾಪಾಡು (ಆದರದಲ್ಲಿ ದ್ವಿರುಕ್ತಿಯು ಬಂದಿದೆ.)

(ತಾತ್ಪರ್ಯ) ನಿನ್ನನ್ನು ಬಿಟ್ಟರೆ ಬೇರೆ ಯಾರೂ ಶರಣು ಹೋಗುವುದಕ್ಕೆ ತಕ್ಕವರಿಲ್ಲ. ನೀನೇ ನನಗೆ ರಕ್ಷಕನು—ಆದ್ದರಿಂದ ನಿನ್ನನ್ನೇ ಮೊರೆಹೊಕ್ಕಿದ್ದೇನೆ. ಆದ್ದರಿಂದ ಹೇ ಜನಾರ್ದನ, ಕೃಪಾದೃಷ್ಟಿಯಿಂದ ನನ್ನನ್ನು ರಕ್ಷಿಸು ರಕ್ಷಿಸು.

ಸೂಚನೆ—ಅನೇಕರು 'ರಕ್ಷ ರಕ್ಷ' ಎಂದು ಹೇಳಿಕೊಳ್ಳದೆ 'ರಕ್ಷ ರಕ್ಷೋ ಜನಾರ್ದನ' ಎಂದು ಅಶುದ್ಧ ಹೇಳುತ್ತಾರೆ. ಅದು ಕೇವಲ ಅಭ್ಯಾಸ. ಏಕೆಂದರೆ ಅದನ್ನು ಪದಚ್ಛೇದ ಮಾಡಿದರೆ—ರಕ್ಷಃ, ರಕ್ಷಃ, ಜನಾರ್ದನ ಎಂದಾಗುತ್ತದೆ. ಸಂಸ್ಕೃತದಲ್ಲಿ ರಕ್ಷಃ ಎಂದರೆ ರಾಕ್ಷಸ ಎಂದೇ ಅರ್ಥ; ಆದ್ದರಿಂದ ಈ ವಾಕ್ಯದ ಅರ್ಥ 'ಎಲೈ ರಾಕ್ಷಸನಾದ ಜನಾರ್ದನನೇ! ನನ್ನನ್ನು ರಕ್ಷಿಸು' ಎಂದು ಅರ್ಥವಾಗುತ್ತದೆ. ರಕ್ಷಿಸುವವನನ್ನು 'ರಾಕ್ಷಸನೇ' ಎಂದು ಕೂಗಿದರೆ ಅವನಿಗೇನು ಕರುಣೆ ಬರುತ್ತದೆ? ಆದ್ದರಿಂದ 'ರಕ್ಷ ರಕ್ಷೋ ಜನಾರ್ದನ' ಎಂದು ಖಂಡಿತ ಹೇಳಬೇಡಿ—ಎಚ್ಚರಿಕೆಯಿರಲಿ.

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ ।
ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಽಷ್ಟಾಂಗ ಈರಿತಃ ॥

(ಶಬ್ದಾರ್ಥ) ಉರಸಾ-ಎದೆಯಿಂದಲೂ, ದೃಷ್ಟ್ಯಾ-ದೃಷ್ಟಿಯಿಂದಲೂ, ವಚಸಾ-ಮಾತಿನಿಂದಲೂ—ಎಂದರೆ ಬಾಯಲ್ಲಿ ಮಂತ್ರ ಹೇಳಿಕೊಳ್ಳುತ್ತಾ, ಪದ್ಭ್ಯಾಂ-ಎರಡು ಕಾಲುಗಳಿಂದಲೂ, ಜಾನುಭ್ಯಾಂ-ಎರಡು ಮಂಡಿಗಳಿಂದಲೂ (ಮೊಣಕಾಲುಗಳಿಂದಲೂ) ಅಷ್ಟಾಂಗಃ-ಎಂಟು ಅಂಗಗಳಿಂದ ಕೂಡಿದ್ದು, ಈರಿತಃ-ಹೇಳಲ್ಪಟ್ಟಿದೆ, ಪ್ರಣಾಮಃ-ನಮಸ್ಕಾರವು.

(ತಾತ್ಪರ್ಯ) ನಮಸ್ಕಾರ ಹಾಕುವಾಗ ಎದೆಯನ್ನು ನೆಲಕ್ಕೆ ತಗುಲಿಸಬೇಕು, ತಲೆಯನ್ನು ಹಾಗೆಯೇ ನೆಲಕ್ಕೆ ಮುಟ್ಟಿಸಬೇಕು. ದೃಷ್ಟಿಯಿಂದ ದೇವರ ಮೂರ್ತಿಯನ್ನು ನೋಡುತ್ತಾ ನೋಡುತ್ತಾ ನಮಸ್ಕಾರ ಮಾಡಬೇಕು; ಎಲ್ಲೋ ನೋಡುತ್ತಾ ನಮಸ್ಕಾರ ಮಾಡಬಾರದು. ಮನಸ್ಸಿನಿಂದ ಆ ಭಗವಂತನನ್ನು ನೆನೆಸುತ್ತಿರಬೇಕು. ಬಾಯಿಂದ ಸ್ತೋತ್ರವನ್ನು—ಈ ಮಂತ್ರಗಳನ್ನು—ಹೇಳುತ್ತಿರಬೇಕು. ಎರಡು ಕಾಲುಗಳನ್ನೂ ಚಾಚಿ ಎರಡನ್ನೂ ಭೂಮಿಗೆ ಮುಟ್ಟಿಸುತ್ತಿರಬೇಕು. ಎರಡು ಕೈಗಳನ್ನು ಜೋಡಿಸಿ ತಲೆಯ ಮುಂದಕ್ಕೆ ಚಾಚಬೇಕು. ಎರಡು ಮಂಡಿಗಳನ್ನೂ ನೆಲಕ್ಕೆ ಮುಟ್ಟಿಸುತ್ತಾ ನಮಸ್ಕಾರ ಮಾಡಬೇಕು. ಹೀಗೆ ಎಂಟು ಅಂಗಗಳನ್ನೂ ಬಳಸಿಕೊಂಡೇ ನಮಸ್ಕಾರ ಮಾಡಬೇಕು—ಎಂದು ಪಂಡಿತರಿಂದ (ಜ್ಞಾನಿಗಳಿಂದ) ಹೇಳಲ್ಪಟ್ಟಿದೆ.

ಶಾಠ್ಯೇನಾಪಿ ನಮಸ್ಕಾರಂ ಕುರ್ವತಃ ಶಾರ್ಙ್ಗಪಾಣಯೇ ।
ಶತಜನ್ಮಾರ್ಜಿತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥ ೫ ॥

(ಶಬ್ದಾರ್ಥ) ಶಾಠ್ಯೇನಾಪಿ-ಕೇವಲ ಡಾಂಭಿಕತನಕ್ಕಾಗಿಯೇ (ಎಳ್ಳಷ್ಟೂ ಭಕ್ತಿ ಇಲ್ಲದೆ ಎಂಬ ಧ್ವನಿ—ಭಾವ—ಅಡಗಿದೆ), ಕುರ್ವತಃ-(ವರ್ತಮಾನ ಕೃದಂತರೂಪ) ಮಾಡುವವನಿಗೂ, ಶಾರ್ಙ್ಗಪಾಣಯೇ-ಶಾರ್ಙ್ಗವೆಂಬ ಧನುಸ್ಸನ್ನು ಕೈಯಲ್ಲಿ ಹಿಡಿದ ವಿಷ್ಣುವಿಗೆ, ಅರ್ಜಿತಂ-ಸಂಪಾದಿಸಿದ,

(ತಾತ್ಪರ್ಯ) ಶ್ರೀವಿಷ್ಣುವಿಗೆ, ಈಷನ್ಮಾತ್ರವೂ ಭಕ್ತಿಯಿಲ್ಲದೆ—ಕೇವಲ ಡಾಂಭಿಕತನಕ್ಕಾಗಿಯೇ—ನಮಸ್ಕಾರ ಮಾಡುವವನಿಗೂ ನೂರು ಜನ್ಮಗಳಲ್ಲಿ ಸಂಪಾದಿಸಿದ ಪಾಪವೂ ಆ ಕ್ಷಣ ನಾಶವಾಗಿಹೋಗುತ್ತದೆ. ಹೀಗಿರುವಾಗ ಭಕ್ತಿಯಿಂದ—ಶ್ರದ್ಧೆಯಿಂದ—ವಿಶ್ವಾಸದಿಂದ ನಮಸ್ಕಾರ ಮಾಡಿದರೆ ಕೋಟಿ ಜನ್ಮಗಳಲ್ಲಿ ಮಾಡಿದ ಪಾಪವೂ ನಾಶವಾಗುತ್ತದೆ ಎಂಬುದರಲ್ಲಿ ಅತಿಶಯವೇನಿದೆ? ಎಂದು ಭಾವ.

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಃ ಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ೬ ॥

(ಶಬ್ದಾರ್ಥ) ಪ್ರಣತಃ ನಮಸ್ಕಾರ ಮಾಡುವವನ, ಕ್ಲೇಶ-ಕಷ್ಟ, ಆಪತ್ತು.

(ತಾತ್ಪರ್ಯ) ವಸುದೇವ ದೇವಕಿಯರ ಮಗನಾದ ಶ್ರೀಕೃಷ್ಣನಿಗೆ, ಅಥವಾ ಸಕಲ ಜಗತ್ತುಗಳನ್ನೂ ಹೊಟ್ಟೆಯಲ್ಲಿ ಧರಿಸಿರುವುದರಿಂದಲೂ, ಇಡೀ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವುದರಿಂದಲೂ ವಾಸುದೇವನೆಂದು ಹೇಳಲ್ಪಡುವ (ಇದು 'ವಾಸನಾತ್ ವಾಸುದೇವೋಸಿ' ಎಂಬ ಭಾರತಶ್ಲೋಕದ ಅರ್ಥ.) ಸಕಲ ಪಾಪಗಳನ್ನೂ ಪರಿಹರಿಸುವುದರಿಂದ ಶ್ರೀಹರಿ ಎಂದು ಕರೆಯಲ್ಪಡುವ, (ಪರಮ-ಸರ್ವೋತ್ತಮನಾದ, ಆತ್ಮಾ-ಪುರುಷ) ಸರ್ವೋತ್ತಮ ಪುರುಷನಾದ್ದರಿಂದ ಪರಮಾತ್ಮನೆಂದು ಕರೆಯಲ್ಪಡುವ, (ಗೋ-ಗೋವುಗಳು ಅಥವಾ ವೇದವಾಕ್ಯಗಳು, ವಿಂದ-ತಿಳಿಯಲ್ಪಡುವವನು) ಗೋವುಗಳನ್ನು ಕಾಪಾಡಿದ್ದರಿಂದಲೂ, ಗೋಬ್ರಾಹ್ಮಣರನ್ನು ಸಂರಕ್ಷಿಸುವುದರಿಂದಲೂ, ಸಕಲ ವೇದ-ಪ್ರತಿಪಾದ್ಯನಾದ್ದರಿಂದಲೂ ಗೋವಿಂದನೆಂದು ಹೆಸರುಳ್ಳ, ನಮಸ್ಕಾರ ಮಾಡುವವರ ಸಕಲ ಆಪತ್ತು (ಕ್ಲೇಶ)ಗಳನ್ನೂ ನಾಶ ಮಾಡುವಂಥಾ ಹೇ ಭಗವಂತ, ನಿನಗೆ ಅನಂತಾನಂತ ನಮಸ್ಕಾರಗಳು. (ಇದರಲ್ಲಿ ನಮಃ ಎಂದು ದ್ವಿರುಕ್ತಿ ಬಂದಿದೆ)

ತೀರ್ಥಕೋಟಿ ಸಹಸ್ರಾಣಿ ವ್ರತಕೋಟಿಶತಾನಿ ಚ ।
ನಾರಾಯಣಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥ ೭ ॥

(ತಾತ್ಪರ್ಯ) ಸಾವಿರ ಕೋಟಿಗಟ್ಟಲೆ ತೀರ್ಥಕ್ಷೇತ್ರಗಳೂ ನೂರಾರು ಕೋಟಿ ವ್ರತಗಳೂ ಭಕ್ತಿಯಿಂದ ನಾರಾಯಣನಿಗೆ ನಮಸ್ಕಾರ ಮಾಡಿದ ಹದಿನಾರನೇ ಒಂದು ಅಂಶ ಪುಣ್ಯವನ್ನೂ ಕೊಡಲಾರವು.

ಏಕೋಽಪಿ ಕೃಷ್ಣಸ್ಯ ಕೃತ ಪ್ರಣಾಮೋ
ದಶಾಶ್ವಮೇಧೇನ ಕೃತೇನ ತುಲ್ಯಃ ।
ದಶಾಶ್ವಮೇಧೀ ಪುನರೇತಿ ಜನ್ಮ
ಕೃಷ್ಣಪ್ರಣಾಮೋ ನ ಪುನರ್ಭವಾಯ ॥ ೮ ॥

(ಶಬ್ದಾರ್ಥ) ಏಕಃ ಅಪಿ- ಒಂದೇ ಆದರೂ, ತುಲ್ಯಃ–ಸರಿಸಮಾನ, ಜನ್ಮ ಏತಿ- ಮತ್ತೆ ಹುಟ್ಟುತ್ತಾನೆ (ಜನ್ಮವನ್ನು ಎತ್ತುತ್ತಾನೆ). ಪುನಃ - ಮತ್ತೆ, ಭವಾಯ–ಸಂಸಾರ-ಸಾಗರದಲ್ಲಿ ಬೀಳುವುದು.

(ತಾತ್ಪರ್ಯ) ಶ್ರೀಕೃಷ್ಣನಿಗೆ ಭಕ್ತಿಯಿಂದ ಒಂದೇ ಒಂದು ನಮಸ್ಕಾರ ಮಾಡುವುದೂ ಕೂಡ ಹತ್ತು ಅಶ್ವಮೇಧ ಮಾಡಿದ್ದಕ್ಕೆ ಸರಿಸಮಾನವೆಂದು ತಿಳಿದಿರಾ (ಎಂದು ಕೇಳು ಸ್ವರವಿದೆ) ಛೇ! ಅದಕ್ಕಿಂತಲೂ ಹೆಚ್ಚಿನ ಪುಣ್ಯ. (ಅದನ್ನೇ ಉತ್ತರಾರ್ಧದಿಂದ ಸಮರ್ಥಿಸುತ್ತಾರೆ.) ಹತ್ತು ಅಶ್ವಮೇಧ ಯಾಗಗಳನ್ನು ಮಾಡಿದರೂ ಕೂಡ ಅವನು ಮತ್ತೆ ಹುಟ್ಟಲೇ ಬೇಕು (ಅವನಿಗೆ ಸಂಸಾರಬಂಧನ ತಪ್ಪುವುದಿಲ್ಲ ಎಂದು ಭಾವ) ಆದರೆ ಕೃಷ್ಣನಿಗೆ ಭಕ್ತಿಯಿಂದ ನಮಸ್ಕಾರ ಹಾಕಿದರೆ ಮತ್ತೆ ಈ ಸಂಸಾರದಲ್ಲಿ ಬೀಳುವುದೇ ಇಲ್ಲ —ಮುಕ್ತನಾಗಿ ಹೋಗುತ್ತಾನೆ ಎಂದು ಭಾವ.

ಶ್ರೀಮದಾಚಾರ್ಯರು ರಚಿಸಿರುವ 'ಕೃಷ್ಣಾಮೃತಮಹಾರ್ಣವ' ಎಂಬ ಚಿಕ್ಕ ಗ್ರಂಥದಲ್ಲಿ (ಸುಮಾರು ಇನ್ನೂರು ನಲವತ್ತು ಶ್ಲೋಕಗಳಲ್ಲಿ) ವಿಷ್ಣುನಾಮಸ್ಮರಣೆ, ವಿಷ್ಣುನೈವೇದ್ಯ, ಏಕಾದಶೀ ವಿಚಾರ, ಸಾಲಿಗ್ರಾಮದ ಮಹಿಮೆ, ತೀರ್ಥದ ಮಹಿಮೆ, ಮೊದಲಾದ ಅನೇಕ ಉಪಯುಕ್ತ ವಿಚಾರಗಳನ್ನು ಹೇಳಿದ್ದಾರೆ.

iv) ರಮಾದಿಗಳ ಪೂಜೆ, ಗುರುಪೂಜೆ, ಹಸ್ತೋದಕ, ಇತ್ಯಾದಿ—

ಪದ್ಯಮಾಲಾ ಹೇಳಿ

ರಮಾ ಬ್ರಹ್ಮಾದಿ ದೇವಾನಾಂ ದತ್ವಾ ತೀರ್ಥಾದಿಕಂ ಬಲಿಮ್ ॥೧೯॥

(ಅರ್ಥ) ಅನಂತರ ರಮಾ ಬ್ರಹ್ಮಾದಿ ದೇವತೆಗಳಿಗೂ (ಉಪಲಕ್ಷಣಯಾ ಗುರುಗಳಿಗೂ) ಅಭಿಷೇಕ ಮಾಡಿ ತೀರ್ಥವನ್ನು ಕೊಟ್ಟು, ವಿಷ್ಣುವಿಗೆ ಸಮರ್ಪಿಸಿದ ನೈವೇದ್ಯವನ್ನೇ ಸಮರ್ಪಿಸಬೇಕು (ಮತ್ತು ವಿಷ್ಣುವಿಗೆ ತೋರಿಸಿದ ಮಂಗಳಾರತಿಯನ್ನೇ ಪುನಃ ಮಾಡಬೇಕು)

ಇಲ್ಲಿ ಬ್ರಹ್ಮದೇವರೆಂದು ಹೇಳಿದ್ದರೂ ಬ್ರಹ್ಮದೇವರಿಗೇ ಬೇರೆ ಪೂಜೆ ಎಲ್ಲೂ ಹೇಳಿಲ್ಲವಾದ್ದರಿಂದ ವಾಯುದೇವರೆಂದೇ ಗ್ರಹಣ ಮಾಡಬೇಕು. 'ಆದಿ' ಶಬ್ದದಿಂದ ಗರುಡದೇವರನ್ನೂ ಶೇಷದೇವರನ್ನೂ ಗುರುಗಳನ್ನೂ ತೆಗೆದುಕೊಳ್ಳಬೇಕು—ಈಗ ಅನೇಕ

ಮನೆಗಳಲ್ಲಿ ಮಂತ್ರಾಲಯದ ರಾಯರ ವೃಂದಾವನವಿರುವುದು ಹೆಚ್ಚು – ಮಿಕ್ಕ ಗುರುಗಳ ವೃಂದಾವನವಿರುವುದು ಬಹು ವಿರಳ. ಆದ್ದರಿಂದ ಗುರುಪೂಜೆ ಎಂದರೆ ವೃಂದಾವನಗಳ ಪೂಜೆ ಎಂದೇ ಅರ್ಥ ಮಾಡಿಕೊಳ್ಳಬೇಕು. ಬೇರೆ ವೃಂದಾವನಗಳಿದ್ದರೆ ರಾಯರ ಹಿಂದಿನವರೋ ಈಚಿನವರೋ ನೋಡಿಕೊಂಡು ತಾರತಮ್ಯಪ್ರಕಾರ ಅಭಿಷೇಕ ಮಾಡಿ, ತೀರ್ಥ ಕೊಟ್ಟು, ಗಂಧಾಕ್ಷತೆ-ತುಳಸ್ಯಾದಿಗಳನ್ನು ಸಮರ್ಪಿಸಬೇಕು

ಮದ್ರಾಸಿನ ಲಕ್ಷ್ಮೀನಾರಾಯಣ ಉಪಾಧ್ಯಾಯರು 'ಸದಾಚಾರಸ್ಮೃತಿ' ವ್ಯಾಖ್ಯಾನದಲ್ಲೂ ಶ್ರೀ ಪ್ರಭಂಜನಾಚಾರ್ಯರು 'ಪದ್ಯಮಾಲಾ'ದಲ್ಲೂ ಬೇರೆ ದೇವತೆಗಳ ಯಾವ ಪ್ರತಿಮೆಯನ್ನೂ ಪೂಜಿಸಬಾರದು ಎಂಬ ಬಗ್ಗೆ ಪ್ರಮಾಣ ಕೊಟ್ಟಿದ್ದಾರೆ. ಪದ್ಮಪುರಾಣದಲ್ಲಿ ಹೀಗೆ ಹೇಳಿದೆಯಂತೆ— (ಪ್ರಭಂಜನರ ಪದ್ಯಮಾಲಾ, ದ್ವಿ.ಸಂ., ಪುಟ ೯೪)

ವಿಷ್ಣೋಶ್ಚ ಪುರತೋ ನೈವ ಹ್ಯನ್ಯಸ್ಯ ಪ್ರತಿಮಾಂ ಯಜೇತ್ ।
ವರ್ಜಯಿತ್ವಾ ಹನೂಮಂತಂ ಶೇಷಂ ಗರುಡಮೇವ ಚ ॥

(ಶಬ್ದಾರ್ಥ) ಪುರತಃ-ಮುಂದೆ, ಮುಂದುಗಡೆ, ನೈವ ಯಜೇತ್-ಪೂಜಿಸಲೇ ಬಾರದು (ಸರ್ವಥಾ ಪೂಜೆ ಮಾಡಬಾರದು), ವರ್ಜಯಿತ್ವಾ-ಬಿಟ್ಟು.

(ತಾತ್ಪರ್ಯ) ವಿಷ್ಣುವಿನ ಮುಂದುಗಡೆ ಹನುಮಂತ, ಗರುಡ, ಶೇಷ ಈ ದೇವರುಗಳ ಪ್ರತಿಮೆಗಳನ್ನು ಬಿಟ್ಟು ಬೇರೆ ಪ್ರತಿಮೆಗಳನ್ನು ಪೂಜಿಸಲೇಬಾರದು.

ಇಲ್ಲಿ 'ವಿಷ್ಣೋಶ್ಚ ಪುರತಃ' ಎಂಬುದಕ್ಕೆ ಪ್ರಾಧಾನ್ಯತೆ ಕೊಟ್ಟು ವಿಷ್ಣುವಿಗೆ ಮಾಡಿದಂತೆ ಅಗ್ರಪೂಜಾದಿಗಳನ್ನು ಮಾಡಕೂಡದು ಎಂದಿಟ್ಟುಕೊಳ್ಳುವುದು ಉತ್ತಮವೆಂದು ಕಾಣುತ್ತದೆ. ಏಕೆಂದರೆ ಅನೇಕರ ಮನೆಗಳಲ್ಲಿ ಬೆಳ್ಳಿಯ ಅಥವಾ ಲೋಹದ ಗಣೇಶಗಳು ಇರುವುದೂ ಉಂಟು. ಕೆಲವರ ಮನೆಯಲ್ಲಿ ಹಿಂದಿನಿಂದ ಪೂಜಿತವಾಗುತ್ತಾ ಬಂದಿರುವ ಲಿಂಗಗಳು ಇರುವುದೂ ಉಂಟು; ಲಿಂಗವಾದ್ದರಿಂದ ಅದು ಪ್ರತಿಮೆಯೇ ಅಲ್ಲ ಅವಕ್ಕೆಲ್ಲ ತಾರತಮ್ಯಾನುಸಾರ ಪೂಜೆ ಮಾಡುವುದು ತಪ್ಪೆನಿಸುವುದಿಲ್ಲ. ಅವೆಲ್ಲರನ್ನೂ ವಿಷ್ಣುಪರಿವಾರವೆಂದೇ ಭಾವಿಸಬೇಕಾಗಿಯಾಗಲಿ ಸ್ವತಂತ್ರರೆಂದು ಮಾತ್ರ ಪೂಜಿಸಬಾರದು.

೧. ಲಕ್ಷ್ಮೀಪೂಜೆ— ಕೆಲವರ ಮನೆಯಲ್ಲಿ ಪ್ರಾಚೀನಕಾಲದಿಂದ ಪೂಜಿತವಾಗಿ ಬಂದ ಲಕ್ಷ್ಮೀಪ್ರತಿಮೆಗಳಿರುವುದುಂಟು. ಅವನ್ನು ಸಾಲಿಗ್ರಾಮಗಳ ಜೊತೆಯಲ್ಲೇ ಇಟ್ಟು ಅಭಿಷೇಕ ಮಾಡುವುದಕ್ಕೂ ಬರುತ್ತದೆ. ದೊಡ್ಡ ವಿಗ್ರಹಗಳಾದರೆ—ಶ್ರೀದೇವಿ ಭೂದೇವಿಯರು, ವಿಠ್ಠಲ ಜೊತೆಯಿರುವ (ರುಕುಮಾಯಿ, ಇತ್ಯಾದಿ— ಇವಕ್ಕೆ ಸಾಮಾನ್ಯವಾಗಿ ನಿತ್ಯಪೂಜೆಯಿಲ್ಲ. ಇನ್ನು ಲಕ್ಷ್ಮೀಪೂಜೆ ಎಂದರೆ ಶಂಖಪೂಜೆ ಎಂದೇ ವಿಶೇಷಾರ್ಥ. ಶಂಖಭ್ರಮಣ ಮಾಡಿದಮೇಲೆ ಆ ನೀರನ್ನು (ಶಂಖೋದಕವನ್ನು) ಬೇರೆ ಪಾತ್ರೆಯಲ್ಲಿ

ತೆಗೆದಿಟ್ಟ ಬಳಿಕ ಆ ಶಂಖವನ್ನು ಒಂದು ತಟ್ಟೆಯಲ್ಲಿಟ್ಟು (ದರ್ಭೆ ಹಾಕಿ, ಮಗುಚಿಟ್ಟು, ಬೆನ್ನು ಮೇಲ್ಮುಖವಾಗುವಂತೆ ಇಟ್ಟು) ಅದಕ್ಕೆ ಎರಡು ಮೂರು ಉದ್ಧರಣೆ ನೀರು ಹಾಕಬೇಕು. ಅದಕ್ಕೆ ಶ್ರೀ ಪ್ರಭಂಜನರು ಅಂಭ್ರಣೀಸೂಕ್ತ ಹೇಳಬಹುದು ಎನ್ನುತ್ತಾರೆ. ಆದರೆ ವ್ಯವಹಾರದಲ್ಲಿ ಅದು ಸಾಧ್ಯವಿಲ್ಲದ ಪ್ರಯೋಗ ಎನ್ನಿಸುತ್ತದೆ. ಕೆಲವರು ಶ್ರೀಸೂಕ್ತದಿಂದ ಮಾಡಬಹುದು ಎನ್ನುತ್ತಾರೆ ಆದರೆ ಅಷ್ಟು ಹೊತ್ತು ರಮಾದೇವಿಗೆ ಅಭಿಷೇಕ ಮಾಡುತ್ತಾ ಕುಳಿತರೆ ಮಿಕ್ಕವರ ಪಾಡೇನು? ಆದ್ದರಿಂದ ಪರಮಾವಧಿ ಲಕ್ಷ್ಮೀದೇವಿಗೆ ಅತಿ ಪ್ರಿಯವಾದ "ಗಂಧದ್ವಾರಾಂ .." ಎಂಬ ಒಂದು ಮಂತ್ರ ಹೇಳಿಕೊಂಡು ಮೂರು ಉದ್ಧರಣೆ ನೀರು ಹಾಕಿ 'ಲಂ ಲಕ್ಷ್ಮ್ಯೈ ನಮಃ' ಎಂದು ಹೇಳಿ ತೀರ್ಥ ಕೊಟ್ಟು ವಸ್ತ್ರದಿಂದ ಒರೆಸಿಟ್ಟರೂ ಬೇಕಾದಷ್ಟು ಪೂಜೆ ಎನ್ನಿಸುತ್ತದೆ ನನಗೆ. (ಇನ್ನು ವರಮಹಾಲಕ್ಷ್ಮೀ ಹಬ್ಬದಲ್ಲಿ ಬೇಕಾದರೆ ಹಾಗೆ ಅಂಭ್ರಣೀಸೂಕ್ತದಿಂದಲೋ ಶ್ರೀಸೂಕ್ತದಿಂದಲೋ ಅಭಿಷೇಕ ಮಾಡಿದರೆ ನಡೆದೀತು—ನಿತ್ಯದಲ್ಲಂತೂ ಸಾಧ್ಯವಿಲ್ಲ.) ಗಂಧದ್ವಾರಾಂ ಮಂತ್ರವನ್ನೂ ಅದರ ಅರ್ಥವನ್ನೂ ಮುಂದೆ ಕೊಟ್ಟಿದೆ.

ಈ ಮಂತ್ರವು ಅಥರ್ವಣವೇದಕ್ಕೆ ಸೇರಿದ್ದಾದ್ದರಿಂದ ಋಗ್ವೇದಸಂಹಿತೆಯಲ್ಲಿ ಐದನೇ ಮಂಡಲದ ಕಡೆಯಲ್ಲಿ ಪರಿಶಿಷ್ಟವಾಗಿ 'ಶ್ರೀಸೂಕ್ತ'ವನ್ನು ಪಠಿಸುತ್ತಾರೆ. ಅದರಲ್ಲಿ ಇದು ಒಂಬತ್ತನೇ ಮಂತ್ರ. ಅನುಷ್ಟುಪ್ ಛಂದಸ್ಸು.

ಓಂ ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

ಕೃಷ್ಣಯಜುರ್ವೇದ ಪಾಠದ ಮಹಾನಾ. ಉ. ೧ ಅನು., ೪೯ ಮಂತ್ರ) ಸ್ವರವು ಹೀಗಿದೆ—

ಓಂ ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಗ್ಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

ಈ ಮಂತ್ರದ ಅರ್ಥವನ್ನೇ ಶ್ರೀಮದ್ವಾದಿರಾಜಸ್ವಾಮಿಗಳು 'ಶ್ರೀಶಗುಣದರ್ಪಣ'ದ ಪ್ರಾರಂಭದಲ್ಲಿ " ಯಾ ಸುಗಂಧಾಸ್ಯನಾಸಾದಿ—ಸದ್ವಾರಾಽಖಿಲೇನ ಯಾ " ಇತ್ಯಾದಿ ಶ್ಲೋಕಗಳಲ್ಲಿ ಪದ್ಯರೂಪವಾಗಿ ಹೇಳಿದ್ದಾರೆ. ಅದರಂತೆ ಈ ಮಂತ್ರಕ್ಕೆ ಹೀಗೆ ಅರ್ಥವಾಗುತ್ತದೆ —

ಗಂಧದ್ವಾರಾಂ ಯಾವ ದೇವಿಯು ಕಣ್ಣು, ಕಿವಿ, ಮೂಗು, ಬಾಯಿ ಮೊದಲಾದ ನವದ್ವಾರಗಳೂ ಸುಗಂಧಮಯವಾಗಿರುತ್ತವೋ, ದುರಾಧರ್ಷಾಂ–ಹೆದರಿಸುವುದಕ್ಕೆ (ಸೋಲಿಸುವುದಕ್ಕೆ) ಬ್ರಹ್ಮಾದಿ ಸಕಲರಿಂದಲೂ ಸಾಧ್ಯವಿಲ್ಲದಂಥಾ (ಜಗತ್ಕಂಟಕರೆನಿಸಿಕೊಂಡ ಯಾವ ದುಷ್ಟ ದೈತ್ಯರಿಗೂ ಅಂಜದಂಥಾ ನಿರ್ಭೀತಳಾದ), ನಿತ್ಯಪುಷ್ಟಾಂ–ನಿತ್ಯಯೌವನವತಿಯಾದ (ಯಾವಾಗಲೂ ಹದಿನಾರು ವರ್ಷದ ಹುಡುಗಿಯಂತೇ ಲಾವಣ್ಯವ ಲವಲವಿಕೆಯುಳ್ಳಂಥಾ ಎಂದು ಭಾವ), ಕರೀಷಿಣೀಂ–[ಕರೀಷಾ ಎಂದರೆ ಬೆರಣಿ ಅಥವಾ ಕುರುಳು ಎಂದರ್ಥ. ಸೆಗಣಿಯನ್ನು ತಟ್ಟಿದರೆ ಅದು ಒಣಗಿ 'ಕುರುಳು' ಆಗುತ್ತದೆ. ಇದನ್ನೇ ಸಂಸ್ಕೃತದಲ್ಲಿ ಕರೀಷಾ ಎನ್ನುತ್ತಾರೆ–ಕರೀಷಿಣೀಂ ಎಂದರೆ] ಬೆರಣಿ (ಕುರುಳು) ಗಳುಳ್ಳವಳು ಎಂದು ಪದಶಃ ಅರ್ಥ. ಬೆರಣಿ ಆಗಬೇಕಾದರೆ ಹಸು ಕರುಗಳು– ಗೋಸಮೃದ್ಧಿಯಿರಬೇಕು. ಬೆರಣಿಯೇ ಬೇಕಾದಷ್ಟು ಇರುವಾಗ ಹಾಲು–ಮೊಸರು ತುಪ್ಪಗಳಿಗೇನು ಕಡಿಮೆ? ಗೋಸಮೃದ್ಧಿಯುಳ್ಳಂಥಾ, ಗೋಸಮೃದ್ಧಿ ಅನುಗ್ರಹಿಸುವಂಥಾ ಎಂದರ್ಥ. ಸರ್ವಭೂತಾನಾಂ ಈಶ್ವರೀಂ–ಸ್ವಜ್ಞರಾಶಿಗೂ ಅಸ್ವಜ್ಞರಾಶಿಗೂ ಮಾತ್ರವಲ್ಲದೆ ಮುಕ್ತಜೀವರಿಗೂ, ದೇವತೆಗಳಿಗೂ, ದೈತ್ಯದಾನವರಿಗೂ, ಮನುಷ್ಯರಿಗೂ, ಪಶುಪಕ್ಷಿ ಗಿಡ ಮರ ಎಲ್ಲ ಚೇತನವರ್ಗಕ್ಕೂ ಒಡೆಯಳಾದ, ತಾಂ ಶ್ರಿಯಂ–ನಾರಾಯಣನನ್ನು ಸದಾ ಆಶ್ರಯಿಸಿರುವುದರಿಂದ ಶ್ರೀದೇವಿ ಎಂದು ಪ್ರಸಿದ್ಧಳಾದ ಆ ದೇವಿಯನ್ನು (ಅವಳು ಶ್ರೀಹರಿಯಿಂದ ನಿತ್ಯಾವಿಯೋಗಿನೀ ಎಂದರೆ ಸದಾ ಶ್ರೀಹರಿಯನ್ನು ಅಗಲದೇ ಇರುವವಳಾದ್ದರಿಂದ), ಇಹ ಇಲ್ಲಿ—ಈ ಪೂಜಾಸಮಯದಲ್ಲಿ—ಈ ಪೂಜಾಸ್ಥಳದಲ್ಲಿ, ಉಪಹ್ವಯೇ–ನಾರಾಯಣಸಮೇತಳಾಗಿ ಬರಲೆಂದು ಆಹ್ವಾನಿಸುತ್ತೇನೆ. ('ಕ್ಲೇಶೋಽಧಿಕತರಸ್ತೇಷಾಂ' ಎಂದು ಗೀತೆಯಲ್ಲಿ ಹೇಳಿದಂತೆ ಲಕ್ಷ್ಮೀ ಒಬ್ಬಳನ್ನೇ ಆರಾಧಿಸುವುದು ನಿಷಿದ್ಧವಾದ್ದರಿಂದ ನಾರಾಯಣಸಮೇತಳಾಗಿ ಬರಲಿ ಎಂದು ಆಹ್ವಾನಿಸುತ್ತೇನೆ ಎಂದರ್ಥ.)

ತಾತ್ಪರ್ಯ— ಆ ಲಕ್ಷ್ಮಿಯ ದೇಹ ಮಾತ್ರವಲ್ಲ, ನವದ್ವಾರಗಳೂ ಘಮಘಮಿಸುತ್ತಿರುತ್ತವೆ. ನಿತ್ಯಯುವತಿಯಾದ್ದರಿಂದ ಯಾವಾಗಲೂ ಹದಿನಾರು ವರ್ಷದ ಹುಡುಗಿಯಂತೆ ಹೃಷ್ಟಪುಷ್ಟವಾದ ಸರ್ವಾಂಗಸುಂದರಿಯಾಗಿದ್ದಾಳೆ. ಅವಳು ಹೆಂಗಸೆಂದು ಆಕೆನ್ನು ಯಾರೂ ಕೆಣಕುವಂತಿಲ್ಲ—ಯಾರಿಗೂ ಎಂಥಾ ದೈತ್ಯರಿಗೂ ಸೊಪ್ಪು ಹಾಕದ ಮಹಾ ಪ್ರಬಲೆಯಾಗಿದ್ದಾಳೆ. ಅವಳು ಇದ್ದಲ್ಲಿ ಹಸು ಕರು ಕುದುರೆ ಆನೆ ಮೊದಲಾದ ಪಶುಸಂಪತ್ತು ಮಾತ್ರವಲ್ಲದೆ ಧನ ಧಾನ್ಯ ಕನಕಾದಿ ಸಕಲ ಸಂಪತ್ತೂ ತುಂಬಿರುತ್ತದೆ. ಅವಳು ಬ್ರಹ್ಮಾಂಡದಲ್ಲಿರುವ ಹಿಂದಿನ ಈಗಿನ ಮುಂದಿನ ಎಲ್ಲ ಚೇತನವರ್ಗಕ್ಕೂ ಒಡತಿಯಾಗಿದ್ದಾಳೆ. ಇಂಥಾ ಶ್ರೀದೇವಿ ತನ್ನ ಪತಿಸಮೇತಳಾಗಿ ನನ್ನ ಈ ಪೂಜಾಸ್ಥಳಕ್ಕೆ ಬಂದು ನನ್ನ ಪೂಜೆಯನ್ನು ಸ್ವೀಕರಿಸಿ ಅನುಗ್ರಹಿಸಲಿ ಎಂದು ಭಾವ.

ರಮಾದಿ ಪೂಜಾ— 'ಓಂ ಲಕ್ಷ್ಮ್ಯೈ ನಮಃ' ಎಂದು ಹೇಳಿ ಶಂಖಕ್ಕೆ ತೀರ್ಥ

ಕೊಟ್ಟು ವಸ್ತ್ರದಿಂದ ಒರೆಸಿ, ದೇವರ ಮುಂದೆ ಪೀಠದಲ್ಲಿಟ್ಟು ಗಂಧವನ್ನೂ ಪರಮಾತ್ಮನಿಗೆ ಅರ್ಪಿಸಿದ ಹೂವನ್ನೂ ಅರ್ಪಿಸಬೇಕು.

ಪ್ರಾಣದೇವರ ಪೂಜೆ— ಶಂಖಕ್ಕೆ ಅಭಿಷೇಕ ಮಾಡಿ ತೆಗೆದಿಟ್ಟನಂತರ ಪ್ರಾಣದೇವರಿಗೂ, ಗರುಡ-ಶೇಷರಿಗೂ 'ಬಳಿತ್ಥಾ' ಸೂಕ್ತದಿಂದ ಅಭಿಷೇಕ ಮಾಡಿ ತೀರ್ಥ ಕೊಟ್ಟು, ದೇವರ ಮುಂದೆ ಬೇರೆ ಆಸನದಲ್ಲಿ ಇಟ್ಟು ದೇವರಿಗೆ ಸಮರ್ಪಿಸಿದ ಗಂಧ ಅಕ್ಷತೆ ಪುಷ್ಪ-ತುಳಸೀದಳಗಳನ್ನು ಸಮರ್ಪಿಸಬೇಕು. ಹಾಗೆಯೇ ಗುರುಗಳ ವೃಂದಾವನಗಳಿದ್ದರೆ ಅವಕ್ಕೂ ಸಹ, ಪ್ರಾಣದೇವರಿಗೆ ಗರುಡ ಶೇಷರಿಗೆ ಅಭಿಷೇಕ ಮಾಡಿದ ನಂತರ ಅಭಿಷೇಕ ಮಾಡಿ ತೀರ್ಥ ಕೊಟ್ಟು ಒರೆಸಿಟ್ಟು ಗಂಧಾಕ್ಷತೆ ಪುಷ್ಪಾದಿಗಳನ್ನು ಅರ್ಪಿಸಬೇಕು. ಯದ್ಯಪಿ ತೀರ್ಥವನ್ನು ಗಂಧಾಕ್ಷತೆ ಸಮರ್ಪಿಸಿದ ಮೇಲೆ ಕೊಡಬೇಕಾದರೂ ಅಭಿಷೇಕ ಮಾಡಿದ ತಕ್ಷಣವೇ ತೀರ್ಥ ಕೊಟ್ಟು ಒರೆಸಿಡುವುದು ಅನುಕೂಲಸಿಂಧು.

ಇನ್ನು ಗುರುಗಳ ದೊಡ್ಡ ಆರಾಧನೆಗಳಲ್ಲಿ ಅಭಿಷೇಕ ಮಾಡುವುದಕ್ಕೆ ಪೂರ್ವಭಾವಿಯಾಗಿ (ಮೊದಲೇ) ಪಾದಪ್ರಕ್ಷಾಲನ ಮಾಡಿ ಆ ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಂಡು ಆಮೇಲೆ ಗುರುಗಳಿಗೆ ಅಭಿಷೇಕ ಮಾಡಬೇಕು.

ಗುರುಪಾದಪ್ರಕ್ಷಾಲನ ಕ್ರಮ— ಒಂದು ತಟ್ಟೆಯಲ್ಲಿ ನಾಲ್ಕು ಮೂಲೆಗಳಲ್ಲೂ ಮಧ್ಯದಲ್ಲೂ ಐದು ಕಡೆ ಸ್ವಲ್ಪಸ್ವಲ್ಪ ಮಂತ್ರಾಕ್ಷತೆ ಇಟ್ಟು 'ಗುರುಪಾದಪ್ರಕ್ಷಾಲನಂ ಕರಿಷ್ಯೇ' ಎಂದು ಸಂಕಲ್ಪ ಮಾಡಿ 'ಅಸ್ಮಿನ್ ರಾಷ್ಟ್ರೇ...' ಎಂಬ ಮಂತ್ರ ಹೇಳಿಕೊಂಡು ಉದ್ಧರಣೆಯಿಂದ ನೀರು ತುಂಬಿ ತುಂಬಿ ಹಾಕಬೇಕು.

ಓಂ ಅಸ್ಮಿನ್ ರಾಷ್ಟ್ರೇ ಶ್ರಿಯಮಾವೇಶಯಾಮ್ಯತೋ ದೇವೀ ಪ್ರತಿಪಶ್ಯಾಮ್ಯಾಪಃ। ದಕ್ಷಿಣಂ ಪಾದಮವನೇ ನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ದಧಾಮಿ। ಸವ್ಯಂ ಪಾದಮವನೇ ನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ವರ್ಧಯಾಮಿ। ಪೂರ್ವಮನ್ಯ-ಮಪರಮನ್ಯಂ ಪಾದಾವವನೇ ನಿಜೇ। ದೇವಾ ರಾಷ್ಟ್ರಸ್ಯ ಗುಪ್ತ್ಯೈ ಅಭಯಸ್ಯಾವರುದ್ಧ್ಯೈ। ಆಪಃ ಪಾದಾವನೇ ಜನೀರ್ದ್ವಿಷಂತಂ ನಿರ್ದಹಂತು ಮೇ॥

(ಆಮೇಲೆ ಮಧ್ವಾಚಾರ್ಯರ ಪರವಾಗಿ 'ಅಭ್ರಮಂ ಭಂಗರಹಿತಂ...' ಎಂಬ ಶ್ಲೋಕವನ್ನೂ, ಟೀಕಾಚಾರ್ಯರ ಪರವಾಗಿ 'ಚಿತ್ರೈಃ ಪದೈಶ್ಚ...' ಅಥವಾ 'ಮಿಥ್ಯಾಸಿದ್ಧಾಂತ ' ಎಂಬ ಶ್ಲೋಕವನ್ನೂ, ವ್ಯಾಸರಾಯರಿಗೆ 'ಅರ್ಥಿಕಲ್ಪಿತಕಲ್ಪೋಽಯಂ..' ಎಂಬ ಶ್ಲೋಕವನ್ನೂ, ವಾದಿರಾಜಸ್ವಾಮಿಗಳಿಗೆ 'ತಪೋವಿದ್ಯಾವಿರಕ್ತ್ಯಾದಿ...' ಎಂಬ ಶ್ಲೋಕವನ್ನೂ ಮಂತ್ರಾಲಯದ ರಾಯರಿಗೆ 'ಪೂಜ್ಯಾಯ ರಾಘವೇಂದ್ರಾಯ...' ಎಂಬ ಶ್ಲೋಕವನ್ನೂ ಹೇಳಿಕೊಂಡು ಆಯಾ ಆರಾಧನೆ ದಿನಗಳಲ್ಲಿ ಪಾದಪ್ರಕ್ಷಾಲನ ಮಾಡಬಹುದು.

ರಮಾದಿ ನೈವೇದ್ಯ— ಶಂಖಪೂಜೆ, ಪ್ರಾಣದೇವರ ಪೂಜೆ ಆದಮೇಲೆ ಗಂಟೆಯಲ್ಲಿ ಗರುಡನಿರುವನೆಂದು ತಿಳಿದು ಗಂಟೆಯ ಮೇಲೂ ಒಂದು ಉದ್ಧರಣೆ ನೀರು ಹಾಕಿ ತೀರ್ಥ ಕೊಟ್ಟು ಗಂಧ-ಅಕ್ಷತೆ-ಹೂವು-ತುಳಸಿ ಸಮರ್ಪಿಸಬೇಕು. ಆಮೇಲೆ ದೇವರಿಗಿಟ್ಟ ಸಮಗ್ರ ನೈವೇದ್ಯವನ್ನು (ವೈಶ್ವದೇವ-ಬಲಿಹರಣದ ಭಾಗ ಬೇರೆ ತೆಗೆದಿಟ್ಟು) ಪ್ರಾಣದೇವರಿಗೆ ಸಮರ್ಪಿಸುವುದು ಒಂದು ಪದ್ಧತಿಯಿದೆ. ಅಲ್ಲದೆ ಲಕ್ಷ್ಮೀದೇವಿಗೇ ಬೇರೆ ನೈವೇದ್ಯ, ಪ್ರಾಣದೇವರಿಗೆ ಬೇರೆ, ಗರುಡ-ಶೇಷಾದಿಗಳಿಗೆ ಬೇರೆ-ಬೇರೆ ನೈವೇದ್ಯ ಇಡುವ ಪದ್ಧತಿ ಇಲ್ಲ. ಏಕೆಂದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ (೩ ಅಧ್ಯಾಯ, ೩ ಬ್ರಾ., ೧೮ ಖಂಡ) ಹೇಳಿದಂತೆ "ತಗ್ಂ ಸಮಂತಂ ಪರಿಣ್ಯವಿಶಂತ, ತಸ್ಮಾದ್ ಯದನೇನಾನ್ನಮತ್ತಿ ತೇನೈತಾಸ್ತೃಪ್ಯಂತಿ' ಎಂದರೆ "ಸಕಲೇಂದ್ರಿಯಾಭಿಮಾನಿದೇವತೆಗಳೂ ಪ್ರಾಣದೇವರನ್ನು ಸುತ್ತುಗಟ್ಟಿ ನಿಂತುಕೊಂಡರು. ಆದ್ದರಿಂದ ಆ ಪ್ರಾಣದೇವರು ಏನು ನೈವೇದ್ಯ ಸ್ವೀಕರಿಸುತ್ತಾರೋ ಅದರಲ್ಲೇ ತಮ್ಮ ಭಾಗ ಸೇರಿರುವುದರಿಂದಲೂ ಬೇರಿಗೆ ನೀರು ಹಾಕಿದರೆ ಅದು ಹೇಗೆ ಎಲ್ಲ ಕಡೆಯೂ ವ್ಯಾಪಿಸುವುದೋ ಅದರಂತೆ ಪ್ರಾಣದೇವರಿಗೆ ಕೊಟ್ಟದ್ದರಿಂದಲೇ ಎಲ್ಲ ದೇವತೆಗಳೂ ತೃಪ್ತರಾಗುತ್ತಾರೆ" ಎಂದು ಹೇಳಿರುವುದರಿಂದ ಪ್ರಾಣದೇವರೇ ಎಲ್ಲರಿಗೂ ಅವರವರ ಭಾಗ ಹಂಚುವರಾದ್ದರಿಂದ ಬೇರೆ ಬೇರೆ ನೈವೇದ್ಯ ಮಾಧ್ವರಲ್ಲಿ ಇಡುವ ಪದ್ಧತಿ ಇಲ್ಲ. ವರಮಹಾಲಕ್ಷ್ಮೀ ಹಬ್ಬ, ದುರ್ಗಾಷ್ಟಮಿಗಳಲ್ಲಿ ರಮಾದೇವಿಗೂ ಗಣೇಶನ ಹಬ್ಬ ಇತ್ಯಾದಿ ದಿನಗಳಲ್ಲಿ ವಿಶೇಷವಾಗಿ ನೈವೇದ್ಯ ಬೇರೆ ಇಡಬಹುದೇ ವಿನಾ ನಿತ್ಯದಲ್ಲಿ ಇಡಕೂಡದು. ಏಕೆಂದರೆ ಪ್ರಾಣದೇವರಿಗಲ್ಲದೆ ಬೇರೆ ದೇವರಿಗೆ ಇಟ್ಟ ನೈವೇದ್ಯವು ಸ್ವೀಕಾರಾರ್ಹವಲ್ಲವೆಂದು ಶಾಸ್ತ್ರ ಹೇಳುತ್ತದೆ. (ಶ್ರೀ ಪ್ರಭಂಜನಾಚಾರ್ಯರ ಪದ್ಯಮಾಲಾ, ದ್ವಿತೀಯ ಸಂಸ್ಕರಣ, ಪುಟ ೧೭ ನೋಡಿ)

ಪಾವನಂ ವಿಷ್ಣುನೈವೇದ್ಯಂ ಸುಭೋಜ್ಯಂ ಋಷಿಭಿಃ ಸ್ಮೃತಮ್ ।
ಅನ್ಯದೇವಸ್ಯ ನೈವೇದ್ಯಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ।
(ಕೃಷ್ಣಾಮೃತಮಹಾರ್ಣವ, ೪೭ ಶ್ಲೋಕ)

(ಅರ್ಥ) ವಿಷ್ಣುವಿಗೆ ಸಮರ್ಪಿಸಿದ ನೈವೇದ್ಯವು ಪಾವನವಾದುದು. ಆದ್ದರಿಂದ ಅದು ಋಷಿಗಳೂ ಸಹ ಸ್ವೀಕರಿಸಲು ಯೋಗ್ಯವಾದುದು ಎಂದು ಹೇಳಲ್ಪಡುತ್ತದೆ. ಆದರೆ (ರಮಾ-ಮುಖ್ಯಪ್ರಾಣದೇವರನ್ನು ಬಿಟ್ಟು) ಮಿಕ್ಕ ದೇವತೆಗಳಿಗೆ (ರುದ್ರಾದಿಗಳಿಗೆ) ಸಮರ್ಪಿಸಿದ ನೈವೇದ್ಯವನ್ನು ಭಕ್ಷಿಸಿದರೆ ಮಹಾ ದೋಷ ಬರುತ್ತದೆ. ಆ ದೋಷಪರಿಹಾರಕ್ಕಾಗಿ ಚಾಂದ್ರಾಯಣ ವ್ರತವನ್ನು ಆಚರಿಸಬೇಕಾಗುತ್ತದೆ.

ಪೂಜಾಕಲ್ಪಲತಾದಲ್ಲಿ 'ಅಹೋ ಭಗವತ್ಸಮರ್ಪಿತಮಪಿ ಇತರ ದೇವತಾನೈವೇದ್ಯಂ ಸರ್ವಥಾ ನ ಗ್ರಾಹ್ಯಮೇವೇತಿ ಸಂಪ್ರದಾಯಃ।'

(ಅರ್ಥ) ಮೊದಲು ಭಗವಂತನಿಗೆ ಸಮರ್ಪಿತವಾದ ನೈವೇದ್ಯವಾಗಿದ್ದರೂ ಕೂಡ ರುದ್ರಾದಿಗಳಿಗೆ ಸಮರ್ಪಿಸಿದ ನೈವೇದ್ಯವು ಸರ್ವಥಾ ಸ್ವೀಕಾರಾರ್ಹವಲ್ಲವೆಂಬುದೇ ಸಂಪ್ರದಾಯ. ಆದ್ದರಿಂದ ಗೌರೀಗೆ ಗಣೇಶನಿಗೆ ಸಮರ್ಪಿಸಿದ ನೈವೇದ್ಯವನ್ನು ಹಿರಿಯ ಜ್ಞಾನಿಗಳು ಸ್ವೀಕರಿಸುವುದಿಲ್ಲ—ಅದನ್ನು ಮಕ್ಕಳಿಗೋ ಅಥವಾ ಇತರರಿಗೋ ಕೊಟ್ಟು ಬಿಡುತ್ತಾರೆ.

ರಮಾದಿ ನೈವೇದ್ಯಕ್ಕೆ ಮಂತ್ರ— ರಮಾದಿಗಳಿಗೆ ನೈವೇದ್ಯ ಇಡುವಾಗ ಈ ಕೆಳಗೆ ಕೊಟ್ಟಿರುವ ಮಂತ್ರವನ್ನು ಹೇಳಬೇಕು. ಎಂದರೆ ತೀರ್ಥವನ್ನು ಗಾಯತ್ರಿಯಿಂದ ಪ್ರೋಕ್ಷಿಸಿ 'ಸತ್ಯಂ ತ್ವರ್ತೇನ ಪರಿಷಿಂಚಾಮಿ' ಎಂದು ಪರಿಷೇಚನ ಮಾಡಿ, 'ಅಮೃತೋಪಸ್ತರಣಮಸಿ ಸ್ವಾಹಾ' ಎಂದು ಹೇಳಿ ನೈವೇದ್ಯದ ಮೇಲೆ ತೀರ್ಥ ತುಳಸೀದಳಗಳನ್ನು ಹಾಕಿ ಆಮೇಲೆ ಓಂ ಪ್ರಾಣಾಯ ಸ್ವಾಹಾ, ಓಂ ಅಪಾನಾಯ ಸ್ವಾಹಾ ಇತ್ಯಾದಿ ಪ್ರಾಣಾಹುತಿ ಮಂತ್ರಗಳನ್ನು ಹೇಳುತ್ತಾ ಅರ್ಘ್ಯದ ಬಟ್ಟಲಿಗೆ ನೀರು ಹಾಕಿ ಆಮೇಲೆ ಈ ಮಂತ್ರ ಹೇಳಬೇಕು

ರಮಾ ಬ್ರಹ್ಮಾದಯೋ ದೇವಾಃ ಸನಕಾದ್ಯಾಃ ಶುಕಾದಯಃ ।
ಶ್ರೀನೃಸಿಂಹಪ್ರಸಾದೋಽಯಂ ಸರ್ವೇ ಗೃಹ್ಣಂತು ವೈಷ್ಣವಾಃ ॥
[ಬ್ರಹ್ಮಾದಿ ಪುಷ್ಕರಾಂತಾಶ್ಚ ಸರ್ವೇ ತತ್ತ್ವನಿಯಾಮಕಾಃ ॥

(ಅರ್ಥ) ಇದು ಭಗವಂತ ನರಸಿಂಹದೇವರಿಗೆ ಸಮರ್ಪಿಸಿದ ನೈವೇದ್ಯವಾಗಿದೆ. ಆದ್ದರಿಂದ ಇದನ್ನು ರಮಾ ಬ್ರಹ್ಮಾದಿ ದೇವತೆಗಳೂ, ಸನಕ-ಸನಂದನಾದಿ ಪರಮ ಹಂಸರೂ, ಶುಕ ನಾರದಾದಿ ಸಕಲ ಮಹರ್ಷಿಗಳೂ (ಅಲ್ಲದೆ—ಈ ಕಂಸದಲ್ಲಿರುವುದು ತೆಲುಗು ಆಹ್ನೀಕಮಂಜರಿಯಲ್ಲಿರುವ ಅಧಿಕ ಪಾಠ—ಬ್ರಹ್ಮದೇವರಿಂದ ಹಿಡಿದು ಪುಷ್ಕರನ ವರೆಗೆ ಸಕಲ ತತ್ತ್ವಾಭಿಮಾನಿ ದೇವತೆಗಳೂ ಸಹ) ಸ್ವೀಕರಿಸಲಿ. (ಇಲ್ಲಿ ನೋಡಿ— ರಮಾದೇವಿಯಿಂದ ಆರಂಭಿಸಿ ಪುಷ್ಕರನವರೆಗೆ ಸಕಲರಿಗೂ ಒಂದೇ ನೈವೇದ್ಯ ಸಮರ್ಪಿಸಬೇಕೆಂಬುದು ಪ್ರಾಚೀನ ಸಂಪ್ರದಾಯವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಪ್ರಾಣದೇವರಿಗೆ ಸಮರ್ಪಣೆಯಾಗುವುದಕ್ಕಾಗಿ 'ವಾಯುರ್ಭೀಮೋ...' ಎಂಬ ಶ್ಲೋಕವನ್ನೂ ಹೇಳಿಕೊಳ್ಳಬಹುದು.

ಓಂ ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥

ಹೀಗೆ ಹೇಳಿದ ಬಳಿಕ ಪುನಃ 'ಅಮೃತಾಪಿಧಾನಮಸಿ ಸ್ವಾಹಾ' ಎಂದು ಉತ್ತರಾಪೋಶನ ಕೊಟ್ಟು ಹಸ್ತಪ್ರಕ್ಷಾಲನ ಪಾದಪ್ರಕ್ಷಾಲನಾದಿ ಸಮರ್ಪಯಾಮಿ। ತಾಂಬೂಲಂ ಸಮರ್ಪಯಾಮಿ। ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ। ಎಂದು ನೀರನ್ನು ಹಾಕಬೇಕು.

ಹಸ್ತೋದಕ ವಿಧಾನ– ಹಸ್ತೋದಕ ಕೊಡುವುದಕ್ಕೆ ಮುಂಚೆಯೇ ಅನ್ನ ನೈವೇದ್ಯ ಸಮರ್ಪಿಸುವುದಿದ್ದರೆ ವೈಶ್ವದೇವವನ್ನು ಮಾಡಿದ ನಂತರವೇ ಹಸ್ತೋದಕ ಕೊಡಬೇಕು. ಕಡೇ ಪಕ್ಷ ನೀರಿನಲ್ಲಾದರೂ ಸಂಕ್ಷೇಪವಾಗಿ ವೈಶ್ವದೇವದಲ್ಲಿ ಕೊಡುವಂತೆ 'ಓಂ ನಮೋ ನಾರಾಯಣಾಯ ಸ್ವಾಹಾ, ಓಂ ಕ್ಲೀಂ ಕೃಷ್ಣಾಯ ನಮಃ ಸ್ವಾಹಾ' ಎಂದು ಎಂಟು ಆರು ಆಹುತಿಗಳನ್ನು ಕೊಟ್ಟಾದರೂ ಫಲ, ಕಲ್ಲುಸಕ್ಕರೆ ಮೊದಲಾದ ನೈವೇದ್ಯವನ್ನು ಸಮರ್ಪಿಸಬೇಕು.

ಇದಕ್ಕೂ ಗೃಹ ರಮಾದಿಗಳಿಗೆ ಮಾಡಿದಂತೆ ತೀರ್ಥ ಪ್ರೋಕ್ಷಿಸಿ ಪರಿಷಿಂಚನೆ ಮಾಡಿ ತೀರ್ಥ ಹಾಕಿ ಪ್ರಾಣಾಹುತಿಗಳನ್ನು ಕೊಡಬೇಕು. ಆಮೇಲೆ ಕೈಮುಗಿದು ಈ ಕೆಳಗಿನ ಹಸ್ತೋದಕಮಂತ್ರವನ್ನು ಉಚ್ಚರಿಸಬೇಕು.

ಓಂ॥ ಯತಿ ಹಸ್ತೇ ಜಲಂ ದದ್ಯಾತ್ ಭೈಕ್ಷ್ಯಂ ದದ್ಯಾತ್
ಪುನರ್ಜಲಮ್ ।
ತದನ್ನಂ ಮೇರುಣಾ ತುಲ್ಯಂ ತಜ್ಜಲಂ ಸಾಗರೋಪಮಮ್ ॥ ೧

(ಅರ್ಥ) ಯತಿಯ ಹಸ್ತದಲ್ಲಿ ಮೊದಲು ನೀರು ಹಾಕಬೇಕು. ಅನಂತರ ಭಿಕ್ಷೆಯನ್ನು ಹಾಕಬೇಕು. ಆಮೇಲೆ ಪುನಃ ನೀರು ಹಾಕಬೇಕು. ಆ ಅನ್ನವು (ಸ್ವಲ್ಪವಾದರೂ) ಮೇರುಪರ್ವತಕ್ಕೆ ಸಮಾನವಾಗುತ್ತದೆ. ಮತ್ತು ಆ ನೀರು ಸಮುದ್ರದಂತೆ ಅಪಾರವಾಗಿ (ಅಕ್ಷಯವಾಗಿ) ಆಗುತ್ತದೆ.

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ ಭೂತಾನ್ಯನೇಕಶಃ ।
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ
ಭುಂಕ್ತೇ ವಿಶ್ವಭುಗವ್ಯಯಃ ॥ ೨

(ಅರ್ಥ) ವಿಷ್ಣು ಎಂಬ ದೊಡ್ಡ ಭೂತವು ಒಂದೇ ಒಂದು ಇದೆ. (ವಿಷ್ಣುವಿನಲ್ಲಿ ಭೂತ ಎಂಬ ಶಬ್ದ ಅನ್ವಯಿಸುವಾಗ 'ಭೂ ಬಹೌ' 'ಬಹುಃ ಪೂರ್ಣತಾಯಾಂ' ಎಂದು ಛಾಂದೋಗ್ಯ ಭಾಷ್ಯದಲ್ಲಿ ಹೇಳಿದಂತೆ ಪರಿಪೂರ್ಣವಾದುದು ಎಂದರ್ಥ. ಅದೇ ರೀತಿ ಅನೇಕ ಅರ್ಥವಿರುವುದರಿಂದ ಸೃಷ್ಟ್ಯಾದಿಕರ್ತನೆಂದೂ ಅನಾದಿಕಾಲದಿಂದ ಶಶ್ವದೇಕಪ್ರಕಾರವಾಗಿರುವವನು ಎಂದೂ ಅನೇಕ ರೀತಿ ಅರ್ಥ ಹೇಳಬಹುದು. ವಿಜಯದಾಸರು

ಭೂತಸುಳಾದಿಯಲ್ಲಿ ಈ ವಿಷ್ಣು ಭೂತದ ಮಹಿಮೆಯನ್ನೇ ವರ್ಣಿಸಿದ್ದಾರೆ. ಅದು ನಾನಾ ವಿಧವಾದ ಬೇರೆಬೇರೆ ಪ್ರಾಣಿಗಳನ್ನೂ (ಭೂತಾದಿ-ಪ್ರಾಣಿಗಳು) ಮೂರು ಲೋಕಗಳನ್ನೂ ವ್ಯಾಪಿಸಿಕೊಂಡಿದ್ದು ಆ ಸಕಲ ಪ್ರಾಣಿಗಳಲ್ಲಿ ಅಂತರ್ಯಾಮೀ (ಭೂತಾತ್ಮಾ)ಯಾಗಿದ್ದು ಸರ್ವಭಕ್ಷಕನೂ (ವಿಶ್ವಭುಕ್) ನಾಶರಹಿತನೂ ಆಗಿದ್ದು ಸಕಲ ಪ್ರಾಣಿಗಳು ತಿಂದ ಆಹಾರವನ್ನೂ ತಾನೇ ತಿನ್ನುತ್ತದೆ. ಮತ್ತು ಪ್ರಳಯದಲ್ಲಂತೂ ಎಲ್ಲಾ ಪ್ರಾಣಿಗಳನ್ನೂ ನುಂಗಿ ಹಾಕುತ್ತದೆ. (ಈ ಶ್ಲೋಕ ಹೇಳುವುದರ ಮುಖ್ಯ ಧ್ಯೇಯವೇನೆಂದರೆ ಸಮಸ್ತ ಯತಿಗಳು ತಿನ್ನುವ ಆಹಾರವನ್ನೂ ಈ ವಿಷ್ಣುವೇ ಗ್ರಹಿಸುತ್ತಾನೆ ಎಂಬ ಅನುಸಂಧಾನ ಬರುವುದಕ್ಕಾಗಿ.)

(ಈ ಎರಡು ಶ್ಲೋಕಗಳನ್ನು ಹೇಳಿದರೂ ಸಾಕು. ಆದರೂ ಹೆಚ್ಚು ಪ್ರಚಾರ ಇರುವುದರಿಂದ ಈ ಮುಂದಿನ ಶ್ಲೋಕಗಳನ್ನೂ ಹೇಳಬಹುದು.)

ವರ್ಣೌ ತು ಸಮದತ್ತಂ ಸ್ಯಾತ್ ಗೃಹಸ್ಥೇ ದ್ವಿಗುಣಂ ಭವೇತ್ ।
ವಾನಪ್ರಸ್ಥೇ ಶತಗುಣಂ ಯತೌ ದತ್ತಮನಂತಕಮ್ ॥ ೩

(ಶ್ರೀ ಪ್ರಭಂಜನಾಚಾರ್ಯರ ಪದ್ಯಮಾಲಾ, ಪುಟ ೧೦೦)

(ಅರ್ಥ) ಬ್ರಹ್ಮಚಾರಿಗಳಿಗೆ ಕೊಟ್ಟ ಅನ್ನ, ದಕ್ಷಿಣೆ-ದಾನಗಳು ಸಮ-ಸಮವಾಗಿ ಫಲ ಕೊಡುತ್ತವೆ. (ಐದು ರೂಪಾಯಿ ಕೊಟ್ಟರೆ ಐದೇ ರೂಪಾಯಿನ ಫಲ. ಒಂದು ಹಿಡಿ ಅನ್ನ ಹಾಕಿದರೆ ಒಂದು ಹಿಡಿಯಷ್ಟೇ ಫಲ) ಗೃಹಸ್ಥರಿಗೆ ಕೊಟ್ಟ ದಾನ ದಕ್ಷಿಣೆಗಳು ಎರಡರಷ್ಟು ಫಲ ಕೊಡುತ್ತವೆ. ವಾನಪ್ರಸ್ಥರಿಗೆ ಕೊಟ್ಟವು ನೂರು ಪಟ್ಟು ಅಧಿಕವಾಗುತ್ತವೆ. ಯತಿಗೆ ಕೊಟ್ಟದ್ದು ಅನಂತ ಅಕ್ಷಯ)ವಾಗುತ್ತದೆ.

'ಗೃಹಸ್ಥೇ ದ್ವಿಗುಣಂ ಭವೇತ್' ಎಂದು ಹೇಳಿದ್ದು ಸಾಮಾನ್ಯ ಗೃಹಸ್ಥರಿಗೆ ಅನ್ವಯಿಸುತ್ತದೆ. ಶ್ರೋತ್ರಿಯರಾದ ಆಚಾರಶೀಲರಾದ ಸದ್‌ಗೃಹಸ್ಥರಿಗೆ ಕೊಟ್ಟದ್ದು ಹತ್ತು ಸಾವಿರದಷ್ಟು ಅಧಿಕವಾಗುತ್ತದೆ ಎಂದೂ ಶಾಸ್ತ್ರ ಹೇಳುತ್ತದೆ.

ಯತಿರ್ಯತ್ರ ಗೃಹೇ ಭುಂಕ್ತೇ ತತ್ರ ಭುಂಕ್ತೇ ಹರಿಃ ಸ್ವಯಮ್ ।
ಹರಿರ್ಯತ್ರ ಗೃಹೇ ಭುಂಕ್ತೇ ತತ್ರ ಭುಂಕ್ತೇ ಜಗತ್‌ತ್ರಯಮ್ ॥

(ಶಬ್ದಾರ್ಥ) ಯತ್ರ ಗೃಹೇ-ಯಾವ ಮನೆಯಲ್ಲಿ, ಭುಂಕ್ತೇ–ಭೋಜನ ಮಾಡುತ್ತಾನೋ ಊಟ ಮಾಡುತ್ತಾನೋ

(ಅರ್ಥ) ಯಾವ ಮನೆಯಲ್ಲಿ ಸಂನ್ಯಾಸಿಯು ಭೋಜನ ಮಾಡುತ್ತಾನೋ ಆ ಮನೆಯಲ್ಲಿ ಸಾಕ್ಷಾತ್ ಶ್ರೀಹರಿಯೇ ಭೋಜನ ಮಾಡುತ್ತಾನೆ ಎಂದು (ಭಾವಿಸಬೇಕು). ಶ್ರೀಹರಿ ಎಲ್ಲಿ ಭೋಜನ ಮಾಡುತ್ತಾನೋ ಅಲ್ಲಿ ಮೂರು ಲೋಕಗಳೂ ಮಾಡಿದಂತೆಯೇ ಸರಿ.

ಈ ಶ್ಲೋಕಗಳನ್ನು ಪಠಿಸಿದ ಬಳಿಕ ತಮ್ಮ ಮನೆಯಲ್ಲಿ ಯಾವ ವೃಂದಾವನಗಳಿವೆಯೋ ಆ ಗುರುಗಳ ಧ್ಯಾನಶ್ಲೋಕ ಹೇಳಿ ಹಸ್ತೋದಕ ಕೊಡಬಹುದು. ಯತಿಗಳಿಗೆ ಹಸ್ತೋದಕ ಕೊಟ್ಟಂತೆಯೇ ಕೆಲವರು ಯಾದವಾಚಾರ್ಯರು ಮುಂತಾದ ಟೀಕಾ-ಟಿಪ್ಪಣಿಕಾರರಿಗೂ, ಅದೇ ರೀತಿ ಪುರಂದರದಾಸರು, ವಿಜಯದಾಸರು ಮೊದಲಾದ ಹರಿ-ದಾಸರಿಗೂ ಹಸ್ತೋದಕ ಕೊಡುವುದುಂಟು. ಅದರಲ್ಲಿ ತಪ್ಪೇನೂ ಇಲ್ಲ. ಎಲ್ಲಾ ಆದಮೇಲೆ ಈ ಶ್ಲೋಕವನ್ನೂ ಪಠಿಸಬಹುದು—

ಪೃಥ್ವೀಮಂಡಲಮಧ್ಯಸ್ಥಾಃ ಪೂರ್ಣಬೋಧಮತಾನುಗಾಃ ।
ವೈಷ್ಣವಾ ವಿಷ್ಣುಹೃದಯಾಸ್ ತಾನ್ ನಮಸ್ಯೇ ಗುರೂನ್ ಮಮ॥

(ಶಬ್ದಾರ್ಥ) ಪೂರ್ಣಬೋಧ-ಮಧ್ವಾಚಾರ್ಯರು, ಮತ ಅನುಗಾಃ-ಮತಾವ-ಲಂಬಿಗಳು (ಅವರು ಮಾಧ್ವರಾಗೇ ಹುಟ್ಟಿರದಿದ್ದರೂ ಅಡ್ಡಿಯಿಲ್ಲ. ಮಧ್ವಸಿದ್ಧಾಂತದ ತತ್ತ್ವಗಳಲ್ಲಿ ವಿಶ್ವಾಸವುಳ್ಳವರು. ಉದಾ.— ಕನಕದಾಸರು.) (ಅನು-ಅನುಸರಿಸಿ, ಗ-ಹೋಗುವವರು, ನಡೆಯುವವರು.) ನಮಸ್ಯೇ (ಆತ್ಮನೇಪದ ರೂಪ)-ನನ್ನ ಉದ್ಧಾರಕ್ಕಾಗಿ ನಮಸ್ಕಾರ ಮಾಡುತ್ತೇನೆ.

(ತಾತ್ಪರ್ಯ) ಈ ಭೂಮಂಡಲದಲ್ಲಿ ಮಧ್ವಾಚಾರ್ಯರ ಮತಾವಲಂಬಿಗಳಾದ, ವಿಷ್ಣುಭಕ್ತರಾದ ಮತ್ತು ವಿಷ್ಣುಧ್ಯಾನಾಸಕ್ತರಾದ ಯಾವ ಯಾವ ಮಹಾನುಭಾವ-ರಿದ್ದಾರೋ ಅವರೆಲ್ಲರೂ ನನ್ನ ಗುರುಗಳೇ ಸರಿ. ಅವರೆಲ್ಲರಿಗೂ ನಾನು ನನ್ನ ಉದ್ಧಾರಕ್ಕಾಗಿ ವಂದಿಸುತ್ತೇನೆ.

ರಮಾದಿ ನೈವೇದ್ಯ, ಹಸ್ತೋದಕ ಕೊಟ್ಟಮೇಲೆ ದೇವರಿಗೆ ಮಾಡಿದ ಮಂಗಳಾರತಿಯನ್ನೇ ಪ್ರಾಣದೇವರಿಗೂ ಗಂಟೆಗೂ ಗುರುಗಳಿಗೂ ತೋರಿಸಬಹುದು. ಅದು ಆರಿ-ಹೋಗಿದ್ದರೆ ಬೇರೆ ಮಂಗಳಾರತಿಯನ್ನೂ ಮಾಡಬಹುದು.

ತುಳಸೀ ನೈವೇದ್ಯ, ಗಂಗಾ-ಭಾಗೀರಥೀ ನೈವೇದ್ಯ

ಕೆಲವರ ಮನೆಯಲ್ಲಿ ತುಳಸಿಗೂ, ಭಾಗೀರಥಿಗೂ ನೈವೇದ್ಯ ಕೊಡುವ ಪದ್ಧತಿ ಇದೆ. ಅದು ತಪ್ಪೇನೂ ಅಲ್ಲ. ಕಾರ್ತಿಕ ಮಾಸದಲ್ಲಂತೂ ತುಳಸೀಪೂಜೆ ಬಹಳ ಶ್ರೇಷ್ಠ. ಆಗ ತುಳಸೀಸಹಿತ ದಾಮೋದರಮೂರ್ತಿಯನ್ನು ಸ್ಮರಿಸಬೇಕು. ಆದರೆ ಈ ಪೂಜೆಗಳನ್ನೂ ನೈವೇದ್ಯವನ್ನೂ ಹಸ್ತೋದಕ ಕೊಡುವುದಕ್ಕೆ ಮೊದಲೇ ಮಾಡಬೇಕು.

ಗೋಗ್ರಾಸ

ಅನೇಕರು ಭೋಜನಕ್ಕೆ ಮುಂಚೆ ಗೋಗ್ರಾಸ ಕೊಡುವ ಪದ್ಧತಿ ಇಟ್ಟುಕೊಂಡಿರುತ್ತಾರೆ. ಅದರ ಕ್ರಮ. ಗೋವಿಗೆ ಅಕ್ಕಿ, ಬೆಲ್ಲ ಇತ್ಯಾದಿಗಳನ್ನು ಕೊಡುವ ಪದ್ಧತಿಯೂ ಇದೆ. ಮಾಡಿದ ಅಡಿಗೆಯನ್ನು ಒಂದು ಎಲೆಯ ಮೇಲೆ ಬಡಿಸಿ ಅದನ್ನು ಇಡುವ

ಪದ್ಧತಿಯೂ ಇದೆ. 'ಆಚಾರಃ ಪ್ರಥಮೋ ಧರ್ಮಃ' ಆದ್ದರಿಂದ ಅವರವರ ಆಚಾರದಂತೆ ಮಾಡಬಹುದು.

ಸುರ(ಭಿರ್)ಭೀ ವೈಷ್ಣವೀ ಮಾತಾ ನಿತ್ಯಂ ವಿಷ್ಣುಪದೇ ಸ್ಥಿತಾ।
ಗೋಗ್ರಾಸಸ್ತು ಮಯಾ ದತ್ತಃ }
ಗೋಗ್ರಾಸಂ ಮಯಾ ದತ್ತಂ } ಸುರಭಿಃ ಪ್ರತಿಗೃಹ್ಯತಾಮ್ ॥ ೧

(ಪದ್ಮಮಾಲಾ ಪುಟ ೧೮೦; ಉಡುಪಿ ಆಹ್ನಿಕ ಮಂಜರಿ ಪುಟ ೨೩೪)

ಗಾವೋ ಮೇ ಮಾತರಃ ಸರ್ವಾಃ ಪಿತರಶ್ಚಾಪಿ ಗೋವೃಷಾಃ।
ಗ್ರಾಸಮುಷ್ಟಿಪ್ರದಾನೇನ ಸ ಮೇ ವಿಷ್ಣುಃ ಪ್ರಸೀದತು ॥ ೨

ಗವಾಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ
ಶ್ರೀ ಗೋಪಾಲಕೃಷ್ಣಃ ಪ್ರೀಯತಾಮ್ ॥

(ಅರ್ಥ) ಧೇನುವು ವಿಷ್ಣುಸನ್ನಿಧಾನವಿಶೇಷವುಳ್ಳದ್ದು. ಅದು ತಾಯಿಗೆ ಸಮಾನ. ಗೋವು ಸದಾ ವಿಷ್ಣುವಿನ ಪಾದದಲ್ಲಿರುತ್ತದೆ. (ಗೋವಿನಲ್ಲಿ ವಿಷ್ಣುಪಾದದ ವಿಶೇಷ ಸಾನ್ನಿಧ್ಯವಿರುತ್ತದೆ.) ನಾನು ಗೋಗ್ರಾಸ ಇಡುತ್ತಿದ್ದೇನೆ. ಹೇ ಕಾಮಧೇನುವೇ, ಇದನ್ನು ಸ್ವೀಕರಿಸು. (೧ ಶ್ಲೋಕ) ಸಕಲ ಗೋವುಗಳೂ ನನ್ನ ತಾಯಿಯಂಗೆ ಸಮಾನ. ಗಂಡು ದನಗಳು (ಎತ್ತು ಇತ್ಯಾದಿಗಳು) ನನ್ನ ತಂದೆಗೆ ಸಮಾನರು. ಈ ಮುಷ್ಟಿಯಷ್ಟು ಗೋಗ್ರಾಸ ಕೊಟ್ಟಿದ್ದರಿಂದ ಆ ಭಗವಂತ ವಿಷ್ಣು ಪ್ರಸನ್ನನಾಗಲಿ.

ಪ್ರತ್ಯಾವಾಹನಮ್ (ವಿಸರ್ಜನೆ ಮಾಡುವುದು)

ಕೆಲವರು ಇದನ್ನು 'ಪ್ರಾವಾಹನಂ' ಅಥವಾ 'ಉದ್ವಾಸನಂ' ಎಂದೂ ಹೇಳುವರು.

ಪದ್ಮಮಾಲೆಯ ಹೇಳಿಕೆ—

ಆರುಹ್ಯ ವೇದಿಕಾಂ ಪಶ್ಚಾತ್ ಪೂಜಾಸಾದ್ಗುಣ್ಯಕಾರಕಮ್ ।
ಮೂಲಮಂತ್ರಂ ಹರಿಂ ಧ್ಯಾಯನ್ ಜಪೇದಷ್ಟೋತ್ತರಂ ಶತಮ್ ॥

(ಅರ್ಥ) (ನಮಸ್ಕಾರ ಮಾಡುವುದಕ್ಕಾಗಿ ಜಗಲಿಯಿಂದ ಕೆಳಗೆ ಇಳಿದಿದ್ದರೆ) ಜಗಲಿಯನ್ನು ಪುನಃ ಹತ್ತಿ (ಏರಿ), ಆಮೇಲೆ ಪೂಜೆಯು ಸಂಪೂರ್ಣವಾಗಿ ಭಗವತ್ಪ್ರೀತಿ-ಕರವಾಗಿ ಆಗುವುದಕ್ಕಾಗಿ ಶ್ರೀಹರಿಯನ್ನು ಸ್ಮರಿಸುತ್ತಾ ಮೂಲಮಂತ್ರವನ್ನು ನೂರೆಂಟು ಆವರ್ತಿ ಜಪಿಸಬೇಕು. (ಸೂಚನೆ— ಟೀಕಾಚಾರ್ಯರು ಪೂಜಾಕಾಲದಲ್ಲಿ ಅನೇಕ ಕಡೆ ಮೂಲಮಂತ್ರವನ್ನು ನೂರೆಂಟಾವರ್ತಿ ಜಪಿಸಬೇಕೆಂದು ಹೇಳಿದ್ದಾರೆ. ಆದರೆ ವರ್ತಮಾನ

ಪರಿಸ್ಥಿತಿಯಲ್ಲಿ ಹದಿನೈದು ನಿಮಿಷ ಇಡೀ ಪೂಜೆಗೆ ಸಿಗುವುದೇ ದುರ್ಲಭವಾಗಿರುವಾಗ ನೂರೆಂಟು ಸಾರಿ ನಾರಾಯಣಾಷ್ಟಾಕ್ಷರವನ್ನು ಜಪಿಸುವುದು ಅಸಾಧ್ಯವೆಂದೇ ನನಗೆ ತೋರುತ್ತದೆ. ಆದರೆ ಟೀಕಾಕಾರರೇ 'ಪದ್ಯಮಾಲಾ' ಕಡೆಯಲ್ಲಿ (೧೨೭ನೇ ಶ್ಲೋ. ದಲ್ಲಿ) ಹೇಳಿರುವಂತೆ ಪ್ರಮಾದವಶದಿಂದಲಾಗಿ ಲೌಕಿಕ ವ್ಯಾವಹಾರಿಕ ಅಡಚಣೆಗಳಿಂದಾಗಲಿ ಶ್ರೀಹರಿಯ ಪೂಜೆಯು ಸಕ್ರಮವಾಗಿ ಆಗದಿದ್ದರೆ, 'ಪದ್ಯಮಾಲಾ'ವನ್ನು ಪಠಿಸಿದರೆ ಅಥವಾ ಅದರಲ್ಲಿ ಹೇಳಿದ ಕ್ರಮವನ್ನಾದರೂ ತಿಳಿದುಕೊಂಡರೇ ಸಾಕು—"ನರಃ ಪೂಜಾ-ಫಲಂ ಲಭೇತ್"—ಆ ಮನುಷ್ಯನು ಸಕ್ರಮವಾಗಿ ಪೂಜೆ ಮಾಡಿದ ಫಲವನ್ನೇ ಪಡೆಯುತ್ತಾನೆ. ಈ ಮಾತೇ ನಮ್ಮೆಲ್ಲರಿಗೂ ಅನ್ವಯಿಸುತ್ತದೆ.

ತತ್ತ್ವನ್ಯಾಸಾನ್ ಮಾತೃಕಾಶ್ಚ ಪುನರ್ಮೂರ್ತೌ ಸಮಾಚರೇತ್ ||
ಪುನರ್ಧ್ಯಾತ್ವಾ ಹರಿಂ ದೇವ—'ಮಾತ್ವಾ ದೇವೇ'ತ್ಯೃಚಂ ಪಠೇತ್ |
ತತಃ ಆವಾಹನೀಂ ಮುದ್ರಾಂ ವ್ಯುತ್ಕ್ರಮೇಣ ವಿಧಾಯ ಚ || ೧೨೧

—ಪದ್ಯಮಾಲಾ

(ಅರ್ಥ) ತತ್ತ್ವನ್ಯಾಸ ಮಾತೃಕಾನ್ಯಾಸಗಳನ್ನು ಮೂರ್ತಿಯಲ್ಲಿ ವ್ಯುತ್ಕ್ರಮದಿಂದ ಮಾಡಬೇಕು. ಆಮೇಲೆ ಶ್ರೀಹರಿಯನ್ನು 'ಉದ್ಯದ್ಭಾಸ್ವತ್......!' ಇತ್ಯಾದಿ ಮಂತ್ರದಿಂದ ಧ್ಯಾನ ಮಾಡಿ 'ಅತ್ವಾ ದೇವಾನಾಂ' ಎಂಬ ಋಙ್ಮಂತ್ರವನ್ನು ಪುನಃ ಪಠಿಸಬೇಕು. ಆಮೇಲೆ ಆವಾಹನಾದಿ ಮುದ್ರೆಗಳನ್ನು ವ್ಯುತ್ಕ್ರಮದಿಂದ ತೋರಿಸಿ—

ಸೂಚನೆ— ತತ್ತ್ವನ್ಯಾಸ ಮಾತೃಕಾನ್ಯಾಸಗಳನ್ನು ಮಾಡುವುದಕ್ಕೆ ಮೊದಲೇ ಪೀಠದೇವತೆಗಳನ್ನೂ ಆವರಣದೇವತೆಗಳನ್ನೂ ವಿಸರ್ಜನೆ ಮಾಡಬೇಕು. ಅದಕ್ಕೆ ಕುಂಭಕೋಣದ 'ದೇವಪೂಜಾಪದ್ಧತಿ'ಯಲ್ಲಿ ಹೇಳಿದಂತೆ—'ಆವರಣದೇವತಾಃ ಪೀಠದೇವತಾಶ್ಚ ಉದ್ವಾಸಯಾಮೀತಿ ವಿಜ್ಞಾಪ್ಯ' ಆವರಣದೇವತೆಗಳನ್ನೂ ಪೀಠದೇವತೆಗಳನ್ನೂ ಪೀಠದೇವತೆಗಳನ್ನೂ ಉದ್ವಾಸನೆ ಮಾಡುತ್ತೇನೆ (ಕಳುಹಿಸಿಕೊಡುತ್ತೇನೆ) ಎಂದು ಸಂಕಲ್ಪ ಮಾಡಿ—ತತ್ತ್ವನ್ಯಾಸಾದಿಗಳನ್ನು ವಿಸರ್ಜನೆ ಮಾಡಬೇಕು. ಹಾಗೆಯೇ 'ಪದ್ಯಮಾಲಾ' ಟೀಕಾದಲ್ಲಿ 'ಪೂಜಾದೌ ಮಾತೃಕಾನ್ಯಾಸ ತತ್ತ್ವನ್ಯಾಸಾನ್ ಪೂಜಾಂತೇ ತತ್ತ್ವನ್ಯಾಸ-ಮಾತೃಕಾನ್ಯಾಸಾನ್ ಕುರ್ಯಾತ್' ಎಂದು ಹೇಳಿದ್ದಾರೆ. ಅದರಂತೆ ಮೂರ್ತಿಗಳಲ್ಲಿ ಆವಾಹನೆ ಮಾಡುವಾಗ ಮೊದಲು ಮಾತೃಕಾನ್ಯಾಸವನ್ನೂ ಆಮೇಲೆ ತತ್ತ್ವನ್ಯಾಸವನ್ನೂ ಮಾಡಬೇಕು. ಮುಗಿಸುವಾಗ ಅದಕ್ಕೆ ವಿರುದ್ಧವಾಗಿ ಮೊದಲು ತತ್ತ್ವನ್ಯಾಸವನ್ನೂ ಅನಂತರ ಮಾತೃಕಾನ್ಯಾಸವನ್ನೂ ಮಾಡಬೇಕು. ಪ್ರಾರಂಭದಲ್ಲಿ ನಾವು ಸೂಚಿಸಿರುವಂತೆ ನಾರಾಯಣಾಷ್ಟಾಕ್ಷರಾದಿ ಮಂತ್ರಗಳಿಂದ ಮೂರ್ತಿಯಲ್ಲಿ ಯಾವ ಕ್ರಮದಿಂದ ನ್ಯಾಸ ಮಾಡಿರುತ್ತೇವೋ ಅದೇ ಕ್ರಮದಲ್ಲೇ ವ್ಯುತ್ಕ್ರಮವಾಗಿ—ಹಿಂದುಮುಂದಾಗಿ—

ಮೊದಲು ನ್ಯಾಸ ಮಾಡಿ ಅನಂತರ ತತ್ತ್ವನ್ಯಾಸ-ಮಾತೃಕಾನ್ಯಾಸಗಳನ್ನು ಮಾಡಬೇಕು. (ಇದೆಲ್ಲಾ ಕೇವಲ ತಿಳಿದುಕೊಳ್ಳತಕ್ಕ ವಿಷಯವೇ ಹೊರತಾಗಿ ಈಗ ಮಾಡಲು ಸಾಧ್ಯವಿಲ್ಲ—ನಿತ್ಯ ಮಾಡುವುದಂತೂ ದೂರಕೋಪಾಸ್ತ.)

ಆಮೇಲೆ ಪ್ರಾರಂಭದಲ್ಲಿ—ಆವಾಹನೆ ಮಾಡುವಾಗ ತೋರಿಸಿದ್ದ ಆವಾಹನಾದಿ ಮುದ್ರೆಗಳನ್ನು ವ್ಯತ್ಯಯದಿಂದ ಹೀಗೆ ತೋರಿಸಬೇಕು— ೧. ಅವಗುಂಠಿತೋ ಭವ, ೨. ಸಮ್ಮುಖೋ ಭವ, ೩. ಸನ್ನಿರುದ್ಧೋ ಭವ, ೪. ಸನ್ನಿಹಿತೋ ಭವ, ೫. ಸಂಸ್ಥಾಪಿತೋ ಭವ, ೬. ಆವಾಹಿತೋ ಭವ—ಎಂದು ತೋರಿಸಬೇಕೆಂದು ಅರ್ಥ.

ಏಹ್ಯೇಹೀತಿ ಪುನಃ ಪ್ರೋಚ್ಯ ಪುನರಾವಾಹಯೇದ್ಧೃದಿ ।
ತಥೈವ ಪರಪೂಜಾಯಾಂ ರವ್ಯಾದೌ ತಂ ನಿಧಾಪಯೇತ್ ॥ ೧೨೨
(ಪಾಠಾಂತರ— ತು ವಿಸರ್ಜಯೇತ್)

(ಶಬ್ದಾರ್ಥ) ಏಹಿ + ಏಹಿ + ಇತಿ = ಏಹ್ಯೇಹೀತಿ—ಬಾ ಬಾ ಎಂಬುದಾಗಿ, ಪ್ರೋಚ್ಯ—ಹೇಳಿ, ಉಚ್ಚರಿಸಿ, ಹೃದಿ-(ತನ್ನ) ಹೃದಯದಲ್ಲಿ, ತಥೈವ-ಹಾಗೆಯೇ (ಅದೇ ರೀತಿಯೇ), ರವ್ಯಾದೌ (ರವಿ + ಆದೌ)-ಸೂರ್ಯ ಮೊದಲಾದವುಗಳಲ್ಲಿ (ಬೆಳಗ್ಗೆ ಪೂಜೆ ಮಾಡಿದರೆ ಸೂರ್ಯಾಂತರ್ಗತ ನಾರಾಯಣನನ್ನೂ, ರಾತ್ರಿ ಪೂಜೆಯಲ್ಲಿ ಚಂದ್ರನು ಕಾಣಿಸುತ್ತಿದ್ದರೆ ಚಂದ್ರಾಂತರ್ಗತ ನಾರಾಯಣನನ್ನೂ, ಚಂದ್ರನೂ ಕಾಣಿಸದಿರುವಾಗ ಅಗ್ನಿಯ ಅಂತರ್ಗತ ನಾರಾಯಣನನ್ನೂ ಆವಾಹಿಸಬೇಕು. ಈಗ ವಿಸರ್ಜನೆ ಮಾಡುವಾಗ ಯಾವ ಯಾವ ಸ್ಥಳದಿಂದ ಆವಾಹಿಸಲಾಗಿತ್ತೋ ಅಲ್ಲಲ್ಲೇ—ಬೆಳಗ್ಗೆ ಸೂರ್ಯನಲ್ಲೂ, ಚಂದ್ರ ಕಾಣಿಸುತ್ತಿದ್ದರೆ ಚಂದ್ರನಲ್ಲೂ, ಅಗ್ನಿಯಿಂದ ಆವಾಹಿಸಿದ್ದರೆ ಅಗ್ನಿಯಲ್ಲೂ, ಆ ನಾರಾಯಣನನ್ನು ವಿಸರ್ಜಿಸಿ ಕಳುಹಿಸಬೇಕೆಂದು ತಾತ್ಪರ್ಯ.) ನಿಧಾಪಯೇತ್-ಧ್ಯಾನ ಮಾಡಿ ಸ್ಥಾಪಿಸಬೇಕು (ನಿ-ಧಾ ಧಾತುವಿಗೆ ಇಡು ಎಂದು ಅರ್ಥ. ಮುಂದಿನ 'ಪ'ಕಾರವು ಪ್ರೇರಣಾರ್ಥಕ. ಇಡಿಸಬೇಕು-ಸ್ಥಾಪನೆ ಮಾಡಬೇಕು.) ವಿಸರ್ಜಯೇತ್-ವಿಸರ್ಜನೆ ಮಾಡಬೇಕು.

ತಾತ್ಪರ್ಯ— 'ಹೇ ಸ್ವಾಮಿ, ಬಾ ಬಾ' ಎಂದು ಪ್ರಾರ್ಥಿಸಿ (ಹೇಳಿ) ಪ್ರತಿಮಾಸ್ಥಿತ ಬಿಂಬಮೂರ್ತಿಯನ್ನು ಪುನಃ ಹೃದಯಕ್ಕೆ ಹೋಗಿದ್ದಾನೆಂದು ಭಾವಿಸಿ ಬಿಚ್ಚಿದ ಎರಡು ಅಂಗೈಗಳನ್ನೂ ಆ ಪ್ರತಿಮೆಯ ಕಡೆ ಮೊದಲು ತೋರಿಸಿ ಮೇಲೆ (೧೨ನೇ ಶ್ಲೋಕದಲ್ಲಿ) ಹೇಳಿದಂತೆ ಅವಗುಂಠಿತೋ ಭವ......ಆವಾಹಿತೋ ಭವ ಎಂದು ಆರು ಮುದ್ರೆಗಳನ್ನು ತೋರಿಸಿ, ಬಿಚ್ಚಿದ ಅಂಗೈಗಳನ್ನು ನಮ್ಮ ಕಡೆ (ಎದೆಗೆ ಅಭಿಮುಖವಾಗಿ) ತಿರುಗಿಸಿ, ಮೂರ್ತಿಯಲ್ಲಿದ್ದ ಪರಮಾತ್ಮ ನಮ್ಮ ಕೈಯಲ್ಲಿರುವ ತುಳಸೀ ಪುಷ್ಪಗಳ ಮುಖಾಂತರ (ಬರೀ ಕೈ ಆಗಿದ್ದರೆ ಕೈಗಳ ಬೆಟ್ಟುಗಳ ಮೂಲಕ) ಬಂದಿದ್ದಾನೆಂದೂ ಅಲ್ಲಿಂದ

ಹೃದಯಕ್ಕೆ ಹೋಗಿದ್ದಾನೆಂದೂ ಭಾವಿಸಬೇಕು. ಹೃದಯದಲ್ಲಿ ನೆಲೆಸಿದ ಮೇಲೆ ಹೃದಯಕಮಲವನ್ನು ಮುಚ್ಚಿಕೊಂಡುಬಿಡು ಎಂದು ಪ್ರಾರ್ಥಿಸುವ ಕ್ರಮವನ್ನು ಮುಂದಿನ ಶ್ಲೋಕದಲ್ಲಿ ತೋರಿಸಿದೆ.

ಇನ್ನು ಇನ್ನೊಬ್ಬರ ಮನೆಯಲ್ಲಿ ಪೂಜೆ ಮಾಡುವಾಗ ಪ್ರಾರಂಭದಲ್ಲಿ ಸೂರ್ಯಾದಿ ಮಂಡಲದಿಂದ (ಸೂರ್ಯ ಚಂದ್ರ ಅಗ್ನಿಮಂಡಲದಿಂದ) ಆ ಭಗವಂತನನ್ನು ಆಹ್ವಾನಿಸಿರುವುದರಿಂದ ಈಗ ಪುನಃ ಆಯಾ ಮಂಡಲದಲ್ಲೇ—ಷಣ್ಮುದ್ರೆಗಳನ್ನು ತೋರಿಸಿದ ಬಳಿಕ—ಹೋಗಿ ಸೇರಿಕೊಂಡನೆಂದು ಭಾವಿಸಬೇಕು. 'ಹೃದಯಕ್ಕೆ ಹೋಗಿ ನೆಲೆಸು' ಅಥವಾ 'ಸೂರ್ಯಮಂಡಲದಲ್ಲಿ ಹೋಗಿ ನೆಲೆಸು' ಎಂದು ಪ್ರಾರ್ಥಿಸುವ ಕ್ರಮವನ್ನು ತೋರಿಸುತ್ತಾರೆ—

ಯಾಚೇಽಹಂ ತ್ವಾಂ ಹೃಷೀಕೇಶ ನಮಾಮಿ ಪುರುಷೋತ್ತಮ ।
ಹೃದಿ ಮೇ ಕುರು ಸಂವಾಸಂ ಶ್ರಿಯಾ ಸಹ ಜಗತ್ಪತೇ ॥ ೧೨೩
(ಪಾಠಾಂ ಹೃದಯೇ)
ಇತಿ ಪ್ರಾರ್ಥ್ಯ ಹರಿಂ ಪಶ್ಚಾದ್ ವಿದಧ್ಯಾತ್ ತತ್ತ್ವ-ಮಾತೃಕಾಃ ॥ ೧೨೪

ತಾತ್ಪರ್ಯ— ಹೇ ಸಕಲೇಂದ್ರಿಯಗಳಿಗೂ ನಿಯಾಮಕನಾದ ಸ್ವಾಮಿಯೇ, (ಹೃಷೀಕ-ಇಂದ್ರಿಯ, ಈಶ-ಒಡೆಯ), ಕ್ಷರಾಕ್ಷರಗಳೆಂಬ ಎರಡು ವಿಧ ಪುರುಷರಿಗಿಂತಲೂ ಉತ್ತಮನಾದ ಹೇ ಪುರುಷೋತ್ತಮನೇ! ನಿನ್ನನ್ನು ಬೇಡಿಕೊಳ್ಳುತ್ತೇನೆ ಮತ್ತು ವಂದಿಸುತ್ತೇನೆ. ಹೇ ಜನರೊಡೆಯನೇ ಲಕ್ಷ್ಮೀಸಮೇತನಾಗಿ ನನ್ನ ಹೃದಯದಲ್ಲಿ (ಅಥವಾ ಸೂರ್ಯ ಚಂದ್ರ ಅಗ್ನಿಮಂಡಲದಲ್ಲಿ) ಹಿಂದಿನಂತೆಯೇ ನೆಲೆಸಿ ವಾಸಮಾಡುವನಾಗು—ಎಂದು ಪ್ರಾರ್ಥಿಸಿದ ಮೇಲೆ ತನ್ನ ಶರೀರದಲ್ಲಿ (ಪೂಜೆಗೆ ಮೊದಲು ತತ್ತ್ವನ್ಯಾಸ-ಮಾತೃಕಾನ್ಯಾಸಗಳನ್ನು ಮಾಡಿಕೊಂಡಿದ್ದರೆ) ಈಗ ವ್ಯುತ್ಕ್ರಮದಿಂದ ಮಾತೃಕಾನ್ಯಾಸ-ತತ್ತ್ವನ್ಯಾಸಗಳನ್ನು ಮಾಡಿಕೊಳ್ಳಬೇಕು.

ಸೂಚನೆ— ತಂತ್ರಸಾರದಲ್ಲಿ 'ಪ್ರತಿಮಾಯಾಂ ಆತ್ಮನಿ ಚ ನಾ ಸೋಽಯಂ ಸನ್ನಿಧಾನಕೃತ್' (೪/೧೩೫) ಎಂದು ಹೇಳಿದಂತೆ ತತ್ತ್ವನ್ಯಾಸ ಮಾತೃಕಾನ್ಯಾಸಗಳನ್ನು ಮಾತ್ರವಲ್ಲದೆ ನಾರಾಯಣಾಷ್ಟಾಕ್ಷರ, ವಾಸುದೇವ ದ್ವಾದಶಾಕ್ಷರ, ಕೃಷ್ಣಮಂತ್ರ, ರಾಮಮಂತ್ರಾದಿಗಳಿಂದಲೂ ವರ್ಣನ್ಯಾಸ ಮಾಡಿಕೊಳ್ಳುವುದರಿಂದ ತನ್ನ ದೇಹದಲ್ಲೂ ಪ್ರತಿಮೆಯಲ್ಲೂ, ಭಗವಂತನ ಸಾನ್ನಿಧ್ಯ ಹೆಚ್ಚಾಗುವುದು. ಆದ್ದರಿಂದ ಶ್ರೀ ಟೀಕಾಕೃತ್ಪಾದರು ಹೀಗೆ-ಪ್ರತಿಮೆಯಲ್ಲಿ ಮೊದಲು ಉದ್ವಾಸನೆ ಮಾಡು, ಆಮೇಲೆ ನಿನ್ನ ದೇಹದಲ್ಲಿ ವಿಸರ್ಜನೆ ಮಾಡಿಕೋ ಎಂದು ಹೇಳಿದ್ದಾರೆ. ಮೂರ್ತಿಯಲ್ಲಿ ನಾರಾಯಣಾಷ್ಟಾಕ್ಷರಾದಿ

ಮಂತ್ರಗಳಿಂದ ಮೊದಲು ನ್ಯಾಸ ಮಾಡಿದ್ದರೆ ಈಗ ಮುಗಿಸುವಾಗ ಮೊದಲು ಲಯ-ಕ್ರಮದಿಂದಲೂ, ಆಮೇಲೆ ಸೃಷ್ಟಿ-ಸ್ಥಿತಿ ಕ್ರಮದಿಂದಲೂ ಮಾಡಬೇಕು. ಮೊದಲು ಒಂದೇ ಕ್ರಮದಿಂದ (ಸ್ಥಿತಿ ಅಥವಾ ಸೃಷ್ಟಿ) ನ್ಯಾಸ ಮಾಡಿದ್ದರೆ ಮುಗಿಸುವಾಗ ಲಯ-ಕ್ರಮದಿಂದಲೇ ಮಾಡಬೇಕು. ಆದರೆ ಮೊದಲಲ್ಲೇ ಯಾವ ನ್ಯಾಸವನ್ನೂ ಮಾಡದೇ ಇದ್ದರೆ ಈ ಭಾಗ ಅವರಿಗೆ ಅನ್ವಯಿಸುವುದೇ ಇಲ್ಲ.

ಉಡುಪಿ ಆಹ್ನಿಕಮಂಜರಿಯಲ್ಲೂ, ಕುಂಭಕೋಣದ 'ದೇವಪೂಜಾಪದ್ಧತಿ'ಯಲ್ಲೂ 'ಯಾಚೇಽಹಂ' ಎಂಬ 'ಪದ್ಮಮಾಲಾ'ದಲ್ಲಿ ಕೊಟ್ಟಿರುವ ಶ್ಲೋಕದ ಜೊತೆ ಈ ಶ್ಲೋಕವನ್ನೂ ಪಠಿಸಬೇಕೆಂದು ಹೇಳಿದೆ—

ಚಂದ್ರಸ್ಥ ವಾಮನ ಹರೇ ಸರ್ವಲೋಕಸುಖಪ್ರದ ।
ಮುಕುಲೀಕುರು ಹೃತ್ಕಂಜಂ ಪೂರ್ವವತ್ ಸ್ಥಾಪಯಸ್ವ ತತ್ ॥

(ಅರ್ಥ) ಚಂದ್ರಮಂಡಲದಲ್ಲಿರುವ ವಾಮನರೂಪಿ ಶ್ರೀಹರಿಯೇ, ಸಕಲ ಲೋಕಗಳಿಗೂ ಸುಖವನ್ನು ಕೊಡುವವನೇ! ಹೃದಯಕಮಲವನ್ನು (ಕಂಜ–ಕಮಲ) ಮುಚ್ಚಿ-ಬಿಡು. ಅದನ್ನು ಹಿಂದಿನಂತೆಯೇ ಮುಚ್ಚಿಕೊಂಡಿರುವಂತೆ ಮಾಡು.

ಪರಾರ್ಥವಾಗಿ ಪ್ರತ್ಯಾವಾಹನೆ ಮಾಡುವಾಗ— ಹೃದಿ ಮೇ ಅಥವಾ ಹೃದಯೇ (ಉಡುಪಿ, ಕುಂಭಕೋಣ ಪಾಠಾಂತರ) ಎಂಬುದಕ್ಕೆ ಬದಲಾಗಿ ಬೆಳಗ್ಗೆ ಹೊತ್ತಾದರೆ 'ಭಾಸ್ಕರೇ' ಅಥವಾ 'ಆದಿತ್ಯೇ' ಎಂದೂ, ರಾತ್ರಿ ಹೊತ್ತು ಚಂದ್ರನಿದ್ದಾಗ 'ಹಿಮಾಂಶೌ' ಅಥವಾ 'ಸುಧಾಂಶೌ' ಎಂದೂ ಚಂದ್ರನಿಲ್ಲದಿದ್ದಾಗ 'ಜ್ವಲನೇ' ಅಥವಾ 'ಅನಲೇ' ಎಂದೂ ಹೇಳಿಕೊಳ್ಳಬೇಕು.

ಪ್ರತ್ಯಾವಾಹನ ಕ್ರಮ (ಉದ್ವಾಸನೆ ಅಥವಾ ಪ್ರವಾಹನೆ)

೧. ರಮಾದಿಗಳ, ಪ್ರಾಣದೇವರ ಮತ್ತು ಗುರುಗಳ ಪೂಜೆ ಮುಗಿದಮೇಲೆ ದೇವರ ಮೇಲೆ ಹೂವು ತುಳಸಿ ಏರಿಸಿ (ಅಥವಾ ಕೈಮುಗಿದು) ಎಂಟಾವರ್ತಿಯಾದರೂ ಮೂಲಮಂತ್ರವನ್ನು ಪಠಿಸುವುದು ಉತ್ತಮ. (ಆಮೇಲೆ ತತ್ತ್ವನ್ಯಾಸ ಮಾತೃಕಾನ್ಯಾಸಗಳನ್ನೂ ಮೂಲಮಂತ್ರದಿಂದ ನ್ಯಾಸ ಮಾಡಿದ್ದರೆ ಅದನ್ನು ವಿಸರ್ಜನೆ ಮಾಡಬೇಕು. ೨ ಅನಂತರ 'ಉದ್ಯದ್ಭಾಸ್ವತ್' 'ಅತ್ಯಾಸೇವಾನಾಂ' ಮಂತ್ರಗಳನ್ನು ಪಠಿಸಿ, ಅವಕುಂಠನಾದಿ ಆರು ಮುದ್ರೆಗಳನ್ನು (ವ್ಯುತ್ಕ್ರಮದಿಂದ ತೋರಿಸಿ, ಹೂವು-ತುಳಸೀ ಹಿಡಿದುಕೊಂಡು, ದೇವರ ಕಡೆ ತೋರಿಸುತ್ತಾ ೩. ಏಹ್ಯೇಹಿ ಪ್ರತಿಮಾಸ್ಥಿತ ಶ್ರೀ ಪುರುಷೋತ್ತಮ ಪ್ರಸೀದ ಪ್ರಸೀದ ಎಂದು ಸಂಬೋಧಿಸಿ "ಯಾಚೇಽಹಂ ತ್ವಾಂ......" ಎಂಬ ಶ್ಲೋಕದಿಂದ ಪ್ರಾರ್ಥಿಸಿ, ಭಗವನ್ನಾಗಚ್ಛಾಗಚ್ಛ, ಭಗವಂತಂ ಸಶ್ರೀಕಂ ಸಪರಿವಾರಂ ಶ್ರೀ ಲಕ್ಷ್ಮೀನಾರಾಯಣಂ ಮಮ ಹೃತ್ಕಮಲೇ ಪೂರ್ವವತ್ ಪ್ರಾವಾಹಯಾಮಿ

(ಅಥವಾ ಉದ್ವಾಸಯಾಮಿ) ಎಂದು ಹೇಳಿ ಆ ಪರಮಾತ್ಮ ತನ್ನ ಕೈಯಲ್ಲಿರುವ ಹೂವಿನಲ್ಲಿ ಅಥವಾ ಕೈಯಲ್ಲೇ ಸನ್ನಿಹಿತನಾಗಿದ್ದಾನೆಂದು ಭಾವಿಸಿ, ತನ್ನ ಕೈ (ಬೊಗಸೆ)ಯನ್ನು ಹೃದಯದ ಕಡೆ ತಿರುಗಿಸಿಕೊಂಡು, ತನ್ನ ಎಡಮೂಗಿನ ಮುಖಾಂತರ ಆ ಪರಮಾತ್ಮ ಸುಷುಮ್ನಾ ಮಾರ್ಗವಾಗಿ ಹೃದಯದಲ್ಲಿ ನೆಲೆಸಿಬಿಟ್ಟನೆಂದು ತಿಳಿದುಕೊಂಡು, ತುಳಸೀದಳ ಕೈಯಲ್ಲಿ ಹಿಡಿದಿದ್ದರೆ ಅದನ್ನು ಕಿವಿಯಲ್ಲಿ ಧರಿಸಿ ಹೃದಯದಲ್ಲಿ ಕೈಯಿಟ್ಟುಕೊಂಡು

ಚಂದ್ರಸ್ಥ ವಾಮನ ಹರೇ ಸರ್ವಲೋಕಸುಖಪ್ರದ।
ಮುಕುಲೀಕುರು ಹೃತ್ಕಂಜಂ ಪೂರ್ವವತ್ ಸ್ಥಾಪಯಸ್ವ ತತ್ ॥

ಎಂದು ಹೇಳಿ ಕೈಮುಗಿದುಬಿಡಬೇಕು. ಇದು "ಪ್ರತಿಮೆಗಳಿದ್ದ ಪಕ್ಷದಲ್ಲಿ" ಮಾಡಬೇಕಾದ ಕ್ರಮ.

ಪ್ರತಿಮೆಗಳೇ ಇಲ್ಲದಿದ್ದು ಕೇವಲ ಸಾಲಿಗ್ರಾಮವೇ ಇದ್ದರೆ, ಆಗ ಆರು ಮುದ್ರೆ ತೋರಿಸುವ ಅಥವಾ ನ್ಯಾಸ ವಿಸರ್ಜನೆ ಮಾಡುವ ಪ್ರಸಂಗವೇ ಇಲ್ಲ. ಸಾಲಿಗ್ರಾಮದಲ್ಲಿ ತಾತ್ಕಾಲಿಕವಾಗಿ ಸನ್ನಿಹಿತನಾಗಿದ್ದು ಹೃದಯದಲ್ಲಿರುವ ಬಿಂಬಮೂರ್ತಿಯನ್ನು ಐಕ್ಯ-ಚಿಂತನೆ ಮಾಡಿದ್ದರಿಂದ "ಯಾಚೇsಹಂ ತ್ವಾಂ..." ಎಂಬ ಶ್ಲೋಕವನ್ನು ಪಠಿಸಿ ಕೈ ಮುಗಿದುಬಿಟ್ಟರೆ ಮುಗಿದುಹೋಯಿತು.

ಸಾಲಿಗ್ರಾಮವನ್ನು ಡಬ್ಬಿಯಲ್ಲಿಟ್ಟು (ಸಂಪುಟದಲ್ಲಿಟ್ಟು) ಮುಚ್ಚುವಾಗ ಈ ಶ್ಲೋಕ ಹೇಳಿಕೊಳ್ಳಬೇಕು.

ಶಾಲಿಗ್ರಾಮಶಿಲಾಸ್ಪರ್ಶಂ ಯೇ ಕುರ್ವಂತಿ ದಿನೇ ದಿನೇ।
ವಾಂಛಂತಿ ಕರಸಂಸ್ಪರ್ಶಂ ತೇಷಾಂ ದೇವಾಃ ಸವಾಸವಾಃ ॥

ಶಬ್ದಾರ್ಥ— ವಾಂಛಂತಿ-ಅಪೇಕ್ಷಿಸುತ್ತಾರೆ, ವಾಸವ-ದೇವೇಂದ್ರ, ಸವಾಸವಾಃ-ದೇವೇಂದ್ರಾದಿ ದೇವತೆಗಳು.

ತಾತ್ಪರ್ಯ— ಯಾರು ಪ್ರತಿನಿತ್ಯವೂ ಶಾಲಿಗ್ರಾಮಶಿಲೆಯನ್ನು ಸ್ಪರ್ಶ ಮಾಡುತ್ತಿರುತ್ತಾರೋ (ಅವರ ಕೈ ಬಹಳ ಪವಿತ್ರವಾಗಿರುವುದರಿಂದ) ಅಂಥವರು ತಮ್ಮನ್ನು ಕರದಿಂದ ಸ್ಪರ್ಶ ಮಾಡಲಿ ಎಂದು ಇಂದ್ರಾದಿ ದೇವತೆಗಳೂ ಅಪೇಕ್ಷೆಪಡುತ್ತಾರೆ.

ಇನ್ನೊಬ್ಬರ ಮನೆಯಲ್ಲಿ ಪೂಜೆ ಮಾಡುವಾಗ, ಮೂರ್ತಿಗಳಿದ್ದು ಅದರಲ್ಲಿ ಸೂರ್ಯ-ಚಂದ್ರಾಗ್ನಿಗಳಲ್ಲಿದ್ದ ಪರಮಾತ್ಮನನ್ನು ಆವಾಹನೆ ಮಾಡಿದ್ದರೆ, ಹಿಂದಿನಂತೆ ಪರಮಾತ್ಮನ ಕಡೆ ಮೊದಲು ಕೈ ತೋರಿಸಿ 'ಯಾಚೇsಹಂ...' ಎಂಬ ಶ್ಲೋಕ ಪಠಿಸಿ, 'ಹೃದಯೋ' ಅಥವಾ 'ಹೃದಿಮೇ' ಎಂಬ ಸ್ಥಳದಲ್ಲಿ 'ಭಾಸ್ಕರೇ' (ರಾದಿತ್ಯೆ) ಇತ್ಯಾದಿಗಳನ್ನು ಹೇಳಿಕೊಂಡು ಕೈಯನ್ನು ತನ್ನ ಕಡೆ ತೋರಿಸುವುದಕ್ಕೆ ಪ್ರತಿಯಾಗಿ ಆಕಾಶದ ಕಡೆ ತೋರಿಸಿ

ಕೈ ಮುಗಿದುಬಿಡಬೇಕು. ಇನ್ನು ಅಲ್ಲೂ ಮೂರ್ತಿಗಳೇ ಇಲ್ಲದಿದ್ದರೆ "ಯಾಚೇಽಹಂ..." ಎಂಬ ಶ್ಲೋಕ ಪಠಿಸಿ ಕೈಮುಗಿದುಬಿಡಬೇಕು.

ಇಲ್ಲಿಗೆ ಪ್ರತ್ಯಾವಾಹನಕ್ರಮವು ಮುಗಿಯಿತು.

vi) ಪ್ರಾರ್ಥನಾ

ಈ ಪ್ರಾರ್ಥನಾ ಭಾಗದಲ್ಲಿ ಉಡುಪಿ ಆಹ್ನಿಕ ಮಂಜರಿಯಲ್ಲಿ ಅನೇಕ ಶ್ಲೋಕಗಳನ್ನು ಕೊಟ್ಟಿದೆ. ಯದ್ಯಪಿ ಅವೆಲ್ಲ ಅನುಸಂಧಾನಕ್ಕೆ ಯೋಗ್ಯವಾದ ವಿಷಯಗಳೇ ಆಗಿದ್ದರೂ ದೇವರಪೂಜೆ ಮುಗಿಸಲು ನಾವೂ ಇತರರೂ ಕಾತುರರಾಗಿರುವಾಗ ಅಷ್ಟೆಲ್ಲಾ ಹೇಳುತ್ತಾ ಕೂಡುವುದು ಹಿಂಸೆಗೇ ಕಾರಣವಾಗುತ್ತದೆ. ಆದ್ದರಿಂದ ಇಲ್ಲಿ ಒಂದೆರಡು ಮುಖ್ಯ ಶ್ಲೋಕಗಳನ್ನು ಕೊಟ್ಟಿದೆ. ಮಿಕ್ಕ ಶ್ಲೋಕಗಳನ್ನು ಆಹ್ನಿಕಮಂಜರಿಯಿಂದ ನೋಡಿ ಕಲಿತುಕೊಳ್ಳಬಹುದು.

ನ ಜಾನೇ ಕರ್ಮ ಯತ್ಕಿಂಚಿ—ನ್ನಾಪಿ ಲೌಕಿಕ ವೈದಿಕೇ ।
ನ ನಿಷೇಧ ವಿಧಿ ವಿಷ್ಣೋ ತವ ದಾಸೋಽಸ್ಮಿ ಕೇವಲಮ್ ॥ ೧ ॥

ಶಬ್ದಾರ್ಥ— ನ ಜಾನೇ-ನನಗೆ ಗೊತ್ತಿಲ್ಲ (ನಾನು ತಿಳಿದಿಲ್ಲ), ಯತ್ ಕಿಂಚಿತ್-ಸ್ವಲ್ಪವೂ ಕೂಡ, ಏನೇನೂ, ನಿಷೇಧ-ಮಾಡಬಾರದ ಕೃತ್ಯಗಳು, ವಿಧಿ—ನಿಯಮ (ಕರ್ತವ್ಯ).

ತಾತ್ಪರ್ಯ— ಹೇ ವಿಷ್ಣೋ, ಸ್ವಾಮಿ, ನನಗೆ ಕರ್ಮದ ವಿಚಾರ ಏನೇನೂ ಗೊತ್ತಿಲ್ಲ. ಲೌಕಿಕ ಧರ್ಮಗಳಾವುವೋ ವೈದಿಕ ಧರ್ಮಗಳಾವುವೋ ಎರಡೂ ತಿಳಿಯದು. ಯಾವುದು ಮಾಡಬಾರದು (ನಿಷೇಧ), ಯಾವುದು ಮಾಡಬೇಕು (ವಿಧಿ ಕರ್ತವ್ಯ), ಎರಡನ್ನೂ ಅರಿಯೆನು. ಏನೋ ನಿನ್ನ ದಾಸನಾಗಿದ್ದೇನೆಂದು ತಿಳಿದು ನನ್ನನ್ನು ಉದ್ಧಾರ ಮಾಡು (ಅನುಗ್ರಹ ಮಾಡು).

ನಾಹಂ ಕರ್ತಾ ಹರಿಃ ಕರ್ತಾ ತ್ವತ್ಪೂಜಾ ಕರ್ಮಚಾಖಿಲಮ್ ।
ತಥಾಪಿ ಮತ್ಕೃತಾ ಪೂಜಾ ತ್ವತ್ಪ್ರಸಾದೇನ ನಾನ್ಯಥಾ ॥ ೨ ॥

(ಅರ್ಥ) ಮಾಡುವವನು ನಾನಲ್ಲ. ಎಲ್ಲವನ್ನೂ ಶ್ರೀಹರಿಯೇ ನಿಂತು ಪ್ರೇರಿಸಿ ಮಾಡಿಸುವವನು. ಆದ್ದರಿಂದ (ಬೆಳಗ್ಗೆಯಿಂದ ರಾತ್ರಿಯವರೆಗೆ, ರಾತ್ರಿಯಿಂದ ಬೆಳಗಿನವರೆಗೆ) ಮಾಡಿದ್ದೆಲ್ಲವೂ—ಮಾಡಿದ ಕರ್ಮಗಳೆಲ್ಲವೂ ಶ್ರೀಹರಿಯ ಪೂಜೆಯೇ ಆಗಿದೆ. ಆದರೂ ಕೂಡ ನಾನು ಮಾಡಿದ ಪೂಜೆಯೂ ಅವನ ಅನುಗ್ರಹದಿಂದಲೇ ಹೊರತಾಗಿ ಬೇರೆ ಏನೂ ಅಲ್ಲ.

ಕೆಳಗಿನ ಶ್ಲೋಕವನ್ನು ಕುಂಭಕೋಣದ 'ದೇವಪೂಜಾ ಪದ್ಧತಿ'ಯಿಂದ ಸಂಗ್ರಹ ಮಾಡಿದ್ದೇನೆ—

ಆಸನಾದ್ಯನುಯಾಗಾಂತಂ ಸರ್ವಸಂಪನ್ನಂ ಮಯಾ ಕೃತಮ್ ।
ಮಂತ್ರಹೀನಂ ಕ್ರಿಯಾಹೀನಂ ಭೋಗಹೀನಮಭಕ್ತಿಕಮ್ ॥
ತತ್ ಸರ್ವಂ ಕ್ಷಮ್ಯತಾಂ ದೇವ ದೀನಂ ಮಾಂ ಸ್ವಾತ್ಮಸಾತ್ ಕುರು ॥

ಶಬ್ದಾರ್ಥ— ಅನುಯಾಗ-ತಂತ್ರಸಾರದ ಪ್ರಥಮಾಧ್ಯಾಯದಲ್ಲಿ ಹೇಳಿರುವ ನಿತ್ಯ ಮಾಡಬೇಕಾದ ಒಂದು ಹೋಮವಿಧಿ (ಇದರ ವಿವರ—ವಿಧಾನವನ್ನು ಉಪಾಂಟ ಆಹ್ನಿಕ ಮಂಜರಿಯಲ್ಲಿ ಕೊಟ್ಟಿದೆ.) ಮಯಾ ಕೃತಂ-ನನ್ನಿಂದ ಮಾಡಲ್ಪಟ್ಟದ್ದೆಲ್ಲವೂ, ಕ್ರಿಯಾಹೀನಂ-ಮಾಡಬೇಕಾದ ಕರಣ (ತಂತ್ರ)ರಹಿತವಾದದ್ದು. (ಆಭರಣಾನಿ ಸಮರ್ಪಯಾಮಿ ಎಂದು ಬಾಯಲ್ಲಿ ಹೇಳಿದರೂ ನಿಜವಾಗಿ ಆಭರಣ ಇರುವುದಿಲ್ಲ. ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ ಎನ್ನುವುದೂ ಹೀಗೆಯೇ ಕರ್ಮಹೀನವಾದ ಹೇಳಿಕೆ). ಭೋಗಹೀನಂ-ನಾನಾ ವಿಧಾನಿ ಫಲಾನಿ ಪುಷ್ಪಾಣಿ ಸಮರ್ಪಯಾಮಿ ಎಂದು ಹೇಳಿದರೂ ಫಲವೂ ಇಲ್ಲ—ಪುಷ್ಪವೂ ಇರುವುದಿಲ್ಲ—ಇವೆಲ್ಲ 'ಭೋಗಹೀನ' ಉಪಚಾರಗಳು. ಆತ್ಮಸಾತ್-ನಿನ್ನ ಅಧೀನನನ್ನಾಗಿ.

ತಾತ್ಪರ್ಯ— ಹೇ ಭಗವಂತ, ನಾನು ಆಸನದಿಂದ ಆರಂಭಿಸಿ (ತಂತ್ರಸಾರದ ಪ್ರಥಮಾಧ್ಯಾಯದಲ್ಲಿ ಹೇಳಿದಂತೆ) ಅನುಯಾಗದವರೆಗೆ ಏನೇನು ಪೂಜೆ ಉಪಚಾರ ಮಾಡಿದ್ದೇನೋ ಅದೆಲ್ಲವೂ ಮಂತ್ರಹೀನವೂ (ವೇದಮಂತ್ರಗಳಿಗೆ ಸ್ವರ ಹೇಳದಿದ್ದರೆ, ಅಥವಾ ತಪ್ಪು ಸ್ವರ ಹೇಳಿದರೆ ಮಂತ್ರ ಹೇಳದಿದ್ದುದಕ್ಕೆ ಸಮಾನ.) ಕರಣ (ತಂತ್ರ) ಹೀನವೂ ಭೋಗಹೀನವೂ ಭಕ್ತಿಹೀನವೂ ಆಗಿದೆ. ಆದರೂ ಸ್ವಾಮಿ, (ನೀನು ದಯಾಸಮುದ್ರನಾದ್ದರಿಂದ) ಅವೆಲ್ಲವನ್ನೂ ಕ್ಷಮಿಸಿ ನನ್ನನ್ನು ಭಕ್ತನೆಂದು ತಿಳಿದು ಸ್ವೀಕಾರ ಮಾಡು.

ಇತ್ಯಾದಿ ಶ್ಲೋಕಗಳನ್ನು ಹೇಳಿಕೊಳ್ಳಬಹುದು.

vii) ಪೂಜಾ ಸಮಾಪನಮ್

ಧ್ಯಾತ್ವಾ ಸಮರ್ಪಯೇದ್ವಿಷ್ಣುಂ 'ಯಸ್ಯ ಸ್ಮೃತ್ಯೇ'ತಿ ಮಂತ್ರತಃ ॥

ಅರ್ಥ— ಹಿಂದೆ (ಮೇಲೆ) ಹೇಳಿದಂತೆ ಶ್ರೀಹರಿಯನ್ನು ಪ್ರಾರ್ಥಿಸಿ, ಕ್ಷಮೆ ಬೇಡಿ, 'ಯಸ್ಯ ಸ್ಮೃತ್ಯಾ ಚ' ಎಂಬ ಮಂತ್ರದಿಂದ ಸಮಾಪ್ತಿ ಮಾಡಬೇಕು.

ಸಮಾಪನದ ವಿಧಾನ—

ದೇವರನ್ನು ಪೆಟ್ಟಿಗೆಯಲ್ಲೋ ಅಥವಾ ಡಬ್ಬಿಯಲ್ಲೋ ಮುಚ್ಚಿಟ್ಟು ಮಂದಾಸನದಲ್ಲೋ ದೇವರ ಗೂಡಿನಲ್ಲೋ ಇಟ್ಟ ನಂತರ 'ಯಸ್ಯ ಸ್ಮೃತ್ಯಾ ಚ' ಎಂಬ ಮಂತ್ರ ಹೇಳಿಕೊಂಡು ಮಾಡಿದ ಪೂಜೆಯನ್ನು ಶ್ರೀಹರಿಯಲ್ಲಿ ಸಮರ್ಪಿಸಬೇಕು. ಹೇಗೆಂದರೆ —

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜಾ ಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್

ಅರ್ಥ — ತಪಸ್ಸು (ಸಂಧ್ಯಾಯಜ್ಞ) ಪೂಜಾದಿ ಕಾರ್ಯಗಳಲ್ಲಿ ಯಾವ ಭಗವಂತನ ಸ್ಮರಣೆಯಿಂದಲೂ ನಾಮೋಚ್ಚಾರಣದಿಂದಲೂ (ನಾಮ + ಉಕ್ತಿ — ಉಕ್ತ್ಯಾ) ಏನೇನು ಲೋಪದೋಷಗಳಿರುತ್ತವೋ ಅವೆಲ್ಲವೂ ಪರಿಪೂರ್ಣವಾಗಿ ಲೋಪರಹಿತ ಆಗಿಬಿಡುತ್ತವೋ ಅಂಥಾ ಚ್ಯುತಿರಹಿತನಾದ ಅಚ್ಯುತನನ್ನು ಸದ್ಯಃ (ಈಗ) ವಂದಿಸುತ್ತೇನೆ.

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ ।
ಯತ್ ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥

ಅರ್ಥ — ಮಂತ್ರರಹಿತವೂ ಕ್ರಿಯಾ (ಕರಣ-ತಂತ್ರ) ರಹಿತವೂ ಅಲ್ಲದೆ ಮುಖ್ಯವಾಗಿ ಭಕ್ತಿರಹಿತವೂ ಆದ ನಾನು ಏನೇನು ಪೂಜೆ ಮಾಡಿದ್ದೇನೋ, ಹೇ ಲಕ್ಷ್ಮೀಪತಿಯಾದ ನಾರಾಯಣನೇ! ಅವೆಲ್ಲವೂ ಪರಿಪೂರ್ಣವಾಗಿ ನಿನ್ನ ಪ್ರೀತಿಗೆ ಕಾರಣವಾಗಲಿ.

ಅನಯಾ ಮನಸಾ ಮುಖ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣಸ್ಯ (ಅಥವಾ ಅವರವರ ಇಷ್ಟದೇವತೆಯ ಹೆಸರನ್ನು ಷಷ್ಠೀ ವಿಭಕ್ತ್ಯಂತವಾಗಿ ಹೇಳಬಹುದು.) ತಂತ್ರಸಾರೋಕ್ತ ಪ್ರಕಾರೇಣ ಯಥಾಶಕ್ತಿ ಧ್ಯಾನಾವಾಹನಾದಿ ಷೋಡಶೋಪಚಾರಪೂಜಯಾ (ಅಥವಾ ಅನೇನ ... ಪೂಜನೇನ/ಅರ್ಚನೇನ) ಭಾರತೀರಮಣ ಮುಖ್ಯಪ್ರಾಣದ್ವಾರಾ ಕೃತಯಾ (ಕೃತೇನ) ಭಗವಾನ್ ಮಧ್ವಾಂತರ್ಗತಃ ಶ್ರೀಮದನಿರುದ್ಧಾದಿರೂಪೀ ಲಕ್ಷ್ಮೀನಾರಾಯಣಃ (ಅಥವಾ ತಮ್ಮ ಇಷ್ಟದೇವತೆಯ ಹೆಸರನ್ನೇ ಹೇಳಬಹುದು) ಪ್ರೀಯತಾಮ್ । ಸುಪ್ರೀತೋ ವರದೋ ಭವತು । ಶ್ರೀಕೃಷ್ಣಾರ್ಪಣಮಸ್ತು ॥ (ಎಂದು ಹೇಳಿ ಕೈಗೆ ನೀರು ಹಾಕಿಕೊಂಡು ಬಿಟ್ಟುಬಿಡಬೇಕು.

ದೇವರ ಪೆಟ್ಟಿಗೆಯನ್ನು ಕಟ್ಟುವಾಗ 'ಮನ್ಯುಸೂಕ್ತ'ವನ್ನು ಹೇಳುವ ಪದ್ಧತಿಯುದ ಕಡೆಯ ಪಕ್ಷ ಆ ಸೂಕ್ತದ ಕಡೆಯ ಋಕ್ಕನ್ನಾದರೂ ಹೇಳಬೇಕು.

ಓಂ ॥ ಸಂಸೃಷ್ಟಂ ಧನಮುಭಯಂ ಸಮಾಕೃತ-
ಮಸ್ಮಭ್ಯಂ ದತ್ತಾಂ ವರುಣಶ್ಚ ಮನ್ಯುಃ ।
ಭಿಯಂ ದಧಾನಾ ಹೃದಯೇಷು ಶತ್ರವಃ
ಪರಾಜಿತಾ ಸೋ ಅಪ ನಿಲಯಂತಾಮ್ ॥

ಈ ಮಂತ್ರಕ್ಕೆ ಶ್ರೀ ಸತ್ಯಸಂಧರು ಪುರುಷಸೂಕ್ತದ ಕಡೆಯಲ್ಲಿ ಅರ್ಥ ಹೇಳಿದ್ದಾರೆ. ಮನ್ಯುಸೂಕ್ತಕ್ಕೆ ಧೀರೇಂದ್ರಸ್ವಾಮಿಗಳೇ ಅರ್ಥ ಮಾಡಿದ್ದಾರೆ. ಆದರ ಕನ್ನಡಾರ್ಥವನ್ನು ವೇ। ಶ್ರೀ। ಸಾಣೂರು ಭೀಮಭಟ್ಟರು ಬರೆದು ಪ್ರಕಟಿಸಿದ್ದಾರೆ. ಆದರಂತೆ ಈ ಮಂತ್ರದ ತಾತ್ಪರ್ಯ ಹೀಗಾಗುತ್ತದೆ —

ವರುಣಾದಿ ಸಕಲ ದೇವತಾಂತರ್ಗತನಾದ ('ಮನ್ಯು' ಎಂದರೆ ಲೋಕಕ್ಕೆ ನಿಯಾಮಕನಾದ) ಶ್ರೀ ನರಸಿಂಹಸ್ವಾಮಿಯು ಮನಸ್ಸು ಬಂದಂತೆ ಹಂಚಿಹೋಗಿರುವ (ವಿಭಾಗವಾಗದೆ ಅನ್ಯಾಕ್ರಾಂತವಾಗಿಹೋಗಿರುವ) ಧನವನ್ನೂ ಸಂಪತ್ತನ್ನೂ ಸಮವಾಗಿ ವಿಭಾಗ ಮಾಡಿ ನಮಗೆ (ಅಸ್ಮಭ್ಯಂ) ಬರಬೇಕಾದ ನ್ಯಾಯವಾದ ಭಾಗವನ್ನು ನಮಗೆ ಕೊಡಲಿ. ಇದರಿಂದ ಶತ್ರುಗಳು ಹೃದಯದಲ್ಲಿ ಭಯಭೀತರಾಗಿ ಕಣ್ಣಿಗೆ ಕಾಣಿಸದಂತೆ ದೂರ ಹೊರಟುಹೋಗಲಿ.

ಪೂಜೆ ಮುಗಿದ ಗುರುತಿಗಾಗಿ ಗಂಟೆ ಬಾರಿಸಬೇಕು.

ಯದ್ಯಪಿ ಬೇರೆ ಯಾವ ಪುಸ್ತಕದಲ್ಲೂ ಈ ವಿಷಯ ಕೊಟ್ಟಿಲ್ಲದಿದ್ದರೂ ಆಚಾರದಿಂದ—ಸಂಪ್ರದಾಯದಿಂದ ಇದನ್ನು ಮಾಡಬೇಕು. ಎಲ್ಲಾ ಮಠಗಳಲ್ಲೂ ಪೂಜೆ ಮುಗಿದ ನಂತರ ಸ್ವಾಮಿಗಳು ಗಂಟೆ ಬಾರಿಸುತ್ತಾರೆ. ಅದು ಎಲ್ಲರಿಗೂ ಹೋಗಲು ಸಂಕೇತವಾಗಿರುತ್ತದೆ. ಅದೇ ರೀತಿ ನಾವೂ ಅವಶ್ಯ ಬಾರಿಸಲೇಬೇಕು ಎಂದು ಕೆಲವು ಆಹ್ನಿಕಮಂಜರಿಯಲ್ಲಿ ಕೊಟ್ಟಿರುವುದಲ್ಲದೆ ಅದಕ್ಕೂ ಪ್ರಮಾಣವನ್ನು ಕೊಟ್ಟಿದ್ದಾರೆ.

ಪೂಜಾಂತೇ ತು ಪ್ರಕುರ್ವೀತ ಘಂಟಾನಾದಂ ಸುರೋತ್ತಮಾಃ ।
ಸಂಪೂರ್ಣಾರ್ಥಂ ಮಂಗಳಾರ್ಥಂ ಪೂಜಾಯಾಃ ಪರಮಾತ್ಮನಃ ॥

(ಅರ್ಥ) ಹೇ ದೇವತೆಗಳಿರಾ, ಭಗವಂತನ ಪೂಜೆ ಮುಗಿದನಂತರ ಕೊನೆಯಲ್ಲಿ ಗಂಟೆ ಬಾರಿಸಬೇಕು. ಪೂಜೆಯು ಸಂಪೂರ್ಣವಾದುದರ ಸಂಕೇತಕ್ಕಾಗಿಯೂ, ಮಂಗಳಕ್ಕಾಗಿಯೂ ಬಾರಿಸಬೇಕು.

ತೀರ್ಥಪ್ರಾಶನ (ಪದ್ಮಮಾಲೆಯ ಹೇಳಿಕೆ — ಪುಟ ೯೯)

ತೀರ್ಥಪ್ರಸಾದ ಗಂಧಾದೀನ್ ದತ್ವಾ ವಿಷ್ಣುಪರಾಯ ಚ |
ತತಃ ಸ್ವಯಂ ತು ಗೃಹ್ಣೀಯಾದ್
ಭಕ್ತ್ಯಾ ನತ್ವಾ ಹರಿಂ ಸ್ಮರನ್ || ೧೨೫ ||

(ಅರ್ಥ) ಪೂಜೆ ಮುಗಿದಮೇಲೆ ತೀರ್ಥವನ್ನೂ, ತುಲಸೀಪ್ರಸಾದವನ್ನೂ ಗಂಧ-ಅಕ್ಷತೆಗಳನ್ನೂ ವಿಷ್ಣುಭಕ್ತರಿಗೆ (ಅತಿಥಿ-ಅಭ್ಯಾಗತರಾಗಿ ಬಂದಿದ್ದರೆ ಅವರಿಗೆ ಮೊದಲು) ಕೊಟ್ಟು ಭಕ್ತಿಯಿಂದ ಹರಿಯನ್ನು ಸ್ಮರಿಸುತ್ತಾ ತಾನೂ ತೀರ್ಥ-ಪ್ರಸಾದಗಳನ್ನು ಸ್ವೀಕರಿಸಿ ಗಂಧಾಕ್ಷತೆಗಳನ್ನು ಹಚ್ಚಿಕೊಳ್ಳಬೇಕು.

ತೀರ್ಥಪ್ರಾಶನ ಮಂತ್ರ

ಶಂಖೋದಕವನ್ನು ಮೊದಲು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳಬೇಕು. (ಅದನ್ನು ಎಂದೂ ಕುಡಿಯಬಾರದು.) ತೀರ್ಥವನ್ನು ತೆಗೆದುಕೊಳ್ಳುವಾಗ ಹೊದ್ದುಕೊಂಡ ವಸ್ತ್ರವನ್ನು ಮೂರು ಮಡಿಕೆ ಮಾಡಿ ಎಡಗೈಯಲ್ಲಿಟ್ಟುಕೊಂಡು ಅದರ ಮೇಲೆ ಬಲಗೈ ಇಟ್ಟು ತೀರ್ಥ ತೆಗೆದುಕೊಳ್ಳಬೇಕೆಂದು ಪಂಚರಾತ್ರದಲ್ಲಿ ಹೇಳಿದೆ. (ಶ್ರೀ ಪ್ರಭಂಜನರ ಪದ್ಮಮಾಲಾ, ದ್ವಿ.ಸಂ., ಪು. ೧೦೨; ಅಲ್ಲೇ ಶಂಖತೀರ್ಥದ ಮಹಿಮೆಯನ್ನೂ ಹೇಳಿದೆ.) ತೀರ್ಥದ ಜೊತೆ (ಏಕಾದಶೀ ದಿನ ಬಿಟ್ಟು ಮಿಕ್ಕ ದಿನಗಳಲ್ಲಿ) ತುಳಸಿಯನ್ನೂ ಭಕ್ಷಿಸಬೇಕು.

ಪ್ರಥಮಂ ಕಾಯಸಿದ್ಧ್ಯರ್ಥಂ ದ್ವಿತೀಯಂ ಧರ್ಮಸಾಧನಮ್ |
ತೃತೀಯಂ ಮೋಕ್ಷಮಾಪ್ನೋತಿ ಏವಂ ತೀರ್ಥಂ ತ್ರಿಧಾ ಪಿಬೇತ್ ||

ಪಾದೋದಕವನ್ನು ಒಂದೇ ಆವರ್ತಿ ತೆಗೆದುಕೊಳ್ಳಬೇಕು. ಏಕಾದಶೀ ದಿನವೂ, ಗೋಕುಲಾಷ್ಟಮೀ ದಿನವೂ, ವಿಷ್ಣುಪಂಚಕ ಮಾಡುವವರು ಉಪವಾಸ ಮಾಡುವ ದಿನಗಳಲ್ಲೂ ತುಳಸಿಯಿಲ್ಲದೆ ಕೇವಲ ಒಂದೇ ಆವರ್ತಿ ತೆಗೆದುಕೊಳ್ಳಬೇಕು. (ಪ್ರಮಾಣ-ಶ್ರೀ ಪ್ರಭಂಜನಾಚಾರ್ಯರ 'ಪದ್ಮಮಾಲಾ' ದ್ವಿತೀಯ ಸಂಪುಟ ನೋಡಿ.)

ಕೃತಿ ಸಮರ್ಪಣೆ

ವಿಷ್ಣುಪೂಜಾವಿಧಿಃ ಸಮ್ಯಕ್ ಪದ್ಮಮಾಲೋಕ್ತಮಾರ್ಗತಃ ।
ವರ್ಣಿತೋ ವಿಷ್ಣುತೀರ್ಥೇನ ಯಥಾಮತಿ ಸವಿಸ್ತರಮ್ ॥ ೧ ॥

ಸೇವಯಾ ತ್ವನಯಾ ಕೃಷ್ಣೋ ಮಧ್ವಹೃತ್ಪದ್ಮಸಂಸ್ಥಿತಃ ।
ಪ್ರೀಯತಾಂ ಮೇ ರಮಾನಾಥಃ ಸುಪ್ರೀತೋ ವರದೋ ಭವೇತ್ ॥ ೨ ॥

(ಅರ್ಥ) ಪದ್ಮಮಾಲಾದಲ್ಲಿ ಹೇಳಿದ ಮಾರ್ಗವನ್ನನುಸರಿಸಿ ವಿಷ್ಣುಪೂಜೆ ಮಾಡುವ ವಿಧಿಯನ್ನು ಯಥಾಮತಿ ಸ್ಪಷ್ಟವಾಗಿ ವಿಸ್ತಾರವಾಗಿಯೇ ವಿಷ್ಣುತೀರ್ಥನಾದ ನಾನು ವರ್ಣಿಸಿದ್ದೇನೆ. ।೧। ಈ ಅಲ್ಪ ಸೇವೆಯಿಂದಲೇ ಶ್ರೀಮನ್ಮಧ್ವಾಂತರ್ಗತನಾದ ರಮಾಪತಿಯಾದ ಶ್ರೀಕೃಷ್ಣನು ಪ್ರೀತನಾಗಲಿ, ಸುಪ್ರೀತನಾಗಲಿ, ವರಪ್ರದನೂ ಆಗಲಿ.

। ಶ್ರೀಕೃಷ್ಣಾರ್ಪಣಮಸ್ತು ।

ಶ್ರೀ ವಿಷ್ಣುತೀರ್ಥರ ಇತರ ಗ್ರಂಥಗಳು

೧.	ನಖಸ್ತುತಿ (ಶ್ರೀಹರಿವಾಯುಸ್ತುತಿಯ ಪ್ರಥಮ ಭಾಗ) (ಪ್ರತಿಗಳು ಮುಗಿದಿವೆ)	ರೂ. 60
೨.	ಶ್ರೀಹರಿವಾಯುಸ್ತುತಿ—ಎರಡನೇ ಭಾಗ ೧ರಿಂದ ೨೧ ಶ್ಲೋಕಗಳು; ೪೧೦ ಪುಟಗಳು	ರೂ. 60
೩.	ಶ್ರೀಹರಿವಾಯುಸ್ತುತಿ—ಮೂರನೇ ಭಾಗ ೨೨ರಿಂದ ೪೧ ಶ್ಲೋಕಗಳು; ೪೪೨ ಪುಟಗಳು	ರೂ. 60
೪.	ಖಿಲವಾಯುಸ್ತುತಿ—ಶ್ರೀಹರಿವಾಯುಸ್ತುತಿಯ 4ನೇ ಭಾಗ ಬಳಿತ್ಥಾಸೂಕ್ತದ ಅರ್ಥಸಹಿತ; 200 ಪುಟಗಳು	ರೂ. 25
೫.	ಶ್ರೀಹರಿವಾಯುಸ್ತುತಿ—ಸರಳಾರ್ಥ ಸಹಿತ ಪುರಶ್ಚರಣ ಫಲ ಹಾಗೂ ಖಿಲವಾಯುಸ್ತುತಿಯೊಡನೆ	ರೂ. 15
೬.	ಸರ್ವಸಮರ್ಪಣ ಗದ್ಯ—ಶ್ರೀ ರಾಘವೇಂದ್ರಸ್ವಾಮಿ ವಿರಚಿತ ವಿವರಣೆ ಸಹಿತ; ೫೨ ಪುಟಗಳು	ರೂ.
೭.	ಅಷ್ಟಮಹಾಮಂತ್ರಗಳು—ಗುರುಮಂತ್ರ, ತತ್ತ್ವನ್ಯಾಸ, ಮಾತೃಕಾನ್ಯಾಸಗಳೊಡನೆ—ವಿವರಣೆ ಸಹಿತ	ಅಚ್ಚಿನ
೮.	ಪುರುಷಸೂಕ್ತ ವ್ಯಾಖ್ಯಾನ—ಏಳು ಸಂಸ್ಕೃತ ವ್ಯಾಖ್ಯಾನ ಮತ್ತು ಕನ್ನಡ ವಿವರಣೆ	ಅಚ್ಚಿನಲ್ಲಿ